ಜನನ.—ಶಾ॥ ಶಕ ೧೩೫೫ನೇ (A.D. 1433) ಪ್ರಮಾದೀಚ ಸಂವತ್ಸರದ ಆಶ್ವಯುಜ ಬಹುಳ ಪಂಚಮಿ.

ಪಟ್ಟಾಭಿಷೇಕ.—ಶಾ॥ ಶಕ ೧೩೮೦ನೇ (A.D. 1459) ಬಹುಧಾನ್ಯ ಸಂವತ್ಸರದ ಮಾಘಬಹುಳ ಪಂಚಮಿ.

ಪತ್ನಿಯವರು.—ಕಳಲೆಯ ಅರಸುಗಳ ಕುಮಾರತಿ ಕಾಂತಾಜಮ್ಮಣ್ಣಿಯವರು.

ಸಂತಾನ.—ಹಿರಿಯ ಚಾಮರಾಜರಸ ಒಡೆಯರವರು.

ಈ ತಿಮ್ಮರಾಜ ಒಡೆಯರವರು ಧರ್ಮದಿಂದ ರಾಜ್ಯಪರಿಪಾಲನೆಯಂ ಮಾಡಿ ಶಾ॥ ಶಕ ೧೪೦೦ನೇ (A.D. 1478) ವಿಳಂಬಿ ಸಂವತ್ಸರದ ವೈಶಾಖ ಬಹುಳ ೩ಲ್ಲಿ ಶ್ರೀಚಾಮುಂಡೇಶ್ವರೀಪಾದದಲ್ಲಿ ಐಕ್ಯವಾದರು.

ನಾಲ್ಕನೆಯ ಆಳಿಕೆ.

ಹಿರಿಯ ಚಾಮರಾಜರಸ ಒಡೆಯರವರು.

ಜನನ.—ಶಾ॥ ಶಕ ೧೪೮೬ನೇ (A.D. 1463) ಸ್ವಭಾನುಸಂವತ್ಸರದ ಜ್ಯೇಷ್ಠ ಶುದ ಷಷ್ಠಿ.

ಪಟ್ಟಾಭಿಷೇಕ —ಶಾ॥ ಶಕ ೧೪೦೦ನೇ(A.D. 1478) ವಿಳಂಬಿಸಂವತ್ಸರದ ಜ್ಯೇಷ್ಠ ಶುದ್ಧ ಪಂಚಮಿ.

ಪತ್ನಿಯವರು.—ಬಿಳಿಕೆರೆಯ ಅರಸುಗಳ ಕುಮಾರತಿ ಪದ್ಮಾಜಮ್ಮಣಿಯವರು.

ಸಂತಾನ.— ಹಿರಿಯಬೆಟ್ಟದ ಚಾಮರಾಜ ಒಡೆಯರು.

ಈ ಹಿರಿಯ ಚಾಮರಾಜರಸ ಒಡೆಯರವರು ಸುಖದಿಂದ ರಾಜ್ಯವನ್ನಾಳುತ್ತಿದ್ದು ಶಾ॥ ಶಕ ೧೪೩೫ನೇ (A.D. 1513) ಶ್ರೀಮುಖಸಂವತ್ಸರದ ಚೈತ್ರ ಬಹುಳ ೩ಲ್ಲಿ ಸ್ವರ್ಗಸೋಪಾನವನ್ನೇರಿದರು.

ಐದನೆಯ ಆಳಿಕೆ.

ಹಿರಿಯಬೆಟ್ಟ ಚಾಮರಾಜ ಒಡೆಯರವರು.

ಸಂತಾನ.—ಶಾ॥ ಶಕ ೧೪೧೪ನೇ(A.D. 1492) ಸರೀಧಾವಿಸಂವತ್ಸರದ ಆಶ್ವಯುಜ ಶುದ್ಧ ಅಷ್ಟಮಿ.

ಪಟ್ಟಾಭಿಷೇಕ.—ಶಾ॥ ಶಕ ೧೪೩೫ನೇ (A.D. 1513) ಶ್ರೀಮುಖ ಸಂವತ್ಸರದ ವೈಶಾಖ ಶುದ್ಧ ತೃತೀಯೆ.

ಪತ್ನಿಯವರು.—ಕೋಟೆ ತೊರವಳ್ಳಿ ಚನ್ನರಾಜಯ್ಯನವರ ಕುಮಾರತಿ ಅಳಗಾಜಮ್ಮಣಿಯವರು, ಪ್ರತಿನಾಮ ಗೋಪರಸಮ್ಮನವರು.

ಸಂತಾನ.—ಪುತ್ರರು.—(೧) ತಿಮ್ಮರಾಜ ಒಡೆಯರವರು. (೨) ಕೃಷ್ಣರಾಜ ಒಡೆಯರವರು, (೩) ಬೋಳಚಾಮರಾಜ ಒಡೆಯರವರು.

ಪುತ್ರಿಯರು.—(೧) ದೊಡ್ಡದೇವೀರಮ್ಮಣಿಯವರು, (೨) ಚಿಕ್ಕದೇವೀರಮ್ಮಣಿಯವರು, (೩) ನಂಜಮ್ಮಣಿಯವರು.

ಇವರು ಧರ್ಮದಿಂದ ರಾಜ್ಯಪರಿಪಾಲನೆಯಂ ಮಾಡುತಲಿರುವ ಸಮಯದಲ್ಲಿ ಶ್ರೀ ಚಾಮುಂಡೇಶ್ವರಿಯ ಜಟ್ಟಿದ ಅಮ್ಮನವರ ದೇವಸ್ಥಾನದ ಹಿಂಭಾಗದಲ್ಲಿ ಹಿರೀಕೆರೆ ಎಂಬುದಾಗಿ ಒಂದು ತಟಾಕವಂ ನಿರ್ಮಿಸಿ ತಮ್ಮ ಮೂರು ಜನ ಪುತ್ರನಲ್ಲಿ ಎರಡನೆಯ ಪುತ್ರರಾದ ಕೃಷ್ಣರಾಜ

ಒಡೆಯರವರಿಗೆ ಕೆಂಬಲ್ಲು ಮುಂತಾದ ಕೆಲವು ಗ್ರಾಮಗಳಂ, ತಮ್ಮ ಹಿರಿಯ ಕುಮಾರರಾದ ತಿಮ್ಮರಾಜಒಡೆಯರವರ ಪುತ್ರರಾದ ಬೆಟ್ಟ ಒಡೆಯರವರಿಗೆ ಹೆಮ್ಮನ ಹಳ್ಳಿ ಮುಂತಾದ ಕೆಲವು ಗ್ರಾಮಗಳಂ ಸಹ ಕೊಟ್ಟು ಸುಖದಿಂದ ಇರುವಂತೆ ಕಟ್ಟುಮಾಡಿಸಿದರು. ಆ ಬಳಿಕ ಈ ಕೃಷ್ಣರಾಜ ಒಡೆಯರವರು ಹರವು ಮುಂತಾದ ಸ್ಥಳದಲ್ಲಿ ಇದ್ದ ಪಾಳಯಗಾರರುಗಳಂ ಜಯಿಸಿ ಶೃಂಗಾರಹಾರನೆಂಬ ಬಿರುದನ್ನು ಸಂಪಾದಿಸಿದರು.

ಹಿರಿಯಬೆಟ್ಟಚಾಮರಾಜ ಒಡೆಯರವರು ತಮ್ಮ ಹಿರಿಯ ಕುಮಾರರಾದ ತಿಮ್ಮರಾಜ ಒಡೆಯರವರಿಗೆ ಮೈಸೂರಲ್ಲಿ ಪಟ್ಟಾಭಿಷೇಕವಂ ಮಾಡಿಸಿದನಂತರ ಬೋಳಚಾಮರಾಜ ಒಡೆಯರವರಿಗೆ ಪಟ್ಟಾಭಿಷೇಕವಂ ಮಾಡಿಸುವಂತೆ ನಿಬಂಧನೆಯಂ ಮಾಡಿ ತಾವು ಶಾಲಿವಾಹನ ಶಕ ೧೪೭೫ನೇ (A.D. 1553) ಪರೀಧಾವಿ ಸಂವತ್ಸರದ ಮಾಘ ಬಹುಳ ೯ಲ್ಲಿ ಶ್ರೀಕಂಠೇಶ್ವರಸ್ವಾಮಿ ಪಾದಾರವಿಂದದಲ್ಲಿ ಐಕ್ಯವಾದರು.

ಆರನೆಯ ಆಳಿಕೆ.

ತಿಮ್ಮರಾಜ ಒಡೆಯರವರು.

ಜನನ.—ಶಾ॥ ಶಕ ೧೪೩೪ನೇ (A.D. 1511) ಪ್ರಜೋತ್ಪತ್ತಿ ಸಂವತ್ಸರದ ಭಾದ್ರಪದ ಬಹುಳ ದಶಮಿ.

ಪಟ್ಟಾಭಿಷೇಕ.—ಶಾ॥ ಶಕ ೧೪೭೫ನೇ (A.D. 1553) ಪರೀಧಾವಿ ಸಂವತ್ಸರದ ಪಾಲ್ಗುಣ ಶುದ್ಧ ತ್ರಯೋದಶಿ.

ಪತ್ನಿಯವರು.—ತೊರವಳ್ಳಿ ಮಂಗಪ್ಪಒಡೆಯರ ಕುಮಾರತಿ ಕೆಂಪಮ್ಮಣಿಯವರು.

ಸಂತಾನ.—ಬೆಟ್ಟ ಒಡೆಯರವರು.

ಬಿರುದೆಂತೆಂಬುರ ಗಂಡನೆಂಬ ಬಿರುದು ಬಂದದ್ದು.—ಈ ತಿಮ್ಮರಾಜ ಒಡೆಯರವರು ದೊರೆತನಮಾಡುವಕಾಲದಲ್ಲಿ ಸಿಂಧುವಳ್ಳಿ ಪಾಳಯಗಾರ, ಹುಣಸೆನಾಳುಪಾಳಯಗಾರ ಮುಂತಾದವರ ಸಂರಹ್ಷಣೆಯಂ ಮಾಡಿಕೊಂಡು ಇರುವಾಗ, ಒಮ್ಮೆ ನಂಜನಗೂಡು ರಥೋತ್ಸವದ ಕಾಲದಲ್ಲಿ ದೊರೆಗಳವರು ಅಲ್ಲಿಗೆ ದಯಮಾಡಿಸಿರಲು, ಕೆಲವು ಪಾಳಯಗಾರರು ದೇವರ ಸೇವಾರ್ಥವಾಗಿ ಬಂದು ಬಿರುದೆಂತೆಂಬರಗಂಡನೆಂಬದಾಗಿ ಹೊಗಳಿಸಿಕೊಳ್ಳುತ್ತಿದ್ದರು. ಆಗ ಅಲ್ಲಿಗೆ ಬಂದಿದ್ದ ಮೈಸೂರು ಸೆಟ್ಟಯ್ಯು

ಬಿರುದೆಂತೆಂಬರಗಂಡನೆಂಬ ಬಿರುದು ನಮ್ಮ ದೊರೆಗಳು ತಿಮ್ಮರಾಜಒಡೆಯರವರಿಗಲ್ಲದೆ ಉಳಿದವರಿಗೆ ಸಲ್ಲತಕ್ಕುದಲ್ಲವೆಂದು ಹೇಳಲಾಗಿ, ಎಲ್ಲಾ ಪಾಳಯಗಾರರುಗಳು ಕೂಡಿ ಆ ಸೆಟ್ಟಿಯನ್ನು ಶಿಕ್ಷಿಸಬೇಕೆಂದು ಹಿಡಿದು ಕೊಂಡು ಹೋದ ವರ್ತಮಾನವನ್ನು ದೊರೆಗಳಾದ ತಿಮ್ಮರಾಜಒಡೆಯರವರು ಕೇಳಿ ಅವರನ್ನೆಲ್ಲಾ ಜಯಿಸಿ ಸೆಟ್ಟಿಯನ್ನು ಬಿಡಿಸಿ ಬಿರುದೆಂತೆಂಬರಗಂಡನೆಂಬ ಬಿರುದನ್ನು ಉಂಟುಮಾಡಿಕೊಂಡು ಮೈಸೂರಿಗೆ ದಯಮಾಡಿಸಿದರು. ಅನಂತರ ಉಮ್ಮತ್ತೂರು ಮುಂತಾದೆಡೆಯ ಪಾಳಯಗಾರರುಗಳನ್ನು ಜಯಿಸಿ ಆನೆ, ಕುದುರೆ, ಅಂದಳವೊದಲಾದವುಗಳನ್ನು ಸ್ವಾಧೀನಮಾಡಿಕೊಂಡು ರಾಯರುಗಳಲ್ಲಿ ಮೊನೆಗಾರರು ಎಂಬ ಪ್ರಸಿದ್ಧಿಯಂ ಪಡೆದು, ಇವರು ಸುಖದಿಂದ ರಾಜ್ಯವನ್ನಾಳುತ್ತಿದ್ದು, ಶಕ ೧೪೯೪ನೇ (A.D. 1572) ಪ್ರಜೋತ್ಪತ್ತಿ ಸಂವತ್ಸರದ ಪುಷ್ಯ ಬಹುಳ ೩ಲ್ಲಿ ಸ್ವರ್ಗವನ್ನೈದಿದರು.

ಏಳನೆಯ ಅಳಿಕೆ.

ಬೊೀಳಚಾಮರಾಜ ಒಡೆಯರವರು.

ಜನನ.—ಶಾ॥ ಶಕ ೧೪೩೧ನೇ ಬಹುಧಾನ್ಯ ಸಂವತ್ಸರದ ವೈಶಾಖಶುದ್ಧಸಪ್ತಮಿ (A.D. 1518).

ಪಟ್ಟಾಭಿಷೇಕ.—ಶಾ॥ ಶಕ ೧೪೯೪ನೇ (A.D. 1572) ಪ್ರಜೋತ್ಪತ್ತಿ ಸಂವತ್ಸರದ ಮಾಘಶುದ್ಧ ಪಂಚಮಿ.

ಪತ್ನಿಯವರು.—(೧) ಸಿಂಧುವಳ್ಳಿ ರಾಜಯ್ಯನವರ ಕುಮಾರತಿ ವೀರಾಜಮ್ಮಣ್ಣಿಯವರು. (೨) ಕೋಟೆ ತಿಮ್ಮಪ್ಪಒಡೆಯರವರ ಕುಮಾರತಿ ದೇವಾಜಮ್ಮಣ್ಣಿಯವರು.

ಸಂತಾನ.—ಪುತ್ರರು.—ಸಿಂಧುವಳ್ಳಿ ವೀರಾಜಮ್ಮಣ್ಣಿಯವರಲ್ಲಿ (೧) ಬೆಟ್ಟಚಾಮರಾಜ ಒಡೆಯರವರು. (೨) ರಾಜಒಡೆಯರವರು. ಕೋಟೆ ದೇವಾಜಮ್ಮಣ್ಣಿಯವರಲ್ಲಿ (೧) ಮುಪ್ಪಿನ ದೇವರಾಜಒಡೆಯರು (೨) ಚಿಕ್ಕರಾಜಒಡೆಯರು.

ಪುತ್ರಿಯರು.—ಸಿಂಧುವಳ್ಳಿ ವೀರಾಜಮ್ಮಣ್ಣಿಯವರಲ್ಲಿ. (೧) ದೊಡ್ಡದೇವೀರಮ್ಮಣ್ಣಿಯವರು. (೨) ಚಿಕ್ಕದೇವಮ್ಮಣ್ಣಿಯವರು. (೩) ಚಿಕ್ಕದೇವೀರಮ್ಮಣ್ಣಿಯವರು.

ಸುಗುಣ ಗಂಭೀರನೆಂಬ ಬಿರುದು ಖಂದದ್ದು.—ಇವರು ಧರ್ಮದಿಂದ ರಾಜ್ಯಪರಿಪಾಲನೆಯಂ ಮಾಡುತಲಿರುವ ಸಮಯದಲ್ಲಿ ಶ್ರೀಚಾಮುಂಡೇಶ್ವರಿಯು ಬೆಟ್ಟಕ್ಕೆ ಅಮ್ಮನವರ ದರ್ಶನಾರ್ಥವಾಗಿ ಚಿತ್ತೈಸಿರಲು ಇವರ ಮುಂಡೆಯ ಮೇಲೆ ಸಿಡಿಲು ಬಿದ್ದು ಅಮ್ಮನವರ ಕೃಪೆಯಿಂದ ಮುಂಡೆಯು ಕೂದಲು ಮಾತ್ರ ಉದುರಿಹೋಗಿ ಶರೀರವು ರಕ್ಷಿಸಿಕೊಂಡದೆ ಇದ್ದ ದ್ದರಿಂದ ಇವರಿಗೆ ಬೊಳ್ಳಚಾಮರಾಜ ಒಡೆಯರೆಂಬ ಹೆಸರು ಪ್ರಸಿದ್ಧವಾಯಿತು. ಇವರು ರಾಮರಾಜಯ್ಯನ ದಳವಾಯಿ ತೊರೆಮಾವಿನಹಳ್ಳಿ ವೆಂಕಟಾದ್ರಿ ನಾಯಕನನ್ನು ಯುದ್ಧದಲ್ಲಿ ಜಯಿಸಿ ಅವನಲ್ಲಿದ್ದ ದಾಳದಮಾಣ, ಅಂದಳ ಮುಂತಾದುದನ್ನು ಕಿತ್ತುಕೊಂಡು ಅವನು ಹೊಗಳಿಸಿಕೊಳ್ಳುತ್ತಿದ್ದ ಸುಗುಣಗಂಭೀರನೆಂಬ ಬಿರುದನ್ನು ಸಂಪಾದಿಸಿ ಸತ್ಕೀರ್ತಿಯಂ ಪಡೆದು ಧಾತುಸಂವತ್ಸರದ ಜ್ಯೇಷ್ಠ ಬಹುಳ ೧೦ಲ್ಲಿ ಶ್ರೀಚಾಮುಂಡೇಶ್ವರೀ ಪಾದ ದಲ್ಲಿ ಐಕ್ಯವಾದರು.

ಎಣ್ಣೆನೆಯ ಅಳಿಕೆ.

ಬೆಟ್ಟದ ಚಾಮರಾಜ ಒಡೆಯರವರು.

ಜನನ.—ಶಾಲೀವಾಹನ ಶಕ ೧೪೭೨ನೇ (A.D. 1550) ಸಾರ್ವ್ಯ ಸಂವತ್ಸರದ ಫಾಲ್ಗುಣ ಖಹುಳ ದಶಮಿ.

ಪಟ್ಟಾಭಿಷೇಕ.—ಶಾಲೀವಾಹನಶಕ ೧೪೯೯ನೇ (A.D. 1570) ಧಾತು ಸಂವತ್ಸರದ ಆಷಾಢ ಖಹುಳ ದ್ವಿತೀಯೆ.

ಪತ್ನಿಯರು.—(೧) ಬಾಗಳಿ ದೇಶೇ ಅರಸಿನವರ ಕುಮಾರತಿ ಲಿಂಗಾಜಮ್ಮಣ್ಣಿ ಯವರು. (೨) ಹಳೇಬೀಡು ದೇವರಾಜೇ ಅರಸಿನವರ ಕುಮಾರತಿ ದೇವಾಜಮ್ಮಣ್ಣಿಯವರು. (೩) ನಿಲಸೋಗ ನೀಲಕಂಠ ಅರಸಿನವರ ಕುಮಾರತಿ ನಂಜಮ್ಮಣ್ಣಿಯವರು. (೪) ಕಳಲೆ ಹಿರಿಯ ತಿಮ್ಮರಾಜ ಅರಸಿನವರ ಕುಮಾರತಿ ದೇವೀರಮ್ಮಣ್ಣಿಯವರು. (೫) ಹುರದಕಟ್ಟೆ ಅರಸಿನವರ ಕುಮಾರತಿ ಗುರುವಾಜಮ್ಮಣ್ಣಿಯವರು.

ಸಂತಾನ.—ಪುತ್ರರು.—(೧) ಬಾಗಳಿ ಲಿಂಗಾಜಮ್ಮಣ್ಣಿಯವರಲ್ಲಿ ರಾಜಒಡೆಯರೆಂಬ ಪುತ್ರರತ್ನವು ಜನಿಸಿತು. ಆಗ ವೆಂಕಟೇಶ್ವರಸ್ವಾಮಿ ಪ್ರಾರ್ಥನೆಮಾಡಿ ಯಿದ್ದ ದ್ದನ್ನು ಮರೆತು ಆ ಮಗುವಿಗೆ ರಾಜಒಡೆಯರೆಂದು ಹೆಸರಿಡಲಾಗಿ ಉದ್ದವ ವಾವಕಾರಣ ತಿಮ್ಮರಾಜ ಒಡೆಯರೆಂದು ನಾಮಕರಣವಂ ಮಾಡಿದರು. (೨)

ಹುರದ ಗುರುನಾಜವ್ಮಣ್ಣಿಯವರಲ್ಲಿ ರಣಧೀರಕಂಠೀರವನರಸರಾಜ ಒಡೆಯರವರು. ಪುತ್ರಿಯರು.—ನಿಲಸೋಗೆ ನಂಜವ್ಮಣ್ಣಿಯವರಲ್ಲಿ ಉದಿಸಿದ ದೊಡ್ಡವ್ಮಣ್ಣಿಯವರು.

ಈ ಬೆಟ್ಟದ ಚಾಮರಾಜ ಒಡೆಯರವರು ಸುಖದಿಂದ ರಾಜ್ಯವನ್ನಾಳುತ್ತಿದ್ದು ವೈರಾಗ್ಯಭಾಗ್ಯವನ್ನು ಅಪೇಕ್ಷಿಸಿ ತಪಸ್ಸಿನಲ್ಲಿ ಆಸಕ್ತರಾಗಿ ಶಾಲೀವಾಹನ ಶಕ ೧೪೫೫ನೇ (A.D. 1552) ಪರೀಧಾವಿ ಸಂವತ್ಸರದ ಜ್ಯೇಷ್ಠ ಶುದ್ಧ೭ ಮಂಗಳವಾರದಲ್ಲಿ ಜನಿಸಿದ ತಮ್ಮ ತಮ್ಮಂದಿರಾದ ರಾಜ ಒಡೆಯರಿಗೆ ಶಾಲೀವಾಹನ ಶಕ ೧೫೦೦ನೇ (A.D. 1578) ಬಹುಧಾನ್ಯ ಸಂವತ್ಸರದ ವೈಶಾಖ ಶುದ್ಧ ೧೫ ಶುಕ್ರವಾರದಲ್ಲಿ ಮೈಸೂರು ನಗರದಲ್ಲಿ ಪಟ್ಟಾಭಿಷೇಕವೆಂ ಮಾಡಿಸಿ ರಾಜ್ಯಭಾರವೆಂ ಸರ್ವಸ್ವತಂತ್ರರಾಗಿ ಮಾಡುವೆಂತೆ ಕಟ್ಟುಮಾಡಿ ತಮ್ಮ ಇಷ್ಟಾನುಸಾರ ಮನೋಹರವಾದ ಗುಂಡ್ಲು ತೆರಕಣಾಂಬಿ ಎಂಬ ಬಂದಾನೊಂದು ಗ್ರಾಮದಲ್ಲಿ ಪತ್ನೀಪುತ್ರಸಹೀತರಾಗಿ ಸುಖದಿಂದ ವಾಸಮಾಡುತ್ತಿದ್ದರು.

೪ನೆಯ ಅಧ್ಯಾಯ.

ಒಂಬತ್ತನೆಯ ಅಳಿಕೆ.

ರಾಜ-ಒಡೆಯರವರು.

ಜನನ.—ಶಾಲೀವಾಹನ ಶಕ ೧೪೫೫ನೇ (A.D. 1552) ಪರೀಧಾವಿ ಸಂವತ್ಸರದ ಜ್ಯೇಷ್ಠ ಶುದ್ಧ ಸಪ್ತಮಿ.

ಪಟ್ಟಾಭಿಷೇಕ—ಶಾಲೀವಾಹನ ಶಕ ೧೫೦೦ನೇ (A.D. 1578) ಬಹುಧಾನ್ಯಸಂವತ್ಸರದ ವೈಶಾಖ ಶುದ್ಧ ಪೂರ್ಣಿಮೆ.

ಪತ್ನಿಯರು.—(೧) ಸಿಂಧುವಳ್ಳಿ ಮಲ್ಲರಾಜ ಅರಸಿನವರ ಕುಮಾರತಿ ವೀರಾಜವ್ಮಣ್ಣಿಯವರು. (೨) ಎಡವನಹಳ್ಳಿ ತಿಮ್ಮರಾಜ ಅರಸಿನವರ ಕುಮಾರತಿ ತಿಮ್ಮಾಜವ್ಮಣ್ಣಿಯವರು. (೩) ಬಿಳುಗುಲಿ ದೊಡ್ಡತಿಮ್ಮರಾಜ ಅರಸಿನವರ ಕುಮಾರತಿ ನೀಲಾಜವ್ಮಣ್ಣಿಯವರು. (೪) ಬಿಳಿಕೆರೆ ದೇವರಾಜ ಅರಸಿನವರ ಕುಮಾರತಿ ದೇವೀರವ್ಮಣ್ಣಿಯವರು. (೫) ತಿಪ್ಪೂರು ಮುದ್ದಾಜವ್ಮಣ್ಣಿಯವರು.

ಸಂತಾನ.—ಪುತ್ರರು.—ಸಿಂಧುವಳ್ಳಿ ವೀರಾಜಮ್ಮಣ್ಣಿಯವರಲ್ಲಿ, (೧) ನರಸರಾಜ ಒಡೆಯರವರು. (೨) ಬೆಟ್ಟಒಡೆಯರವರು. (೩) ನಂಜರಾಜ ಒಡೆಯರವರು. (೪) ಎಡವನಹಳ್ಳಿ ತಿಮ್ಮಾಜಮ್ಮಣ್ಣಿಯವರಲ್ಲಿ ಇಮ್ಮಡಿರಾಜ ಒಡೆಯರವರು. (೫) ಬಿಳಿಕೆರೆ ದೇವೀರಮ್ಮಣ್ಣಿಯವರಲ್ಲಿ ಚಾಮರಾಜ ಒಡೆಯರವರು. (೬) ಎಡವನಹಳ್ಳಿ ತಿಮ್ಮಾಜಮ್ಮಣ್ಣಿಯವರಿಗೆ ಸ್ವೀಕಾರ ಕಂಠೀರವನರಸರಾಜ ಒಡೆಯರವರು. ಪುತ್ರಿಯರು.—ಬಿಳಿಕೆರೆ ದೇವೀರಮ್ಮಣ್ಣಿಯವರಲ್ಲಿ ಅಕ್ಕಾಯಮ್ಮಣ್ಣಿಯವರು.

ವಿಷವು ಅಮೃತವಾದದ್ದು. ಮತ್ಸ್ಯಾವತಾರಗಳಿಂದ ವಧಮಾಡಿಕೊಂಡದ್ದು.—ರಾಜ ಒಡೆಯರವರು ಧರ್ಮದಿಂದ ರಾಜ್ಯವೆಂ ಪರಿಪಾಲಿಸುತಲಿರುವ ಸಮಯದಲ್ಲಿ ಶ್ರೀಕಂಠೇಶ್ವರಸ್ವಾಮಿ ರಥೋತ್ಸವ ನಿಮಿತ್ತವಾಗಿ ನಂಜನಗೂಡಿಗೆ ಚಿತ್ತೈಸುವ ಮಾರ್ಗದಲ್ಲಿ ಇವರ ಜಾತಿಯಾದ ಕಾರಗಳಿಂ ವೀರರಾಜಯ್ಯನೆಂಬವನು ತನಗೆ ಉಂಬಳಿಯಾಗಿ ಕೊಟ್ಟದ್ದ ತಂಡ್ಯವೆಂಬ ಗ್ರಾಮಕ್ಕೆ ಹೋಗಿ ಓಲಗ, ತಾಳ, ಮೇಳ ಸಹಿತವಾಗಿ ಅಂದಳವನ್ನೇರಿ ಅಹಂಕಾರದಿಂದ ಇವರ ಎದುರಿಗೆ ಅಟ್ಟಹಾಸದಿಂದ ಬರುತ್ತಿದ್ದನು. ಅವನಂ ಕಂಡ ರಾಜ ಒಡೆಯರವರ ಸೇನಾಜನಗಳು ನಮ್ಮ ದೊರೆಗಳವರ ಎದುರಿಗೆ ಈ ಪರಿಯಾಗಿ ಬರತಕ್ಕವನಲ್ಲವೆಂದು ತಿಳಿದು ಅಂದಳವಂ ಕಿತ್ತುಕೊಂಡು ನೂಕಿಬಿಡಲು, ಆ ವೀರರಾಜಯ್ಯನು ಇವರೊಡನೆ ಯುದ್ಧ ಮಾಡಿ ಜಯಿಸುವುದಕ್ಕೆ ಸಾಮರ್ಥ್ಯವಿಲ್ಲದೆ ದುಷ್ಟರೊಡನೆ ಆಲೋಚನೆಯಂ ಮಾಡಿ ರಾಜ ಒಡೆಯರವರಿಗೆ ವಿಷವಂ ಕೊಟ್ಟು ಕೊಲ್ಲಬೇಕೆಂದು ನಿಶ್ಚಯಿಸಿ ಮೈಸೂರು ಲಕ್ಷ್ಮೀರಮಣಸ್ವಾಮಿಯ ಅರ್ಚಕನಿಗೆ ಕೆಲವು ದ್ರವ್ಯವಂ ಕೊಟ್ಟು ಪ್ರತಿನಿತ್ಯದಲ್ಲಿಯೂ ಲಕ್ಷ್ಮೀರಮಣಸ್ವಾಮಿ ತೀರ್ಥ ಪ್ರಾಶನವಂ ಮಾಡುತಲಿರುವ ರಾಜ ಒಡೆಯರವರಿಗೆ ವಿಷಮಿಶ್ರವಾದ ತೀರ್ಥವಂ ಕೊಡುವೆನಾಗು ಎಂದು ಹೇಳಲು ಯುಕ್ತಾಯುಕ್ತ ವಿಚಾರಣವಿಲ್ಲದೆ ದ್ರವ್ಯದ ಮೇಲೆ ಆಶೆಯುಳ್ಳ ಸ್ವಾಮಿದ್ರೋಹಿಯಾದ ಅರ್ಚಕ ಶ್ರೀನಿವಾಸಯ್ಯನು ದ್ರವ್ಯವಂ ತೆಗೆದುಕೊಂಡು ತೀರ್ಥದಲ್ಲಿ ವಿಷವಂ ಮಿಶ್ರಮಾಡಿ ದೊರೆಗಳವರ ಹಸ್ತಕ್ಕೆ ಒಪ್ಪಿಸಿ ಭೀತನಾಗಿ ನಮಸ್ಕರಿಸುತ ನಿಲ್ಲಲು ರಾಜ ಒಡೆಯರವರು ತೀರ್ಥವಂ ಹಸ್ತದಲ್ಲಿ ಇರಿಸಿಕೊಂಡು

ಅರ್ಚಕನನ್ನು ಕುರಿತು "ನೀನು ಎಂದಿನಂತೆ ಇಲ್ಲ, ಏತಕ್ಕೆ ನಡ
ಗುತ್ತೀಯೆ ? ಭಯಪಡಬೇಡ, ನೀನು ಏನು ಅಪರಾಧವೆಂ ಮಾಡಿ
ಯಿದ್ದರೂ ನಿನ್ನನ್ನು ಸಂರಕ್ಷಿಸುವೆವು, ಯಥಾರ್ಥವೆನ್ನು ಹೇಳು" ಎಂದು
ಕೇಳಲು, ಆ ಬ್ರಾಹ್ಮಣನು "ನಿಮ್ಮ ಜ್ಞಾತಿಯಾದ ಕಾರಗಳ್ಳಿ ವೀರ ರಾಜ
ಯ್ಯನು ನಿಮ್ಮನ್ನು ಕೊಲ್ಲುವದಕ್ಕೆ ಈ ಮೇರೆಗೆ ಮಾಡೆಂದುಹೇಳಿ
ದ್ದರಿಂದ ವಿಷಮಿಶ್ರವಾದ ತೀರ್ಥವೆಂ ಒಪ್ಪಿಸಿರುವೆನು" ಎಂದು ಹೇಳಿ
ದನು. ರಾಜಬಡೆಯರವರು "ನೀನು ವಿಷ ಎಂಬದಾಗಿ ಕೊಟ್ಟು
ಇದ್ದೀಯೋ ? ಲಕ್ಷ್ಮೀರಮಣಸ್ವಾಮಿ ತೀರ್ಥವೆಂಬದಾಗಿ ಕೊಟ್ಟು
ಇದ್ದೀಯೋ ?" ಎಂದು ಕೇಳಿದ್ದಕ್ಕೆ "ನಾನು ಲಕ್ಷ್ಮೀರಮಣಸ್ವಾಮಿ
ತೀರ್ಥವೆಂಬದಾಗಿ ಒಪ್ಪಿಸಿದ್ದೇನೆ" ಎಂದು ಹೇಳಿದ ಮಾತಂ ಕೇಳಿ ಅ
ತ್ಯಂತ ಭಕ್ತಿಯುಳ್ಳ ರಾಜ ಒಡೆಯರವರು ತೀರ್ಥಪ್ರಾಶನವಂ ಮಾಡಲು,
ಇವರು ಪರಮೇಶ್ವರಾಂಶದಲ್ಲಿ ಪುಟ್ಟಿದವರಾದ ಕಾರಣ ತೀರ್ಥಾಂಶವು
ಉದರಕ್ಕೆ ಪ್ರವೇಶಿಸಿ ವಿಷಾಂಶವು ಪೂರ್ವದಲ್ಲಿ ಪರಮೇಶ್ವರನ ಕಂಠದಲ್ಲಿ
ಕಾಲಕೂಟವಿಷವು ನಿಂತಂತೆ ಇವರ ಹಸ್ತದಲ್ಲಿ ಕಪ್ಪಾಗಿ ನಿಂತಿತು.
ಅನಂತರ ರಾಜಬಡೆಯರವರು ಶತ್ರುಶೇಷವಿರಬಾರದೆಂದು ತಿಳಿದು ಆ
ಕಾರಗಳ್ಳಿ ವೀರರಾಜಯ್ಯನಂ ಹಿಡಿತರಿಸಿ ಕಿವಿ ಮೂಗುಗಳಂ ಕೊಯಿಸಿ
ಓಡಿಸಿ ಅವನ ಬೊಕ್ಕಸಬಂಡಾರ ಆಭರಣ ಮುಂತಾದ ಪದಾರ್ಥಗಳಂ
ತರಿಸಿ ಶ್ರೀಚಾಮುಂಡೇಶ್ವರಿ ಅಮ್ಮನವರಿಗೆ ಸಮರ್ಪಿಸಿ ಆ ಕಾರಗಳ್ಳಿ
ಕೋಟೆಯಂ ಕೆಡಹಿ ಹರಳುಬಿತ್ತಿಸಿ ಬಿಟ್ಟರು. ಅರ್ಚಕ ಶ್ರೀನಿವಾ
ಸಯ್ಯನಿಗೆ ತಾವು ಅಭಯವೆಂ ಕೊಟ್ಟಂತೆ ಇಲ್ಲಿಯ ಅರ್ಚಕತನವಂ
ತೆಗೆದು ಕನ್ನಂಬಾಡಿ ಗೋಪಾಲಕೃಷ್ಣ ಸ್ವಾಮಿದೇವಸ್ಥಾನದ ಅರ್ಚಕ
ತನವಂ ನೇಮಕಮಾಡಿ ಕಳುಹಿಸಿಕೊಟ್ಟು ಈ ದೇವಸ್ಥಾನಕ್ಕೆ ಮತ್ತೊ
ಬ್ಬ ಅರ್ಚಕನಂ ನೇಮಕಮಾಡಿಸಿದರು.

ಕುರುಡನಿಗೆ ಕಣ್ಣು ಕೊಟ್ಟದ್ದು.—ಒಬ್ಬ ಜಾತ್ಯಂಧ ಬ್ರಾಹ್ಮಣನು
ತನಗೆ ಕಣ್ಣು ಬರಬೇಕೆಂದು ತಿರುಪತಿ ವೆಂಕಟಾಚಲಪತಿ ಸ್ವಾಮಿ
ಯವರ ದೇವಸ್ಥಾನದಲ್ಲಿ ಸೇವೆಯಂ ಮಾಡಿಕೊಂಡು ಬಹುಕಾಲ ಇದ್ದು
ನಾಳದಿವಸ ವೆಂಕಟಾಚಲಪತಿರಥೋತ್ಸವದರ್ಶನವು ತನಗೆ ಆಗದಿದ್ದರೆ

ಸ್ವಾಮಿಗೆ ಪ್ರಾಣವೆಂ ಒಪ್ಪಿಸುತ್ತೇನೆಂದು ನಿಶ್ಚೈಸಿ ಮಲಗಿಕೊಂಡಿದ್ದು ಎದ್ದ ಬಳಿಕ ರಥೋತ್ಸವ ದರ್ಶನವಾಗುವಂತೆ ಒಂದು ಕಣ್ಣು ಕಾಣಲು ಆ ದಿವಸ ಒಂದು ಕಣ್ಣಿನಿಂದಲೇ ಸ್ವಾಮಿದರ್ಶನವೆಂ ಮಾಡಿ ಮತ್ತೊಂದು ಕಣ್ಣೂ ಕಾಣಬೇಕೆಂದು ಪುನಃ ಪ್ರಾರ್ಥನೆಮಾಡಿಕೊಂಡು ಮಲಗಿರುವ ಸಮಯದಲ್ಲಿ ವೆಂಕಟಾಚಲಪತಿಯು "ನಿನಗೆ ಇನ್ನೊಂದು ಕಣ್ಣು ಕಾಣಬೇಕಾದರೆ ಈಶ್ವರಾಂಶದಿಂದ ಪುಟ್ಟಿರುವ ಮೈಸೂರು ದೊರೆಗಳಾದ ರಾಜ ಒಡೆಯರವರ ಬಳಿಗೆ ಹೋಗಿ ಇನ್ನೊಂದು ಕಣ್ಣು ಕಾಣುವಂತೆ ತಾವು ಹೇಳಬೇಕೆಂದು ಕೇಳುವೆನಾಗು. ಅವರು ನಿನಗೆ ಇನ್ನೊಂದು ಕಣ್ಣೂ ಕಾಣಲಿ ಎಂಬುದಾಗಿ ಹೇಳಿದರೆ ಎರಡು ಕಣ್ಣೂ ಕಾಣುವುವು." ಎಂದು ಸ್ವಪ್ನದಲ್ಲಿ ಅಪ್ಪಣೆಕೊಟ್ಟರು. ಬಳಿಕ ಆ ಬ್ರಾಹ್ಮಣನು ಮೈಸೂರು ದೊರೆಗಳಾದ ರಾಜ ಒಡೆಯರವರ ಬಳಿಗೆ ಬಂದು ಈ ವೃತ್ತಾಂತವನ್ನೆಲ್ಲಾ ಹೇಳಿ ಇನ್ನೊಂದು ಕಣ್ಣೂ ಕಾಣುವಂತೆ ತಾವು ಅಪ್ಪಣೆಯಂ ಕೊಡಬೇಕೆಂದು ಕೇಳಿದ್ದಕ್ಕೆ ರಾಜಒಡೆಯರವರು ದೇವತಾಮಹಿಮೆ ಎಂತಿರುವದೋ ತಿಳಿಯಕೂಡದೆಂದು ಭಾವಿಸಿ, "ನಾಳದಿವಸ ನೀನು ಲಕ್ಷ್ಮೀರಮಣಸ್ವಾಮಿ ದೇವಸ್ಥಾನಕ್ಕೆ ಬಂದರೆ ದೇವರದರ್ಶನವನ್ನು ಎರಡುಕಣ್ಣು ಗಳಿಂದಲೂ ಮಾಡುವೆ" ಎಂದು ಹೇಳಿದರು. ಆ ಬ್ರಾಹ್ಮಣನು ಅದೆ ಮೇರೆಗೆ ಬಂದು ರಾಜಒಡೆಯರವರ ಸಮೀಪದಲ್ಲಿ ನಿಂತುಕೊಂಡಿರುವ ಸಮಯದಲ್ಲಿ ರಾಜಒಡೆಯರವರು ಅಪ್ಪಣೆ ಕೊಟ್ಟಮೇರೆಗೆ ಎರಡುಕಣ್ಣು ಗಳಿಂದಲೂ ದೇವರ ದರ್ಶನವೆಂ ಮಾಡಿ ಕೃತಾರ್ಥನಾಗಿ ಹೊರಟುಹೋಗಿ ಈ ವೃತ್ತಾಂತವನ್ನೆಲ್ಲಾ ವೆಂಕಟಾಚಲಪತಿ ಸನ್ನಿಧಿಯಲ್ಲಿ ವಿನ್ನವಿಸಿ ಅಲ್ಲಿದ್ದ ಜನರುಗಳನ್ನೆಲ್ಲಾ ಆಶ್ಚರ್ಯಪಡಿಸಲು ಅಂದುಮೊದಲುಗೊಂಡು ಅರಮನೆಗೆ ಶ್ರೀಚಾಮುಂಡೇಶ್ವರಿ, ಶ್ರೀಕಂಠೇಶ್ವರಸ್ವಾಮಿ ಎಂತು ಮನೆದೇವರೋ ಅದೇ ಮೇರೆಗೆ ವೆಂಕಟಾಚಲಪತಿಯೂ ಮನೆದೇವರಾಗಿ ಇದ್ದಾರೆ.

ತಲಕಾಡು ಮಾಲಂಗಿ ಕಡೆಯ ಜನರನ್ನು ಓಡಿಸಿದ್ದು.—ಅನಂತರ ಮೆಧುರೆ ವೆಂಕಟಪತಿನಾಯಕನು ಶ್ರೀರಂಗಪಟ್ಟಣವೆಂ ತೆಗೆದುಕೊಳ್ಳಬೇಕೆಂದು ಬರುವೆ ವರ್ತಮಾನವೆನ್ನು ಶ್ರೀರಂಗಪಟ್ಟಣದ ಶ್ರೀರಂಗರಾಯರು ಕೇಳಿ ತಮಗೆ ಸಹಾಯವಾಗಿ ಬರಬೇಕೆಂದು ಕೆಲವು ವೆಸ್ತ್ರಾಭರಣಗಳಂ

ಕೊಟ್ಟು ಮೈಸೂರು ರಾಜಬಿಡೆಯರವರ ಬಳಿಗೆ ಹೇಳಿಕಳುಹಿಸಿದ್ದಕ್ಕೆ ಇವರು ತಾವು ಬರುವದಿಲ್ಲವೆಂದು ಆ ಮರ್ಯಾದೆಯಂ ಹಿಂತಿರುಗಿ ಕಳುಹಿಸಲು ಶ್ರೀರಂಗರಾಯರು ಕೋಪದಿಂದ ತಲಕಾಡು ಮೊಲಂಗಿ ಪ್ರಾಂತ್ಯದಿಂದ ತಮ್ಮ ಸಂಬಂಧಿಜನರುಗಳಂ ಸೇನಾಸಮೇತರಾಗಿ ಕರೆಸಿ ಮೈಸೂರಂ ತೆಗೆದುಕೊಳ್ಳಬೇಕೆಂದು ಕೆಸರೆ ಎಂಬ ಗ್ರಾಮದ ಬಳಿಯಲ್ಲಿ ಇಳಿದು ಇಧಾರೆಂಬ ವರ್ತಮಾನವಂ ಕೇಳಿ, ರಾಜ ಒಡೆಯರವರು ತಮ್ಮ ಚರಾ ಕ್ರಮೆದಿಂದ ಅವರುಗಳಂ ಹೊಡೆದು ಓಡಿಸಿ ಬಿಟ್ಟರು.

ಪಾಳೆಯಗಾರರನ್ನು ಗೆದ್ದದ್ದು.—ಅನಂತರ ಕೆಲವು ದಿವಸದ ಮೇಲೆ ಬೇಲೂರುಕೃಷ್ಣಪ್ಪನಾಯಕ, ಗ್ರಾಮದ ವೀರರಾಜಯ್ಯ, ಮೊಗೂರು ಬಾಳಲೋಚನನಾಯಕ, ಎಳಂದೂರು ಇಮ್ಮಡಿ ರಾಮರಾಜನಾಯಕ, ಉಮ್ಮತ್ತೂರು ಮಲ್ಲರಾಜಯ್ಯ, ಇನ್ನೂ ಕುಣಿಗಲು ಮುಂತಾದೆಡೆಗಳ ಪಾಳೆಯಗಾರರುಗಳು ಶ್ರೀರಂಗಪಟ್ಟಣವಂ ಸಾಧಿಸಬೇಕೆಂದು ಗುಂಪು ಕೂಡಿ ಕುಣಿಗಲ ಬಳಿ ಇದಾರೆಂಬ ವರ್ತಮಾನವನ್ನು ಮೈಸೂರು ರಾಜ ಒಡೆಯರವರು ಕೇಳಿ ಶ್ರೀರಂಗಪಟ್ಟಣವಂ ಅವರುಗಳು ತೆಗೆದು ಕೊಂಡರೆ ತಮ್ಮ ಮೈಸೂರಿಗೆ ತೊಂದರೆ ಬರಬಹುದೆಂದು ತಿಳಿದು ಕುಣಿಗಲ ಬಳಿಗೆ ಸೇನಾಸಮೇತರಾಗಿ ಹೋಗಿ ಯುದ್ಧದಲ್ಲಿ ಅವರುಗಳಂ ಜೈಸಿ ಅವರುಗಳ ವಸ್ತ್ರಾಭರಣ ದ್ರವ್ಯ ಆನೆಕುದುರೆ ಮುಂತಾದ ಪದಾರ್ಥಗಳಂ ತೆಗೆದುಕೊಂಡರು.

ಉಮ್ಮತ್ತೂರಿಗೆ ಸೇರಿದ ಗ್ರಾಮಗಳು ಬಂದದ್ದು.—ಈ ವರ್ತಮಾನವಂ ಶ್ರೀರಂಗರಾಯರು ಕೇಳಿ ಸಂತೋಷಪಟ್ಟರು. ರಾಜಬಿಡೆಯರವರು ಅನೇಕ ಸೇನೆಗಳಂ ಕಟ್ಟಿ ಧರ್ಮದಿಂದ ರಾಜ್ಯಪರಿಪಾಲನೆಯಂ ಮಾಡು ತಲಿರುವ ಸಮಯದಲ್ಲಿ ಶ್ರೀರಂಗರಾಯರ ಸಂಬಂಧಿ ಆನೆಗೊಂದಿ ಸಂಸ್ಥಾನದ ವೆಂಕಟಪತಿರಾಯರ ದಳವಾಯಿ ತಿರುಮಲರಾಜಯ್ಯನೆಂಬವನು ನರಸೀಪುರದ ಮಾರ್ಗವಾಗಿ ಶ್ರೀರಂಗಪಟ್ಟಣವ ಶ್ರೀರಂಗರಾಯರ ಬಳಿಗೆ ಬರುವ ಸಮಯದಲ್ಲಿ ನರಸೀಪುರದ ಪಾಳೆಯಗಾರ ಲಕ್ಕ್ಕಪ್ಪನಾಯಕನು ಆ ತಿರುಮಲರಾಜಯ್ಯನಂ ಕೈಸೆರೆ ಹಿಡಿದುಕೊಂಡು ಇದಾನೆಂಬ ವರ್ತಮಾನಂ ಶ್ರೀರಂಗರಾಯರು ಕೇಳಿ ಆ ಲಕ್ಕ್ಕಪ್ಪ

ನಾಯಕನಂ ತಾವು ಜಯಿಸುವುದಕ್ಕೆ ಸಾಮರ್ಥ್ಯವಿಲ್ಲದ್ದರಿಂದ ತಮಗೆ ಪರಮಮಿತ್ರರಾಗಿ ಮಹಾಪರಾಕ್ರಮಶಾಲಿಯಾದ ರಾಜಒಡೆಯರವರ ಬಳಿಗೆ ಈ ವೃತ್ತಮಾನವಂ ಹೇಳಿಕಳುಹಿಸಲು ರಾಜಒಡೆಯರವರು ನರಸೀಪುರದ ಪಾಳೆಯಗಾರ ಲಕ್ಷ್ಮಪ್ಪನಾಯಕನಂ ಜಯಿಸಿ ಅವನ ಲ್ಲಿದ್ದ ವೈಢೂರ್ಯಾಭರಣ ವಾಹನ ಮುಂತಾದ ಪದಾರ್ಥಗಳಂ ತೆಗೆದುಕೊಂಡು, ತಿರುಮಲರಾಜಯ್ಯನನ್ನು ಬಿಡಿಸಿಕೊಂಡು ಶ್ರೀರಂಗಪಟ್ಟಣಕ್ಕೆ ಕಳುಹಿಸಲು ಆ ಶ್ರೀರಂಗರಾಯರು ಪರಮಸಂತೋಷಪಟ್ಟು ಸುಖದಿಂದ ಇರುತಿದ್ದರು. ಅನಂತರ ಈವೃತ್ತಮಾನವಂ ಕೇಳಿದ ಆನೆಗೊಂದಿ ವೆಂಕಟಪತಿರಾಯರು ಈ ರಾಜಒಡೆಯರವರ ಸಂಗಡ ಸ್ನೇಹವಂ ಬೆಳಸಬೇಕೆಂದು ತಮಗೆ ಸೇರಿರುವ ಉಮ್ಮತ್ತೂರಿಗೆ ವಳಿತವಾಗಿ ತಾಯೂರು ನಾಡಿಗೆ ಸೇರಿದ ಆಲಬೂರು, ನವಿಲೂರು, ಮುಂತಾದ ಕೆಲವು ಗ್ರಾಮಗಳನ್ನೂ, ಬನ್ನೂರಿಗೆ ವಳಿತವಾದ ಸೋಸಲೆಸ್ಥಳದ ಕೋಣಗಳ್ಳಿ ಮುಂತಾದ ಕೆಲವು ಗ್ರಾಮಗಳನ್ನೂ, ಕೈಗಾಣಿಕೆಯಾಗಿ ಒಪ್ಪಿಸೆಂದು ತಮ್ಮಕಡೆಯ ಉಮ್ಮತ್ತೂರು ಪಾಳೆಯಗಾರ ನಂಜರಾಜಯ್ಯನ ಬಳಿಗೆ ಪತ್ರವಂ ಬರೆಸಿ ಕಳುಹಿಸಿದರು. ಅದರಂತೆ ಆ ಉಮ್ಮತ್ತೂರು ನಂಜರಾಜಯ್ಯನು ರಾಜಒಡೆಯರವರಿಗೆ ಬಹಳ ಸನ್ಮಾನಗಳಂ ಮಾಡಿ ಆ ಗ್ರಾಮಗಳಂ ಕೈಗಾಣಿಕೆಯಾಗಿ ಒಪ್ಪಿಸಿದನು.

ಶ್ರೀರಂಗಪಟ್ಟಣವೂ ಸಿಂಹಾಸನವೂ ಖಂದ ವಿಚಾರ.—ಅನಂತರದಲ್ಲಿ ಶ್ರೀರಂಗರಾಯರು ಚಿಕಿತ್ಸೆಗೆ ಅಸಾಧ್ಯವಾದ ಬೆನ್ನುಹಣೆ ಎಂಬ ವ್ರಣಜಾಡ್ಯವು ತಮಗೆ ಸಂಭವಿಸಿದೆ. ಇನ್ನುಮೇಲೆ ತಮ್ಮ ದೇಹ ನಿಲ್ಲುವುದಿಲ್ಲವೆಂದು ತಿಳಿದು ತಮಗೆ ಪರಮಮಿತ್ರರಾಗಿ ಪರಾಕ್ರಮಶಾಲಿಗಳಾದ ರಾಜಒಡೆಯರವರು ಬಂದೆರಡಾವೃತ್ತಿ ಅವ್ಯಾಜವಾಗಿ ಉಪಕಾರವಂ ಮಾಡಿರುವರಲ್ಲವೆ ಯದುವಂಶದಲ್ಲಿ ಪುಟ್ಟಿದವರಾದ್ದರಿಂದ ಈ ಸಿಂಹಾಸನವನ್ನೂ ಈ ರಾಜ್ಯವನ್ನೂ ಆಳುವದಕ್ಕೆ ಇವರೇ ಯೋಗ್ಯರೆಂತಲೂ, ಮತ್ತು ಕೆಲವು ಪಾಳೆಯಗಾರರುಗಳಂ ಗೆದ್ದು ಸೀಮೆಗಳಂ ಕಟ್ಟಿಯಿಧಾತೆಯಾದ ಕಾರಣ ನಾವು ಇನ್ನು ಯಾರಿಗಾವರೂ ಶ್ರೀರಂಗಪಟ್ಟಣವಂ ಕೊಟ್ಟರೂ ಅವರಂ ಜಯಿಸಿ ತೆಗೆದುಕೊಳ್ಳುವರೆಂತಲೂ, ತಮ್ಮ ಸಾಮಂತಿಕರೊಳನೆ

ಆಲೋಚನೆಯುಂ ಮಾಡಿ ರಾಜಬಿಡೆಯರವೆರಂ ಕರೆಯಿಸಿ ತಮ್ಮ ಪೂರ್ವಿಕರಿಗೆ ಶ್ರೀರಂಗಪಟ್ಟಣವೂ ಸಿಂಹಾಸನವೂ ಬಂದ ವಿವರಗಳುಂ ಹೇಳಿದರು. ಅದೆಂತೆಂದರೆ :—

ಕಲಿಯುಗದ ಆದಿಯಲ್ಲಿ ಯುಧಿಷ್ಠಿರ ಶಕೆ ಪ್ರಮೋಥಿ ಸಂವತ್ಸರ ಮೊದಲುಗೊಂಡು ಪ್ರಮೋದೀಚ ಸಂವತ್ಸರದ ವರೆಗೆ ಧರ್ಮರಾಯನ ಮೊಮ್ಮಗನಾದ ಪರೀಕ್ಷಿತರಾಯ ಆದಿಯಾಗಿ ಪ್ರವೀಕರಾಯನ ವರೆಗೆ ೨೧ ಮಂದಿ ದೊರೆಗಳು ಈ ಧರ್ಮರಾಯನ ಸಿಂಹಾಸನವನ್ನೇರಿ ಧರ್ಮದಿಂದ ರಾಜ್ಯಭಾರವಂ ಮಾಡಿದ ವರ್ಷಗಳು ೧೧೧೫

ಅನಂದ ಸಂವತ್ಸರ ಮೊದಲುಗೊಂಡು ಪ್ರಭವ ಸಂವತ್ಸರದ ವರೆಗೆ ಮಗಧ ದೇಶಾಧಿಪತಿಗಳಾದ ಸುಮಾಲಿ ಮೊದಲಾಗಿ ಈದಂಬರಾಯನ ವರೆಗೆ ೩೦ ಮಂದಿ ರಾಜರು ಆಳಿದ ವರ್ಷಗಳು ೪೯೪

ವಿಭವ ಸಂವತ್ಸರ ಮೊದಲುಗೊಂಡು ಸರ್ವಜಿತು ಸಂವತ್ಸರದ ವರೆಗೆ ಮಯೂರವರ್ಮ ಆದಿಯಾಗಿ ಲೋಕಾದಿತ್ಯಈದಂಬರಾಯನವರೆಗೆ ೪ ಮಂದಿ ರಾಯರು ಆಳಿದ ವರ್ಷಗಳು ೮೦

ಸರ್ವಧಾರಿ ಸಂವತ್ಸರ ಮೊದಲುಗೊಂಡು ವಿರೋಧಿ ಸಂವತ್ಸರದ ವರೆಗೆ ಜಯಂತಿ ಈದಂಬರಾಯನಿಂದ ಈ ವಂಶದ ೨೧ ಮಂದಿ ದೊರೆಗಳು ಆಳಿದ ವರ್ಷಗಳು ೨೪೦

ವಿಕೃತಿ ಸಂವತ್ಸರ ಮೊದಲಾಗಿ ಕ್ರೋಧನ ಸಂವತ್ಸರದ ವರೆಗೆ ವೈಪಳರಾಯ ಆದಿಯಾಗಿ ದುರ್ಮಿತ್ರರಾಯನ ವರೆಗೆ ೩೦ ಮಂದಿ ಅರಸುಗಳು ಆಳಿದ ವರ್ಷಗಳು ೪೫೬

ಅಕ್ಷಯ ಸಂವತ್ಸರ ಮೊದಲು ಸಿದ್ಧಾರ್ಥಿ ಸಂವತ್ಸರದ ಪರ್ಯಂತಕ್ಕೆ ಈದಂಬರಾಯ ಈತನ ವಂಶಸ್ಥರೂ ಸಹ ೩೧ ಮಂದಿ ಆಳಿದ ವರ್ಷಗಳು ೩೯೪

ರೌದ್ರಿ ಸಂವತ್ಸರದಿಂದ ದುಂದುಭಿ ಸಂವತ್ಸರದ ವರೆಗೆ ವೀರ

ಸೇನರಾಯನ ಮಗಳು ಗೋವಿಂದ ಭಗವಾನರ ಹೆಂಡತಿ ಕ್ಷತ್ರಿಯಸ್ತ್ರೀಯ ಪುತ್ರನಾದ ವಿಕ್ರಮರಾಯನು ಆಳಿದ ವರ್ಷಗಳು ೬೩

ಹೀಗೆ ಯುಧಿಷ್ಠಿರ ಶಕದಲ್ಲಿ ೧೭೮೦ ಮೆಂದಿ ಆಳಿದ ಒಟ್ಟು ವರ್ಷಗಳು ೩೦೪೪

ಅನಂತರ ವಿಕ್ರಮಶಕದಲ್ಲಿ ರುದಿರೋದ್ಗಾರಿ ಸಂವತ್ಸರ ಮೊದಲುಗೊಂಡು ಶೋಭಕೃತ್ಸಂವತ್ಸರದ ವರೆಗೆ ಮೂಲವದೇಶಾಧಿಪತಿ ವಿಕ್ರಮರಾಯನು ಆಳಿದ ವರ್ಷಗಳು ೪೦

ಕ್ರೋಧಿ ಸಂವತ್ಸರದಿಂದ ಶ್ರೀಮುಖ ಸಂವತ್ಸರದ ವರೆಗೆ ಮಂತ್ರಿಯಾದ ಭಟ್ಟಯು ಆಳಿದ ವರ್ಷಗಳು ೩೦

ಭಾವ ಸಂವತ್ಸರ ಆದಿಯಾಗಿ ಈಶ್ವರ ಸಂವತ್ಸರದ ವರೆಗೆ ಅವಂತೀ ದೇಶಾಧಿಪತಿ ಭೋಜರಾಯರು ಆಳಿದ ವರ್ಷಗಳು ೬೪

ಹೀಗೆ ವಿಕ್ರಮ ಶಕದಲ್ಲಿ ಮೂವರು ದೊರೆಗಳು ಆಳಿದ ಒಟ್ಟು ವರ್ಷಗಳು ೧೩೫೫

ಅನಂತರ ಶಾಲೀವಾಹನ ಶಕ ಬಹುಧಾನ್ಯ ಸಂವತ್ಸರದಿಂದ ಸರ್ವಜಿತು ಸಂವತ್ಸರನ ವರೆಗೆ ಶಾಲೀವಾಹನ ಆದಿಯಾಗಿ ಆಬೀರಕುಲದವರು ಮೌಸರಾಯನವರೆಗೆ ಆತನ ವಂಶಸ್ಥರು ಆಳಿದ ವರ್ಷಗಳು ೬೭೦

ಸರ್ವಧಾರಿ ಸಂವತ್ಸರದಿಂದ ಕ್ರೋಧನ ಸಂವತ್ಸರದ ವರೆಗೆ ಹಳೇಬೀಡು ನವಬಳ್ಳಾಳರು ಆಳಿದ ವರ್ಷಗಳು ೯೮

ಅಕ್ಷಯ ಸಂವತ್ಸರ ಮೊದಲುಗೊಂಡು ನಿಸ್ಸಾರ್ಥಿ ಸಂವತ್ಸರದ ವರೆಗೆ ಆನೆಗೊಂದಿ ಮುಂತಾದ ದೇಶಗಳನ್ನು ತಿಳಿಪಾದಷಾಹನ ಕಡೆಯ ಪ್ಲೆಂಛರು ಆಕ್ರಮಿಸಲು

ಈ ಸಿಂಹಾಸನವನ್ನು ಏರುವದಕ್ಕೆ ಬಬ್ಬರಿಗೂ ಯೋಗ್ಯತೆ ಇಲ್ಲವಾದಕಾರಣ ಇದು ಅವರ ಸ್ವಾಧೀನದಲ್ಲಿ ಇದ್ದ ವರ್ಷಗಳು ೫೪

ರೌದ್ರಿ ಸಂವತ್ಸರ ಮೊದಲುಗೊಂಡು ರೌದ್ರಿ ಸಂವತ್ಸರದವರೆಗೆ ಬಿದರೆ ಸುರತಾಳ ಮೊದಲಾದ ಅನ್ಯಾಕ್ರಾಂತರಾದ ತುಂಡು ಅರಸುಗಳು ಪ್ರಬಲರಾಗಿ ಅಲ್ಲಲ್ಲಿ ಸೀಮೆಗಳಂ ಕಟ್ಟಿಕೊಂಡು ಅವರವರೇ ಸ್ವತಂತ್ರರಾಗಿ ಆಳುತ್ತ ಇರುವ ಸಮಯದಲ್ಲಿ ಯಾರು ಬಲಿಷ್ಠರಾಗಿದ್ದರೋ ಅವರ ಸ್ವಾಧೀನವಾಗಿಯಿದ್ದು ಅವರುಗಳು ಆಳಿದ ನಂತರ ಆನೆಗೊಂದಿಯಲ್ಲಿ ಓರಗಲ್ಲು ಪ್ರತಾಪರುದ್ರ ರಾಯನು ಪ್ರಬಲನಾದಕಾರಣ ಅವರುಗಳಂ ಜಯಿಸಿ ಸಿಂಹಾಸನವಂ ತನ್ನ ಸ್ವಾಧೀನಮಾಡಿಕೊಂಡು ಆಳುತ್ತಿದ್ದದ್ದು ವರ್ಷಗಳು ೪೦೧

ದುರ್ಮತಿ ಸಂವತ್ಸರ ಮೊದಲಾಗಿ ಶ್ರೀಮುಖ ಸಂವತ್ಸರದವರೆಗೆ ವೆನಗೊಂಡೆ ಕಂಪಲರಾಯನು ಪ್ರಬಲನಾಗಿ ಸಿಂಹಾಸನವನ್ನು ಏರಿ ಆಳುತ್ತಿದ್ದ ವರ್ಷಗಳು ೧೫

ಈ ಕಂಪಲರಾಯನು ರಾಜಕಾರ್ಯನಿಮಿತ್ತವಾಗಿ ಭಾವೆಯುವ ಸಂವತ್ಸರಗಳಲ್ಲಿ ಜನರು ಅರಿಯದಂತೆ ಈ ಸಿಂಹಾಸನವನ್ನು ನೆಲಮಾಳಿಗೆಯಲ್ಲಿ ಇರಿಸಿದ್ದನು. ಆಗ ಶಕ ೧೨೫೩ನೇ (A.D. 1334) ಭಾವೆಸಂವತ್ಸರದ ಕಾರ್ತಿಕಶುದ್ಧ ೫ ಭಾನುವಾರ ಮೆಧ್ಯಾಹ್ನದಲ್ಲಿ ವಿದ್ಯಾರಣ್ಯಸ್ವಾಮಿಗಳವರು ಪೂರ್ವಾಶ್ರಮದಲ್ಲಿ ಶ್ರೀಲಕ್ಷ್ಮೀದೇವಿಯಂ ಕುರಿತು ತಪಸ್ಸಂ ಮಾಡಲಾಗಿ ಅಮ್ಮನವರು ಅಶರೀರವಾಕ್ಕಿನಿಂದ ಹೇಳಿದ್ದೇನೆಂದರೆ "ನೀನು ಮಾಡಿದ ತಪಸ್ಸನ್ನು ಮೆಚ್ಚಿದೆನು. ನಿನಗೆ ಇನ್ನೊಂದು ಜನ್ಮಕ್ಕೆ ನಾನು ಪ್ರಸನ್ನಳಾಗುತ್ತೇನೆ, ಪರಂತು ನಿನಗೆ ಭೋಗವಿಲ್ಲ. ಅಖಂಡ ಪೃಥ್ವೀ ಸಾಮ್ರಾಜ್ಯವು

ನೀನು ಕೊಟ್ಟವರಿಗೆ ಉಂಟು. ಈ ಕಲಿಯುಗದಲ್ಲಿ ನೀನು ಮಾಡಿದ ಭಾಷ್ಯಾದಿ ಗ್ರಂಥಗಳು ಎಲ್ಲಿಯವರೆಗೂ ಇರುತಲಿವೆಯೋ ಅಲ್ಲಿಯವರೆಗೂ ನಿನ್ನ ಹೆಸರು ನಡೆಯುವುದು" ಎಂದು ಹೇಳಿ ಅಂತರ್ಧಾನವನ್ನೈದಿದರು. ಆಗ ವಿರೂಪಾಕ್ಷಯ್ಯನ ಹಿಂದಣ ಪರಂಪರೆಯಲ್ಲಿ ನಾರಣಯ್ಯನೆಂಬಾತನು ಸ್ವಾಮಿಗಳ ಪೂರ್ವಾಶ್ರಮದಲ್ಲಿ ಶುಕ್ರೂಷೆಯಂ ಮಾಡಿಕೊಂಡು ಇದ್ದನು. ವಿದ್ಯಾರಣ್ಯಸ್ವಾಮಿಗಳವರು ಇನ್ನೊಂದು ಜನ್ಮಕ್ಕೆ ಅಮ್ಮನವರು ಪ್ರಸನ್ನರಾಗುತ್ತೀವೆಂದು ಹೇಳಿದುದನ್ನು ಆಲೋಚಿಸಿ ಯತ್ಯಾಶ್ರಮವನ್ನು ಸ್ವೀಕರಿಸಲಾಗಿ ಲಕ್ಷ್ಮೀದೇವಿಯು ಪ್ರಸನ್ನಳಾಗಿ ಬಂದು ಹರಿದಾರಿ ಪರ್ಯಂತಕ್ಕೂ ಲಕ್ಷ್ಮೀನಾರಾಯಣಸ್ವಾಮಿ ವಿಗ್ರಹದ ಸುವರ್ಣಾವೃಷ್ಟಿಯಂ ಕರೆದಳು. ಆಗ ವಿದ್ಯಾರಣ್ಯಸ್ವಾಮಿಗಳವರು ಗ್ರಾಮದ ಮನೆಗಳ ಮೇಲೆ ಬಿದ್ದ ವಿಗ್ರಹವು ಮನೆಯುವರದು ಎಂತಲೂ, ಬೀದಿಯಲ್ಲಿಯೂ ಊರಹೊರಗೂ ಬಿದ್ದದ್ದು ಅರಮನೆಯುವರದು ಎಂತಲೂ ನಿಬಂಧನೆಯಂ ಮಾಡಿ "ಈ ದ್ರವ್ಯವನ್ನು ಅನುಭವಿಸಿ ರಾಜ್ಯಪರಿಪಾಲನೆಯಂ ಮಾಡುವದಕ್ಕೆ ಯೋಗ್ಯರು ಯಾರು," ಎಂದು ಆಲೋಚಿಸುತ್ತಿದ್ದರು. ಆ ಕಾಲದಲ್ಲಿ ಓರಗಲ್ಲು ಪ್ರತಾಪರುದ್ರರಾಯನ ಭಂಡಾರದ ಅಧಿಕಾರವಂ ಮಾಡುತ್ತಿದ ಹಕ್ಕ ಬುಕ್ಕರೆಂಬಿರ್ವರು ಅಧಿಕಾರವಿಲ್ಲದೆ ಶ್ರಮಪಡುತ್ತಿರಲು ಇವರ ಪೂರ್ವಜನ್ಮ ಸುಕೃತವಿಶೇಷದಿಂದ ಬಂದಾನೊಂದು ದಿನ ಹಕ್ಕನೆಂಬವನು ಮೃಗಾರ್ಯಾಸದಿಂದ ಬಂದು ವೃಕ್ಷದ ಕೆಳಗೆ ವಿಶ್ರಮಿಸಿಕೊಂಡಿದ್ದ ಸಮಯದಲ್ಲಿ ಬಂದು ಸರ್ಪವು ಮಧ್ಯಾಹ್ನದೊಳು ಅವನ ಶಿರೋಭಾಗದಲ್ಲಿ ಆಡಿ ಹೊರಟು

ಹೋಯಿತು. ಈ ವರ್ತಮಾನವು ಸ್ವಾಮಿಗಳಿಗೆ ತಿಳಿ
ದದ್ದರಿಂದ ಹಕ್ಕಬುಕ್ಕರಂ ಕರೆಸಿ ಅವರ ಕುಲಶೀಲ
ಗಳಂ ವಿಚಾರಿಸಿ ಅವರು ಚಂದ್ರವಂಶದ ಅರಸು
ಗಳೆಂದು ತಿಳಿದು ಅವರಿಗೆ ಪಟ್ಟವಂ ಕಟ್ಟಬೇಕೆಂದು
ಆಲೋಚಿಸಿ ಪೂರ್ವದಲ್ಲಿ ಧರ್ಮರಾಯ ಆದಿಯಾಗಿ ಆಳು
ತ್ತಿದ್ದ ಸಿಂಹಾಸನವು ಎಲ್ಲಿಯಿರುವದೆಂದು ವಿಚಾರ
ಮಾಡಲು ಪೆನಗೊಂಡಿ ಕಂಪಲರಾಯನು ನೆಲಮಾಳಿಗೆ
ಯಲ್ಲಿ ಇರಿಸಿದಾನೆಂದು ಜನರು ತಿಳಿಸಿದರು. ವಿದ್ಯಾರ
ಣ್ಯರು ಷಣ್ಮುಖಾಂಶದಿಂದ ಪುಟ್ಟಿದವರಾದ ಕಾರಣ ಅದೇ
ವೈಷ್ಣವದ ಕೆಳಗೆ ಸಿಂಹಾಸನವಿರುವದೆಂದೂ ಅಲ್ಲಿ ಕಾವ
ಲಾಗಿದ್ದ ಸರ್ಪವೇ ಇವನ ತಲೆಯ ಮೇಲೆ ಆಡಿ
ತೆಂದೂ ನಿಶ್ಚಯಿಸಿ ಆ ಸಿಂಹಾಸನವಂ ತರಿಸಿದರು.

ಅನಂತರ ಶಕ ೧೨೫೯ ನೇ (A.D. 1336) ಧಾತು ಸಂವ
ತ್ಸರದ ವೈಶಾಖಶುದ್ಧ ೭ ಗುರುವಾರ ಮಖಾನಕ್ಷತ್ರ ಅಭಿ
ಜಿನ್ಮುಹೂರ್ತಸಿಂಹಲಗ್ನದಲ್ಲಿ ಹಕ್ಕನಿಗೆ ಹರಿಹರರಾ
ಯನೆಂದು ಪೆಸರನ್ನಿಟ್ಟು ಆನೆಗೊಂದಿಯಲ್ಲಿ ಪಟ್ಟಾಭಿ
ಷೇಕವಂ ಮಾಡಿ ಸಿಂಹಾಸನವನ್ನೂ ಕೊಟ್ಟು ಬುಕ್ಕ
ನಿಗೆ ಬುಕ್ಕರಾಯನೆಂದು ಪೆಸರನ್ನಿಟ್ಟು ಯುವರಾ
ಜ್ಯಾಧಿಪತ್ಯವಂ ಕೊಟ್ಟರು. ಅವರಿರ್ವರು ೫ ಲಕ್ಷ
ಕಾಲ್ಬಲವನ್ನೂ, ೧೫೦೦ ಆನೆಗಳನ್ನೂ ಕೂಡಿಸಿ ಅಸೇತು
ಹಿಮಾಚಲಪರ್ಯಂತವಾಗಿ ಧರ್ಮದಿಂದ ರಾಜ್ಯಪರಿಪಾಲ
ನೆಯಂ ಮಾಡುತ್ತಿದ್ದರು. ಅವರು ಆದಿಯಾಗಿ
ನರಪತಿ ಕೃಷ್ಣರಾಯನವರೆಗೆ ೧೪ ಜನರು ಆಳಿದ
ವರ್ಷಗಳು ೧೦೯

ಈ ನರಪತಿ ಕೃಷ್ಣರಾಯನಿಗೆ ಸಂತಾನವಿಲ್ಲದ್ದರಿಂದ ತನ್ನ
ಅಳಿಯ ರಾಮರಾಯನಿಗೆ ಸಿಂಹಾಸನವಂ ಕೊಟ್ಟು
ಪಟ್ಟಾಭಿಷೇಕವಂ ಮಾಡಿಸಿ ತಾರಣ ಸಂವತ್ಸರದ

ಜ್ಯೇಷ್ಠ ಶುದ್ಧ ೫ ಭಾನುವಾರ ಮೆಧ್ಯಾಹ್ನದಲ್ಲಿ ದೈವಾಧೀನನಾಗಲು. ಅನಂತರ ಆ ರಾಮರಾಯನೂ ಅವನ ತಮ್ಮ ತಿರುಮೆಲರಾಯನೂ ಆಳಿದ ವರ್ಷಗಳು ೧೪

ಆ ತಿರುಮೆಲರಾಯನು ತನ್ನ ನಾಲ್ಕು ಜನ ಮಕ್ಕಳಿಗೆ ದೇಶವಿಭಾಗವಂ ಮಾಡಿಕೊಟ್ಟನು.

ಹಿರಿಯ ಮಗ ಶ್ರೀರಂಗರಾಯನಿಗೆ ಶ್ರೀರಂಗಪಟ್ಟಣದ ಸೀಮೆಯನ್ನೂ ಆನೆಗೊಂದಿಯಲ್ಲಿದ್ದ ಸಿಂಹಾಸನವನ್ನೂ ಕೊಟ್ಟು ಕಳುಹಿಸಿದನು. ಎರಡನೆಯ ಮಗ ರಘುನಾಥರಾಯನಿಗೆ ಪೆನಗೊಂಡೆ ಸೀಮೆಯನ್ನೂ ಮೂರನೆಯ ಮಗ ರಾಮರಾಯನಿಗೆ ರಾಯವೇಲೂರು ಸೀಮೆಯನ್ನೂ ನಾಲ್ಕನೆಯ ಮಗ ವೆಂಕಟಪತಿರಾಯನಿಗೆ ಚಂದ್ರಗಿರಿ ದುರ್ಗದ ಸೀಮೆಯನ್ನೂ ಕೊಟ್ಟು ಕಳುಹಿಸಿದನು.

ಹೀಗೆ ವಿಕಾರಿ ಸಂವತ್ಸರ ಮೊದಲು ಶಕ ೧೫೩೩ನೇ (A.D. 1609) ಸೌಮ್ಯಸಂವತ್ಸರದ ವರೆಗೆ ಆ ಶ್ರೀರಂಗರಾಯ ಆದಿಯಾಗಿ ೭ನೇ ಶ್ರೀರಂಗರಾಯನಾದ ತನ್ನ ಪರ್ಯಂತ ಆಳಿದ ವರ್ಷಗಳು ೧೩೧

ಹೀಗೆ ಶಾಲೀವಾಹನಶಕದಲ್ಲಿ ಬೊರೆಗಳು ಆಳಿದ ವರ್ಷಗಳು ೧೫೩೩

ಈರೀತಿಯಲ್ಲಿ ಯುಧಿಷ್ಠಿರ ಶಕ ಪ್ರಮೋಥಿ ಸಂವತ್ಸರ ಮೊದಲುಗೊಂಡು ಶಾಲೀವಾಹನಶಕ ಸೌಮ್ಯ ಸಂವತ್ಸರದ ವರಗೆ ಪರೀಕ್ಷಿತರಾಯನು ಆದಿಯಾಗಿ ೭ನೇ ಶ್ರೀರಂಗರಾಯನ ವರೆಗೆ ಬೊರೆಗಳು ಆಳಿದ ವರ್ಷಗಳು ೪೭೧೧

ಈ ಪರಿಯಾಗಿ ಶ್ರೀರಂಗರಾಯನು ಶ್ರೀರಂಗಪಟ್ಟಣವೂ ಸಿಂಹಾಸನವೂ ತಮಗೆ ಬಂದ ವೃತ್ತಾಂತವಂ ರಾಜ ಒಡೆಯರವರಿಗೆ ಪೇಳಿ ಆ ಸೌಮ್ಯ ಸಂವತ್ಸರದ ಮಾಘ ಬಹುಳ ೧೦ ಗುರುವಾರದಲ್ಲಿ ದೇಶಕೋಶಗಳಿಂ ಕೂಡಿದ ಶ್ರೀರಂಗಪಟ್ಟಣವನ್ನೂ ಸಿಂಹಾಸನವನ್ನೂ ಕೊಟ್ಟು

ಪತ್ನಿಯರಾದ ಅಲಮೇಲಮ್ಮ ರಂಗಮ್ಮನವರಿಂದೊಡಗೂಡಿ ಬಂಧುಜನ ಸಮೇತನಾಗಿ ತಲಕಾಡು ಸಮಿಾಪದಲ್ಲಿರುವ ಮೂಲಂಗಿಗೆ ಹೋಗಿ ಕೆಲವು ದಿವಸ ಅಲ್ಲಿದ್ದು ಕೀರ್ತಿನಾರಾಯಣಸ್ವಾಮಿಯವರ ಪಾದಾರವಿಂದದಲ್ಲಿ ಐಕ್ಯವಾದನು.

ರಾಜಒಡೆಯರವರ ಸಿಂಹಾಸನಾರೋಹಣ ಮತ್ತು ಪಟ್ಟಾಭಿಷೇಕ.—ಈವೃತ್ತಾಂತವೆಂ ಕೇಳಿದ ರಾಜ ಒಡೆಯರವರು ಅತ್ಯಂತಮೂಾಗಿ ವ್ಯಸನಪಟ್ಟು ಲೋಕರೀತಿಯನ್ನನುಸರಿಸಿ ಸಮಾಧಾನವೆಂ ಮಾಡಿಕೊಂಡು ಶಾ॥ ಶಕ ೧೫೩೭ (A.D. 1610) ಕ್ಕೆ ಸಲ್ಲುವೆ ಸಾಧಾರಣ ಸಂವತ್ಸರದ ಚೈತ್ರಶುದ್ಧ ೩ಲ್ಲು ಶ್ರೀರಂಗಪಟ್ಟಣದಲ್ಲಿ ಸಿಂಹಾಸನಾರೋಹಣವೆಂ ಮಾಡಿ ಪಟ್ಟಾಭಿಷಿಕ್ತರಾಗಿ ಪಾಳಯಗಾರರುಗಳು ಮೊದಲಾದ ವಿಶಿಷ್ಟಜನಗಳಿಂದಲೂ ಕಾಣಿಕೆ ಕಪ್ಪಗಳಂ ತೆಗೆದುಕೊಂಡು ತಮ್ಮ ಹಿರಿಯ ಕುಮಾರರಾದ ನರಸರಾಜ ಒಡೆಯರವೆರಿಗೆ ಯುವರಾಜ್ಯಾಧಿಪತ್ಯವೆಂ ಕೊಟ್ಟು ಇವೆರಿಂದ ಸೀಮೆಯ ವಿಚಾರಣೆಯಂ ಮಾಡಿಸುತ್ತ ಸುಖದಿಂ ಪೃಥ್ವೀಸಾಮ್ರಾಜ್ಯವೆಂ ಗೈಯುತ್ತಿದ್ದರು.

ಅಲಮೇಲಮ್ಮನವರು ಮೂಲಂಗಿ ಮಡುವನ್ನು ಪ್ರವೇಶಿಸಿದ್ದು.—ಅಸಮಯದಲ್ಲಿ ರಂಗಸ್ವಾಮಿ ದೇವಸ್ಥಾನದ ಅಧಿಕಾರಿಯು ರಾಜ ಒಡೆಯರವರ ಸನ್ನಿಧಿಗೆ ಬಂದು ಪೂರ್ವದಿಂದಲೂ ರಂಗನಾಯಕಿ ಅಮ್ಮನವರಿಗೆ ಶುಕ್ರವಾರ ಮಂಗಳವಾರಗಳಲ್ಲಿ ಅಲಂಕಾರವೆಂ ಮಾಡುತ್ತಿದ್ದ ದೊಡ್ಡಮುತ್ತಿನ ಮೊಗುತಿ ಮುಂತಾದ ರತ್ನಪಡಿ ನಗಗಳನ್ನು ಶ್ರೀರಂಗರಾಯರ ಪತ್ನಿಯಾದ ಅಲಮೇಲಮ್ಮನವರು ಕೊಟ್ಟು ಅಲಂಕಾರವೆಂ ಮಾಡಿಸಿ ಹಿಂತೆರುಗಿ ತರಿಸಿಕೊಳ್ಳುತ್ತಿದ್ದರು; ಆ ಆಭರಣಗಳಂ ಈಗಲೂ ಅಪ್ಪಣೆ ಕೊಡಿಸಬೇಕೆಂದು ಬಿನ್ನವಿಸಿದ್ದಕ್ಕೆ, ಬೊಕ್ಕಸದ ಅಧಿಕಾರಿಯಂ ಕರೆಸಿ ವಿಚಾರಿಸುವಲ್ಲಿ ಅಲಮೇಲಮ್ಮನವರು ಸಂಗಡಲೇ ತೆಗೆದುಕೊಂಡು ಹೋಗಿದಾರೆಂದು ಶ್ರುತಪಡಿಸಿದನು. ಅನಂತರ ದೊರೆಗಳವರು ಜನಗಳ ಮುಖಾಂತರ ಮೂಲಂಗಿಯಲ್ಲಿರುವೆ ಅಲಮೇಲಮ್ಮನವರ ಬಳಿಗೆ ರಂಗನಾಯಕಿ ಅಮ್ಮನವರ ಅಲಂಕಾರದ ಬಗ್ಗೆ ಪೂರ್ವದಲ್ಲಿ ನೀವು ಕೊಡುತ್ತಿದ್ದ ಆಭರಣಗಳಂ ಈಗಲೂ ಕಳುಹಿಸಬೇಕೆಂದು ಅಪ್ಪಣೆಕೊಟ್ಟು

ಕಳುಹಿಸಿದ್ದಕ್ಕೆ ಆಕೆಯು ಕೊಡುವದಿಲ್ಲವೆಂದು ಹೇಳಿಕಳುಹಿಸಲು, ಆ ಮಾತಂ ಕೇಳಿ ರಾಜ ಒಡೆಯರವರು ರಂಗನಾಯಕಿ ಅಮ್ಮನವರಿಗೆ ಈ ಆಭರಣಗಳು ಶಾಶ್ವತವಾಗಿರಬೇಕೆಂದು ಆಲೋಚಿಸಿ ಅಪ್ಪಣೆ ಕಳುಹಿಸಿ ಕೊಟ್ಟದ್ದೇನೆಂದರೆ: "ಈಗ ಆಭರಣಗಳಿಂದ ನಿಮಗೆ ಉಪಯೋಗವಿಲ್ಲ. ರಂಗನಾಯಕಿ ಅಮ್ಮನವರಿಗೆ ಕೊಟ್ಟಲ್ಲಿ ನಿಮ್ಮ ಯಶಸ್ಸು ಬಹು ಕಾಲಪರ್ಯಂತವಾಗಿ ಇರುವುದೆಂತಲೂ, ಇದಕ್ಕೂ ಕೊಡದಿದ್ದ ಪಕ್ಷದಲ್ಲಿ ಬಲಾತ್ಕಾರದಿಂದ ತರಿಸಿಕೊಳ್ಳತಕ್ಕದ್ದು ನಮ್ಮ ಧರ್ಮವಾಗಿದೆ ಎಂತಲೂ ಖಂಡಿತವಾಗಿ ಹೇಳಿ ತೆಗೆದುಕೊಂಡು ಬನ್ನಿ," ಎಂದು ಪುನಃ ಹೇಳಿ ಕಳುಹಿಸಿದರು. ಆ ಮಾತಂ ಕೇಳಿದ ಅಲಮೇಲಮ್ಮನವರು ದೇವತಾ ವಿಷಯವಾಗಿ ಹೇಳಿ ಕಳುಹಿಸಿ ಇದಾರೆಂದು ತಿಳಿಯದೆ ಯುಕ್ತಾಯುಕ್ತ ಪರಿಜ್ಞಾನವಿಲ್ಲದೆ ಸ್ತ್ರೀಚಾಪಲ್ಯಾಸೂಯಾಬುದ್ಧಿಯಿಂದ ದೊರೆಗಳಾದ ರಾಜ ಒಡೆಯರವರ ವಿಷಯವಾಗಿ ಸಹಿಸಲಕ್ಯವಾದ ಕಠಿನೋಕ್ತಿಯಂ ಹೇಳಿ ಮೂಗುತಿಯನ್ನು ಮಾತ್ರ ಕೊಟ್ಟು ಉಳಿದ ಒಡವೆಗಳನ್ನೆಲ್ಲಾ ಮೂಡಿಲಿನಲ್ಲಿ ಕಟ್ಟಿಕೊಂಡು ಮೂಲಂಗಿಯಲ್ಲಿರುವ ಕಾವೇರೀನದಿಯ ಮಡುವಿನಲ್ಲಿ ಪ್ರವೇಶಮಾಡಿದರು.

ಈ ವಿಷಯಕವಾಗಿ ದೇವತಾಪೂಜೆ.—ಈ ಸಮಾಚಾರವಂ ಕೇಳಿದ ರಾಜ ಒಡೆಯರವರು ನಾವು ದೇವತಾ ವಿಷಯವಾಗಿ ಹೇಳಿ ಕಳುಹಿಸಿದ್ದಕ್ಕೆ ಇವರು ಏನು ಅಕಾರ್ಯವಂ ಮಾಡಿದರೆಂದು ಚಿಂತಿಸುತ್ತಿರಲಾಗಿ ಆ ದಿನರಾತ್ರಿ ಅಲಮೇಲಮ್ಮನವರು ರಾಜ ಒಡೆಯರವರ ಸ್ವಪ್ನದಲ್ಲಿ ಪ್ರತಿಬಿಂಧರೂಪವಾಗಿ ಕಾಣಿಸಿಕೊಳ್ಳಲು ಆಹ್ಞಣವೇ ದೊರೆಗಳವರು ಎನ್ನ ತಮ್ಮ ಪತ್ನಿಯವರಾದ ವೀರಾಜಮ್ಮಣಿಯವರು ಮುಂತಾದವರೊಡನೆ ಹೇಳಿ ಪ್ರತಿಬಿಂಧಬಾಧೆಯಂ ತಪ್ಪಿಸಿಕೊಳ್ಳಲೋಸುಗ ಆ ಅಲಮೇಲಮ್ಮನವರ ರೂಪದಿಂದ ಒಂದು ಚಿನ್ನದ ಪ್ರತಿಮೆಯಂ ಮಾಡಿಸಿ ಪ್ರತಿನಿತ್ಯವಲ್ಲಿಯೂ ಪೂಜೆನಡೆವಂತೆ ಕಟ್ಟಳೆಯಂ ಮಾಡಿಸಿದ್ದಲ್ಲದೆ ಮಹಾನವಮಿದಿವಸ ಅರಮನೆಯಲ್ಲಿ ಆ ಸ್ತ್ರೀ ಪ್ರತಿಮೆಗೆ ಆಭರಣಗಳಂ ಧರಿಸಿ ಅತಿನಿಯಮದಿಂದ ಪೂಜೆಯಂ ಮಾಡಿ ಅನೇಕ ಶಾಕಪಾಕಭಕ್ಷ್ಯ ಭೋಜ್ಯನೈವೇದ್ಯಗಳಂ ಮಾಡಿಸಿ ಎಲ್ಲರೂ ಕಾಣಿಕೆಯನ್ನಿತ್ತು ಭಯಭಕ್ತಿಯಿಂದ ನಡೆದುಕೊಳ್ಳು

ತ್ತೀವೆಂದು ಪ್ರಾರ್ಥನೆಯುಂ ಮಾಡಿ ಆ ದಿನ ಕಾಣಿಕೆಯುಂ ಕಟ್ಟಿ ಈ ಸಾಧಾರಣ ಸಂವತ್ಸರದ ಮಹಾನವಮಿ ಮೊದಲು ತಮ್ಮ ವಂಶಪಾರಂ ಪರ್ಯ್ಯಾಯವಾಗಿ ಇದೇ ಮೇರೆಗೆ ನಡೆಯುವಂತೆ ನಿಬಂಧನೆಯುಂ ಮಾಡಿಸಿದರು.

ರಾಜಒಡೆಯರವರ ಮುಕ್ಕಳು ನರಸರಾಜಒಡೆಯರವರು ಸ್ವರ್ಗಸ್ಥರಾದದ್ದು.— ಅನಂತರ ಇವರ ಕುಮಾರರಾನ ನರಸರಾಜ ಒಡೆಯರವರು ಧರ್ಮದಿಂದ ಯೌವರಾಜ್ಯಾಧಿಪತ್ಯವಂ ಮಾಡುತ ಕನ್ನಂಬಾಡಿಗೆ ಹೋಗಿ ಸೀಮೆಯ ವಿಚಾರಣೆಗಳಂ ಮಾಡಿ ಗೋಪಾಲಕೃಷ್ಣ ಸ್ವಾಮಿಗೆ ಗುಡಿ ಗೋಪುರಗಳಂ ಕಟ್ಟಿಸಿ ಅನೇಕ ವೆಸ್ತ್ರಾಭರಣ ಗ್ರಾಮ ಭೂಮಿಗಳಂ ಸಹ ಕೊಟ್ಟು ಕೆಲವುದಿವಸವ ಮೇಲೆ ದೇಹಕ್ಕೆ ಆಯಾಸವಾಗಿ ಶಾಲೀವಾಹನಶಕಂ ೧೭೩೨ನೇ (A. D. 1610) ಸಾಧಾರಣಸಂವತ್ಸರದ ಭಾದ್ರಪದ ಬಹುಳ ೩೦ ರಲ್ಲಿ ಸ್ವರ್ಗಸ್ಥರಾದರು. ಈ ವರ್ತಮಾನವು ಶ್ರೀರಂಗಪಟ್ಟಣಕ್ಕೆ ಬರಲು ರಾಜ ಒಡೆಯರವರು ಕೇಳಿ ಪುತ್ರಶೋಕದಿಂದ ಬಹಳ ವ್ಯಸನಪಟ್ಟು ಅವರ ಪತ್ನೀಪುತ್ರರನ್ನೂ ಉತ್ತರಕ್ರಿಯೆಗಳಂ ಮಾಡುವದಕ್ಕೆ ಜ್ಞಾತಿಯಾದ ಹೆಮ್ಮನಹಳ್ಳಿ ನಂಜರಾಜಯ್ಯನನ್ನೂ ಕನ್ನಂಬಾಡಿಗೆ ಕಳುಹಿಸಿ ಕೊಟ್ಟರು.

ನವರಾತ್ರಿಯಲ್ಲಿ ಅಶೌಚ ಬಂದಾಗ ಸಿಂಹಾಸನಾರೋಹಣದನಿರ್ಣಯ.— ಅನಂತರ ಸಮುಖದ ವಿದ್ವಾಂಸರುಗಳು ದೊರೆಗಳವರಿಗೆ ಸಹಿಸಲಶಕ್ಯವಾದ ವ್ಯಸನವು ಸಂಭವಿಸಿ ಅಶೌಚ ಪ್ರಾಪ್ತವಾಗಿರುವದರಿಂದಲೂ ಧರ್ಮರಾಯನಾಳುತ್ತಿದ್ದ ಸಿಂಹಾಸನವೂ ಇದೇ ಸಂವತ್ಸರದಲ್ಲಿ ಬಂದಿರುವದರಿಂದಲೂ ಈ ನವರಾತ್ರಿಯಲ್ಲಿ ಸಿಂಹಾಸನಾರೋಹಣಾದಿ ಶುಭಕಾರ್ಯ್ಯಗಳು ನಡೆಯತಕ್ಕ ಬಗೆಯೆಂತು ಎಂದಾಲೋಚಿಸಿ ವಿಜ್ಞಾನೇಶ್ವರೀಯ ಮನುಸ್ಮೃತಿ ಮೊದಲಾದ ಧರ್ಮಶಾಸ್ತ್ರಗಳಂ ತರಿಸಿ ಸಿಂಹಾಸನಾಧಿಪತಿಗಳಿಗೆ ನವರಾತ್ರಿಯಲ್ಲಿ ಜಾತಾಶೌಚ, ಮೃತಾಶೌಚಗಳು ಬಂದರೆ ಆಚರಣೆ ಮಾಡಕೂಡದೆಂದಿರುವ ವಚನಗಳನ್ನು ಪರಿಶೋಧಿಸಿ ನೋಡುತ್ತಿರುವಲ್ಲಿ ದೊರೆಗಳವರು ಲೋಕರೀತಿಯನ್ನನುಸರಿಸಿ ತಮ್ಮ ವ್ಯಸನವಂ ತಾವೇ ಸಮಾಧಾನಮಾಡಿಕೊಂಡು ಪುರೋಹಿತ ರಾಮಭಟ್ಟರು ಜೋಯಿಸ ಅನಂತಯ್ಯಂಗಾರ್ರು ರಾಮಸೋಮಯಾಜಿಗಳು ಮುಂತಾದ ವಿದ್ವಾಂಸರುಗಳಂ ಕರೆಸಿ ಈಗ ನಮಗೆ ಅಶೌಚ ಪ್ರಾಪ್ತವಾಗಿರುವದರಿಂದ ನವರಾತ್ರಿ

ಯಲ್ಲಿ ಸಿಂಹಾಸನಾರೋಹಣಾದಿ ಶುಭಕಾರ್ಯಗಳು ಹೇಗೆ ನಡೆಯಬೇಕೆಂದು ಕೇಳಲು ಈ ವಿದ್ವಾಂಸರುಗಳು ಮೂರ್ಧಾಭಿಷಿಕ್ತರಾದವರಿಗೆ ಜನನಾಶೌಚ ಮೃತಾಶೌಚವು ನವರಾತ್ರಿಗೆ ಪೂರ್ವದಲ್ಲಿ ಪ್ರಾಪ್ತವಾದರೆ ಪಾಡ್ಯದ ದಿವಸ ಸ್ನಾನವೆಂ ಮಾಡಿ ಯಜ್ಞೋಪವೀತವೆಂ ಧರಿಸಿಕೊಂಡು ಸಿಂಹಾಸನಾರೋಹಣಾಂಗವಾದ ಮಂಗಳಸ್ನಾನ ಮುಂತಾದ ಶುಭಕಾರ್ಯಗಳಂ ನೆರವೇರಿಸಿ ಬದ್ಧಕಂಕಣರಾಗಿ ಕಾಳಿಕಾಪುರಾಣೋಕ್ತಪೂಜಾಪುರಸ್ಸರವಾಗಿ ಸಿಂಹಾಸನಾರೋಹಣವೆಂ ಮಾಡಿ ಗಜಾಶ್ವಾಯುಧಶಮಿಪೂಜೆ ಮುಂತಾದವುಗಳಂ ನೆರವೇರಿಸಿ, ಕಂಕಣವಿಸರ್ಜನೆಯಾದನಂತರ ಅಶೌಚ ಶೇಷವು ಇದ್ದಲ್ಲಿ ಆ ದಿವಸಗಳಂ ಕಳೆದು ಪೂರ್ವದಂತೆ ಶುದ್ಧರಾಗಬೇಕು. ಮತ್ತು ಈ ನವರಾತ್ರಿಮಧ್ಯದಲ್ಲಿ ಆಶೌಚವು ಪ್ರಾಪ್ತವಾದರೆ ತಮ್ಮ ನಿತ್ಯಕರ್ಮಾದಿಸಕಲಾಹ್ನಿಕಗಳಂ ನೆರವೇರಿಸಿಕೊಂಡು ಉತ್ಸವಾಂಗ ಶಮಿಪೂಜಾ ಕಂಕಣವಿಸರ್ಜನೆಗಳಂ ಮಾಡಿದನಂತರ ಆಶೌಚಶೇಷಾನುಷ್ಠಾನ ಮಾಡಬೇಕು, ಎಂದು ವಿಜ್ಞಾನೇಶ್ವರೀಯ ಮೊದಲಾದ ಧರ್ಮಶಾಸ್ತ್ರಗಳಲ್ಲಿ ಉಕ್ತವಾಗಿದೆ ಎಂಬುದಾಗಿ ವಿಜ್ಞಾಪನೆಯಂ ಮಾಡಲು, ದೊರೆಗಳವರು ಸಿಂಹಾಸನಾಧಿಪತಿಗಳಿಗೆ ಮೌತಾಪಿತ್ರ್ಯವಿಯೋಗವು ಪ್ರಾಪ್ತವಾವಲ್ಲಿ ಹೇಗೆ ನಡೆಯತಕ್ಕದ್ದು ಎಂದು ಅಪ್ಪಣೆಯಂ ಕೊಟ್ಟದ್ದಕ್ಕೆ ವಿದ್ವಾಂಸರುಗಳು,—'ಮೂರ್ಧಾಭಿಷಿಕ್ತರಿಗೆ ನವರಾತ್ರಿಯಲ್ಲಿ ಸಿಂಹಾಸನಾರೋಹಣವೆಂ ಮಾಡಿ ರಾಜ್ಯತಂತ್ರಗಳಂ ನಡೆಸುವದೇ ಶಾಸ್ತ್ರೋಕ್ತ ಮುಖ್ಯಕರ್ಮವಾದ್ದರಿಂದ ಅವರು ಜ್ಞಾತಿಗಳ ಕಡೆಯಿಂದ ಆ ಕ್ರಿಯೆಗಳಂ ಮಾಡಿಸಿ ತಾವು ಸಿಂಹಾಸನಾರೋಹಣ ಮೊದಲಾದ ಶುಭಕಾರ್ಯಗಳಂ ನೆರವೇರಿಸಬಹುದು' ಎಂದು ವಿನ್ನವಿಸಿದರು. ಆಗ ದೊರೆಗಳವರು ನಾಳೆ ದಿವಸ ನವರಾತ್ರಿಯ ಉತ್ಸವವೆಂ ನೆರವೇರಿಸುವೆವು ಎಂದು ಅಪ್ಪಣೆಯಂ ಕೊಟ್ಟು ಮುಂದೆ ಹೀಗೇನಾದರೂ ಬಂದಲ್ಲಿ ಈಗ ತಾವು ನಡೆಸಿರುವ ಮೇರೆಗೆ ನಡೆಯಬೇಕೆಂದು ಕಟ್ಟಳೆಯಂ ಮಾತಿಸಿದರು.

ನವರಾತ್ರಿಯಲ್ಲಿ ನಡೆಸುವ ಉತ್ಸವದ ಕ್ರಮ.—ಅನಂತರ ಆಶ್ವಯುಜ ಶುದ್ಧ ಪ್ರಥಮೆಯಲ್ಲಿ ದೊರೆಗಳವರು ಪ್ರಾತಃಕಾಲದಲ್ಲಿ ಶುದ್ಧಸ್ನಾನವೆಂ ಮಾಡಿ ಯಜ್ಞೋಪವೀತವೆಂ ಧರಿಸಿಕೊಂಡು ನವರಾತ್ರಿಯ ಉತ್ಸವಾರ್ಥವಾಗಿ

ದೇವಸ್ಥಾನಗಳಿಂದ ಬಂದ ಎಣ್ಣೆಯರಿಸಿನಗಳಿಂದ ಮಂಗಳಸ್ನಾನವೆಂ ಮಾಡಿ ದೀಕ್ಷಾವಸ್ತ್ರವನ್ನುಟ್ಟು ಅರಮನೆಯಲ್ಲಿರುವ ಶ್ರೀಚಾಮುಂಡೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಕಂಕಣವೆಂ ಧರಿಸಿಕೊಂಡು ಸರ್ವಾಲಂಕಾರ ಭೂಷಿತರಾಗಿ ಪಟ್ಟವ ಕತ್ತಿಯಂ ಪಿಡಿದು ಸೆಜ್ಜೆಯ ಮೇಲಕ್ಕೆ ಚಿತ್ತೈಸಿ ಪುಣ್ಯಾಹವೆಂ ಮಾಡಿ ನವಗ್ರಹಾದಿ ದೇವತೆಗಳಂ ಕಲಶದಲ್ಲಿ ಪೂಜಿಸಿ ಕಾಳಿಕಾಪುರಾಣೋಕ್ತಪ್ರಕಾರವಾಗಿ ಸಿಂಹಾಸನ ಪೂಜೆಯಂ ನೆರವೇರಿಸಿ ಪ್ರಾರ್ಥನೆಯಂ ಮಾಡಿ ಸುಮುಹೂರ್ತದಲ್ಲಿ ಸಿಂಹಾಸನಾರೋಹಣವೆಂ ಮಾಡಿದರು. ಆ ಸಮಯದಲ್ಲಿ ಅರಮನೆಯ ಮುಂದಿರುವ ಕೆಮ್ಮಣ್ಣು ಮೆಟ್ಟಿಯ ಸುತ್ತಲೂ ಸಾಲುಸಾಲಾಗಿ ನಿಂತಿರುವ ಆನೆ, ಕುದುರೆ, ಒಂಟೆ, ಕಾಲಾಳುಗಳಿಂದಲೂ, ತಮ್ಮ ಭುಜಪರಾಕ್ರಮದಿಂದ ಸಂಪಾದಿಸಿದ ಹನುಮದ್ಧ್ವಜ, ಗರುಡಧ್ವಜ, ಮಕರಬೆಕ್ಕಿ, ಸತ್ತಿಗೆ, ಸೂರೆಪಾನ, ಚೌರಿ, ಏಟು ಪಾವುಡೆ ಮುಂತಾದ ಬಿರುದುಗಳಿಂದಲೂ, ಗಾನ ನರ್ತನಗಳಲ್ಲಿ ಕುಶಲರಾದ ವೇಶ್ಯಾಸ್ತ್ರೀಯರುಗಳಿಂದಲೂ, ಮತ್ತು "ಶ್ರೀಮತ್ಪಶ್ಚಿಮರಂಗನಾಥ ಪಾದಾರವಿಂದ ಬಂಭರಾಯಿತಚಿತ್ತ, ಮೆತ್ತರಿಪುಷಂಡಪಂಡನೋದ್ದಂಡದೋರ್ದಂಡ, ಅರ್ಥಿಜನೇಷ್ಟಿತಾರ್ಥದಾನಶೌಂಡ, ಅಂಗನಾಜನ ಕುಸುಮಿಕೋದಂಡ, ಬಾಹುದಂಡಧೃತವಿವಿಧಾಯುಧಪ್ರಕಾಂಡ, ಬಿರುದೆಂತಂಬರಗಂಡ, ಮಿತ್ರಕುಲಕಮಲಮಾರ್ತಂಡ, ರಾಜಕಂದರ್ಪ, ರಾಜಾಧಿರಾಜ, ಮಹಾರಾಜ," ಎಂದು ಈ ಪರಿಯಾಗಿ ಪೊಗಳುತ್ತಲಿರುವ ಭಟ್ಟರುಗಳಿಂದಲೂ, ವೀಣಾವೇಣು ಮೃದಂಗ ಕಹಳಾ ಭೇರಿ ಮೊದಲಾದ ವಾದ್ಯಗಳ ಧ್ವನಿಗಳಿಂದಲೂ ಆಸ್ಥಾನವು ಕಣ್ಮೊಳಿಸುತ್ತಿರಲು, ಪುರೋಹಿತರು ಮೊದಲಾದ ಬ್ರಾಹ್ಮಣರುಗಳಿಂದ ಕಲಶೋದಕ ಮೊರ್ಜನೆಯಂ ಮಾಡಿಸಿಕೊಂಡು, ಕುಲದೇವತೆಯಾದ ಶ್ರೀಚಾಮುಂಡೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ನಡೆಯತಕ್ಕ ಜಪಪೂಜಾದಿಗಳಿಗೆ ವರಣವೆಂ ಕೊಟ್ಟು, ದೇವಸ್ಥಾನಗಳಿಂದ ಬಂದ ಪ್ರಸಾದವೆಂ ಸ್ವೀಕರಿಸಿ, ತಮ್ಮ ಗುರುಗಳು ಮುಂತಾಗಿ ವಿದ್ವಾಂಸರು ಒಪ್ಪಿಸಿದ ಫಲಮಂತ್ರಾಕ್ಷತೆಗಳಂ ತಮ್ಮ ಪುತ್ರರು ಅರಸುಗಳು ಪಾಳೆಯಗಾರರು ಅಧಿಕಾರಸ್ಥರು ಮೊದಲಾದವರು ಅವರವರ ಮಾನಾನುಗುಣವಾಗಿ ಒಪ್ಪಿಸಿದ ಕೈಗಾಣಿಕೆಗಳಂ ಸಹ ತೆಗೆದು

ಕೊಳ್ಳುತ್ತಿರುವ ಸಮಯದಲ್ಲಿ ಪಟ್ಟವಳಿಸಿಕುದುರೆಗಳು, ವೇಶ್ಯಾಸ್ತ್ರೀಯರು ಪಿಡಿದಿರುವ ಕನ್ನಾಕನ್ನಡಿಗಳಿಂದಲೂ, ವೀರಭದ್ರನ ಹಲಗೆಯುಂ ಪಿಡಿದಿರುವ ಲಿಂಗಧೀರರಿಂದಲೂ, ಸತ್ತಿಗೆ, ಸೂರೆಪಾನ, ಚಾಮರ ಮೊದ ಲಾದ ಬಿರುದುಗಳಿಂದಲೂ ಬಡಗೂಡಿ ಅರಮನೆಯಿಂದ ಹೊರಟು ಕೆಮ್ಮಣ್ಣು ಮೆಟ್ಟಿಯಲ್ಲಿ ದೊರಗಳವರಿಗೆ ನಮಸ್ಕರಿಸಿ ನದೀತೀರದಲ್ಲಿರುವ ಚಿಕ್ಕ ರಕ್ಕೆ ಬರಲು, ಎಣ್ಣೆಶಾಸ್ತ್ರವೆಂ ಮೊಡಿ ಅರಿಸಿನ ಕುಂಕುಮವೆನ್ನಿಟ್ಟು ಕೊರಳಿಗೆ ಐದು ಬಗಯ ಧಾನ್ಯವೆಂ ಕಟ್ಟಿ ಪುಷ್ಪಗಳಿಂದಲೂ ಆಭರಣ ಗಳಿಂದಲೂ ಅಲಂಕರಿಸಿ ನೊಸಲ ಪಟ್ಟಿಯುಂ ಕಟ್ಟಿರುವ ಆ ಅನೆ ಕುದುರೆ ಗಳನ್ನು ಮಹಾಕಾಳಿ ಮಹಾಲಕ್ಷ್ಮಿ ಮಹಾಸರಸ್ವತಿ ಎಂಬ ಮೂರು ದೇವತೆಗಳ ಆವಾಹನೆಯುಂ ಮೊಡಿರುವ ಕನ್ನಾಕನ್ನಡಿಗಳನ್ನು ಜಿಟ್ಟಿದ ಕೊಟೆಯ ತಿಮ್ಮಪ್ಪರಾಜೇ ಅರಸಿನ ವಂಶಸ್ಥನು ಪೂಜೆಮೊಡಿದನು. ಬಳಿಕ ಅನೆ ಕುದುರೆಗಳು ರಾಜಮರ್ಯಾದೆಯಿಂದ ನಡೆಮೆಡಿಯು ಮೇಲೆ ಕೆಮ್ಮಣ್ಣುಮೆಟ್ಟಿಗೆ ಬಂದು ದೊರಗಳವರಿಗೆ ನಮಸ್ಕರಿಸಿ ಅರಮನೆಗೆ ಪ್ರವೇಶಿಸಲು ವೇಶ್ಯಾಸ್ತ್ರೀಯರು ಆರತಿಯನ್ನೆತ್ತಿದ ಬಳಿಕ ಅವು ಗಳನ್ನು ಅವಾಸಸ್ಥಳದಲ್ಲಿ ಪೂಜೆಸಿ ಭಕ್ಷ್ಯ ಭೋಜ್ಯಾದಿಗಳುಂ ನಿವೇದನ ಮೊಡಿ ದಧ್ಯನ್ನಕವಳಗಳುಂ ಕೊಟ್ಟರು. ಇತ್ತ ದೊರಗಳವರು ಜನ ಗಳೂಪ್ಪಿಸಿದ ಕೈಗಾಣಿಕೆಗಳುಂ ಸ್ವೀಕರಿಸಿ, ಅವರವರ ತಾರತಮ್ಯವೆರಿತು ಹೂಪಿನಹಾರ ವೀಳ್ಯಯುಗಳುಂ ಕೂಡಿಸಿ, ಅವೆರುಗಳಿಂದ ಪ್ರಣಾಮವೆಂ ತೆಗೆದುಕೊಂಡು, ಅಪ್ಪಣೆಯುಂ ಕೊಟ್ಟು ಕಳುಹಿಸಿದರು. ಬಳಿಕ ಛತ್ರ ೧, ಚಾಮರ ೨, ಬೀಸಣಿಗೆ ೧, ಸುವೊಸಗರಿ ೨, ಕಾಳಂಜಿ ೧, ಕನ್ನಡಿ ೧, ಚಂಬಿನಚೀಲ ೧, ನಸ್ಯವಡಬ್ಬಿ ೧, ವೀಳಯವಪೆಟ್ಟಿಗೆ ೧, ಎಡಬಲದನೇವೆ ೨, ಹಾವುಗೆ ೧, ಪಟಪಟವುಡೆ ೨, ಇವುಗಳನ್ನು ಪ್ರತ್ಯೇಕಪ್ರತ್ಯೇಕವೊಗಿ ಪಿಡಿದುಕೊಂಡಿರುವ ಚಕೀಟಿಕಾಸ್ತ್ರೀಯರು ಗಳಿಂದ ಆಯಾ ಸಮಯಗಳಲ್ಲಿ ಸೇವೆಯುಂ ತಗಸುಕೊಳ್ಳುತ್ತ ಸಿಂಹಾಸ ನದಲ್ಲಿ ಮುಹೂರ್ತ ಮೊಡಿರುವ ದೊರಗಳವರುಂ ನೋಡಬೇಕೆಂಬ ಇಚ್ಛೆ ಯಿಂದ ಮಹಾಮಾತ್ಯಶ್ರೀಯವರು ಮೊದಲಾದ ಅಂತಃಪುರಸ್ತ್ರೀಜನ ರೆಲ್ಲರೂ ತಮ್ಮ ತಮ್ಮ ಮರ್ಯಾದಾನುಸಾರವಾಗಿ ಸಿಂಹಾಸನಕ್ಕೆ ನಮ

ಸ್ಕರಿಸಿ ಅಂತಃಪುರಕ್ಕೆ ತೆರಳಲು, ದೊರೆಗಳವರು ಸಿಂಹಾಸನದಿಂದಿಳಿದು ಲಿರೂಢಿಗಣೆಯಂ ಒಪ್ಪಿಸಿಕೊಂಡರು. ಅನಂತರ ಮೂರನೆಯ ಜಾವದಲ್ಲಿ ಮತ್ತೆ ಸಿಂಹಾಸನಾರೋಹಣಮಂ ಮಾಡಿ, ದೊರೆಗಳವರು ಪ್ರಾತಃಕಾಲದಂತೆ ಬಡ್ಡೋಲಗವಂ ಕೈಕೊಳುತ್ತಲಿರುವಲ್ಲಿ ಪುಟ್ಟಸ್ವಾಮಿಯವರು ಅಳಿಯಂದಿರು ಮೊದಲಾದ ಅರಸುಗಳೂ ಪಾಳಯಗಾರರುಗಳೂ ಸೆಜ್ಜೆಯಿಂದ ಕಳಗೆ ಇಳಿದು ಕೈಯಲ್ಲಿ ಕತ್ತಿಗಳಂ ಪಿಡಿದುಕೊಂಡು ಕೆಮ್ಮಣ್ಣು ಮೆಟ್ಟಿಯಲ್ಲಿ ನಿಂತು ತಮ್ಮ ತಮ್ಮ ಮರ್ಯಾದಾನುಸಾರವಾಗಿ ನಮಸ್ಕಾರಮಂ ಮಾಡಿದರು. ಕರಣಿಕರು ಮೊದಲಾದವರು ಕೆಮ್ಮಣ್ಣು ಮೆಟ್ಟಿಯಲ್ಲಿ ತಲೆ ಬಾಗಿ ಕರಗಳಂ ಮುಗಿದರು. ಸೇವಕಜನರೆಲ್ಲರೂ ಕಟ್ಟಿಕೆಯ ಮೇರೆಗೆ ಪ್ರಣಾಮಮಂ ಗೈದು ತಮ್ಮ ತಮ್ಮ ಊಳಿಗವಂ ಪಿಡಿದುಕೊಂಡು ನಿಬಂಧನೆಯ ಸ್ಥಳಗಳಲ್ಲಿ ನಿಂತುಕೊಂಡರು. ಅನಂತರ ಮೊದಲು ನಿಬಂಧನೆಮಾಡಿರುವ ಮೇರೆಗೆ ಜಟ್ಟಿಗಳ ಜೋಡಿಯಂ ಕಾಳಗಕ್ಕೆ ಬಿಡಿಸಿ ಸೋಲು ಗೆಲವುಗಳಂ ನಿರ್ಣಯಿಸಿ ಅವರವರ ಯೋಗ್ಯತಾನುಸಾರವಾಗಿ ಉಡುಗೊರೆಗಳಂ ಕೊಟ್ಟರು, ಮತ್ತೊಂದು ಕಡೆಯಲ್ಲಿ ಟಗರು ಕೋಣ ಮೊದಲಾದವುಗಳ ಕಾಳಗವನ್ನೂ ದೊಂಬರು ಪೈಲವಾನರು ಮುಂತಾದವರ ಆಟಗಳನ್ನೂ ನೋಡಿ, ಅವರವರ ತಾರತಮ್ಯವರಿತು ವಸ್ತ್ರಾಭರಣಗಳಂ ಕೊಟ್ಟು ಸಂತೋಷದಿಂದಿರುವ ಸಮಯದಲ್ಲಿ ಪ್ರಾತಃಕಾಲದಂತೆ ಪಟ್ಟದಾನೆ ಕುದುರೆಗಳು ನದೀತೀರಕ್ಕೆ ಹೋಗಿ ಅಲ್ಲಿ ಆಗತಕ್ಕ ಪೂಜೆ ದೀವಟಿಗೆಸಲಾಂ ಮೊದಲಾದುವನ್ನು ನೆರವೇರಿಸಿಕೊಂಡು ಬರುತ್ತಲಿರುವ ಸಮಯದಲ್ಲಿ ದೊರೆಗಳವರಿಗೆ ದೀವಟಿಗೆಸಲಾಂ ತದನಂತರ ಪುಟ್ಟಸ್ವಾಮಿಯವರು ಮೊದಲಾದವರು ನಮಸ್ಕರಿಸಿ ಸೆಜ್ಜೆಯ ಮೇಲೆ ಕುಳಿತ ಬಳಿಕ ಪಟ್ಟದಾನೆ ಕುದುರೆಗಳು ಕೆಮ್ಮಣ್ಣುಮೆಟ್ಟಿಯಲ್ಲಿ ನಿಂತು, ದೊರೆಗಳವರಿಗೆ ಪ್ರಣಾಮಮಂ ಮಾಡಿ ಅರಮನೆಗೆ ಬರಲು ಪ್ರಾತಃಕಾಲದಂತೆ ಪೂಜೆ ಮುಂತಾದುವನ್ನು ನೆರವೇರಿಸಿದರು. ದೊರೆಗಳವರು ಕೆಮ್ಮಣ್ಣು ಮೆಟ್ಟಿಯಲ್ಲಿ ಹತ್ತಿಸಿದ ಆಶ್ಚರ್ಯಕರವಾದ ಹಗಲಬತ್ತಿ ನಕ್ಷತ್ರಬಾಣ ಹೂಬಾಣ ಚಕ್ರಬಾಣ ಮುಂತಾದವುಗಳಂ ನೋಡುತ್ತ ಜನರುಗಳಿಗೆ ಹೂವಿನಹಾರ ವೀಳ್ಯಗಳನ್ನು ಕೊಡಿಸಿ, ಅವರುಗಳಿಂದ ಪ್ರಣಾಮಮಂ ತೆಗೆದುಕೊಂಡು,

ಸಿಂಹಾಸನದಿಂದ ಇಳಿವ ಸಮಯದಲ್ಲಿ ಐದು ಕುಶಾಲ್ ಫಿರಂಗಿಗಳಿಂ ಹಾರಿಸಿದ ಮೇಲೆ ಅಂತಃಪುರಕ್ಕೆ ತೆರಳಿ, ಅಲ್ಲಿ ಚೇಟಿಕಾಸ್ತ್ರೀಯರುಗಳಿಂದ ಹಸ್ತಲಾಘವೆ ಮುಂತಾದ ಸೇವೆಗಳನ್ನು ಅಂಗೀಕರಿಸುತಲಿರುವಾಗ ತಮ್ಮ ಪತ್ನಿಯರು ಮೊದಲಾದ ಅಂತಃಪುರ ಸ್ತ್ರೀಯರುಗಳು ಬಂದು ಅಡಿದಾವರೆಗಳಿಗೆ ಪ್ರಣಾಮಮಾಡುವೆದನ್ನು ಅವಲೋಕಿಸುತಲಿರುವೆ ಮೇಳಯಲ್ಲಿ ದೊರೆಗಳವರಿಗೆ ಜನರ ದೃಷ್ಟಿದೋಷವೆಂ ಪರಿಹರಿಸಲೋಸುಗ ಬಗೆಬಗೆಯ ಅನ್ನದ ನವರತ್ನದ ಆರತಿಗಳಿಂ ಬೆಳಗಿದನಂತರ ತಮ್ಮ ಮಾತೃಶ್ರೀಯವರುಗಳಿಗೆ ಪ್ರಣಾಮವೆಂ ಮಾಡಿ ಅಲಂಕಾರವೆಂ ಸಡಿಲಿಸಿ ಫಲಾಹಾರವೆಂ ಒಪ್ಪಿಸಿಕೊಂಡು ಸುಖವಾಗಿ ಪವಡಿಸಿಕೊಂಡರು. ಇದೇ ಪರಿಯಾಗಿ ಈ ದಿನ ಮೊದಲು ಮಹಾನವಮಿಯ ಸಾಯಂಕಾಲದ ವರೆಗೂ ಒಲಗವು ಬೆಳವಂತೆಯೂ, ಈ ನವರಾತ್ರಿಮಧ್ಯದಲ್ಲಿ ಮೂಲ ನಕ್ಷತ್ರದ ದಿನದೊಳು ಸರಸ್ವತೀ ಪೂಜೆಯಂ ನೆರವೇರಿಸುವೆಂತೆಯೂ ಕಟ್ಟುಮಾಡಿಸಿದರು.

ಮಹಾನವಮಿದಿವಸದಲ್ಲಿ ನಡೆಸಿದ ಕಟ್ಟಳೆ.—ಮಹಾನವಮಿದಿವಸ ಪ್ರಾತಃಕಾಲದಲ್ಲಿ ದೊರೆಗಳವರು ಸ್ನಾನ ಸಂಧ್ಯಾವಂದನೆಯಂ ನೆರವೇರಿಸಿಕೊಂಡು ಅರಮನೆಯಲ್ಲಿ ಪಟ್ಟದ ಕತ್ತಿಯಂ ಪೂಜಿಸಿ ಅಂದಳದಲ್ಲಿರಿಸಿ ಬಹು ವೈಭವದಿಂದ ಕೈಗಳಂ ಕಟ್ಟಿಕೊಂಡಿರುವೆ ಅರಸುಗಳು ಮುಂತಾದ ಸಕಲ ಜನರೊಡನೆಯೂ, ಕನ್ನಾಕನ್ನಡಿಗಳೊಡನೆಯೂ, ಅನೆಕುದುರೆಗಳನ್ನು ಪಾಡ್ಯವೊದಲಾದ ದಿನಗಳಲ್ಲಿ ಕಳುಹುತ್ತಿದ್ದಂತೆ ಕಾವೇರಿಯ ಉತ್ತರ ಪಾರ್ಶ್ವದಲ್ಲಿ ಗೌರಿಯ ಕಡುವಿನಲ್ಲಿ ಸಾಕಿರುವೆ ಚಪ್ಪರಕ್ಕೆ ಕಳುಹಿಸಿಕೊಟ್ಟರು. ಆಗ ಅಲ್ಲಿ ಪಟ್ಟವಕತ್ತಿಯಂ ಮೆಡಿಪಾಸಿಗೆಯ ಮೇಲೆ ಇರಿಸಿ ಅಪ್ಪಣೆಯಾದ ಅರಸುಗಳಲ್ಲಿ ಬಬ್ಬರು ಮೆಡಿಯನ್ನುಟ್ಟುಕೊಂಡು ಬಂದು, ಆಯುಧಕ್ಕೆ ಎಣ್ಣೆ ಶಾಸ್ತ್ರ ಮುಂತಾದ ಶುಭಕಾರ್ಯಗಳಂ ಮಾಡಿ ಕಲ್ಪೋಕ್ತವಿಧಾನದಿಂದ ಕಟ್ಟಿಕೆಯಮೇರೆಗೆ ಅನೆಕುದುರೆಗಳಂ ಕನ್ನಾಕನ್ನಡಿಗಳಂ ಸಹ ಪೂಜಿಸಿದಮೇಲೆ ಬಂದ ಜನರುಗಳು ಮುಜರೆಯಂ ಮಾಡಿದರು. ಅನಂತರ ಆ ಜನರುಗಳಿಗೆ ಮೂವಿನಹಾರ ವೀಳೆಯಗಳಂ ಕೊಟ್ಟು ಮಹಾರಾಜಮರ್ಯಾದೆಯಿಂದ ಅರಮನೆಗೆ ಬರುತ

ಲಿನುವೆ ಸನ್ನಿಧಿಯಲ್ಲಿ ಕುಲದೇವತೆಯಾದ ಅಮೃತೇಶ್ವರಿಯಂ ಆ ಪೂಜಾರಿಯು ಮನೆಯಿಂದ ಮೆತ್ತೊಂದು ಅಂದಳದಲ್ಲಿರಿಸಿ ಆಯುಧದ ಹಿಂದುಗಡೆಯಲ್ಲಿಯೇ ಬಿಜಯಮಾಡಿಸಿಕೊಂಡು ಬಂದು ಅರಮನೆಯ ಸೌಂದರ್ಯ ವಿಲಾಸದ ತೊಟ್ಟಿಯ ಹಜಾರದ ಪುಷ್ಪಮಂಟಪದಲ್ಲಿರಿಸಿ, ಮೆತ್ತೊಂದು ಅಂದಳದಲ್ಲಿರುವ ಆಯುಧಕ್ಕೂ ಅನೆಕುದುರೆಗಳಿಗೂ ವಾರಾಂಗನೆಯರು ನವರತ್ನದ ಆರತಿಗಳಂ ಬೆಳಗಿದನಂತರ ದೊರೆಗಳವರು ಅಂದಳದಲ್ಲಿದ್ದ ಪಟ್ಟವಕತ್ತಿಯಂ ಪಿಡಿದುಕೊಂಡು ಮೇಲುಕಟ್ಟು ಮುತ್ತಿನಕುಚ್ಚುಗಳಿಂದಲಂಕೃತಮಾದ ಹಜಾರದ ಬಳಗೆ ಚಿನ್ನದ ಕಾಲುಮಣೆಯಲ್ಲಿರಿಸಿ, ಪೂರ್ವ ಸಂಪ್ರದಾಯದ ಮೇರೆಗೆ ಸರಸ್ವತೀ ಪೂಜೆಯಂ ಮಾಡಿ ಈ ದಿನ ನವಮಿ ಅರ್ಧಗಳಿಗೆ ಇದ್ದರೂ ಅವೇಳೆಯಲ್ಲಿಯೇ ಆಯುಧಗಳಂ ಪೂಜಿಸಿದನಂತರ ಅಶ್ವಪೂಜೆ, ಗಜಪೂಜೆ, ಆಂದೋಳಿಕಾದಿಪೂಜೆಗಳಂ ಮಾಡಿ, ಈ ನವಮಿಯು ಹೊತ್ತಿನಲ್ಲಿಯೇ ಬೆಟ್ಟದೊಳು ತಮ್ಮ ಕುಲದೇವತೆಯಾದ ಶ್ರೀಚಾಮುಂಡೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಶತಚಂಡೀಜಪ ಮುಂತಾದ ಜಪಗಳಿಗೆ ಪೂರ್ಣಾಹುತಿಯಂ ಮಾಡಿಸಿ ಜಪವಂ ಬೆಳೆಸುವೆಂತೆ ನಿಬಂಧನೆಯಂ ಮಾಡಿ ಆರೋಗಣೆಯಂ ಒಪ್ಪಿಸಿಕೊಂಡರು. ಮೆತ್ತ ಮೂರನೆಯ ಜಾವದಲ್ಲಿ ಜಟ್ಟಿಕಾಳಗಮುಂತಾಗಿ ಓಲಗವು ಬೆಳಗಿನ ಸಮಯದಲ್ಲಿ ಅನೆಕುದುರೆಗಳು ನದಿಗೆ ಹೋಗತಕ್ಕ ಕಟ್ಟಳೆಯಿಲ್ಲ. ಈ ದಿನರಾತ್ರಿಯಲ್ಲಿ ಕಟ್ಟಳೆಯು ಮೇರೆಗೆ ಓಲಗವು ಬೆಳಗನಂತರ ಆಯುಧಕ್ಕೆ ಪೂಜೆಯಂ ನೆರವೇರಿಸಿ ಕಂಕಣವಿಸರ್ಜನೆಯಂ ಮಾಡಿ, ಶಿಬಾಸರವನ್ನೂ ವಪ್ತರವನ್ನೂ ಸಹ ಪೂಜಿಸಿ, ನೇಮದಿಂದ ಅನೇಕ ಶಾಕಪಾಕ ಭಕ್ಷ್ಯ ಭೋಜ್ಯಾದಿಗಳಿಂದ ಅಮೃತೇಶ್ವರಿಯಂ ಆರಾಧಿಸಿ ದೊರೆಗಳುಮೊದಲಾಗಿ ಅಂತಃಪುರದ ಸ್ತ್ರೀಯರೂ ಪುತ್ರಸೌತ್ರರುಗಳೂ ಕಾಣಿಕೆಯನ್ನಿತ್ತು ಪೂಜೆಯಂ ಬೆಳೆಸಿದರು.

ವಿಜಯದಶಮಿದಿವಸ ನಡೆಸಿದ ಕಟ್ಟಳೆಗಳು.—ದೊರೆಗಳವರು ಈ ದಿವಸ ಪ್ರಾತಃಕಾಲದಲ್ಲಿ ಸ್ನಾನ ಸಂಧ್ಯಾವಂದನೆಯಂ ನೆರವೇರಿಸಿಕೊಂಡು ಸರಸ್ವತಿಯ ಉತ್ತರಪೂಜೆಯಂ ಮಾಡಿ ಸರ್ವಾಲಂಕಾರಭೂಷಿತರಾಗಿ ಆಯುಧವಂ ಪೂಜಿಸಿದ್ದ ಹಜಾರಕ್ಕೆ ಚಿತ್ತೈಸಿ, ದಶಮಿ ಅರ್ಧಘಳಿಗೆ

ಇದ್ದರೂ, ಆ ಹೊತ್ತಿನಲ್ಲಿಯೇ ಆಯುಧಕ್ಕೆ ಉತ್ತರಪೂಜೆಯುಂ ಮಾಡಿದ ಮೇಲೆ ಪೂರ್ವದಂತೆ ಓಲಗ ಮುಜರೆ ನಡೆವ ಸಮಯದಲ್ಲಿ ಆಯುಧವ ಎದುರಿಗೆ ರಕ್ತಬೀಳುವಂತೆ ಜಟ್ಟಿಕಾಳಗವೆಂ ಮಾಡಿಸಿ, ಆಯುಧಕ್ಕೆ ಬಲಿರೂಪವಾಗಿ ಕಾಳಿಕಾಪುರಾಣೋಕ್ತ ಪ್ರಕಾರ ಕೂಷ್ಮಾಂಡ ಛೇದನವೆಂ ದೊರೆಗಳವರೇ ಮಾಡಿ ಅನಂತರ ಪಟ್ಟದ ಕತ್ತಿಯನ್ನು ಖಾಸಾ ಹಸ್ತದಿಂದ ಪಿಡಿದು ಅಂದಳವಲ್ಲಿರಿಸಿ, ಇನ್ನು ಕೆಲವು ಆಯುಧಗಳನ್ನೂ ಸಂಗಡ ಇರಿಸಿ ಉತ್ತರದಿಕ್ಕಿನ ಬನ್ನಿಯಮರದ ಮುಂಟಪಕ್ಕೆ ಪಟ್ಟದಾನೆ ಕುದುರೆಗಳ ಸಹಿತವಾಗಿ ಪೂರ್ವದಂತೆ ಮಹಾರಾಜಮರ್ಯಾದೆಯಿಂದೊಡ ಗೊಡಿ ಕಳುಹಿಸಿಕೊಟ್ಟರು. ಅನಂತರ ಅಮೃತದೇವತೆಅಮ್ಮನವರಂ ಪೂಜಾರಿಯು ಮನೆಗೆ ಕಳುಹಿಸಿಕೊಟ್ಟು, ಆರೋಗಣೆಯುಂ ಒಪ್ಪಿಸಿ ಕೊಂಡು, ಈ ದಿನದ ಮೂರನೆಯ ಜಾವದೊಳು ಬಿರುದುಮುಂತಾದ ಸಕಲ ಮಹಾರಾಜಮರ್ಯಾದೆಗಳಿಂದೊಡಗೂಡಿ ಸನ್ನಾಸಮೆತರಾಗಿ ಅಂಬಾ ರಿಯನ್ನೇರಿ ಪೊರಮಟ್ಟು, ಬನ್ನಿಯ ಮರದ ಸಮೀಪಕ್ಕೆ ಬಿಜಯಮಾಡಿ, ಅಲ್ಲಿ ವ್ಯಾಘ್ರ, ವರಾಹ, ಭಲ್ಲೂಕ, ಶಶ ಮುಂತಾವ ಅನೇಕಾರಣ್ಯ ಮೃಗಗಳಂ ಹಿಡಿತರಿಸಿ ವಿನೋದದಿಂದ ಜೀಟಿಯಾಡಿ, ಶಮೀವೃಕ್ಷದ ಬಳಿಯಿರುವ ಆಯುಧದ ಸಮೀಪಕ್ಕೆ ಚಿತ್ತೈಸಿ ಶಮೀವೃಕ್ಷದ ಪೂಜೆಯುಂ ಮಾಡಿಸಿ ಪ್ರಸಾದವೆಂ ಸ್ವೀಕರಿಸಿ, ಸಾಯಂಕಾಲವಾದ ಬಳಿಕ ದೀವಟಿಗೆಸಲಾಂ ಮುಂತಾದ ಮರ್ಯಾದೆಗಳನ್ನಂಗೀಕರಿಸಿ, ಇದೇಪರಿ ಯಾಗಿ ಆಯುಧಗಜಾಶ್ವಗಳಿಗೂ ದೀವಟಿಗೆಸಲಾಂಗಳನ್ನು ಮಾಡಿಸಿ, ಅವು ಗಳನ್ನು ತಮ್ಮ ಸವಾರಿಯ ಹಿಂದುಗಡೆಯಲ್ಲಿಯೇ ಬಿಜಯಮಾಡಿಸಿ ಕೊಂಡು ಬರುವಂತೆ ಅಪ್ಪಣೆಯುಂ ಕೊಟ್ಟು, ಅತಿಸಂಭ್ರಮದಿಂದ ಅರಮನೆಗೆ ಚಿತ್ತೈಸಿ, ಅರಮನೆಯಲ್ಲಿ ನಡೆಯುತಕ್ಕ ಮರ್ಯಾದೆಗಳು ನಡೆವಂತೆ ಕಟ್ಟಳೆಯುಂ ಮಾಡಿಸಿ, ದೊರೆಗಳವರು ಅರಮನೆಯ ದೊಡ್ಡಮಜಾರದಲ್ಲಿ ಅತ್ಯುನ್ನತವಾದ ಭದ್ರಾಸನದಲ್ಲಿ ಮುಹೂರ್ತನೂಡಿ, ಪಾಡ್ಯದ ದಿವಸ ಸಿಂಹಾಸನಾರೋಹಣದ ಕಾಲದಲ್ಲಿ ನಡೆವಂತೆ ನಜರು ಮುಜರೆಗಳುಂ ಒಪ್ಪಿಸಿಕೊಂಡು ಇರುವ ಸಮಯದಲ್ಲಿ, ವಂಶಾವ ಳಿಯ ಚರಣಿಕನು ಬನ್ನಿಮಹಾಕಾಳಿಯ ಅಶೀರ್ವಾದವ ಪಟ್ಟೆಯನ್ನೋದಿ

ಒಪ್ಪಿಸಲು, ಆ ಕರಣೀಕನಿಗೆ ಹೂವಿನಹಾರ ವೀಳ್ಯ ವಸ್ತ್ರಾಭರಣಗಳಂ ಕೊಡಿಸಿ, ಆ ಪಟ್ಟೆಯುಂ ಪಟ್ಟದಕತ್ತಿಯೊರೆಯೊಳಗಿಟ್ಟು ಖಾಸಪೊಹರು ಮೊಡಿಸಿ, ಶ್ರೀಚಾಮುಂಡೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಇರಿಸುವಂತೆ ನಿಬಂಧನೆಮೊಡಿ, ನಜರು ಮುಜರೆಯುಂ ಮೊಡಿದ ಜನಗಳಿಗೆ ಹೂವಿನ ಹಾರ ವೀಳ್ಯವುವಂ ಕೊಟ್ಟು ಕಳುಹಿಸುವೆಂತೆ ಅಪ್ಪಣೆಮೊಡಿ, ತಾವು ಆರೋಗಣೆಯನ್ನೊಪ್ಪಿಸಿಕೊಂಡು ಸುಖದಿಂದ ಪವಡಿಸಿದರು.

ಬಳಿಕ ನವರಾತ್ರಿಯುತ್ಸವಕ್ಕೆ ದೇಶಾಂತರದಿಂದ ಬಂದ ವೇಶ್ಯಾಸ್ತ್ರೀಯರು ಮುಂತಾದ ಜನರುಗಳಿಗೆ ಅವರವರ ತಾರತಮ್ಯವಿದ್ದಂತೆ ವಸ್ತ್ರಾಭರಣಗಳಂ ಕೊಟ್ಟು ಈ ನವರಾತ್ರಿಯಲ್ಲಿ ಕಾಳಗವಂ ಮಾಡಿದ ಜಟ್ಟಿಗಳಿಗೆ ಪರಸ್ಪರವೈರವಿರಬಾರದೆಂದು ಒಟ್ಟುಗೂಡಿಸಿ ಊಟವಂ ಮೊಡಿಸಿ ಅಂಪಕಪ್ರೋಷಣವಂ ಕೊಟ್ಟು ಕಳುಹಿಸಿದರು. ಈ ಮೇರೆಗೆ ನವರಾತ್ರಿಮಹೋತ್ಸವವು ತಮ್ಮ್ಮ ವಂಶಪಾರಂಪರ್ಯವಾಗಿ ಬೆಳವಂತೆ ನಿಬಂಧನೆಮೊಡಿ, ಈ ವಿವರಗಳನ್ನೆಲ್ಲಾ ಅರಮನೆಯ ಆಯುಕಟ್ಟಿನ ಕರಣೀಕನ ಕಡತಕ್ಕೆ ಬರೆಸಿ, ಆಯುಧ, ಸಿಂಹಾಸನ, ಪಟ್ಟದಕುದುರೆ, ಪಟ್ಟಪಾನೆ, ಇವುಗಳಿಗೆ ಪ್ರತಿನಿತ್ಯವೂ ಪೂಜೆ ನಡೆವಂತೆಯೂ, ರಂಗಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ತಾವು ಹೊಸದಾಗಿ ಕಟ್ಟಿಸಿದ ಅರಮನೆಯ ಸೆಜ್ಜೆಯ ಮೇಲೆ ಈ ಪರಿಯಾಗಿ ಓಲಗವಂ ಬೆಳಸುವೆಂತೆಯೂ, ಮತ್ತು ಪ್ರತಿಶುಕ್ರವಾರದ ರಾತ್ರಿಯಲ್ಲಿಯೂ ಓಲಗ ಬೆಳೆಯುವೆಂತೆಯೂ ಕಟ್ಟುಮೊಡಿಸಿದರು.

ಧರ್ಮಕಾರ್ಯಗಳು.—ಬೊರೆಗಳವೆರು ನೂತನವಾಗಿ ದೇವಸ್ಥಾನವಂ ಕಟ್ಟಿಸಿ ಜೀರ್ಣೋದ್ಧಾರಮೊಡಿ ದೇವೆರುಗಳಿಗೆ ವಸ್ತ್ರಾಭರಣ ಪಾತ್ರೆ ಮೊದಲಾದುವಂ ಕೊಟ್ಟದ್ದಲ್ಲದೆ ಬ್ರಾಹ್ಮಣರಿಗೆ ಅಗ್ರಹಾರ ಮುಂತಾದ್ದನ್ನೂ ಕೊಟ್ಟಿರುವರು. ಅವುಗಳ ವಿವರವೆಂತೆಂದರೆ :—

ತಮ್ಮ ಕುಲದೇವತೆಯಾದ ಶ್ರೀಚಾಮುಂಡೇಶ್ವರಿ ಅಮ್ಮನವರು, ಉತ್ತನಹಳ್ಳಿ ಜ್ವಾಲಾಮುಖಿ ಅಮ್ಮನವರು, ನಂಜನಗೂಡು ಶ್ರೀಕಂಠೇಶ್ವರಸ್ವಾಮಿ, ಮೈಸೂರ ಲಕ್ಷ್ಮೀರಮಣಸ್ವಾಮಿ, ತ್ರಿಣೇಶ್ವರ, ಶ್ರೀರಂಗಪಟ್ಟಣದ ರಂಗನಾಥಸ್ವಾಮಿ, ಮೇಲುಕೋಟೆಯ ಚಲುವೆರಾಯಸ್ವಾಮಿ,

ನಾರಾಯಣಸ್ವಾಮಿ, ಬೆಟ್ಟದ ಮೇಲಿರುವ ಯೋಗನ್ಯಸಿಂಹ, ಮತ್ತು ಎಡತೊರೆ, ರಾವೆನಾಥಪುರ, ತಿರುಮುಕೂಡಲುನರಸೀಪುರ, ಮುಂತಾದ ಸ್ಥಳಗಳಲ್ಲಿರುವ ಶಿವ, ವಿಷ್ಣು ಮೊದಲಾದ ದೇವರುಗಳಿಗೆ ದೇವಸ್ಥಾನಗಳನ್ನೂ ಉತ್ಸವದ ಮಂಟಪಗಳನ್ನೂ ವಿಸ್ತಾರವಾಗಿ ಕಟ್ಟಿಸಿ, ಆಯಾ ದೇವಸ್ಥಾನದ ತಾರತಮ್ಯಾನುಸಾರವಾಗಿ ನಿತ್ಯಕಟ್ಟಳೆ ಪಡಿತರ ದೀಪಾರಾಧನೆಗಳಿಗೂ, ಬ್ರಹ್ಮೋತ್ಸವ ಮುಂತಾದ ಅನೇಕವಾದ ಉತ್ಸವಗಳಿಗೂ, ಗ್ರಾಮಭೂಮಿಗಳಂ ಕೊಟ್ಟದ್ದಲ್ಲದೆ ತಸದೀಕನ್ನುಂಟುಮಾಡಿ, ಅನೇಕ ವಸ್ತ್ರಾಭರಣಪಾತ್ರೆಗಳಂ ಕೊಟ್ಟರು. ಮತ್ತು ಶ್ರೀಚಾಮುಂಡೇಶ್ವರಿ ಅಮ್ಮನವರಿಗೆ ನವರಾತ್ರಿಯಲ್ಲಿ ಕಾಳರಾತ್ರಿಯುತ್ಸವ ಕಾಲದಲ್ಲಿ ಬಟ್ಟಲಿನಂತಿರುವ ನವರತ್ನಖಚಿತವಾದ ಒಂದು ಕೊರವಂಜಿಗೂಡೆಯನ್ನೂ ಇದೇ ಸರಿಯಾದ ಮುಡಿ ಗಗ್ಗರವನ್ನೂ ಒಪ್ಪಿಸಿ, ಈ ದೇವಸ್ಥಾನದ ಮಹಾದ್ವಾರಕ್ಕೆ ರಾಯಗೋಪುರವಂ ಕಟ್ಟಿಸಬೇಕೆಂದು ಛಿತ್ತಿರಚನೆಯುಂ ಮಾಡಿ ನಾಲ್ಕು ದ್ವಾರಶಾಖೆಗಳನ್ನು ಮಾತ್ರ ನಿಲ್ಲಿಸಿದ್ದಲ್ಲದೆ, ನಂಜನಗೂಡು ಶ್ರೀಕಂಠೇಶ್ವರಸ್ವಾಮಿಯವರಿಗೆ ವಿಭೂತಿರೇಖೆಯಿಂದ ಯುಕ್ತವಾಗಿ ನವರತ್ನಖಚಿತಮಾದ ಕೂಳಗವನ್ನೊಪ್ಪಿಸಿದರು. ಮತ್ತು ಮೇಲುಕೋಟೆ ಚಲುವರಾಯಸ್ವಾಮಿಯವರಿಗೆ ಅಮೂಲ್ಯ ರತ್ನಗಳಿಂದ ನೂತನವಾಗಿ ಮಾಡಿಸಿದ ವಯಿರಮುಡಿಯಂತಿರುವ ರಾಜಮುಡಿ ಎಂಬ ಕಿರೀಟವನ್ನು ಸಮರ್ಪಿಸಿ, ಬ್ರಹ್ಮೋತ್ಸವ ಕಾಲದಲ್ಲಿ ವಯಿರಮುಡಿಯಂ ಧರಿಸಿ ತೆಗೆದ ನಂತರ ತಾವು ಸಮರ್ಪಿಸಿದ ಈ ರಾಜಮುಡಿಯಂ ಧರಿಸಿ ಬ್ರಹ್ಮೋತ್ಸವ ಬಳಿದನಂತರ ಶ್ರೀರಂಗಪಟ್ಟಣದ ಬೊಕ್ಕಸಕ್ಕೆ ತೆಗೆದುಕೊಂಡು ಬರುವೆಂತೆಯೂ, ವಯಿರಮುಡಿಯನ್ನು ಮಾತ್ರ ಉತ್ಸವವಾದೊಡನೆ ಅದೇ ದಿವಸ ರಾತ್ರಿಯೇ ಮೊಹರು ಮಾಡಿಸಿ ಶ್ರೀರಂಗಪಟ್ಟಣದ ಬೊಕ್ಕಸಕ್ಕೆ ತರುವೆಂತೆಯೂ, ಅಷ್ಟತೀರ್ಥ ಮುಂತಾದ ವಿಶೇಷೋತ್ಸವಗಳಲ್ಲಿ ರಾಜಮುಡಿ ಮಾತ್ರ ಜೋಗಿ ಬರುವೆಂತೆಯೂ, ನಿಬಂಧನೆಮಾಡಿ ನಾರಾಯಣಸ್ವಾಮಿಯವರಿಗೆ ಅಮೂಲ್ಯರತ್ನಕವಚವಂ ಒಪ್ಪಿಸಿದರು. ಮತ್ತು ಮೇಲುಕೋಟೆಗೆ ಇರುವ ನಾಲ್ಕು ಊರುಬಾಗಿಲುಗಳಿಗೂ ನಾಲ್ಕುಜನ ಸ್ವಾಸಿಕರು ಗೊತ್ತಾಗಿ ನಾಲ್ಕು ಬಾಗಿಲಲ್ಲಿಯೂ ಜನರು ಸಂಚರಿಸುವ

ದನ್ನು ತಪ್ಪಿಸಿ, ಒಂದೊಂದು ಬಾಗಿಲಿಗೆ ತಾವುತಾವೇ ಗೊತ್ತುಗಾರರೆಂದು ಮೂರು ಬಾಗಿಲಂ ಹಾಕಿಸಿ ಸರದಿಪ್ರಕಾರ ಮೂರುಮೂರು ತಿಂಗಳು ಒಂದೊಂದು ಬಾಗಿಲಲ್ಲಿಯೇ ಜನರು ಸಂಚಾರ ಮಾಡಬೇಕೆಂದು ಇವರಿವರೇ ನಿಬಂಧನೆಮಾಡಿಕೊಂಡಿರುವ ವರ್ತಮಾನವಂ ದೊರೆಗಳವರು ತಿಳಿದು, ಈ ನಾಲ್ಕು ಬಾಗಿಲಲ್ಲಿಯೂ ಸಮಸ್ತರೂ ಸರ್ವದಾ ಸಂಚಾರ ಮಾಡುವಂತೆ ನೇಮಕ ಮಾಡಿಸಿದರಲ್ಲದೆ, ಈ ನಾಲ್ಕು ಜನ ಸ್ಥಾನಿಕರು ಚಲುವರಾಯಸ್ವಾಮಿಯವರಿಗೆ ದಿಲ್ಲಿಯ ಪಾದಷಾಹರು ಒಪ್ಪಿಸಿದ್ದ ಗ್ರಾಮ ಭೂಮಿಗಳಂ ತಾವು ಅನುಭವಿಸಿಕೊಂಡು ದೇವರ ಸೇವೆಯಂ ಚನ್ನಾಗಿ ನಡೆಸದೆ ಇರುವದನ್ನೂ ಕೇಳಿ, ಅವರ ಸ್ವಾಧೀನದಲ್ಲಿರುವ ಗ್ರಾಮ ಭೂಮಿಗಳ ವಿಚಾರಣೆಯಂ ತೆಪ್ಪಿಸಿ, ಅರಮನೆಯವರೇ ವಿಚಾರಣೆಮಾಡಿ ದೇವತಾಸೇವೆಯನ್ನು ಚನ್ನಾಗಿ ನಡೆಸುವಂತೆಯೂ, ಈ ಸ್ಥಾನಿಕರಿಗೆ ಸ್ಥಾನಿಕ ಕೆಲಸವನ್ನು ಮಾತ್ರ ನೋಡಿಕೊಳ್ಳುವಂತೆಯೂ ಅಪ್ಪಣೆ ಕೊಡಿಸಿ, ರಾಯಗೋಪುರವಂ ಕಟ್ಟಿಸಬೇಕೆಂದು ಅಧಿಷ್ಠಾನಶುದ್ಧಿ ಪೂರ್ವಕ ಕೆಲವು ಭಿತ್ತಿಗಳಂ ರಚಿಸಿ, ನಾಲ್ಕು ದ್ವಾರಶಾಖೆಯ ಕಂಬಗಳನ್ನು ಮಾತ್ರ ನಿಲ್ಲಿಸಿದರು. ಮತ್ತು ಮೇಲುಕೋಟೆ, ನಂಜನಗೂಡು, ಎಷತೊರೆ, ರಾಮನಾಥಪುರ, ತಿರುಮುಕೂಡಲು ಮೊದಲಾದ ಸ್ಥಳಗಳಲ್ಲಿ ಸಂಧ್ಯಾಮಂಟಪ, ಸೋಪಾನ, ಅಗ್ರಹಾರ, ಭಟ್ಟಮಾನ್ಯ, ಮೊದಲಾಗುದನ್ನು ಮಾಡಿಸಿದರು. ತಿರುಪತಿವೆಂಕಟರಮಣಸ್ವಾಮಿಯವರಿಗೆ ಮುತ್ತಿನ ಛತ್ರಿ ಮುಂತಾದ ಸೇವೋಪಕರಣ ಪೂಜೋಪಕರಣಾಮೂಲ್ಯ ವೆಸ್ತಾ ಭರಣಂಗಳಂ ಒಪ್ಪಿಸಿ ಪ್ರತಿನಿತ್ಯದಲ್ಲಿಯೂ ನಂದಾದೀವಿಗೆ ಸಹಸ್ರ ನಾಮೋರ್ಚನೆ ನಿವೇದನೆಗಳು ನಡೆಯುವದಕ್ಕೆ ಗ್ರಾಮ ಭೂಮಿಗಳಂ ಕೊಟ್ಟದಲ್ಲದೆ ತ್ರಿಮತಸ್ಥ ಮತಪತಿಗಳು ಮುಂತಾದ ಸರ್ವರಿಗೂ ಅವರವರ ತಾರತಮ್ಯವೆರಿತು ಜೀವನವಂ ಕಲ್ಪಿಸಿ ಗ್ರಾಮ ಭೂಮಿಗಳನ್ನೂ ದಾನಮಾಡಿದರು.

ಅರಮನೆಯಲ್ಲಿ ಸಮುಖದೊಳು ನಿತ್ಯಕಟ್ಟಳೆಯಲ್ಲಿ ನಡೆಯುವ ಊಳಿಗಗಳು.— ಸಂಚಿಯ ಊಳಿಗ, ಚಂಬಿನಜೀಲದ ಊಳಿಗ, ಕತ್ತಿಯ ಊಳಿಗ, ಕಾಳಂಜಿಯ ಊಳಿಗ, ಪಡಿಗದ ಊಳಿಗ, ಕನ್ನಡಿಯ ಊಳಿಗ, ಕುಂಚದ

ಊಳಿಗ, ಕೈಯಾಲವೆಟ್ಟದ ಊಳಿಗ, ಪಟ್ಟೆಪಾವುಡೆಯ ಊಳಿಗ, ಹಾಸಿಗೆಯ ಊಳಿಗ, ಹಾವುಗೆಯ ಊಳಿಗ, ಬಿಡಾರದ ಊಳಿಗ, ಉಭಯ ಚಾಮೆರದ ಊಳಿಗ, ಕರಗದ ಊಳಿಗ, ತೂಗುನೀರಿನ ಊಳಿಗ, ಬೀಸಣಿಗೆಯ ಊಳಿಗ, ತೆರೆಯ ಊಳಿಗ, ನೀರಿನಮನೆಯ ಊಳಿಗ, ಬಿಡಿಯ ಊಳಿಗ, ಅವೆಸರದ ಊಳಿಗ, ರಜದ ಊಳಿಗ, ಹಿತ್ತಿಲುಮನೆಯ ಊಳಿಗ, ಚಾವಡಿಯ ಕಾವಲ ಊಳಿಗ. ಈ ಮೇರೆಗೆ ಊಳಿಗಗಳಂ ನೇಮಿಸಿ ಈ ಜನರುಗಳಿಂದ ಸರಾಗವಾಗಿ ಊಳಿಗ ನಡೆಸುವದಕ್ಕೆ ಒಬ್ಬ ಗೊತ್ತುಗಾರನನ್ನೂ ಇಬ್ಬರು ಕರಣಿಕರನ್ನೂ, ಈ ಜನಗಳಿಗೆಲ್ಲ ಅವರವರ ನಿಧವೆರಿತು ಸಂಬಳವನ್ನೂ ನೇಮಕ ಮಾಡಿಸಿದರು. ಮತ್ತು ಇದೇಮೇರೆ ಜನರುಗಳನ್ನು ತಮ್ಮ ಪುತ್ರರುಗಳಿಗೂ ನೇಮಿಸಿದರು.

ದೇಶಗಳನ್ನು ಕಟ್ಟಿದ್ದು:—ರಾಜಒಡೆಯರವರು ಮೈಸೂರಲ್ಲಿ ರಾಜ್ಯಭಾರಮಾಡುವ ಕಾಲದಲ್ಲಿಯೂ, ಶ್ರೀರಂಗಪಟ್ಟಣದಲ್ಲಿ ರಾಜ್ಯಭಾರ ಮಾಡುವ ಕಾಲದಲ್ಲಿಯೂ, ಪಾಳೆಯಗಾರರುಗಳಂ ಜಯಿಸಿ ಅವರುಗಳಿಂದ ಸೀಮೆಯಂ ಸಾಧಿಸಿದ ವಿವರವೆಂತೆಂದರೆ:—

ಶಾ॥ ಶಕ ೧೫೦೫ನೇ (A.D. 1584) ತಾರಣ ಸಂವತ್ಸರದ ಚೈತ್ರಬಹುಳ ೦ಲ್ಲಿ ನರಸೀಪುರದ ನರಸಿಂಹನಾಯಕನಿಂದ ಅಕ್ಕಹೆಬ್ಬಾಳು.

ಶಾ॥ ಶಕ ೧೫೦೮ನೇ (A.D. 1586) ಪಾರ್ಥಿವ ಸಂವತ್ಸರದ ಫಾಲ್ಗುಣ ಶುದ್ಧ ೧೦ಲ್ಲಿ ತಿರುಮಲರಾಜಯ್ಯನಿಂದ ರಂಗಸಮುದ್ರವಂ ಸ್ವಾಧೀನಮಾಡಿಕೊಂಡು ಅಲ್ಲಿ ಹೊಸದಾಗಿ ಕೋಟೆಯಂ ಕಟ್ಟಿಸಿದರು.

ಶಾ॥ ಶಕ ೧೫೧೭ನೇ (A.D. 1595) ಮನ್ಮಥ ಸಂವತ್ಸರದ ಶ್ರಾವಣ ಶುದ್ಧ ೫ಲ್ಲಿ ಮೆಲ್ಲರಾಜಯ್ಯನಿಂದ ನರನಲ್ಲಿ.

ಶಾ॥ ಶಕ ೧೫೨೨ನೇ (A.D. 1600) ಶಾರ್ವರಿ ಸಂವತ್ಸರದ ಚೈತ್ರ ಶುದ್ಧ ೧ಲ್ಲಿ ಜಗದೇರಾಯನ ಕಡೆಯ ಅಧಾಟರಾಯನಿಂದ ಅರಕೆರೆ.

ತಳಕಾಡು ಸಂಜರಾಜಯ್ಯನಿಂದ—ಶಾ॥ ಶಕ ೧೫೨೮ನೇ (A.D. 1606) ಪರಾಭವೆ ಸಂವತ್ಸರದ ಶ್ರಾವಣ ಬಹುಳ ೫ಲ್ಲಿ ಸೋಸಲೆ, ಮತ್ತು ಈ ಮೋಷೆ ಶುದ್ಧ ೧೦ಲ್ಲಿ ಬನ್ನೂರು.

ಶಾ॥ ಶಕ ೧೫೩೦ನೇ (A.D. 1608) ಪ್ಲವೆಂಗ ಸಂವತ್ಸರದ ಪುಷ್ಯಬಹುಳ ೧೦ಲ್ಲಿ ಗೋಪಾಲರಾಜಯ್ಯನ ಕಡೆ ದೊಡ್ಡಹೆಬ್ಬಾರುವೆನಿಂದ ಕನ್ನಂ ಬಾಡಿ.

ಶಾ॥ ಶಕ ೧೫೩೦ನೇ (A.D. 1608) ಕೀಲಕಸಂವತ್ಸರದಲ್ಲಿ ಕೃಷ್ಣಪ್ಪ ನಾಯಕನಿಂದ ಬೇಲೂರು, ವೀರರಾಜಯ್ಯನಿಂದ ಗ್ರಾಮ.
ಇಮ್ಮಡಿ ರಾಮರಾಜನಾಯಕನಿಂದ ಯಳಂದೂರು.
ಅಲಂಬಾಡಿ ಚರಾಚಕೂರಿ ನಂಜರಾಜಯ್ಯನಿಂದ ಸತ್ಯಾಗಾಲ.

ಶಾ॥ ಶಕ ೧೫೩೧ನೇ (A.D. 1609) ಸಾಮ್ಯ ಸಂವತ್ಸರದಲ್ಲಿ ಲಕ್ಷ್ಮಪ್ಪ ನಾಯಕನಿಂದ ನರಸೀಪುರ.

ಪೆರಿಪಟ್ಟಣದ ನಂಜುಂಡ ಅರಸಿನಿಂದ—ಶಾ॥ ಶಕ ೧೫೩೩ನೇ (A.D. 1610) ನಳಧಾರಣ ಸಂವತ್ಸರದ ವೈಶಾಖ ಶುದ್ಧ ೧೫ಲ್ಲಿ ಸಿರಿಯೂರು. ಶಾ॥ ಶಕ ೧೫೪೦ನೇ (A.D. 1617) ಪೈಂಗಳ ಸಂವತ್ಸರದ ಚೈತ್ರ ಶುದ್ಧ ೧೦ಲ್ಲಿ ಮೋವತ್ತೂರು.

ಶಾ॥ ಶಕ ೧೫೩೫ನೇ (A.D. 1612) ಪರೀಧಾವಿ ಸಂವತ್ಸರದ ಆಷಾಢ ಶುದ್ಧ ೧೪ಲ್ಲಿ ಶ್ರೀಕಂಠರಾಜಯ್ಯನಿಂದ ಸರಗೂರು.

ಪದಿನಾಡು ನಂಜರಾಜಯ್ಯನಿಂದ—ಶಾ॥ ಶಕ ೧೫೩೬ನೇ (A.D. 1614) ಪ್ರಮೋದೀಚ ಸಂವತ್ಸರದ ಫಾಲ್ಗುಣ ಶುದ್ಧ ೧೦ಲ್ಲಿ ತೆರಕಣಾಂಬಿ, ಮೆತ್ತು ಈ ಫಾಲ್ಗುಣ ಬಹುಳ ೫ಲ್ಲಿ ಉಮ್ಮತ್ತೂರು.

ಶಾ॥ ಶಕ ೧೫೩೭ನೇ (A.D. 1615) ಆನಂದ ಸಂವತ್ಸರದ ಪುಷ್ಯ ಶುದ್ಧ ೫ಲ್ಲಿ ಲಿಂಗಪಾದಯ್ಯನ ಮಕ್ಕಳು ನಂಜರಾಜಯ್ಯ, ಶ್ರೀಕಂಠಯ್ಯ ಇವರಿಂದ ಹುರ. ಮತ್ತು ಫಾಲ್ಗುಣ ಶುದ್ಧ ೭ ಶುಕ್ರವಾರದಲ್ಲಿ ನಂಜರಾಜಯ್ಯನಿಂದ ಹರದನಹಳ್ಳಿ.

ಶಾ॥ ಶಕ ೧೫೩೭ನೇ (A.D. 1615) ಆನಂದ ಸಂವತ್ಸರದ ಫಾಲ್ಗುಣ ಶುದ್ಧ ೭ ಶುಕ್ರವಾರದಲ್ಲಿ ಪ್ರಭುವಳಿತ ಸೀಮೆಗಳನ್ನು ಸ್ವಾಧೀನ ಮಾಡಿಕೊಂಡು ಖಂಡಣೆಯ ಹಣವು ಬರುವಂತೆ ನಿಗದಿ ಮಾಡಿದ್ದು—

ಸೋಮೆರಾಜಯ್ಯನಿಂದ ತಳಕಾಡು, ಶ್ರೀಕಂಠಯ್ಯನಿಂದ ಹುಲ್ಲ ಹಳ್ಳಿ, ಕರಿಕಾಲ ಮೆಲ್ಲರಾಜಯ್ಯನಿಂದ ಕಳಲೆ, ಚನ್ನರಾಜಯ್ಯನಿಂದ ಹೆಗ್ಗಡದೇವನಕೋಟೆ, ಗೋಪಾಲರಾಜಯ್ಯನಿಂದ ಮಳಲವಾಡಿ, ಶಾಂತರಾಜಯ್ಯನಿಂದ ಬಿಳಿಕೆರೆ.

ಶಾ॥ ಶಕ ೧೫೩೭ನೆ (A.D. 1615) ರಾಕ್ಷಸ ಸಂವತ್ಸರದ ಚೈತ್ರ ಶುದ್ಧ ೧೫ಲ್ಲಿ ಬಸವೆರಾಜಯ್ಯನಿಂದ ಬಾಳಲೋಚನನಾಯಕನು ಕಟ್ಟಿಕೊಂಡಿದ್ದ ಮೂಗೂರು.

ಜಗದೇರಾಯನಿಂದ—ಶಾ॥ ಶಕ ೧೫೩೭ನೇ (A.D. 1615) ರಾಕ್ಷಸಸಂವತ್ಸರದ ಕಾರ್ತಿಕ ಬಹುಳ ೧೦ಲ್ಲಿ ಕಿಕ್ಕೇರಿ, ಮತ್ತು ಈ ಬಹುಳ ೧೦ಲ್ಲಿ ಹೊಸಹೊಳಲು.

ಶಾ॥ ಶಕ ೧೫೩೮ನೇ (A.D. 1616) ರಾಕ್ಷಸ ಸಂವತ್ಸರದ ಫಾಲ್ಗುಣ ಶುದ್ಧ ೫ಲ್ಲಿ ಹದಿನಾಡು ಚಂಪ್ರತೇಖರನಾಯಕನಿಂದ ರಾಮಸಮುದ್ರ.

ಮೇಲೆ ಹೇಳಿರುವ ಮೇರೆಗೆ—ಶಾ॥ ಶಕ ೧೫೩೨ನೇ (A.D. 1610) ಸಾಮ್ಯ ಸಂವತ್ಸರದ ಮಾಘ ಬಹುಳ ೧೦ಲ್ಲಿ ಶ್ರೀರಂಗರಾಯರಿಂದ ಉಚಿತವಾಗಿ ಶ್ರೀರಂಗಪಟ್ಟಣ. ವೀರರಾಜಯ್ಯನಿಂದ ಕಾರಗಳ್ಳಿ.

ಈ ಮೇರೆಗೆ ತಾವು ಸಾಧಿಸಿದ ಸೀಮೆಗಳಲ್ಲಿ ಪೂರ್ವದ ಪಾಳೆಯಗಾರರು ನಿಬಂಧನೆ ಮಾಡಿದ್ದ ಮೇರೆಗೆ ಕಂದಾಯ ಮುಂತಾದ ಹಣಗಳು ಅರಮನೆಗೆ ಸರಾಗವಾಗಿ ಬರುವೆದಕ್ಕೆ ನೂತನವಾಗಿ ತಮ್ಮ ಕಡೆಯ ಜನರುಗಳನ್ನೂ, ಗಡಿಗಳ ವಿಧವೆರಿತ ಬುದ್ಧಿವಂತರಾದ ಅಧಿಕಾರಿಗಳನ್ನೂ, ಲೆಕ್ಕವಂ ಬರೆಯುವೆವಕ್ಕೆ ಕರಣಿಕರನ್ನೂ, ಕಳ್ಳರು ಮುಂತಾದ ತುಂಟ ಜನರುಗಳಿಗೆ ಅವೆಕಾಶವಿಲ್ಲವಂತೆ ತಾಣೆದಾರ, ಪೋಬಳಿದಾರ, ಓಲೆಕಾರ, ಮುಂತಾದ ಜನರನ್ನೂ ನೇವಿಸಿ ಸೀಮೆಯಂ ಬಂದೋಬಸ್ತು ಮಾಡಿ, ಧರ್ಮದಿಂದ ರಾಜ್ಯಪರಿಪಾಲನೆಯಂ ಮಾಡುತ್ತಿದ್ದರು.

ಪಳವಾಯಿತನವನ್ನು ನೇಮಕ ಮಾಡಿದ ವಿಚಾರ—ಆ ಸಮಯದಲ್ಲಿ ದೊರೆಗಳವರು ತಮ್ಮ ಸಾಮಾಜಿಕರನ್ನು ಕುರಿತು "ನಾವು ಸೀಮೆಗಳಂ ಇನ್ನೂ ಅಧಿಕವಾಗಿ ಕಟ್ಟಬೇಕಾದರೆ ಈಗ ನಮ್ಮಲ್ಲಿರುವ ಸೇನೆ ಸಾಲದು,

ಮೆತ್ತೂ ಹೆಚ್ಚಾಗಿ ಸೇನೆಯನ್ನು ಕಟ್ಟಿದರೆ ಅದರ ವಿಚಾರಣೆಗೆ ಪ್ರಾವೀಣ್ಯನೆಕನಾದ ದಳಪತಿಯಂ ನೇಮಕ ಮಾಡಬೇಕಾಗುವುದು. ನಮ್ಮ ಪೂರ್ವಿಕರಾದ ಯದುರಾಯರ ಮೊವೆಂದಿರ ಕಾಲದಲ್ಲಿ ದಳವಾಯಿತನವಂ ಮಾಡುತ್ತಿದ್ದ ಮೊರನಾಯಕನೆಂಬವನು ದುಷ್ಟತನವನ್ನು ಮಾಡಲುದ್ಯುಕ್ತನಾದ್ದರಿಂದ ಯದುರಾಯರು ಅವನಂ ಸಂಹರಿಸಿ ತಾವು ಪಟ್ಟಾಭಿಷಿಕ್ತರಾದರು. ಅದು ಮೊದಲುಗೊಂಡು ಪೂರ್ವಿಕರು ಒಬ್ಬರೂ ದಳವಾಯಿತನವಂ ನೇಮಕ ಮಾಡಲಿಲ್ಲ. ಈಗ ನಾವು ದಳಪತಿಯಂ ನೇಮಿಸಬೇಕಾದರೆ ನಮ್ಮ ಸೋದರ ಅಳಿಯನಾದ ಕರಿಕಾಲ ಮೆಲ್ಲರಾಜಯ್ಯನೆಂಬವನು ಬುದ್ಧಿವಂತನಾಗಿಹಾನೆ" ಎಂದು ದಳವಾಯಿ ತನವಂ ಕೊಡುವ ವಿಚಾರದಲ್ಲಿ ಸಾಮೊಜಿಕರೊಡನೆ ಆಲೋಚಿಸಿ ಆ ಮೆಲ್ಲರಾಜಯ್ಯನನ್ನು ಕರೆಸಿ ಉಂಗುರವಂ ಕೊಟ್ಟು ನೇಮಕಮಾಡಿದರು. ಆತನು ಮೊದಲು ಒಪ್ಪಿಕೊಂಡು ತನಗೆ ಪ್ರಭುವಳಿತವಾಗಿ ಕೊಟ್ಟಿರುವ ಕಳಲೆಗೆ ಹೋಗಿ ಬರುತ್ತೇನೆಂದು ಹೇಳಿಹೋಗಿ ಬಹುದಿವಸ ಪರ್ಯಂತಕ್ಕೂ ಬಾರದೆ ಮೊವನ ಮನೆಯಾದ ಯಳಂದೂರಿಗೆ ಹೋಗಿ ತನ್ನ ಮೊಮ್ಮಗನಾದ ನಂದಿನಾಥಯ್ಯನೆಂಬ ಹುಡುಗನ ಕೈಯಲ್ಲಿ ದಳವಾಯಿತನದ ಉಂಗುರವಂ ಕೊಟ್ಟು ಕಳುಹಿಸಲು, ರಾಜಬಿಡೆಯರವರು "ಇವನು ಮಾಡಿಸಿಕೊಂಡ ಉಪಕಾರವಂ ಮರೆತು ತನ್ನ ಕುಲಶೀಲಪದ್ಧತಿಯನ್ನೇ ಅನುಸರಿಸಿದನು" ಎಂದು ಸಾಮೊಜಿಕರೊಡನೆ ಅಪ್ಪಣೆಯಂ ಕೊಟ್ಟ ವಿವರವೇನೆಂದರೆ,—"ಈ ಮೆಲ್ಲರಾಜಯ್ಯನ ತಂದೆ ತಿಮ್ಮರಾಜಯ್ಯನು ನಮಗೆ ಭಾವನಾದ ಕಾರಣ ನಾವು ಎಲ್ಲರಂ ಜಯಿಸಿ ಸೀಮೆಗಳಂ ಕಟ್ಟಿಕೊಂಡು ಕಳಲೆಯನ್ನು ಮಾತ್ರ ಇವನಿಗೆ ಪ್ರಭುವಳಿತವಾಗಿ ಕೊಟ್ಟು ಇದ್ದೆವು. ಆ ತಿಮ್ಮರಾಜಯ್ಯನು ತೀರಿಹೋದನಂತರ ಅವನ ಹಿರಿಯ ಹೆಂಪತಿಯ ಮಗ ಲಕ್ಷ್ಮೀಕಾಂತಯ್ಯನೆಂಬವನು ಅದೇ ಗ್ರಾಮಭೂಮಿಯಂ ಅನುಭವಿಸಿಕೊಂಡು ತನ್ನ ಭಿನ್ನೋದರರಾದ ತಮ್ಮಂದಿರುಗಳಂ ಸಂರಕ್ಷಿಸುತಲಿರಲು ಅವನ ಬಲತಾಯಿ ತಗಡೂರು ಚನ್ನಾಜಮ್ಮಯ್ಯನ ಪುತ್ರರು ನಂದಿನಾಥಯ್ಯ, ಕಾಂತಯ್ಯ, ಚಂದ್ರಶೇಖರಯ್ಯರೆಂಬ ಮೂರು ಜನರು ತಾವು ಈ ಗ್ರಾಮವಂ ಅನುಭವಿಸಬೇಕೆಂದು ಆ ಲಕ್ಷ್ಮೀಕಾಂತಯ್ಯನಂ

ಹೊಡೆದುಹಾಕಿ ನಮ್ಮ ಅಕ್ಕಯ್ಯ ದೇವಾಜಮ್ಮಣ್ಣಿಯವರ ಪುತ್ರನಾದ ಐದು ವರ್ಷದ ಈ ಮೆಲ್ಲರಾಜಯ್ಯನನ್ನೂ ಹೊಡೆಯಬೇಕೆಂದು ಪುಡು ಕುತಲಿರುವ ಸಮಯದಲ್ಲಿ ಈ ಹುಡುಗನು ಕುರುಬಗೇರಿಗೆ ಓಡಿಹೋದನು. ಆಗ ಕುರುಬರ ಹುಚ್ಚ ನಕರಿಯನೆಂಬವನು ಇವನನ್ನು ನಮ್ಮ ಸೋದರಳಿಯನೆಂದು ತಿಳಿದು ರಾತ್ರಿವೇಳೆಯಲ್ಲಿ ಕರೆತಂದು ಬಿಟ್ಟನು. ಇವನಿಗೆ ನಾವು ಬಾಲ್ಯಪ್ರಭೃತಿ ವಿದ್ಯಾಬುದ್ಧಿಯುಂ ಕಲಿಸಿ ಉಪನಯನ ವಿವಾಹಗಳಂ ಮಾಡಿ, ಕಳಲೆಯುಂ ಆಕ್ರಮಿಸಿದ್ದ ಇವನ ಭಿನ್ನೋದರರಾದ ಅಣ್ಣಂದಿರನ್ನು ಓಡಿಸಿಬಿಟ್ಟು ಅದನ್ನು ಇವನ ಸ್ವಾಧೀನ ಮಾಡಿದೆವು. ಹೊಡೆಸಿಕೊಂಡು ತೀರಿಹೋದ ಲಕ್ಷ್ಮೀಕಾಂತಯ್ಯನ ಹೆಂಡತಿ ಲಿಂಗಾಜಮ್ಮಯ್ಯನೆಂಬವಳು ತನ್ನ ಗಂಡನಂ ಅನ್ಯಾಯದಿಂದ ಹೊಡೆದು ಹಾಕಿದ ಬಲತ್ಕೈಯ ಮಕ್ಕಳು ಮೊರುಜನದ ವಂಶವೂ ನಷ್ಟವಾಗಿ ಹೋಗಲಿ ಎಂತಲೂ, ಕಳಲೆಯ ಅರಸುಗಳು ಕೂಡಲಾಪುರದ ಅಕ್ಕಯ್ಯ ಅನ್ನವನ್ನೇ ಪ್ರೀತಿಸಿ ಊಟಮಾಡುವದರಿಂದ ಆ ಅನ್ನವು ಅವರಿಗೆ ರಕ್ತದ ಕೂಳಿನಂತಾಗಲಿ ಎಂತಲೂ, ತನ್ನ ಬಾಳನ್ನು ತಪ್ಪಿಸಿದ ತನ್ನ ಗಂಡನ ವಂಶದ ಹೆಣ್ಣು ಮಕ್ಕಳು ಚನ್ನಾಗಿ ಬಾಳಕೆಲಸವಿಲ್ಲ ಎಂತಲೂ, ಈ ಮೂರು ಶಾಪಗಳಂ ಕೊಟ್ಟು, ಧರ್ಮಾತ್ಮರಾದ ಮೈಸೂರವರ ಮನೆತನದಲ್ಲಿ ಪುಟ್ಟಿದ ತನ್ನ ಬಲತ್ಕೈ ದೇವಾಜಮ್ಮಣ್ಣಿಯವರ ಒಬ್ಬ ಪುತ್ರನ ವಂಶವು ನಡೆಯಲಿ ಎಂದು ಆ ದೇವಾಜಮ್ಮಣ್ಣಿಯವರಿಗೆ ವೀಳೆಯವಂ ಕೊಟ್ಟು ಕಳುಹಿಸಿ, ತಾನು ಸಹಗಮನವಂ ಮಾಡಿ, ಕಳಲೆಯ ವಂಶಕ್ಕೆ ಪ್ರತಿಬಂಧರೂಪವಾಗಿದಾಳೆ. ಇಂಥಾ ದುಷ್ಟ ವಂಶದಲ್ಲಿ ಪುಟ್ಟಿದ ಈ ಮೆಲ್ಲರಾಜಯ್ಯನಿಗೆ ಈ ದುರ್ಬುದ್ಧಿಯು ಸ್ವಭಾವವೇ ಸರಿ" ಎಂದು ಹೇಳಿ ತಮ್ಮಲ್ಲಿ ಬಾಲ್ಯದಿಂದ ವಿದ್ಯಾಬುದ್ಧಿಯುಂ ಕಲಿತು ಶೂರರಾಗಿರುವ ತಮ್ಮ ಅಣ್ಣಂದಿರಾದ ಬೆಟ್ಟದ ಚಾಮರಾಜಒಡೆಯರವರ ಮಕ್ಕಳು ಬಟ್ಟದ ಅರಸಿನವರೆಂ ಕರೆಸಿ ಶಾ|| ಶಕ ೧೫೩೯ನೇ (A.D. 1617) ನಳಸಂವತ್ಸರದ ಮಾಘ ಶುದ್ಧ ೫ಲ್ಲಿ ದಳವಾಯಿತನವಂ ನೇಮಕಮಾಡಿದರು. ಈ ದಳವಾಯಿ ಬಟ್ಟದ ಅರಸಿನವರು ಸೇನೆಯುಂ ತೆಗೆದು ಕೊಂಡು ಹೋಗಿ ಪೆರಿಪಟ್ಟಣದ ನಂಜುಂಡ ಅರಸಿನ ಕಡೆಯ ಜನಗಳಂ ಹೊಡೆದು ಸ್ರುವೆದಲ್ಲಿ ಬರೆದಿರುವ ಮೂವ

ತ್ತೂರನ್ನು ಸಾಧಿಸಿಕೊಂಡು ಬಂದರೆಂಬ ವರ್ತಮಾನವೆಂ ರಾಜಬಿಡೆಯರವರು ಕೇಳಿ ಸಂತೋಷಪಡುತ್ತ್ತ, ತಾವು ಸಾಧಿಸಿದ ಸೀಮೆಯ ಪಾಳೆಯಗಾರರುಗಳಲ್ಲಿ ತುಂಟತನ ಮಾಡಿದವರುಗಳನ್ನು ಚನ್ನಾಗಿ ಶಿಕ್ಷಿಸಿ, ಜಾಗರೂಕರಾಗಿ ಸೀಮೆಗಳ ವರ್ತಮಾನವೆಂ ಆಗಾಗ್ಗೆ ತರಿಸಿಕೊಳ್ಳುತ್ತ್ತ ಬಹು ದ್ರವ್ಯಗಳಂ ಸಂಪಾದಿಸಿ ಅವಕ್ಕೆ ತಕ್ಕ ವೆಚ್ಚವಂ ಮಾಡುತ್ತ್ತ, ಕೆಲವು ದ್ರವ್ಯವೆಂ ಬೊಕ್ಕಸದಲ್ಲಿರಿಸಿ, ಮಹಾರಾಜನೀತಿಯಿಂದ ದುಷ್ಟ ನಿಗ್ರಹ ಶಿಷ್ಟಪರಿಪಾಲನೆಯಂ ಚನ್ನಾಗಿ ಮಾಡುತ್ತ್ತ, ರಾಜಬಿಡೆಯರ ವೆರಿಗೆ ಸರಿಸಾಟಿಯಿಲ್ಲವೆಂದು ಪೊಗಳಿಸಿಕೊಳ್ಳುತ್ತ್ತ ಧರ್ಮದಿಂದ ರಾಜ್ಯಭಾರ ಮಾಡುತ್ತಿದ್ದರು.

ರಾಜಬಿಡೆಯರವರ ನಿರ್ಯಾಣ.—ಹೀಗಿರುವಲ್ಲಿ ದೇಹಕ್ಕೆ ಬಹಳ ಆಯಾಸವಾಗಲು ತಮ್ಮ್ಮ ಪತ್ನಿಯರಾದ ವೀರರಾಜಮ್ಮಣ್ಣಿಯವರನ್ನೂ, ದಳವಾಯಿ ಬಿಟ್ಟ್ಟದ ಅರಸಿನವರನ್ನೂ ಕರೆದು, ಇನ್ನು ಮೇಲೆ ತಮ್ಮ್ಮ ದೇಹ ನಿಲ್ಲುವದಿಲ್ಲವೆಂದು ತಿಳಿದು "ತೀರಿಹೋದ ನಮ್ಮ್ಮ ಹಿರಿಯ ಕುಮಾರರಾದ ನರಸರಾಜಬಿಡೆಯರವರ ಪತ್ನಿಯರುಗಳು ಅರಿಕುಠಾರದ ಚಂದ್ರಶೇಖರ ರಾಜಯ್ಯನವರ ಕುಮಾರತಿ ಹೊನ್ನಾಜಮ್ಮಣ್ಣಿ, ತೊರವಳ್ಳಿ ಚಿಕ್ಕಕೆಂಪರಾಜಯ್ಯನ ಕುಮಾರತಿ ಚನ್ನಾಜಮ್ಮಣ್ಣಿ, ಮುಳ್ಳೂರು ರಾಜಶೇಖರಯ್ಯನ ಕುಮಾರತಿ ಮುದ್ದಾಜಮ್ಮಣ್ಣಿ, ಈ ಮೂರು ಜನದಲ್ಲಿ ಹೊನ್ನಾಜಮ್ಮಣ್ಣಿಯವರಿಗೆ ಮಾತ್ರ ಚಾಮರಾಜಬಿಡೆಯರೆಂಬ ಒಬ್ಬ ಪುತ್ರನಿದಾನೆ, ಉಳಿದ ಇಬ್ಬರಿಗೂ ಮಕ್ಕಳಿಲ್ಲ, ತೀರಿಹೋದ ಎರಡನೆಯ ಮಗ ಬೆಟ್ಟದ ಬಿಡೆಯರ ಹೆಂಡತಿ ಕೊತ್ತ್ತಾಗಾಲದ ಲಿಂಗರಾಜಯ್ಯನ ತಂಗಿ ಚಲುವಾಜಮ್ಮಣ್ಣಿಗೂ ಮಕ್ಕಳಿಲ್ಲ. ತೀರಿಹೋದ ಮೂರನೆಯ ಮಗ ನಂಜರಾಜಬಿಡೆಯರ ಹೆಂಡತಿ ಹೊಸಕೋಟೆ ವೆಂಕಟರಾಜಯ್ಯನ ಮಗಳು ನಂಜಮ್ಮಣ್ಣಿಗೂ ಮಕ್ಕಳಿಲ್ಲ, ನಮ್ಮ ನಾಲ್ಕನೆಯ ಕುಟುಂಬದ ಪುತ್ರನಾದ ಚಾಮರಾಜಬಿಡೆಯರು ಬಾಲ್ಯದಲ್ಲಿಯೇ ತೀರಿಹೋದನು. ನಮ್ಮ ಪುತ್ರಿ ಅಕ್ಕಾಯಮ್ಮಣ್ಣಿ ಇದಾಳೆ. ನಮ್ಮ ಕಿರಿಯ ಕುಟುಂಬ ಎಡವನಹಳ್ಳಿ ತಿಮ್ಮಾಜಮ್ಮಣ್ಣಿಯವರು ಗರ್ಭಿಣಿಯಾಗಿದಾರೆ. ಇವರುಗಳು ವ್ಯಾಸಪಡದಂತೆ ಚನ್ನಾಗಿ ಸಂರಕ್ಷಣೆ ಮಾಡಿಕೊಂಡು ಬರುವಮು" ಎಂದು

ಅಪ್ಪಣೆ ಕೊಟ್ಟದ್ದಲ್ಲದೆ, ತಮ್ಮ ಸಾಮಾಜಿಕರನ್ನು ಕರೆಸಿ, ದಳವಾಯಿ ಪಟ್ಟದರಸು ಮುಂತಾದವರಂ ಕುರಿತು, "ನಮ್ಮ ಹಿರಿಯ ಪುತ್ರರಾದ ನರಸರಾಜ ಒಡೆಯರವರ ಕುಮಾರರು ಚಾಮರಾಜಒಡೆಯರಿಗೆ ನಾವು ಚಲ್ಲೋಪ ನಯನವಿವಾಹಗಳಂ ಮಾಡಿ ಸ್ವಲ್ಪ ಮಟ್ಟಿಗೆ ವಿದ್ಯಾಬುದ್ಧಿಯಂ ಕಲಿಸಿದೇವೆ. ಇನ್ನೂ ಚನ್ನಾಗಿ ವಿದ್ಯಾಬುದ್ಧಿಯಂ ಕಲಿಸಿ, ಇವರಿಗೆ ಶ್ರೀ ಸುಸ್ಥಾನದಲ್ಲಿ ಪಟ್ಟಾಭಿಷೇಕ ಮಾಡಿ, ನೀವೆಲ್ಲರೂ ಇವರ ಆಜ್ಞಾನುಸಾರ ಇರುವರಾಗಿ; ಮತ್ತು ಈಗ ಗರ್ಭಿಣಿಯಾಗಿರುವ ನಮ್ಮ ಕಿರಿಯ ಕುಟುಂಬದ ಉದರದಲ್ಲಿ ಒಬ್ಬಪುತ್ರನು ಜನಿಸುವನು. ಚಾಮರಾಜಒಡೆಯರ ತರುವಾಯ ಅವನಿಗೆ ಪಟ್ಟವೆಂ ಕಟ್ಟಬಹುದು" ಎಂದು ಅಪ್ಪಣೆಯುಂ ಕೊಟ್ಟು, ಶಾ॥ ಶಕ ೧೫೩೮ನೇ (A.D. 1617) ಪ್ಲವಂಗಳ ಸಂವತ್ಸರದ ಜ್ಯೇಷ್ಠ ಬಹುಳ ೧೩ಲ್ಲಿ ಶ್ರೀಶ್ವರಾಂಶ ಸಂಭೂತರಾದ ರಾಜಒಡೆಯರವರು ನಾರಾಯಣನಿಗೂ ಪರಮೇಶ್ವರನಿಗೂ ಭೇದವಿಲ್ಲವೆಂದು ತೋರಿಸಲೋಸುಗ ಶ್ವೇತತುರಗಾರೂಢರಾಗಿ ಮೇಲುಕೋಟೆಗೆ ಬಂದು ಮೊಂಗಳಾರತಿಯ ಕಾಲದಲ್ಲಿ ನಾರಾಯಣಸ್ವಾಮಿಯಲ್ಲಿಯೇ ಐಕ್ಯವಾದಂತೆ ಸರ್ವಜನರೂ ಕಂಡು ಆಶ್ಚರ್ಯಪಡುತಿರಲು, ಅಷ್ಟರಲ್ಲಿಯೇ ಶ್ರೀರಂಗಪಟ್ಟಣದಿಂದ ರಾಜಒಡೆಯರವರು ಸ್ವರ್ಗಸ್ಥರಾದರು, ಎಂದು ಹೇಳಿಕಳುಹಿ, ದೇವಸ್ಥಾನದ ಮರ್ಯಾದೆಗಳನ್ನು ತರಿಸಿ, ರಾಜಒಡೆಯರವರಿಗೆ ಪರಲೋಕ ಕೃತ್ಯವನ್ನು ಪಾತ್ರ ಕರ್ತೃತ್ವದಿಂದ ಹೆಮ್ಮನಹಳ್ಳಿ ನಂಜರಾಜಯ್ಯನ ಕಡೆಯಿಂದ ಮಾಡಿಸಿದರು.

೫ನೆಯ ಅಧ್ಯಾಯ.

ಪತ್ತನೆಯ ಲಿಳಿಕೆ.

ರಾಜಒಡೆಯರವರ ಪೂರ್ವಿಕರು ಚಾಮರಾಜ ಒಡೆಯರವರು.

ಜನನ.—ಶಾ॥ ಶಕ ೧೫೮೮ನೇ (A.D. 1606) ಪರಾಭವ ಸಂವತ್ಸರದ ಆಷಾಢ ಬಹುಳ ಪಸ್ಥಿ.

ಪಟ್ಟಾಭಿಷೇಕ.—ಶಾ॥ ಶಕ ೧೫೩೮ನೇ (A.D. 1617) ಪ್ಲವಂಗಳ ಸಂವತ್ಸರದ ಆಷಾಢ ಶುದ್ಧ ದಶಮಿ.

ಪತ್ನಿಯರು.—ರಾಜಒಡೆಯರವರು ಇದ್ದಾಗ ಆನಂದಸಂವತ್ಸರದ ಜ್ಯೇಷ್ಠ ಶುದ್ಧ ೧೨ಯಲ್ಲಿ ವಿವಾಹವಾದವರು (೧) ಯಳಂದೂರು ಕೆಂಪರಾಜಯ್ಯನವರ ಕುಮಾರತಿ ಮುದ್ದಾಜಮ್ಮಣ್ಣಿಯವರು, (೨) ಬಿಳುಗೆಲಿ ಬಿಲ್ಲಪ್ಪರಾಜಯ್ಯನವರ ಕುಮಾರತಿ ದೇವೀರಮ್ಮಣ್ಣಿಯವರು.—ಇವರಿಗೆ ಪಟ್ಟವಾದ ಮೇಲೆ ವಿವಾಹವಾದವರು (೩) ರುಧಿರೋದ್ಗಾರಿಸಂವತ್ಸರದ ಮಾಘ ಶುದ್ಧ ೫ಯಲ್ಲಿ ಅರ್ಕ ವಿವಾಹ ಪುರಸ್ಸರ ಮೂಗೂರು ಅಳಿಯ ಸೋಮರಾಜಯ್ಯನವರ ಕುಮಾರತಿ ಸಿದ್ದಾಜಮ್ಮಣ್ಣಿಯವರು, ರಕ್ತಾಕ್ಷಿ ಸಂವತ್ಸರದ ಜ್ಯೇಷ್ಠ ಶುದ್ಧ ೧೪ ಯಲ್ಲಿ :—(೪) ಮೂಡಣಕೋಟೆ ಜಣಾಯಕ ಚಿಕ್ಕನ್ನರಾಜಯ್ಯನವರ ಕುಮಾರತಿ ದೊಡ್ಡಾಜಮ್ಮಣ್ಣಿಯವರು, ಪ್ರತಿನಾಮ ಚಿಕ್ಕನ್ನಾಜಮ್ಮಣ್ಣಿಯವರು, (೫) ಸಿಂಧುವಳ್ಳಿ ಚಿಕ್ಕನ್ನರಾಜಯ್ಯನವರ ಕುಮಾರತಿ ದೊಡ್ಡಾಜಮ್ಮಣ್ಣಿಯವರು.

ಇವರು ಈ ಪತ್ನಿಯರುಗಳ ಭೋಗಭಾಗ್ಯವೆನುಭವಿಸುತ ಶ್ರೀರಂಗಪಟ್ಟಣದಲ್ಲಿ ಸುಖದಿಂ ಪೃಥ್ವೀಸಾಮ್ರಾಜ್ಯವಂ ಗೈಯುತಲಿರುವ ಸಮಯದಲ್ಲಿ ಸೀಮೆಗಳನ್ನು ಸಾಧಿಸಿ ಕೆಲವು ನಿಬಂಧನೆಯಂ ಮಾಡಿ ಧರ್ಮಕಾರ್ಯಗಳಂ ಮಾಡಿದರು.

ಇಮ್ಮಡಿ ರಾಜಒಡೆಯರವರ ಜನನ :—ಶಾ॥ ಶಕ ೧೫೩೪ನೇ (A.D. 1617) ಪ್ಲವಂಗಳ ಸಂವತ್ಸರದ ಮಾರ್ಗಶಿರ ಬಹುಳ ೫ಲ್ಲಿ ರಾಜಒಡೆಯರವರೆ ಐದನೆಯ ಧರ್ಮಪತ್ನಿ ಎಡವನಹಳ್ಳಿ ತಿಮ್ಮಾಜಮ್ಮಣ್ಣಿಯವರ ಗರ್ಭಸುಧಾಂಬುಧಿಯಲ್ಲಿ ಪುತ್ರರು ಜನಿಸಿವನಂತರ ಈ ಚಾಮರಾಜ ಒಡೆಯರವರು ತೆರಕಣಾಂಬಿಯಲ್ಲಿರುವ ತಮ್ಮ ದೊಡ್ಡ ಹೆತ್ತಪ್ಪಾಜಿಯವರಾದ ಚಿಟ್ಟದಚಾಮರಾಜಒಡೆಯರವರ ಬಳಿಗೆ ಈ ಜನನ ಪತ್ರಿಕೆಯಂ ಬರೆಸಿ ಕಳುಹಿಂ, ಅವರನ್ನು ಸಕುಟುಂಬವಾಗಿ ಕರೆಸಿ, ತಮ್ಮ ಭಿನ್ನೈದರರಾದ ಚಿಕ್ಕಪ್ಪಾಜಿಯವರಿಗೆ ಇಮ್ಮಡಿರಾಜಒಡೆಯರೆಂಬದಾಗಿ ನಾಮಕರಣಮಾಡಿಸಿದರು.

ಪಾಳೆಯಗಾರರುಗಳಂ ಜಯಿಸಿ ಸಾಧಿಸಿದ ಸೀಮೆಗಳು:—

ಶಾ॥ ಶಕ ೧೫೪೭ನೆಯ (A.D. 1619) ಸಿದ್ಧಾರ್ಥಿಸಂವತ್ಸರದ ಕಾರ್ತಿಕ ಬಹುಳ ೧೪ಲ್ಲಿ ತಳಕಾಡು ನಂಜರಾಜಯ್ಯನು ಪೂರ್ವದಲ್ಲಿ ವಿತ
ಣ ನಿಗೆ ಮುಖಾಸಿಯಾಗಿ ಕೊಟ್ಟದ್ದ ಮೆದೂರು.

ಶಾ॥ ಶಕ ೧೫೪೮ನೆಯ (A.D. 1619) ಸಿದ್ಧಾರ್ಥಿ ಸಂ॥ ಮಾರ್ಗಶಿರ ಶುದ್ಧ ೧೫ಲ್ಲಿ ತಳಕಾಡು ಪವಾಲ್ ಸೀಮೆಯನ್ನು ಬಣ್ಣ ಹೊನ್ನಿಕ್ಕಯಿಂದ ವಿತಣ್ಣ ನು ಕಟ್ಟಿಕೊಂಡಿದ್ದು ಅವನಿಂದ ಸಾಧಿಸಿದ್ದು ಕೆರಗೋಡು.

ಶಾ॥ ಶಕ ೧೫೫೬ನೆಯ (A.D. 1623) ರುಧಿರೋದ್ಗಾರಿ ಸಂವತ್ಸರದ ವೈಶಾಖ ಬಹುಳ ೯ಲ್ಲಿ ಜಗದೇರಾಯನಿಂದ ಸಾಧಿಸಿದ್ದು ಮೆಳವೆಳ್ಳೆ. ಈ ಪುಷ್ಯ ಬಹುಳ ೭ಲ್ಲಿ ಚನ್ನರಾಜನಾಯಕನ ಮಗ ಬಾಳೋಜಿ ನಾಯಕನಿಂದ ಅರಿಕುತಾರ.

ಶಾ॥ ಶಕ ೧೫೫೮ನೆಯ (A.D. 1624) ರಕ್ತಾಕ್ಷಿ ಸಂವತ್ಸರದ ವೈಶಾಖ ಶುದ್ಧ ೫ಲ್ಲಿ ಜಗದೇರಾಯನಿಂದ ಸಾಧಿಸಿದ್ದು ಬೂಕಿನಕೆರೆ, ಸಿಂಧುಗಟ್ಟ.

ಶಾ॥ ಶಕ ೧೫೬೨ನೆಯ (A.D. 1626) ಅಕ್ಷಯ ಸಂವತ್ಸರದ ಚೈತ್ರ ಶುದ್ಧ ೧ಲ್ಲಿ ಹದಿನಾಡು ನಂಜರಾಜಯ್ಯನಿಂದ ಕಟ್ಟಿಕೊಂಡದ್ದು :—
ಹೊಂಗನೂರು, ಅಮಚವಾಡಿ.
ಈ ಆಷಾಢ ಬಹುಳ ೫ಲ್ಲಿ ನಂಜುಂಡರಸಿನಿಂದ ಹಾಡ್ಯ.
ಈ ಶ್ರಾವಣ ಶುದ್ಧ ೧೦ಲ್ಲಿ ಪ್ರಭುದೇವರಿಂದ ತಗಡೂರು.
ಈ ಶ್ರಾವಣ ಶುದ್ಧ ೧೫ಲ್ಲಿ ಲಿಂಗರಾಜಯ್ಯನಿಂದ ಕೊತ್ತಾಗಾಲ.
ಈ ಪುಷ್ಯ ಶುದ್ಧ ೧೦ಲ್ಲಿ ಕೋಟೆ ಚನ್ನರಾಜಯ್ಯನಿಂದ ಜಾಡಲೆ.

ಶಾ॥ ಶಕ ೧೫೬೫ನೆಯ (A.D. 1630) ಪ್ರಮೋದೂತ ಸಂವತ್ಸರದ ಕಾರ್ತಿಕ ಶುದ್ಧ ೧ಲ್ಲಿ ಜಗದೇರಾಯನಿಂದ ಚನ್ನಪಟ್ಟಣ.
ಈ ಕಾರ್ತಿಕ ಶುದ್ಧ ೫ಲ್ಲಿ ಜಗದೇರಾಯನಿಂದ ಕಾನಕಾನಹಳ್ಳಿ.

ಶಾ॥ ಶಕ ೧೫೬೫ನೆಯ (A.D. 1631) ಪ್ರಜೋತ್ಪತ್ತಿ ಸಂವತ್ಸರದ ಚೈತ್ರ ಶುದ್ಧ ೫ಲ್ಲಿ ಪರಮೇಶ್ವರಾಮೃತೆನಿಂದ ಸಾಧಿಸಿದ್ದು ಬೆಳ್ಳೂರು.
ಈ ಮಾರ್ಗಶಿರ ಶುದ್ಧ ೫ಲ್ಲಿ ಜಗದೇರಾಯನಿಂದ ನಾಗಮಂಗಲ.

ಶಾ॥ ಶಕ ೧೫೬೬ನೆಯ (A.D 1633) ಶ್ರೀಮುಖ ಸಂವತ್ಸರದ ಫಾಲ್ಗುಣ ಶುದ್ಧ ೬ಲ್ಲಿ ಪೂರ್ವದಲ್ಲಿ ಕೆಂಗಳತೂರು ಎಂಬ ಗ್ರಾಮವನ್ನು ಪುಟ್ಟಗಿರಿ ಹೆಬ್ಬಾರುವನಿಂದ ನರಸೀಪುರದ ಲಕ್ಷ್ಮಪ್ಪನಾಯಕನು

ಕಟ್ಟಿಕೊಂಡು ತನ್ನಮೇಗ ಚನ್ನರಾಯನಿಗೆ ಉಂಬಳಿಯಾಗಿ ಕೊಟ್ಟನು. ಆ ಚನ್ನರಾಯನು ಕೋಟೆಯನ್ನು ಕಟ್ಟಿಸಿದ್ದರಿಂದ ಈ ಊರಿಗೆ ಚನ್ನರಾಯಪಟ್ಟಣವೆಂಬ ಹೆಸರಾಯ್ತು. ಅವನು ಈ ಊರನ್ನು ಬೇಲೂರು ವೆಂಕಟಪ್ಪನಾಯಕನ ವಶಮಾಡಿ, ತನ್ನ ಒಳಸೀಮೆಯಾದ ನರಸೀಪುರಕ್ಕೆ ಬಂದ ಮೇಲೆ ಆ ವೆಂಕಟಪ್ಪನಾಯಕನಿಂದ ಸಾಧಿಸಿದ್ದು ಚನ್ನರಾಯಪಟ್ಟಣ.

ನಾಗಮಂಗಲವನ್ನು ಸಾಧಿಸಿದ್ದು.—ಜಗದೇರಾಯನು ಚಿಕ್ಕನಾಯಕನ ಹಳ್ಳಿಯನ್ನು ಸಾಧಿಸುವದಕ್ಕೆ ತನಗೆ ಸಹಾಯವಾಗಿ ಬರಬೇಕೆಂದು ಮೈಸೂರುದೊರೆಗಳಾದ ಚಾಮರಾಜಒಡೆಯರವರ ಬಳಿಗೆ ರಾಮಲಿಂಗನೆಂಬ ಬಂದು ಮೆದಾನೆಯನ್ನೂ ಮೂರು ಸಾವಿರ ವರಹವನ್ನೂ ಕೊಟ್ಟು ಕಳುಹಿಸಲು, ಅವುಗಳಂ ದಳವಾಯಿ ಬೆಟ್ಟದರಸಿನವರು ದೊರೆಗಳವರ ಸನ್ನಿಧಿಗೆ ತೆಗೆದುಕೊಂಡು ಬಂದು ಈ ವೃತ್ತಾಂತವನ್ನು ಬಿನ್ನವಿಸಲು, ದೊರೆಗಳವರು ನಾಗಮಂಗಲವನ್ನು ತಾವೇ ಸಾಧಿಸಬೇಕೆಂದು, ಆ ಆನೆಯನ್ನೂ ಮೂರು ಸಾವಿರ ವರಹವನ್ನೂ ಹಿಂತಿರುಗಿ ಕಳುಹಿಸಿ ಕೊಡುವೆಂತೆಯೂ, ಆ ಸೀಮೆಯನ್ನು ಸಾಧಿಸಿಕೊಂಡು ಬರುವೆಂತೆಯೂ, ದಳವಾಯಿಗೆ ಆಜ್ಞೆಯಂ ಕೊಟ್ಟರು. ಅನಂತರ ಇವರು ಸೇನೆಯಂ ತೆಗೆದುಕೊಂಡು ಹೋಗುವ ಮಾರ್ಗದಲ್ಲಿ ಆ ಜಗದೇರಾಯನ ಕಡೆಯ ನಾಗಮಂಗಲದ ಚನ್ನಯ್ಯನ ಅಣ್ಣ ದೊಡ್ಡಯ್ಯನೆಂಬವನು ಕೆಲವು ಸೇನೆಯಂ ತೆಗೆದುಕೊಂಡು ಬಂದು, ಹಿರಿಸಾವೆಯ ಪ್ರಾಂತದ ಹೊನ್ನೆಮಡು ವೆಂಬ ಗ್ರಾಮದ ಬಳಿಯಲ್ಲಿ ತಡೆದು ಯುದ್ಧಮಾಡಲಾಗಿ, ಆ ದೊಡ್ಡಯ್ಯನನ್ನು ಹೊಡೆದು ಹಾಕಿ ನಾಗಮಂಗಲಕ್ಕೆ ಮುತ್ತಿಗೆಹಾಕಿರುವ ಸಮಯದಲ್ಲಿ ನಾಗಮಂಗಲದ ಜಗದೇರಾಯನ ಕಡೆಯ ಅಂಕುಶರಾಯನು ಸ್ವಲ್ಪ ಸೇನೆಯೊಡನೆ ಬಂದು ಮುತ್ತಿಗೆಯನ್ನು ಹಾಕಿರುವ ದಂಡಿನ ಮೇಲೆ ಬಿದ್ದು ಯುದ್ಧವಂ ಮಾಡಿ ಮುತ್ತಿಗೆಯಂ ತೆಗೆಸಿದನು. ಅನಂತರ ದಳವಾಯಿ ಬೆಟ್ಟದರಸಿನವರು ಇನ್ನೂ ಬಹಳ ಸೇನೆಯೊಡನೆ ಬಂದು ನಾಗಮಂಗಲವನ್ನು ತೆಗೆದುಕೊಳ್ಳಬೇಕೆಂದು ಯೋಚಿಸಿ ಹಿಂತಿರುಗಿ ಶ್ರೀರಂಗಪಟ್ಟಣಕ್ಕೆ ಬರುವ ಮಾರ್ಗದಲ್ಲಿ ಪೂರ್ವದಲ್ಲಿಯೇ ರಾಜಒಡೆಯರವರ

ದೊರೆತನದಲ್ಲಿ ಕನ್ನಂಬಾಡಿಯನ್ನು ತನ್ನ ಕಡೆಯ ದೊಡ್ಡ ಜಹಗೀರುವೆಸಿಗೆ ಸ್ವಾಧೀನ ಮಾಡಿ ಹೆಂಗಸರು ಮಕ್ಕಳು ಸಹಿತವಾಗಿ ಬಂದು ನಾಗಮಂಗಲದಲ್ಲಿದ್ದ ಕನ್ನಂಬಾಡಿ ಗೋಪಾಲರಾಜಯ್ಯನು ಕೆಲವು ಸೇನೆಯನ್ನು ತೆಗೆದುಕೊಂಡು ಬಂದು ಈ ದಳವಾಯಿ ಬೆಟ್ಟದರಸಿನವರ ಸಂಗಡ ಯುದ್ಧ ಮಾಡುವ ಸಮಯದಲ್ಲಿ ದಳವಾಯಿ ಬೆಟ್ಟದರಸಿನವರು ಹೊನ್ನೆ ಮಡುವೆಂಬ ಗ್ರಾಮದ ಬಳಿ ನಿಂತು ಶ್ರೀರಂಗಪಟ್ಟಣದಿಂದ ಕೆಲವು ಸೇನೆಯಂ ಕರೆಸಿ ಅವರ ದಂಡಿಗೆ ರಸ್ತುಬಿಪದಂತೆ ಜಟಕಾವ್ಯೂ ಮಾಡಿಸಿ ಬಹಳ ಯುದ್ಧಮಾಡಿ ಆ ಅಂಕುಶರಾಯನನ್ನೂ ಗೋಪಾಲರಾಜಯ್ಯನನ್ನೂ ಹೊಡೆದು ಓಡಿಸಿ, ಆ ದಂಡಿನಲ್ಲಿದ್ದ ಭೋಜರಾಯು ಜೊಕ್ಕಳಿಕ ಎಂಬ ಎರಡು ಆನೆಗಳನ್ನಲ್ಲದೆ ಕೆಲವು ಕುದುರೆ ಒಂಟೆಗಳನ್ನೂ ವಸ್ತ್ರಾಭರಣಗಳನ್ನೂ ತೆಗೆದುಕೊಂಡು ಶ್ರೀರಂಗಪಟ್ಟಣಕ್ಕೆ ಕಳುಹಿಸಿ, ನಾಗಮಂಗಲವಂ ಸಾಧಿಸಬೇಕೆಂಬ ಸಮಯದಲ್ಲಿ ಗೂಢಚಾರ ಮುಖದಿಂದ ಕಣಿವೆಯ ಕೆಳಗಣ ಡಣಾಯಕನ ಕೋಟೆಯ ಪಾಳೆಯಗಾರನಿಗೂ ವಿಜಾಪುರದ ಪಾದಷಾಹನ ಕಡೆಯ ತುರುಕರಿಗೂ ಅವನ ಸುತ್ತುಮುತ್ತಲಿರುವ ಪಾಳೆಯಗಾರರುಗಳಿಗೂ ಅವನ ಸ್ವಜನಗಳಿಗೂ ಸುಪ ವಿರೋಧವಿದೆ ಎಂಬ ವರ್ತಮಾನವಂ ತಿಳಿದು, ದಳವಾಯಿ ಬೆಟ್ಟದರಸಿನವರು ತಮ್ಮ ಕಡೆಯ ಮಲ್ಲರಾಜಯ್ಯನಂ ಕರೆದು ಕೆಲವು ಸೇನೆಯಂ ಕೊಟ್ಟು ಡಣಾಯಕನ ಕೋಟೆಗೆ ಮುತ್ತಿಗೆಯಂ ಹಾಕಿಸಿದರು. ಆ ಪಾಳೆಯಗಾರನು ಈ ವರ್ತಮಾನವೆನ್ನೆಲ್ಲಾ ತನಗೆ ಆಪ್ತನಾಗಿ ದೂರದಲ್ಲಿರುವ ಮೆಧುರೆಯ ಪಾಳೆಯಗಾರನ ಬಳಿಗೆ ಹೇಳಿ ಕಳುಹಿಸಿದ್ದಕ್ಕೆ ಅವನು ಮೈಸೂರು ರಾಜ ಒಡೆಯರವರ ಜನಗಳು ಮಹಾಪರಾಕ್ರಮಶಾಲಿಗಳು ಅವರುಗಳನ್ನು ಜಯಿಸುವದಕ್ಕೆ ನಮ್ಮಿಂದ ಆಗುವದಿಲ್ಲ ಎಂದು ತಿಳಿದು ತನ್ನ ಕಡೆ ಚಿಕ್ಕಪ್ಪ ಸೆಟ್ಟಿ ಎಂಬವನನ್ನು ಕಳುಹಿಸಿಲು, ಆ ಚಿಕ್ಕಪ್ಪಸೆಟ್ಟಿಯು ಈ ಮಲ್ಲರಾಜಯ್ಯನ ಸಂಗಡ ಸಂಧಿಯಂ ಮಾಡಿ, ಮೈಸೂರು ದೊರೆಗಳವರಿಗೆ ವರ್ಷ ೧ಕ್ಕೆ ೧೦,೦೦೦ ವರಹಗಳನ್ನು ಪೊಗದಿ ಕೊಡುವಂತೆ ನಿಗದಿ ಮಾಡಿ ಮುತ್ತಿಗೆಯನ್ನು ತೆಗಸಿ, ಮಧುರೆಗೆ ಹೋದನಂತರ ಈ ಮಲ್ಲರಾಜಯ್ಯನು ೧೦ ಸಾವಿರವರಹ ಖಂಡಣೆಯ ಹಣವನ್ನು ತೆಗೆದುಕೊಂಡು

ಶ್ರೀರಂಗಪಟ್ಟಣಕ್ಕೆ ಬಂದ ಕೆಲವು ದಿವಸದ ಮೇಲೆ ಬೆಟ್ಟದರಸಿನವರು ನಾಗಮಂಗಲವನ್ನು ಸಾಧಿಸಿದರು.

ದಳವಾಯಿ ಬೆಟ್ಟದರಸಿಗೆ ಶಿಕ್ಷೆಯಾದದ್ದು.—ದೊರೆಗಳವರ ಸನ್ನಿಧಿಯಲ್ಲಿರುವ ಊಳಿಗದವರು ಮುಂತಾದ ಜನಗಳು ದೊರೆಗಳವರಿಗೆ ಬಾಲ್ಯವಾದ್ದರಿಂದ ಅವರು ವಿದ್ಯಾಬುದ್ಧಿಗಳಂ ಕಲಿತುಕೊಳ್ಳುವದಕ್ಕೆ ಅವಕಾಶಕೊಡದೆ ಆಟಪಾಟಗಳಲ್ಲಿಯೇ ಬುದ್ಧಿಯನ್ನು ಒಂಟುಮಾಡಿ ಸ್ವೇಚ್ಛಾಲೋಲರಾಗಿರುವಂತೆ ಮಾಡಿದರು. ದೊರೆಗಳವರಿಗೆ ಪಾತಹೇಳುತ್ತಿದ್ದ ರಾಮೆಸೋವೆಯಾಜಿಯು ಮಗ ರಂಗನಾಥದೀಕ್ಷಿತನೂ ಔಷಧವಂ ಒಪ್ಪಿಸುತಲಿದ್ದ ಬೊಮ್ಮರಸ ಪಂಡಿತನೂ ಇದಕ್ಕೆ ಸಹಾಯರಾಗಿದ್ದರು. ಇವರ ಕೆಟ್ಟನಡತೆಯನ್ನು ನೋಡಿ ಬೆಟ್ಟದರಸಿನವರು ಇವರೆನ್ನೆಲ್ಲಾ ಕರೆಸಿ, ನೀವುಗಳು ಇನ್ನುಮೇಲೆ ನಿಮ್ಮ ಕೆಲಸಗಳಂ ನೋಡಬೇಡಿ ಎಂದು ಹೇಳಿ ದೊರೆಗಳವರ ಸನ್ನಿಧಿಗೆ ಒಬ್ಬ ವೃದ್ಧನಾದ ಗುರಿಕಾರನನ್ನೂ ಇದೇಪರಿಯಾದ ಕೆಲವು ಊಳಿಗದವರನ್ನೂ ಔಷಧವನ್ನು ಒಪ್ಪಿಸುವುದಕ್ಕೆ ವೃದ್ಧನಾಗಿ ಹಳಬನಾದ ತಿರುವೆಂಗಡಯ್ಯನೆಂಬ ಚಾತಾಳದ ಪಂಡಿತನನ್ನೂ ನೇಮಕಮಾಡಿ, ಅಂತಃಪುರಕ್ಕೆ ಔಷಧವನ್ನೊಪ್ಪಿಸುತ್ತಿದ್ದ ಬೊಮ್ಮರಸಪಂಡಿತನ ದುರಾಲೋಚನೆಯಂ ತಿಳಿದು ಅತನು ಒಳಬಾಗಿಲಲ್ಲಿರುವ ಅವ್ವೇರುಗಳಿಗೆ ಮಾತ್ರ ಔಷಧಕೊಡುವದಲ್ಲದೆ ಅಂತಃಪುರಕ್ಕೆ ಹೋಗಕೊಡಿಸವಿಲ್ಲ ಎಂದು ಕಟ್ಟುಮಾಡಿದರು. ದೊರೆಗಳವರು ಬೆಟ್ಟದರಸು ನೇಮಕಮಾಡಿದ ಜನಗಳಂ ಬಿಟ್ಟು, ತಮ್ಮ ಪೂರ್ವದ ಜನಗಳನ್ನೇ ಕರೆಸಿ ಚಾಕರಿ ತೆಗೆದುಕೊಳ್ಳುತ್ತಿರಲು, ಇದನ್ನು ಕೇಳಿದ ಬೆಟ್ಟದರಸಿನವರು ತಮ್ಮ ಮನೆಯಲ್ಲಿ ಜನರುಗಳ ಸಂಗಡ—"ಇದುವರೆಗೂ ದೊರೆಗಳವರು ನನ್ನ ಮಾತುಗಳನ್ನು ನಡೆಸುತಲಿದ್ದರು. ಈಗ ವಯಸ್ಸುಬಂದು ಪ್ರಬುದ್ಧರಾಗಿರುವದರಿಂದ ಅವಕ್ಕೆ ತಕ್ಕ ಜನರುಗಳ ಮಾತುಗಳಲ್ಲಿಯೂ ನಡತೆಗಳಲ್ಲಿಯೂ ವಿಶ್ವಾಸವೇ ಹೊರತು ನಮ್ಮಂಥ ಪ್ರಾಚೀನರ ನಡತೆಯನ್ನೂ ನಾವು ವಿಜ್ಞಾಪಿಸುವ ಕಾರ್ಯಗಳನ್ನೂ ಚಿತ್ತಕ್ಕೆ ತರುವದಿಲ್ಲ" ಎಂದು ಆಡಿಕೊಳ್ಳುತಲಿದ್ದರು. ಈ ಮಾತಂ ಕೇಳಿದ ಇವರ ತಮ್ಮ ದೊಪ್ಪಚಾಮಪ್ಪ ಅವನ ಮಗ ಚಿಕ್ಕ

ಚಾಮೆಪ್ಪ ಎಂಬಿರ್ವರು ಮೂರನೆಯ ಜಾವೆದಲ್ಲಿ ಬಳಬಾಗಿಲ ಕದದ ಹಿಂದುಗಡೆಯಲ್ಲಿ ಜನರು ಅರಿಯದಂತೆ ಕುಳಿತುಕೊಂಡು, "ಮೋಟವೆನ್ನು ಮೋಡಿಸಿಯಾದರೂ ವಿಷವೆನ್ನು ಕೊಟ್ಟಾದರೂ ಈ ಚಾಮರಾಜ ಒಡೆಯರನ್ನು ಕೊಲ್ಲಿಸಿದರೆ ಇಮ್ಮಡಿ ರಾಜಒಡೆಯರವೆರಿಗೆ ಪಟ್ಟವಾಗುವ್ರದು. ಅವೆರಿಗೂ ಬಾಲ್ಯವಾದ್ದರಿಂದ ಸರ್ವಸ್ವಾತಂತ್ರ್ಯವೂ ನಮ್ಮ ತಂದೆಗಳಿಗೆ ಬರುಮೆವು. ಆಗ ನಾವೇ ಸಕಲಕಾರ್ಯವೆಂ ನೋಡಬಹುದು" ಎಂದು ಆಡುತ ಲಿರುವ ಮಾತುಗಳನ್ನು ದೊರೆಗಳವರ ಮಾತೃಶ್ರೀಯವೆರಾದ ಹೊನ್ನಾ ಜಮ್ಮಣ್ಣಿಯವೆರ ಸನ್ನಿಧಿಯಲ್ಲಿ ಚಾಕರಿಮಾಡುತ್ತಿದ್ದ ಚನ್ನವ್ವೆಯರು ಕೇಳಿ, ತಮ್ಮ ಒಡತಿಯರ ಸನ್ನಿಧಾನಕ್ಕೆ ಹೋಗಿ ಈ ವಿವೆರಗಳನ್ನು ತಿಳಿಸಿದ್ದಲ್ಲದೆ ದೊರೆಗಳವೆರಿಗೆ ಬಾಲ್ಯದಲ್ಲಿ ಸ್ತನ್ಯವೆಂ ಕೊಟ್ಟು ಈಗ ಅರೋಗಣೆಯಂ ಮೋಡಿಸುವೆ ನಂಜವ್ವೆಯರ ಸಂಗಡಲೂ ಹೇಳಲಾಗಿ, ಆ ನಂಜವ್ವೆಯರು ದೊರೆಗಳವೆರಿಗೆ ಈ ವಿವೆರವೆನ್ನು ವಿಜ್ಞಾಪಿಸಿದರು. ಆ ಬಳಿಕ ದೊರೆಗಳವೆರು ತಮ್ಮ ಸಾಮೊಜಿಕರಂ ಕರೆಸಿ, ಈ ವೃತ್ತಾಂತವನ್ನೆಲ್ಲಾ ಹೇಳಿ ನೀವುಗಳು ಚನ್ನಾಗಿ ವಿಚಾರಣೆಯಂ ಮೋಡಿಕೊಂಡು ಬನ್ನಿ ಎಂದು ಅಪ್ಪಣೆಯಂ ಕೊಟ್ಟಮೇರೆಗೆ ವಿಚಾರಿಸಿಕೊಂಡು ಬಂದ ಜನಗಳು ಇದು ಯಥಾರ್ಥವೆಂದು ಬಿನ್ನವಿಸಿದರು. ಈ ಮಾತುಗಳನ್ನು ತಮ್ಮ ದೊಡ್ಡ ಹೆತ್ತಪ್ಪಾಜಿಯವೆರಾದ ಬೆಟ್ಟದಚಾಮೆರಾಜ ಒಡೆಯರವೆರ ಬಳಿಗೆ ಹೇಳಿಕಳುಹಿಸಿ ಅವೆರ ಪತ್ರದಂತೆ ಈ ದೊಡ್ಡ ಚಾಮೆಪ್ಪ ಚಿಕ್ಕ ಚಾಮೆಪ್ಪರಿರ್ವರಿಗೂ ಪ್ರಾಣಾಂತ ಶಿಕ್ಷೆಯಂ ಮೋಡಿಸಿದರು. ಬಳಿಕ ತಮ್ಮನ್ನು ಏನು ಮೋಡುವೆರೋ ಎಂದು ಹೊರಟುಹೋಗುತಲಿರುವೆ ಬೆಟ್ಟದರಸಿನವೆರನ್ನು ಕರೆತರಿಸಿ, ಇವೆರು ಹೊರಗೆ ಹೊರಟುಹೋದರೆ ಪಾಳಯಗಾರರುಗಳಂ ಕಟ್ಟಕೊಂಡು ನಮ್ಮಮೇಲೆ ಕಾರ್ಯಭಾಗವೆಂ ಮೋಡಬಹುದು ಎಂದು ತಿಳಿದು ಇವೆರ ಕಣ್ಣಿಗೆ ಭಾಂಡಕಪ್ರೂರವೆಂ ಕಟ್ಟಿಸಿ ಕಣ್ಣುಗಳಂ ತೆಗೆಸಿ ಮನೆಯಲ್ಲಿರುವೆಂತೆ ಕಟ್ಟು ಮೋಡಿಸಿದರು. ಅನಂತರ ರೌದ್ರಿ ಸಂವತ್ಸರದ ಫಾಲ್ಗುಣ ಬಹುಳ ೧೩ಲ್ಲಿ ಬನ್ನೂರು ಲಿಂಗಣ್ಣನಿಗೆ ಈ ದಳವಾಯಿತನವೆಂ ನೇಮಕಮಾಡಿಸಿ, ಅವೆನು ಮೋಡುತ್ತಿದ್ದ ಬಳಬಾಗಿಲ ಗುರಿತನವನ್ನು ನಂಜವ್ವೆಯರ ಮಗನಾದ ಬಸವ

ಯ್ಯನಿಗೆ ನೇಮಿಸಿದರು. ಬಳಿಕ ನಂಜಮ್ಮಣ್ಣಿಯವರು ತಮ್ಮ ಒಡತಿಯರಾದ ಹೊಸ್ಕಾಜಮ್ಮಣ್ಣಿಯವರ ಸನ್ನಿಧಾನದಲ್ಲಿಯೂ ದೊರೆಗಳವರ ಸನ್ನಿಧಾನದಲ್ಲಿಯೂ ಪಂಡಿತ ಬೊಮ್ಮರಸಯ್ಯನವರಿಗೆ ನಿಯೋಗಿತನವೆಂ ಕೊಡಿಸಬೇಕೆಂದು ಬಿನ್ನವಿಸಿಕೊಂಡಂತೆ, ದೊರೆಗಳವರು ದುರ್ಮುಖಿಸಂವತ್ಸರದ ಚೈತ್ರಶುದ್ಧ ೧ಲ್ಲಿ ಆ ಬೊಮ್ಮರಸಯ್ಯನವರಿಗೆ ನಿಯೋಗಿತನವೆಂ ನೇಮಕಮಾಡಿದರು. ಅನಂತರ ತಮ್ಮ ದೊಡ್ಡ ಹೆತ್ತಪ್ಪಜಿಯವರ ಗಾಂಧರ್ವಪತ್ನಿ ಮುದ್ದಾಜಮ್ಮಯ್ಯನವರ ಪುತ್ರರಾದ ವಿಕ್ರಮರಾಯರಿಗೆ ಕೆಲವು ದಿವಸದಮೇಲೆ ದಳವಾಯಿತನವೆಂ ಕೊಡಿಸಬೇಕೆಂದು ತೆರಕಣಾಂಬಿಯಿಂದ ಅವರನ್ನು ಕರೆಸಿ ತಮ್ಮ ಬಳಿಯಲ್ಲಿಯೇ ಇರಿಸಿಕೊಂಡಿದ್ದರು.

ದಳವಾಯಿ ಬನ್ನೂರು ಲಿಂಗಣ್ಣ.—ದಳವಾಯಿ ಬನ್ನೂರು ಲಿಂಗಣ್ಣನು ಅರಿಕುತಾರವೆಂ ಜಯಿಸಿ, ತಿರುಮುಕೂಡಲು ನರಸೀಪುರದ ಮಾರ್ಗವಾಗಿ ಬರುತಲಿರುವ ಸಮಯದಲ್ಲಿ ಕಾವೇರೀಕಪಿಲಾ ನದಿಗಳೆರಡರಲ್ಲಿಯೂ ಪೂರ್ಣಪ್ರವಾಹ ಬಂದು ತಿರುಮುಕೂಡಲು ಎಂಬ ಗ್ರಾಮವು ಶಿಥಿಲವಾಗಿರುವದನ್ನು ನೋಡಿ, ಶ್ರೀರಂಗಪಟ್ಟಣಕ್ಕೆ ಬಂದು ದೊರೆಗಳವರಿಗೆ ಬಿನ್ನವಿಸಿ ಅಪ್ಪಣೆಯುಂ ತೆಗೆದುಕೊಂಡು ಮುಂದೆ ಹುಚ್ಚು ಹೊಳಬಂದರೂ ಆ ಊರಿಗೆ ಉಪಾಧಿ ಬಾರದಂತೆ ಈ ಎರಡು ನದಿಗಳಿಗೂ ಭಾರಿಯಾದ ಕಲ್ಲುಕಟ್ಟೆಗಳನ್ನೂ, ಸಂಗಮಕ್ಕೆ ಕಾಶಿಯ ಕೆಲಸದ ಸೋಪಾನವೆನ್ನೂ, ಬ್ರಹ್ಮದೇವರು ಪ್ರತಿಷ್ಠೆ ಮಾಡಿರುವ ಅಶ್ವತ್ಥವೃಕ್ಷಕ್ಕೆ ಕಲ್ಲುಕಟ್ಟೆ ಸಂಧ್ಯಾಮಂಟಪಗಳನ್ನೂ ಕಟ್ಟಿಸಿದ್ದಲ್ಲದೆ, ಗರ್ಗೇಶ್ವರಿಯ ಗರ್ಗೇಶ್ವರ, ತಿರುಮುಕೂಡಲು ಪಸುಮಂತೇಶ್ವರ, ಅಗಸ್ತ್ಯೇಶ್ವರ, ನರಸೀಪುರದಲ್ಲಿರುವ ನರಸಿಂಹಸ್ವಾಮಿ, ಮೂಲಸ್ಥಾನೇಶ್ವರ ಮುಂತಾಗಿ ಈ ದೇವರುಗಳಿಗೆ ಗುಡಿಗೋಪುರಗಳಂ ವಿಸ್ತಾರವಾಗಿ ಕಟ್ಟಿಸಿ, ಅಗಸ್ತ್ಯೇಶ್ವರ ಸ್ವಾಮಿ ದೇವಸ್ಥಾನಕ್ಕೆ ಉಭಯಮುಂಚಳವೆಂ ಹಾಕಿಸಿ ಜೀರ್ಣೋದ್ಧಾರಮಾಡಿಸಿ, ಈ ದೇವರುಗಳಿಗೆಲ್ಲಾ ನಿತ್ಯಕಟ್ಟಳೆ ಪಡಿತರ ದೀಪಾರಾಧನೆ ರಥೋತ್ಸವಾದಿಗಳು ನಡೆಯುವುದಕ್ಕೆ ತಸವೀಕುಗಳನ್ನುಂಟುಮಾಡಿ ಗ್ರಾಮ ಭೂಮಿಗಳಂ ಕೊಡಿಸಿ, ತಾನೂ ಬಂದು ಅಗ್ರಹಾರವನ್ನು ದಾನಮಾಡಬೇಕೆಂದು ಬಿನ್ನವಿಸಿ, ಆಲದೂರು, ನವಿಲೂರೆಂಬ ಎರಡು

ಗ್ರಾಮಗಳನ್ನು ಉಂಬಳಿಯಾಗಿ ತೆಗೆದುಕೊಂಡು, ನರಸೀಪುರದ ನರಸಿಂಹ ಸ್ವಾಮಿದೇವಸ್ಥಾನದ ಹಿಂಭಾಗದಲ್ಲಿ ಕೆಲವು ಮನೆಗಳನ್ನೂ ವೃತ್ತಿಗಳನ್ನೂ ತ್ರಿಮತಸ್ಥ ಬ್ರಾಹ್ಮಣರಿಗೂ ಧಾರೆಯೆರೆದುಕೊಟ್ಟು, ಶ್ರೀರಂಗಪಟ್ಟಣಕ್ಕೆ ಬಂದನು. ಅನಂತರ ಕ್ರೋಧನಸಂವತ್ಸರದಲ್ಲಿ ಚನ್ನಪಟ್ಟಣವಂ ಸಾಧಿಸ ಬೇಕೆಂದು ಮುತ್ತಿಗೆಹಾಕಿ ಬಹಳ ಯುದ್ಧಮಾಡಿ, ನಾಗಮಂಗಲದ ಚನ್ನಯ್ಯನ ಅಣ್ಣ ಚಿಕ್ಕಯ್ಯನಂ ಹೊಡೆದು ಹಾಕಲು, ಈ ದಳವಾಯಿ ಬನ್ನೂರು ಲಿಂಗಣ್ಣನನ್ನು ಆ ನಾಗಮಂಗಲದ ಚನ್ನಯ್ಯನು ಹೊಡೆದು ಹಾಕಿದನು. ಈ ವರ್ತಮಾನವನ್ನು ದೊರೆಗಳವರು ಕೇಳಿ ಚಿಂತಾಕ್ರಾಂತರಾಗಿ, ಕ್ರೋಧನಸಂವತ್ಸರದ ಪುಷ್ಯ ಬಹುಳ ೬ಲ್ಲಿ ಬಸವಲಿಂಗಣ್ಣನೆಂಬವನಿಗೆ ದಳವಾಯಿತನವಂ ನೇಮಕಮಾಡಿದರು.

ದಳವಾಯಿ ಬಸವಲಿಂಗಣ್ಣ.—ಆ ಬಳಿಕ ದಳವಾಯಿ ಬಸವಲಿಂಗಣ್ಣನು ಕ್ಷಯಸಂವತ್ಸರದ ಆಷಾಢಬಹುಳ ೬ಲ್ಲಿ ಪೆರಿಪಟ್ಟಣವಂ ಸಾಧಿಸಬೇಕೆಂದು ಹೋಗುವ ಮಾರ್ಗದಲ್ಲಿಯೇ ಕಟ್ಟೆಮಳಲವಾಡಿ ಚನ್ನರಾಜಯ್ಯ ಕನ್ನಂಬಾಡಿ ಗೋಪಾಲರಾಜಯ್ಯ ಇವರಿರ್ವರು ದುರಾಲೋಚನೆಯಂ ಮಾಡುತ್ತಾರೆಂಬ ವರ್ತಮಾನವಂ ಕೇಳಿ, ಆ ಚನ್ನರಾಜಯ್ಯನನ್ನು ಕರೆತರಿಸಿ ಕಾವಲನ್ನಿಟ್ಟು ಶ್ರೀರಂಗಪಟ್ಟಣಕ್ಕೆ ಕಳುಹಿಸಿ ಪೆರಿಪಟ್ಟಣಕ್ಕೆ ಮುತ್ತಿಗೆ ಹಾಕಿರುವ ವೇಳೆಯಲ್ಲಿ ಪೆರಿಪಟ್ಟಣದ ಬೊಮ್ಮರಸಯ್ಯನು ಯುದ್ಧಮಾಡಿ ಬಸವಲಿಂಗಣ್ಣನನ್ನು ಹಿಂದಕ್ಕೆ ಕಳುಹಿಸಬೇಕೆಂದಿದ್ದನು. ಆಗ ಬಸವಲಿಂಗಣ್ಣನು ಶ್ರೀರಂಗಪಟ್ಟಣಕ್ಕೆ ಪೇಳಿಕಳುಹಿಸಿ, ನಿಯೋಗಿ ಬೊಮ್ಮರಸಯ್ಯನನ್ನು ಕೆಲವು ಸೇನೆಯೊಡನೆ ಕರೆಸಿ ಯುದ್ಧಮಾಡುವ ಸಮಯದಲ್ಲಿ ಪೆರಿಪಟ್ಟಣದ ಬೊಮ್ಮರಸಯ್ಯನು ಇವರ ಸಂಗಡ ಯುದ್ಧಮಾಡಲಾರದೆ ತನ್ನ ನಂಟನಾದ ಈ ಬೊಮ್ಮರಸಯ್ಯನ ಸಂಗಡ ವರುಷಕ್ಕೆ ೧ ಆನೆಯನ್ನೂ ೫೦೦ ವರಹಗಳನ್ನೂ ಕೊಡುತ್ತೇನೆಂದು ನಿಗದಿಮಾಡಿಕೊಂಡನು. ಅನಂತರ ಬಸವಲಿಂಗಣ್ಣನು ಶ್ರೀರಂಗಪಟ್ಟಣಕ್ಕೆ ನಿಯೋಗಿ ಬೊಮ್ಮರಸಯ್ಯನಂ ಕಳುಹಿಸಿ ತಾನು ಹಾಸ್ಯಕ್ಕೆ ಮೀತವಾದ ಹನಸೋಗೆ, ಸಾಲಗ್ರಾಮ ಮುಂತಾದ ಸೀಮೆಗಳಂ ಸ್ವಾಧೀನಮಾಡಿಕೊಂಡು, ಶ್ರೀರಂಗಪಟ್ಟಣಕ್ಕೆ ಬಂದು ದೊರೆಗಳವರಿಗೆ ಬಿನ್ನವಿಸಿ, ಕಾವಲು

ಲ್ಲಿದ್ದ ಕಟ್ಟಿಮೆಳಲವಾಡಿ ಚನ್ನರಾಜಯ್ಯನಂ ಕರೆಯಿಸಿ — "ಪೂರ್ವದಲ್ಲಿ ನಮ್ಮ ದೊರೆಗಳಾದ ರಾಜಒಡೆಯರವರು ನಿನ್ನ ತಂದೆಯಾದ ಗೋಪಾಲ ರಾಜಯ್ಯನ ಮೇಲೆ ಕಟಾಕ್ಷವಿಟ್ಟು ಪ್ರಭುವಳಿತವಾಗಿ ಕೊಟ್ಟ ಸೀಮೆಯಂ ಅನುಭವಿಸಿಕೊಂಡಿರುವಂತೆ ನಿಬಂಧನೆಯಂ ಮಾಡಿದ ಉಪಕಾರವಂ ಮೆರೆತು, ತುಂಟಪಾಳೆಯಗಾರರಾದ ಕನ್ನಂಬಾಡಿ ಗೋಪಾಲರಾಜಯ್ಯ, ಜಾಡಲಿ ಸಿಂಗಪ್ಪಒಡೆಯರು ಮುಂತಾದ ದುಷ್ಟಜನರ ಸಂಗಡ ನೀನು ದುರಾಲೋಚನೆಯಂ ಮಾಡಬಹುದೇ?" ಎಂದು ಕೇಳಲು, ಆ ಚನ್ನರಾಜಯ್ಯನು ನನ್ನಿಂದ ಶತಾಪರಾಧವಾಯಿತೆಂದು ದೊರೆಗಳವರಿಗೆ ಅಡ್ಡಬಿದ್ದು ಕ್ಷಮೆಯಂ ಬೇಡಿಕೊಂಡನು.

ಆನೆ ಕಿಕಾರಿಯ ನಿಬಂಧನೆ.—ಆ ಮಾತಂ ಕೇಳಿದ ದಳವಾಯಿ ಬಸವಲಿಂಗಣ್ಣನು "ಹಾಗಾದರೆ ನಮ್ಮ ದಂಡಿಗೆ ಬಹಳ ಆನೆ ಬೇಕಾಗುವುದು, ಆ ಆನೆಯನ್ನು ಕ್ರಯಕ್ಕೆ ತಂದು ಕೊಡುವದಕ್ಕಾಗಿ ಕಾಕರ್ಕೂಡಿ ಹಳ್ಳದ ಪಟ್ಟಣ ಕಳಗಿರುವ ವರ್ತಕ ಬಾಳರಾಯನಿಗೆ ಕಟ್ಟಿಮೆಳಲವಾಡಿ ಸೀಮೆಯ ತಮ್ಮಡಹಳ್ಳಿ ಎಂಬ ಗ್ರಾಮದಲ್ಲಿ ವರ್ಷಕ್ಕೆ ೯೦೦ ವರಹ ನೆಲತೆರವನ್ನೂ ೪೦ ವರಹ ಕೈಸಂಬಳವನ್ನೂ ಅವನ ಮುಖಾಮಿಗೆ ೨೦ ವರಹದ ಭೂಮಿಯನ್ನೂ ಕೊಡುವದಲ್ಲದೆ ಅವನು ಹೇಳಿದ ಸ್ಥಳದಲ್ಲಿ ೩೦೦ ಆನೆ ಕಪ್ಪುಗಳನ್ನು ತೆಗೆಸಿಕೊಟ್ಟಿರೆ, ಅವನು ಅರಮನೆಗೆ ಬೇಕಾದ ಆನೆಗಳನ್ನು ಸುಲಭಕ್ರಯಕ್ಕೆ ತಂದುಕೊಡುವದಾಗಿ ಹೇಳಿರುತ್ತಾನೆ" ಎಂದು ದೊರೆಗಳವರಿಗೆ ಬಿನ್ನವಿಸಿ ಅವರ ಅಪ್ಪಣೆಯ ಮೇರೆಗೆ ಈ ವಿವರಗಳನ್ನೆಲ್ಲಾ ನಡೆಸಿಕೊಡುವದೆಂದು ಚನ್ನರಾಜಯ್ಯನಿಗೆ ಹೇಳಿದ್ದಲ್ಲದೆ ವರ್ತಕ ಬಾಳರಾಯನಿಗೂ 'ಆಳುಗಳ ಸಂಬಳ ಮುಂತಾದ ಸಾಮಗ್ರಿಗಳನ್ನು ನಿನ್ನ ಕೈಯಿಂದಲೇ ಕೊಟ್ಟು ಕಪ್ಪಿಗೆ ಬಿದ್ದ ಆನೆಗಳನ್ನು ಪಳಗಿಸಿ ಶ್ರೀರಂಗಪಟ್ಟಣಕ್ಕೆ ತಂದು ಕೊಡುವುದು, ಮಧ್ಯಮಾರ್ಗದಲ್ಲಿ ಈ ಆನೆಗಳು ಕೈತಪ್ಪಿಸಿಕೊಂಡು ಹೋದರೆ ಹಣವನ್ನು ಕೊಡತಕ್ಕದ್ದಿಲ್ಲ' ಎಂದು ಹೇಳಿ ಆನೆಗಳ ಕ್ರಯವನ್ನು ನಿಗದಿ ಮಾಡಿದರು.

ಬಂದು ಮೊಳವ ಕೊಂಬಿನ ಆನೆ ಒಕ್ಕೆ ೧೦೦ ವರಹ ಕ್ರಯ
ಗೇಣುಕೊಂಬಿನ ಆನೆ ಒಕ್ಕೆ ೪೦ ವರಹ ಕ್ರಯ

ಚಕೋಟುಕೊಂಬಿನ ಆನೆ ೧ಕ್ಕೆ	೫೦ ವೆರಹ ಕ್ರಯ
ಮುಗುಳುಗೊಂಬಿನ ಆನೆ ೧ಕ್ಕೆ	೨೫ ವೆರಹ ಕ್ರಯ
೫ ಮೊಳದ ಹೆಣ್ಣಾನೆ ೧ಕ್ಕೆ	೫೦ ವೆರಹ ಕ್ರಯ
೪ ಮೊಳದ ಪೆಣ್ಣಾನೆ ೧ಕ್ಕೆ	೪೦ ವೆರಹ ಕ್ರಯ
೩ ಮೊಳದ ಹೆಣ್ಣಾನೆ ೧ಕ್ಕೆ	೩೦ ವೆರಹ ಕ್ರಯ
ಮೆರಿ ೧ಕ್ಕೆ	೧೫ ವೆರಹ ಕ್ರಯ

ಈ ಮೇರೆಗೆ ಕೊಡುವಂತೆ ನಿಷ್ಕರ್ಷೆಮಾಡಿ ಅವರಿರ್ವರನ್ನೂ ಕಟ್ಟಿಮುಳಲ ವಾಡಿಗೆ ಕಳುಹಿಸಿಕೊಟ್ಟನು. ಮೇಲೆ ಹೇಳಿರುವ ಕೊತ್ವಾಗಾಲವೆಂ ಕಟ್ಟಿಕೊಂಡನಂತರ ಇದೇ ಸಂವತ್ಸರದಲ್ಲಿ ಪೆನ್ನಾಗರದ ಬಳಿಯಲ್ಲಿರುವ ಕೊತ್ವಾಗಾಲವೆನ್ನೂ ಕಟ್ಟಿಕೊಳ್ಳಬೇಕೆಂದು ದಳವಾಯಿ ಬಸವಲಿಂಗ ಣ್ಣನು ಹೊರಟನು. ಈ ವರ್ತಮಾನವೆನ್ನು ಅಲ್ಲಿಯ ಪಾಳಯಗಾರನಾದ ಫಟ್ಟಣ್ಣ ವೊದಲಿಯಾರಿಯು ತಿಳಿದು, ತನ್ನ ಮೊಗನ ಸಂಗಡ ೫೦೦೦ ವೆರಹ ಗಳನ್ನೂ ಜಂತದ ಪಲ್ಲಕ್ಕಿ, ಚಂಗೋಳಿ ಎಂಬ ಆನೆ, ಗೂಳಿ ಎಂಬ ಗ್ರಾಮ, ಇವುಗಳನ್ನೂ ಕೈಗಾಣಿಕೆಯಾಗಿ ಕೊಟ್ಟು ಕಳುಹಿ, ಕೆಲವು ದಿವಸಗಳ ಮೇಲೆ ಮತ್ತೆ ತುಂಟತನವೆಂ ಮಾಡಿದ ಕಾರಣ ಆ ಫಟ್ಟಿಮೊದ ಲಿಯಾರಿಯನ್ನು ನಿಗ್ರಹಿಸಿ ವೆರುಪ ೧ಕ್ಕೆ ೩೦೦೦ ವೆರಹವೆನ್ನು ಕೊಡು ವೆಂತೆ ನಿಗದಿ ಮಾಡಿಕೊಂಡು ಬಂದನು. ಬಳಿಕ ಆತನು ಪ್ರಭವ, ವಿಭವ, ಶುಕ್ಲ ಸಂವತ್ಸರಗಳಲ್ಲಿ ಅರಮನೆಯಲ್ಲಿ ಶುಭ ಪ್ರಸ್ತುತ ಬೆಳೆಯುವ ಕಾಲದಲ್ಲಿ ಶ್ರೀರಂಗಪಟ್ಟಣವಲ್ಲಿಯೇ ಕೆಲವು ದಿವಸದ ವರೆಗೂ ಇದ್ದು, ಸೇನಾಸಮೇತನಾಗಿ ಹೊರಗಿ ನಾಗಮಂಗಲವೆನ್ನು ಸಾಧಿಸುವಷ್ಟರಲ್ಲಿಯೇ ದೇಹಕ್ಕೆ ಅಯಾಸವಾಗಿ ಶುಕ್ಲ ಸಂವತ್ಸರದ ಫಾಲ್ಗುಣ ಬಹುಳ ೧೧ಲ್ಲಿ ಶ್ರೀರಂಗಪಟ್ಟಣಕ್ಕೆ ಬಂದು ಇದು ತೀರಿಹೋದನು.

ಅನಂತರ ಪ್ರಮೋದೂತ ಸಂವತ್ಸರದ ಚೈತ್ರ ಶುದ್ಧ ೧೦ಲ್ಲಿ ವಿಕ್ರಮರಾಯರಿಗೆ ದಳವಾಯಿತನವೆನ್ನು ನೇಮಕ ಮಾಡಿದರು. ಈ ವಿಕ್ರಮರಾಯರು ಚನ್ನಪಟ್ಟಣವೆನ್ನೂ, ನಾಗಮಂಗಲವೆನ್ನೂ, ಜೆಳ್ಳಿಂ ರನ್ನೂ ಯುದ್ಧದಲ್ಲಿ ಆ ಪಾಳಯಗಾರರುಗಳನ್ನು ಜಯಿಸಿ ಕಟ್ಟಿ ಕೊಂಡರು.

ಧರ್ಮಕಾರ್ಯಗಳು —ದೊರೆಗಳಾದ ಚಾಮೆರಾಜಒಡೆಯರವರು ತಾವು ಸಾಧಿಸಿದ ಜಿಳ್ಳೂರು ನಾಗಮಂಗಲ ಮುಂತಾದ ಗತಿಗಳಂ ಬಂದೋಬಸ್ತು ಮಾಡಬೇಕೆಂದು ಚಿತ್ತೈಸಿ ಬರುವ ಮಾರ್ಗದಲ್ಲಿ ಶ್ರವಣಬೆಳುಗೊಳದ ಜಿನದೇವರ ದರ್ಶನಕ್ಕೆ ಚಿತ್ತೈಸಬೇಕೆಂದು ನಿಯೋಗಿ ಬೊಮ್ಮರಸಯ್ಯನು ಬಿನ್ನವಿಸಿಕೊಳ್ಳಲಾಗಿ, ದಾಕ್ಷಿಣ್ಯದಿಂದ ಅಲ್ಲಿಗೆ ದಯಮಾಡಿಸಿ, ದೇವರ ದರ್ಶನವಂ ಮಾಡಿಕೊಂಡು ಶ್ರೀರಂಗಪಟ್ಟಣಕ್ಕೆ ಚಿತ್ತೈಸಿದರು. ಅನಂತರ ಪ್ರಜೋತ್ಪತ್ತಿ ಸಂವತ್ಸರದ ಕಾರ್ತಿಕ ಶುದ್ಧ ೧೫ ಸೋಮವಾರ ಸೋಮೋಪರಾಗ ಪುಣ್ಯಕಾಲದಲ್ಲಿ ತಮ್ಮ ಹಿರಿಯರಿಗೆ ಶಾಶ್ವತ ಪುಣ್ಯಲೋಕ ಬರಬೇಕೆಂಬುದಾಗಿಯೂ, ತಮ್ಮ ಪಾಪಪರಿಹಾರಾರ್ಥವಾಗಿಯೂ, ನಾಗಮಂಗಲದ ಬಾಚಹಳ್ಳಿಹೋಬಳಿಗೆ ಸೇರಿರುವ ಅಘಲಯವೆಂಬ ಪ್ರತಿನಾಮಧೇಯವುಳ್ಳ ಚಾಮೆರಾಜಸಮುದ್ರವೆಂಬ ಅಗ್ರಹಾರದಲ್ಲಿ ೩೦ ಮನೆಗಳಂ ಕಟ್ಟಿಸಿ ತ್ರಿಮತಸ್ಥ ಬ್ರಾಹ್ಮಣರುಗಳಿಗೂ ಕೊಟ್ಟುದಲ್ಲದೆ, ನಾರಾಯಣಪುರ, ಬಿಳಿಕೆರೆ, ಚಟ್ಟನಹಳ್ಳಿ, ಸಿಂಗನಹಳ್ಳಿ ಕೊಪ್ಪಲು, ಸಿಂಗಾಪುರ, ಕಾಮೆಂಡಹಳ್ಳಿ, ಕೊಪ್ಪಲು ಸಹ, ದೊಡ್ಡ ಸೋಮನಹಳ್ಳಿ ಕೆರೆಕಟ್ಟೆ ಈ ಗ್ರಾಮಗಳ ಎಲ್ಲಿಗಳಿಗೆ ಶಿಲಾಪ್ರತಿಷ್ಠೆಯಂ ಮಾಡಿಸಿ ಹಿರಣ್ಯೋದಕಧಾರಾಪೂರ್ವಕವಾಗಿ ಕೊಟ್ಟು, ಪುತ್ರಪೌತ್ರ ಪಾರಂಪರ್ಯವಾಗಿ ಅನುಭವಿಸಿಕೊಂಡು ಬರುವಂತೆ ದಾನಶಾಸನವಂ ಬರೆದು ಕೊಟ್ಟರು. ಶ್ರೀಮುಖ ಸಂವತ್ಸರದಲ್ಲಿ ಚಾಮೆರಾಜಒಡೆಯರವರ ಧರ್ಮಪತ್ನಿ ಮುದ್ದಾಜಮ್ಮಣಿ ಯವರು "ಯಾದವಾದ್ರಿಯಲ್ಲಿರುವ ಯೋಗನೃಸಿಂಹಸ್ವಾಮಿ ಚಲುವರಾಯಸ್ವಾಮಿಯವರ ವೈಭವಮುಡಿ ಬ್ರಹ್ಮೋತ್ಸವ ಮುಂತಾದ ಉತ್ಸವಗಳ ದರ್ಶನಕ್ಕಾಗಿ ನಾನಾ ದೇಶಗಳಿಂದ ಬರುವ ಜನಗಳಿಗೆ ಕಲ್ಯಾಣೀತೀರ್ಥದಲ್ಲಿ ಸ್ನಾನಮಾಡುವದಕ್ಕೆ ಸೋಪಾನವಿಲ್ಲದುದರಿಂದ ಬಹಳ ಶ್ರಮವಾಗಿದೆ ಎಂಬುದು ಚಿತ್ತಕ್ಕೆ ತೋರಿಯೇ ಇದೆ, ಆ ಕಲ್ಯಾಣಿಗೆ ಕಾಶಿಯಕೆಲಸದ ಸೋಪಾನವಂ ಕಟ್ಟಿಸಬೇಕು" ಎಂದು ಬಿನ್ನವಿಸಿಕೊಂಡಂತೆ ದೊರೆಗಳವರು ತಮ್ಮ ಧರ್ಮಪತ್ನಿ ಮುದ್ದಾಜಮ್ಮಣಿ ಯವರ ಹೆಸರಿನಿಂದಲೇ ಕಲ್ಯಾಣಿಗೆ ಸೋಪಾನವಂ ಕಟ್ಟಿಸಿದರು.

ಭಾವಸಂವತ್ಸರದ ಮಾಘಶುದ್ಧ ೧೫ ಗುರುವಾರದಲ್ಲಿ ಮೈಸೂರು ಬೆಟ್ಟದ ಚಾಮರಾಜಒಡೆಯರವರ ಕುಮಾರರಾದ ದಳವಾಯಿ ವಿಕ್ರಮರಾಯರು ನಂಜನಗೂಡು ಶ್ರೀಕಂಠೇಶ್ವರ ಸ್ವಾಮಿಯವರಿಗೆ ಸಂಕ್ರಾಂತಿ ಮುಂತಾದ ಸಮಯದ ಉತ್ಸವಗಳು ನಡೆಯುವಹಾಗೆ ಕಪಿಲಾನದೀ ತೀರದಲ್ಲಿ ಮಂಟಪವನ್ನೂ ಅನೇಕ ವೈಷ್ಣವಗಳಿಂದ ನಿಬಿಡವಾದ ವನವನ್ನೂ ಮಾಡಿಸಿದುದಲ್ಲದೆ ಆ ದೇವಸ್ಥಾನದ ಹೊರಪ್ರಾಕಾರದಲ್ಲಿ ಸರ್ವ ಜನರೂ ಆಶ್ಚರ್ಯಪಡುವಂತೆ ಶಿಲೆಯಿಂದ ಒಂದು ದೊಡ್ಡ ವೈಷ್ಣವವೆಂ ಮಾಡಿಸಿ ಅದರ ಪೀಠದಲ್ಲಿ ಸ್ವನಾಮಾಂಕಿತವಾದ ಶಾಸನವೆಂ ಪ್ರತಿಷ್ಠೆ ಮಾಡಿಸಿದರು.

ವಿದ್ಯಾವಿಷಯ —ಚಾಮರಾಜಒಡೆಯರವರು ವಿದ್ವಜ್ಜನಸಮ್ಮತವಾಗುವಂತೆ ಅನೇಕ ಸಂಸ್ಕೃತ ಪ್ರಾಕೃತ ಗ್ರಂಥಗಳಂ ರಚಿಸಿದುದಲ್ಲದೆ ಶ್ರೀಮದ್ರಾಮಾಯಣ ಸಪ್ತಕಾಂಡಕ್ಕೂ ಚಾಮರಾಜೋಕ್ತಿವಿಲಾಸವೆಂಬ ಕನ್ನಡದ ಟೀಕನ್ನು ಅಭಿನವಭಾರ್ಗವವಾಗಿ ಇರುವಂತೆ ಮಾಡಿಸಿದರು.

ಇತರ ಮುಖ್ಯವಿಷಯಗಳು.—ಆ ಮೇಲೆ ಚಾಮರಾಜಒಡೆಯರವರು ತಮ್ಮ ಪರಾಕ್ರಮದಿಂದ ಅನೇಕರಾದ ಪಾಳೆಯಗಾರರುಗಳಂ ಜಯಿಸಿ ಸೀಮೆಗಳಂ ಕಟ್ಟಿಕೊಂಡು ಅವರ ವಸ್ತ್ರಾಭರಣ ವಾಹನ ಮುಂತಾದ ಪದಾರ್ಥಗಳಂ ತೆಗೆದುಕೊಂಡದ್ದಲ್ಲದೆ, ಅವರಲ್ಲಿದ್ದ ಬಗೆಬಗೆಯ ಆಯುಧಗಳಂ ಸಂಗ್ರಹಿಸಿಕೊಂಡು ಬಂದನಂತರ ಇನ್ನೂ ನಾನಾವಿಧದ ಆಯುಧಗಳಂ ಮಾಡುವದಕ್ಕೂ ಇರಿಸುವದಕ್ಕೂ ಮೈಸೂರಲ್ಲಿ ಅಲಗಿನ ಚಾವಡಿಯೊಂದನ್ನು ಹೊಸದಾಗಿ ನಿರ್ಮಾಣ ಮಾಡಿಸಿದರು. ಮತ್ತು ರಾಜಒಡೆಯರವರ ಅಳಿಕೆಯಲ್ಲಿಯೂ ತಮ್ಮ ದೊರೆತನದಲ್ಲಿಯೂ ಯಾವೆಯಾವ ಗಡಿಗಳ ಹೋಬಳಿಗೆ ಯಾವೆಯಾವ ಗ್ರಾಮಗಳಂ ಸೇರಿಸಬೇಕೋ ಆವೋರೆಗೆ ಸೇರಿಸಿ ರಾಜಒಡೆಯರವರ ನಿಬಂಧನೆಯ ಮೇರೆಗೆ ನಡೆಸುತ್ತಿದ್ದರು. ಶ್ರೀರಂಗಪಟ್ಟಣದಲ್ಲಿ ರತ್ನಸಿಂಹಾಸನಾರೂಢರಾಗಿ ನವರಾತ್ರಿಯ ಓಲಗವಲ್ಲಿ ವೀರಶೂರ, ಮಲೆವೆರಗಂಡ, ಅಭಯಪ್ರತಾಪಾಧೀಶ್ವರ, ಶರಣಾಗತ ಪರಿಪಾಲಕ ಎಂಬ ಬಿರುದುಗಳಂ ಪೆಹಿಸಿ ಇವರಿಗೆ ಸರಿದೊರೆಯಿಲ್ಲವೆಂದು ಹೊಗಳಿಸಿಕೊಳ್ಳುತ್ತ, ತಮ್ಮ ಪೂರ್ವಿಕರು ಮಾಡಿರುವ ದೇವ

ದಾಯ ಬ್ರಹ್ಮದಾಯ ಮುಂತಾದ ಅನೇಕ ಧರ್ಮಕಾರ್ಯಗಳನ್ನು ನಡೆಸಿ ಕೊಂಡು ಬರುತ್ತ, ಶ್ರೀರಂಗಪಟ್ಟಣದ ರಂಗನಾಥಸ್ವಾಮಿ, ಮೇಲುಕೋಟೆಯ ಚಲುವರಾಯಸ್ವಾಮಿ, ಮುಂತಾದ ದೇವರ ಉತ್ಸವಗಳಿಗೆ ಮಂಟಪಗಳಂ ಕಟ್ಟಿಸಿ ಸುಖದಿಂದ ಪೃಥ್ವೀಸಾಮ್ರಾಜ್ಯವಂ ಗೈಯುತಲಿದ್ದರು.

ಚಾಮರಾಜಬಡೆಯರು ಸ್ವರ್ಗಸ್ಥರಾದದ್ದು:—ಹೀಗಿರುವಲ್ಲಿ ಇವರಿಗ ಬಹಳ ಆಯಾಸವುಂಟಾಗಲು ಇನ್ನು ಮೇಲೆ ತಮ್ಮದೇಹ ನಿಲ್ಲುವದಿಲ್ಲವೆಂದು ತಿಳಿದು ತಮ್ಮ ತಂದೆಗಳಿಗೆ ಸಹಧರ್ಮಿಣೀ ಮಾತೃ ಪುತ್ರರಾದ ಇಮ್ಮಡಿ ರಾಜಬಡೆಯರವರಿಗೆ ತಮ್ಮ ಹಿತೈಷಿಯವರಾದ ರಾಜಬಡೆಯರವರ ಆಜ್ಞಾನುಸಾರವಾಗಿ ಶಾ॥ ಶಕ ೧೫೫೯ನೇ (A.D. 1637) ಈಶ್ವರ ಸಂವತ್ಸರದ ವೈಶಾಖ ಶುದ್ಧ ೧೫ಲ್ಲಿ ಪಟ್ಟಾಭಿಷೇಕವಂ ಮಾಡಿಸಿ, ದಳವಾಯಿ ವಿಕ್ರಮರಾಯರು ಮುಂತಾದ ಅಧಿಕಾರಿಗಳಿಗೆ ಅವರ ಆಜ್ಞಾನುಸಾರವಾಗಿ ನಡೆದು ಕೊಳ್ಳುವಂತೆ ಕಟ್ಟುಮಾಡಿ, ಅನಂತರ ಮೂರು ದಿವಸವಿದ್ದು, ಆ ವೈಶಾಖ ಬಹುಳ ೪ಲ್ಲಿ ಶ್ರೀರಂಗಪಟ್ಟಣದಲ್ಲಿ ಸ್ವರ್ಗವನ್ನೈದಿದರು. ಆಗ ಇವರ ಪತ್ನಿಯರೆಲ್ಲರೂ ಸಹಗಮನ ಮಾಡಿದರು. ಇವರ ಉತ್ತರ ಕ್ರಿಯೆಗಳನ್ನು ಇಮ್ಮಡಿ ರಾಜಬಡೆಯರವರ ಕರ್ತವ್ಯವಾಗಿ ಅಂಕನಹಳ್ಳಿ ದೇವರಾಜಯ್ಯನು ಮಾಡಿದನು.

	ವರ್ಷ	ತಿಂಗಳು	ದಿನ
ಈ ಚಾಮರಾಜಬಡೆಯರವರ ಜೀವಿತಕಾಲ	೫೦	೯	೨೪
ಇವರ ಆಳಿಕೆ	೧೯	೧೦	೪

ಇವರ ಆಳಿಕೆಯಲ್ಲಿ ದಳವಾಯಿತನ ಮಾಡಿದವರು—

	ವರ್ಷ	ತಿಂಗಳು	ದಿನ
ಬೆಟ್ಟದರಸಿನವರು	೩	೪	೨೨
ಬನ್ನೂರು ಲಿಂಗಣ್ಣ	೫	೯	೨೩
ಬಸವ ಲಿಂಗಣ್ಣ	೪	೦	೬
ವಿಕ್ರಮರಾಯರು	೩	೧	೩

ಇವರಲ್ಲಿ ಬಂದನೆಯ ನಾಲ್ಕನೆಯವರು ರಾಜಒಡೆಯರವರ ಅಣ್ಣಂದಿರಾದ ಬೆಟ್ಟದ ಚಾಮರಾಜಒಡೆಯರವರ ಗಾಂಧರ್ವಪುತ್ರರು. ಮಿಕ್ಕ ಇಬ್ಬರು ಶಿವಾಚಾರದವರು.

ಇವರ ಆಳಿಕೆಯಲ್ಲಿ ನಿಯೋಗಿತನವೆಂ ಮೊಡಿದವನು ಜೈನರ ಬೊಮ್ಮರಸ ಪಂಡಿತನು.

ಹನ್ನೊಂದನೆಯ ಆಳಿಕೆ.

ಇಮ್ಮಡಿರಾಜಒಡೆಯರವರು.

ಜನನ.—ಶಾ॥ ಶಕ ೧೫೩೦ನೇ (A.D. 1617) ಪ್ಲವಂಗಸಂವತ್ಸರದ ಮಾರ್ಗಶಿರ ಬಹುಳ ಪಂಚಮಿ

ಪಟ್ಟಾಭಿಷೇಕ.—ಶಾ॥ ಶಕ ೧೫೬೦ನೇ (A.D. 1637) ಈಶ್ವರಸಂವತ್ಸರದ ವೈಶಾಖ ಶುದ್ಧ ಪೂರ್ಣಿಮೆ.

ಪತ್ನಿಯರು.—(೧) ಕೋಟೆ ಚನ್ನರಾಜಯ್ಯನವರ ಕುಮಾರತಿವೆಂಕಟಾಜಮ್ಮಣ್ಣಿಯವರು. (೨) ಮಡ್ಡೂರು ನರಸೇಅರಸಿನವರ ಕುಮಾರತಿ ನಂಜಮ್ಮಣ್ಣಿಯವರು.

ಈ ಎರಡು ವಿವಾಹಗಳೂ ಚಾಮರಾಜಒಡೆಯರವರ ಆಳಿಕೆಯಲ್ಲಿ ವಿಭವ ಸಂವತ್ಸರದ ಮೊಘ ಶುದ್ಧ ಪಂಚಮಿಯಲ್ಲಿ ನಡೆದವು.

ದಳವಾಯಿ ವಿಕ್ರಮರಾಯರು ಅರಕಲಗೂಡಿಗೆ ಹೋಗಿ ಮುತ್ತಿಗೆ ಹಾಕಿ ಅಲ್ಲಿಯ ಪಾಳೆಯಗಾರ ಕೃಷ್ಣಪ್ಪನಾಯಕನಂ ಜಯಿಸಿ, ಅವನಲ್ಲಿದ್ದ ಗಜಾಶ್ವದ್ರವ್ಯ ಮುಂತಾದ ಪದಾರ್ಥಗಳಂ ತೆಗೆದುಕೊಂಡು ಶ್ರೀರಂಗಪಟ್ಟಣಕ್ಕೆ ಬರಲು, ಈ ಇಮ್ಮಡಿರಾಜಒಡೆಯರವರು ತಮ್ಮ ತಂದೆಗಳು ಮಾಡಿದ್ದ ದೇವದಾಯ ಬ್ರಹ್ಮದಾಯ ಮುಂತಾದ ಧರ್ಮಕಾರ್ಯಗಳನ್ನು ಚಾಮರಾಜಒಡೆಯರವರು ಮಾಡಿರುವ ಧರ್ಮಕಾರ್ಯಗಳನ್ನು ಚನ್ನಾಗಿ ಪರಿಪಾಲಿಸುತ್ತ ದುಷ್ಟನಿಗ್ರಹ ಶಿಷ್ಟಪರಿಪಾಲನೆಯಂ ತಮ್ಮ ತಂದೆಯವರಿಗಿಂತ ಇಮ್ಮಡಿಯಾಗಿ ಮಾಡಿಕೊಂಡು ಬಂದ ಕಾರಣ, ಇಮ್ಮಡಿರಾಜಒಡೆಯರವರೆಂಬುದಾಗಿ ಪ್ರಸಿದ್ಧಿಯಂ ಪಡೆದು ನವರಾತ್ರಿಯ ಉತ್ಸವಕಾಲದಲ್ಲಿ ತಮ್ಮ

ತಂದೆಗಳು ಪ್ರೊಗಳಿಸಿಕೊಳ್ಳುತಿದ್ದ ಬಿರುದಾವಳಿಗಳಲ್ಲದೆ "ವೀರಶೂರ ಮಲೆಪೆರಗಂಡ, ಸಂಗೀತಲೋಲ, ಸಾಹಿತ್ಯರತ್ನಾಕರ, ಅಭಯಪ್ರತಾಪ ಧೀಶ್ವರ" ಎಂಬ ಬಿರುದುಗಳಿಂದಲೂ ಪ್ರೊಗಳಿಸಿಕೊಂಡು ವೆಸೆಂತೋತ್ಸವ, ನಾಟಕಶಾಲೆ, ಸಾರಿಮೀಳಿ, ಗಂಧರ್ವ ವೀಣೆ ಮುಂತಾದ ಮಹಾರಾಜ ವೈಭವದಿಂದ ಸತ್ಕೀರ್ತಿಯಂ ಪಡೆದು ಶಾ॥ ಶಕ ೧೫೬೦ನೇ (A.D. 1638) ಬಹುಧಾನ್ಯಸಂವತ್ಸರದ ಆಶ್ವಯುಜ ಶುದ್ಧ ೧೫ಲ್ಲಿ ಶ್ರೀರಂಗಪಟ್ಟಣವನ್ನು ಬಿಟ್ಟು ಸ್ವರ್ಗಸುಖಾನುಭವಕ್ಕೆ ತೆರಳಿದರು. ಆಗ ಇವರ ಪತ್ನಿಯರೂ ಸಹಗಮನ ಮಾಡಿದರು. ಇವರಿಗೆ ಉತ್ತರ ಕ್ರಿಯೆಗಳನ್ನು ಇವರ ಮಾತೃಶ್ರೀಯವೆರಾದ ಎಡವನಹಳ್ಳಿ ತಿಮ್ಮಾಜಮ್ಮಣ್ಣಿಯವರ ಕರ್ತವ್ಯವಾಗಿ ಹೆಮ್ಮನಹಳ್ಳಿ ದಾಸರಾಜಯ್ಯನು ಮಾಡಿದನು.

	ವರ್ಷ	ತಿಂಗಳು	ದಿನ
ಈ ಇಮ್ಮಡಿ ರಾಜಒಡೆಯರವರ ಜೀವಿತಕಾಲ	೨೦	೯	೨೬
ಇವರ ಆಳಿಕೆ	೧	೫	೦
ಇವರ ಆಳಿಕೆಯಲ್ಲಿ ದಳವಾಯಿತನ ಮಾಡಿದವನು ವಿಕ್ರಮರಾಯನು	೧	೫	೦

೬ ನೆ ಯ ಅ ಧ್ಯಾ ಯ.

ಹನ್ನೆರಡನೆಯ ಆಳಿಕೆ.

ರಣಧೀರ ಕಂಠೀರವ ನರಸರಾಜಒಡೆಯರವರು.

ಜನನ.—ಶಾ॥ ಶಕ ೧೫೩೭ನೇ (A.D. 1615) ರಾಕ್ಷಸ ಸಂವತ್ಸರದ ವೈಶಾಖ ಶುದ್ಧ ಚತುರ್ದಶಿ, ಸೋಮವಾರ ಸ್ವಾತೀ ನಕ್ಷತ್ರ ೨ನೇ ಪಾದ ನೃಸಿಂಹ ಜಯಂತಿಯಲ್ಲಿ ಬೆಟ್ಟದ ಚಾಮರಾಜಒಡೆಯರವರ ಧರ್ಮಪತ್ನಿ ಶುಭದ ಗುರು ವಾಜಮ್ಮಣ್ಣಿಯವರ ಗರ್ಭಾಂಬುಧಿಯಲ್ಲಿ ಜನಿಸಿದರು.

ಪಟ್ಟಾಭಿಷೇಕ.—ರಾಜಒಡೆಯರವರ ಕುಟುಂಬ ಎಷವನಹಳ್ಳಿ ತಿಮ್ಮಾಜಮ್ಮಣ್ಣಿಯವರು ತೆರಕಣಾಂಬಿಯಲ್ಲಿರುವ ತಮ್ಮ ಭಾವಾಜಿಯವರಾದ ಬೆಟ್ಟದ ಚಾಮರಾಜಒಡೆಯರವರ ೨ನೇ ಪುತ್ರರಾದ ಈ ಕಂಠೀರವ ನರಸರಾಜಒಡೆಯರವರಂ ರಾಜಮರ್ಯಾದೆಯಿಂದ ಕರೆತರಿಸಿ ಸ್ವೀಕಾರವಂ ಮಾಡಿಕೊಂಡು ಶಾ॥ ಶಕ ೧೫೬೦ನೇ (A.D. 1638) ಖರಧಾನ್ಯ ಸಂವತ್ಸರದ ಕಾರ್ತಿಕ ಶುದ್ಧ ವ್ಯತೀಪಾತ ಸೋಮವಾರವಲ್ಲಿ ಶ್ರೀರಂಗಪಟ್ಟಣದಲ್ಲಿ ಪಟ್ಟಾಭಿಷೇಕವಂ ಮಾಡಿಸಿದರು.

ಪತ್ನಿಯರು.—ಚಾವ.ರಾಜಒಡೆಯರವರ ಆಳಿಕೆಯಲ್ಲಿ ಅವರ ಅಪ್ಪಣೆಯಂತೆ ಇವರನ್ನು ಶ್ರೀರಂಗಪಟ್ಟಣಕ್ಕೆ ಕರತರಿಸಿದಾಗ ಶುಕ್ಲ ಸಂವತ್ಸರದ ವೈಶಾಖ ಶುದ್ಧ ೫ಲ್ಲಿ ವಿವಾಹವಾದವರು; (೧) ಬಿಳುಗೂಲಿ ಹುಚ್ಚ ತಿಮ್ಮರಾಜಯ್ಯನವರ ಕುಮಾರತಿ ಆಯವಮ್ಮಣ್ಣಿಯವರು, (೨) ಕಳಲೆ ದಾಸರಾಜಯ್ಯನವರ ಕುಮಾರತಿ ಲಕ್ಷ್ಮಮ್ಮಣ್ಣಿಯವರು. ಪಟ್ಟಾಭಿಷೇಕವಾದನಂತರ ವಿಕ್ರಮ ಸಂವತ್ಸರದ ವೈಶಾಖ ಶುದ್ಧ ೧೧ಲ್ಲಿ ಅರ್ಕವಿವಾಹ ಪುರಸ್ಸರ ವಿವಾಹಮಾಡಿಕೊಂಡ ಅಷ್ಟಮಹಿಷಿಯರು; (೩) ನರನಲ್ಲಿ ಬಾಳಯ್ಯನವರ ಕುಮಾರತಿ ಚನ್ನಾಜಮ್ಮಣ್ಣಿಯವರು, ಪ್ರತಿನಾಮ ತಿಮ್ಮಾಜಮ್ಮಣ್ಣಿಯವರು, ೪ರಿಕು ತಾರವರ ದೊಡ್ಡೀ ಅರಸಿನವರ ಕುಮಾರತಿಯರು ಇಬ್ಬರು:—(೪) ದೊಡ್ಡ ನಂಜಮ್ಮಣ್ಣಿಯವರು, (೫) ಮುದ್ದಾಜಮ್ಮಣ್ಣಿಯವರು, (೬) ಯಳಂದೂರು ಕೆಂಪನಾಜಯ್ಯನವರ ಕುಮಾರತಿ ನಂಜಮ್ಮಣ್ಣಿಯವರು (೭) ಬಾಗಳಿ ಲಿಂಗರಾಜಯ್ಯನವರ ಕುಮಾರತಿ ಗೌರಮ್ಮಣ್ಣಿಯವರು, (೮) ಹತ್ತಿಂ ಹನ್ನೆರಾಜಯ್ಯನವರ ಕುಮಾರತಿ ವೀರಾಜಮ್ಮಣ್ಣಿಯವರು, (೯) ಹುಲ್ಲಹಳ್ಳಿಯಲ್ಲಿರುವ ಕೊತ್ತಾಗಾಲಸ್ಥಳದ ತಿಪ್ಪೂರು ಸೋಮರಾಜಯ್ಯನವರ ಕುಮಾರತಿ ಸೋಮಾ

ಜವ್ಮಣಿ ಯವರು, (೧೦) ಮುಲಗೂಡುಭದ್ರರಾಜಯ್ಯನವರ ಕುಮಾರತಿ
ವೀರಾಜಮ್ಮಣಿ ಯವರು.

ಸಂತಾನ.—(೧) ಬಿಳುಗುಲಿ ಆಯಮ್ಮಣ್ಣಿ ಯವರಲ್ಲಿ ಚಾಮರಾಜಒಡೆಯರವರೆಂಬ
ಪುತ್ರರು ಹುಟ್ಟಿ ೫ ವರ್ಷಗಳಿದ್ದು ದೈವಾಧೀನರಾದರು.

(೨) ಸ್ವೀಕೃತ ಪುತ್ರರು.—ದೊಡ್ಡ ದೇವರಾಜಒಡೆಯರವರು.

ತಿರುಚಕನಾಪಳ್ಳಿಯಲ್ಲಿ ಜಟ್ಟಿಯನ್ನು ಹೊಡೆದದ್ದು.—ಪಟ್ಟವಾಗುವುದಕ್ಕೆ
ಮೊದಲು ಇವರು ತಮ್ಮ ಹೆತ್ತ ತಂದೆಯವರಾದ ಬಿಟ್ಟಿದ ಚಾಮರಾಜ
ಒಡೆಯರವರ ಸನ್ನಿಧಾನದಲ್ಲಿ ತೆರಕಣಾಂಬಿಯಲ್ಲಿರುವಾಗ ಒಬ್ಬ ಬ್ರಾಹ್ಮ
ಣನು ರಾಮೇಶ್ವರಯಾತ್ರೆ ಮಾಡಿಕೊಂಡು ಬಂದು, ಇವರಿಗೆ ಫಲಮಂತ್ರಾ
ಕ್ಷತೆಯನ್ನು ಒಪ್ಪಿಸಿ, "ತಿರುಚಕನಾಪಳ್ಳಿಯಲ್ಲಿ ಮಹಾಪರಾಕ್ರಮಶಾಲಿ
ಯಾಗಿ ಶೂರನಾದ ಒಬ್ಬ ಜಟ್ಟಿಯು ತನ್ನ ಸಂಗಡ ಕಾಳಗ ಮಾಡುವ
ವರು ಯಾರೂ ಇಲ್ಲವೆಂದು, ತನ್ನ ದಿಟ್ಟಿಚಲ್ಲಣವೆನ್ನು ಆವೂರ ಕೋಟೆಯ
ಬಾಗಿಲಿಗೆ ಕಟ್ಟಿದರೆ ಸರ್ವಜನರೂ ತನ್ನ ಕಾಲಕೆಳಗೆ ಸಂಚಾರ
ಮಾಡುವಂತಾಗುವುದೆಂದು, ದುರಹಂಕಾರದಿಂದ ಅರಸಿನ ಅನುಮತಿ
ಯಿಂದ ಕಟ್ಟಿದಾನೆ. ಬ್ರಾಹ್ಮಣರು ಮಾತ್ರ ಮೆತ್ತೊಂದು ಬಾಗಿಲಲ್ಲಿ
ಸಂಚಾರ ಮಾಡುವಂತೆಯೂ, ಮಹಾಶೂರರು ಮೊದಲಾದ ಇತರರೆಲ್ಲರೂ
ಆ ಬಾಗಿಲಲ್ಲಿ ಸಂಚಾರ ಮಾಡುವಂತೆಯೂ, ಆವೂರ ಅರಸು ನೇಮಕ
ಮಾಡಿದಾನೆ" ಎಂದು ಹೇಳಿದನು. ಆ ಮಾತಂ ಕೇಳಿ, ಈ ಕಂಠೀರವ
ನರಸರಾಜಒಡೆಯರವರು ಜನರು ಅರಿಯದಂತೆ ಆ ಬ್ರಾಹ್ಮಣನನ್ನು
ಕರೆದುಕೊಂಡು ಹೋಗಿ, ಆ ತಿರುಚಕನಾಪಳ್ಳಿಯ ಕೋಟೆಯ ಬಾಗಿಲಿ
ಕಟ್ಟಿರುವ ದಿಟ್ಟಿ ಚಲ್ಲಣಗಳನ್ನು ತಮ್ಮ ಜಡೆಯ ಆಳಿನ ಕೈಕೋಲಿನಿಂ
ತೆಗೆಸಿ, ಅದೇ ಬಾಗಿಲಲ್ಲಿ ಕೋಟೆಯೊಳಕ್ಕೆ ಪ್ರವೇಶವೆಂ ಮಾಡಿದರು
ಈ ವರ್ತಮಾನವೆಂ ಕೇಳಿದ ತಿರುಚಕನಾಪಳ್ಳಿಯ ಅರಸು ಇವರಂ ಕರೆಸಿ
ಸನ್ಮಾನವೆಂ ಮಾಡಿ ಇರಿಸಿಕೊಂಡಿದ್ದು, ಒಂದಾನೊಂದು ದಿವಸ ತನ್ನಲ್ಲಿದ್ದ
ಸರ್ವಜನರನ್ನೂ ಕರೆಸಿ ಸಭೆಯಂ ಮಾಡಿಸಿ, ತಾನು ಉಪ್ಪರಿಗೆಯ ಮೇಲೆ
ಕುಳಿತುಕೊಂಡು, ತನ್ನಲ್ಲಿದ್ದ ಜಟ್ಟಿಯನ್ನೂ ಇವರನ್ನೂ ಕಾಳಗಕ್ಕೆ
ಬಿಡಲು, ವಜ್ರಮುಷ್ಟಿಯಂ ಕಯ್ಯಲ್ಲಿ ಪಿಡಿದು ಇಬ್ಬರೂ ಕಾಳಗವ

ಮೊಡುವ ಸಮಯದಲ್ಲಿ, ಜಟ್ಟಿಯು ವೇಷವೆಂ ತಾಳಿರುವ ಈ ಕಂಠೀರವ ನರಸರಾಜಒಡೆಯರವರು ಜನರು ಅರಿಯುದಂತೆ ಪೂರ್ವದಲ್ಲಿಯೇ ಸೊಂಟದಲ್ಲಿ ಕಟ್ಟಿದ್ದ ವಿಜಯನಾರಸಿಂಹನೆಂಬ ಕತ್ತಿಯಿಂದ ತಮ್ಮ ಸಾಧಕ ಹಸ್ತಲಾಘವ ಚಮತ್ಕಾರದಿಂದ ಆ ಜಟ್ಟಿಯ ಕೊರಲಂ ಕೊಯಿದು ಅವನ ಮುಂದೆ ಸುಮ್ಮನೆ ನಿಂತುಕೊಂಡಿದ್ದರು. ಇದಂ ನೋಡಿದ ಆ ಅರಸು ಏತಕ್ಕೆ ಸುಮ್ಮನೆ ನಿಂತಿದ್ದೀರಿ ಎಂದು ಕೇಳಲು, ದೊರೆಗಳವರು ತಮ್ಮ ಎಡದ ಹಸ್ತದಲ್ಲಿದ್ದ ಬೆತ್ತದಿಂದ ಅವನ ಮುಖವೆಂ ತಿವಿದೊಡನೆಯೇ ಆ ಜಟ್ಟಿಯ ತಲೆಯು ಕೆಳಕ್ಕೆ ಬಿದು ಕುಣಿದಾಡಲಾಗಿ, ಈ ಜಟ್ಟಿಯ ಕಾಳಗವೆಂ ನೋಡುವೆದಕ್ಕೆ ಬಂದಿದ್ದ ಜನರೆಲ್ಲರೂ ಇವರ ಹಸ್ತಲಾಘವ ಚಮತ್ಕಾರವನ್ನೂ ಇವರು ಮಾಡಿದ ಸಾಹಸ ಪರಾಕ್ರಮಗಳನ್ನೂ ನೋಡಿ, ಆಶ್ಚರ್ಯಪಡುತ್ತ ಇವರಂ ಕೊಂಡಾಡುತ್ತಿದ್ದರು. ಇದಂ ನೋಡಿ ಆ ತಿರುಚನಾಪಳ್ಳಿಯ ಅರಸು ಬಹಳ ಸನ್ಮಾನಗಳಂ ಮಾಡಬೇಕೆಂದು ಆಲೋಚಿಸುತ್ತಿದ್ದನು. ಇವರು ಆ ಅರಸಿನ ಮುಖ ಭಾವವನ್ನೂ ಅವನು ಮಾಡುತಲಿರುವ ಸ್ತೋತ್ರದ ಅಭಿಪ್ರಾಯವನ್ನೂ ತಿಳಿದು, ಈ ಪಾಳಯಗಾರನಿಂದ ನಾವು ಜಟ್ಟಿಯಂತೆ ಸನ್ಮಾನಗಳಂ ಮಾಡಿಸಿಕೊಳ್ಳುವೆದು ಉಚಿತವಲ್ಲವೆಂದು ಎಣಿಸಿ, ನಾಳೆಯ ದಿವಸ ಬರುತ್ತೇನೆಂದು ಹೇಳಿ, ಆ ದಿನರಾತ್ರಿ ಜನರು ಅರಿಯುದಂತೆ ಆವೂರ ಕೋಟೆಯ ಬಾಗಿಲಿಗೆ "ಮೈಸೂರು ಸಂಸ್ಥಾನದಿಂದ ಯಾತೋ ಬಂದು ಇಂಥಾ ಪರಾಕ್ರಮವಂ ಮಾಡಿ ತೋರಿಸಿದರು" ಎಂದು ಸರ್ವರೂ ತಿಳಿಯುವೆಂತೆ ಚೀಟಿಯನ್ನು ಬರೆದು ಕಟ್ಟಿ, ತಾವು ಬ್ರಾಹ್ಮಣ ಸವೇತರಾಗಿ ತೆರಕಣಾಂಬಿಗೆ ಬಂದು ಸೇರಿದರು. ಬರುವಾಗ ದಾರಿಯಲ್ಲಿ ಒಂದು ಬಳಪದಕಲ್ಲಿನ ಕಂಭವನ್ನು ಕಂಡು ಅದನ್ನು ತಮ್ಮ ಭುಜಬಲ ಬುದ್ಧಿ ಚಮತ್ಕಾರಗಳಿಂದ ಅಲಗಿನ ತೀಕ್ಷ್ಣತೆ ಸ್ವಲ್ಪವೂ ಹೋಗದಂತೆ ಕತ್ತಿಯಿಂದ ಎರಡು ತುಂಡಾಗಿ ಕತ್ತರಿಸಿದರು.

ದಳವಾಯಿ ವಿಕ್ರಮರಾಯನಿಗೆ ಶಿಕ್ಷೆಯಾದದ್ದು.—ಬಳಿಕ ಶ್ರೀರಂಗಪಟ್ಟಣದಲ್ಲಿ ಪಟ್ಟಾಭಿಷಿಕ್ತರಾಗಿ ಸುಖದಿಂ ಪೃಥ್ವೀಸಾಮ್ರಾಜ್ಯವೆಂ ಗೈಯುತಲಿರುವ ಸಮಯದಲ್ಲಿ ಪೂರ್ವದಿಂದಲೂ ಅಧಿಕಾರಮಾಡುತಿರುವ ಜನ

ಗಳನ್ನು ಕರೆಸಿ, ಸೀಮೆಯ ಆದಾಯ ವ್ಯಯಗಳ ಲೆಕ್ಕವನ್ನೂ, ಬೊಕ್ಕಸ ಬಂಡಾರ ಮುಂತಾದವುಗಳ ಲೆಕ್ಕಗಳನ್ನೂ, ಕರಣಿಕರ ಮುಖದಿಂದ ವಿಚಾರಿಸಿ, ಸಂಸ್ಥಾನಕ್ಕೆ ಕೂಡಿ ಬರುವಂತೆ ಅಧಿಕಾರಗಳಂ ಮಾಡಿದ ಜನಗಳ ಶೀಲಸ್ವಭಾವವಂ ತಿಳಿದು, ಅವರನ್ನು ಆಯಾ ಅಧಿಕಾರದಲ್ಲಿ ನೇಮಿಸಿದರು. ಸುತ್ತು ಬಂಬಾನೊಂದು ದಿನ ತಮಗೆ ಆಪ್ತರಾದ ಜನರಂ ಕುರಿತು, "ಪೂರ್ವದಲ್ಲಿ ದೊರೆತನವೆಂ ಮಾಡುತ್ತಿದ್ದ ನಮ್ಮ ತಮ್ಮಾಜ್ಞೆಯುವೆರಾವ ಇಮ್ಮಡಿ ರಾಜಬಿಡೆಯರವರು ಎಂಬನೆಯ ವಯಸ್ಸಿನಲ್ಲಿಯೇ ಯಾವ ಉಪದ್ರವದಿಂದ ತೀರಿಹೋದರು? ಇದಕ್ಕೆ ನಿಮಿತ್ತವೇನಾವರೂ ಉಂಟೇ?" ಎಂಬುದಾಗಿ ಕೇಳುವಲ್ಲಿ "ಅವರ ದೇಹಕ್ಕೆ ಅಯಾಸವಾಗಿರುವ ಕಾಲದಲ್ಲಿ ದಳವಾಯಿ ವಿಕ್ರಮರಾಯರು ವೈದ್ಯನಿಂದ ವಿಷ ಚೂರ್ಣಪ್ರಯೋಗವೆಂ ಮಾಡಿಸಲಾಗಿ ತೀರಿಹೋದರೆಂಬ ವರ್ತಮಾನವಂ ಕೇಳಿದೇವೆ" ಎಂದು ಅವರು ತಿಳಿಸಿದರು. ಅನಂತರ ಅಂತಃಪುರಕ್ಕೆ ಹೋಗಿ ವಿಚಾರಿಸುವಲ್ಲಿ ಹಾಗೆ ನಡೆದದ್ದು ಯಥಾರ್ಥವೆಂದು ಅವರೂ ತಿಳಿಸಿದರು. ಆಗ ದಳವಾಯಿ ವಿಕ್ರಮರಾಯನನ್ನೂ ವೈದ್ಯನನ್ನೂ ಕರೆಸಿ ವಿಚಾರಣೆ ಮಾಡುವಲ್ಲಿ ಅವರು ತಾವು ಹಾಗೆ ಮಾಡಿದ್ದು ಉಂಟು ಎಂದು ಒಪ್ಪಿಕೊಂಡರು. ಮಹಾರಾಜದ್ರೋಹವಂ ಮಾಡಿದವನು ಇಂಥಾ ಅಧಿಕಾರದಲ್ಲಿ ಇರಬಾರದೆಂದು ತಿಳಿದು, ದಳವಾಯಿತನದ ಅಧಿಕಾರವನ್ನು ತೆಗದು, ಆ ವಿಕ್ರಮರಾಯನಿಗೂ ಅವನಿಗೆ ಸಹಾಯರಾಗಿದ್ದ ಜನರಿಗೂ ತಮ್ಮ ತಂದೆಯವರಾದ ಬೆಟ್ಟದ ಚಿಕ್ಕವೀರರಾಜಬಿಡೆಯರವರ ಅನುಮತಿಯಿಂದ ಪ್ರಾಣಾಂತ ಶಿಕ್ಷೆಯಂ ಮಾಡಿಸಿ, ಕಾಲಿ ಶಕ ೧೫೬೦ನೇ (A.D. 1638) ಬಹುಧಾನ್ಯ ಸಂವತ್ಸರದ ಮೃಗಶಿರ ಶುದ್ಧ ೧೦ಲ್ಲಿ ತಿಮ್ಮಪ್ಪ ನಾಯಕನೆಂಬವನಿಗೆ ದಳವಾಯಿತನವನ್ನು ನೇಮಕ ಮಾಡಿದರು.

ದೇವಗಳನ್ನು ಕಟ್ಟಿದ್ದು.—

ಮೇಧುರೆಯ ಪಟ್ಟವೊದಲಿಯಾರಿಯಿಂದ—ಕಾಲಿವಾಹನ ಶಕ ೧೫೬೪ನೇ (A.D. 1641) ವಿಪು ಸಂವತ್ಸರದ ಚೈತ್ರ ಬಹುಳ ೫ಲ್ಲಿ ಸಾಂಬಳ್ಳಿ.

ಈ ಫಾಲ್ಗುಣ ಶುದ್ಧ ೧೦ಲ್ಲಿ ವಂಟಳ್ಳಿ, ಶಿಂಗಾನಲ್ಲೂರು.

ಈ ವೈಶಾಖ ಶುದ್ಧ ೧೦ಲ್ಲಿ ಕಾವೇರಿಪುರ.

ಶಾ॥ ಶಕ ೧೫೬೩ನೇ (A.D. 1642) ಚಿತ್ರಭಾನು ಸಂವತ್ಸರದ ವೈಶಾಖ ಬಹುಳ ೫ಲ್ಲಿ ಅಬ್ದುಲ್ಲಾ ಖಾನನಿಂದ ತುರುಪೆಕೆರೆ, ಆನೆಬಾಗೂರು.
ಈ ಶ್ರಾವಣ ಶುದ್ಧ ೧೦ಲ್ಲಿ ಮತ್ತೆ ಮಧುರೆಯ ಪಾಳೆಯಗಾರ ಫಟ್ಟನೊವಲಿಯಾರಿಯಿಂದ ತೋಳ್ಳವ ಹೋಬಳಿ, ಚಂಗಪ್ಪಡಿ, ಮೋರಟಿಹಳ್ಳಿ.

ಶಾ॥ ಶಕ ೧೫೬೫ನೇ (A.D. 1644) ತಾರಣ ಸಂವತ್ಸರದ ಚೈತ್ರ ಶುದ್ಧ ೧೦ಲ್ಲಿ ನರಸೀಪುರದ ನಾರಸಿನಾಯಕನಿಂದ ಹಂಪಾಪುರ.

ಪೆರಿಪಟ್ಟಣದ ನಂಜುಂಡ ಅರಸಿನಿಂದ—
ತಾರಣ ಸಂವತ್ಸರದ ಪುಷ್ಯ ಬಹುಳ ೪ಲ್ಲಿ ಪಾವುಗರೆ.

ಶಾ॥ ಶಕ ೧೫೬೮ನೇ (A.D. 1645) ಪಾರ್ಥಿವ ಸಂವತ್ಸರದ ಆಶ್ವಯುಜ ಬಹುಳ ೧೦ಲ್ಲಿ ಪೆರಿಪಟ್ಟಣ.
ಈ ಕಾರ್ತಿಕ ಶುದ್ಧ ೧೫ಲ್ಲಿ ಬಟ್ಟದಪುರ.
ಈ ಮಾರ್ಗಶಿರ ಶುದ್ಧ ೧೦ಲ್ಲಿ ರುದ್ರಪಟ್ಟಣ ಮತ್ತು ಕಣ್ಣಾಗಾಲ.
ಈ ಮಾರ್ಗಶಿರ ಬಹುಳ ೧೦ಲ್ಲಿ ಕಿತ್ತೂರು.
ಈ ಪುಷ್ಯ ಶುದ್ಧ ೪ಲ್ಲಿ ನಂಜರಾಜ ಪಟ್ಟಣ.

ಶಾ॥ ಶಕ ೧೫೬೯ನೇ (A.D. 1646) ವ್ಯಯ ಸಂವತ್ಸರದ ವೈಶಾಖ ಶುದ್ಧ ೩ಲ್ಲಿ ಪ್ರತಾಪನಾಯಕನಿಂದ ಕಲ್ಲೂರು.
ಈ ವೈಶಾಖ ಶುದ್ಧ ೧೦ಲ್ಲಿ ಭೈರಪ್ಪನಾಯಕನಿಂದ ತುರುಕರು ಕಟ್ಟಿಕೊಂಡಿದ್ದ ಕಡಬ.
ಈ ಆಷಾಢ ಬಹುಳ ೧೦ಲ್ಲಿ ಭೈರಪ್ಪನಾಯಕನಿಂದ ತುರುಕರು ಕಟ್ಟಿಕೊಂಡಿದ್ದ ಮೊಯಸಮುದ್ರ.

ಶಾ॥ ಶಕ ೧೫೭೦ನೇ (A.D. 1647) ಸರ್ವಜಿತು ಸಂವತ್ಸರದ ಜ್ಯೇಷ್ಠ ಶುದ್ಧ ೧೦ಲ್ಲಿ ಅರಕಲಗೂಡು ಕೃಷ್ಣಪ್ಪನಾಯಕನಿಂದ ಬಸವಾಪಟ್ಟಣ.

ಶಾ॥ ಶಕ ೧೫೭೩ನೇ (A.D. 1650) ವಿಕೃತಿ ಸಂವತ್ಸರದ ವೈಶಾಖ ಶುದ್ಧ ೧೦ಲ್ಲಿ ಹುಣಿಗಲು ಕೆಂಪೇಗೌಡನಿಂದ ಹೆಬ್ಬೂರು.

ಶಾ॥ ಶಕ ೧೫೭೩ನೇ (A.D. 1651) ಖರ ಸಂವತ್ಸರದಲ್ಲಿ ತುರುಕರಿಂದ ಸೂಳಕೆರೆದುರ್ಗ, ನಾಯಕವಾತಿ ಸಂಸ್ಥಾನ, ಯಲಹಂಕನಾಡು, ಹನುಮೆಪ್ಪನಾಯಕನಿಂದ ತುರುಕರು ಕಟ್ಟಿಕೊಂಡಿದ್ದ ಚನ್ನಗಿರಿ, ಬಸವಾಪಟ್ಟಣ.

ಅದೇ ಸಂವತ್ಸರದಲ್ಲಿ ತುಂಗದ ಚಂಗಾಳರಾಯನಿಂದ ತುಂಗ ಇದಕ್ಕೆ ವಳಿತವಾದ ಗನ್ನಿಗ್ರಾಮ, ಮೊದಾಪುರ, ಕತ್ತರಿಘಟ್ಟ.

ಶಾ॥ ಶಕ ೧೫೭೪ನೇ (A.D. 1652) ನಂದನ ಸಂವತ್ಸರದ ಮೊರ್ಗಶಿರ ಶುದ್ಧ ೫ಲ್ಲಿ ನಾಗಮಂಗಲದ ಜಗದೇರಾಯನಿಂದ ಬಿಜಾಪುರದ ತಿರುಮಲರಾಯನು ಕಟ್ಟಿಕೊಂಡಿದ್ದ ರತ್ನಗಿರಿ.

ಈ ಮೊರ್ಗಶಿರ ಶುದ್ಧ ೧೦ಲ್ಲಿ ಜಗದೇರಾಯನಿಂದ ಬಿಜಾಪುರದ ತುರುಕರು ಕಟ್ಟಿಕೊಂಡಿದ್ದ ವೀರಭದ್ರನದುರ್ಗ.

ಈ ಮೊರ್ಗಶಿರ ಬಹುಳ ೫ಲ್ಲಿ ಜಗದೇರಾಯನಿಂದ ತುರುಕರು ಕಟ್ಟಿಕೊಂಡಿದ್ದ ಕೆಂಗೆರೆಕೋಟೆ.

ಈ ಪುಷ್ಯಶುದ್ಧ ೧ಲ್ಲಿ ಬಿಜಾಪುರದ ತುರುಕರಿಂದ ಪಿನ್ನಾಗರ.

ಈ ಮಾಘ ಶುದ್ಧ ೧ಲ್ಲಿ ಜಗದೇರಾಯನಿಂದ ತುರುಕರು ಕಟ್ಟಿಕೊಂಡಿದ್ದ ಡೆಂಕಣಿಕೆಕೋಟೆ.

ಈ ಮೊಘ ಶುದ್ಧ ೫ಲ್ಲಿ ಬಿಜಾಪುರದ ತುರುಕರಿಂದ ಧರ್ಮಪುರಿ.

ಮೆಧುರೆಯ ವೆಂಕಟಾದ್ರಿನಾಯಕನಿಂದ—

ಶಾ॥ ಶಕ ೧೫೭೬ನೇ (A.D. 1654) ವಿಜಯ ಸಂವತ್ಸರದ ಫಾಲ್ಗುಣ ಬಹುಳ ೮ಲ್ಲಿ ಸತ್ಯಮಂಗಲ.

ಈ ಫಾಲ್ಗುಣ ಬಹುಳ ೧೦ಲ್ಲಿ ಡಣಾಯಕನಕೋಟೆ.

ಶಾ॥ ಶಕ ೧೫೭೭ನೇ (A.D. 1655) ಜಯ ಸಂವತ್ಸರದ ಚೈತ್ರ ಬಹುಳ ೫ಲ್ಲಿ ಚಂದ್ರಶೇಖರನಾಯಕನಿಂದ ಹೊಸೂರು.

ಪೆರಿಪಟ್ಟಣದ ನಂಜುಂಡ ಅರಸಿನಿಂದ ಗಡಿಗಳನ್ನು ಸಾಧಿಸಿದ ವಿವರ—

ಶಾ॥ ಶಕ ೧೫೬೮ನೇ (A.D. 1645) ಪಾರ್ಥಿವ ಸಂವತ್ಸರದ ಆಶ್ವಯುಜ

ಬಹುಳ ೧೦ಲ್ಲಿನಂಜುಂಡ ಅರಸಿನ ಬಳಿಗೆ ತಮ್ಮ ದಳವಾಯಿ ನಂಜರಾಜಯ್ಯನನ್ನು ಕಳುಹಿಸಿ ಕೊಡಲು, ಆತನು ಹೋಗಿ "ಪೂರ್ವದಲ್ಲಿ ಚಾಮರಾಜ ಒಡೆಯರವರ ಆಳಿಕೆಯಲ್ಲಿ ವೆರುಷ ೧ಕ್ಕೆ ೩೦೦ ವರಹಗಳನ್ನು ಕೊಡುವು ದಾಗಿ ಮಾಡಿಕೊಂಡಿರುವ ಖಂಡಣೆಯ ಹಣವು ಕೆಲವು ವರ್ಷದಿಂದ ನಿಂತಿದೆ; ಲೆಕ್ಕಾಚಾರದ ಮೇರೆಗೆ ಅದನ್ನು ಈಗ ಕೊಡತಕ್ಕದ್ದು" ಎಂಬ ದಾಗಿ ಕೇಳಿದುದಕ್ಕೆ, ಆ ನಂಜುಂಡ ಅರಸು ಜನಗಳ ದುರಾಲೋಚನೆಗೆ ಬಳಗಾಗಿ ಹಣವೆಂ ಕೊಡುವುದಿಲ್ಲವೆಂದನು. ಈ ವರ್ತಮಾನವು ದೊರೆಗಳ ವರಿಗೆ ಮುಟ್ಟಲು, ಅವರು ಪಾರ್ಥಿವ ಸಂವತ್ಸರದ ಆಶ್ವಯುಜ ಬಹುಳ ೧೩ಲ್ಲಿ ಯುದ್ಧಸನ್ನದ್ಧರಾಗಿ ಪೆರಿಪಟ್ಟಣಕ್ಕೆ ಚಿತ್ತೈಸಿದರು. ಆಗ ನಂಜುಂಡ ಅರಸು ಇವರ ಸಂಗಡ ಯುದ್ಧಮಾಡಬಾರದೆ ಓಡಿಹೋದನು. ಇದನ್ನು ಕೇಳಿ ದೊರೆಗಳವರು ಪೆರಿಪಟ್ಟಣವೆಂ ಕಟ್ಟಕೊಂಡು ಅವನ ಅರಮನೆಯ ಭುವನೇಶ್ವರಿಯಲ್ಲಿದ್ದ ವಸ್ತ್ರಾಭರಣ ದ್ರವ್ಯ ಮುಂತಾದ ಸದಾರ್ಥ ಗಳನ್ನೂ ಆನೆ ಕುದುರೆ ಆಯುಧ ಮೊದಲಾದವುಗಳನ್ನೂ ತೆಗೆದು ಕೊಂಡು ಶ್ರೀರಂಗಪಟ್ಟಣಕ್ಕೆ ಕಳುಹಿಸಿದರು. ಅನಂತರ ಆ ನಂಜುಂಡ ಅರಸು ತನ್ನ ಗಡಿಯಾದ ಬಟ್ಟದಪುರಕ್ಕೆ ಓಡಿಹೋದನೆಂಬ ವರ್ತಮಾ ನವೆಂ ತಿಳಿದು, ಈ ಕಾರ್ತಿಕ ಶುದ್ಧ ೧೫ಲ್ಲಿ ಅವನನ್ನು ಬೆಟ್ಟದಪುರದಿಂದ ಓಡಿಸಿ ಅದನ್ನು ಕಟ್ಟಕೊಂಡರು. ಬಳಿಕ ಅವನು ಬೆಟ್ಟದಪುರವೆಂ ಬಿಟ್ಟು ರುದ್ರಪಟ್ಟಣಕ್ಕೆ ಓಡಿಹೋಗಲು, ಇದೇ ಸಂವತ್ಸರದ ಮಾರ್ಗಶಿರ ಶುದ್ಧ ೧ಲ್ಲಿ ಅವನನ್ನು ಅಲ್ಲಿಂದಲೂ ಹೊರಡಿಸಿ ಆ ರುದ್ರಪಟ್ಟಣವನ್ನೂ ಕಟ್ಟಕೊಂಡರು. ಅನಂತರ ಅವನು ಕಣಾ ಗಾಲದಲ್ಲಿ ಇದಾನೆಂಬ ವರ್ತ ಮಾನವೆಂ ತಿಳಿದು ಕಣಾ ಗಾಲವನ್ನು ಸ್ವಾಧೀನ ಮಾಡಿಕೊಂಡು ಆ ಪೂರಿಂ ದಲೂ ಆ ನಂಜುಂಡ ಅರಸನ್ನು ಓಡಿಸಿಬಿಟ್ಟರು. ಇವರ ಪಟ್ಟು ಗಳನ್ನು ತಾಳಲಾರದೆ, ನಂಜುಂಡ ಅರಸು ಕಿತ್ತೂರಿಗೆ ಹೋಗಲು, ಈ ಮಾರ್ಗಶಿರ ಬಹುಳ ೧೦ಲ್ಲಿ ಕಿತ್ತೂರನ್ನು ಕಟ್ಟಕೊಂಡು ಅಲ್ಲಿಯೂ ಅವನು ನಿಲ್ಲದಂತೆ ಮಾಡಿದರು. ಕಡೆಗೆ ನಂಜುಂಡ ಅರಸು ತಾನು ಪೂರ್ವದಲ್ಲಿದ್ದ ನಂಜರಾಜಪಟ್ಟಣಕ್ಕೆ ಹೋಗಿ, ಶೂರರಾದ ಕೊಡಗು ಜನಗಳ ಮರೆಹೊಕ್ಕು, ಆ ಜನಗಳಂ ಸ್ವಾಧೀನಮಾಡಿಕೊಂಡಿರುವೆ

ವರ್ತಮಾನವನ್ನು ಕೇಳಿ, ರಣಧೀರ ಕಂಠೀರವ ನರಸರಾಜಒಡೆಯರವರು ಬಹಳ ಸೇನಾಸಮೇತರಾಗಿ ತಾವೇ ಅಲ್ಲಿಗೆ ಪ್ರೋಗಿ, ೩ ದಿವಸ ಹಗಲೂ ಇರುಳೂ ಯುದ್ಧಮಾಡಿ, ಆ ಶೂರಜನಗಳಂ ಹೊಡೆದು, ಕೆಲವರನ್ನು ಒಡಿಸಿ, ಆ ಪೆರಿಪಟ್ಟಣವ ನಂಜುಂಡ ಅರಸನ್ನು ಸಂಹರಿಸಿ, ಪಾರ್ಥಿವ ಸಂವತ್ಸರದ ಪುಷ್ಯ ಶುದ್ಧ ೫ಲ್ಲಿ ನಂಜರಾಜಪಟ್ಟಣವನ್ನು ಕಟ್ಟಿಕೊಂಡು ಅವರಲ್ಲಿದ್ದ ಆಯುಧ ವಸ್ತ್ರಾಭರಣಗಳನ್ನೂ ಗಜಾಶ್ವಮುಂತಾದ ವಾಹನಗಳನ್ನೂ ತೆಗೆದುಕೊಂಡು ಶ್ರೀರಂಗಪಟ್ಟಣಕ್ಕೆ ಚಿತ್ತೈಸಿದರು.

ಶಾ॥ ಶಕ ೧೫೭೭ನೇ ವಿಜಯ ಸಂವತ್ಸರದಲ್ಲಿ ಕಣಿವೆಯ ಕೆಳಗಣ ಸೀಮೆಗಳನ್ನು ಸಾಧಿಸುವದಕ್ಕೆ ದಂಡೆತ್ತಿ ಹೋಗಿರಲು, ಮೆಧುರೆಯ ಪಾಳೆಯಗಾರ ವೀರಪ್ಪನಾಯಕನು ಕೆಲವು ಜನ ಪಾಳೆಯಗಾರರಿಗೆ ಸಹಾಯನಾಗಿ ಬಂದು ಯುದ್ಧವಂ ಮಾಡಿಸಿದನು. ಆ ವೀರಪ್ಪನಾಯಕನನ್ನು ಶಿಕ್ಷಿಸಬೇಕೆಂದಿರುವಾಗ, ಈ ಕಂಠೀರವ ನರಸರಾಜಒಡೆಯರವರ ಶೌರ್ಯವಂ ತಿಳಿದು, ಅವನು ಐಂಡಣೆ ಹಣವನ್ನು ಕೊಡುತ್ತೇನೆಂದು ನಿಷ್ಕೃಷ್ಟಿ ಮಾಡಿಕೊಂಡನು. ಮೆಲೆಯಾಳ ಸೀಮೆಯ ನಾಯಿಮಾರರೂ ಕೊಂಕಣದೇಶದ ಕೆಲವೆರು ತುಂಟ ಜನರೂ ತಮ್ಮ ಗಡಿಗಳನ್ನು ಮೀರಿ ಬಂದು ಬಲು ತುಂಟತನವಂ ಮಾಡಲು, ಅವರುಗಳಿಗೆ ತಕ್ಕ ಶಿಕ್ಷೆಯಂ ಮಾಡಿಸಿ ಮತ್ತೆ ಬಾರದಂತೆ ಮಾಡಿದರು.

ವಿಜಾಪುರದ ರಣದುಲ್ಲಾಖಾ ಮುಂತಾದ ಕೂರರೊಡನೆ ಭಾರಿ ಯುದ್ಧ.— ಬಸವಾಪಟ್ಟಣದ ಹನುಮಪ್ಪನಾಯಕನಿಗೂ ಇಕ್ಕೇರಿ ವೀರಭದ್ರ ನಾಯಕನಿಗೂ ಪರಸ್ಪರ ದ್ವೇಷವಿತ್ತು. ಹನುಮಪ್ಪನಾಯಕನು ತನಗೆ ಸಹಾಯವಿಲ್ಲದೆ ವೀರಭದ್ರನಾಯಕನಂ ಜಯಿಸುವುದು ಅಸಾಧ್ಯವೆಂದು ತಿಳಿದು, ತನ್ನ ಮಂತ್ರಿ ವೆಂಕಟಪತಿಚೇಟ್ಟಿ ಎಂಬವನ ಕೈಯಲ್ಲಿ ೪೦ಸಾವಿರ ವರಹಗಳನ್ನೂ ಕೆಲವು ವಸ್ತ್ರಾಭರಣವಾಹನಗಳನ್ನೂ ಕೊಟ್ಟು, ಅವುಗಳನ್ನು ಕೈಗಾಣಿಕೆಮಾಡಿ ಕೆಲವು ಸೇನೆಯನ್ನು ತೆಗೆದುಕೊಂಡು ಬರುವಂತೆ ಹೇಳಿ, ಅವನನ್ನು ವಿಜಾಪುರದ ಪಾದಷಾಹರ ಬಳಿಗೆ ಕಳುಹಿದನು. ಆ ಪಾದಷಾಹರು ಇವನ್ನಂಗೀಕರಿಸಿ ಹನುಮಪ್ಪನಾಯಕನ ಸಹಾಯವಾಗಿ ಕೆಲವು ಸೇನೆಯಂ ಕಳುಹಿಸಲು ಒಪ್ಪಿದರು. ಆಗ

ಪೂರ್ವದಲ್ಲಿ ಮೈಸೂರು ಚಾಮರಾಜಒಡೆಯರವರ ಆಳಿಕೆಯಲ್ಲಿ ಯುದ್ಧ ಮಾಡಿ ಓಡಿಹೋಗಿ, ವಿಜಾಪುರದ ಪಾದಷಾಹರ ಬಳಿಯಲ್ಲಿ ೬೦೦ ಕುದುರೆಗಳಿಗೆ ಗೊತ್ತುಗಾರನಾಗಿದ್ದ, ನಾಗಮಂಗಲದ ಜಗದೇರಾಯನ ಕಡೆಯ ಗುರಿಕಾರ ಚನ್ನಯ್ಯನೆಂಬವನು ಪಾದಷಾಹರನ್ನು ಕುರಿತು "ಈಗ ಶ್ರೀರಂಗಪಟ್ಟಣದಲ್ಲಿ ಹೊಸದಾಗಿ ಪಟ್ಟಕ್ಕೆ ಬಂದಿರುವ ದೊರೆಗಳು, ಹಳಬ ನಾಗಿಯೂ ಶೂರನಾಗಿಯೂ ಇದ್ದ ದಳವಾಯಿ ವಿಕ್ರಮರಾಯನನ್ನು, ತಮ್ಮ ಸಂಬಂಧಿ ಎಂಬುದಾಗಿಯೂ ನೋಡದೆ ನಿರ್ನಿಮಿತ್ತವಾಗಿ ಸಂಹರಿಸಿ, ಅವನ ಸೇನಾಧಿಪತ್ಯವನ್ನು ಯಾವನೋ ಒಬ್ಬ ತಿಮ್ಮಪ್ಪನಾಯಕನೆಂಬವನಿಗೆ ಕೊಟ್ಟದ್ದರಿಂದ, ಸ್ವಜನವಿರೋಧವು ಬಹಳವಾಗಿದೆ. ಆದುದರಿಂದ ಶ್ರೀರಂಗಪಟ್ಟಣವಂ ಸಾಧಿಸುವದಕ್ಕೆ ಇದೇ ಸಮಯವು" ಎಂದು ಹೇಳಿದನು. ಆ ಮಾತಂ ಕೇಳಿ ಪಾದಷಾಹರು ತಮ್ಮ ಸೇನಾಧಿಪತಿಯಾದ ರಣದುಲ್ಲಾಖಾನನ ಸಂಗಡ ೪೦ ಸಾವಿರ ಕುದುರೆಗಳನ್ನೂ ಇದಕ್ಕೆ ತಕ್ಕ ಕಾಲಾಳು ಮುಂತಾದ ಯುದ್ಧಸಾಮಗ್ರಿಗಳನ್ನೂ ಕೊಟ್ಟು, ಹನುಮಪ್ಪನಾಯಕನಿಗೆ ಸಹಾಯವಾಗಿ ಹೋಗಿ ವೀರಭದ್ರನಾಯಕನಂ ಜಯಿಸಿದ ನಂತರ, ಈ ನಾಗಮಂಗಲದ ಚನ್ನಯ್ಯನೊಡನೆ ಹೋಗಿ ಶ್ರೀರಂಗ ಪಟ್ಟಣವಂ ಸಾಧಿಸಿಕೊಂಡು ಬರುವುದಾಗಿ ಹೇಳಿ ಕಟ್ಟುಮಾಡಲು, ರಣ ದುಲ್ಲಾಖಾನನು ಸೇನಾಸಮೇತನಾಗಿ ನಾಗಮಂಗಲದ ಚನ್ನಯ್ಯನೊಡ ಗೂಡಿ ವೀರಕಂಕಣವನ್ನು ಕಟ್ಟಿಕೊಂಡು, ಶಾಲಿವಾಹನ ಶಕ ೧೫೬೦ನೇ (A.D. 1638) ಬಹುಧಾನ್ಯ ಸಂವತ್ಸರದ ಪುಷ್ಯ ಬಹುಳ ೪ ಶುಕ್ರವಾರದಲ್ಲಿ ೫೫ ಹರಿದಾರಿ ಪರ್ಯಂತ ದಂಡನ್ನು ಇಳಿಸಿಕೊಂಡು, ಶ್ರೀರಂಗಪಟ್ಟಣಕ್ಕೂ ಮೈಸೂರಿಗೂ ಮುತ್ತಿಗೆ ಹಾಕಿದನು. ಆದಿನದ ರಾತ್ರಿಯಲ್ಲಿ ಕೋಟೆಗೆ ಆಗ್ನೇಯ ಪಾರ್ಶ್ವದಲ್ಲಿಯೂ ಈಶಾನ್ಯಪಾರ್ಶ್ವದಲ್ಲಿಯೂ ಎರಡು ಸುರಂಗ ಗಳನ್ನು ತೋಡಿ, ಕೋಟೆಯು ಹಾರಿಹೋಗುವಂತೆ ಬಹಳ ಮದ್ದು ಗುಂಡುಗಳನ್ನು ತುಂಬಿ ಸುರಂಗಗಳನ್ನು ಹಾರಿಸಿದರು. ಆಗ ಎರಡು ಮೂಲೆಗಳಲ್ಲಿಯೂ ಕೋಟೆಯು ಬಿದ್ದುಹೋಗಲು, ಕೋಟೆಯ ಮೇಲೆ ಕಾದುಕೊಂಡಿದ್ದ ಕೆಲವು ಜನರು ಹತರಾದರು. ಇದನ್ನು ನೋಡಿದ ರಣದುಲ್ಲಾಖಾನನ ಕಡೆಯ ಶೂರರು ಕೋಟೆಗೆ ಲಗ್ಗೆಯೀಡಬೇಕೆಂಬ

ಸಮಯದಲ್ಲಿ, ಕಂಠೀರವನರಸರಾಜಒಡೆಯರವರು ನರಸಿಂಹಾಕಾರವನ್ನು ತಾಳಿ, ಎರಡು ಕಡೆಯಲ್ಲಿಯೂ ಲಗ್ಗೆಯೇರಿ ಬರುತಲಿರುವ ಆ ಶತ್ರು ಜನಗಳು ಅಡಿಯಿಡದಂತೆ ಅವರ ಕಾಲುಗಳನ್ನು ಕಡಿದು, ತಲೆಗಳನ್ನೊಡೆದು, ಕೋಟೆಯ ಹೊರಗಿರುವ ಕುದುರೆಗಳನ್ನು ತರಿದು, ಬಂಡಿಗಳನ್ನು ಮುರಿದು, ಆನೆಗಳನ್ನಿರಿದು, ಬಂಟೆಗಳನ್ನೊಡಿಸಿ, ಅತಿಭಯಂಕರವೆಮಾಗಿ ಯುದ್ಧಮಾಡುತ್ತ, ಶೂರರುಗಳನ್ನು ಹೇಡಿಗಳನ್ನಾಗಿ ಮಾಡಿದರು. ಬಳಿಕ ರಣದುಲ್ಲಾ ಖಾನನ ಸೇನೆಯು ಪೆಟ್ಟುಗಳನ್ನು ತಾಳಲಾರದೆ ದಿಕ್ಕು ಕೆಟ್ಟು ಓಡಿಹೋಗಿ, ಇವರ ಸಂಗಡ ನಾವು ಯುದ್ಧಮಾಡಲಾರವೆಂದು ತಮ್ಮ ಅಧಿಪತಿಗೆ ಹೇಳಲು, ಆ ರಣದುಲ್ಲಾ ಖಾನನು ಹನುಮಪ್ಪನಾಯಕ ಮುಂತಾದ ಸೇನಾಜನರ ಸಂಗಡ "ಮಹಾಪರಾಕ್ರಮಶಾಲಿಗಳಾದ ಈ ಕಂಠೀರವನರಸರಾಜಒಡೆಯರವರೊಡನೆ ನಾವು ಯುದ್ಧಮಾಡುವುದು ಅಶಕ್ಯ, ಹೇಗಾದರೂ ಸಂಧಿಯಂ ಮಾಡಿಕೊಂಡು ಹೋಗುವುದೇ ನಮಗೆ ಉಚಿತವು" ಎಂದು ಆಲೋಚಿಸುತ್ತಿದ್ದನು. ಆಗ ನಾಗಮಂಗಲದ ಚನ್ನಯ್ಯನು ತನಗೆ ಅಪಮಾನವಾಗುವುದೆಂದು ತಿಳಿದು, "ಈದಿನ ಸಂಧಿ ಮಾಡಬೇಡಿ. ನಾನು ಅತಿರಹಸ್ಯವಾಗಿ ಪಟ್ಟಣಕ್ಕೆ ಹೋಗಿ, ಅಲ್ಲಿಯ ಮರ್ಮವಂ ತಿಳಿದು, ಹೇಳಿಕಳುಹಿಪ ಮಾರ್ಗವಾಗಿಯೇ ನೀವು ಬರುವೆರಾಗಿ" ಎಂದು ಹೇಳಿ, ಕನ್ನಂಬಾಡಿಯ ಮೇಲೆ ಬಳಗುಳದ ಮಾರ್ಗವಾಗಿ, ಬ್ರಹ್ಮಪುರಿಯ ಬಾಗಿಲಿಂದ ಆ ಬಹುಳ ೯ ಶನಿವಾರ ಕೋಟೆಯೊಳಕ್ಕೆ ಹೋಗಿ, ಅಲ್ಲಿಯ ಜನರೆಲ್ಲರೂ ರಣದುಲ್ಲಾಖಾನನ ಸೇನೆಯು ಓಡಿಹೋಯಿತೆಂದು ಉದಾಸೀನರಾಗಿರುವದನ್ನು ನೋಡಿ, ನಾಳೆದಿವಸ ಕೋಟೆಯು ಬಿದ್ದುಹೋಗಿರುವ ಮಾರ್ಗದಿಂದ ಗುಂಡುಗಳನ್ನು ಹಾರಿಸುತ್ತ ಪಟ್ಟಣಕ್ಕೆ ಲಗ್ಗೆಯೇರಿ ಬರಬಹುದೆಂದು ಹೇಳಿಕಳುಹಿಸಿದನು. ಅದರಂತೆ ಅವರು ಈ ಬಹುಳ ೧೦ ಭಾನುವಾರ ಕೋಟೆಗೆ ಲಗ್ಗೆಯನ್ನೇರಬೇಕೆಂಬ ಸಮಯದಲ್ಲಿ, ದೊರೆಗಳ ಕಡೆಯವರು ಎಚ್ಚತ್ತು ಬಹು ಘೋರಯುದ್ಧವನ್ನು ಮಾಡಿ ಅವರನ್ನು ಹಿಂದಟ್ಟಿದರು. ಆಗ ಶ್ರೀರಂಗಪಟ್ಟಣದ ರಂಗನಾಥಸ್ವಾಮಿಯ ಕಟಾಕ್ಷದಿಂದ ಕೋಟೆಯ ಮೇಲೆ ಅತಿಭಯಂಕರರಾದ ಅನೇಕಜನ ರಾಕ್ಷಸರುಗಳನ್ನು ಕಂಡಂತೆ ಆಗಲು, ಎಲ್ಲರೂ ಭಯ

ಪಟ್ಟು, ಪಟ್ಟಣಕ್ಕೆ ಬರಲು ಶಕ್ತಿಯಿಲ್ಲದೆ, ಓಡಿಹೋಗಿ, ಈ ವರ್ತಮಾನವನ್ನು ರಣದುಲ್ಲಾಖಾನನಿಗೆ ತಿಳಿಸಿದರು. ರಣಧೀರಕಂಠೀರವನರಸರಾಜಒಡೆಯರವರು ಇದನ್ನು ಕೇಳಿ ಶ್ರೀರಂಗಪಟ್ಟಣದಲ್ಲಿ ಜಯಕಹಳೆಯಂ ಹಿಡಿಸಿದರು.

ಅನಂತರ ಈ ರಣದುಲ್ಲಾಖಾ ಮುಂತಾದ ಸರದಾರರು ಎರಡು ದಿವಸ ಲಗ್ಗೆಯನ್ನೀರಬೇಕೆಂದು ಹೊರಟರೂ ಅಪಜಯವಾಯಿತಾದರಿಂದ ಹಿಂದಿನದಿನ ಆಲೋಚಿಸಿದಂತೆ ಸಂಧಿಯಿಂದ ಖಂಡಣೆಮಾಡಿಕೊಂಡು ಹೋಗಬೇಕೆಂದೆಣಿಸಿ, ದೊರೆಗಳವರಿಗೆ ಆಪ್ತರಾದ ಕಾವೇರಿ ಹೆಬ್ಬಾರುವ ಮಿಂಚುಹೆಬ್ಬಾರುವ ಎಂಬಿಬ್ಬರನ್ನು ಕರೆಸಿ, "ಕಾವೇರಿಗೆ ದಕ್ಷಿಣಪಾರ್ಶ್ವದಲ್ಲಿರುವ ಸೀಮೆಯೆಲ್ಲಾ ನಿಮ್ಮದೇಸರಿ; ಉತ್ತರಪಾರ್ಶ್ವದ ಸೀಮೆಯಲ್ಲಿ ಹುಟ್ಟಿದ ಹಣದಲ್ಲಿ ವೆಚ್ಚ ಕಳೆದು ನಿಂತಹಣವನ್ನು ನಮಗೆ ಕೊಡಬೇಕೆಂದು ಖಂಡಣೆಮಾಡಿಕೊಂಡು ಬನ್ನಿ" ಎಂದು ಹೇಳಿದ ಮಾತಂ ಕೇಳಿ, ಅವರಿಬ್ಬರೂ ಈ ವೃತ್ತಾಂತವನ್ನು ತಮ್ಮ ದೊರೆಗಳವರಿಗೆ ಬಿನ್ನವಿಸಿ ಅಪ್ಪಣೆಯಂ ತೆಗೆದುಕೊಂಡು ಬರುತ್ತೇವೆಂದು ಹೊರಟುಬರುತ್ತಿದ್ದರು. ಅಷ್ಟರಲ್ಲಿಯೇ ದೊರೆಗಳವರು ತಮಗೆ ಮುಖ್ಯಸ್ಥಾನವಾದ ಮೈಸೂರು ಕೋಟೆಯು ಏನಾಗಿದೆಯೋ ನೋಡಬೇಕೆಂದು, ಈ ಬಹುಧಾನ್ಯ ಸಂವತ್ಸರದ ಪುಷ್ಯ ಬಹುಳ ೧೧ ಸೋಮವಾರ ಕೆಲವು ಸೇನೆಯೊಡಗೂಡಿ ಮೈಸೂರಿಗೆ ಚಿತ್ತೈಸಿ ಅರಮನೆಯಲ್ಲಿ ಮುಹೂರ್ತಮಾಡಿ, ಗುರಿಕಾರ ವೀರತ್ತಯ್ಯನೆಂಬವನನ್ನು ಕರೆಸಿ, ಇಲ್ಲಿ ನಡೆದ ವರ್ತಮಾನವೇನೆಂದು ಕೇಳಿದರು. ಅದಕ್ಕೆ ಆ ವೀರತ್ತಯ್ಯನು ಹೇಳಿದ್ದೇನೆಂದರೆ:—

"ಕಾಡಬಸವನ ತಿಟ್ಟಿನ ಮೇಲೆ ಇಳಿದಿದ್ದ ರಣದುಲ್ಲಾಖಾನನ ಸೇನಾಜನರು, ಮೈಸೂರು ಕೋಟೆಯಂ ಸ್ವಾಧೀನ ಮಾಡಿಕೊಳ್ಳಬೇಕೆಂದು ಯುದ್ಧಸನ್ನದ್ಧರಾಗಿ ಲಕ್ಕೀ ಹಳ್ಳವೆಂಬ ದಾಟಿ ವೀರಭದ್ರನ ಕೊತ್ತಲದ ಮೊಗದಾನಾಗಿ ಬಂದು, ಕೋಟೆಯ ಮೇಲೆ ಕಾವುಕೊಂಡಿದ್ದ ಓಲೆಕಾರರನ್ನು ಹೊಡೆದುಹಾಕಿ ಲಗ್ಗೆಯನ್ನೀರಬೇಕೆಂದಿದ್ದರು. ಆಗ ನಮ್ಮ ತಾಣೆದಾರ ಬಸವರಾಜಯ್ಯ, ಹೊಬಳಿದಾರ ಸಿದ್ದನಾಯಕ, ಬುರ್ಹಾನ್ ಮುಂತಾದವರು ಓಲೆಕಾರರುಗಳಂ ಜೊತೆಗೊಳಿಸಿಕೊಂಡು ತುಪ್ಪಾಕಿ

ಗಳಂ ಎಬರಿಸಿ ಹೊಡೆಯುತಲಿರಲು, ರಣದುಲ್ಲಾ ಖಾನನ ಸೇನಾಜನ ಗಳಿಗೆ ನೂತ್ರ ಈ ಕೋಟೆಯ ಮೇಲೆ ಅನೇಕಜನ ಸ್ತ್ರೀಯರು ಇರುವಂತೆ ತೋರಿ, ಈ ಹೆಂಗಸರನ್ನು ಹೊಡೆಯಬಾರದು, ಇವರು ಗಳನ್ನು ಓಡಿಸಿಬಿಟ್ಟು ಕೋಟೆಯಂ ಸ್ವಾಧೀನಮಾಡಿಕೊಳ್ಳಬೇಕೆಂದು ಸ್ರಯತ್ನಿಸಿದರು. ಅನಂತರ ಆ ಸೇನಾಜನಗಳು ಕೋಟೆಯ ಮೆಲಕಿನ ತ್ತಿನ ಒಂದಕ್ಕೆ ಮೂರುಮೂರುಜನ ಸ್ತ್ರೀಯರು ತಲೆಯನ್ನು ಕೆದರಿ ಕೊಂಡು ಆಯುಧಗಳನ್ನು ಪಿಡಿದು, ಅತಿಭಯಂಕರವಾದ ರೂಪುಳ್ಳವರಾಗಿ ನಿಂತಿರುವದನ್ನು ಕಂಡು, ಮುಂದೆ ಅಡಿಯಿಡುವದಕ್ಕೆ ತೋರದೆ ದೆಸೆ ಗೆಟ್ಟು ಭಗ್ನದಿಂದ ಹಿಂದು ಮುಂದು ತೋರದೆ ಕೂಗಿಕೊಂಡು ಓಡಿ ಹೋದರು. ಕೋಟೆಯ ಮೇಲಿದ್ದ ನಮ್ಮ ಜನಗಳಿಗೆ ಮಾತ್ರ ಏನೂ ಕಾಣಲಿಲ್ಲ. ಈ ಮೇರೆಗೆ ಸಿನ್ನೆಯೂ ಮೊನ್ನೆಯೂ ನಡೆಯಿತು" ಎಂದು ತಿಳಿದ ವೃತ್ತಾಂತವನ್ನು ಆ ವೀರತ್ತಯ್ಯನು ಬಿನ್ನವಿಸಲು, ಅದನ್ನು ಕೇಳಿ ದೊರೆಗಳವರು ಈ ಸಂಸ್ಥಾನಕ್ಕೆ ಮುಖ್ಯಾಭಿಮಾನಿಯಾಗಿ ಜಗಜ್ಜನನಿ ಯಾದ ಶ್ರೀಚಕಾಮುಂಡೇಶ್ವರಿ ಅಮ್ಮನವರೇ ಈ ರೂಪದಿಂದ ಅವರಿಗೆ ಭಯವನ್ನುಂಟುಮಾಡಿ ಓಡಿಸಿದರೆಂದು ಅತಿಸಂತೋಷಪಟ್ಟು, ಬಹಳ ಸ್ತೋತ್ರಮಾಡಿ ಅಮ್ಮನವರನ್ನು ಪ್ರಾರ್ಥನೆ ಮಾಡುತ್ತಿದ್ದರು. ಅಷ್ಟರ ಲ್ಲಿಯೇ ಶ್ರೀರಂಗಪಟ್ಟಣದಿಂದ ಕಾವೇರಿಹೆಬ್ಬಾರುವೆ ಮಿಂಚುಹೆಬ್ಬಾರುವೆ ರಿಬ್ಬರು ಮೈಸೂರಿಗೆ ದೊರೆಗಳವರ ಸನ್ನಿಧಿಗ ಬಂದು, "ರಣದುಲ್ಲಾ ಖಾನನು ಕಾವೇರಿಯ ದಕ್ಷಿಣಪಾರ್ಶ್ವದಲ್ಲಿರುವ ಸೀಮೆಯನು ನಿಮ್ಮದೇಸರಿ; ಉತ್ತರ ಪಾರ್ಶ್ವದ ಸೀಮೆಯಲ್ಲಿ ಹುಟ್ಟಿದ ಪಣವಲ್ಲಿ ಅಯಾ ಗಡಿಗಳ ಖರ್ಚು ಕಳೆದು ನಿಂತ ಪಣವನ್ನು ನಮಗೆ ಕೊಡಬೇಕೆನ್ನುತ್ತಾನೆ" ಎಂದು ಬಿನ್ನವಿಸಿದರು. ಆಗ ದೊರೆಗಳು ಪ್ರಕೃತಕ್ಕೆ ಇದೇ ಉಚಿತ ವೆಂದಾಲೋಚಿಸಿ, ಹಾಗೆಆಗಲಿ ಎಂದು ಅಪ್ಪಣೆಕೊಟ್ಟ ವಿವರವನ್ನು ಈ ಹೆಬ್ಬಾರುವೆರಂಬ ಬ್ರಾಹ್ಮಣರಿಬ್ಬರೂ ಬಂದು ಹೇಳಲು, ರಣದುಲ್ಲಾ ಖಾನನು ಇದನ್ನು ಪನುಮೆಪ್ಪನಾಯಕನಿಗೆ ತಿಳಿಸಿ, ಅವನಿಗೆ ಸಹಾಯ ವಾಗಿ ಕೆಲವು ಸೇನೆಯನ್ನು ಈ ಪ್ರಾಂತದಲ್ಲಿ ಇರಿಸಿ, ನಿಂತ ಸೇನೆಯನ್ನು ತೆಗೆದುಕೊಂಡು ವಿಜಾಪುರದ ಪಾದಷಾಹರ ಬಳಿಗೆ ಹೊರಟುಹೋದನು.

ತಿರುಚನಾಪಳ್ಳಿಯ ಅರಸು ಕಳುಹಿದ ಎಳ್ಳಿ ಜನ ಕಳ್ಳರ ವಿಚಾರ.—ಈ ಕಂಠೀರವ ನರಸರಾಜ ಒಡೆಯರವರು ಶ್ರೀರಂಗಪಟ್ಟಣದಲ್ಲಿ ಪಟ್ಟಾಭಿಷಿಕ್ತರಾದ ಕೂಡಲೆ ವಿಜಾಪುರದ ಪಾದಷಾಹರ ಕಡೆಯ ರಣದುಲ್ಲಾಖಾನನೆಂಬ ಸರದಾರನು ೪೦ ಸಾವಿರ ಕುದುರೆಗಳ ಸೇನೆಯಿಂ ಕೂಡಿ ಶ್ರೀರಂಗಪಟ್ಟಣವಂ ತೆಗೆದುಕೊಳ್ಳಬೇಕೆಂದು ಬಂದು, ಯುದ್ಧಮಾಡಿ ಇವರ ಪೆಟ್ಟುಗಳಂ ತಾಳಲಾರದೆ ಪರಾಜಿತನಾಗಿ ಓಡಿಹೋದನೆಂಬ ವೃತ್ತಮಾನವನ್ನು ಪ್ರಮೋಥಿ ಸಂವತ್ಸರವಲ್ಲಿ ತಿರುಚನಾಪಳ್ಳಿಯ ಅರಸು ಕೇಳಿ, ಪಟ್ಟಾಭಿಷೇಕಕ್ಕೆ ಮುಂಚೆಯೇ ಇವರು ನಮ್ಮಲ್ಲಿ ಪ್ರಸಿದ್ಧನಾಗಿ ಯುದ್ಧದಿಂದಲೂ ಗೆಲ್ಲಲು ಅಶಕ್ಯನಾದ ಶೂರನಾದ ಜಟ್ಟಿಯನ್ನು ಕಾಳಗದಲ್ಲಿ ಅತಿಚಮತ್ಕಾರವಾಗಿ ಲೀಲಾ ಮಾತ್ರದಿಂದ ಜನರು ಅರಿಯುವಂತ ಕೊಂದುಹಾಕಿ ಹೊರಟುಹೋದರು. ಇವರಿಗ ಈಗ ಪೊಲೆತನವಾಗಿರುವುದರಿಂದ ನಮ್ಮ ಸೀಮೆಯನ್ನೂ ನಮ್ಮನ್ನೂ ಮುಂದೆ ಏನುಮಾಡುವರೋ ಎಂಬ ಭೀತಿಯಿಂದ ಇವರ ಸಂಗಡ ಎದುರಿಗೆ ಯುದ್ಧಮಾಡುವುದಕ್ಕೆ ಸಾಮರ್ಥ್ಯವಿಲ್ಲದೆ ಏನಾದರೂ ಒಂದು ವೆಂಚನೆಯಿಂದ ಸಂಹಾರ ಮಾಡಿಸಬೇಕೆಂದು ಶೂರರಾದ ಎಳ್ಳಿ ಜನ ಕಳ್ಳರಿಗೆ ದ್ರವ್ಯವೆಂ ಕೊಟ್ಟು ಶ್ರೀರಂಗಪಟ್ಟಣದ ದೊರೆಗಳವರ ತಲೆಯಂ ತೆಗೆದುಕೊಂಡು ಬನ್ನಿ ಎಂಬದಾಗಿ ಕೇಳಿ ಕಳುಹಿದನು. ಆ ಕಳ್ಳರು ಪ್ರತ್ಯೇಕಪ್ರತ್ಯೇಕವಾಗಿ ವೇಷಾಂತರವಂ ಧರಿಸಿಕೊಂಡು ಶ್ರೀರಂಗಪಟ್ಟಣಕ್ಕೆ ಬಂದು ಕೆಲವು ದಿವಸ ವಾಸಮಾಡಿ ಇಲ್ಲಿಯ ಮರ್ಮವೆಂ ಚನ್ನಾಗಿ ತಿಳಿದುಕೊಂಡು ಸಮಯವಂ ನಿರೀಕ್ಷಿಸುತ್ತಾ ಬರಲಾನೊಂದು ದಿವಸ ಅರ್ಧರಾತ್ರಿ ವೇಳೆಯಲ್ಲಿ ಜಲಮಾರ್ಗದಿಂದ ಕನ್ನವನ್ನು ತೆಗೆದು ಆಯುಧಪಾಣಿಗಳಾಗಿ ಜನರು ಅರಿಯದಂತೆ ಅರಮನೆಯೊಳಗೆ ಬಂದು ಅಂತಃಪುರವಲ್ಲಿ ದೊರೆಗಳವರು ಒಬ್ಬರೇ ಮಂಚದ ಮೇಲ ಮುಹೂರ್ತಮಾಡಿ ವೀಳೆಯವಂ ಸವಿಯುತಲಿರುವ ಸಮಯದಲ್ಲಿ ನಿದ್ದೆಮಾಳಿಗೆಯು ಮುಂದಣ ದೊಡ್ಡ ಪಜಾರದ ಕಂಭಗಳ ಮರೆಗಳಲ್ಲಿ ಪ್ರತ್ಯೇಕಪ್ರತ್ಯೇಕವಾಗಿ ನಿಂತಿದ್ದರು. ಅವರ ನೆರಳುಗಳಂ ಪರಾಂಬರಿಸಿ ಯಾರೋ ವೆಂಚನೆಯಿಂದ ತಮ್ಮನ್ನು ಸಂಹರಿಸುವದಕ್ಕೆ ಬಂದಿರುವರೆಂದು ತಿಳಿದು ದೊರೆಗಳು ತಮ್ಮ ಸಮೀಪ

ವಲ್ಲಿದ್ದ ವಿಜಯನಾರಸಿಂಹನೆಂಬ ಕತ್ತಿಯಂ ಹಸ್ತಕ್ಕೆ ತೆಗೆದುಕೊಳ್ಳು ವೆಷ್ಟರೊಳಗೆ ಇದನ್ನು ನೋಡಿದ ಆ ೭೫ ಜನರೂ ಒಟ್ಟಾಗಿ ಸುತ್ತು ಗಟ್ಟಿದರು. ಆ ಜನಗಳನ್ನು ತಮ್ಮ ಸಾಧಕಬಲದಿಂದ ಪಟ್ಟವನ್ನು ತಿರುಹಿ ತಲೆಗಳಂ ಹೊಡೆದು ಈ ಪೆಟ್ಟಂ ತಪ್ಪಿಸಿಕೊಂಡು ಸಮೀಪಕ್ಕೆ ಬಂದ ಕೆಲವು ಜನಗಳನ್ನು ತಮ್ಮ ಭುಜಬಲದಿಂದ ಎರಡು ಕಂಕುಳಲ್ಲಿಯೂ ಇರುಕಿಸಿಕೊಂಡು ಕತ್ತುಗಳಂ ಮುರಿದು ಮತ್ತೆ ಕೆಲ ವರನ್ನು ಕಾಲುಗಳಿಂದ ಒದೆದು ನಿರ್ಜೀವರಾಗುವಂತೆ ಕೆಡಹಿ, ಈ ಪರಿ ಯಾಗಿ ಇವರ ಪರಾಕ್ರಮದೆದುರಿಗೆ ನಿಲ್ಲಲಾರದೆ ಓಡಿಹೋಗುವುದಕ್ಕೂ ಅವಕಾಶವಿಲ್ಲದೆ ಕೈಯಲ್ಲಿದ್ದ ಆಯುಧವೆಂ ಕೆಳಕ್ಕೆ ಹಾಕಿ ಪಾದಾಕ್ರಾಂತ ರಾದ ಉಳಿದ ಕೆಲವು ಜನಗಳನ್ನು ಜೀವದೊಡನೆ ಬಿಟ್ಟು, ಬಾಗಿಲ ಮುದ್ರೆಯಂ ಮೊಹರಿ ಹೊರಗೆ ಕಾದುಕೊಂಡಿದ ಗೊಲ್ಲರು ಮುಂತಾದ ಜನಗಳನ್ನು ಕೂಗಿ ಕರೆದು, ಸತ್ತುಬಿದ್ದಿದ್ದ ಕಳ್ಳರನ್ನು ಹೊರಗೆ ಹಾಕಿಸಿ ಉಳಿದ ಸ್ವಲ್ಪ ಜನವೆಂ ಮರುದಿನ ಪ್ರಾತಃಕಾಲದಲ್ಲಿ ಸಭಾ ಮಧ್ಯ ದೊಳು ಅವರು ಬಂದ ಪರಿಯಂ ಚೆನ್ನಾಗಿ ವಿಚಾರಣೆಮಾಡುವ ಸಮಯ ದಲ್ಲಿ ಆ ಜನಗಳು ನಾವು ತಿರುಚನಾಪಳ್ಳಿಯರಸಿನ ಕಡೆಯಿಂದ ನಿಮ್ಮ ತಲೆಯಂ ತೆಗೆದುಕೊಂಡು ಹೋಗುವುದಕ್ಕೆ ಬಂದವರೆಂದು ಹೇಳಿದ ವಿವರಗಳನ್ನು ಚಿತ್ತಕ್ಕೆ ತಂದು, ನೀವುಗಳು ತಿರುಚನಾಪಳ್ಳಿಗೆ ಹೋಗಿ ನಿಮ್ಮ ಅರಸಿಗೆ ಇಲ್ಲಿ ನಡೆದ ವೃತ್ತಾಂತವೆಂ ತಿಳಿಸಿರಿ ಎಂದು ಹೇಳಿ ಕಳುಹಿಸಿದರು.

ಕಂಠೀರವನರಸರಾಜಒಡೆಯರವರ ಪಿತೃಭಕ್ತಿ — ಅನಂತರ ಶಾ॥ ಶಕ ೧೫೬೦ನೇ (A. D. 1639) ಪ್ರಮೋಥಿ ಸಂವತ್ಸರದ ಚೈತ್ರ ಬಹುಳ ೭ನ್ನಲ್ಲಿ ಇವರ ಹೆತ್ತ ತಂದೆಯವರಾದ ಬೆಟ್ಟದ ಚಾಮರಾಜಒಡೆಯರವರು ಗುಂಡಲು ಎಂಬ ಗ್ರಾಮದಲ್ಲಿ ಸ್ವರ್ಗಲೋಕವನ್ನು ಹೊಂದಿದರು. ಮತ್ತು ಅವರ ದೇಹವು ಸಾರ್ಥಕವಾಗುವ ಕಾಲದಲ್ಲಿ ಐಂಬತ್ತು ಜನ ಪತ್ನಿಯರೂ ಸಹಗಮನಮಾಡಿದರು ಎಂಬ ವರ್ತಮಾನವು ಶ್ರೀರಂಗ ಪಟ್ಟಣಕ್ಕೆ ಬರಲು, ಅವರ ಉತ್ತರಕ್ರಿಯೆಗಳನ್ನು ನೆರವೇರಿಸಿ, ಪ್ರತಿ ವರ್ಷದಲ್ಲಿಯೂ ಅವರು ತೀರಿಹೋದ ಪುಣ್ಯದಿವಸದಲ್ಲಿ ತಮ್ಮ ದೇಶ

ದೊಳು ಪ್ರಸಿದ್ಧವಾಗಿರುವ ತೀರ್ಥಕ್ಷೇತ್ರಗಳಲ್ಲಿರುವ ಶಿವ ವಿಷ್ಣು ಮೊದ
ಲಾದ ದೇವರುಗಳ ಚೀವಸ್ಥಾನಗಳಲ್ಲಿ ಆಯಾ ದೇವಸ್ಥಾನದ ಮರ್ಯಾದೆಯ
ಮೇರೆಗೆ ಅಭಿಷೇಕ ದೀಪಾರಾಧನೆ ಉತ್ಸವಗಳು ನಡೆಯುವುದಕ್ಕೆ ಗ್ರಾಮ
ಭೂಮಿಗಳನ್ನು ಕೊಟ್ಟದ್ದಲ್ಲದೆ ಮೇಲುಕೋಟೆ, ನಂಜನಗೂಡು ಮುಂ
ತಾದ ಪ್ರಸಿದ್ಧ ಸ್ಥಳಗಳಲ್ಲಿ ಅವರ ಹೆಸರಿನಿಂದ ಕಲ್ಲಿನ ಮಂಟಪಗಳನ್ನು
ಕಟ್ಟಿಸಿ ಉತ್ಸವಗಳು ನಡೆವಂತೆ ಕಟ್ಟಳೆಯಂ ಮಾಡಿದರು.

ಶ್ರೀರಂಗಪಟ್ಟಣದ ಕೋಟೆಯನ್ನು ಬಲಪಡಿಸಿ ಆಯುಧಶಾಲೆ ಮುಂತಾದ
ವನ್ನು ಕಟ್ಟಿಸಿದ್ದು.—ಇದೇ ಪ್ರಮಾಥಿ ಸಂವತ್ಸರದಲ್ಲಿ ಶ್ರೀರಂಗಪಟ್ಟಣದ
ಕೋಟೆಯು ದುರ್ಬಲವಾಗಿದ್ದರಿಂದ ಶತ್ರುಗಳಿಗೆ ಅವಕಾಶವಾಗದಂತೆ
ಕಟ್ಟಿಸಬೇಕೆಂದು ಶ್ರೀರಂಗಪಟ್ಟಣದ ಉತ್ತರಪಾರ್ಶ್ವದ ಕಾವೇರೀನದಿಗೆ
ಅಡ್ಡ ಕಟ್ಟೆಗಳನ್ನು ಹಾಕಿಸಿ, ಶುಕತೀರ್ಥದಲ್ಲಿ ಬಂದು ದೊಡ್ಡ ಸರೋವರ
ವನ್ನು ರಂಗನಾಥ ದೇವರ ಗಜೇಂದ್ರಮೋಕ್ಷಕ್ಕೆ ಉಪಯೋಗಿಸುವಂತೆ
ಕಟ್ಟಿಸಿ, ದೊಡ್ಡ ದೊಡ್ಡ ಕಲ್ಲುಗಳಿಂದ ಕೋಟೆ, ಕೊತ್ತಲ, ಅಗಳುಗಳನ್ನು
ವಿಸ್ತಾರವಾಗಿ ಕಟ್ಟಿಸಿ, ಈ ಕೋಟೆಗೆ ಶತ್ರುಗಳು ಬಂದು ಮುತ್ತಿಗೆ
ಹಾಕಿದರೂ ಕೋಟೆಯೊಳಗಿರುವ ಜನಗಳು ಸುಖದಲ್ಲಿರುವಂತೆ ಬತ್ತ,
ರಾಗಿ, ಹುರಳಿ, ಕಡಲೆ, ಹೆಸರು, ಮುಂತಾದ ಸಕಲಧಾನ್ಯಗಳು, ಉಪ್ಪು,
ಬೆಲ್ಲ, ಹುಣಸೆಹಣ್ಣು, ಮೆಣಸಿನಕಾಯಿ, ಮೆಂತ್ಯ, ಜೀರಿಗೆ, ಅರಿಸಿನ,
ಅಡಕೆ, ಮುಂತಾದ ಕಿರಾಣಿ ಜಿನಸುಗಳು, ಹಚ್ಚಡಗಳು, ಎಣ್ಣೆ ತುಪ್ಪದ
ಕೊಳಗಳು, ನೀರುಮಜ್ಜಿಗೆ ಇವು ಮುಂತಾದ ಪದಾರ್ಥಗಳನ್ನು ತುಂ
ಬುವುದಕ್ಕೆ ದೊಡ್ಡ ಉಗ್ರಾಣಗಳನ್ನು, ಮದ್ದಿನ ಮನೆಗಳನ್ನು, ಜಾನ
ಸಾಲೆಯನ್ನೂ, ಕತ್ತಿ, ಕಠಾರಿ, ಗುರಾಣಿ, ತುಪಾಕಿ, ಅಂಬು, ಸಿಂಗಾಡಿ,
ಬಾಣ, ಬತ್ತಳಿಕೆ, ಮೆದ್ದು, ಗುಂಡು, ಜಕೂರಿ, ಕತ್ತರಿ, ಮುಂತಾದ
ಯುದ್ಧಸಾಮಗ್ರಿಗಳನ್ನಿರಿಸುವದಕ್ಕೆ ಆಯುಧಶಾಲೆಗಳನ್ನೂ ಕಟ್ಟಿಸಿ,
ಆನೆ, ಕುದುರೆ, ಒಂಟೆ, ಎತ್ತು, ಮುಂತಾದ ರಾಸುಗಳಿಗೆ ಹುಲ್ಲುಮೆದೆಗ
ಳನ್ನು ಹಾಕಿಸಿದರು.

ಮೈಸೂರಕೋಟೆಯನ್ನೂ ಅರಮನೆಯನ್ನೂ ಬಲಪಡಿಸಿದ್ದು.—ರಾಜಒಡೆ
ಯರವರು ನಳಸಂವತ್ಸರದಲ್ಲಿ ಮೈಸೂರ ಕೋಟೆಯನ್ನು ವಿಸ್ತಾರ

ವಾಗಿ ಕಟ್ಟಿಸಬೇಕೆಂದು ಪೂರ್ವದಲ್ಲಿದ್ದ ಹಳೆಯ ಕೆರೆಯು ಮುಚ್ಚಿ ಹೋಗಿದ್ದ ಭೂಮಿಯನ್ನು ಒಳಕ್ಕೆ ಸೇರಿಸಿಕೊಂಡು ತಳಹದಿಯಂ ತೆಗೆಸಿ, ಮೊಹಣಸಿಟ್ಟು ೧ಕ್ಕೆ ನೀಳ ೨೫೫ ಮೊರು ಮೆಲಕಿನ ತೆನೆ ೩೫೦, ತೆಂಕಣಸಿಟ್ಟು ೧ಕ್ಕೆ ನೀಳ ೨೦೫॥ ಮೊರು ತೆನೆ ೪೬೦, ಪಡುವಣಸಿಟ್ಟು ೧ಕ್ಕೆ ನೀಳ ೨೮೫ ಮೊರು ತೆನೆ ೩೯೦, ಬಡಗಣಸಿಟ್ಟು ೧ಕ್ಕೆ ನೀಳ ೪೦೧ ಮೊರು ತೆನೆ ೫೧೦, ಈ ಮೇರೆಗೆ ಅಳತೆಯಂ ಮಾಡಿ, ತೃಣೇಶ್ವರಸ್ವಾಮಿಯ ದೇವಸ್ಥಾನವೆಂ ಒಳಕ್ಕೆ ಸೇರಿಸಿಕೊಂಡು ಕಾಮಗಾರಿ ಮಾಡಿಸುತಲಿರುವಷ್ಟರಲ್ಲಿಯೇ, ಚಾಮರಾಜಒಡೆಯರವರಿಗೆ ಪಟ್ಟವಾದ್ದರಿಂದ, ಚಾಮರಾಜಒಡೆಯರವರು ಅದೆ ಮೇರೆಗೆ ಕೋಟೆ ಕೊತ್ತಲಗಳನ್ನೂ ಮೆಲಕಿನ ತೆನೆಗಳನ್ನೂ ಕಟ್ಟಿಸಿದರು. ಈ ಕಂಠೀರವ ನರಸರಾಜಒಡೆಯರವರು ಇದನ್ನು ಇನ್ನೂ ಬಲಪಡಿಸಿದರು. ಮತ್ತು ಮೈಸೂರ ಅರಮನೆಯು ಶಿಥಿಲವಾಗಿದುದರಿಂದ ಜಂತೆವತೊಟ್ಟ, ಸಮುಚವತೊಟ್ಟ, ಸೌಂದರ್ಯ ವಿಲಾಸದತೊಟ್ಟ, ನಾಮತೀರ್ಥದತೊಟ್ಟ ಮುಂತಾದ ತೊಟ್ಟಿಗಳನ್ನೂ ಒಳಬಾಗಿಲಲ್ಲಿ ಸಾಲಗೇರಿಗಳನ್ನೂ ವಿಸ್ತಾರವಾಗಿ ಕಟ್ಟಿಸಿ, ಅರಮನೆಯಲ್ಲಿಯೇ ಇದ್ದುಕೊಂಡು ಉಗ್ರಾಣದ ಪದಾರ್ಥಗಳನ್ನೂ, ಹಪ್ಪಳ ಉಪ್ಪಿನಕಾಯಿ ಮುಂತಾದ ಪದಾರ್ಥಗಳನ್ನೂ ಅಚ್ಚುಕಟ್ಟಾಗಿ ಮಾಡಿಸಿ ಶ್ರೀರಂಗಪಟ್ಟಣದ ಅರಮನೆಗೆ ಕಳುಹಿಸುವುದಕ್ಕೆ ಕೆಲವುಜನ ಅವ್ವೇರುಗಳನ್ನೂ, ಇದರ ವಿಚಾರಣೆ ಮಾಡುವುದಕ್ಕೆ ಹೆಚ್ಚಾಗಿ ಇಬ್ಬರು ಗುರಿಕಾರರು ಕರಣಿಕರು ಮುಂತಾದ ಜನಗಳನ್ನೂ ನೇಮಿಸಿದರು. ಮತ್ತು ಕೋಟೆಯನ್ನು ಭದ್ರಪಡಿಸಿ, ಈವೂರ ಕಾವಲು ಕಟ್ಟಳೆಗೆ ಶಿಲೆಕಾರರು ಮೊದಲಾದ ಜನಗಳನ್ನೂ ನೇಮಿಸಿದರು.

ಮೈಸೂರಲ್ಲಿ ಫಿರಂಗಿಗಳನ್ನಿಡಿಸಿದ್ದು.—ಅಲಗಿನ ಚಾವಡಿಯಲ್ಲಿ ಮಾಡಿಸಿದ ಫಿರಂಗಿಗಳನ್ನು ಕೊತ್ತಲಗಳಲ್ಲಿ ಇರಿಸಿದರು. ಅದರ ವಿವರ:—

ಒಳಕೋಟೆಯ ಕೊತ್ತಲಗಳಲ್ಲಿರಿಸಿರುವುದು.

೧. ಅಗ್ನೇಯಭಾಗದಲ್ಲಿ ನೀಳ ೧೦॥ ಮೊಳವೂ ಸುತ್ತು ೨॥॥
ಮೊಳವೂ ಗುಂಡು ೬ ಅಂಗುಲವೂ ಉಳ್ಳ ರಾಮಚಂದ್ರ
ನೆಂಬ ಫಿರಂಗಿ ೧

೮. ನೈಋತ್ಯಭಾಗದಲ್ಲಿ ನೀಳ ೧೦ ಮೊಳವೂ ಸುತ್ತು ೭॥ ಮೊಳವೂ ಗುಂಡು ೫॥ ಅಂಗುಲವೂ ಉಳ್ಳ ರಾಮೇಶ್ವರ ನೆಂಬ ಫಿರಂಗಿ ೧

೯. ಅರಮನೆಯ ಹಿಂದಣ ಮೆಣ್ಣು ಕೊತ್ತಲದಲ್ಲಿ ನೀಳ ೮॥ ಮೊಳವೂ ಸುತ್ತು ೭। ಮೊಳವೂ ಗುಂಡು ೪ ಅಂಗುಲವೂ ಉಳ್ಳ ಮುದ್ದುಕೃಷ್ಣ ನೆಂಬ ಫಿರಂಗಿ ೧

೪. ಈಶಾನ್ಯದಿಕ್ಕಿನಲ್ಲಿ ಅರಮನೆಯ ಮುಂಭಾಗದ ಚಾಮುಂಡೇಶ್ವರಿಯ ಕೊತ್ತಲದಲ್ಲಿ ನೀಳ ೭೦ ಮೊಳವೂ ಸುತ್ತು ೫ ಮೊಳವೂ ಗುಂಡು ೯ ಅಂಗುಲವೂ ಉಳ್ಳ ಲಕ್ಷ್ಮೀರಮಣನೆಂಬ ಫಿರಂಗಿ ೧

ಹೊರಕೋಟೆಯ ಕೊತ್ತಲಗಳಲ್ಲಿರಿಸಿರುವುದು.

೫. ವಾಯವ್ಯಭಾಗದಲ್ಲಿ ನೀಳ ೧೦ ಮೊಳವೂ ಸುತ್ತು ೩ ಮೊಳವೂ ಉಳ್ಳ ಚಾಮುಂಡೇಶ್ವರಿ ಎಂಬ ಫಿರಂಗಿ ೧

೬. ಇದಕ್ಕೆ ಮೂಡಲಾಗಿ ಬಡಗಣ ಬಾಗಿಲಮೇಲೆ ಇರುವ ಹುಲಿಮೊಕದ ಕೊತ್ತಲದಲ್ಲಿ ನೀಳ ೭ ಮೊಳವೂ ಸುತ್ತು ೧ ಮೊಳವೂ ಗುಂಡು ೭ ಅಂಗುಲವೂ ಉಳ್ಳ ನಾಗರಮೆರಿ ಎಂಬ ಫಿರಂಗಿ ೧

೭. ಇದಕ್ಕೆ ಮೂಡಲಾಗಿ ಜೆಣಗೌಡನ ಪಟ್ಟಯ ಬಳಿಯಲ್ಲಿ ನೀಳ ೧೪ ಮೊಳವೂ, ಸುತ್ತು ೭॥ ಮೊಳವೂ, ಗುಂಡು ೫॥ ಅಂಗುಲವೂ ಉಳ್ಳ ರಂಗನಾಥನೆಂಬ ಫಿರಂಗಿ ೧

೮. ಇದಕ್ಕೆ ಮೂಡಲಾಗಿ ನೀಳ ೧೪ ಮೊಳವೂ, ಸುತ್ತು ೩ ಮೊಳವೂ, ಗುಂಡು ೪॥ ಅಂಗುಲವೂ ಉಳ್ಳ ಭೈರವನೆಂಬ ಫಿರಂಗಿ ೧

೯. ಈಶಾನ್ಯ ದಿಕ್ಕಿನಲ್ಲಿ ನೀಳ ೧೪ ಮೊಳವೂ, ಸುತ್ತು ೩ ಮೊಳವೂ, ಗುಂಡು ೬. ಅಂಗುಲವೂ ಉಳ್ಳ ರಾಮಬಾಣ ವೆಂಬ ಫಿರಂಗಿ ೧

೧೦. ಇದಕ್ಕೆ ತೆಂಕಲು ನೀಳ ೧೦॥ ಮೊಳವೂ, ಸುತ್ತು ೬॥ ಮೊಳವೂ, ಗುಂಡು ೫ ಅಂಗುಲವೂ ಉಳ್ಳ ಉಗ್ರನರಸಿಂಹನೆಂಬ ಫಿರಂಗಿ ೧

೧೧. ಮೇಲೆ ಹೇಳಿದವುಗಳಲ್ಲದೆ ಚಿಕ್ಕ ಫಿರಂಗಿ ೧

ಕೋಟೆಕೊತ್ತಲುಗಳಲ್ಲಿರಿಸಿರುವ ಗುಂಡುಗಳ ವಿವರ.

ಹಿಂದಿನಿಂದ ವಿಲಂಬಿಸಂವತ್ಸರದವರೆಗಿಪ್ಪ ದೊಡ್ಡ ಗುಂಡುಗಳು			೧,೯೦೭
ಸಣ ಗುಂಡುಗಳು	....	....	೬,೧೦೦
ಹೆರಿಳಕಾಯಿ ಗಾತ್ರದ ಗುಂಡುಗಳು	....	....	೩,೦೦೦
ಕಬ್ಬಿಣದ ಗುಂಡುಗಳು	....	....	೨೩,೦೦೦
ವಿಕಾರಿ ಸಂವತ್ಸರದಲ್ಲಿ ಮಾಡಿದ ದೊಡ್ಡ ಗುಂಡುಗಳು			೪,೫೦೦
ಚಿಕ್ಕ ಗುಂಡುಗಳು	....	....	೫,೩೧೨
ಒಟ್ಟು ಗುಂಡುಗಳು			೪೩, ೩೩೯

ಇದಲ್ಲದೆ ಯುದ್ಧಕಾಲದಲ್ಲಿ ಗುಂಡುಗಳನ್ನು ಹೊಡೆದರೆ ಅವು ಬಡೆದು ಅವುಗಳೊಳಗೆ ತುಂಬಿರುವ ಚೂರಿ, ಕತ್ತರಿ, ಕಠಾರಿ, ಮೊಳೆ, ಸಣ ಗುಂಡು ಮೊದಲಾವವುಗಳಿಂದ ಬಹುಜನಗಳು ಹತರಾಗುವಂತೆ ಅನೇಕವಾಗಿ ಮಾಡಿಸಿರುವ ಕಬ್ಬಿಣದ ಟೊಳ್ಳುಗುಂಡುಗಳನ್ನೂ, ತುಪಾಕಿಗುಂಡುಗಳನ್ನೂ, ಅವುಗಳನ್ನು ಇರಿಸುವದಕ್ಕೆ ಮನೆಗಳನ್ನೂ ಮೆದ್ದಿನಮನೆಗಳನ್ನೂ ಮತ್ತು ಶ್ರೀರಂಗಪಟ್ಟಣದಲ್ಲಿ ಮಾಡಿರುವಂತೆ ಧಾನ್ಯ ಮುಂತಾದ ಸಕಲ ಪದಾರ್ಥಗಳನ್ನು ತುಂಬುವುದಕ್ಕೆ ಉಗ್ರಾಣಗಳನ್ನೂ ಮಾಡಿಸಿದರು.

ಪೂರ್ವದಲ್ಲಿ ಹಳೆಯ ಕೆರೆಯ ಕೋಡಿಯಲ್ಲಿ ತಮ್ಮ ಹೆತ್ತಪ್ಪಾಜಿಯವರಾದ ಬೊಳ್ಳಚಾಮರಾಜಒಡೆಯರವರ ದಹನಸ್ಥಳಮೆಂಟಪದ ತೋಟದಲ್ಲಿ ಬಗೆಬಗೆಗಳಾದ ಫಲಪುಷ್ಪವೃಕ್ಷಗಳನ್ನು ಹಾಕಿಸಿ, ಶೃಂಗಾರ ತೋಟವೆಂಬದಾಗಿ ಹೆಸರನ್ನಿಟ್ಟು, ತ್ರಿಣೇಶ್ವರ ದೇವಸ್ಥಾನಕ್ಕೆ ದಕ್ಷಿಣ ಪಾರ್ಶ್ವದಲ್ಲಿ ಕಾಶಿಯ ಕೆಲಸದಿಂದ ವಿಸ್ತಾರವಾಗಿ ಸರೋವರವನ್ನು

ಕಟ್ಟಿಸಿ, ಆ ಸರೋವರಕ್ಕೆ ಶೃಂಗಾರ ತೋಟವ ಕೊಳವೆಂಬದಾಗಿ ನಾಮ ಧೇಯವನ್ನಿಟ್ಟುಮಾಡಿ, ತ್ರಿಣೇಶ್ವರಸ್ವಾಮಿದೇವಸ್ಥಾನದಲ್ಲಿ ಕೈಸಾಲೆಯಂ ಕಟ್ಟಿಸಿ ಪಂಚಲಿಂಗ, ದಕ್ಷಿಣಾಮೂರ್ತಿ, ಕ್ಷೇತ್ರಪಾಲ, ಕುಮಾರಸ್ವಾಮಿ, ಸೂರ್ಯನಾರಾಯಣ ಮುಂತಾದ ದೇವರುಗಳನ್ನೂ, ಪೆರಿಪಟ್ಟಣದಿಂದ ತಮಗೆ ಸ್ವಪ್ನಲಬ್ಧವಾಗಿ ಬಂದ ಚಾಮುಂಡೇಶ್ವರಿ ಅಮ್ಮನವರನ್ನೂ ಸಹ ಪ್ರತಿಷ್ಠೆಮಾಡಿಸಿ, ಈ ದೇವಸ್ಥಾನದಲ್ಲಿ ತಮ್ಮ ಭಕ್ತವಿಗ್ರಹವು ಕೈ ಜೋಡಿಸಿಕೊಂಡಿರುವಂತೆ ನಿರ್ಮಿಸಿದರು. ಮತ್ತು ಈ ಪೂರ ಲಕ್ಷ್ಮೀರಮಣಸ್ವಾಮಿಯವರ ದೇವಸ್ಥಾನದ ಹಿಂಭಾಗದಲ್ಲಿ ನಿಸ್ತಾರವಾಗಿ ಕಲ್ಯಾಣಮಂಟಪವನ್ನೂ ಉಭಯ ಮುಚ್ಚಳದ ಮಂಟಪವನ್ನೂ ಸಹ ಕಟ್ಟಿಸಿ, ದೇವಸ್ಥಾನಗಳಂ ಜೀರ್ಣೋದ್ಧಾರಮಾಡಿ ಕೆಲವು ಗ್ರಾಮ ಭೂಮಿಗಳನ್ನು ಕೊಟ್ಟು ತಸದೀಕನ್ನಿಟ್ಟುಮಾಡಿದರು.

ಬಿಜಾಪುರದಲ್ಲಿ ರಣದುಲ್ಲಾಖಾನನಿಗೆ ಸೇನಾಧಿಪತ್ಯ ತಪ್ಪಿದ್ದು.—ವಿಕ್ರಮ ಸಂವತ್ಸರದಲ್ಲಿ ಮೊದಲು ರಣದುಲ್ಲಾಖಾನನಿಂದ ಪರಾಜಿತನಾದ ಇಕ್ಕೇರಿ ವೀರಭದ್ರನಾಯಕನು, ತನ್ನ ಕಡೆಯ ನಿಯೋಗಿಗಳಾದ ಪೂವಯ್ಯ, ಪುರುಷೋತ್ತಮಯ್ಯ ಎಂಬಿಬ್ಬರ ಸಂಗಡ ಬಿಜಾಪುರದ ಪಾದಷಾಹರ ಬಳಿಗೆ ಕೆಲವು ದ್ರವ್ಯವಸ್ತ್ರಾಭರಣಗಳಂ ಕೊಟ್ಟು ತಕ್ಕಮಾತುಗಳನ್ನೂ ಹೇಳಿ ಕಳುಹಲು, ಆ ನಿಯೋಗಿಗಳು ಪಾದಷಹಾರಿಗೆ ವಸ್ತ್ರಾಭರಣಗಳನ್ನೊಪ್ಪಿಸಿ ಅವರನ್ನು ಕುರಿತು "ಪೂರ್ವದಲ್ಲಿ ಶ್ರೀರಂಗಪಟ್ಟಣವೆಂ ಸಾಧಿಸುವುದಕ್ಕೆ ರಣದುಲ್ಲಾಖಾನನ ಸಂಗಡ ೪೦ ಸಾವಿರ ಕುದುರೆಗಳನ್ನೂ ಬಸವಾಪಟ್ಟಣದ ಹನುಮೆಪ್ಪನಾಯಕನನ್ನೂ ನಾಗಮಂಗಲದ ಚಿಕ್ಕನ್ನಯ್ಯನನ್ನೂ ಕಳುಹಿಸಿಕೊಟ್ಟಿರಿ. ಆಗ ರಣದುಲ್ಲಾಖಾನನು ಅಲ್ಲಿಯ ಮರ್ಮವನ್ನು ತಿಳಿದಿರುವ ಚಿಕ್ಕನ್ನಯ್ಯನ ಮಾತನ್ನು ಕೇಳದೆ ಹನುಮೆಪ್ಪನಾಯಕನ ಮಾತಿನಮೇಲೆ ಸಂಧಿಮಾಡಿಕೊಂಡು, ಖಂಡಣೆಯ ಪಣಕ್ಕೆ ಆ ಹನುಮೆಪ್ಪನಾಯಕನನ್ನೇ ಗೊತ್ತುಮಾಡಿ ಬಂದಿರುತ್ತಾನೆ. ಶ್ರೀರಂಗಪಟ್ಟಣದ ದೊರೆಗಳು ಖಂಡಣೆ ಪಣವನ್ನು ಕೊಡತಕ್ಕವರಲ್ಲ; ಅವರು ಮಹಾ ಪರಾಕ್ರಮಶಾಲಿಗಳು" ಎಂದು ಹೇಳಿದರು. ಆ ಮಾತನ್ನು ಕೇಳಿದ ಪಾದಷಾಹರು ಇದನ್ನು ಪರೀಕ್ಷಿಸಬೇಕೆಂದು ತಮ್ಮ ಕಡೆಯ ಬುದ್ಧಿವಂತರಾದ

ನಾಲ್ವರು ಅಧಿಕಾರಿಗಳನ್ನು ಕರೆದು, ತಮ್ಮ ಖಂಡಣೆಯ ಮೇರೆಗೆ ಈವೇರಿಯ ಉತ್ತರ ಪಾರ್ಶ್ವದ ಸೀಮೆಯ ಹಣವನ್ನು ಪ್ರಮೋಥಿ ಸಂವತ್ಸರದ ಹುಟ್ಟುವಳಿಯ ಲೆಕ್ಕದ ಮೇರೆಗೆ ಕೊಡಬೇಕೆಂಬುದಾಗಿ ಶ್ರೀರಂಗಪಟ್ಟಣದ ದೊರೆಗಳನ್ನು ಕೇಳುವಂತೆ ಕಟ್ಟುಮಾಡಿ ಕಳುಹಿದರು. ಅವರು ಬಂದು ಹಾಗೆಯೇ ಕೇಳಲು, ಈ ದೊರೆಗಳವರು, ತಾವು ಕೊಡುವುದಿಲ್ಲವೆಂದು ಹೇಳಿ ಕಳುಹಿದರು. ಅವಕ್ಕೆ ಪಾದಷಾಹರು ರಣದುಲ್ಲಾ ಖಾನನ ಮೇಲೆ ಬಲು ಕೋಪಗೊಂಡು, ಅವನ ಅಧಿಕಾರವೆಂ ತೆಗೆದು, ಅದೇ ೪೦ ಸಾವಿರ ಕುದುರೆಗಳ ಸೇನಾಧಿಪತ್ಯವನ್ನು ಖಾನಖಾನನೆಂಬುವನಿಗೆ ನೇಮಕವಾಡಿ, ನಾಗಮಂಗಲದ ಚನ್ನಯ್ಯನನ್ನೂ ಇಕ್ಕೇರಿ ವೀರಭದ್ರ ನಾಯಕನನ್ನೂ ಅವನ ಸಹಾಯಕ್ಕೆ ಕೊಟ್ಟು ಶ್ರೀರಂಗಪಟ್ಟಣವನ್ನು ಸಾಧಿಸಿಕೊಂಡು ಬರುವಂತೆ ಕಟ್ಟುಮಾಡಿ ಕಳುಹಿಸಿದರು.

ಸೇನಾಧಿಪತಿ ಖಾನಖಾನ.—ಅನಂತರ ಈ ಖಾನಖಾನನು ಸೇನಾಸಹಿತನಾಗಿ ಬರುವ ಮಾರ್ಗದಲ್ಲಿ "ಕೆಲವುಸೇನೆಯೊಡಗೂಡಿ ಬಸವಾಪಟ್ಟಣವ ಹನುಮಪ್ಪನಾಯಕನ ಬಳಿಗೆ ಹೋಗಿ ಶ್ರೀರಂಗಪಟ್ಟಣದ ಖಂಡಣೆ ಹಣವನ್ನು ತೆಗೆದುಕೊಂಡುಬರುವುದು" ಎಂದು ನಾಗಮಂಗಲದ ಚನ್ನಯ್ಯನೊಡನೆ ಹೇಳಿಕಳುಹಿಸಲು, ಅವನು ಹನುಮಪ್ಪನಾಯಕನ ಬಳಿಗೆ ಹೋಗಿ, "ನೀನು ಪೂರ್ವದಲ್ಲಿ ಶ್ರೀರಂಗಪಟ್ಟಣದಲ್ಲಿ ಖಂಡಣೆ ಮಾಡಿಕೊಂಡ ಮೇರೆಗೆ ಹಣವನ್ನು ತೆಗೆದುಕೊಂಡು ಬಂದರೆ ಆ ಹಣವನ್ನು ಪಾದಷಾಹರ ಬಳಿಗೆ ಕಳುಹಿಸಬೇಕಾಗುತ್ತೆ. ನೀನು ಅಲ್ಲಿಗೆ ಹೋಗಿ ಆ ಹಣವನ್ನು ತಾರದೆ ತಂಟೆಮಾಡಿದರೆ ನಿನ್ನನ್ನು ಪಾದಷಾಹರ ಬಳಿಗೆ ಹಿಡಿದು ಕಳುಹಿಸಿಕೊಡುವಂತೆ ಅಪ್ಪಣೆ ಆಗಿದೆ" ಎಂದು ಹೇಳಿದನು. ಆ ಮಾತನ್ನು ಕೇಳಿದ ಹನುಮಪ್ಪನಾಯಕನು ತಾನು ಅಲ್ಲಿಗೆ ಹೋಗಿ ತರುವುದಿಲ್ಲವೆಂದು ಹೇಳಿದ್ದಲ್ಲದೆ, ಚನ್ನಯ್ಯನು ಬಲಾತ್ಕಾರದಿಂದ ತನ್ನನ್ನು ಹಿಡಿದು ಕಳುಹಿಸುವನೆಂದು ತಿಳಿದು, ಸೇನಾಸಹಿತನಾಗಿ ಬಂದು ಆ ನಾಗಮಂಗಲದ ಚನ್ನಯ್ಯನನ್ನು ಯುದ್ಧದಲ್ಲಿ ಕೊಂದುಹಾಕಿದನು. ಈ ವೃತ್ತಾಂತವನ್ನು ಕೇಳಿದ ಖಾನಖಾನನು, ಶ್ರೀರಂಗಪಟ್ಟಣದ ಮರ್ಮವನ್ನು ತಿಳಿದ ಚನ್ನಯ್ಯನು ತೀರಿಹೋದನು; ಇಕ್ಕೇರಿವೀರಭದ್ರ

ನಾಯಕನು ಇಲ್ಲಿಯ ಮೆರ್ಮೆವೆಂ ತಿಳಿದವನೆನ್ನಲ್ಲ. ಮಹಾಪರಾಕ್ರಮ ಶಾಲಿಗಳಾದ ಶ್ರೀರಂಗಪಟ್ಟಣದ ದೊರೆಗಳ ಸಂಗಡ ಯುದ್ಧಮಾಡುವದಕ್ಕೆ ತನಗೆ ಸಾಮರ್ಥ್ಯವಿಲ್ಲ ಎಂತಲೂ, ಮಧ್ಯಮಾರ್ಗದಿಂದಲೇ ಹಿಂತಿರುಗಿ ಹೋಗಿ, ತಂಜೆ ಎಂಬ ಗ್ರಾಮಕ್ಕೆ ಮುತ್ತಿಗೆಹಾಕಿ, ಅದನ್ನು ಸಾಧಿಸ ಬೇಕೆಂತಲೂ ಆಲೋಚಿಸಿ, ತುಂಟತನವಂ ಮಾಡಿದ ಬಸವಾಪಟ್ಟಣದ ಹನುಮಪ್ಪನಾಯಕನನ್ನು ಯುದ್ಧದಲ್ಲಿ ಹೊಡೆದುಹಾಕಿ ಕೆಲವು ಸೇನೆ ಯನ್ನು ತಂಜೆ ಎಂಬ ಸೀಮೆಯಲ್ಲಿರಿಸಿ, ಈ ವಿವರಗಳನ್ನು ಪಾದಷಾಹರ ಬಳಿಗೆ ಹೋಗಿ ತಿಳಿಸಲು, ಪಾದಷಾಹರು ಇವನ ಮೇಲೆ ಬಹಳ ಕೋಪ ಮಾಡಿ ಇವನ ಸೇನಾಧಿಪತ್ಯವಂ ತೆಗೆದು, ಮುಸ್ತಾಫ್‌ಖಾನಂಬವನಿಗೆ ಇದೇ ೪೦ ಸಾವಿರ ಕುದುರೆ ಮುಂತಾದ ಸೇನೆಯ ಅಧಿಕಾರವನ್ನು ನೇಮಕಮಾಡಿ ಶ್ರೀರಂಗಪಟ್ಟಣವನ್ನು ಸಾಧಿಸಿಕೊಂಡು ಬರುವುದೆಂದು ಹೇಳಿ ಕಳುಹಿಸಿದರು.

ಸೇನಾಪತಿ ಮುಸ್ತಾಫ್‌ಖಾನನು.—ಆ ಮೇಲೆ ಮುಸ್ತಾಫ್‌ಖಾನನು ತಂಜೆ ಎಂಬ ಪಾಳೆಯಪಟ್ಟನ್ನು ಸಾಧಿಸಿಕೊಂಡು ಬಹಳ ಸೇನಾಸಮೇತ ನಾಗಿ ಶ್ರೀರಂಗಪಟ್ಟಣವಂ ಸಾಧಿಸುವುದಕ್ಕೆ ಬರುತಲಿದಾನೆಂಬ ವರ್ತ ಮಾನವನ್ನು ದೊರೆಗಳವರು ಕೇಳಿ, ತಮ್ಮ ದಳವಾಯಿ ತಿಮ್ಮಪ್ಪನಾಯ ಕನ ಸಂಗಡ ಸೇನೆಗಳಂ ಕೊಟ್ಟು ಮುಸ್ತಾಫ್‌ಖಾನನು ಇಲ್ಲಿಗೆ ಬಾರ ನಂತೆ ಯುದ್ಧದಲ್ಲಿ ಹೊಡೆದೋಡಿಸಿ ಬಿಡತಕ್ಕದ್ದು ಎಂಬದಾಗಿ ಹೇಳಿಕಳು ಹಲು, ಬೆಳ್ಳೂರ ಬಳಿ ಚಂದಮ್ಮನ ಹಳ್ಳಿಯ ಸವಿಾಪವಲ್ಲಿ ಇಳಿದಿದ್ದ ಮುಸ್ತಾಫ್‌ಖಾನನು "ಪೂರ್ವದ ಖಂಡಣೆಯ ಮೇರೆಗೆ ಹಣವನ್ನು ಕೊಟ್ಟರೆ ನಾವು ಹೊರಟು ಹೋಗುವೆವು. ಇಲ್ಲದಿದ್ದರೆ ಯುದ್ಧಮಾಡಿ ಶ್ರೀರಂಗಪಟ್ಟಣವನ್ನು ತೆಗೆದುಕೊಳ್ಳುವೆವು" ಎಂದು ನಿಯೋಗಿ ಹೂವೆ ಯ್ಯನೊಡನೆ ಹೇಳಿಕಳುಹಿಸಿದನು. ಈ ಮಾತಂ ಕೇಳಿ, ದೊರೆಗಳವರು "ನೀನು ಅವರ ಸಂಗಡ ಯುದ್ಧಮಾಡಿ ಓಡಿಸಿಬಿಡದೆ ಇಲ್ಲಿಗೆ ಬಂದು ಹೇಳಿದ ಮಂದ ನೀನು ಈ ಅಧಿಕಾರಕ್ಕೆ ಯೋಗ್ಯನಲ್ಲ" ಎಂದು ದಳವಾಯಿ ತಿಮ್ಮಪ್ಪ ನಾಯಕನ ಮೇಲೆ ಬಹಳ ಕೋಪಮಾಡಿ, ವಿಕ್ರಮ ಸಂವತ್ಸರದ ಪುಷ್ಯ ಬಹುಳ ೬ಲ್ಲಿ ಇವನ ಅಧಿಕಾರವಂ ತೆಗೆದು, ಇದೇ ದಿವಸ

ನಂಜರಾಜಯ್ಯನೆಂಬವನಿಗೆ ದಳವಾಯಿತನವಂ ನೇಮಕಮಾಡಿ ತಾವು ಚತುರಂಗಸೇನಾಸಮೇತರಾಗಿ ಆ ನಂಜರಾಜಯ್ಯನೊಡನೆ ಹೊರಟು ಮುಸ್ತಾಫ್ಖಾನನ ಸಂಗಡ ತಮ್ಮ ಭುಜಪರಾಕ್ರಮದಿಂದ ಬಹಳ ಯುದ್ಧಮಾಡಿ, ಆನೆಗಳನ್ನು ಹೊಡೆದೋಡಿಸಿ, ಕುದುರೆಗಳ ಕತ್ತುಗಳನ್ನು ಕತ್ತರಿಸಿ, ಒಂಟೆಗಳು ಓಡುವುದಕ್ಕವಕಾಶವಿಲ್ಲದಂತೆ ಮಾಡಿ, ಕತ್ತಿ ಹಿಡಿದಿರುವರ ಕೈಗಳನ್ನು ಕಡಿದು, ಬಂಡಿಗಳಂ ಬಯಲುಮಾಡಿ, ತುಪಾಕಿಗಳನ್ನು ಹಿಡಿಯುವಂತೆ ಮಾಡಿದು, ಈ ಪರಿಯಾಗಿ ಜನರಂ ಕಾಡುತಿರಲು ಮಾಡುತಲಿರುವ ಇವರ ಎದುರಿಗೆ ನಿಲ್ಲಲಾರದೆ ಮುಸ್ತಾಫ್ಖಾನನು ಮುಂತಾದ ಶೂರರೆಲ್ಲರೂ ತಮ್ಮ ಪ್ರಾಣಗಳನ್ನುಳಿಸಿಕೊಂಡು ಜನಗಳಿಗೆ ಮುಖವೆನ್ನು ತೋರಿಸದೆ ಓಡಿಹೋದರು. ಬಳಿಕ ಹತಶೇಷ ಜನರೆಲ್ಲರೂ ಪಾದಾಕ್ರಾಂತರಾಗಲು, ಈ ರಣಧೀರ ಕಂಠೀರವ ನರಸರಾಜಒಡೆಯರವರು ಆ ದಂಡಿನಲ್ಲಿದ್ದ ಆನೆ, ಕುದರೆ, ಒಂಟೆ, ವಸ್ತ್ರಾಭರಣ, ದ್ರವ್ಯ, ಮದ್ದು, ಗುಂಡು, ಕತ್ತಿ, ಕಠಾರಿ, ತುಪಾಕಿ, ಮುಂತಾದ ಅನೇಕ ಪದಾರ್ಥಗಳನ್ನು ತೆಗೆದುಕೊಂಡು, ಪರಾಕ್ರಮದಲ್ಲಿ ಇವರಿಗೆ ಸರಿಸಾಟಿ ಇಲ್ಲವೆಂದು ಹೊಗಳಿಸಿಕೊಳ್ಳುತ್ತ ಜಯಭೇರಿಯನ್ನು ಹೊಡೆಸಿಕೊಂಡು ಶ್ರೀರಂಗಪಟ್ಟಣಕ್ಕೆ ಅತಿಸಂಭ್ರಮದಿಂದ ಚಿತ್ತೈಸಿದರು.

ವೇಮಾಜಿ ಪಂತನ ವಿಚಾರ.—ಅನಂತರ ಮುಸ್ತಾಫ್ಖಾನನು ಏಜಾಪುರಕ್ಕೆ ಹೋಗಿ, ರಣಧೀರ ಕಂಠೀರವ ನರಸರಾಜಒಡೆಯರವರ ಪರಾಕ್ರಮವೆನ್ನು ಪಾದಷಾಹರಿಗೆ ತಿಳಿಸಿದನು. ಆಗ ಅಲ್ಲಿಯ ವಜೀರರೆಲ್ಲರೂ ಕೂಡಿ ಶ್ರೀರಂಗಪಟ್ಟಣವೆನ್ನು ಸಾಧಿಸುವುದಕ್ಕೆ ಉಪಾಯವೆನ್ನು ಆಲೋಚಿಸುತ್ತಿರಲು, ಅಲ್ಲಿ ಬಂದು ಅಧಿಕಾರದಲ್ಲಿದ್ದ ವೇಮಾಜೀಪಂತನೆಂಬವನು ಪಾದಷಾಹರನ್ನು ಕುರಿತು "ನಾನು ಈಗ ನಂಜನಗೂಡು ತಿರುಮಕೂಡಲು ಜಾತ್ರೆಗೆ ಹೋಗಿ, ದೇವರ ದರ್ಶನವನ್ನು ಮಾಡಿ ಶ್ರೀರಂಗಪಟ್ಟಣವನ್ನು ಸಾಧಿಸಲು ಉಪಾಯವೆನ್ನೂ ತಿಳಿದುಕೊಂಡು ಬರುವೆನು. ನನಗೆ ಸಹಾಯವಾಗಿ ಕೆಲವು ಸೇನೆಯನ್ನೂ ಅಬ್ದುಲ್ಖಾನನೆಂಬ ಸರದಾರನನ್ನೂ ಕಳುಹಿಸಿಕೊಟ್ಟರೆ, ಹಿಂತಿರುಗಿ ಬರುವಾಗ ಮಾರ್ಗದಲ್ಲಿ ಅವರ ಸೀಮೆಯ ಕೆಲವು ಗ್ರಾಮಗಳನ್ನು ಲೂಟಿಮಾಡಿ

ಕೊಂಡೂ ಮೆತ್ತಿ ಕೆಲವು ಗ್ರಾಮಗಳನ್ನು ಕಟ್ಟಿಕೊಂಡೂ ಬರುವೆನು" ಎಂದು ಹೇಳಿದನು. ಪಾದಷಾಹರು ಅದೇ ಮೇರೆ ಅಪ್ಪಣೆಯಂ ಕೊಡಲು, ವೇಮೋಜಿಪಂತನು ವಿಷು ಸಂವತ್ಸರದ ಚೈತ್ರ ಶುದ್ಧದಲ್ಲಿ ತಿರುಮುಕೂಡಲು ನಂಜನಗೂಡುಗಳಲ್ಲಿ ದೇವರ ದರ್ಶನವಂ ಮಾಡಿಕೊಂಡು, ಶ್ರೀರಂಗಪಟ್ಟಣದ ವರ್ತಮಾನವೆನ್ನು ತಿಳಿದು, ವಿಜಾಪುರಕ್ಕೆ ಹೊರಟಾಗಿ ಹೊರಟು, ತಿಪ್ಪೂರು, ಹಂಪಾಪುರ, ಅಕ್ಕಿಹೆಬ್ಬಾಳು, ಕನ್ನಂಬಾಡಿ, ಗನ್ನಿ, ನಲ್ಲೂರು, ಮೊದಾಪುರ, ಕತ್ತರ್‌ಘಟ್ಟ, ಹೊಸಹೊಳಲು ಮುಂತಾದ ಗ್ರಾಮಗಳನ್ನು ಲೂಟಿ ಮಾಡಿದನು. ಈ ವರ್ತಮಾನವೆನ್ನು ದೊರೆಗಳು ಕೇಳಿ, ಅವರನ್ನು ಓಡಿಸಿಬಿಡುವಂತೆ ದಳವಾಯಿ ನಂಜರಾಜಯ್ಯನಿಗೆ ನೇಮಿಸಿದರು. ಆ ನಂಜರಾಜಯ್ಯನು ಸೇನಾಸಮೇತನಾಗಿ ಹೋಗಿ ಅವರುಗಳನ್ನು ಹೊಡೆದು ಓಡಿಸಿ ಅವರ ದಂಡಿನಲ್ಲಿದ್ದ ಆನೆ, ಕುದುರೆ, ಮುಂತಾದವುಗಳನ್ನು ತೆಗೆದುಕೊಂಡು ಹಿಂತಿರುಗಿದನು. ದಾರಿಯಲ್ಲಿ ಮೊದಲೇ ಗುಂಡು ತಗಲಿದ್ದ ಬಂದು ಗಂಡಾನೆ ಮಾತ್ರ ಮೃತವಾಯಿತು. ಲೂಟಿ ಮಾಡಿದ್ದ ಗ್ರಾಮಗಳ ಪ್ರಜೆಗಳನ್ನು ಕರೆಸಿ, ನಂಜರಾಜಯ್ಯನು ಕವಲು ಕರಾರುಗಳನ್ನು ಮಾಡಿ, ಪೂರ್ವದ ಮೇರೆಗೆ ಸುಖದಲ್ಲಿರುವಂತೆ ಅಲ್ಲಿಯ ಅಧಿಕಾರಿಗಳಿಗೆ ಹೇಳಿ, ಶ್ರೀರಂಗಪಟ್ಟಣಕ್ಕೆ ಬಂದು, ದೊರೆಗಳಿಗೆ ತಾನು ಯುದ್ಧದಲ್ಲಿ ತೆಗೆದು ಕೊಂಡು ಬಂದಿದ್ದ ಪದಾರ್ಥಗಳನ್ನೆಲ್ಲ ಒಪ್ಪಿಸಿ, ನಡೆದ ವಿಚಾರವೆನ್ನು ಬಿನ್ನವಿಸಿದನು. ಇತ್ತ ಶ್ರೀರಂಗಪಟ್ಟಣದ ದಳವಾಯಿ ನಂಜರಾಜಯ್ಯನ ಪೆಟ್ಟುಗಳನ್ನು ತಾಳಲಾರದೆ ಓಡಿಹೋದ ವೇಮೋಜಿಪಂತನು ಅಬ್ದುಲ್ ಖಾನನೊಡನೆ ಸೇರಿಕೊಂಡು, ಮೆಳ್ಳಮೊಗ್ಗದಲ್ಲಿ ಸಿಕ್ಕಿದ ತುರುಮೆಕರೆ, ಪಾಳೆಯಗಾರನನ್ನು ಹೊಡೆದು, ಅದನ್ನು ಕಟ್ಟಿಕೊಂಡು, ಅಬ್ದುಲ್‌ಖಾನನನ್ನು ಅಲ್ಲಿರಿಸಿ, ತಾನುಮಾತ್ರ ವಿಜಾಪುರಕ್ಕೆ ಹೋಗಿ, ಕಂಠೀರವ ನರಸರಾಜಒಡೆಯರವರು ಪರಾಕ್ರಮಶಾಲಿಗಳೂ ದೇವತಾಕಟಾಕ್ಷಕ್ಕೆ ಪಾತ್ರರೂ ಆಗಿರುವುದರಿಂದ ಅವರನ್ನು ಜಯಿಸಿ ಶ್ರೀರಂಗಪಟ್ಟಣವನ್ನು ಸ್ವಾಧೀನ ಮಾಡಿಕೊಳ್ಳುವುದಕ್ಕೆ ತಮ್ಮಿಂದ ಆಗಲಾರದೆಂದು ಪಾದಷಾಹರಿಗೆ ಹೇಳಿದನು.

ತುರುವೆಕೆರೆಯನ್ನು ಪುತ್ತೆ ಸ್ವಾಧೀನ ಮಾಡಿಕೊಂಡದ್ದು.—ಯುದ್ಧದಲ್ಲಿ ಓಡಿಹೋದ ವಿಜಾಪುರದ ಅಬ್ದುಲ್ಲಖಾನನು ತುರುವೆಕೆರೆಯ ಪಾಳಯಗಾರನನ್ನು ಕೊಂದು ತಾನು ಅಲ್ಲಿರುತ್ತಾನೆಂಬ ವರ್ತಮಾನವನ್ನು ದೊರೆಗಳವರು ಕೇಳಿ ದಳವಾಯಿ ನಂಜರಾಜಯ್ಯನನ್ನು ಸೈನ್ಯಸಹಿತವಾಗಿ ಕಳುಹಿಸಿಕೊಟ್ಟರು. ನಂಜರಾಜಯ್ಯನು ಅಬ್ದುಲ್ಲಖಾನನನ್ನು ಹೊಡೆದೋಡಿಸಿ, ಅವನಲ್ಲಿದ್ದ ೪೦ ಕುದರೆಗಳನ್ನು ಬೊಕ್ಕಳಿಕವೆಂಬ ಬಂದುಗೆಂಡಾನೆ ಅನೇಕ ವಸ್ತ್ರಾಭರಣ ದ್ರವ್ಯಮುಂತಾದ್ದನ್ನು ತೆಗೆದುಕೊಂಡು ಆ ತುರುವೆಕೆರೆಯನ್ನು ಸ್ವಾಧೀನ ಮಾಡಿಕೊಂಡನು.

ದಳವಾಯಿಗಳ ವಿಚಾರ.—ದಳವಾಯಿ ನಂಜರಾಜಯ್ಯನು, ಪೆರಿಸಪಟ್ಟಣದ ನಂಜುಂಡ ಅರಸು ಮುಂತಾದ ಪಾಳಯಗಾರರ ಕಡೆಯಿಂದ ಲಂಚವನ್ನು ತೆಗೆದುಕೊಂಡು, ಅರಮನೆಗೆ ಬರತಕ್ಕ ಖಂಡಣಿಯ ಹಣವನ್ನು ವಸೂಲು ಮಾಡದೆ ಸ್ವಕಾರ್ಯವೇ ಮುಖ್ಯವೆಂದಿದ್ದನು. ಅದನ್ನು ದೊರೆಗಳವರು ಚೆನ್ನಾಗಿ ವಿಚಾರಣೆ ಮಾಡಿ, ಅವನ ಮೇಲೆ ಹೊತ್ತ ಹಣವನ್ನು ತೆಗೆದುಕೊಂಡು, ವ್ಯಯ ಸಂವತ್ಸರದ ಪುಷ್ಯ ಶುದ್ಧ ೬ಲ್ಲಿ ಅವನ ಅಧಿಕಾರವನ್ನು ತೆಗೆದು, ಲಿಂಗರಾಜಯ್ಯನೆಂಬವನಿಗೆ ದಳವಾಯಿ ತನವನ್ನು ನೇಮಕಮಾಡಿದರು. ಈ ಲಿಂಗರಾಜಯ್ಯನು ಕೆಲವು ದಿವಸ ಸೇನಾಧಿಪತ್ಯವನ್ನು ಮಾಡಿ ಸರ್ವಧಾರಿ ಸಂವತ್ಸರದ ಆಷಾಢ ಶುದ್ಧ ೬ಲ್ಲಿ ತೀರಿಹೋದ್ದರಿಂದ, ಈ ಶುದ್ಧ ೭ಲ್ಲಿ ಕೆಂಪಯ್ಯನೆಂಬವನಿಗೆ ದಳವಾಯಿ ತನವನ್ನು ನೇಮಕಮಾಡಿದರು. ಈ ಕೆಂಪಯ್ಯನು ಅರಮನೆ ಕೆಲಸದಲ್ಲಿ ಬುದ್ಧಿವಂತನಲ್ಲದೆ ಇದ್ದುದರಿಂದ ಇವನ ಅಧಿಕಾರವನ್ನು ತೆಗೆದು ವಿರೋಧಿ ಸಂವತ್ಸರದ ಆಷಾಢ ಶುದ್ಧ ೭ಲ್ಲಿ ಲಿಂಗೇಗೌಡನಿಗೆ ನೇಮಕಮಾಡಿದರು. ವಿಕೃತಿ ಸಂವತ್ಸರದ ಭಾದ್ರಪದ ಶುದ್ಧ ೬ಲ್ಲಿ ಈ ಲಿಂಗೇಗೌಡನು ದೊರೆಗಳವರ ಕೋಪಕ್ಕೆ ಪಾತ್ರನಾದ್ದರಿಂದ ದಳವಾಯಿತನವೆಂ ತೆಗೆದು ಕಾರಗಳ್ಳಿ ಹಂಪರಾಜಯ್ಯನೆಂಬವನಿಗೆ ನೇಮಕಮಾಡಿದರು. ದೊರೆಗಳವರು ವ್ಯಯ ಸಂವತ್ಸರದ ಆಶ್ವಯುಜ ಶುದ್ಧ ೧ಲ್ಲಿ ಸಿಂಹಾಸನಾರೂಢರಾಗಿ ನವರಾತ್ರಿಯಲ್ಲಿ ಬಡ್ಡೋಲಗವೆಂ ತೆಗೆದುಕೊಳ್ಳುತ್ತಿರುವ ವೇಳೆಯಲ್ಲಿ, ಸಜ್ಜೆಯ ಮೇಲೆ ದಳವಾಯಿ, ಅರಸುಗಳು, ಪಾಳಯಗಾರರು, ಅಧಿಕಾರಸ್ಥ

ಮುಂತಾದ ಸಕಲಜನರುಗಳೂ ಕೈಕಟ್ಟಿಕೊಂಡು ನಿಂತಿರಬೇಕೆಂತಲೂ, ಈ ಆಜ್ಞೆಯನ್ನು ಮೀರಿ ನಡೆದವರಿಗೆ ತಕ್ಕ ಶಿಕ್ಷೆಯನ್ನು ಮಾಡುವೆ ವೆಂತಲೂ ಕಟ್ಟುಮಾಡಿದರು. ಕಾರಗಳ್ಳಿ ಹಂಪರಾಜಯ್ಯನು ವರಸಂವತ್ಸರದ ಆಶ್ವಯುಜ ಶುದ್ಧ ೬ಲ್ಲಿ ನವರಾತ್ರಿಯ ಓಲಗವು ಬೆಳಯುವಾಗ ದೊರೆಗಳವರು ಮಾಡಿದ್ದ ಆಜ್ಞೆಯನ್ನು ಮೀರಿ ನಡೆದದುರಿಂದ, ದೊರೆಗಳವರು ಇವನ ಮೇಲೆ ಕೋಪಮಾಡಿ, ತಮ್ಮ ಮಾವಂದಿರಾದ ಕಳಲೆ ದಾಸರಾಜಯ್ಯನವರಿಗೆ ದಳವಾಯಿತನವನ್ನು ನೇಮಕಮಾಡಿದರು. ಈ ದಾಸರಾಜಯ್ಯನವರು ವೃದ್ಧರಾಗಿ ಅರಮನೆಯ ಕೆಲಸಗಳನ್ನು ಮಾಡುವುದಕ್ಕೆ ಶಕ್ತಿ ಸಾಲದ್ದರಿಂದ, ಇವರ ಅಧಿಕಾರವನ್ನು ತೆಗೆದು, ವಿಜಯ ಸಂವತ್ಸರದ ಕಾರ್ತಿಕ ಬಹುಳ ೧ಲ್ಲಿ ಲಿಂಗೇಗೌಡನಿಗೆ ಮತ್ತೆ ದಳವಾಯಿತನವನ್ನು ನೇಮಿಸಿದರು. ಮನ್ಮಥ ಸಂವತ್ಸರದ ವೈಶಾಖ ಶುದ್ಧ ೧೪ಲ್ಲಿ ದಳವಾಯಿ ಲಿಂಗೇಗೌಡನಿಗೆ ಬದಲಾಗಿ ಕಾರಗಳ್ಳಿ ಹಂಪರಾಜಯ್ಯನಿಗೆ ಮತ್ತೆ ದಳವಾಯಿತನಕ್ಕೆ ನೇಮಕಮಾಡಿದರು.

ರಾಜ್ಯದ ವಿಭಾಗ.—ದೊರೆಗಳವರು ತಾವು ಪಾಳಯಗಾರರು ಗಳಿಂದ ಸಾಧಿಸಿದ ಸೀಮೆಗಳಿಗೆ ಆಯಾ ಸೀಮೆಯ ವಿಧವೆರಿತು ಕಂದಾಯಗಳ ನಿಬಂಧನೆ ಮಾಡಿ, ಧನದಿಂದ ಕೊಟ್ಟಿದ ಜನಗಳಿಗೆ ಅವರ ಜೀವನೋಪಾಯಕ್ಕೆ ತಕ್ಕಷ್ಟು ದ್ರವ್ಯವೆಂ ಕೊಟ್ಟು, ನಿಂತ ದ್ರವ್ಯವೆಂ ಅರಮನೆಗೆ ತೆಗೆದುಕೊಂಡು ಮುಂದೆ ಆ ಜನಗಳು ತುಂಟತನವೆಂ ಮಾಡದಂತೆಯೂ, ಪ್ರಜಾಸಂರಕ್ಷಣೆ ಚೆನ್ನಾಗಿ ನಡೆವಂತೆಯೂ, ಗಡಿ ೧ಕ್ಕೆ ಒಬ್ಬ ಸುಬೇದಾರ, ಇಬ್ಬರು ಕರಣಿಕರು, ಗುಮಾಸ್ತರು, ತಾಣದಾರ ಮುಂತಾದ ಜನರುಗಳನ್ನು ನೇಮಿಸಿ, ತಾವು ನಿಬಂಧನೆಯನ್ನು ಮಾಡಿರುವ ಮೇರೆಗೆ ಸೀಮೆಯಿಂದ ಹಣವು ಕಳ್ಳಕಾಕರ ಉಪದ್ರವವಿಲ್ಲದೆ ಸರಾಗವಾಗಿ ಬರುವೆಂತೆ ಕಟ್ಟಳೆಯನ್ನು ಮಾಡಿಸಿದರು.

ಧರ್ಮಕಾರ್ಯ.—ಪಂಚರತ್ನಗಳು.

(೧) ಶ್ರೀರಂಗಪಟ್ಟಣದ ಅರಮನೆಯ ಬಲಭಾಗದಲ್ಲಿ ರಂಗಸ್ವಾಮಿಯ ಗುಡಿಯಂತೆ ನೂತನವಾಗಿ ಗುಡಿ ಗೋಪುರ ಕೈಸಾಲೆ ಕಲ್ಯಾಣ

ಮುಂಟಿಪ ಯಾಗಶಾಲೆ ವಸಂತದ ಕೊಳ ಮುಂತಾದವುಗಳಂ ಕಟ್ಟಿಸಿ, ತಾವು ನರಸಿಂಹಜಯಂತೀ ದಿವಸ ಜನಿಸಿದವರಾದ ಕಾರಣ, ಅಮ್ಮನವರು ಸಹಿತವಾಗಿ ನೃಸಿಂಹ ಸ್ವಾಮಿಯವರನ್ನೂ, ಉಭಯನಾಚಿಯಾರು ಸಹಿತವಾಗಿ ಉತ್ಸವವಿಗ್ರಹ ಮುಂತಾದ ಪಂಚಬೇರಗಳನ್ನೂ, ಅನಂತ, ಗರುಡ, ವಿಷ್ವಕ್ಸೇನ, ಆಳ್ವಾರು ಮೊದಲಾದ ಪರಿವಾರ ದೇವರುಗಳನ್ನೂ, ನೂತನವಾಗಿ ಪಾಂಚರಾತ್ರಾಗಮೋಕ್ತ ಪ್ರಕಾರವಾಗಿ ಅಲ್ಲಿ ಪ್ರತಿಷ್ಠೆಯಂ ಮಾಡಿಸಿ, ದೇವರುಗಳಿಗೆ ನಿತ್ಯೋತ್ಸವ ರಥೋತ್ಸವಾದ್ಯುತ್ಸವಗಳಿಗೂ, ಈ ದೇವರ ಸೇವೆಯನ್ನು ಮಾಡುವ ಉಪಾಧಿಬ್ರಾಹ್ಮಣರು ಮುಂತಾದ ಜನಗಳ ಜೀವನಕ್ಕೂ ರಾಮಾನುಜಕೂಟ ನಡೆಯುವುದಕ್ಕೂ, ಬಹಳ ತಸದೀಕುಗಳನ್ನು ಂಟುಮಾಡಿದರು. ಮತ್ತು ಅನೇಕಗ್ರಾಮ ಭೂಮಿಗಳನ್ನೂ ಅನೇಕ ಪೂಜೋಪಕರಣಸೇವೋಪಕರಣವಸ್ತ್ರಾ ಭರಣಪಾತ್ರೆಗಳನ್ನೂ ನವರತ್ನಖಚಿತವಾದ ಕಂಠೀರವ ಮುಡಿಯನ್ನೂ ಸಮರ್ಪಿಸಿ, ಪ್ರತಿದಿನದಲ್ಲಿಯೂ ದೇವರ ದರ್ಶನಮಾಡಿ, ತೀರ್ಥಪ್ರಸಾದವನ್ನು ಒಪ್ಪಿಸಿಕೊಳ್ಳುತ್ತಿದ್ದರಲ್ಲದೆ, ಈ ದೇವಾಲಯದಲ್ಲಿ ತಮ್ಮ ಭಕ್ತವಿಗ್ರಹವನ್ನು ನಿರ್ಮಿಸಿ, ಈ ದೇವಸ್ಥಾನದ ವರದಿಯನ್ನು ನಿತ್ಯದಲ್ಲಿಯೂ ಆ ವಿಗ್ರಹದ ಎದುರಿಗೆ ಹೇಳುವಂತೆ ನಿಬಂಧನೆಮಾಡಿದರು.

(೨) ಶ್ರೀರಂಗಪಟ್ಟಣದಲ್ಲಿ ಕಾವೇರೀನದಿಗೆ ಉತ್ತರ ಪಾರ್ಶ್ವದಲ್ಲಿ ಕಂಠೀರವೆ ಪುರವೆಂಬ ಅಗ್ರಹಾರವನ್ನು ನಿರ್ಮಿಸಿ, ಸೋಪಕರಣ ಸೋಪಸ್ಕರವಾಗಿ ಗೃಹಗಳನ್ನೂ ವೃತ್ತಿಗಳನ್ನೂ ತ್ರಿಮತಸ್ಥ ಬ್ರಾಹ್ಮಣರುಗಳಿಗೂ ಧಾರೆಯೆರೆದು ಕೊಟ್ಟರು.

(೩) ಪಾಳಯೆಗಾರರ ದಿವಸದಲ್ಲಿ ಸೀಮೆಯ ಮೇಲೆ ಚಿನ್ನದ ನಾಣ್ಯಗಳಿಗೆ ನಾನಾವಿಧವಾದ ವಿಗ್ರಹದ ಮುದ್ರೆಗಳು ಇದ್ದುದರಿಂದ, ದೊರೆಗಳವರು ಬಂದೇ ಬಗೆಯ ವಿಗ್ರಹದ ಮುದ್ರೆ ಇರಬೇಕೆಂದು ಟಂಕಸಾಲೆಯನ್ನು ಏರ್ಪಡಿಸಿ, ಯೋಗನೃಸಿಂಹಾಂಕಿತವಾದ ಚಿನ್ನದ ಕಂಠೀರಾಯಿ ಹಣವೆನ್ನುಂಟುಮಾಡಿ, ಆ ಹಣವು ಎಲ್ಲಾ ದೇಶಗಳಲ್ಲಿಯೂ ಪ್ರಸಿದ್ಧವಾಗಿ ನಡೆವಂತೆಯೂ, ಆ ಹತ್ತು ಹಣಕ್ಕೆ ಕಂಠೀರಾಯಿ ಬಂದು ವರಹವೆಂತಲೂ, ಆ ಬಂಬತ್ತು ಹಣತೂಕಕ್ಕೆ ಬಂದು ವರಹದ ತೂಕ

ವೆಂತಲೂ, ಶಾ॥ ಶಕ ೧೫೬೬ನೇ (A.D. 1643) ಸ್ವಭಾನು ಸಂವತ್ಸರದ ವೈಶಾಖಶುದ್ಧ ೧೪ಲ್ಲಿ ನಿಬಂಧನೆಮಾಡಿದರು.

(೪) ನಂಜನಗೂಡು ಶ್ರೀಕಂಠೇಶ್ವರ ಸ್ವಾಮಿಯವರ ಅಮೃತ ಪಡಿಗೆ ಅವಕಾಶವಾಗುವಂತೆ ಕೌಂಡಿನೀ ನದಿಗೆ ಅಡ್ಡಕಟ್ಟೆಯುಂ ಹಾಕಿಸಿ, ನರಸಾಂಬುಧಿ ಎಂಬ ಮಹಾತಟಾಕವನ್ನು ಕಟ್ಟಿಸಿ, ಆ ಕೆರೆಯ ಕೆಳಗೆ ಆದ ಬತ್ತ ಮುಂತಾದ ಫಸಲನ್ನು ಪಡಿತರ ದೀಪಾರಾಧನೆ ರಥೋತ್ಸವ ಮೊದಲಾದ ಉತ್ಸವಗಳಿಗೆ ಸಮರ್ಪಿಸುವಂತೆ ನಿಬಂಧನೆಮಾಡಿ, ಶಿಲಾ ಪ್ರತಿಷ್ಠೆಯುಂ ಮಾಡಿಸಿ ತಾಮ್ರಶಾಸನವನ್ನು ಬರೆಸಿ ಒಪ್ಪಿಸಿದರು.

(೫) ಇವರ ಗಾಂಧರ್ವ ಪತ್ನಿಯವರಾದ ದೊಡ್ಡಾಜಮ್ಮಯ್ಯನವರು "ಕಾವೇರೀನದೀಪ್ರವಾಹ ಬಂದ ಕಾಲದಲ್ಲಿ ಕಾಶೀ ರಾಮೇಶ್ವರ ಮುಂತಾದ ಸ್ಥಳಕ್ಕೆ ಜನರು ಹೋಗಿಬರುವುದಕ್ಕೂ, ಈ ಕೋಟೆಯೊಳಕ್ಕೆ ಹೊರಗಿನಿಂದ ಪದಾರ್ಥಗಳು ಬರುವುದಕ್ಕೂ, ಕೋಟೆಯೊಳಗೆ ವಾಸಮಾಡಿಕೊಂಡಿರುವ ಜನರಿಗೆ ನದಿಯು ದೂರವಾಗಿರುವುದರಿಂದ ಕೋಟೆಯೊಳಕ್ಕೆ ನೀರು ಬರುವುದಕ್ಕೂ, ಅನುಕೂಲಿಸುವಂತೆ, ಉಭಯ ಪಾರ್ಶ್ವದ ಕಾವೇರಿಗೆ ಸೇತುವೆಯನ್ನು ಕಟ್ಟಿಸಬೇಕು" ಎಂದು ದೊರೆಗಳವರ ಪಾದಕ್ಕೆ ಬಿನ್ನವಿಸಿಕೊಳಲು, ಆ ಮಾತನ್ನು ಕೇಳಿ ವಿಹಿತವೆಂದು ಚಿತ್ತಕ್ಕೆ ತಂದು, ಕೋಟೆಗೆ ನೈಋತ್ಯ ವಾಯವ್ಯ ಪಾರ್ಶ್ವಗಳೆರಡರಲ್ಲಿಯೂ ಇರುವ ನದಿಗೆ ಎರಡು ಸೇತುವೆಗಳನ್ನು ಕಟ್ಟಿಸಿ, ಗೌತಮ ಕ್ಷೇತ್ರಕ್ಕೆ ದಕ್ಷಿಣ ದಿಕ್ಕಿನ ಚಂದ್ರವನದ ಸಮೀಪದಲ್ಲಿ ಹರಿಯುವ ಕಾವೇರಿಗೆ ಕಟ್ಟೆಯುಂ ಕಟ್ಟಿಸಿ, ಈ ದೇಶದಲ್ಲಿ ಇದುವರೆಗೆ ಎಲ್ಲಿಯೂ ಇಲ್ಲದ ನೀರಮೇಲೆ ನೀರುಬರುವ ಆಶ್ಚರ್ಯವನ್ನು ತೋರಿಸಿ ಕೋಟೆಗೆ ನೈಋತ್ಯ ಪಾರ್ಶ್ವದಲ್ಲಿ ಕಟ್ಟಿಸಿರುವ ಸೇತುವೆಯ ಮೇಲೆ ಹೊಸದಾಗಿ ಕಾಲುವೆಯನ್ನು ತಂದು, ಕೋಟೆಯೊಳಕ್ಕೆ ಕಾರಂಜಿಯ ನೀರು ಬರುವಂತೆ ಮಾಡಿಸಿ, ಅದಕ್ಕೆ ಬಂಗಾರದೊಡ್ಡಿ ಕಾಲುವೆ ಎಂದು ತಮ್ಮ ಪ್ರೇಮಾಸ್ಪದರಾದ ಗಾಂಧರ್ವ ಪತ್ನಿಯವರ ಹೆಸರನ್ನಿಟ್ಟು, ಅದರ ಕೆಳಗೆ ಆದ ಬತ್ತ ಕಬ್ಬು ಮುಂತಾದವುಗಳನ್ನು ರಂಗನಾಥಸ್ವಾಮಿದೇವಸ್ಥಾನಕ್ಕೆ ಕೊಡುವಂತೆ ಕಟ್ಟಳೆಯುಂ ಮಾಡಿದರು.

ಮತ್ತು ಶ್ರೀರಂಗಪಟ್ಟಣದ ರಂಗಸ್ವಾಮಿದೇವಸ್ಥಾನದ ಗುಡಿ ಗೋಪುರ ಮಂಟಪಗಳನ್ನೂ, ವಿಸ್ತಾರವಾಗಿ ಹೊರಗಿನಪ್ರಾಕಾರ ಒಳಗಿನಪ್ರಾಕಾರ ಉಭಯದ ಮುಚ್ಚಳದ ಕಲ್ಲುಕೆಲಸಗಳನ್ನೂ ಮಾಡಿಸಿ, ದೇವರಿಗೆ ಪೈಕುಂಠಮುಡಿ ಎಂಬ ನವರತ್ನದ ಕಿರೀಟವನ್ನು ಸಮರ್ಪಿಸಿದರು. ಗಂಗಾಧರೇಶ್ವರಸ್ವಾಮಿದೇವಸ್ಥಾನಕ್ಕೂ ವಿಸ್ತಾರವಾಗಿ ಗುಡಿ ಗೋಪುರವೆಂ ಕಟ್ಟಿಸಿ, ಈ ಗುಡಿಯಲ್ಲಿ ಪಂಚಲಿಂಗ ಪ್ರತಿಷ್ಠೆಯಂ ಮಾಡಿಸಿದರು. ಕರಿಯಕಟ್ಟಿನ ವೆಂಕಟರಮಣಸ್ವಾಮಿಯ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿ, ವಿಸ್ತಾರವಾಗಿ ಕಟ್ಟಿಸಿ, ಆ ಬೆಟ್ಟಕ್ಕೆ ಸೋಪಾನವನ್ನು ಕಟ್ಟಿಸಿದರು. ನಂಜನಗೂಡು ಶ್ರೀಕಂಠೇಶ್ವರಸ್ವಾಮಿಯವರ ಗೌತಮರಥವು ಶಿಥಿಲವಾಗಿದ್ದುದರಿಂದ ಅದನ್ನು ನೂತನವಾಗಿ ಮಾಡಿಸಿದರು. ಶ್ರೀಚಾಮುಂಡೇಶ್ವರಿ ಅಮ್ಮನವರು, ಉತ್ತನಹಳ್ಳಿ ಜ್ವಾಲಾಮುಖಿ ಅಮ್ಮನವರು, ನಂಜನಗೂಡು, ತಿರುಪತಿ, ಮೇಲುಕೋಟೆ ಮುಂತಾದ ಕ್ಷೇತ್ರಗಳಲ್ಲಿರುವ ಶಿವ ವಿಷ್ಣು ಮೊದಲಾದ ಸಮಸ್ತ ದೇವರುಗಳಿಗೂ ಅಯಾ ದೇವಸ್ಥಾನದ ತಾರತಮ್ಯವಿದ್ದಂತೆ ವಸ್ತ್ರಾಭರಣಗಳನ್ನು ಕೊಟ್ಟು ತನವೀಕನ್ನುಂಟುಮಾಡಿದರು.

ತಮ್ಮ ಮಾವಂದಿರಾದ ದೊಡ್ಡೀ ಅರಸಿನವರ ಹೆಸರಿನಿಂದ ಅರಿಕುಠಾರದಲ್ಲಿ ದೊಡ್ಡದಾಗಿ ಬಂದು ಸರೋವರವನ್ನು ಕಟ್ಟಿಸಿದರು. ಇವರು ತಾವು ಸಾಧಿಸಿದ ಕಣಿವೆಯ ಕೆಳಗಣ ಸೀಮೆಗಳಲ್ಲಿಯೂ ಕೆಲವು ಅಗ್ರಹಾರಗಳನ್ನು ದಾನಮಾಡಿ ದೇವತಾ ಸೇವೆಯನ್ನು ಮಾಡಿದರು. ಇದಲ್ಲದೆ ಅನೇಕ ಬ್ರಾಹ್ಮಣರುಗಳಿಗೆ ಭಟ್ಟಮಾನ್ಯ ರೂಪವಾಗಿ ಜೀವನವನ್ನು ಕಲ್ಪಿಸಿಕೊಟ್ಟು, ತಮ್ಮ ಪೂರ್ವಿಕರು ಮಾಡಿದ ದೇವದಾಯ, ಬ್ರಹ್ಮದಾಯ, ಮುಂತಾದ ಧರ್ಮಗಳನ್ನೂ ಪರಿಪಾಲಿಸುತ್ತಿದ್ದರು. ಈ ಕಂಠೀರವ ನರಸರಾಜ ಒಡೆಯರವರು ತನಗೆ ಪಟ್ಟವಾದ ಬಳಿಕ ಪ್ರತಿನಿತ್ಯದಲ್ಲಿಯೂ ಪೂರ್ವದಂತೆ ನಿತ್ಯದಾನ ಗೋಪೂಜೆಗಳನ್ನು ಮಾಡಿ ನೂತನವಾಗಿ ಗೋದಾನ, ದಂಪತಿಪೂಜೆ, ಪುರಾಣ ಪಂಚಾಂಗ ಶ್ರವಣಗಳು ನಡೆವಂತೆ ಕಟ್ಟಳೆಯಂ ಮಾಡಿ, ಪ್ರತಿ ಏಕಾದಶಿಯಲ್ಲಿಯೂ ರುಕ್ಮಾಂಗದ ರಾಯನಂತೆ ಉಪವಾಸ ಜಾಗರಣೆಗಳನ್ನು ಮಾಡಿ ಸಾರಣೆಯನ್ನು ನೆರವೇರಿಸುತ್ತಿದ್ದರು.

ಇವರು ವೈಷ್ಣವ ದೀಕ್ಷೆಯನ್ನಂಗೀಕರಿಸಿದವರಾದರೂ, ಶ್ರೀವೈಷ್ಣವರ ಮಾತುಗಳನ್ನು ಕೇಳದೆ, ತಮ್ಮ ಕುಲದೇವತೆಯಾದ ಶ್ರೀಚಾಮುಂಡೇಶ್ವರಿ, ಶ್ರೀಕಂಠೇಶ್ವರ ಮುಂತಾದ ಶಿವದೇವಸ್ಥಾನಗಳಲ್ಲಿಯೂ ಭಕ್ತಿಪೂರ್ವಕವಾಗಿ ನಡೆದುಕೊಳ್ಳುತ್ತ ಶಿವರಾತ್ರಿ, ಗೌರಿ, ಗಣೇಶ ಮುಂತಾದ ಅನೇಕ ವೈದಿಕ ವ್ರತಗಳನ್ನೂ ಮಾಡಿಕೊಂಡು ಬರುತ್ತಿದ್ದರು. ಪ್ರತಿದಿನವೂ ಪಟ್ಟದ ಆಯುಧದ ಸಂಗಡ ವಿಜಯನಾರಸಿಂಹನೆಂಬ ಪಡಕೂ ಪೂಜೆ ನಡೆವಂತ ಕಟ್ಟು ಮಾಡಿದರು. ಈ ರೀತಿಯಲ್ಲಿ ಇವರಿಗೆ ಭೂಲೋಕದಲ್ಲಿ ಬಬ್ಬರೂ ಸರಿಸಾಟಿ ಇಲ್ಲದುದರಿಂದ ಸಾವಸಪರಾಕ್ರಮದಲ್ಲಿ ಕಲಿಯುಗದ ಭೀಮನೆಂದು ಹೊಗಳಿಸಿಕೊಳ್ಳುತ್ತ ರಣಧೀರಕಂಠೀರವ ನರಸರಾಜಒಡೆಯರವರು ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡುತ್ತಿದ್ದರು.

ನಿರ್ವಾಣ—ಹೀಗಿರುವಲ್ಲಿ ಇವರ ದೇಹಕ್ಕೆ ಬಹಳ ಆಯಾಸವಾಗಲು, ಇವರು ಪೂರ್ವದಂತೆ ಕಲ್ಲುಮಂಚದ ಮೇಲಯೇ ಪವಡಿಸಿಕೊಂಡು ದಳವಾಯಿ ಕಾರಗಳ್ಳಿ ಪಂಪರಾಜಯ್ಯ ಮುಂತಾದ ಆಪ್ತ ಜನಗಳನ್ನು ಕರೆಸಿ, ಕಲ್ಲು ಚಪ್ಪಡಿಯ ಮೇಲೆ ಮುಹೂರ್ತಮಾಡಿ, ಇನ್ನು ಮೇಲೆ ತಮ್ಮ ದೇಹ ನಿಲ್ಲುವುದಿಲ್ಲವೆಂದು ಹೇಳಿ, ಗುಂಡಲಲ್ಲಿರುವ ತಮ್ಮ ಭಿನ್ನೈವರ ಚಿಕ್ಕಪ್ಪಾಜಿಯವರಾದ ಮುಪ್ಪಿನ ದೇವರಾಜಒಡೆಯರವರ ಮೊಮ್ಮನೆಯ ಕುಮಾರರು ದೇವರಾಜಒಡೆಯರವರನ್ನು ತಾವು ಸ್ವೀಕೃತ ಪುತ್ರರನ್ನಾಗಿ ಮಾಡಿಕೊಳ್ಳುವುದರಿಂದ, ಮುಂದೆ ಅವರಿಗೆ ಪಟ್ಟವನ್ನು ಕಟ್ಟಿ ನೀವು ಎಲ್ಲರೂ ಅವರ ಆಜ್ಞಾನುಸಾರವಾಗಿ ಇರುವುದೆಂದು ಕಟ್ಟುಮಾಡಿ, ಶಾ॥ ಶಕ ೧೫೮೮ನೇ (A.D. 1659) ವಿಕಾರಿ ಸಂವತ್ಸರದ ಶ್ರಾವಣ ಬಹುಳ ೫ಕ್ಕೆ ಅವರನ್ನು ರಾಜಮರ್ಯಾದೆಯಿಂದ ಕರೆಸಿ, ಸ್ವೀಕಾರ ಮಾಡಿಕೊಂಡು, ಈ ಶ್ರಾವಣ ಬಹುಳ ೮ಯಲ್ಲಿ ದೇಹೇಂದ್ರಿಯಸಮ್ಮಾನಿತರಾಗಬೇಕೆಂದು ಇಲ್ಲಿಂದ ಸ್ವರ್ಗಕ್ಕೆ ತೆರಳಿದರು. ಅನಂತರ ಇವರ ದೇಹವನ್ನು ಸಾರ್ಥಕಮಾಡುವ ಕಾಲದಲ್ಲಿ ಪತ್ನಿಯರೆಲ್ಲರೂ ಸಮಗಮನ ಮಾಡಿದರು. ಇವರ ಉತ್ತರ ಕ್ರಿಯೆಗಳನ್ನು ಗಾಂಧರ್ವಪತ್ನಿ ನರಸಾಜಮ್ಮಯ್ಯನವರ ಪುತ್ರರಾದ ದೇವರಾಜಯ್ಯನವರು ಮಾಡಿದರು.

	ವರ್ಷ.	ತಿಂಗಳು.	ದಿನ.
ರಣಧೀರ ಕಂಠೀರವ ನರಸರಾಜ ಒಡೆಯರವರ ಜೀವಿತಕಾಲ	೪೪	೩	೧೦
ಇವರ ಆಳಿಕೆ	೨೦	೯	೨೧

ಇವರ ಆಳಿಕೆಯಲ್ಲಿ ದಳವಾಯಿತನ ಮಾಡಿದವರು —

ಬೆಟ್ಟದ ಚಾಮರಾಜ ಒಡೆಯರವರ	ವರ್ಷ.	ತಿಂಗಳು.	ದಿನ.
ಗಾಂಧರ್ವ ಪತ್ನೀಪುತ್ರ ವಿಕ್ರಮರಾಯ	೦	೦	೨೯
ತಿಮ್ಮಪ್ಪನಾಯಕ	೨	೧	೬
ನಂಜರಾಜಯ್ಯ	೬	೦	೦
ಲಿಂಗರಾಜಯ್ಯ	೧	೬	೦
ಕೆಂಪಯ್ಯ	೧	೦	೦
ಲಿಂಗೇಗೌಡ	೧	೨	೦
ಕಾರಗಳ್ಳಿ ಹಂಪರಾಜಯ್ಯ	೧	೧	೦
ದಾಸರಾಜಯ್ಯ	೨	೧	೪
ಲಿಂಗೇಗೌಡ	೧	೬	೦
ಕಾರಗಳ್ಳಿ ಹಂಪರಾಜಯ್ಯ	೪	೩	೯

೭ನೆಯ ಅಧ್ಯಾಯ.

ಹದಿಮೂರನೆಯ ಆಳಿಕೆ.

ದೊಡ್ಡದೇವರಾಜ ಒಡೆಯರವರು. (A.D. 1659—A.D. 1673)

ಜನನ.—ಶಾ॥ ಶಕ ೧೫೫೦ನೇ (A.D. 1627) ಪ್ರಭವ ಸಂವತ್ಸರದ ಜ್ಯೇಷ್ಠ ಬಹುಳ ೫ ಶುಕ್ರವಾರ ಧನಿಷ್ಠಾ ನಕ್ಷತ್ರ ರಾತ್ರಿ ೨೩ ಗಳಿಗೆಗೆ ಸಲ್ಲುವ ವೃಷಭ ಲಗ್ನದಲ್ಲಿ ರಾಜಒಡೆಯರವರ ಭಿನ್ನೋದರರಾದ ತಮ್ಮಂದಿರು ಮುಪ್ಪಿನ ದೇವರಾಜಒಡೆಯರವರ ಕುಟುಂಬ ದೇವಾಜಮ್ಮಣ್ಣಿಯವರ ಗರ್ಭಸುಧಾಂಬುಧಿಯಲ್ಲಿ ಜನಿಸಿದರು.

ಪಟ್ಟಾಭಿಷೇಕ.—ಶಾ॥ ಶಕ ೧೫೮೧ನೇ (A.D.1659) ವಿಕಾರಿ ಸಂವತ್ಸರದ ಭಾದ್ರಪದ ಶುದ್ಧ ದಶಮಿ

ಪತ್ನಿಯರು.—ಶಾ॥ ಶಕ ೧೫೬೨ನೇ (A.D.1639) ಪ್ರಮಾಥಿಸಂವತ್ಸರದ ವೈಶಾಖ ಶುದ್ಧ ೧೪ಲ್ಲಿ (೧) ಮೂಗೂರು ಬಾಳೇಅರಸಿನವರ ಕುಮಾರತಿ ಅಮೃತಮ್ಮಣ್ಣಿಯವರು, (೨) ಅರಿಕುಠಾರದ ಚಿಕ್ಕನರಾಜಯ್ಯನವರ ಕುಮಾರತಿ ಮುದ್ದಾಜಮ್ಮಣ್ಣಿಯವರು, (೩) ಶಾ॥ ಶಕ ೧೫೬೫ನೇ (A.D.1653) ನಂದನ ಸಂವತ್ಸರದ ಫಾಲ್ಗುಣ ಶುದ್ಧ ೧೦ಲ್ಲಿ ಅಮಚವಾಡಿ ಲಿಂಗರಾಜಯ್ಯನವರ ಕುಮಾರತಿ ದೇವಾಜಮ್ಮಣ್ಣಿಯವರು. ಈ ಮೂರು ವಿವಾಹಗಳಲ್ಲಿ ಮೊದಲನೆಯ ಎರಡನ್ನು ಪಟ್ಟವಾಗುವುದಕ್ಕೆ ಮುಂಚೆ ಇವರು ಗುಂಡಲಿನಲ್ಲಿದ್ದಾಗ ಇವರ ತಂದೆಯವರಾದ ಮುಪ್ಪಿನ ದೇವರಾಜಒಡೆಯರವರು ಮಾಡಿಸಿದರು. ಅನಂತರ ಮೂರನೆಯ ವಿವಾಹವನ್ನು ಅರ್ಕವಿವಾಹಪುರಸ್ಸರವಾಗಿ ಇವರೇ ಮಾಡಿಕೊಂಡರು.

ಸಂತಾನ.—ಪುತ್ರರು (೧) ಶಾ॥ ಶಕ ೧೫೬೪ನೇ (A.D. 1645) ಪಾರ್ಥಿವ ಸಂವತ್ಸರದ ಆಶ್ವಯುಜ ಶುದ್ಧ ೧೫ ಚಂದ್ರವಾರ ಶತಭಿಷಾ ನಕ್ಷತ್ರ ೫ನೇ ಪಾದ ರಾತ್ರಿ ೧೦॥ ಗಳಿಗೆಗೆ ಸಂದ ಮಿಥುನ ಲಗ್ನದಲ್ಲಿ ಚಿಕ್ಕದೇವರಾಜಒಡೆಯರವರು (೨) ಶಾ॥ ಶಕ ೧೫೬೮ನೇ (A.D. 1647) ವ್ಯಯ ಸಂವತ್ಸರದ ಫಾಲ್ಗುಣ ಶುದ್ಧ ೧೦ ಲ್ಲಿ ಕಂಠೀರವ ಅವತರಿಸಿದರು.

ಪುತ್ರಿಯರು (೧) ಪೊಡ್ಡದೇವಿರಮ್ಮಣ್ಣಿಯವರು (೨) ಗುರುವಾಜಮ್ಮಣ್ಣಿಯವರು. ಈ ನಾಲ್ಕು ಸಂತಿಯೂ ಅಮೃತಮ್ಮಣ್ಣಿಯವರಲ್ಲಿ ಜನಿಸಿದರು. ಮಿಕ್ಕ ಪತ್ನಿಯರಿಗೆ ಮಕ್ಕಳಿಲ್ಲ.

ಪ್ಲವಸಂವತ್ಸರದ ಫಾಲ್ಗುಣ ಶುದ್ಧ ೧೪ಲ್ಲಿ ದೊಡ್ಡದೇವರಾಜಒಡೆಯರವರು ತಮ್ಮ ಹಿರಿಯ ಕುಮಾರರಾದ ಚಿಕ್ಕದೇವರಾಜಒಡೆಯರವರಿಗೆ ಶ್ರೀರಂಗಪಟ್ಟಣದಲ್ಲಿ ಎರಡು ವಿವಾಹವೆಂ ಮಾಡಿಸಿ ಅನಂತರ ಅವರು ಶ್ರೀರಂಗಪಟ್ಟಣದಲ್ಲಿದ್ದರೆ ತುಂಟ ಜನರ ಸಂಗಡ ತುಂಟಾಟ ಗಳನ್ನಾಡಿಕೊಂಡು ಇರುವರು ಎಂದು ತಿಳಿದು ಅವರಿಗೆ ವಿದ್ಯಾಬುದ್ಧಿಯೂ ರಾಜನೀತಿಯೂ ಚೆನ್ನಾಗಿ ಬರಬೇಕೆಂದು ಅದಕ್ಕೆ ತಕ್ಕ ಜನಗಳನ್ನು ನೇಮಿಸಿ, ಗುಂಡಲಿಗೆ ವಳಿತವಾದ ಹಂಗಳ ಎಂಬ ಗ್ರಾಮಕ್ಕೆ ಅವರನ್ನು ಪತ್ನೀಸಮೇತರಾಗಿ ಕಳುಹಿಸಿ ಅಲ್ಲಿ ಅಂಕೆಯಲ್ಲಿ ಇರುವಂತೆ ಕಟ್ಟು ಮಾಡಿಸಿದರು.

ದಳವಾಯಿಗಳ ವಿಚಾರ.—ಈ ದೊಡ್ಡ ದೇವರಾಜಒಡೆಯರವರು ಶ್ರೀರಂಗಪಟ್ಟಣದಲ್ಲಿ ಪಟ್ಟಾಭಿಷಿಕ್ತರಾಗುತಲೇ ಪೂರ್ವದಿಂದಲೂ ದಳವಾಯಿತನವನ್ನು ಮಾಡುತ್ತಿದ್ದ ಕಾರಗಳ್ಳಿ ಹಂಪರಾಜಯ್ಯ ಮುಂತಾದ ಅಧಿಕಾರಸ್ಥರನ್ನು ಕರೆಸಿ, ದೇಶ ಕೋಶ ಬೊಕ್ಕಸ ಭಂಡಾರ ಮುಂತಾದವುಗಳ ಲೆಕ್ಕಗಳನ್ನು ವಿಚಾರಣೆ ಮಾಡಲಾಗಿ, ಹಂಪರಾಜಯ್ಯನು ಸೀಮೆಯ ಹಣಕಾಸುಗಳ ವಿಷಯದಲ್ಲಿ ವಂಚನೆಮಾಡಿರುವುದಾಗಿ ದೊರೆಗಳವರ ಚಿತ್ತಕ್ಕೆ ವಿದಿತವಾದುದರಿಂದ, ಶಾ॥ ಶಕ ೧೫೮೨ನೇ (A.D. 1660) ಶಾರ್ವರಿ ಸಂವತ್ಸರದ ವೈಶಾಖ ಬಹುಳ ೫ಂಲ್ಲಿ ಅವನ ಅಧಿಕಾರವನ್ನು ತೆಗೆದು, ಕಳಲೆ ಮಲ್ಲರಾಜಯ್ಯನಿಗೆ ಈ ಜ್ಯೇಷ್ಠ ಶುದ್ಧ ೧ಲ್ಲಿ ನೇಮಕ ಮಾಡಿದರು. ಅನಂತರ ಮಲ್ಲರಾಜಯ್ಯನಿಗೆ ಅರಮನೆಯು ಕೆಲಸವನ್ನು ನೋಡುವುದಕ್ಕೆ ಸಾಮರ್ಥ್ಯವಿಲ್ಲದುದರಿಂದ, ಅದೇ ಆಷಾಢ ಶುದ್ಧ ೬ಲ್ಲಿ ಮುದ್ದಯ್ಯನೆಂಬವನಿಗೆ ದಳವಾಯಿತನವನ್ನು ನೇಮಕಮಾಡಿದರು. ಆ ಮುದ್ದಯ್ಯನೂ ದೇಹಕ್ಕೆ ಬಹಳ ಆಯಾಸವಾಗಿ ಸ್ವಲ್ಪಕಾಲದಲ್ಲಿಯೇ ತೀರಿಹೋದುದರಿಂದ, ಪ್ಲವಸಂವತ್ಸರದ ಆಶ್ವಯುಜ ಶುದ್ಧ ೬ಲ್ಲಿ ನಂಜನಾಥಯ್ಯನೆಂಬವನಿಗೆ ದಳವಾಯಿತನವನ್ನು ಕೊಟ್ಟರು. ಬಳಿಕ ಇದೇ ಫಾಲ್ಗುಣ ಶುದ್ಧ ೬ಲ್ಲಿ ನಂಜನಾಥಯ್ಯನ ಬದಲಿ ಕಾಂತಯ್ಯನಿಗೆ ದಳವಾಯಿತನವಾಯಿತು. ಅಮೇಲೆ ಶಾ॥ ಶಕ ೧೫೮೪ನೇ (A.D. 1662) ಶುಭಕೃತ್ಸಂವತ್ಸರದವೈಶಾಖ ಶುದ್ಧ ೧೧ಲ್ಲಿ ಪೂರ್ವದ ನಂಜನಾಥಯ್ಯನಿಗೆ

ಮತ್ತೆ ನೇಮಕವಾಯಿತು. ಬಳಿಕ ಪ್ಲವಂಗ ಸಂವತ್ಸರದ ವೈಶಾಖ ಶುದ್ಧ ೧೧ಲ್ಲಿ ನಂಜನಾಥಯ್ಯನಿಗೆ ಬದಲು ಕಳಲೆಕುಮಾರಯ್ಯನಿಗೆ ನೇಮಕವಾಯಿತು.

ದೇಶಗಳನ್ನು ಕಟ್ಟಿದ್ದು.—

ಶಾ॥ ಶಕ ೧೫೪೪ನೇ (A.D. 1663) ಶುಭಕೃತ್ಸಂವತ್ಸರದ ಮಾಘ ಶುದ್ಧ ೫ಲ್ಲಿ ವಿಜಾಪುರದ ತುರುಕರಿಂದ ಬಿದರೆಹೊನ್ನಾಳಿ; ತುಮಕೂರು ಪಾಳೆಯಗಾರನಿಂದ ಚೇಳೂರು, ಬಿದರೆ.

ಈ ಫಾಲ್ಗುಣ ಶುದ್ಧ ೧೦ಲ್ಲಿ ಕೆಳದಿ ಶಿವಪ್ಪನಾಯಕನಿಂದ ಸಂಪಿಗೆ.

ಶಾ॥ ಶಕ ೧೫೪೪ನೇ (A.D. 1663) ಶೋಭಕೃತ್ಸಂವತ್ಸರದ ಚೈತ್ರ ಶುದ್ಧ ೧೦ಲ್ಲಿ ಗೋಲಕೊಂಡೆ ತುರುಕರಿಂದ ಚಿಕ್ಕನಾಯಕನ ಹಳ್ಳಿ.

ಈ ಮಾರ್ಗಶಿರ ಶುದ್ಧ ೧೫ಲ್ಲಿ ಕೆಳದಿ ಶಿವಪ್ಪನಾಯಕನಿಂದ ಹಾಸನ.

ಶಾ॥ ಶಕ ೧೫೮೮ನೇ (A.D. 1666) ಪರಾಭವ ಸಂ॥ರದ ಆಷಾಢ ಬಹುಳ ೫ಲ್ಲಿ ಅಣ್ಣಾಜಯ್ಯನಿಂದ ಸಾರತವಳ್ಳಿ.

ಮಧುರೆ ಪಾಳೆಯಗಾರ ಚಿಕ್ಕಪ್ಪನಾಯಕನಿಂದ.—

ಶಾ॥ ಶಕ ೧೫೮೯ನೇ (A.D. 1667) ಪ್ಲವಂಗ ಸಂ॥ರದ ಆಷಾಢ ಶುದ್ಧ ೧೫ಲ್ಲಿ ಈರೋಡು.

ಈ ಮಾರ್ಗಶಿರ ಶುದ್ಧ ೧೦ಲ್ಲಿ ಧಾರಾಪುರ.

ಕೆಂಪೇಗೌಡನಿಂದ.—

ಶಾ॥ ಶಕ ೧೫೮೯ನೇ (A.D. 1667) ಪ್ಲವಂಗ ಸಂವತ್ಸರದ ಮಾರ್ಗಶಿರ ಬಹುಳ ೫ಲ್ಲಿ ಹುಲಿಯೂರುದುರ್ಗ.

ಈ ಮಾಘ ಶುದ್ಧ ೧೦ಲ್ಲಿ ಕುಣಿಗಲು.

ಈ ಫಾಲ್ಗುಣ ಶುದ್ಧ ೧೦ಲ್ಲಿ ಘಟ್ಟ ಮೊದಲಿಯಾರಿಯಿಂದ ಮಾಮೆಲೂರು.

ಖಂಡಣೆ ಹಣ ಖರುಸಂತೆ ಗೊತ್ತು ಮಾಡಿದ ಸೀಮೆಗಳು.—ಕೆಳದಿವಿಜಿವಪ್ಪನಾಯಕನ ಕಡೆಯವರಿಂದ ಸಕ್ಕರೆಪಟ್ಟಣ, ವೆಸ್ತಾರೆ, ಹೊನ್ನಾವಳ್ಳಿ. ಮಧುರೆ ಪಾಳೆಯಗಾರ ಚಿಕ್ಕಪ್ಪನಾಯಕನಿಂದ ಮಧುರೆ ಮತ್ತು ತಿರುಚನಾಪಳ್ಳಿ.

ಲಕ್ಷ್ಮಪ್ಪನಾಯಕನಿಂದ ಗಡಿಗಳನ್ನು ಸಾಧಿಸಿದ ವಿವರ.—ಪೂರ್ವದಲ್ಲಿ ರಾಜಒಡೆಯರವರು ನರಸೀಪುರದ ಲಕ್ಷ್ಮಪ್ಪನಾಯಕನನ್ನು ಹೊಡೆದು ಓಡಿಸಿ, ಆ ನರಸೀಪುರವನ್ನು ಕಟ್ಟಿಕೊಂಡನಂತರ ಲಕ್ಷ್ಮಪ್ಪನಾಯಕ ಇವನ ಮಗ ನಾರಸಿಂಪನಾಯಕ ಇವನ ಮೂವ್ವುಗ ಲಕ್ಷ್ಮಪ್ಪನಾಯಕ ಇವರು ಆಯಾ ಆಳಿಕೆಯಲ್ಲಿ ಅಲ್ಲಲ್ಲಿ ಪಾಳಯಗಾರರ ಸಂಗಡ ಸೇರಿ ಕೊಂಡು ತುಂಟತನಮಾಡುತ್ತಿದ್ದರು. ಈ ದೊಡ್ಡದೇವರಾಜಒಡೆಯರವರ ಆಳಿಕೆಯಲ್ಲಿ ಆ ಮೂವ್ವುಗ ಲಕ್ಷ್ಮಪ್ಪನಾಯಕನು, ಕೆಳದಿಯ ಶಿವಪ್ಪನಾಯಕನನ್ನು ಬಲಿಷ್ಠನೆಂದು ತಿಳಿದು, ಅವನಲ್ಲಿ ಸೇರಿಕೊಂಡು ಈಗ ಶ್ರೀರಂಗಪಟ್ಟಣದಲ್ಲಿ ಹೊಸದಾಗಿ ಬಬ್ಬರಿಗೆ ದೊರೆತನವಾಗಿದೆ ಎಂಬುದನ್ನೂ ಇಲ್ಲಿಯ ಮೇರ್ಮೆಯನ್ನೂ ಅವನಿಗೆ ತಿಳಿಸಿ, ಶ್ರೀರಂಗಪಟ್ಟಣವನ್ನು ಸಾಧಿಸುವವಕ್ಕೆ ಇದೇ ಸಮಯವೆಂದು ಅವನನ್ನೂ ಇನ್ನೂ ಕೆಲವು ತುಂಟ ಪಾಳಯಗಾರರನ್ನೂ ಸಂಗಡ ಕರೆದುಕೊಂಡು ಬರುತ್ತಿದ್ದನು. ಇದನ್ನು ಕೇಳಿ ದೊಡ್ಡದೇವರಾಜಒಡೆಯರವರು ಸೇನಾಸಮೇತರಾಗಿ ಹೊರಟು, ಅವನನ್ನು ಬರುವ ಮಾರ್ಗದಲ್ಲಿಯೇ ತಡೆದು ಓಡಿಸಿ, ಬಹುದೂರ ಬೆನ್ನಟ್ಟಿ ಹೋಗಿ ಅವನ ಸೇನಾಜನಗಳನ್ನು ಹಿಡಿದು, ಕಿವಿ ಮೂಗುಗಳನ್ನು ಕೊಯಿಸಿ, ಅವನ ದಂಡಿನಲ್ಲಿ ಸಿಕ್ಕಿದ ಆನೆ ಕುದುರೆ ಅಂದಳ ವೆಸ್ತ್ರ ಆಭರಣ ದ್ರವ್ಯ ಮುಂತಾದವುಗಳನ್ನು ತೆಗೆದುಕೊಂಡು ಬರುವ ಮಾರ್ಗದಲ್ಲಿ ಅವನ ಸೀಮೆಯನ್ನು ಲೂಟಿಮಾಡಿ, ಅವನಿಗೆ ಶಿಕ್ಷೆಮಾಡಿಸಿ, ಸಕ್ಕರೆ ಪಟ್ಟಣ ವೆಸ್ತಾರೆ ಹೊನ್ನವಳ್ಳಿ ಇವುಗಳನ್ನು ಕಟ್ಟಿಕೊಂಡು ಬಂದರು. ಅನಂತರ ಆ ಕೆಳದಿ ಶಿವಪ್ಪನಾಯಕನ ಕಡೆಯವರು ಬಂದು ದೊರೆಗಳವರಲ್ಲಿ ಬಹಳವಾಗಿ ಹೇಳಿಕೊಂಡವ್ರಿಂದ, ಕಟೂಹ್ಷನಿಟ್ಟು ಇವುಗಳಿಂದ ಖಂಡಣೆಯನ್ನು ನಿಗದಿಮಾಡಿಕೊಂಡರು. ಆ ಬಳಿಕ ಮೆಧುರೆಯ ಪಾಳಯಗಾರನಿಂದಲೂ ಖಂಡಣೆ ಮಾಡಿಕೊಂಡರು. ಈ ಮೇರಗೆ ತುಂಟ ಪಾಳಯಗಾರರುಗಳನ್ನು ಜಯಿಸಿ, ಸೀಮೆಗಳನ್ನು ಕಟ್ಟಿಕೊಂಡು ತಾವು ಅವರನ್ನು ಜಯಿಸಿದ ಗುರುತು ಇರಬೇಕೆಂದಾ ಲೋಚಿಸಿ ಅವರಲ್ಲಿ ಸಿಕ್ಕಿದ ಆಭರಣಗಳ ನವರತ್ನಗಳಿಂದ, ಮುಂದೆ ಯಾರಾದರೂ ತುಂಟತನಮಾಡಿದರೆ ಅವರ ಶಿರವನ್ನು ಹೀಗೆ ಮೆಟ್ಟಿ

ಆಳುವರೆಂದು ಜನಗಳು ನೋಡಿ ಭಯಪಡುವಂತೆ ಎರಡು ಪಾವುಕೆ ಗಳನ್ನು ಮಾಡಿಸಿ ಮೆಟ್ಟಿಕೊಂಡರು. ಮತ್ತು ಇನ್ನು ಮೇಲೆ ಯುದ್ಧದಲ್ಲಿ ಸಿಕ್ಕಿದ ವೆಸ್ತು ಭರಣ ದ್ರವ್ಯಮುಂತಾದ ಪದಾರ್ಥಗಳನ್ನು ದಾನಧರ್ಮ ದೇವತಾಸೇವೆಗಳಿಗೆ ವಿನಿಯೋಗಿಸಬೇಕೆಂದು ಪ್ರತ್ಯೇಕವಾಗಿ ಇರಿಸುವಂತೆ ಬೊಕ್ಕಸದ ಅಧಿಕಾರಿಗಳಿಗೆ ಕಟ್ಟುಮಾಡಿಸಿದರು.

ಧರ್ಮಕಾರ್ಯಗಳು.—ಶಾ॥ ಶಕ ೧೫೮೬ನೇ (A.D. 1664) ಕ್ರೋಧಿ ಸಂವತ್ಸರದಲ್ಲಿ ಶ್ರೀಚಾಮುಂಡೇಶ್ವರಿ ಅಮ್ಮನವರ ಜೆಟ್ಟಕ್ಕೆ ದೇವರ ದರ್ಶನಕ್ಕಾಗಿ ಜನರು ಹೋಗಿಬರಲು ಹಂತವಿಲ್ಲದೆ ಬಹು ಕ್ರಮವಾಗಿ ದ್ದುದರಿಂದ, ಸರ್ವಜನರೂ ಸರಾಗವಾಗಿ ಹೋಗಿ ಬರುವಂತೆ ಗೈದ ಕಲ್ಲುಗಳಿಂದ ೧೦೦೦ ಸೋಪಾನಗಳನ್ನು ಕಟ್ಟಿಸಿದರು. ಮತ್ತು ಈ ಬೆಟ್ಟದ ಮೆಧ್ಯದಲ್ಲಿ ಆಶ್ಚರ್ಯಕರವಾಗಿಯೂ ಅತಿಸುಂದರವಾಗಿಯೂ ಶಿಲೆ ಯಿಂದ ಬಂದು ದೊಡ್ಡ ಬಸವನನ್ನು ನಿರ್ಮಿಸಿ ಪ್ರತಿಷ್ಠೆಗೈದು, ಪ್ರತಿ ನಿತ್ಯದ ಲ್ಲಿಯೂ ಅವಕ್ಕೆ ಪೂಜೆ ನಡೆವಂತೆ ಕಟ್ಟಳೆಯನ್ನು ಮಾಡಿಸಿದರು. ಶಾ॥ ಶಕ ೧೫೮೮ನೇ (A.D. 1666) ವಿಶ್ವಾವಸು ಸಂವತ್ಸರದ ಮಾಘ ಬಹುಳ ೧೩ ಗುರುವಾರದಲ್ಲಿ ಈ ಬೆಟ್ಟದ ಕೆಳಿಯಲ್ಲಿ ೬೫ ಮನೆಗಳನ್ನು ಕಟ್ಟಿಸಿ ತ್ರಿಮತಸ್ಥ ಬ್ರಾಹ್ಮಣರಿಗೂ ಶಿವರಾತ್ರಿಯ ಪುಣ್ಯಕಾಲದಲ್ಲಿ ೬೫ ವೃತ್ತಿಗಳೊಡನೆ ಧಾರೆಯೆರೆದು ಕೊಟ್ಟು, ಅವಕ್ಕೆ ದೇವರಾಜ ಪುರವೆಂಬ ನಾಮಧೇಯವನ್ನಿಟ್ಟು, ಈ ವೃತ್ತಿವಂತರಾದ ಮಹಾಜನಗಳಿಗೆ ಚನ್ನ ಪಟ್ಟಣಕ್ಕೆ ವಳಿತವಾದ ಕಾನಕಾನಹಳ್ಳಿ ಹೋಬಳಿಗೆ ಸೇರಿದ ಗರಕಹಳ್ಳಿ, ಸೋಗಾಲ ಮುಂತಾದ ೬ ಗ್ರಾಮಗಳನ್ನೂ ಕೊಟ್ಟು, ಈ ಅಗ್ರಹಾರಕ್ಕೆ ತಾಮ್ರದ ಶಾಸನವನ್ನು ಸಹ ಬರೆಸಿ ಕೊಟ್ಟರು ಈ ಅಗ್ರಹಾರದ ಬಳಿಯಲ್ಲಿ ಒಬ್ಬ ಜಂಗಮ ಒಡೆಯರಿಗೆ ಬಂದು ದೊಡ್ಡ ಮಠವನ್ನು ಕಟ್ಟಿಸಿ, ಕೆಲವು ಭೂಮಿಯೊಡನೆ ಕೊಟ್ಟು, ಅವಕ್ಕೆ ಗಚ್ಚಿನಮಠ ಎಂಬ ನಾಮಧೇಯವನ್ನಿಟ್ಟರು. ಈ ದೇವರಾಜ ಪುರವೆಂಬ ಅಗ್ರಹಾರಕ್ಕೂ ಮೈಸೂರ ಕೋಟೆಗೂ ನಡುವೆ ಭಾಟುಮಾರ್ಗದಲ್ಲಿ ದೊಡ್ಡದಾಗಿ ಬಂದು ಕಟ್ಟಾಕವನ್ನು ನಿರ್ಮಿಸಿ ದೇವಾಂಬುಧಿ ಎಂಬ ನಾಮಧೇಯವನ್ನಿಟ್ಟು ಇದೇ

ವಿಕ್ರಾವೆಸು ಸಂವತ್ಸರದ ಫಾಲ್ಗುಣ ಶುದ್ಧ ೧೫ ಶನಿವಾರ ಉತ್ತರಾ ನಕ್ಷತ್ರದಲ್ಲಿ ಈ ತಟಾಕದ ಪ್ರತಿಷ್ಠೆಯನ್ನು ಮಾಡಿಸಿದರು.

ಮೈಸೂರು ತ್ರಿಣೇಶ್ವರಸ್ವಾಮಿ ದೇವಸ್ಥಾನದ ದ್ವಾರಪಾಲಕರ ಮುಂಭಾಗದಲ್ಲಿ ಭದ್ರಬಾಗಿಲ ಕೈಸಾಲೆಗೆ ಪೂರ್ವದಲ್ಲಿ ಇರತಕ್ಕ ೯ ಅಂಕಣದ ನಿಟ್ಟಿನ ಸೂಪು ೪ಕ್ಕೆ ೨೩ ಅಂಕಣಗಳ ಕಲ್ಲುಮಂಟಪವನ್ನು ಕಟ್ಟಿಸಿ, ಈ ಮಂಟಪದಲ್ಲಿ ಗಣಪತಿವೃಷಭನಹಿತವಾಗಿ ಗರುಡಗಂಬದಂತೆ ಒಂದು ದೊಡ್ಡ ಶಿಲಾಸ್ತಂಭವನ್ನು ನಿಲ್ಲಿಸಿ, ಈ ದೇವಸ್ಥಾನದ ಮಹಾದ್ವಾರಕ್ಕೆ ಚಿತ್ರವಿಚಿತ್ರವಾಗಿ ಶಿಲೆಗಳಿಂದಲೂ ಗಾರೆಯಿಂದಲೂ ಏಳುನೆಲೆಯ ಗೋಪುರವನ್ನು ಕಟ್ಟಿಸಿ, ಕೈಸಾಲೆಯ ಅಂಕಣಗಳಲ್ಲಿ ಪಂಚವಿಂಶತಿ ಲೀಲಾಮೂರ್ತಿವಿಗ್ರಹಗಳನ್ನು ಪ್ರತಿಷ್ಠೆ ಮಾಡಿಸಬೇಕೆಂದು ಕೆಲವು ಶಿಲಾವಿಗ್ರಹಗಳನ್ನು ಮಾಡಿಸಿದರು. ಬಂದಾನೊಂದು ರಾಜಕಾರ್ಯನಿಮಿತ್ತವಾಗಿ ಆ ವಿಗ್ರಹಗಳಿಗೆ ಈ ದೇವಸ್ಥಾನದ ಗೋಪುರಬಾಗಿಲಿಗೆ ಪೂರ್ವ ಭದ್ರಬಾಗಿಲಿಗೆ ಪಶ್ಚಿಮ ಈ ನಡುವೆ ಇರುವ ದೊಡ್ಡಡಿಗೆಮನೆಯಲ್ಲಿ ಭೂಸ್ಥಾಪನೆ ಮಾಡಿಸಿ, ಈ ದೇವಸ್ಥಾನದಲ್ಲಿ ಸ್ವಾಮಿಯವರ ಎದುರಿಗೆ ಕೈಮುಗಿದುಕೊಂಡು ನಿಂತಿರುವಂತೆ ಶಿಲೆಯಿಂದ ತಮ್ಮ ಭಕ್ತವಿಗ್ರಹವನ್ನು ಮಾಡಿಸಿದರು.

ತಿರುಪತಿ ವೆಂಕಟರಮಣಸ್ವಾಮಿಯವರಿಗೆ ನಿತ್ಯಕಟ್ಟಳೆಯಲ್ಲಿ ಸಹಸ್ರನಾಮೋರ್ಚನೆ ನಡೆವುದಕ್ಕೆ ಹೂತೊಳಸಿ ತೋಟವನ್ನು ನಿರ್ಮಿಸಿ, ನವರತ್ನಖಚಿತವಾದ ಮಂಟಪದ ಮಂದಾಸನವನ್ನೂ, ಪೊಂಗಲು ನೈವೇದ್ಯಕ್ಕೆ ಎರಡು ಚಿನ್ನದ ಗಂಗಾಳಗಳನ್ನೂ, ನಂದಾದೀವಿಗೆ ಮುಂತಾದ ಸೇವೆ ನಡೆವುದಕ್ಕೆ ಮತ್ತು ಆ ಸೇವೆಕಜನಗಳ ಜೀವನ ನಡೆವುದಕ್ಕೆ ಗ್ರಾಮಗಳನ್ನೂ ಒಪ್ಪಿಸಿದರು.

ತಮ್ಮ ಸೀಮೆಯ ಭಾಟಾಮಾರ್ಗಗಳಲ್ಲಿ ಗಾವುದ ೧ಕ್ಕೆ ಒಂದು ಅನ್ನಸತ್ರ, ಕಲ್ಲು ಮಂಟಪ, ತೋಪು, ಸಾಲುಮರ, ಕೊಳ, ಇವುಗಳನ್ನು ಮಾಡಿಸಿದರು. ನಂಜನಗೂಡು, ಎಡತೊರೆ, ರಾಮೇಶ್ವರ, ಮೇಲುಕೋಟೆ, ತಿರುಪತಿ, ಕಾಶಿ, ರಾಮೇಶ್ವರ, ಹಸ್ತಿಗಿರಿ, ಶ್ರೀರಂಗ ಮುಂತಾದ

ಪುಣ್ಯಕ್ಷೇತ್ರಗಳಲ್ಲಿ ವಾಸಮಾಡಿಕೊಂಡಿರುವ ಬಡವರಾದ ಬ್ರಾಹ್ಮಣರಿಗೆ ಕನ್ಯಾದಾನ ಉಪನಯನ ದಾನಗಳನ್ನು ಮಾಡಿದರಲ್ಲದೆ ಅನೇಕ ಯಜ್ಞಗಳನ್ನು ಮಾಡಿಸಿ, ಬ್ರಾಹ್ಮಣರಿಗೆ ಭಟ್ಟವೃತ್ತಿ, ವರ್ಷಾಶನ, ಮಾಸಾಶನ ಮುಂತಾದ ಜೀವನವನ್ನು ಕಲ್ಪಿಸಿ, ತಮ್ಮ ಪೂರ್ವಿಕರು ಮಾಡಿದ ದಾನಧರ್ಮಗಳನ್ನು ಚೆನ್ನಾಗಿ ಪರಿಪಾಲಿಸುತ್ತಿದ್ದರು. ತಮ್ಮ ಕುಲದೇವತೆಯಾದ ಶ್ರೀಚಾಮುಂಡೇಶ್ವರಿ ಅಮ್ಮನವರಿಗೂ ಶ್ರೀಕಂಠೇಶ್ವರ ಸ್ವಾಮಿಯವರಿಗೂ ಮೇಲುಕೋಟೆ, ಶ್ರೀರಂಗಪಟ್ಟಣ, ಮೈಸೂರು, ಮುಂತಾದ ಸ್ಥಳಗಳಲ್ಲಿರುವ ದೇವರುಗಳಿಗೂ ಅನೇಕ ವಸ್ತ್ರಾಭರಣ ಗ್ರಾಮಭೂಮಿಗಳಂ ಕೊಟ್ಟು ದೇವತಾಸೇವೆಯಂ ಚೆನ್ನಾಗಿ ನಡೆಸುತ್ತಿದ್ದರು. ಶ್ರೀರಂಗಪಟ್ಟಣದ ಕಾವೇರೀಮಣಿಕರ್ಣಿಕಾತೀರದಲ್ಲಿ ಪ್ರತಿನಿತ್ಯದಲ್ಲಿಯೂ ಸಹಸ್ರಬ್ರಾಹ್ಮಣಸಂತರ್ಪಣೆ ಆಗಬೇಕೆಂದಾಲೋಚಿಸಿ, ಆ ತೀರದಲ್ಲಿ ಮನೆಗಳಂ ಕಟ್ಟಿಸಿ ದೇವರಾಜಸಮುದ್ರವೆಂಬ ಅಗ್ರಹಾರವಂ ನಿರ್ಮಿಸಿ, ತ್ರಿಮತಸ್ಥಬ್ರಾಹ್ಮಣರಿಗೂ ವೃತ್ತಿಗಳೂಡನೆ ಧಾರೆಯೆರೆದು ಕೊಟ್ಟರು. ದೊರೆಗಳವರು ತಮ್ಮ ಪೂರ್ವದ ಸೀಮೆಗಳ ಮತ್ತು ತಾವು ಸಾಧಿಸಿದ ಸೀಮೆಗಳ ಆದಾಯ ವ್ಯಯಗಳನ್ನು ನೋಡಿಕೊಂಡು, ಬೊಕ್ಕಸವಲ್ಲಿ ನಿಲ್ಲಿಸತಕ್ಕ ದ್ರವ್ಯಗಳಂ ನಿಲ್ಲಿಸಿ, ಷೋಡಶಮಹಾದಾನಗಳನ್ನು ಮಾಡಬೇಕೆಂದು ಸಂಕಲ್ಪಿಸಿ, ಆಯಾ ಪುಣ್ಯಕಾಲದಲ್ಲಿ ವರ್ಷಕ್ಕೆ ಎರಡು ಮೂರರ ಮೇರೆಗೆ ರಂಗನಾಥಸ್ವಾಮಿ ಸನ್ನಿಧಿಯಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ (೧) ತುಲಾಪುರುಷದಾನ, (೨) ಹಿರಣ್ಯಗರ್ಭದಾನ, (೩) ಬ್ರಹ್ಮಾಂಡದಾನ, (೪) ಕಲ್ಪವೃಕ್ಷದಾನ, (೫) ಗೋಸಹಸ್ರದಾನ, (೬) ಹಿರಣ್ಯಕಾಮಧೇನುದಾನ, (೭) ಹಿರಣ್ಯಾಶ್ವದಾನ, (೮) ಹಿರಣ್ಯಾಶ್ವರಥದಾನ, (೯) ಹೇಮಹಸ್ತಿರಥದಾನ, (೧೦) ಪಂಚಲಾಂಗಲದಾನ, (೧೧) ಧರಾದಾನ, (೧೨) ವಿಶ್ವಚಕ್ರದಾನ, (೧೩) ಕಲ್ಪಲತಾದಾನ, (೧೪) ಸಪ್ತಸಾಗರದಾನ, (೧೫) ರತ್ನಧೇನುದಾನ, (೧೬) ಮಹಾಭೂತಘಟದಾನ; ಈ ಮೇರೆಗೆ ಷೋಡಶ ಮಹಾದಾನಗಳನ್ನು ಶಾಸ್ತ್ರಕ್ಕೆ ಸ್ವಲ್ಪವೂ ನ್ಯೂನತೆ ಇಲ್ಲದಂತೆ ಮಾಡಿ ಸತ್ಕೀರ್ತಿಯಂ ಪಡೆದರು. ಈ ದೊಡ್ಡದೇವರಾಜಒಡೆಯರವರು

ಪ್ರತಿನಿತ್ಯದಲ್ಲಿಯೂ ಸ್ನಾನ ಸಂಧ್ಯಾವಂದನೆಯನ್ನು ಮಾಡಿದ ಬಳಿಕ ಶ್ರೀಮದ್ರಾಮಾಯಣಪಾರಾಯಣ, ನಿತ್ಯದಾನ, ಗೋದಾನ, ದಂಪತಿ ಪೂಜೆ, ಗೋಪೂಜೆಗಳನ್ನು ಮಾಡುತ್ತ ಬ್ರಾಹ್ಮಣರುಗಳ ಮುಖದಿಂದ ಅಷ್ಟಾದಶಪುರಾಣ, ಉಪಪುರಾಣ, ಆಯಾ ಕ್ಷೇತ್ರಮಾಹಾತ್ಮ್ಯ ಮೊದ ಲಾದವುಗಳನ್ನು ಕೇಳಿದನಂತರ ತಮ್ಮ ಅರಮನೆಯ ಚಾಮುಂಡೇಶ್ವರಿ ಮತ್ತು ಕೃಷ್ಣದೇವರ ದರ್ಶನವನ್ನು ಮಾಡಿ ತೀರ್ಥಪ್ರಸಾದವನ್ನು ಸ್ವೀಕರಿಸಿ, ಆರೋಗಣೆಯನ್ನು ಬಿಪ್ಪಿಸಿಕೊಳ್ಳುತ್ತಿದ್ದರು.

ರಾಜ್ಯಭಾರ—ತಾವು ಸಾಧಿಸಿದ ಸೀಮೆಗಳಲ್ಲಿಯೂ, ಪೂರ್ವದಲ್ಲಿದ್ದ ಸೀಮೆಗಳಲ್ಲಿಯೂ, ಪಾಳೆಯಗಾರರುಗಳ ಶೀಲಸ್ವಭಾವವನ್ನು ಚೆನ್ನಾಗಿ ತಿಳಿದು, ಅವರು ಕೇಳಿಕೊಂಡಂತೆ ಕೆಲವರಿಗೆ ಉಂಬಳಿಗಳನ್ನು ಕೊಟ್ಟು, ಮತ್ತು ಕೆಲವರಿಗೆ ಜೋಡಿಯನ್ನು ನೇಮಕಮಾಡಿ, ಕೆಲವರಿಗೆ ಖಂಡಣೆಯ ಧನವನ್ನು ಕೊಡುವಂತೆ ನಿಗದಿಮಾಡಿ, ರಾಜನೀತಿಯಿಂದ ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಮಾಡುತ್ತಾ ಪ್ರಜೆಗಳನ್ನು ಧರ್ಮದಿಂದ ಚೆನ್ನಾಗಿ ಪರಿಪಾಲಿಸುತ್ತಿದ್ದರು. ದೊರೆಗಳವರು ನವರಾತ್ರಿ ಮುಂತಾದ ಉತ್ಸವ ಕಾಲಗಳಲ್ಲಿಯೂ ಯುದ್ಧಕ್ಕೆ ಹೊರಡುವ ಕಾಲಗಳಲ್ಲಿಯೂ, "ರಾಜಕುಲ ತಿಲಕ, ರಾಜಮಾರ್ತಂಡ, ರಾಜಾಧಿರಾಜ, ರಾಜಪರಮೇಶ್ವರ" ಎಂಬ ಬಿರುದುಗಳಿಂದ ಹೊಗಳಿಸಿಕೊಳ್ಳುತ್ತಿದ್ದರಲ್ಲದೆ, "ದೇವಬ್ರಾಹ್ಮಣಪರಿ ಪಾಲಕ" ಎಂಬ ವಿಶೇಷಬಿರುದನ್ನು ಪಡೆದು, ಭೂಲೋಕದಲ್ಲಿ ಈ ದೊಪ್ಪದೇವರಾಜ ಒಡೆಯರವರಿಗೆ ಸರಿಸಾಟಿ ಇಲ್ಲವೆಂದು ಹೊಗಳಿಸಿ ಕೊಳ್ಳುತ್ತಿದ್ದರು.

ಸ್ವರ್ಗಸ್ಥರಾದದ್ದು.—ಬಳಿಕ ಸೀಮೆಯ ವಿಚಾರಣೆಗಾಗಿ ಚಿಕ್ಕನಾಯಕನ ಹಳ್ಳಿಗೆ ಚಿತ್ತೈಸಿರಲು, ಅಲ್ಲಿ ದೇಹಕ್ಕೆ ಬಹಳ ಆಯಾಸವಾಗಲಾಗಿ, ತಮ್ಮ ಸಮಿಾಪದಲ್ಲಿದ್ದ ದಳವಾಯಿ ಕುಮಾರಯ್ಯ ಮುಂತಾದ ಅಧಿಕಾರಿ ಗಳಂಕರೆಸಿ, "ಇನ್ನು ನಮ್ಮ ದೇಹ ನಿಲ್ಲುವುದಿಲ್ಲ. ನಮ್ಮ ಹಿರಿಯ ಕುಮಾರ ರಾದ ಚಿಕ್ಕದೇವರಾಜ ಒಡೆಯರವರು ಸಕಲ ವಿದ್ಯಾಬುದ್ಧಿಯುಂ ಕಲಿತು, ರಾಜನೀತಿಯಂ ಚೆನ್ನಾಗಿ ತಿಳಿದುಕೊಂಡು ಸಾಹಸಪರಾಕ್ರಮಶಾಲಿಗಳಾಗಿ ದಾರೆ. ಅವರನ್ನು ಕರೆಸಿ, ನಮ್ಮ ತರುವಾಯ ಅವರಿಗೆ ಪಟ್ಟವನ್ನು ಕಟ್ಟಿ,

ಅವೆರ ಆಜ್ಞಾನುಸಾರವಾಗಿ ನೀವೆಲ್ಲರೂ ಇರುವ್ರದು" ಎಂದು ಕಟ್ಟುಮಾಡಿ, ಶಾ ॥ ಶಕ ೧೫೯೫ನೇ (A.D. 1673) ಪರೀಧಾವಿ ಸಂವತ್ಸರದ ಫಾಲು ೫ ಶುದ್ಧ ೫ಯಲ್ಲಿ ಚಿಕ್ಕನಾಯಕನ ಹಳ್ಳಿಯಲ್ಲಿ ಸ್ವರ್ಗವನ್ನು ಸೇರಿದರು. ಇವರು ತಮ್ಮ ದೇಹವನ್ನು ಕಾವೇರೀತೀರದಲ್ಲಿಯೇ ಸಾರ್ಥಕ ಮಾಡ ಬೇಕೆಂಬದಾಗಿ ಅಪ್ಪಣೆ ಕೊಟ್ಟಿದ್ದ ಮೇರೆಗೆ, ಇವರ ದೇಹವನ್ನು ಚಿಕ್ಕ ನಾಯಕನ ಹಳ್ಳಿಯಿಂದ ಶ್ರೀರಂಗಪಟ್ಟಣದ ಕಾವೇರೀತೀರಕ್ಕೆ ಬಂದೇ ದಿವಸದಲ್ಲಿ ಜಾಗ್ರತೆಯಾಗಿ ತೆಗೆದುಕೊಂಡು ಬಂದು ಸಾರ್ಥಕ ಮಾಡಿದರು. ಇವರ ಪತ್ನಿಯರಲ್ಲಿ ಒಬ್ಬರು ಮೊದಲೇ ತೀರಿಹೋದರು. ಮಿಕ್ಕವರೆ ಲ್ಲರೂ ಸಹಗಮನಮಾಡಿದರು. ಈ ಸಮಾಚಾರವನ್ನು ಸೂಚಿಸಿ ದಳ ವಾಯಿ ಕುಮಾರಯ್ಯನು ಬರೆದುಕೊಂಡ ವಿಜ್ಞಾಪನ ಪತ್ರಿಕೆಯನ್ನು ಪರಾಂಬರಿಸಿ, ಚಿಕ್ಕದೇವರಾಜ ಒಡೆಯರವರು ತಮ್ಮ ತಂದೆಯವರಿಗೂ ತಮ್ಮ ಮಾತೃಶ್ರೀಯವರುಗಳಿಗೂ ಉತ್ತರ ಕ್ರಿಯೆಗಳನ್ನು ಯಥಾಶಾ ಸ್ತ್ರವಾಗಿ ಹಂಗಳದಲ್ಲಿಯೇ ಮಾಡಿದರು. ಇವರ ತಮ್ಮಂದಿರಾದ ಕಂಠೀ ರವ ಒಡೆಯರವರು ತಂದೆಯವರ ಸಮೀಪದಲ್ಲಿಯೇ ಇದ್ದು ಶ್ರೀರಂಗಪ ಟ್ಟಣದಲ್ಲಿಯೇ ಯಥಾಶಾಸ್ತ್ರವಾಗಿ ಉತ್ತರ ಕ್ರಿಯೆಗಳನ್ನು ಮಾಡಿದರು.

	ವರುಷ	ತಿಂಗಳು	ದಿನ
ಈ ದೊಡ್ಡದೇವರಾಜಒಡೆಯರವರ ಜೀವಿತಕಾಲ	೪೫	೮	೧೬
ಇವರ ಆಳಿಕೆ	೧೩	೫	೨೬

ಇವರ ಆಳಿಕೆಯಲ್ಲಿ ದಳವಾಯಿತನ ಮಾಡಿದವರು:—

	ವರುಷ	ತಿಂಗಳು	ದಿನ
ಕಾರಗಳ್ಳಿ ಹಂಪರಾಜಯ್ಯ	೦	೮	೨೧
ಕಳಲೆಮಲ್ಲರಾಜಯ್ಯ	೦	೧	೫
ಮುದ್ದಯ್ಯ	೧	೩	೦
ನಂಜನಾಥಯ್ಯ	೦	೫	೦
ಕಾಂತಯ್ಯ	೦	೨	೫
ಪೂರ್ವದ ನಂಜನಾಥಯ್ಯ	೫	೦	೦
ಕಳಲೆ ಕುಮಾರಯ್ಯ	೫	೯	೨೫

೮ನೆಯ ಅಧ್ಯಾಯ.

ಹದಿನಾಲ್ಕನೆಯ ಆಳಿಕೆ.

ಚಿಕ್ಕದೇವರಾಜ ಒಡೆಯರವರು (A.D. 1673—A.D. 1704)

ಜನನ.—ಶಾಲಿ ಶಕ ೧೫೬೮ನೇ (A.D. 1645) ಪಾರ್ಥಿವಸಂವತ್ಸರದ ಆಶ್ವಯುಜ ಶುದ್ಧ ೧೦ ಚಂದ್ರವಾರ ಶತಭಿಷಾ ನಕ್ಷತ್ರ ೩ನೇ ಪಾದ ರಾತ್ರಿ ೧೦॥ ಗಳಿಗೆಗೆ ಸಂದ ಮಿಥುನಲಗ್ನದಲ್ಲಿ ದೊಡ್ಡ ದೇವರಾಜ ಒಡೆಯರವರ ಧರ್ಮಪತ್ನಿ ಅಮೃತಮ್ಮಣ್ಣಿಯವರ ಗರ್ಭಸುಧಾಂಬುಧಿಯಲ್ಲಿ ಜನಿಸಿದರು.

ಪಟ್ಟಾಭಿಷೇಕ.—ಇವರು ವಿದ್ಯಾಬುದ್ಧಿಗಳಲ್ಲಿ ಪಾರಂಗತರಾಗಬೇಕೆಂದು ಇವರ ತಂದೆಯವರು ಇವರನ್ನು ಹಂಗಳವೆಂಬ ಗ್ರಾಮದಲ್ಲಿ ಇರಿಸಿದ್ದರು. ಅವರ ಆಜ್ಞಾನುಸಾರವಾಗಿ ದಳವಾಯಿ ಕುಮಾರಯ್ಯ ಮುಂತಾದವರು ಹೋಗಿ ಹಂಗಳದಿಂದ ಇವರನ್ನು ಪತ್ನೀಪುತ್ರ ಸಮೇತರಾಗಿ ರಾಜಮರ್ಯಾದೆಯೊಡನೆ ಕರೆದುಕೊಂಡು ಬಂದು, ಶಾಲಿ ಶಕ ೧೫೯೫ನೇ (A.D.1673) ಪರೀಧಾವಿ ಸಂವತ್ಸರದ ಫಾಲ್ಗುಣ ಶುಕ್ಲ ೧೦ಯಲ್ಲಿ ಶ್ರೀರಂಗಪಟ್ಟಣದಲ್ಲಿ ಪಟ್ಟಾಭಿಷೇಕವನ್ನು ಮಾಡಿಸಿದರು.

ಪತ್ನಿಯರು:—ಪಟ್ಟಕ್ಕೆ ಮುಂಚೆ ಪ್ಲವಸಂವತ್ಸರದ ಫಾಲ್ಗುಣ ಶುದ್ಧ ೧೪ಯಲ್ಲಿ ಶ್ರೀರಂಗಪಟ್ಟಣದಲ್ಲಿ ಇವರ ತಂದೆಯವರು ಮಾಡಿಸಿದ ವಿವಾಹಗಳು :—

(೧) ಯಳಂದೂರು ಲಿಂಗರಾಜಯ್ಯನವರ ಕುಮಾರತಿ ದೇವಾಜಮ್ಮಣ್ಣಿಯವರು. (೨) ದಳವಾಯಿ ಕುಮಾರಯ್ಯನವರ ಕುಮಾರತಿ ದೇವಮ್ಮಣ್ಣಿಯವರು ಪಟ್ಟವಾದ ಖರಿಕ ಸಿದ್ಧಾರ್ಥಿ ಸಂವತ್ಸರದ ಜ್ಯೇಷ್ಠ ಶುದ್ಧ ೧೫ಯಲ್ಲಿ ಶ್ರೀರಂಗಪಟ್ಟಣದಲ್ಲಿ ಇವರು ಅಕ್ಕವಿವಾಹ ಪುರಸ್ಸರನಾಗಿ ವಿವಾಹ ಮಾಡಿಕೊಂಡ ಅಷ್ಟಮಹಿಷಿಯರು :-(೩) ಮೂಗೂರು ಸೋಮರಾಜಯ್ಯನವರ ಕುಮಾರತಿ ಕೆಂಪಮ್ಮಣ್ಣಿಯವರು. (೪) ಯಳಂದೂರು ಚಾಮರಾಜಯ್ಯನವರ ಕುಮಾರತಿ ಮುದ್ದಮ್ಮಣ್ಣಿಯವರು. (೫) ಕಳಲೆ ದಳವಾಯಿ ಕುಮಾರಯ್ಯನವರ ಹಿರಿಯಕುಮಾರತಿ ದೇವಮ್ಮಣ್ಣಿಯವರು. (೬) ಕಳಲೆ ದೇವರಾಜಯ್ಯನವರ ಕುಮಾರತಿ ದೊಡ್ಡಮುದ್ದಮ್ಮಣ್ಣಿಯವರು. (೭) ಹುಲ್ಲಹಳ್ಳಿ ವೀರರಾಜಯ್ಯನವರ ಕುಮಾರತಿ ಕೆಂಪನಂಜಮ್ಮಣ್ಣಿಯವರು. (೮) ಹುಲ್ಲಹಳ್ಳಿ ವೀರರಾಜಯ್ಯನವರ ಕುಮಾರತಿ ಗೌರಮ್ಮಣ್ಣಿಯವರು. (೯) ಹುಲ್ಲಹಳ್ಳಿ ಬಸವರಾಜ

ಯ್ಯನವರ ಕುಮಾರತಿ ದೇವೀರಮ್ಮಣ್ಣಿಯವರು. (೧೦) ಕೊತ್ತಾಗಾಲದ ಕೃಷ್ಣಯ್ಯನವರ ಕುಮಾರತಿ ಕಾಂತಮ್ಮಣ್ಣಿಯವರು.

ಸಂತಾನ :—ಪುತ್ರರು—ಶಾ॥ ಶಕ ೧೫೯೫ನೇ (A.D. 1672) ಪರೀಧಾವಿಸಂವತ್ಸರದ ಪುಷ್ಯ ಬಹುಳ ೪ ಶುಕ್ರವಾರದಲ್ಲಿ ಯಳಂದೂರು ದೇವಾಜಮ್ಮಣ್ಣಿಯವರ ಗರ್ಭಾಂಬುಧಿಯಲ್ಲಿ ಕಂಠೀರವ ನರಸರಾಜ ಒಡೆಯರವರು.

ಪುತ್ರಿಯರು—ಶಾ॥ ಶಕ ೧೬೦೩ನೇ (A.D. 1680) ರೌದ್ರಿಸಂವತ್ಸರದ ಪುಷ್ಯ ಶುದ್ಧ ೩ ಗುರುವಾರದಲ್ಲಿ ಕಳಲೆ ದೊಡ್ಡವಾದ್ದಮ್ಮಣ್ಣಿಯವರಲ್ಲಿ ದೇವಾಜಮ್ಮಣ್ಣಿಯವರು.

ಪತ್ನೀಪುತ್ರರುಗಳಿಂದೊಡಗೂಡಿ ಇವರು ಪೃಥ್ವೀಸಾಮ್ರಾಜ್ಯಮೆಂಗೈಯುತ ಅನೇಕ ದೇಶಕೋಶಗಳನ್ನು ಕಟ್ಟಿ ಬಹು ದ್ರವ್ಯಗಳಂ ಸಂಪಾದಿಸಿ ಅನೇಕ ದೇಶ ಮರ್ಯಾದಾವ್ಯವಸ್ಥೆಗಳನ್ನುಂಟುಮಾಡಿದರು.

ಮಂತ್ರಾಲೋಚನ ಸಭೆ.—ಮಂತ್ರಾಲೋಚನೆ ಮುಂತಾವ ಕಾರ್ಯವೆನ್ನು ನಡೆಸುವದಕ್ಕೆ ೫ ಜನಗಳನ್ನು ನೇಮಕಮಾಡಿದರು.

(೧) ಯಳಂದೂರು ಪಂಡಿತರು, (೨) ತಿರುಮಲಯ್ಯಂಗಾರರು, (೩) ಷಡಕ್ಷರಯ್ಯನವರು, (೪) ತಮಗ ವಿದ್ಯೆಯನ್ನು ಹೇಳಿದ ಚಿಕ್ಕುಪಾಧ್ಯಾಯರು, (೫) ಲಿಂಗಣ್ಣಯ್ಯ, ಈತನಿಗೆ ಎಲ್ಲಾ ಸಿಮೇಯ ಕರಣಿಕತನವೆನ್ನು ಸಹ ನೇಮಕಮಾಡಿದರು.

ದೇಶಗಳನ್ನು ಕಟ್ಟಿದ್ದು :—

ಶಾ॥ ಶಕ ೧೫೯೮ನೇ (A.D. 1676) ರಾಕ್ಷಸ ಸಂ॥ ಮಾಘ ಬಹುಳ ೧೦ಯಲ್ಲಿ ನರಸಪ್ಪಒಡೆಯರಿಂದ ಚಿಕ್ಕದೇವರಾಯನದುರ್ಗ.

ಈ ಫಾಲ್ಗುಣ ಬಹುಳ ೫ಯಲ್ಲಿ ಚಿಕ್ಕಪ್ಪಗೌಡನಿಂದ ದೊಡ್ಡದೇವಗಗನಗಿರಿ.

ಶಾ॥ ಶಕ ೧೫೯೯ನೇ (A.D. 1676) ನಳಸಂ॥ ವೈಶಾಖ ಬಹುಳ ೬ಯಲ್ಲಿ ರಣದುಲ್ಲಾಖಾನನ ಕಡೆಯ ಜಾಂಗೀರ್‌ಖಾನನಿಂದ ಹೊನ್ನವಳ್ಳಿ.

ಈಪುಷ್ಯ ಬಹುಳ ೫ಯಲ್ಲಿ ಹುಸೇನ್‌ಖಾನನಿಂದ ಚಿಕ್ಕದೇವರಾಯಸಮುದ್ರಕ್ಕೆ ವೆಳಿತವಾದ ಬೊಮ್ಮಸಮುದ್ರ.

ಈ ಮಾಘ ಬಹುಳ ೩ಯಲ್ಲಿ ಭೂಪಾಲಂಗಯ್ಯನಿಂದ ತೊದನಾಡು.

ಶಾ॥ ಶಕ ೧೬೦೦ನೇ (A.D. 1678) ಪ್ಲವಂಗಳ ಸಂ॥ ಪುಷ್ಯ ಬಹುಳ ೭ಂಯಲ್ಲಿ ಘಟ್ಟವೊಪಲಿಯಾರಿಂದ ಅಂದೂರು.

ಮೆದ್ದಗಿರಿಗೆ ವಳಿತವಾದ ಸೀಮೆಗಳನ್ನೂ, ಮೆದ್ದಗಿರಿಯನ್ನೂ ಅಲ್ಲಿಯ ಪಾಳಯಗಾರ ಚಿಕ್ಕಪ್ಪಗೌಡನಿಂದ ಜಯಿಸಿದರು.

ಅವುಗಳ ವಿವರ:—

ಶಾ॥ ಶಕ ೧೬೦೦ನೆ (A.D. 1678) ಪ್ಲವಂಗಳ ಸಂ॥ ಮಾಘ ಬಹುಳ ೩ಯಲ್ಲಿ ಕೊಂಡ್ಲಿಗೆರೆ.

ಈ ಫಾಲ್ಗುಣ ಶುದ್ಧ ೪ಲ್ಲಿ ಕೊರಟಿಗೆರೆ.

ಶಾ॥ ಶಕ ೧೬೦೦ನೇ (A.D. 1678) ಕಾಳಯುಕ್ತಿ ಸಂ॥ ಜ್ಯೇಷ್ಠ ಬಹುಳ ೩ಲ್ಲಿ ಮೆದ್ದಗಿರಿ.

ಈ ಜ್ಯೇಷ್ಠ ಬಹುಳ ೧೩ಲ್ಲಿ ಕುದೂರು.

ಈ ಜ್ಯೇಷ್ಠ ಬಹುಳ ೩೦ಲ್ಲಿ ವೀರಣ್ಣನದುರ್ಗ.

ಈ ಶ್ರಾವಣ ಬಹುಳ ೫ಲ್ಲಿ ಮೆದ್ದಗಿರಿಯಕುಂಭಿ.

ಈ ಶ್ರಾವಣ ಬಹುಳ ೭ಲ್ಲಿ ಹೊಸೂರು.

ಈ ಶ್ರಾವಣ ಬಹುಳ ೧೪ಲ್ಲಿ ಚನ್ನರಾಯದುರ್ಗಕ್ಕೆ ತಾಣ್ಯ.

ಈ ಭಾದ್ರಪದ ಶುದ್ಧ ೧೦ಲ್ಲಿ ಮನ್ನೆಕೋಳಾಲ.

ಈ ಆಶ್ವಯುಜ ಶುದ್ಧ ೧೩ಲ್ಲಿ ಮಿಷಗೇಶಿ ಕುಂಭಿಗೆ ತಾಣ್ಯ.

ಈ ಕಾರ್ತಿಕ ಶುದ್ಧ ೫ಲ್ಲಿ ಗುಂಡುಮಲೆದುರ್ಗ.

ಈ ಕಾರ್ತಿಕ ಬಹುಳ ೫ಲ್ಲಿ ಭುಕ್ತಿಪುರಕ್ಕೆ ತಾಣ್ಯ.

ಮೆದ್ದಗಿರಿಗೆ ವಳಿತವಾದ ಈ ಸೀಮೆಗಳನ್ನು ಸಾಧಿಸುವಕಾಲಗಳಲ್ಲಿ ಆ ಪಾಳಯಗಾರ ಚಿಕ್ಕಪ್ಪಗೌಡನಿಗೆ ಸಹಾಯರಾಗಿ ಬಂದ ತುಂಟ ಪಾಳಯಗಾರರುಗಳಿಗೆ ನಾಸಿಕಾಚ್ಛೇದನ ಮುಂತಾದ ಶಿಕ್ಷೆಗಳನ್ನು ಮಾಡಿ, ಅವರುಗಳಲ್ಲುದ್ದ ವಸ್ತ್ರಾಭರಣ ದ್ರವ್ಯ ಮುಂತಾದ ಪದಾರ್ಥಗಳನ್ನು ತೆಗೆದುಕೊಂಡದ್ದಲ್ಲದೆ, ಆ ಮೆದ್ದಗಿರಿ ಚಿಕ್ಕಪ್ಪಗೌಡನ ಮನೆಯಲ್ಲಿದ್ದ ಆನೆ, ಕುದುರೆ, ವಸ್ತ್ರಾಭರಣ, ದ್ರವ್ಯ ಮುಂತಾದ ಸಕಲ ಪದಾರ್ಥಗಳನ್ನೂ ತೆಗೆದುಕೊಂಡು ಬಂದರು.

ಶಾ॥ ಶಕ ೧೬೦೦ನೇ (A.D. 1687) ಪ್ರಭವ ಸಂ॥ ಚೈತ್ರ ಶುದ್ಧ ೧೫ಲ್ಲಿ ಫಂಪಿಂಖಾನನಿಂದ ತುಮಕೂರು.

ಈ ವೈಶಾಖ ಶುದ್ಧ ೧೦ಲ್ಲಿ ಪೂರ್ವದಲ್ಲಿ ದೊಡ್ಡದೇವರಾಜ ಒಡೆಯನವರು ಸಾಧಿಸಿದ್ದ ಚಿಕ್ಕನಾಯಕನ ಹಳ್ಳಿಯನ್ನು ಕಂದಿ ಕೆರೆಯಲ್ಲಿದ್ದ ವೆಂಕೋಜಿರಾಯನು ಕಟ್ಟಿಕೊಂಡಿದಾನೆಂದು ತಿಳಿದು ಅವನನ್ನು ಜಯಿಸಿ ಕಟ್ಟಿಕೊಂಡದ್ದು ಚಿಕ್ಕನಾಯಕನಹಳ್ಳಿ.

ಮೆರಾಟಿ ವೆಂಕೋಜಿರಾಯನಿಂದ :—

ಈ ವೈಶಾಖ ಬಹುಳ ೫ಂಲ್ಲಿ ಕಂದಿಕೆರೆ.
ಈ ಜ್ಯೇಷ್ಠ ಶುದ್ಧ ೫ಲ್ಲಿ ತ್ಯಾಮಗುಂಡಲು.
ಈ ನಿಜಾಷಾಢ ಶುದ್ಧ ೧೫ಲ್ಲಿ ಪೆನಗೊಂಡೆ ಕಾಸಿಂಖಾನನಿಂದ ಬೆಂಗಳೂರು.

ಶಾಲಿ ಶಕ ೧೬೧೧ನೇ (A.D. 1688) ವಿಭವ ಸಂ॥ ಚೈತ್ರ ಬಹುಳ ೬ಲ್ಲಿ ಮೆರಾಟಿ ವೆಂಕೋಜಿರಾಯನಿಂದ ಶಂಬಗಿರಿಯ ಗುರಿಕಾರ ಚಿಕ್ಕಯ್ಯನು ಕಟ್ಟಿಕೊಂಡಿದ್ದ ಆವಣಿ ಪೆರೂರು, ಅರಶೆರವಾಣಿ, ಹೊಸ ಕೋಟೆ.

ಈ ಜ್ಯೇಷ್ಠ ಬಹುಳ ೫ಲ್ಲಿ ಗುರಿಕಾರ ಚಿಕ್ಕಯ್ಯನಿಂದ ಶಂಖಗಿರಿ.
ಈ ಮಾರ್ಗಶಿರ ಶುದ್ಧ ೧೦ಲ್ಲಿ ವೆಂಕೋಜಿರಾಯನಿಂದ ಮೆನು ಗೊಂಡೆದುರ್ಗ.

ಈ ಮಾರ್ಗಶಿರ ಶುದ್ಧ ೧೦ಲ್ಲಿ ಶಾಲ್ಯವೆರಿಂದ ಮನ್ನಾರ ಗುಡಿ.

ವೆಂಕೋಜಿರಾಯನಿಂದ :—

ಈ ಮಾರ್ಗಶಿರ ಶುದ್ಧ ೧೫ಲ್ಲಿ ವಾಮೆಲೂರು.
ಈ ಮಾಘ ಶುದ್ಧ ೫ಲ್ಲಿ ಧರ್ಮಪುರಿ.

ಶಾಲಿ ಶಕ ೧೬೧೨ನೇ (A.D. 1689) ಶುಕ್ಲ ಸಂ॥ ವೈಶಾಖ ಬಹುಳ ೫ಲ್ಲಿ ಪೆರಮತಿ.

ಕೊಯಮುತ್ತೂರು ಗುರಿಕಾರ ಶಿಂಗರಾಜಯ್ಯನಿಂದ :—

ಈ ಆಷಾಢ ಬಹುಳ ೧೦ಲ್ಲಿ ಕಾವೇರಿಪಟ್ಟಣ.
ಈ ಆಶ್ವಯುಜ ಬಹುಳ ೧೫ಲ್ಲಿ ಹುಂತೂರುಮುರ್ಗ.

ಈ ಮೊಷೆ ಬಹುಳ ೧೪ಲ್ಲಿ ಮೆರಾಟಿಯವೆರ ಕಡೆ ಫೌರಜಿ ಯಿಂದ ಅನಂತಗಿರಿ.

ಶಾ॥ ಶಕ ೧೬೧೫ನೇ (A.D. 1690) ಪ್ರಮೋದೂತ ಸಂ॥ ಅಧಿಕ ವೈಶಾಖ ಶುದ್ಧ ೬ಲ್ಲಿ ಬಾಗಡಿ ಪಾಳಯಗಾರನಿಂದ ಬಾಗಡಿ.

ಇಕ್ಕೇರಿ ಶಿವಪ್ಪನಾಯಕನಿಂದ :—

ಈ ಅಧಿಕ ವೈಶಾಖ ಶುದ್ಧ ೧೦ಲ್ಲಿ ಸಾರನಹಳ್ಳಿ.

ಈ ನಿಜ ವೈಶಾಖ ಬಹುಳ ೧೦ಲ್ಲಿ ಬಾಣಾವರ.

ಈ ಜ್ಯೇಷ್ಠ ಬಹುಳ ೫ಲ್ಲಿ ಕಡೂರು.

ಈ ಆಷಾಢ ಶುದ್ಧ ೮ಲ್ಲಿ ಸಕ್ಕರೆಪಟ್ಟಣ.

ಈ ಶ್ರಾವಣ ಶುದ್ಧ ೩ಲ್ಲಿ ಜೇಲೂರು.

ಈ ಶ್ರಾವಣ ಬಹುಳ ೩ಲ್ಲಿ ವಸ್ತಾನೆ.

ಐಗೂರು ಕೃಷ್ಣಪ್ಪನಾಯಕನಿಂದ :—

ಈ ಶ್ರಾವಣ ಬಹುಳ ೧೪ಲ್ಲಿ ಚಿಕ್ಕಮಗಳೂರು.

ಈ ಭಾದ್ರಪದ ಶುದ್ಧ ೫ಲ್ಲಿ ಮೆಹಾರಾಜನದುರ್ಗ.

ಇಕ್ಕೇರಿ ಶಿವಪ್ಪನಾಯಕನಿಂದ :—

ಈ ಆಶ್ವಯುಜ ಶುದ್ಧ ೫ಲ್ಲಿ ಪೂರ್ವದಲ್ಲಿ ದೊಡ್ಡದೇವರಾಜ ಒಡೆಯರವರು ಸಾಧಿಸಿದ್ದ ಹಾಸನವೆನ್ನು ಪುನಃ ಸಾಧಿಸಿದರು.

ಈ ಆಶ್ವಯುಜ ಶುದ್ಧ ೧೫ಲ್ಲಿ ಗ್ರಾಮ.

ಶಾ॥ ಶಕ ೧೬೧೭ನೇ (A.D. 1695) ಭಾವ ಸಂ॥ ಫಾಲ್ಗುಣ ಶುದ್ಧ ೧೪ಲ್ಲಿ ಪೂರ್ವದಲ್ಲಿ ಇಮ್ಮಡಿ ರಾಜಒಡೆಯರವರು ಕಟ್ಟಿ ಕೊಂಡಿದ್ದ ಅರಕಲಗೂಡನ್ನು ಅಲ್ಲಿಯ ಪಾಳಯಗಾರನಿಂದ ಪುನಃ ಕಟ್ಟಿಕೊಂಡರು.

ಐಗೂರು ಕೃಷ್ಣಪ್ಪನಾಯಕನಿಂದ :—

ಶಾ॥ ಶಕ ೧೬೧೮ನೇ (A.D. 1695) ಯುವ ಸಂ॥ ಚೈತ್ರ ಶುದ್ಧ ೫ಲ್ಲಿ ಐಗೂರು.

ಈ ಚೈತ್ರ ಬಹುಳ ೧೦ಲ್ಲಿ ಸಕಲೇಶಪುರ.

ಈ ವೈಶಾಖ ಬಹುಳ ೮ಲ್ಲಿ ಕೊಡ್ಲಿಪೇಟೆ.

ಚಿನ್ನಪ್ಪನಾಯಕನಿಂದ :—ಶಾ॥ ಶಕ ೧೬೦೦ನೇ (A.D. 1697) ಈಶ್ವರ
ಸಂ॥ ಚೈತ್ರ ಶುದ್ಧ ೫ಲ್ಲಿ ಶಾಲ್ಯ.
ಈ ವೈಶಾಖ ಶುದ್ಧ ೫ಲ್ಲಿ ಶಾದಮೆಂಗಲ, ನಾಮಕಲ್ಲು.
ಈ ವೈಶಾಖ ಬಹುಳ ೫ಲ್ಲಿ ತಮ್ಮೆಂಬಟ್ಟ್ಯ.

ಬೆಂಗಳೂರನ್ನು ಸಾಧಿಸಿದ ಕ್ರಮ.—ಪೂರ್ವದಲ್ಲಿ ಸಾತಾರೆಯ ಅರಸಾದ ಮಹಾಪರಾಕ್ರಮಶಾಲಿ ಶಂಬಾಜಿಯು, ದಿಲ್ಲಿಯ ಪರ್ಯಂತಕ್ಕೂ ಬಹುಸೀಮೆಗಳನ್ನು ಕಟ್ಟಿಕೊಂಡು ಸಾತಾರೆಯಲ್ಲಿ ಇರಲು, ದಿಲ್ಲಿಯ ಪಾದಷಾಹರು ವೆಂಕನೆಯಿಂದ ಆ ಶಂಬಾಜಿಯನ್ನು ಹಿಡಿದುಕೊಂಡು ಹೋದರು. ಬಳಿಕ ಅವನ ತಮ್ಮ ಶಿವಾಜಿಯು ಪಾದಷಾಹರ ಭಯದಿಂದ ತಪ್ಪಿಸಿಕೊಂಡು, ಕೆಲವು ದ್ರವ್ಯವನ್ನೂ ಸೇನೆಯನ್ನೂ ತೆಗೆದುಕೊಂಡು ಓಡಿಬರುತ್ತ, ಬೆಂಗಳೂರಲ್ಲಿದ್ದ ಮಾಗಡಿ ಕೆಂಪೇಗೌಡನನ್ನು ಹೊಡೆದು ಓಡಿಸಿ, ಅದನ್ನು ಸ್ವಾಧೀನ ಮಾಡಿಕೊಂಡಿರುವ ಸಮಯದಲ್ಲಿ, ಶ್ರೀರಂಗಪಟ್ಟಣದ ರಣಧೀರ ಕಂಠೀರವ ನರಸರಾಜ ಒಡೆಯರವರ ಸಾಹಸ ಪರಾಕ್ರಮವನ್ನು ತಿಳಿದು, ಶ್ರೀರಂಗಪಟ್ಟಣದ ಸಮೀಪದಲ್ಲಿರುವ ಬೆಂಗಳೂರನ್ನು ಬಿಟ್ಟು ದೂರವಾದ ಇನ್ನೊಂದು ಸ್ಥಲವನ್ನು ಮಾಡಬೇಕೆಂದಿದ್ದನು. ಆಗ ತಂಜಾವೂರು ಸಂಸ್ಥಾನದ ವಿಜಯರಾಘವ ನಾಯಕನೆಂಬವನು, ಒಬ್ಬ ತೆಂಗಲೆಯ ಆಚಾರ್ಯಪುರುಷರನ್ನು ಗುರುಗಳಾಗಿ ಮಾಡಿಕೊಂಡು, ದೇಶಕೋಶಗಳ ವಿಚಾರಣೆಗಳನ್ನು ಬಿಟ್ಟು, ದಂಡಿನ ಜನಗಳಿಗೆ ಸಂಬಳವನ್ನು ಕೊಡದೆ, ಆ ಆಚಾರ್ಯಪುರುಷರು ಹೇಳಿದಂತೆ ಚಕ್ರಾಂಕನವನ್ನು ಮಾಡಿಸಿಕೊಂಡು, ಊರ್ಧ್ವಪುಂಡ್ರವನ್ನು ಧರಿಸುತ್ತ, ಮೂಲಮಂತ್ರೋಪಾಸನೆ ಮಾಡಿ, ಪ್ರತಿದಿನದಲ್ಲಿಯೂ ಆಚಾರ್ಯಪುರುಷರ ಶ್ರೀಪಾದತೀರ್ಥವನ್ನೇ ಮುಖ್ಯವಾಗಿ ತೆಗೆದುಕೊಳ್ಳುವುದಲ್ಲದೆ, ಅನ್ಯದೇವತಾ ಭಜನೆ ಇಲ್ಲದೆ ನಡೆದುಕೊಳ್ಳುತ್ತಿರುವನು ಎಂಬ ವರ್ತಮಾನವನ್ನು ಕೇಳಿ, ಈ ಶಿವಾಜಿಯು ಅಪ್ತನಾದ ತನ್ನ ಸಂಬಂಧಿಯನ್ನೂ ಕೆಲವು ಸೇನೆಯನ್ನೂ ಬೆಂಗಳೂರಲ್ಲಿ ಇರಿಸಿ, ತಂಜಾವೂರಿಗೆ ಹೋಗಿ, ವಿಜಯರಾಘವನಾಯಕನನ್ನು ಹೊಡೆದು ಓಡಿಸಿ, ಅದನ್ನು ಕಟ್ಟಿಕೊಂಡು ಅಲ್ಲಿ ದೊರೆತನವನ್ನು ಮಾಡಿಕೊಂಡಿದ್ದನು. ಅನಂತರ

ಇವನ ಮಗ ವೆಂಕೋಜಿ ಇವನಮಗ ಶಹಜಿ ಇವರು ತಂಜಾವೂರಲ್ಲಿ ಇರುವ ಸಮಯದಲ್ಲಿ, ಚಿಕ್ಕದೇವರಾಜ ಒಡೆಯರವರ ಸೇನೆಯವರು ಈ ಕಾರಣವು ಕಳಗಿರುವ ತಿರುಚನಾಪಳ್ಳಿ ಮಧುರೆ ಮೊಂತಾದ ಸ್ಥಲಗಳ ಪಾಳಯಂಗಾರರುಗಳನ್ನು ನಿಗ್ರಹಿಸಿ ಖಂಡಣೆಯನ್ನು ನಿಗದಿಮಾಡಿ ಕೊಂಡು ಹೋಗಿದಾರೆ, ಶ್ರೀರಂಗಪಟ್ಟಣದ ದೊರೆಗಳು ಮಹಾ ಪರಾಕ್ರಮಿಗಳಾಗಿದ್ದಾರೆ, ಇವರು ನಮ್ಮ ತಂಜಾವೂರನ್ನೂ ಇವರ ಸಂಸ್ಥಾನದ ಸಮೀಪದಲ್ಲಿರುವ ಬೆಂಗಳೂರನ್ನೂ ಸಹ ಏನುಮಾಡುವರೋ, ಇವರ ಸಂಗಡ ನಾವು ಸ್ನೇಹವೆಂ ಬೆಳೆಸದಿದ್ದರೆ ನಮಗೆ ಎಂದಿಗೂ ಕ್ಷೇಮವಾಗಲಾರದು ಎಂದು ಆಲೋಚಿಸಿ, ತಮಗೆ ವೆಚ್ಚಕ್ಕೆ ೩ ಲಕ್ಷ ರೂಪಾಯಿಗಳನ್ನು ಕಳುಹಿಸಿಕೊಟ್ಟರೆ ಆ ಹಣಕ್ಕೆ ಬೆಂಗಳೂರನ್ನೇ ಕ್ರಯಕ್ಕೆ ಕೊಡುತ್ತೇವೆಂದು ಒಬ್ಬ ವಕೀಲನಸಂಗಡ ಪತ್ರವನ್ನು ಬರೆಸಿ ಚಿಕ್ಕ ದೇವರಾಜ ಒಡೆಯರವರ ಸನ್ನಿಧಾನಕ್ಕೆ ಕಳುಹಿಸಿಕೊಟ್ಟರು. ಚಿಕ್ಕದೇವರಾಜಒಡೆಯರವರು, ಅವರು ಕೇಳಿಕೊಂಡಂತೆ ಮೂರು ಲಕ್ಷ ರೂಪಾಯಿಗಳನ್ನು ಕೊಟ್ಟು ಬೆಂಗಳೂರನ್ನು ಸ್ವಾಧೀನಮಾಡಿ ಕೊಳ್ಳುವಷ್ಟರಲ್ಲಿಯೇ ಪೆನಗೊಂಡೆ ಕಾಶಿಂಖಾನನೆಂಬವನು ಶಾ॥ ಶಕ ೧೬೧೦ ನೇ (A.D. 1687) ಪ್ರಭವ ಸಂವತ್ಸರದ ನಿಜಾಷಾಢ ಶುದ್ಧ ೧೦ಲ್ಲಿ ಬೆಂಗಳೂರಿಗೆ ಠಾಣೆಹಾಕಿಕೊಂಡನೆಂಬ ವರ್ತಮಾನವನ್ನು ಕೇಳಿ, ಆ ಕಾಶಿಂಖಾನನನ್ನು ಹೊಡೆದೋಡಿಸಿ, ನಿಜಾಷಾಢ ಶುದ್ಧ ೧೫ಲ್ಲಿ ತಮ್ಮ ಠಾಣ್ಯವನ್ನು ಹಾಕಿಕೊಂಡು, ಕ್ರಯಕ್ಕೆ ತೆಗೆದುಕೊಂಡ ಬೆಂಗಳೂರಿಗೆ ಬುದ್ಧಿವಂತರಾದ ಅಧಿಕಾರಿಗಳಂ ನೇಮಕಮಾಡಿ, ವಿಸ್ತಾರವಾಗಿ ಪೇಟೆ ಕೋಟೆಗಳನ್ನು ಕಟ್ಟಿಸಿ, ವಾಣಿವರ್ತಕರನ್ನೂ ೧೦ ಸಾವಿರ ಮಗ್ಗದ ಜನಗಳನ್ನೂ ತಂದಿರಿಸಿ, ಇವರಿಗೆಲ್ಲಾ ಕೌಲುಕಾರರು ಮಾಡಿಕೊಟ್ಟು ಇಲ್ಲಿ ಆದ ಜಮೆಯ ಎಲ್ಲಾ ಸೀಮೆಗಳಿಗೆ ಹೋಗುವಂತೆಯೂ ಶ್ರೀರಂಗ ಪಟ್ಟಣದ ಅರಮನೆಗೂ ಬರುವಂತೆಯೂ ನಿಬಂಧನೆ ಮಾಡಿ ಪೇಟೆ ಯನ್ನು ವಸತಿ ಮಾಡಿಸಿದರು.

ಖಂಡಣೆ ಮಾಡಿಕೊಂಡ ಸೀಮೆಗಳ ವಿವರ.—ಕಾಳಯುಕ್ತಿ ಸಂವತ್ಸರದಲ್ಲಿ ಮೊಗಡಿಗೆ ಮುತ್ತಿಗೆಹಾಕಿ ಕೆಂಪೇಗೌಡನಿಂದ ಖಂಡಣೆಯನ್ನು

ನಿಷ್ಕರ್ಷೆಮಾಡಿಕೊಂಡರು. ಐಗೂರು ಕೃಷ್ಣಪ್ಪನಾಯಕನು ಪಾದಾಕ್ರಾಂತನಾಗಿ ತನಗೆ ಜೀವನ ವಿಲ್ಲವೆಂದು ಬಿನ್ನವಿಸಿಕೊಂಡದ್ದರಿಂದ, ದೊರೆಗಳವರು ದಯಪಾಲಿಸಿ ಅವನ ಮಕ್ಕಳಿಗೆ ಐಗೂರು, ಸಕಲೇಶಪುರ ಇವುಗಳನ್ನೂ, ಇದೇಮೇರೆಗೆ ಇಕ್ಕೇರಿ ಶಿವಪ್ಪನಾಯಕನು ಬಿನ್ನವಿಸಿಕೊಂಡದ್ದರಿಂದ ಅವನಿಗೆ ವಸ್ತ್ರಾರೆಯನ್ನೂ, ಜೀವನಾರ್ಥವಾಗಿ ಕೊಟ್ಟು, ನಿಂತಹಣಕ್ಕೆ ಖಂಡಣೆಯನ್ನು ನಿಷ್ಕರ್ಷೆಮಾಡಿಕೊಂಡರು. ದೊರೆಗಳವರು ತಮ್ಮ್ಮದಂಡನ್ನು ಕೊಪಗು ಮಲೆಯಾಳ ಪ್ರಾಂತಕ್ಕೆ ಕಳುಹಿಸಿ ಕೊಟ್ಟು, ಅವರುಗಳನ್ನು ಯುದ್ಧವಲ್ಲಿ ಭಯಪಡಿಸಿ, ಅವರಿಂದ ವಸ್ತ್ರಾಭರಣ ಅನೆಕುದುರೆ ಮುಂತಾದ ಪದಾರ್ಥಗಳನ್ನೂ ಕೆಲವು ದ್ರವ್ಯವನ್ನೂ ಸಹ ತೆಗೆದುಕೊಂಡು ಮುಂದೆ ಪ್ರತಿವರ್ಷದಲ್ಲಿಯೂ ಖಂಡಣೆಯ ಹಣವನ್ನು ಕೊಡುವಂತೆ ನೇಮಕಮಾಡಿದರು.

ಹೆಚ್ಚಾಗಿ ಸೇನೆಯನ್ನು ಕಟ್ಟಿದ್ದು.—ಮೇಲೆ ಹೇಳಿದ ಗಡಿಗಳನ್ನು ಸಾಧಿಸುವುದಕ್ಕೆ ಮುಂಚೆಯೇ ತಮ್ಮ್ಮ ಸೇನೆಯು ಸಾಲದು ಎಂದು ತಿಳಿದು, ಹೊಸದಾಗಿ ಸೇನೆಯನ್ನು ಕಟ್ಟುವುದಕ್ಕೆ ತಮ್ಮ್ಮ ಸೀಮೆಯ ಆದಾಯವ್ಯಯದ ಲೆಕ್ಕವನ್ನು ನೋಡಿಕೊಂಡು, ಪೂರ್ವದಲ್ಲಿ ಇದ್ದದಲ್ಲದೆ ಈಗ ಹೊಸದಾಗಿ ೧೫,೦೦೦ ಕುದುರೆ, ೧,೦೦,೦೦೦ ಕಾಲಾಳ, ಇದಕ್ಕೆ ತಕ್ಕ ಕಾಮೋಟಿ, ಕಲಾಸಿಗಳನ್ನೂ, ಫಿರಂಗಿ, ತುಪಾಕಿ, ಕತ್ತಿ, ಕಠಾರಿ, ಗುರಾಣಿ, ಈಟಿ ಮೊದಲಾದ ಆಯುಧಗಳನ್ನೂ, ಮದ್ದುಗುಂಡು, ಅನೆ, ಒಂಟೆ, ಎತ್ತು, ಬಂಡಿ, ಗುಡಾರ ಮುಂತಾದ ಯುದ್ಧಸಾಮಗ್ರಿಗಳನ್ನೂ ಸಿದ್ಧಮಾಡಿಸಿದರು.

ಫಿರಂಗಿಗಳನ್ನಿರಿಸಿದ್ದು.—ಅನಂತರ ಶ್ರೀರಂಗಪಟ್ಟಣದ ಒಳಕೋಟೆ ಹೊರಕೋಟೆ ಜೀಬಿ ಇವುಗಳಲ್ಲಿರುವ ಕೊತ್ತಲಗಳಲ್ಲಿ ಫಿರಂಗಿಗಳನ್ನು ಇರಿಸಿದರು.

ಒಳಕೋಟೆಯ ಕೊತ್ತಲಗಳಲ್ಲಿ ಇರಿಸಿದ್ದು.—

ಹೊಸಕೇರಿಯಲ್ಲಿರುವ ಹನುಮಂತನ ಕೊತ್ತಲದಲ್ಲಿ ಫಿರಂಗಿ ೧

ಮೊಲೆಯ ಕೊತ್ತಲದಬಳಿ ರಾಮ ಬಲರಾಮ ಕೊತ್ತಲಗಳಲ್ಲಿ

ರಾಮ ಬಲರಾಮ ಎಂಬ ಫಿರಂಗಿಗಳು ೨

ನಾಗಮಂಗಲದ ಚನ್ನಯ್ಯನ ಕೊತ್ತಲದ ಬಳಿಯಲ್ಲಿರುವ
ಪುಚ್ಚ ನಾರಸಿಂಹನ ಕೊತ್ತಲದಲ್ಲಿ ೧
ಬೇಡಗೇರಿಯಲ್ಲಿ ವಿಷ್ಣು ಚಕ್ರದ ಕೊತ್ತಲದಲ್ಲಿ ದೊಡ್ಡಖಿರಂಗಿ ೧
ಮೆರದಕೇರಿಯಲ್ಲಿ ಭೂತನಾಥನ ಕೊತ್ತಲದಲ್ಲಿ ೧
ಹುಲ್ಲುಮೆದೆಯ ಬಳಿಯಲ್ಲಿ ಚಾಮುಂಡಿಯಕೊತ್ತಲದಲ್ಲಿ ೧
ಈ ಪೊತ್ತಿನಲ್ಲಿರುವ ಸಿಡಿಲುನೆಲ್ಲನ ಕೊತ್ತಲದಲ್ಲಿ ೧
ಬ್ರಹ್ಮಪುರದ ಬಾಗಿಲಲ್ಲಿ ನಾಗರಮರಿ ಕೊತ್ತಲದಲ್ಲಿ ೧
ಈ ಪೊತ್ತಿನ ಬಸವನಗುಡಿಯ ಬಳಿಯಲ್ಲಿರುವ ಸಿಡಿಲಮರಿ
ಕೊತ್ತಲದಲ್ಲಿ ೧

ಹೊರಜೀಬಿಯಲ್ಲಿ ಇರಿಸಿದ್ದು.—

ದೊಡ್ಡಕೊಳದಲ್ಲಿರುವ ರಾಮಲಿಂಗನ ಕೊತ್ತಲದಲ್ಲಿ ೧
ಕೃಷ್ಣ ದಿಡ್ಡಿಯಬಳಿಯಲ್ಲಿರುವ ಗೋಪಾಲಕೃಷ್ಣನ ಕೊತ್ತಲದಲ್ಲಿ ೧
ಚಿಕ್ಕಣ್ಣ ಅರಸಿನವರ ಕೊತ್ತಲದಲ್ಲಿರುವ ಚಕ್ರೀಖಾನನ ಕೊ
ತ್ತಲದಲ್ಲಿ ೧
ಬಾಬೋಜಿ ದಿಡ್ಡಿಯ ಬಳಿಯಲ್ಲಿರುವ ಚಿಲುವರಾಯನ ಕೊ
ತ್ತಲದಲ್ಲಿ ೧
ಈ ಪೊತ್ತಿನಲ್ಲಿ ಅನಂತಯ್ಯನ ಮನೆಯ ಬಳಿ ರಣಭೀಮನ
ಕೊತ್ತಲದಲ್ಲಿ ರಣಭೀಮ, ರಣಶೂರ, ಎಂಬಖಿರಂಗಿಗಳು ೨
ಮೂಡಣ ಬಾಗಿಲ ರಾಡಿನಲ್ಲಿರುವ ಬಡಗಚಾರಿ ವೆಂಕಟಾಚಲನ
ಕೊತ್ತಲದಲ್ಲಿ ೧
ಈ ತೆಂಕಚಾರಿಯಲ್ಲಿ ಚಾಮುಂಡಿಯಕೊತ್ತಲದಲ್ಲಿ ೧
ಈ ತೆಂಕಚಾರಿಯನಿಟ್ಟಿನಲ್ಲಿ ಕೂಟೆಯಮೇಲೆ ಬೇಟೆರಾ
ಯನ ಕೊತ್ತಲದಲ್ಲಿ ೧
ಈ ಮೊಲೆಯಲ್ಲಿರುವ ಪ್ರಳಯಕಾಲರುದ್ರ-ಪ್ರಳಯಕಾಲ
ಭೈರವ ಕೊತ್ತಲಗಳಲ್ಲಿ ೨
ಈ ಪಡುವೆಚಾರಿನಿಟ್ಟಿನಲ್ಲಿ ಕೋಟೆನಲ್ಲೂರನ ಮನೆಯ ಬಳಿ
ಯಲ್ಲಿ ಧನಂಜಯನ ಕೊತ್ತಲದಲ್ಲಿ ೧

ಚಿಕ್ಕೇರಿಸಿನವೆರ ಕಣಾಜದ ಬಳಿಯಲ್ಲಿ ಮುದ್ದುಕೃಷ್ಣನ ಕೊತ್ತಲದಲ್ಲಿ	೧
ಕೋಟೆಯಗಾರೆಹಟ್ಟಿಯ ಬಳಿಯಲ್ಲಿ ಗಾರೆಹಟ್ಟಿ ಚಿಲುವರಾಯನ ಕೊತ್ತಲದಲ್ಲಿ	೧
ಮೈಸೂರುಬಾಗಿಲರಾಡಿನಲ್ಲಿ ಜಯವಿಜಯ ಕೊತ್ತಲಗಳಲ್ಲಿ	೨
ಈ ಬಾಗಿಲಲ್ಲಿ ಜೇಬಿಕೋಟೆಯ ಮೇಲಿರುವ ಚಿಕ್ಕರಾಮ ಬಾಣ ಕೊತ್ತಲದಲ್ಲಿ	೧
ಸೇತುವೆಯ ಬಾಗಿಲ ರಾಡಿನಲ್ಲಿ ಫಿರಂಗಿ	೧
ಇವುಗಳಲ್ಲದೆ ಫಿರಂಗಿಗಳು	೧೪
ಒಟ್ಟು ಫಿರಂಗಿಗಳು	೪೪

ಈ ಮೇರೆಗೆ ಫಿರಂಗಿಗಳನ್ನಿರಿಸಿ ಬಂದೋಬಸ್ತು ಮಾಡಿ ಸೀಮೆಗಳನ್ನು ಕಟ್ಟುತಲಿದ್ದರು.

ತಿರುಚನಾಪಳ್ಳಿಗೆ ಮುತ್ತಿಗೆ ಹಾಕಿದ್ದು.—ಪೂರ್ವದಲ್ಲಿ ದೊಡ್ಡ ದೇವರಾಜ ಒಡೆಯರವರ ಆಳಿಕೆಯಲ್ಲಿ ಖಂಡಣೆಯನ್ನು ಮಾತಿಕೊಂಡಿದ್ದ ತಿರುಚನಾಪಳ್ಳಿ, ಮಧುರೆ ಮೊದಲಾದ ಪಾಳಯಗಾರರುಗಳು, ಖಂಡಣೆ ಹಣವನ್ನು ಹಲವು ವರ್ಷಗಳಲ್ಲಿ ಕೊಟ್ಟು, ಈಚಿಗೆ ೧೦-೧೫ ವರ್ಷಗಳಿಂದ ಕೊಡದೆ ಇರುವ ವರ್ತಮಾನವು ಶ್ರುತವಾದುದರಿಂದ, ಅವರನ್ನು ನಿಗ್ರಹಿಸಿ ಸೀಮೆಗಳನ್ನು ಕಟ್ಟಿಕೊಂಡು ಬರುವುದಕ್ಕೆ, ದೊರೆಗಳವರು ತಮ್ಮ ಒಡೆಯರಹಳವಾಯಿ ಕುಮಾರಯ್ಯ ಮೊದಲಾದ ಭಾರಿಸರದಾರರನ್ನೂ ಹಲವು ಸೇನೆಯನ್ನೂ ಕಳುಹಿಸಿಕೊಟ್ಟರು. ಅವರು ಅದೇ ಮೇರೆಗೆ ತಿರುವೆಯು ಕೆಳಗಿರುವ ತಿರುಚನಾಪಳ್ಳಿಗೆ ಹೋಗಿ ಮುತ್ತಿಗೆಯನ್ನು ಹಾಕಿ ಅಲ್ಲಿ ಯುದ್ಧ ಮಾಡುತ್ತಿದ್ದರು.

ಮರಾಟೆಯವರೊಡನೆ ನಡೆದ ಯುದ್ಧ.—ಆಗ ಮೆರಾಟೆಯವರ ಸಂಸ್ಥಾಪಕ ಶಾಹುರಾಯನ ಕಡೆ ಜಯಾಜೀಘಾಟೆ ಸಿಂಬಾಜೀಘಾಟೆಯೆಂಬ ಇಬ್ಬರು ಸರದಾರರು ೬೦ ಸಾವಿರ ಕುದುರೆಯ ಫೌಜು ಇದಕ್ಕೆ ತಕ್ಕ ಕಾಲ್ದಂಡು ಮೊದಲಾದ ಯುದ್ಧ ಸಾಮಗ್ರಿಗಳೊಡನೆ ವಿಳ್ಳಿಗೆ ಹೋಗಿ, ಎರಡು ಆವೃತ್ತಿ ಬಯಲ

ಯುದ್ಧಸನ್ನದ್ಧರಾಗಿ ಬಹಳ ಸೇನಾಸಮೇತರಾಗಿ ಶ್ರೀರಂಗಪಟ್ಟಣದ ಸಮೀಪದಲ್ಲಿ ಕಲಸಗೆರೆ ಕೊತ್ತತ್ತಿ ಎಂಬ ಗ್ರಾಮಗಳ ಬಳಿಯಿರುವ ಮೈದಾನದಲ್ಲಿ ಬಂದು ಇಳಿದುಕೊಂಡಿದಾರೆಂಬ ವರ್ತಮಾನವು ಬರಲು, ದೊರೆಗಳವರು ಕಣಿವೆಯ ಮೇಲಕ್ಕೆ ಬಂದ ತಮ್ಮ ಕಡೆಯ ಸೇನಾಜನಗಳಿಗೆ "ಕಲಸಗೆರೆ ಕೊತ್ತತ್ತಿ ಗ್ರಾಮಗಳ ಬಳಿಯಲ್ಲಿಳಿದಿರುವ ಮೆರಾಟೆದಂಡಿನ ಬಳಿಗೆ ನೀವು ಪರಭಾರೆ ಹೋಗಿ, ರಾತ್ರಿವೇಳೆಯಲ್ಲಿ ನಮ್ಮ ದಂಡಿನಲ್ಲಿರುವ ೨-೩ ಸಾವಿರ ಆವಿನವನದ ಎತ್ತುಗಳ ಕೊಂಬುಗಳಿಗೆ ಉಪಾಧಿಯಿಲ್ಲದಂತೆ ಪಂಜುಗಳನ್ನು ಕಟ್ಟಿ, ಬಹಳ ಬೆಳಕಿನಿಂದ ಅವರು ಭೀತರಾಗಿ ದಿಕ್ಕುಗಳ ಕಾಣದೆ ಭ್ರಾಂತರಾಗಿ ಬೆಳಕಿನ ಎದುರಿಗೆ ಬರುವಂತೆ ಎತ್ತುಗಳನ್ನು ಮೂರು ಕಡೆಯಲ್ಲಿಯೂ ಚದರಿಸಿ ಬಿಟ್ಟು, ನೀವುಗಳು ಹಿಂಸುಗಡೆಯಿಂದ ಯುದ್ಧಸನ್ನದ್ಧರಾಗಿ ಬರುವುದು. ಅಷ್ಟರಲ್ಲಿ ನಿಮಗೆ ಸಹಾಯವಾಗಿ ಶ್ರೀರಂಗ

ಯುವ ನನ್ನು ಮಾಡಿದರೂ ದಿಳ್ಳಿಯು ಸ್ವಾಧೀನವಾಗದಿರಲು, ಅವರಿಬ್ಬರೂ ಆ ಪ್ರಾಂತದ ಸೀಮೆಗಳನ್ನು ಲೂಟಿಮಾಡಿ ಸಾಧಿಸುವುದಕ್ಕೆ ಸಮಯವನ್ನು ನಿರೀಕ್ಷಿಸುತ್ತಾ ಇದ್ದು, ಮೈಸೂರು ಸಂಸ್ಥಾನದ ಸೇನೆಗಳು ಕಣಿವೆಯಕೆಳಗೆ ಹೋಗಿವೆ ಎಂಬ ವರ್ತಮಾನವನ್ನು ಕೇಳಿ, ಈಗ ಶ್ರೀರಂಗಪಟ್ಟಣವನ್ನು ಬಹಳ ಸುಲಭವಾಗಿ ಸಾಧಿಸಬಹುದೆಂದು ಆಲೋಚಿಸಿ, ಸೇನಾಸಮೇತರಾಗಿ ಅತಿಜಾಗ್ರತೆಯಿಂದ ಬರುತ್ತಿದ್ದರು. ಈ ವೃತ್ತಾಂತವನ್ನು ದೊರೆಗಳವರು ಕೇಳಿ, ತಾವು ತಿರುಚನಾಪಳ್ಳಿಗೆ ಕಳುಹಿಸಿ ಕೊಟ್ಟಿರುವ ಸೇನಾಜನಗಳ ಬಳಿಗೆ ಕೆಲವು ಸೇನೆಗಳು ವೈದ್ಯನಾದ ಕುಮಾರಯ್ಯನ ಸಮೀಪದಲ್ಲಿಯೇ ಇದ್ದುಕೊಂಡು ಆ ತಿರುಚನಾಪಳ್ಳಿಯನ್ನು ಸಾಧಿಸುವ್ರದೆಂತಲೂ, ಕುಮಾರಯ್ಯನ ಮಗ ದೊಡ್ಡಯ್ಯ ಮುಂತಾದ ಸರದಾರರು ಹೇರಳವಾದ ಸೈನ್ಯದೊಡಗೂಡಿ ಜಾಗ್ರತೆಯಿಂದ ಕಾವೇರೀಪ್ರವರದ ಕಣಿವೆಯ ಮಾರ್ಗವಾಗಿ ಹೊರಟು, ಕಣಿವೆಯ ಮೇಲಕ್ಕೆ ಬಂದು ಆ ವರ್ತಮಾನವನ್ನು ತಮ್ಮ ಬಳಿಗೆ ಶೀಘ್ರವಾಗಿ ಕಳುಹಿಸಿ, ಮುಂದೆ ತಮ್ಮ ಪತ್ರ ಬಂದಂತೆ ನಡೆದುಕೊಳ್ಳುವ್ರದೆಂತಲೂ ಬರಸಿ ಕಳುಹಿಸಿದರು. ಅದೇಮೇರೆಗೆ ಅವರು ಬರುವಷ್ಟರಲ್ಲಿಯೇ ಆ ಜಯಾಜೀಘೋಟೆ ನಿಂಬಾಜೀಘಾಟರೆಂಬ ಇಬ್ಬರು ಸರದಾರರು

ಪಟ್ಟಣದಿಂದ ಕೆಲವು ಸೇನೆಯನ್ನು ಕಳುಹಿಸಿಕೊಡುವೆವು, ಎಂದು ಬರೆಸಿ ಕಳುಹಿಸಿದರು. ಆ ದೊಡ್ಡಯ್ಯ ಮುಂತಾದ ಸರದಾರರೆಲ್ಲರೂ ಅದೇ ಪರಿಯಾಗಿ ಬಂದು ರಾತ್ರಿವೇಳೆ ಯುದ್ಧ ಮಾಡಿ ಬಹಳ ಜನಗಳನ್ನು ಸಂಹರಿಸಿದುದಲ್ಲದೆ, ಆ ಇಬ್ಬರು ಸರದಾರರ ತಲೆಗಳನ್ನು ಹೊಡೆದು, ಪ್ರಾತಃಕಾಲವಾದ ಬಳಿಕ ಆ ದಂಡಿನಲ್ಲಿದ್ದ ಬಹಳ ಪದಾರ್ಥಗಳಿಗೆ ಕಾವಲು ಕಟ್ಟಳೆಗಳನ್ನಿರಿಸಿ, ಆ ಸರದಾರರ ತಲೆಗಳನ್ನು ತೆಗೆದುಕೊಂಡು ಆ ಸರದಾರರೂ ತಾವೂ ಯುದ್ಧ ಮಾಡುವಾಗ ಹೇಗೆ ಆಯುಧಗಳನ್ನು ಹಿಡಿದಿದ್ದರೋ ಅದೇ ಪರಿಯಾಗಿ ಆಯುಧಗಳನ್ನು ಹಿಡಿಮಾಡಿಕೊಂಡು ದೊರೆಗಳವರ ಸನ್ನಿಧಿಗೆ ಬಂದು ಅಡ್ಡಬಿದ್ದು ನಡೆದ ವಿವರಗಳನ್ನು ಬಿನ್ನವಿಸಿದರು. ದೊರೆಗಳವರು ಆ ಎರಡು ತಲೆಗಳನ್ನೂ ಶ್ರೀರಂಗಪಟ್ಟಣದ ಕೋಟೆಯ ಮೈಸೂರು ಬಾಗಿಲಿಗೆ ಕಟ್ಟಿಸಿದರು. ಬಳಿಕ ಆ ಸೇನಾಜನಗಳು ಮತ್ತೆ ಆ ದಂಡಿಗಹೋಗಿ, ಅಲ್ಲಿ ಸಿಕ್ಕಿದ ಆನೆ, ಕುದುರೆ, ದ್ರವ್ಯ, ಮುಂತಾದ ಪದಾರ್ಥಗಳನ್ನು ತಂದು ಒಪ್ಪಿಸಿ, ದೊರೆಗಳವರಿಂದ ಬಹಳ ಸನ್ಮಾನಗಳನ್ನು ಪಡೆದರು. ಆ ಮರಾಟೆದಂಡಿನ ಹತಶೇಷ ಜನಗಳು ಪ್ರಾಣ ಸಹಿತ ತಪ್ಪಿಸಿಕೊಂಡು ಓಡಿಹೋಗಿ, ತಮ್ಮ ದಣಿಯಾದ ಶಾಹುರಾಯನಿಗೆ ಇಲ್ಲಿ ನಡೆದ ವೃತ್ತಾಂತವನ್ನು ವಿಸ್ತಾರವಾಗಿ ತಿಳಿಸಿದರು. ಅನಂತರ ದಿಲ್ಲಿಪಾದಷಾಹರು ತಮಗೆ ಶತ್ರುಗಳಾಗಿದ್ದ ಮೆರಾಟೆಯವರ ಕಡೆಯ ಜಯಾಜೀಘಾಟ್ ನಿಂಬಾಜೀಘಾಟ್ ಎಂಬ ಇಬ್ಬರು ಸರದಾರರನ್ನೂ ಬಹಳ ಸೇನೆಗಳನ್ನೂ ಮೈಸೂರು ಸಂಸ್ಥಾನದ ಚಿಕ್ಕದೇವರಾಜಒಡೆಯರವರು ಯುದ್ಧದಲ್ಲಿ ಸಂಹರಿಸಿದರೆಂಬ ವರ್ತಮಾನವನ್ನು ಕೇಳಿ, ಸಂತೋಷಪಟ್ಟು ಅಗಾಗ್ಗೆ ಇವರ ಗುಣಗಳನ್ನು ತಮ್ಮ ಸಭಾಮಧ್ಯದಲ್ಲಿ ಕೊಂಡಾಡುತ್ತಿದ್ದರು.

ಇವರ ಆಳಿಕೆಯಲ್ಲಿ ದಳವಾಯಿತನವನ್ನು ನಿರ್ವಹಿಸಿದವರು.—ಕಳಲೆ ಕುಮಾರಯ್ಯನು ಶಾ॥ ಶಕ ೧೫೯೫ನೇ (A.D. 1673) ಪರೀಧಾವಿಸಂವತ್ಸರದ ಫಾಲ್ಗುಣ ಬಹುಳ ೧೦ ಯಿಂದ ೧೬೦೪ನೇ (A.D. 1682) ದುಂದುಭಿಸಂವತ್ಸರದ ವೈಶಾಖ ಬಹುಳ ೪೦ ವರೆಗೆ.

ದೇವಯ್ಯನು ಶ್ರೀರಂಗಪಟ್ಟಣವಲ್ಲದ ಸೇನೆಗೆ ಮಾತ್ರ ೧೬೦೪ನೇ (A.D. 1682) ದುಂದುಭಿಸಂವತ್ಸರದ ಜ್ಯೇಷ್ಠ ಶುದ್ಧ ೧೦ ಯಿಂದ ಈ ಶುದ್ಧ ೧೫ ವರೆಗೆ—೧೫ ದಿವಸ ಮಾತ್ರ.

ಕುಮಾರಯ್ಯನು ತಾನು ವೃದ್ಧನಾಗಿದೇನೆಂದು ದೊರೆಗಳವರಿಗೆ ಬಿನ್ನವಿಸಿಕೊಂಪಪ್ಪರಿಂದ ಅವನ ಮಗ ದೊಡ್ಡಯ್ಯನು ೧೬೦೩ನೇ (A.D. 1682) ದುಂದುಭಿ ಸಂವತ್ಸರದ ಜ್ಯೇಷ್ಠ ಬಹುಳ ೧ ಯಿಂದ ೧೬೦೩ನೇ A.D. 1690) ಪ್ರಮೋದೂತ ಸಂವತ್ಸರದ ಜ್ಯೇಷ್ಠ ಶುದ್ಧ ೧೫ ವರೆಗೆ.

ಕೊಳ್ಳಾಗಾಲದ ತಿಮ್ಮಪ್ಪಯ್ಯ ೧೬೦೩ನೇ (A.D. 1690) ಪ್ರಮೋದೂತ ಸಂವತ್ಸರದ ಜ್ಯೇಷ್ಠ ಬಹುಳ ೧ ಯಿಂದ ೧೬೦೮ನೇ (A.D. 1696) ಯುವ ಸಂವತ್ಸರದ ಮಾಘ ಶುದ್ಧ ೧೫ ವರೆಗೆ.

ಕಳಲೆ ಕಾಂತಯ್ಯನಮಗ ಮಲ್ಲರಾಜಯ್ಯ, ೧೬೦೮ನೇ (A.D. 1696) ಯುವ ಸಂವತ್ಸರದ ಮಾಘ ಬಹುಳ ೧ ಯಿಂದ ೧೬೧೦ನೇ (A.D. 1698) ಬಹುಧಾನ್ಯ ಸಂವತ್ಸರದ ಶ್ರಾವಣ ಶುದ್ಧ ೧೫ ವರೆಗೆ.

ನಿಲಸೋಗೆ ವೀರರಾಜಯ್ಯ, ೧೬೧೦ನೇ (A.D. 1698) ಬಹುಧಾನ್ಯ ಸಂವತ್ಸರದ ಶ್ರಾವಣ ಶುದ್ಧ ೧೫ ಯಿಂದ ೧೬೧೫ನೇ (A.D. 1702) ಚಿತ್ರಭಾನು ಸಂವತ್ಸರದ ಪುಷ್ಯ ಶುದ್ಧ ೧೦ ವರೆಗೆ.

ದೇವರಾಯದುರ್ಗದ ದಾಸರಾಜಯ್ಯ ೧೬೧೫ನೇ (A.D. 1702) ಚಿತ್ರಭಾನು ಸಂವತ್ಸರದ ಪುಷ್ಯ ಶುದ್ಧ ೧೫ ಯಿಂದ ೧೬೧೭ನೇ (A.D. 1704) ತಾರಣ ಸಂವತ್ಸರದ ಕಾರ್ತಿಕ ಬಹುಳ ೩೦ ವರೆಗೆ.

ಚಿಕ್ಕದೇವರಾಜಸಾಗರ ಮತ್ತು ದೇವನಾಲೆ.—ಚಿಕ್ಕದೇವರಾಜಬಡೆಯರವರು ಶ್ರೀರಂಗಪಟ್ಟಣದ ಪಶ್ಚಿಮ ಪಾರ್ಶ್ವದ ಕಾವೇರೀನದಿಗೆ ಕಟ್ಟೆಯನ್ನು ಕಟ್ಟಿಸಿ, ಆ ನದಿಯ ಉಭಯ ಪಾರ್ಶ್ವಗಳಲ್ಲಿಯೂ ಕಾಲುವೆಗಳನ್ನು ತಂದು, ಉತ್ತರ ಪಾರ್ಶ್ವದಲ್ಲಿ ಬರುವ ಕಾಲುವೆಯ ನೀರು ಜನಗಳಿಗೆ ಅವಶ್ಯಕರವಾಗಿ ಕರಿಯಘಟ್ಟದಮೇಲೆ ಬಂದು ಬಹುದೂರ ಹೋಗುವಂತೆ ಮಾಡಿಸಿ, ಈ ಕಾಲುವೆಗೆ ಚಿಕ್ಕದೇವರಾಜ ಸಾಗರವೆಂಬದಾಗಿಯೂ, ದಕ್ಷಿಣಪಾರ್ಶ್ವದ ಕಾಲುವೆಗೆ ದೇವನಾಲೆ ಎಂಬದಾಗಿಯೂ, ಹೆಸರನ್ನಿಟ್ಟರು.

ಇವರ ಆಳಿಕೆಯಲ್ಲಿ ಅನೇಕನಿಬಂಧನೆಗಳುಂಟಾದವು.

ಗಡಿಗಳವಿಚಾರ.—ರಾಜಬಡೆಯರವರು ಮೊದಲಾಗಿ ತಾವು ಸಾಧಿಸಿದ ಸೀಮೆಗಳನ್ನು ಒಟ್ಟು ಮಾಡಿ, ಕೆಲವರಿಗೆ ಉಂಬಳಿಕೊಟ್ಟು,

ಕೆಲವೆರಿಗೆ ಖಂಡಣೆಯನ್ನು ನಿಗದಿ ಮಾಡಿರುವುದಲ್ಲದೆ, ನಿಂತ ಗಡಿಗಳಲ್ಲಿ ಸಣ್ಣದಾಗಿದ್ದುದನ್ನು ಸಮೀಪದಲ್ಲಿರುವ ಗಡಿಗೆ ಸೇರಿಸಿ ದೊಡ್ಡದು ಮಾಡಿ, ಮೈಸೂರು ಸಂಸ್ಥಾನದ ಗಡಿಗಳು ಒಟ್ಟು ೪೪ ಎಂಬುದಾಗಿಯೂ, ಈ ಗಡಿಗಳಲ್ಲಿರುವ ಸಣ್ಣಸಣ್ಣ ಗ್ರಾಮಗಳನ್ನು ೪, ೧೦, ೧೫, ೧೬ರ ವರೆಗೂ ದೊಡ್ಡ ಗ್ರಾಮಗಳಿಗೆ ಸೇರಿಸಿ ದೊಡ್ಡ ಗ್ರಾಮದ ಹೆಸರಿನಿಂದ ಹೋಬಳಿ ಎಂಬುದಾಗಿಯೂ, ನಿಬಂಧನೆ ಮಾಡಿದರು.

ಗಡಿಗಳಲ್ಲಿ ಏರ್ಪಾಡು.—ಗಡಿಯೊಂದಕ್ಕೆ ಸುಬೇದಾರ ೧, ಚಿಕ್ಕಪಾರು ಪತ್ಯಗಾರ ೧, ಅತವಣಿಗೆ ಪ್ರತಿ ೫, ಗುಮಾಸ್ತೆಯರು ೬, ರಾಯಸದವನು ೧, ಕಾಗದ ಪತ್ರಗಳನ್ನು ಸಾಗಿಸುವುದಕ್ಕೂ ಕಂಡಕೇಳಿದ ವರ್ತಮಾನಗಳನ್ನು ಬರೆವುದಕ್ಕೂ ಅಂಚೆ ಹರಿಕಾರ ೧, ಈ ಕೋಲುಕಾರ ಜನಗಳು, ಗಡಿಗಳ ತಾರತಮ್ಯವಿದ್ದಂತೆ ದಫೇದಾರ ಸಹಿತ ಕಾಲೂಳಿಗದ ಜನರು, ಹಸ್ತಾಂತ್ರ ೧, ಗೊಲ್ಲ ೧, ಚಾವಡಿಯ ಕಾವಲುಗಾರರು ೨, ಕೈದೀವಟಿಗೆಯ ಜನ ೧, ಗಡಿಗಳಲ್ಲಿ ತುಂಟಪಾಳೆಯಗಾರರು, ಕಳ್ಳಕಾಕರರು, ಮುಂತಾದ ಜನಗಳಿಗೆ ಆಸ್ಪದವಾಗದಂತೆಯೂ, ಚಾವಡಿ ಮುಂತಾದ ಸ್ಥಳಗಳಲ್ಲಿ ಹಸ್ತಾಂತ್ರದ ಕಾವಲುಕಟ್ಟಳೆ ನಡೆವಂತೆಯೂ, ಬಂದೋಬಸ್ತಾಗಿರಲು, ಗಡಿಯೊಂದಕ್ಕೆ ಕಂದಾಚಾರಕ್ಕೆ ತಾಣೆದಾರ ೧, ಆಳುಗುರಿಕಾರ ೧, ಶಿರಸ್ತೇದಾರ ೫, ಗುಮಾಸ್ತೆಯರು ೫, ಹೋಬಳಿದಾರ, ದಫೇದಾರ, ಓಲೆಕಾರ, ಕೊಂಬಿನವನು, ತಮಟೆಯವನು, ಮುಂತಾದ ಜನಗಳನ್ನು ನೇಮಕಮಾಡಿ, ಗಡಿಗಳ ವಿಧವೆರಿತು ೧೦೦, ೨೦೦, ೩೦೦, ೪೦೦ ಜನದವರೆಗೂ ಓಲೆಕಾರರನ್ನೂ, ಈ ಓಲೆಕಾರರು ಆರು ಮಂದಿಗೆ ಒಬ್ಬ ದಫೇದಾರನೆಂಬುದಾಗಿಯೂ, ೫೦ ಜನಕ್ಕೆ ಒಬ್ಬ ಹೋಬಳಿದಾರನೆಂಬುದಾಗಿಯೂ ನೇಮಕಮಾಡಿ, ಕಾರ್ಯಬಿದ್ದ ವೇಳೆಯಲ್ಲಿ ಯುದ್ಧಮಾಡುವುದಕ್ಕೆ ಮದ್ದು ಗುಂಡು ಮುಂತಾದ ಸಾಮಗ್ರಿಗಳನ್ನು ಸಿದ್ಧಮಾಡಿರುವಂತೆ ಕಟ್ಟಳೆಯನ್ನು ಮಾಡಿಸಿದರು. ಇದಲ್ಲದೆ ಗಡಿಗಳಲ್ಲಿ ಅರಮನೆಗೆ ಹೇರಳವಾಗಿ ಕೂಡಿಬರುವಂತೆ ಪೈರು ಪಚ್ಚೆಗಳನ್ನು ಮಾಡಿಸತಕ್ಕ ಬುದ್ಧಿವಂತನಾದ ಸುಬೇದಾರನನ್ನೂ, ಹಣಕಾಸು, ದವಸಧಾನ್ಯ, ಮುಂತಾವುಗಳ ಲೆಕ್ಕ ಬರೆವುದರಲ್ಲಿ ನಿರ್ವಂಚನೆಯಾಗಿ ನಡೆದುಕೊಳ್ಳುವ

ತಿರಸ್ತೆದಾರ, ಗುಮಾಸ್ತೆಯರುಗಳನ್ನೂ, ರಾಯಸದವರು, ಮುಂತಾದ ಅತ ವಣೆ ಪಣಿಕಟ್ಟಿನ ಜನಗಳನ್ನೂ, ಕಂದಾಚಾರಕ್ಕೆ ಶಿಲ್ದಾರ, ಠಾಣೆದಾರ, ಮೊದಲಾದವರನ್ನೂ ನೇಮಿಸಿ, ಇವರು ಕಾವಲು ಕಟ್ಟಳೆ ಮುಂತಾದ ಕೆಲಸಗಳಲ್ಲಿ ಸುಬೇದಾರನು ಹೇಳಿದಮೇರೆಗೆ ಕೇಳುವಂತೆಯೂ, ಈ ಅಧಿಕಾರಿಗಳಲ್ಲಾ ಬುದ್ಧಿವಂತರಾಗಿರುವ ಜನರ ಬುದ್ಧಿಯನ್ನು ಪರೀಕ್ಷಿಸಿ, ನಿರ್ವಂಚನೆಯಿಂದ ನಡೆದುಕೊಳ್ಳುವಂತೆಯೂ ನೇಮಕಮಾಡಿ, ಸುಬೇದಾರ, ತಿರಸ್ತೆದಾರ, ಶಿಲ್ದಾರ, ಮುಂತಾದವರಿಗೆ ಅವರವರ ಚಾಕರಿಯ ವಿಧವೆರಿತು ಸಂಬಳವನ್ನು ನಿಷ್ಕರ್ಷಿಸಿ, ಆ ಸಂಬಳಕ್ಕೆ ಅರ್ಧನಗದು ಅರ್ಧ ಭತ್ತ ಈ ಮೇರೆಗೆ ಕೊಡುವಂತೆ ಗೊತ್ತುಮಾಡಿ, ಕಂದಾಚಾರದ ಓಲೆ ಕಾರ ಜನಗಳಿಗ ತಿಂಗಳೊಂದಕ್ಕೆ ಅರ್ಧವರಹ, ಅರ್ಧವರಹವು ಬಂದು ಹಣ, ಬಂದು ವರಹದವರೆಗೂ ಸಂಬಳವನ್ನು ನೇಮಕಮಾಡಿ, ಈ ಸಂಬ ಳಕ್ಕೆ ಅರ್ಧನಗದು ಅರ್ಧಭೂಮಿಯನ್ನು ಕೊಡುವಂತೆಯೂ, ಈ ಜನಗಳು ಅರಮನೆ ಹಿಟ್ಟುಬಿಟ್ಟು ಕಾಣಿಕೆಕಡಾಯ ಮನೆದೆರಿಗೆ ಮುಂ ತಾದ ಬಾಬುಗಳನ್ನು ಕೊಡಕೆಲಸವಿಲ್ಲ ಎಂಬದಾಗಿಯೂ, ಇದಲ್ಲದೆ ಸೀಮೆಗಳಲ್ಲಿ ಜನರ ನಡತೆಯನ್ನೂ ಮೆತ್ತುಗಡಿಗಳಲ್ಲಿಯೂ, ಮಾರ್ಗಗಳ ಲ್ಲಿಯೂ, ಕಳ್ಳಕಾಕರು ಮುಂತಾದ ತುಂಟಜನಗಳಿಂದ ಹೆಚ್ಚು ಕಡಮೆ ನಡೆದ ವರ್ತಮಾನಗಳನ್ನೂ ಈ ಜನಗಳ ಮುಖದಿಂದ ಜಾಗ್ರತೆಯಾಗಿ ತಮಗೆ ತಿಳಿಸುವಂತೆಯೂ, ಕಟ್ಟಳೆಮಾಡಿದರು. ಅಷ್ಟಗ್ರಾಮ ಮುಂ ತಾದ್ದಕ್ಕೆ ಸೇರಿದ ನವಿ, ಕಟ್ಟೆ, ಕಾಲುವೆಗಳ ಕೆಳಗೆ ಕಬ್ಬು, ಬತ್ತ, ಮುಂತಾದ ಪೈರುಗಳನ್ನು ಬೆಳೆದು, ಅರಮನೆಗೆ ಅರ್ಧವಾರವನ್ನು ಕೊಡು ವಂತೆ ನಿಬಂಧನೆಯನ್ನು ಮಾಡಿದ್ದಕ್ಕೆ, ಪ್ರಜೆಗಳು ವಾರವನ್ನು ಕೊಟ್ಟರೆ ತಮಗೆ ಮುಟ್ಟುವೆಳೆ ಕಳೆದು ಜೀವನ ನಡೆವುದಿಲ್ಲವೆಂದು ಬಿನ್ನವಿಸಿ ಕೊಳ್ಳಲು, ದೊರೆಗಳವರು ಬಂದು ವರ್ಷ ಆದಫಲವನ್ನು ರೇಖೆಮಾಡಿಸಿ, ರೈತರ ಮುಟ್ಟುವೆಳೆಯನ್ನು ವಿಚಾರಿಸಿ ನೋಡುವಲ್ಲಿ ಹುಟ್ಟುವೆಳೆ ಮುಟ್ಟು ವೆಳೆ ಸಮವಾಗಿದ್ದುದರಿಂದ, ಆದಫಲವನ್ನು ಮೂರು ಪಾಲುಮಾಡಿ, ಬಂದು ಪಾಲನ್ನು ಅವರ ಮುಟ್ಟುವೆಳೆಗೂ, ಬಂದು ಪಾಲನ್ನು ಅವರ ಜೀವನಕ್ಕೆ ಬಿಟ್ಟು, ನಿಂತ ಬಂದು ಪಾಲನ್ನು ಅರಮನೆಗೆ ಕೊಡು

ವಂತೆಯೂ, ಈ ಮೇರೆಗೆ ಬಂದಿರಪು ವರ್ಷ ನಡೆಸಿ, ಮುಂದೆ ಸಮವಾರ ಕೊಪುವಂತೆಯೂ ನಿಬಂಧನೆ ಮಾಡಿದರು. ಕೆರೆಯ ಕೆಳಗೆ ನೀರು ಬಂದ ವರ್ಷದಲ್ಲಿ ಬತ್ತ ಮುಂತಾದ ಪೈರುಗಳಂ ಮಾತಿ, ಅರ್ಧವನ್ನು ಅರಮನೆಗೆ ವಾರಕೊಡುವಂತೆಯೂ, ನೀರು ಬಾರದ ವರ್ಷ ಆ ಭೂಮಿ ಯಲ್ಲಿ ಬೆದ್ದಲು ಪೈರು ಮಾಡಿಕೊಂಡು, ನಿಬಂಧನೆಯು ಮೇರೆಗೆ ಅರ ಮನೆಗೆ ಬೆದ್ದಲು ಕಂದಾಯವನ್ನು ಕೊಡುವಂತೆಯೂ, ನಿಷ್ಕರ್ಷೆ ಮಾಡಿ ಸಿದರು. ಈ ಕಟ್ಟೆ ಕಾಲುವೆಗಳ ನೀರನ್ನು ಸರಾಗವಾಗಿ ತಂದು ಪೈರು ಮಾಡಿಸುವುದಕ್ಕೆ ಕಾಲುವೆಯ ಮೇಸ್ತ್ರಿಗಾರ ೧, ಶ್ಯಾನಭೋಗ ೧, ಕಾಲೂ ಳಿಗದವನು, ನೀರುಗಂಟಿ ಇವರನ್ನು ಕಾಲುವೆ ಮುನಾಸಬ್ ಇದ್ದಂತೆ ಗ್ರಾಮಗಳ ಹಂತವಾರು ಮೇರೆಗೆ ೨-೩-೪ ಜನರನ್ನೂ, ಅರಮನೆಯ ವಾರ ಪೈರುಗಳನ್ನು ರೇಖೆ ಮಾಡುವುದಕ್ಕೆ ಹಸುಗೆಮೇಸ್ತ್ರಿಗಾರ ೧, ಹಸುಗೆ ಶ್ಯಾನಭೋಗ ೧, ಕಾಲೂಳಿಗದ ಜನ ಮುಂತಾದವರನ್ನೂ ನೇಮಕ ಮಾಡಿದರು.

ಚಿಲ್ಲರೆ ಗ್ರಾಮ ೧ಕ್ಕೆ ಗೌಡ ೧, ಶ್ಯಾನಭೋಗ ೧—೦-೪, ಪಂಚಾಂ ಗದ ಬ್ರಾಹ್ಮಣ ೧, ಕಬ್ಬಿಣದ ಕೆಲಸದವನು ೧, ಅಕ್ಕಸಾಲೆ ೧, ಕುಂ ಬಾರ ೧, ಅಗಸ ೧, ಕೆಲಸಿ ೧, ತೋಟಿ ೧, ತಳವಾರ ೧, ಕೆರೆನೀರು ಗಂಟಿ ೧, ಓಜರವನು ೧, ಈ ಮೇರೆಗೆ ಬಾರಾಬಲೂತಿ ಎಂಬವಾಗಿ ನಿಷ್ಕರ್ಷೆಮಾಡಿ, ಈ ೧೦ ಜನಕ್ಕೂ ಅವರವರ ಮುನಾಸಬು ಇದ್ದಂತೆ, ಕೋರಿನ ದವಸದಲ್ಲಿ ಸೊಲಿಗೆಗುಡ್ಡೆ-ಆಯ ಎಂಬವಾಗಿ ರುಸುಂ ಮಾಡಿ ಕೊಟ್ಟು, ಗೌಡ ಮತ್ತು ಶ್ಯಾನಭೋಗರಿಗೆ ಶಾನಾಯ ಮುದ್ರೆ ಎಂಬವಾಗಿ ಕೊಡುವಂತೆ ನೇಮಕಮಾಡಿಸಿದ್ದಲ್ಲದೆ, ಗ್ರಾಮಕ್ಕೆ ಒಬ್ಬ ಗೌಡನಿಗೆ ಮಾತ್ರ ಮನೆ ತೆರಿಗೆ, ಹಿಟ್ಟು ಬಿಟ್ಟು ಕಾಣಿಕೆಕಡ್ಡಾಯ ಮುಂತಾದ್ದನ್ನು ಬಿಟ್ಟುಕೊಡುವಂತೆ ನಿಬಂಧನೆಯನ್ನು ಮಾಡಿದರು. ಇದಲ್ಲದೆ ಶ್ಯಾನ ಭೋಗನ ಸಂಬಳಕ್ಕೆ ಅರ್ಧ ಭೂಮಿ ಅರ್ಧ ಸಂಬಳವನ್ನೂ ಮತ್ತು ರೈತರುಗಳಿಂದ ಪ್ರತಿವರ್ಷದಲ್ಲಿ ಕುಳ ೧ಕ್ಕೆ I, II, III, ೧ ಪಣದ ವರೆಗೆ ಕುಳವ ಮುನಾಸಬು ಇದ್ದಂತೆ ಕಡತದ ಕಾಣಿಕೆಯ ಪಣವೆಂದು ಕೊಪು ವಂತೆ ನೇಮಕಮಾಡಿಸಿದರು.

ಬಿಜ, ಕೆಲಸಿ, ಕುಂಬಾರ, ಅಗಸ, ತೋಟಿ, ಕಬ್ಬಿಣಗೆಲಸದವ, ತಳವಾರ, ಮುಂತಾದ ಅಯಾಸ್ಯಾಮ್ಯೆಯ ಜನಗಳಿಗೆ ರೈತರ ಕಡೆಯಿಂದ ತೆನೆ ಸಹಿತವಾದ ಹೊರೆ ಹುಲ್ಲನ್ನು, ಕಣವಲ್ಲಿ ೧ ಕೊಳಗದ ದವಸವನ್ನು ಕೊಡುವೆಂತೆಯೂ, ರೈತರ ಮನೆಗಳಲ್ಲಿರುವ ಜನರುಗಳ ಸುಮಾರು ಮೇರೆಗೆ ತೋಟಿ, ತಳವಾರ ಹೊರತು ಮಿಗಿಲಾದ ಜನಗಳಿಗೆ ಪಡದೆಯನ್ನು ನಿಬಂಧನದ ಮೇರೆಗೆ ಕೊಡುವಂತೆ ನೇಮಕ ಮಾಡಿಸುವ್ದಲ್ಲದೆ, ಪಂಚಕಾಂಗದ ಬ್ರಾಹ್ಮಣ, ಶ್ಯಾನಭೋಗ, ತೋಟಿ, ತಳವಾರ, ನೀರುಗಂಟಿ ಈ ೫ ಜನಗಳಿಗೆ ಮಾತ್ರ ಜೀವನಾರ್ಥವಾಗಿ ಅವರ ವರ ತಾರತಮ್ಯವಿದ್ದಂತೆ ೧ ವರಹದಿಂದ ೬ ವರಹದವರೆಗೂ ಮಾನ್ಯವಾಗಿ ಭೂಮಿಯನ್ನು ಕೊಟ್ಟರು. ಇದಲ್ಲದೆ ಕಾಲುವೆಮೇಣಿಗಾರ, ಹಸುಗೆ ಮೇಣಿಗಾರ ಶ್ಯಾನಭೋಗ ಮುಂತಾದ ಜನಗಳಿಗೂ ಮೇಲೆ ಕಂಡಂತೆ ೧ ಹೊರೆ ಹುಲ್ಲನ್ನು ೧ ಕೊಳಗದ ದವಸವನ್ನು ಸಹ ವಾರದ ಹುಟ್ಟುವಳಿಯಲ್ಲಿ ಕೊಡುವೆಂತೆ ನೇಮಿಸಿದರು. ಮಿಗಿಲಾದ ಪಣಕಟ್ಟಿನ ಜನಗಳು ಬಣಗಾರ, ದೇವಾಂಗ, ಚಪ್ಪಿಗ, ಕಾಮೊಟಿ, ಗಾರೆಕೆಲಸದವನು, ಶಿಲ್ಪಿ, ಈ ೬ ಮಂದಿ ಅಲ್ಲದೆ ಮೇದರು ಮುಂತಾದ ಜನಗಳು ತಮ್ಮ ತಮ್ಮ ಕುಲಪದ್ಧತಿಯ ಮೇರೆಗೆ ಬುದ್ಧಿ ಕುಶಲತೆಗೆ ತಕ್ಕ ಉದ್ಯೋಗಗಳಿಂದ ಜೀವನ ಮಾಡುವಂತೆ ನಿಬಂಧನೆ ಮಾಡಿದರು.

ಅನಂತರ ಸೀಮೆಯಲ್ಲಿ ದವಸಗಳನ್ನು ಅಳವೆ ಕೊಳಗ ೧ ಕ್ಕೆ ಅಯಾ ಸೀಮೆಯ ಪದ್ಧತಿಯ ಮೇರೆಗೆ ೪, ೧೦, ೧೫, ೧೬ ಸೇರು ಈ ಪ್ರಕಾರ ಇದ್ದುದರಿಂದ, ಅದೇಮೇರೆಗೆ ಈಗಲು ೪ ಗಡಿಗಳಲ್ಲಿಯೂ ನಡೆವಂತೆ ಕಟ್ಟುಮಾಡಿಸಿದರು. ಅನಂತರ ಈ ೪ ಗಡಿಗಳಿಂದಲೂ ಪೂರ್ವದಲ್ಲಿ ಪಾಳೆಯಗಾರರ ಕಾಲದಲ್ಲಿದ್ದ ಮುದ್ರೆಯ ಉಂಗುರಗಳನ್ನು ತರಿಸಿ ಪರಾಂಬರಿಸುವೆಲ್ಲಿ, ಒಂದೊಂದು ಗಡಿಯಲ್ಲಿ ಒಂದೊಂದು ಪ್ರಕಾರ ಇದ್ದುದರಿಂದ, ಇನ್ನುಮೇಲೆ ಹಾಗೆ ಇರಕೂಡದೆಂದು ಪರ್ಯಾಲೋಚಿಸಿ, ಅಯಾ ಗಡಿಗಳ ಹೆಸರನ್ನೂ, ನಡುವೆ 'ದೇ' ಎಂಬ ಅಕ್ಷರವನ್ನೂ ಆಚೆ ಈಚೆ ಸೂರ್ಯಚಂದ್ರರನ್ನೂ ಕೆತ್ತಿದ ಚಿನ್ನದ ಉಂಗುರವು ಅಯಾ ಗಡಿಯ ಸುಬೇದಾರನ ಕೈಯಲ್ಲಿರುವಂತೆ ಕಟ್ಟಳೆ ಮಾಡಿದರು.

ಮತ್ತು ಅಪವೆಣೆ ಚಿಕ್ಕಪಾರುಪತ್ಯಗಾರ, ಕೆಲ್ಲೆದಾರರುಗಳಿಗೂ, ಗಡಿಗ ಳಿಗೆ ಸೇರಿರುವ ಹೋಬಳಿಗಳಿಗೂ, ಗ್ರಾಮೆಗಳಿಗೂ, ಸುಂಕ, ಪೂಮ್ಮಿ, ಸಮಯಾಚಾರ, ಮುಂತಾವ ಎಲ್ಲಾ ಪಣಕಟ್ಟಿನ ಗೊತ್ತುಗಾರ ಜನ ಗಳಿಗೂ 'ದೇ' ಎಂಬ ಒಂದೇ ಅಕ್ಷರವನ್ನು ಕೆತ್ತಿರುವ ಬೆಳ್ಳಿಯ ಉಂಗುರಗಳನ್ನು ಮಾಡಿಸಿಕೊಟ್ಟರು. ಇದಲ್ಲದೆ ತೋಟಿ, ತಳವಾರ, ನೀರುಗಂಟಿ ಈ ಜನಗಳು ಅರಮನೆಯ ಅಪ್ಪಣೆಯನ್ನು ಮೀರಿ ನಡೆವ ಜನಗಳ ಮನೆಗೂ, ದವಸದ ರಾಶಿಗಳಿಗೂ, ಮುದ್ರೆಯನ್ನು ಹಾಕಲು ಮುದ್ರೆ ಪಲಗೆಯನ್ನು ಮಾಡಿಸಿ, ಆಚಕೆ ಈಚಕೆ ಸೂರ್ಯಚಂದ್ರರನ್ನೂ ನಡುವೆ 'ದೇ' ಎಂಬ ಅಕ್ಷರವನ್ನೂ ಕೆತ್ತಿವ ಮುದ್ರೆಯ ಕೋಲನ್ನು ಗ್ರಾಮಗಳ ಚಾವಡಿಯಲ್ಲಿ ಇರಿಸಿದ್ದು, ಗ್ರಾಮದ ಪಾರುಪತ್ಯಗಾರ ಹೇಳಿ ದಾಗ ತೆಗೆದುಕೊಂಡು ಹೋಗಿ, ಮುದ್ರೆಯನ್ನು ಹಾಕುವಂತೆ ನಿಬಂಧನೆ ಮಾಡಿದರು. ಗಡಿಗಳಲ್ಲಿರುವ ದೇವಸ್ಥಾನಗಳಲ್ಲಿಯೂ ಆಯಾ ದೇವರ ಹೆಸರಿನ ಅಕ್ಷರಗಳನ್ನು ಕೆತ್ತಿದ ಮುದ್ರೆಯು ದೇವಸ್ಥಾನದ ಪಾರುಪತ್ಯ ಗಾರನ ಕೈಯಲ್ಲಿ ಇರುವಂತೆ ಕಟ್ಟಳೆಯನ್ನು ಮಾಡಿಸಿದರು.

ಅಳತೆಯ ನಿಬಂಧನೆ.—ಅನಂತರ ೪೪ ಗಡಿಗಳಲ್ಲಿ ಮೊಣ, ದಡೆಯ, ಪಂಚೇರು, ಕೊಳಗ, ಬಳ್ಳ, ಸೇರು, ಅರ್ಧಸೇರು, ಪಾವು, ಅರೆಪಾವು ಚಟಾಕು, ಮುಂತಾದ ಪಕ್ಕಾ ಕಚ್ಚಾ ಅಳತೆಯ ಪಾತ್ರೆಗಳಿಗೆ ಮೇಲೆ ಹೇಳಿದ ಮೇರೆಗೆ ಮುದ್ರೆಯನ್ನು ಕೆತ್ತಿಸಿ ಪೇಟೆಮನೆಗಳಲ್ಲಿ ಮಾರುವು ದನ್ನೂ ಕೊಳ್ಳುವದನ್ನೂ ಈ ಮುದ್ರೆ ಹಾಕಿದ ಪಾತ್ರೆಗಳಿಂದಲೇ ನಡೆ ಸುವಂತೆ ಕಟ್ಟಳೆ ಮಾಡಿಸಿದರು.

ಚಿಕ್ಕಹಾಳಿತ ದೊಡ್ಡಹಾಳಿತ ತೂಕಗಳ ನಿರ್ಣಯ—ಕಂಠೀರಾಯಿ ಪೆ ವರಹ ತೂಕಕ್ಕೆ ಬಂದು ದುಡ್ಡು ತೂಕ, ಬಂದು ದುಡ್ಡು ತೂಕಕ್ಕೆ ಬಂದು ತೊಲ, ೨೪ ದುಡ್ಡು ತೂಕಕ್ಕೆ ಕಚ್ಚಾ ಬಂದು ಸೇರು, ಹತ್ತು ಸೇರು ತೂಕಕ್ಕೆ ಬಂದು ದಡೆಯ, ಇಂಥಾ ದಡೆಯ ನಾಲ್ಕಾವರೆ ಬಂದು ಚಿಕ್ಕ ಮೊಣ, ದೊಡ್ಡಹಾಳಿತದ ಬಂದು ಮೊಣದ ತೂಕಕ್ಕೆ ೪೪—೪೬ ಸೇರು ಈ ಮೇರೆಗೆ ಗೊತ್ತು ಮಾಡಿ ಇದರಿಂದ ತೂಕ ಮಾಡತಕ್ಕ ಜಿನ ಸುಗಳು, ಬೆಲ್ಲ, ಅಡಕೆ, ಅರಿಸಿನ, ಹುಣಸೆಹಣ್ಣು, ಮೆಣಸು, ಮೆಣ

ಸಿನಕಾಯಿ ಗಂದಿಗರ ಅಂಗಡಿಯ ಕಿರಾಣಿ ಜಿನಸು ಮುಂತಾದ ಪದಾರ್ಥಗಳನ್ನು ಅರಮನೆಗೆ ದೊಡ್ಡ ಹಾಳಿತದಿಂದ ತೆಗೆದುಕೊಂಡು ಚಿಕ್ಕ ಹಾಳಿತದಿಂದ ವೆಚ್ಚ ಮಾಡುವಂತೆಯೂ ಪೇಟೆಮನೆಗಳಲ್ಲಿಯೂ ಇದೇ ಮೇರೆಗೆ ವ್ಯಾಪಾರ ಮಾಡುವಂತೆಯೂ ನಿಬಂಧನೆಮಾಡಿದರು.

ಗಿಡಗೆಂಡೆ ಕಟ್ಟಿದ ಭೂಮಿಗಳನ್ನು ಸಾಗುವಳಿಗೆ ಕೊಟ್ಟದ್ದು.—ಅನಂತರ ಗಿಡಗೆಂಡೆ ಕಟ್ಟಿರುವ ಭೂಮಿಗೆ ಆಯಾ ಸೀಮೆಯ ಪದ್ಧತಿಪ್ರಕಾರ ಪೂರ್ವದಲ್ಲಿ ಶ್ಯಾನಭೋಗನ ಲೆಕ್ಕದ ಮೇರೆಗೆ ೯೦ ಹಣ ಹುಟ್ಟುವ ಉತ್ತಮ ಭೂಮಿಯಲ್ಲಿ ಗಿಡಗೆಂಡೆಯನ್ನು ಕಡಿದು ರೈತರು ಸಾಗುವಳಿ ಮಾಡಿದರೆ, ೫ ವರ್ಷದ ವರೆಗೂ ಮೂರರಲ್ಲಿ ಬಂದು ಪಾಲು ಕಂದಾಯ ತೆಗೆದುಕೊಳ್ಳುವಂತೆಯೂ, ಇದೇ ಮೇರೆಗೆ ಇರುವ ೧೬ ಹಣ ಹುಟ್ಟುವ ಮಧ್ಯಮ ಭೂಮಿಗೆ ನಾಲ್ಕರಲ್ಲಿ ಬಂದು ಪಾಲು ೪ ಹಣವನ್ನು ಕಂದಾಯ ತೆಗೆದುಕೊಂಡು ಅನಂತರ ಅರಮನೆಯ ಪದ್ಧತಿಯ ಮೇರೆಗೆ ನಿಜ ಕಂದಾಯವನ್ನು ತೆಗೆದುಕೊಳ್ಳುವಂತೆಯೂ ನಿಬಂಧನೆ ಮಾಡಿದರು. ಕೆಲವು ಸೀಮೆಗಳಲ್ಲಿ ರೈತರು ಕಡವೆಯಾಗಿ ಗಿಡಗೆಂಡೆ ಕಟ್ಟಿರುವ ಭೂಮಿಯು ಹೆಚ್ಚಾಗಿರುವುದರಿಂದ ಸಾಗುವಳಿಯಾಗುವುದಕ್ಕೆ ರೈತರಿಗೆ ಹಿಸ್ಸೆ ಕಂದಾಯವೆಂಬದಾಗಿ ನೇಮಕಮಾಡಿ ಕೊಟ್ಟರು.

ತೆಂಗಿನವರ ಮುಂತಾದವುಗಳಿಗೆ ಕಂದಾಯ.—ತೋಟಗಳಲ್ಲಿರುವ ೧,೦೦೦ ತೆಂಗಿನಮರಗಳಿಗೆ ೫೦, ೨೮, ೨೫, ೧೮, ೧೫ ವರಹಗಳ ಮೇರೆಗೆ ಆಯಾ ತೋಟದ ಫಲಗಳನ್ನು ನೋಡಿ ಕಂದಾಯವನ್ನು ನಿಬಂಧನೆ ಮಾಡಿದ್ದಲ್ಲದೆ, ಕೆಲವು ಸೀಮೆಗಳಲ್ಲಿ ತೋಟಕ್ಕೆ ಪೂರ್ವದಿಂದಲೂ ಕಂದಾಯದ ಪದ್ಧತಿ ಇಲ್ಲದ್ದರಿಂದ, ಅಡಕೆ ತೆಂಗಿನಲ್ಲಿ ಆದ ಫಲಕ್ಕೆ ವಾರವನ್ನು ತೆಗೆದುಕೊಳ್ಳುವಂತೆಯೂ, ತೆಂಗಿನಮರಕ್ಕೆ ಕಂದಾಯ ಕೊಡುವ ಪದ್ಧತಿ ಯಿರುವ ಸೀಮೆಗಳಲ್ಲಿ ಅಡಕೆ ಮರಕ್ಕೂ ಆಯಾ ಸೀಮೆಯ ಪದ್ಧತಿಯ ಮೇರೆ ಕಂದಾಯವನ್ನು ಕೊಡುವಂತೆಯೂ ನಿಬಂಧನೆ ಮಾಡಿದರು. ಕೆರೆಯ ಹಿಂದುಗಡೆಯಲ್ಲಿಯೂ ಕಾಲುವೆಗಳ ಸಮೀಪದಲ್ಲಿಯೂ ಹೊಸದಾಗಿ ಅಡಕೆ ತೆಂಗು ತೋಟವನ್ನು ಮಾಡಲು ರೈತರಿಗೆ ಸಾಗುವಳಿಗೆ ಕೊಡಬೇಕಾದರೆ, ೧೦೦ ಬಾಳೆಯ ಬುಡಕ್ಕೆ ೫ ಹಣ

ಕಂದಾಯದ ಮೇರೆಗೆ ತೆಗೆದುಕೊಂಡು ಅಡಕೆ, ತೆಂಗು ಫಲಕ್ಕೆ ಬಂದ ಮೇಲೆ ಬಾಳೆಯ ಕಂದಾಯವನ್ನು ಬಿಟ್ಟುಕೊಟ್ಟು ಅಡಕೆ, ತೆಂಗಿಗೆ ಮಾತ್ರ ಆಯಾ ಸೀಮೆಯ ಪದ್ಧತಿಯ ಮೇರೆಗೆ ವಾರವೆನ್ನಾಗಲಿ ಕಂದಾಯವನ್ನಾಗಲಿ ತೆಗೆದುಕೊಳ್ಳುವಂತೆ ನಿಬಂಧನೆ ಮಾಡಿದರು. ಹೊಲದಲ್ಲಿರುವ ಹುಣಸೆ ಹಲಸಿನ ಮರಗಳಿಗೆ ಮಾತ್ರ ಫಲವಿದ್ದಂತೆ ೧ ಹಣದಿಂದ ೨ ಹಣದವರೆಗೆ ಮರವಳಿ ಕಂದಾಯವನ್ನು ನಿಷ್ಕರ್ಷೆ ಮಾಡಿದರು. ಸೀಮೆಗಳಲ್ಲಿ ಕೆಲವು ಭೂಮಿಗಳಿಗೆ ರೈತರು ನಾವು ಕಂದಾಯವನ್ನು ಕೊಡಲಾರೆವು ಎಂಬುದಾಗಿ ಬೇಡಿಕೊಂಡದ್ದರಿಂದ, ದೊರೆಗಳವರು ರೈತರ ಮೇಲೆ ಕರುಣೆವಿಟ್ಟು, ಅವರು ಚೆನ್ನಾಗಿ ಬದುಕಬೇಕೆಂದು ವಾರವನ್ನು ತೆಗೆದುಕೊಳ್ಳುವಂತೆ ನೇಮಿಸಿ, ವಾರದಲ್ಲಿ ಹುಟ್ಟಿದ ಅರಮನೆಪಾಲಿನ ದವಸವನ್ನು ಶ್ರೀರಂಗಪಟ್ಟಣದ ದೊಡ್ಡ ಉಗ್ರಾಣಕ್ಕೆ ತಂದು ಸೇರಿಸುವಂತೆಯೂ ವಾರದಲ್ಲಿ ಹುಟ್ಟಿದ ಹುಲ್ಲನ್ನು ಶ್ರೀರಂಗಪಟ್ಟಣದ ಹುಲ್ಲು ಮೆದೆಗೆ ತಂದು ಹಾಕುವಂತೆಯೂ ಗಡಿಗಳ ಸುಬೇದಾರರಿಗೆ ನಿಬಂಧನೆ ಮಾಡಿದರು.

ಕೊಬ್ಬಿದ ರೈತರನ್ನು ಅಡಗಿಸಿ ತರಿಗೆಯನ್ನು ಹಾಕಿದ್ದು.—ಈ ಪ್ರಕಾರವಾಗಿ ಸಕಲ ವಿಷಯದಲ್ಲಿಯೂ ಸರಾಗ ಮಾಡಿಕೊಟ್ಟದ್ದರಿಂದ, ಕೆಲವು ರೈತರು ಧನಧಾನ್ಯದಿಂದ ಗರ್ವಿತರಾಗಿ "ಅರಮನೆಗೆ ಕೊಡತಕ್ಕ ಕಂದಾಯ, ವಾರದದವಸ ಮುಂತಾದುದನ್ನು ನಾವು ಕೊಡುವದಿಲ್ಲ. ಕಾಡಭೂಮಿಯನ್ನು ಬಸವಣ್ಣನು ಉಳುತ್ತಾನೆ, ದೇವೇಂದ್ರನು ಮಳೆಯನ್ನು ಕರೆಯುತ್ತಾನೆ, ನಾವು ಕಷ್ಟಪಟ್ಟು ಪೈರುಮಾಡಿ ಸೀಮೆಗೇತಕ್ಕೆ ಕೊಡಬೇಕು" ಎಂಬುದಾಗಿ ಅರಮನೆಯ ಮುದ್ರೆಯನ್ನು ಮೀರಿದರು. ಅವರನ್ನು ಹಿಡಿತರಿಸಿ, ತುಂಟಜನರಿಗೆ ಶಿಕ್ಷೆಮಾಡಿಸಿ, ಅವರ ಸರ್ವಸ್ವವನ್ನೂ ಅರಮನೆಗೆ ತೆಗೆದುಕೊಳ್ಳಲು, ಇದನ್ನು ನೋಡಿದ ಮತ್ತೆ ಕೆಲವರು ರೈತರು ಭಯಪಟ್ಟು ಅಪ್ಪಣೆಯಾವಂತೆ ನಡದುಕೊಳ್ಳುತ್ತೇವೆಂದು ಬಿನ್ನವಿಸಿಕೊಂಡದ್ದರಿಂದ ಆ ರೈತರುಗಳಿಗೆ ಜೀವನಕ್ಕೂ, ಮುಂದೆ ಅವರ ಆದಂಬ ನಡೆವುದಕ್ಕೂ, ಅವರುಗಳಲ್ಲಿದ್ದ ಧನಧಾನ್ಯಗಳಲ್ಲಿ ಕೆಲವನ್ನು ಬಿಟ್ಟು, ನಿಂತ ಧನಧಾನ್ಯವೆಲ್ಲವನ್ನೂ ಅರಮನೆಗೆ ತೆಗೆದು

ಕೊಂಡು, ಇನ್ನುಮೇಲೆ ರೈತರಿಗೆ ಮೊದಲಿನಂತೆ ಸರಾಗ ಮಾಡಿಕೊಟ್ಟರೆ ಅರಮನೆಯು ಕೆಲಸ ಕಟ್ಟುಹೋಗುವುದೆಂದು ಪರ್ಯಾಲೋಚನೆ ಮಾಡಿ, ರೈತರನ್ನು ತಗ್ಗಿಸುವ ನಿಮಿತ್ತವಾಗಿಯೂ, ಅರಮನೆಗೆ ಕೂಡಿ ಬರುವಂತೆಯೂ, ಹೆಚ್ಚಾಗಿ ಮನೆದೆರಿಗೆ ಮೊದಲಾದ ೧೯ ಬಾಬುಗಳನ್ನು ನೇಮಿಸಿದರು. (೧) ಮನೆದೆರಿಗೆ, (೨) ಹುಲ್ಲುಹಣ, (೩) ದೇವರಾಯ ವೆಟ್ಟ, (೪) ಏರಸುಂಕ, (೫) ಸಮಯಾಚಾರ, (೬) ದನಕರು ಮೌರಿ ದ್ದಕ್ಕೆ ಸುಂಕ, (೭) ಕುರಿದೆರಿಗೆ, (೮) ಗುಳುವಿನ ಪೊಮ್ಮು, (೯) ಅಂಗಡಿವೆಸರ, (೧೦) ಕೂಟುಚಾರ, (೧೧) ಉಬ್ಬಕಾಣಿಕೆ, (೧೨) ಅಂಗಡಿಪಟ್ಟಿ, (೧೩) ಗಿಡಕಾವಲು, (೧೪) ಜಾತಿಮೇಣಿಯ, (೧೫) ಮಗ್ಗದ ಕಂದಾಯ, (೧೬) ಪಾಶವಾರ, (೧೭) ಮದುವೆದೆರಿಗೆ, (೧೮) ಉಪ್ಪಿನ ಪೋಳ, (೧೯) ಕೌರಿಯ ತೆರಿಗೆ,—ಈ ಮೇರೆಗೆ ಹತ್ತೊಂಬತ್ತು ಬಾಬುಗಳನ್ನು ರೈತರಿಗೆ ನಿಷ್ಕರ್ಷೆ ಮಾಡಿಸಿ, ಈ ಬಾಬುಗಳಲ್ಲಿ ಬಂದೊಂದಕ್ಕೆ ಒಬ್ಬೊಬ್ಬ ಮಣೇಗಾರ, ಶ್ಯಾನಭೋಗ, ಕೋಲುಕಾರ ಮುಂತಾದ ಜನಗಳನ್ನು ನೇಮಕ ಮಾಡಿ ಈ ಬಾಬುಗಳನ್ನು ಗುತ್ತಿಗೆಗೆ ಕೊಟ್ಟು, ಆಯಾ ಸಂವತ್ಸರದಲ್ಲಿ ಹುಟ್ಟಿದ ಗುತ್ತಿಗೆಯ ಹಣವನ್ನು ಆಯಾ ಗ್ರಾಮದ ಹುಟ್ಟುವಳಿಗೆ ಸೇರಿಸುವಂತೆಯೂ, ಆಯಾ ರೈತರ ಸುಮಾರರಿತು ಕಂದಾಯ ಹೆಚ್ಚಿಸಿ, ಈ ಹಣವೆಲ್ಲವೂ ಸೀಮೆಯ ಕಂದಾಯದ ಹೂದ ಜೊತೆಯಲ್ಲಿಯೇ ಬರುವಂತೆಯೂ ನಿಬಂಧನೆ ಮಾಡಿದರು.

ಚಿಂತಾಲುಗಳನ್ನು ಹಾಕಿಸಿದ್ದು.—ಪಾಳೆಯಗಾರರಿಂದ ಜಯಿಸಿದ ಗಡಿಗಳ ಕೋಟೆಕೊತ್ತಲಗಳನ್ನು ಬಂದೋಬಸ್ತು ಮಾಡಿಸಿ ಪೂರ್ವದಲ್ಲಿದ್ದ ಪೇಟೆಗಳನ್ನು ವಿಸ್ತಾರವಾಗಿ ಕಟ್ಟಿಸಿ ಯಾವಯಾವ ಸೀಮೆಗಳಲ್ಲಿ ಯಾವ ಯಾವ ಪದಾರ್ಥಗಳು ಹೆಚ್ಚಾಗಿ ಬೆಳಯುತ್ತಿವೆಯೋ ಆ ಪದಾರ್ಥಗಳು ಬಂಗೊಂದು ದೊಡ್ಡ ಪೇಟೆಯಲ್ಲಿಯೇ ಗೊತ್ತಾಗಿ ಕರಗೆಪಡಿ ಆಗಬೇಕೆಂದು ನೆರ್ತಕರು ಬಿನ್ನವಿಸಿಕೊಳ್ಳಲು, ದೊರೆಗಳವರು ಬೆಂಗಳೂರು ಗುಬ್ಬಿ ತುರುವೇಕೆರೆ ಮುಂತಾದ ಸ್ಥಳಗಳಲ್ಲಿ ಚಿಂತಾಲುಗಳನ್ನು ಹಾಕಿಸಿ, ಹತ್ತಿ, ಅಡಕೆ, ಸೊದಲಾದ ತೂಕದ ಪದಾರ್ಥಗಳನ್ನು ಅಲ್ಲಿಗೆ ತಂದು ತೂಕಮಾಡಿ ತೆಗೆದುಕೊಂಡು ಹೋಗಿ ಚಿಲ್ಲರೆ ಪೇಟೆಗಳಲ್ಲಿ ಮಾರುವುದೆಂದು ಕಟ್ಟು ಮಾಡಿದರು.

ಸುಂಕದ ಚಾವಡಿ ಮೊದಲಾದವುಗಳು.—ಇದಲ್ಲದೆ ದವಸ, ತೂಕದ ಕಿರಾಣಿ, ಗಂದಿಗ ಜಿನಸು, ಜವಳಿ ಮುಂತಾದ ಸಕಲ ಪದಾರ್ಥಗಳನ್ನೂ ೪೪ ಗಡಿಗಳ ಪೇಟೆಗಳಿಂದ ತೆಗೆದುಕೊಂಡು ಹೋಗುವುದಕ್ಕೂ, ಬರುವುದಕ್ಕೂ ಅಲ್ಲಿಯೇ ಕರಗಟ್ಟಿ ಮಾರುವದಕ್ಕೂ ಅರಮನೆಗೆ ಕೂಡಿ ಬರುವಂತೆ ಆಯಾ ಜಿನಸಿನ ತಾರತಮ್ಯವಿದ್ದಂತೆ ಸುಂಕವನ್ನು ನಿಬಂಧನೆ ಮಾಡಿ, ಈ ಸುಂಕವನ್ನು ತೆಗೆದುಕೊಳ್ಳುವುದಕ್ಕೆ ಸುಂಕದ ಚಾವಡಿ ಎಂಬದಾಗಿ ಮಾಡಿ, ಇವಕ್ಕೆ ಸುಂಕದ ಮಣಿಗಾರ, ಶ್ಯಾನಭೋಗರು ೧, ೦, ೩, ಕೋಲುಕಾರರು, ಅಲ್ಲಲ್ಲಿ ಪೊರ್ಗಗಳಲ್ಲಿ ಉಕ್ಕಡ, ಅ ಉಕ್ಕಡಕ್ಕೆ ಬಬ್ಬೊಬ್ಬ ಕೋಲುಕಾರ, ಶ್ಯಾನಭೋಗ ಮುಂತಾದ ಜನಗಳನ್ನು ನಿಷ್ಕರ್ಷೆಮಾಡಿ, ಈ ಜನಗಳಿಗೆಲ್ಲಾ ಸಂಬಳವನ್ನು ನಿಗದಿ ಮಾಡಿದರು.

ಸೆಟ್ಟಿಯಜಮಾನ ಮೊದಲಾದವರ ನೇಮಕ.—ಗಡಿಗಳು ಮುಂತಾದ ಸ್ಥಳದ ಪೇಟೆಗಳಲ್ಲಿ ಬಣಜಿಗರು, ಕೋಮಟಿಗರು, ಪಂಚಾಳದವರು, ಮುಂತಾದ ಹಮೊಕೋವಿನ ಜನಗಳು ತಮ್ಮತಮ್ಮ ಜಾತಿನಿಬಂಧನೆಯನ್ನು ಮೀರದಂತೆಯೂ, ಕಳ್ಳತನ ನಡೆಯುವಂತೆಯೂ, ಆಯಾ ಗಡಿಗಳಲ್ಲಿ ವ್ಯಾಪಾರಗಾರರು ಅರಮನೆಯ ನಿಬಂಧನೆಯ ಮೇರೆ ವ್ಯಾಪಾರಗಳನ್ನು ಮಾಡಬೇಕಾದುದಲ್ಲದೆ ಹೆಚ್ಚು ಕಡಮೆ ನಡೆಸದಂತೆಯೂ, ಅರಮನೆಯ ನಿಬಂಧನೆಯನ್ನು ಮೀರಿ ನಡೆದ ಜನರಿಗೆ ಶಿಕ್ಷೆ ಮಾಡುವಂತೆಯೂ, ಪೇಟೆ ೧ಕ್ಕೆ ಕೊತ್ತವಾಲ ೧, ಶ್ಯಾನಭೋಗರು ಪೇಟೆಯಿದ್ದಂತೆ ೧—೦—೩ ಜನಗಳು, ಮತ್ತು ಊಳಿಗದವರು, ಪೇಟೆಸೆಟ್ಟಿ ೧, ಯಜಮಾನ ೧, ಪೇಪದ ಶ್ಯಾನಭೋಗ ೧, ಚಲವಾದಿ ೧, ಟುಮುಕೆ ಹೊಡೆದು ಸಾರುವದಕ್ಕೆ ದಂಡಿಯವನು ೧, ಕೊಂಬಿನವನು ೧, ತಮಟೆಯವನು ೧, ಕಳ್ಳಬಂಟರು ಮುಂತಾದ ಜನಗಳನ್ನು ನೇಮಕಮಾಡಿ ರಾತ್ರಿವೇಳೆಯಲ್ಲಿ ಕೊತ್ತವಾಲ, ದಂಡಿ, ಕಳ್ಳಬಂಟರು, ಕೊಂಬಿನವನು, ತಮಟೆಯವನು, ಮೊದಲಾದ ಜನರು ಕಳ್ಳಕಾಕರರಿಗೆ ಆಸ್ಪದವಿಲ್ಲದಂತೆ ಗಸ್ತಿಯನ್ನು ತಿರುಗಿಕೊಂಡು ಜಾಗರೂಕರಾಗಿರುವಂತೆಯೂ, ಕೊತ್ತವಾಲ, ಪೇಟೆಸೆಟ್ಟಿ, ಯಜಮಾನ ಇವರುಗಳು, ವಿಚಾರಣೆ ಮಾಡಿ ಸ್ವಲ್ಪ ತಪ್ಪು ಮಾಡಿದವರ ಕೈಯಲ್ಲಿ ಅಪರಾಧಧನವನ್ನು ತೆಗೆದುಕೊಳ್ಳುವಂತೆಯೂ, ಹೆಚ್ಚು ಅಪರಾಧಮಾಡಿದ

ಜನಗಳಿಗೆ ಶಿಕ್ಷೆ ಮಾಡುವುದಕ್ಕೆ ದೊರೆಗಳವರಲ್ಲಿ ಬಿನ್ನವಿಸುವಂತೆಯೂ, ಮೇಲೆ ಕಂಡ ಜನಗಳು ತಮ್ಮ ತಮ್ಮ ಜಾತಿ ಪದ್ಧತಿಯ ಮೇರೆಗೆ ನಡೆದು ಕೊಳ್ಳುವಂತೆಯೂ, ಕಟ್ಟುಮಾಡಿದರು. ಆಯಾ ಸೀಮೆಯ ಪದ್ಧತಿಯಂತೆ ದೇಶಮುಖಿ, ದೇಶಪಾಂಡೆ, ನಾಡಿಗರು, ಮುಗಿವ ಕೈಗೆ ಹೊನ್ನು ತೆಗೆದುಕೊಳ್ಳುವರು, ಹೆಬ್ಬಾರುವರು ಮುಂತಾದ ಜನಗಳಿಗೆ ಅವರವರ ಪೂರ್ವ ಪದ್ಧತಿ ಪ್ರಕಾರ ವೀಳೆಯ ಮೊದಲಾದ ಮರ್ಯಾದೆಗಳನ್ನು ನಡೆಸುವಂತೆ ಕಟ್ಟಳೆ ಮಾಡಿದರು. ಗತಿಗಳಿಂದ ನಿಬಂಧನೆಮಾಡಿರುವ ಮೇರೆಗೆ ಹಣ ವೆಸೂಲಾಗಿ ಬರುವದಕ್ಕೆ ವರ್ಷಕ್ಕೆ ಮೂರು ಕಂದಾಯ ಎಂಬಬಾಗಿ ನಿಷ್ಕರ್ಷೆಮಾಡಿ, ಪ್ರತಿವರ್ಷದಲ್ಲಿಯೂ ಕಾಸೂ ಬಾಕಿ ನಿಲ್ಲದಂತೆ ವೆಸೂಲಾಗಿ ಅತವಣಿ, ಕಂದಾಚಾರ, ದೇವದಾಯ, ಬ್ರಹ್ಮದಾಯ, ಮುಂತಾದ ಸ್ಥಳದ ಸಿಬ್ಬಂದಿಯ ಖರ್ಚು ಕಳೆದು ಶ್ರೀರಂಗಪಟ್ಟಣದ ಬೊಕ್ಕಸಕ್ಕೆ ಬಂದ ಹಣವು ದವಲತ್ತಿನ ಖರ್ಚಿಗೆ ಎಂಬದಾಗಿ ನಿಷ್ಕರ್ಷೆ ಮಾಡಿದರು. ಸುಬೇದಾರನು ಪೈರುಪಚಿ ಮುಂತಾದ ಬಾಬುಗಳಿಂದ ಹೆಚ್ಚು ಹುಟ್ಟುವಳಿಯನ್ನು ಮಾಡುವೆನೆಂದು ಮುಚ್ಚಳಿಕೆ ಬರೆದು ಕೊಟ್ಟು ಆಪ್ರಕಾರ ವರುಷ ೧ಕ್ಕೆ ಬರತಕ್ಕ ಕಂಠೀರಾಯಿ ೫,೦೦,೦೦೦ ವರಹಗಳಲ್ಲಿ ಜಾಳಿಗೆ ೧ಕ್ಕೆ ೧,೦೦೦ ವರಹಗಳ ಪ್ರಕಾರ ಎರಡು ಜಾಳಿಗೆ ವರಹವು ಪ್ರತಿನಿತ್ಯವಲ್ಲಿಯೂ ಗಡಿಗಳಿಂದ ಬರುವಂತೆ ನಿಬಂಧನೆ ಮಾಡಿದ್ದಲ್ಲದೆ, ಗಡಿಗಳಿಂದ ಬಂದ ಈ ಹಣವನ್ನು ಸರ್ವಾಧಿಕಾರ ಮಾಡುವೆನು ತಮ್ಮ ನಾಮತೀರ್ಥವ ವೇಳೆಗೆ ತಂದು ಒಪ್ಪಿಸುವಂತೆ ಕಟ್ಟಳೆ ಮಾಡಿದರು. ಈ ಮೇರೆಗೆ ಬಂದು ದಿವಸ ಹಣವು ಬರುವುದು ಸಾವಕಾಶವಾದರೆ, ದೊರೆಗಳವರು ರಾಮಾಯಣ ಪಾರಾಯಣದಲ್ಲಿಯೇ ಕಾಲವನ್ನು ಕಳೆದು, ಎರಡು ಸಾವಿರ ವರಹ ಬಂದಬಳಿಕ ಪರಾಂಬರಿಸಿ, ನೋಟಸಲಿಕೆಯನ್ನು ಮಾಡಿಸಿ, ಅರಮನೆಯ ಖಾಸ ಬೊಕ್ಕಸಕ್ಕೆ ಕಳುಹಿಸಿದ ಮೇಲೆ ಆರೋಗಣೆಯನ್ನು ಒಪ್ಪಿಸಿಕೊಳ್ಳುತ್ತಿದ್ದರು. ಮತ್ತು ಈ ಹಣದಲ್ಲಿಯೇ ದಾನಧರ್ಮಗಳನ್ನು ಮಾಡುತ್ತಿದ್ದರು.

ಉಗ್ರಾಣಗಳ ಏರ್ಪಾಡು.—ಪೂರ್ವದಲ್ಲಿ ರಣಧೀರ ಕಂಠೀರವ ನರಸರಾಜ ಒಡೆಯರವರು ಸಕಲ ಪದಾರ್ಥಗಳನ್ನೂ ತುಂಬುವುದಕ್ಕೆ ಶ್ರೀರಂಗ

ಪಟ್ಟಣದ ಕೋಟೆಯಲ್ಲಿ ಕಟ್ಟಿಸಿರುವ ದೊಡ್ಡ ಉಗ್ರಾಣದಲ್ಲಿ ಸೀಮೆಗಳಿಂದ ಬಂದ ವಾರದ ದವಸಗಳನ್ನೂ, ಕ್ರಯಕ್ಕೆ ತರಿಸಿದ ಎಣ್ಣೆ, ತುಪ್ಪ, ಮುಂತಾದ ಕಿರಾಣಿ ಜಿನಸುಗಳನ್ನೂ, ಹೊಸದಾಗಿ ತುಂಬಿಸಿ, ಹಳದಾಗಿದ್ದ ಸಕಲ ಪದಾರ್ಥಗಳನ್ನೂ ಪ್ರತಿನಿತ್ಯದಲ್ಲಿಯೂ ಅರಮನೆ ಮುಂತಾದ ಸ್ಥಳದಲ್ಲಿ ವೆಚ್ಚ ಮಾಡುವುದಕ್ಕೆ, ಇದೇ ಪರಿಯಾಗಿ ಹೊಸದಾಗಿ ಕಟ್ಟಿಸಿರುವ ಚಿಕ್ಕ ಉಗ್ರಾಣಕ್ಕೆ ಕಳುಹಿಸಿಕೊಡುವಂತೆಯೂ, ದೊಡ್ಡ ಉಗ್ರಾಣದಲ್ಲಿ ವೆಚ್ಚವಾದ ಜಿನಸುಗಳಿಗೆ ಸರಿಯಾಗಿ ಹೊಸದಾಗಿ ಭರ್ತಿಯಾಗಿರುವಂತೆಯೂ, ನಿಬಂಧನೆ ಮಾಡಿದರು. ಗಡಿಗಳಲ್ಲಿರುವ ಅರಮನೆಯ ಪಣ್ಯದ ತೋಟಗಳಲ್ಲಿ ಉತ್ಪತ್ತಿಯಾದ ತೆಂಗು, ಹಲಸು, ಮಾವು, ನಿಂಬೆ, ಕಿತ್ತಿಳೆ, ದಾಳಿಂಬ, ಹೇರಿಳೆ ವೀಳ್ಯದೆಲೆ, ಬಾಳೆ, ಸವುತೆ, ಹೀರೆ, ಪಡವಲ, ಕುಂಬಳ, ಗೆಣಸು, ಬದನೆ, ಮುಂತಾದ ಹಸುರುವಾಣಿ ಜಿನಸುಗಳು ಚಿಕ್ಕ ಉಗ್ರಾಣಕ್ಕೆ ಬರುವಂತೆ ಗೊತ್ತುಮಾಡಿದರು. ಚಿಕ್ಕ ಉಗ್ರಾಣಕ್ಕೆ ದೊಡ್ಡ ಉಗ್ರಾಣದಿಂದ ಬಂದ ಪದಾರ್ಥಗಳಲ್ಲಿಯೂ, ಪಣ್ಯದ ತೋಟಗಳಿಂದ ಬಂದ ಹಸುರುವಾಣಿ ಜಿನಸುಗಳಲ್ಲಿಯೂ, ಅರಮನೆ ಮುಂತಾದ ಸ್ಥಳಗಳಲ್ಲಿ ವೆಚ್ಚವಾದ ಜಿನಸುಗಳು ಹೊರತು ನಿಂತ ಜಿನಸುಗಳನ್ನು ಕಡ್ಡಾಯವಹಾಕುವಂತೆ ಮಾಡಿದ್ದಲ್ಲದೆ, ಹಸುರುವಾಣಿ ಜಿನಸುಗಳು ಕರಗಪಡಿಯಾಗುವುದಕ್ಕೆ ಪಣ್ಯದ ಅಂಗಡಿಯನ್ನು ನಿಬಂಧನೆಮಾಡಿದರು. ಮತ್ತು ಎರಡು ಉಗ್ರಾಣಗಳಿಗೂ ಗುರಿಕಾರರು ೧—೨, ಕರಣಿಕರು ೩, ಗುಮಾಸ್ತೆಯರು, ಊಳಿಗದವರು, ಅಳತೆಯವರು, ತೂಕದವರು, ಕಾವಾಟಿ, ಚಂಗೂಲಿ ಪಹರೆಯವರು ಮುಂತಾದ ಜನಗಳನ್ನೂ, ಪಣ್ಯದ ಅಂಗಡಿಗೆ ಶ್ಯಾನಭೋಗನನ್ನೂ ವ್ಯಾಪಾರ ಮಾಡುವದಕ್ಕೆ ಗೊಲ್ಲನನ್ನೂ, ಹುಲ್ಲು ಮೆದೆಗೆ ಗುರಿಕಾರ ೧ ಶ್ಯಾನಭೋಗ ೨-೩-೪, ಊಳಿಗದವರು, ಕಾವಾಟಿ ಮುಂತಾದ ಜನಗಳನ್ನೂ ನೇಮಕಮಾಡಿಸಿ, ಈ ಜನಗಳಿಗೆಲ್ಲಾ ಅವರವರ ವಿಧವೆರಿತು ಸಂಬಳವನ್ನೂ, ಈ ಸಂಬಳಕ್ಕೆ ಅರ್ಧಬತ್ತವನ್ನೂ ಅರ್ಧನಗದು ಹಣವನ್ನೂ ಕೊಡುವಂತೆ ನಿಬಂಧನೆ ಮಾಡಿಸಿದರು.

ಅಮುಖಶಾಲೆ ಜಾನಸಾಲ ಮೊದಲಾದವುಗಳ ವಿಚಾರಣೆ.—ಪೂರ್ವದಲ್ಲಿ ರಣಧೀರ ಕಂಠೀರವೆ ನರಸರಾಜಬಡೆಯರವರು ಶ್ರೀರಂಗಪಟ್ಟಣದಕೋಟೆಯೊಳಗೆ ಕಟ್ಟಿಸಿರುವ ಜಾನಸಾಲೆ, ಮೆದ್ದಿನಮನೆ, ಅಲಗಿನಕಾವಡಿ, ಮುಂತಾದವುಗಳನ್ನು ಮೊದಲಿಗಿಂತ ವಿಸ್ತಾರವಾಗಿ ಮಾಡಿಸಿ, ಈ ಜಾನಸಾಲೆಯಲ್ಲಿ ಹಗಲುಬತ್ತಿ, ಹೂಬಾಣ, ಆಕಾಶಕೊಳವಿ, ಚಕ್ರಬಾಣ, ನಕ್ಷತ್ರಬಾಣ, ಮೆತ್ತು ನಾನಾವಿಧ ವೈಹ್ಲ ಪಕ್ಷಿಗಳಾಕಾರದಬಾಣಗಳನ್ನು ಮಾಡಿಸಿ, ಈ ಬಾಣಗಳನ್ನು ನವರಾತ್ರಿಯುತ್ಸವ, ದೇವತೋತ್ಸವ, ಮುಂತಾದ ಉತ್ಸವಗಳಕಾಲದಲ್ಲಿ ಹಚ್ಚಿಸುವಂತೆ ಕಟ್ಟಳೆ ಮಾಡಿ, ಪೂರ್ವಕ್ಕಿಂತ ಅಧಿಕವಾಗಿ ಕತ್ತಿ, ಕಠಾರಿ, ತುಪಾಕಿ, ಮೆದ್ದು, ಗುಂಡು ಮೊದಲಾದ ಯುದ್ಧಸಾಮಗ್ರಿಗಳನ್ನು ಹೇರಳವಾಗಿ ಮಾಡುವಂತೆ ಕಟ್ಟು ಮಾಡಿ, ಇದರ ವಿಚಾರಣೆಗೂ ಲೆಕ್ಕವನ್ನು ಬರೆವುದಕ್ಕೂ ಗುರಿಕಾರ, ಶ್ಯಾನಭೂಗ, ಮುಂತಾದ ಆಯಾ ಪಣಕಟ್ಟಿನ ಜನಗಳನ್ನು ನೇಮಕಮಾಡಿದರು.

ಅರಮನೆಯಲ್ಲಿ ಬೊಕ್ಕಸ ಮುಂತಾದ ಗೊತ್ತುಸ್ಥಳಗಳನ್ನು ಮಾಡಿಸಿದ್ದು :—(೧) ಹಣಕಾಸುಗಳನ್ನಿರಿಸುವೆ ಬೊಕ್ಕಸ, (೨) ಜವಳಿಯ ಬೊಕ್ಕಸ, (೩) ಕತ್ತಿಯ ಬೊಕ್ಕಸ, (೪) ಸಮುಖದ ಬಾಗಿಲು, (೫) ನಾಮತೀರ್ಥದ ತೊಟ್ಟಿ, (೬) ಮೈಸೂರು ಹೋಬಳಿಯ ಇಟ್ಟಿಲೂಳಿಗ, (೭) ಪಟ್ಟಣದ ಹೋಬಳಿಯ ಇಟ್ಟಿಲೂಳಿಗ, (೮) ಕುದುರೆಯಲಾಯ, (೯) ಆನೆಯ ಸಾಲು, (೧೦) ಒಂಟೆಯ ಲಾಯ, (೧೧) ಕಾಣಿಕೆಯ ಬೊಕ್ಕಸ, (೧೨) ಒಡವೆಯ ಬೊಕ್ಕಸ, (೧೩) ಪಾಸಿಗೆ ಬೊಕ್ಕಸ, (೧೪) ಬಳಬಾಗಿಲು, (೧೫) ಸಮುಖದ ಊಳಿಗ, (೧೬) ಗೊಲ್ಲರಹೋಬಳಿ, (೧೭) ಹಸುವಿನ ಕರೆವೆ ಹಟ್ಟಿ, (೧೮) ಎಮ್ಮೆಯ ಕರೆವೆ ಹಟ್ಟಿ, (೧೯) ಕೋಟೆ ಯೆತ್ತು, (೨೦) ಪರದೇಸಿಯ ಹೋಬಳಿ, (೨೧) ಖಾಸಾ ಮೈಗಾವಲ ಜನಗಳು, ನಾಮಾಂತರ ಖಾಸೆ ರಾವುತರು, (೨೨) ಅವಸರದ ಹೋಬಳಿ. ಅವಸರದ ಹೋಬಳಿಗೆ ವಳಿತವಾಗಿರುವದು :—ಚಿನ್ನಬೆಳ್ಳಿ ಸೋಟಿಯವರು, ಬಲಗದವರು, ಹೆಣು ಮೇಳದವರು, ಹೊಗಳುವ ಭಟ್ಟರು, ನವಪತ್ತುಖಾನೆಯವರು, ಬೆಸ್ತರು, ದೀವಟಿಗೆಯವರು, ದೀಪದ ಕಂಭದವರು. ಇವುಗಳಿಗೆಲ್ಲಾ ಗೊತ್ತುಗಾರರನ್ನೂ ಶ್ಯಾನಭೂಗರನ್ನೂ ನೇಮಕಮಾಡಿದರು.

ಅರಸುಗಳ ೧೩ ಮತ್ತು ೧೪ ಮನೆತನಗಳನ್ನು ವ್ಯವಸ್ಥೆಮಾಡಿದ್ದು.—ಶಾ॥ ಶಕ ೧೬೧೦ಕ್ಕೆ (A.D. 1689) ಸಂದ ಪ್ರಜೋತ್ಪತ್ತಿ ಸಂವತ್ಸರದ ಆಶ್ವಯುಜ ಶುದ್ಧ ೧೦ಯಲ್ಲಿ, ದೊರೆಗಳವರು ಅರಸುಗಳ ಬಂಧುಗಳಲ್ಲಿ ಕೆಲವರು ಸ್ನಾನಸಂಧ್ಯಾವಂದನೆಗಳನ್ನೂ ಮಾತಾಪಿತೃ ಶ್ರಾದ್ಧಗಳನ್ನೂ ಬಿಟ್ಟು ಗೌಡಪಟ್ಟ ಸಂಬಂಧವೆನ್ನು ಮಾಡಿಮದನ್ನೂ ಮತ್ತೆ ಕೆಲವರು ಇವೇ ಪರಿಯಾಗಿ ಬಡಜಾತಿ ಸಂಬಂಧವೆನ್ನು ಮಾಡಿ ಬೆರೆದಿರುವುದನ್ನೂ, ಚೆನ್ನಾಗಿ ಪರಾಂಬರಿಸಿ ವಿಚಾರಣೆ ಮಾಡಿ, ಇನ್ನು ಮೇಲೆ ಹೀಗೆ ಬಂಧುತ್ವವು ಸಂಕಲಿತವಾಗಬಾರದೆಂದು, ಗೌಡಪಟ್ಟ ಸಂಬಂಧ ಮಾಡಿದವರನ್ನೂ ಬಡಜಾತಿ ಸಂಬಂಧ ಮಾಡಿದವರನ್ನೂ ವಿಂಗಡಿಸಿ, ಆಯಾ ಜಾತಿಗೆ ಸೇರಿಸಿಬಿಟ್ಟು, ಅನಾದಿಯಾಗಿ ಪರಿಶುದ್ಧತೆಯಿಂದ ಹೊಂದಿ ಬಂದ ಸಂಬಂಧಗಳುಳ್ಳ ಅರಸುಗಳನ್ನು ವಿಂಗಡಿಸಿ ೧೩ ಮನೆತನದವರುಗಳಂತಲೂ, ಮತ್ತು ಗ್ರಾಮಾಂತರದಲ್ಲಿ ತಮ್ಮ ಅರಸುಗಳ ಸಂಪ್ರದಾಯವಲ್ಲಿ ಸ್ವಲ್ಪ ಹೆಚ್ಚು ಕಡಮೆಯಾಗಿ ನಡೆದ ಅರಸುಗಳನ್ನು ವಿಂಗಡಿಸಿ ೧೪ ಮನೆತನದವರುಗಳಂತಲೂ ನಿಬಂಧನೆಯನ್ನು ಮಾಡಿದರು.

ಹದಿಮೂರು ಮನೆತನಗಳು.—(೧) ಮೈಸೂರು ನಗರದ ದೊರೆಗಳವರ ಮನೆತನ, (೨) ಮೂಗೂರವರ ಮನೆತನ, (೩) ಯಳಂದೂರವರ ಮನೆತನ, (೪) ಕೊತ್ತ್ಯಾಗಾಲದವರ ಮನೆತನ, (೫) ಅರಿಕುತಾರದವರ ಮನೆತನ, (೬) ನಿಲಸೋಗೆ ಹ್ಯಾಕನೂರವರ ಮನೆತನ, (೭) ಬಿಳುಗುಲಿ ನರನಲ್ಲಿಯವರ ಮನೆತನ, (೮) ಕಳಲೆ ಹುಣಸನಾಳು ಮನೆತನ, (೯) ಹಳ್ಳೇಬೀಡು, ಬಿಳಿಕೆರೆ ಮನೆತನ, (೧೦) ಹೆಡತಲೆ, ಹೆಮ್ಮಿಗೆರಗಾಲ ಮತ್ತು ತೊರವೆಳ್ಳಿ ಮನೆತನ, (೧೧) ಕೋಟೆ, ಮೊಡಣಿಕೋಟೆ, ಪುರ ಮತ್ತು ಹುಲ್ಲಹಳ್ಳಿ ಮನೆತನ, (೧೨) ತಗಡೂರ ಮನೆತನ, (೧೩) ಕಾರಗಳ್ಳಿ ಮನೆತನ.

ಹದಿನಂಟು ಮನೆತನಗಳು.—(೧) ಕಿರುಗುಂದದ ಅರಸುಗಳ ಮನೆತನ, (೨) ಬಾಗಳಿಯವರ ಮನೆತನ, (೩) ಮುಳ್ಳೂರವರ ಮನೆತನ, (೪) ಕೋಟೆ ಸಿಂಗಪ್ಪಒಡೆಯರ ಮನೆತನ, (೫) ಮುಲಗೂಡದವರ ಮನೆತನ, (೬) ಸಿಂಧುವಳ್ಳಿಯವರ ಮನೆತನ, (೭) ಮರಸಿಯವರ ಮನೆತನ,

(೪) ಹೆಬ್ಬಾಳವೆರ ಮನೆತನ, (೯) ಕಿಕ್ಕೇರಿಯವೆರ ಮನೆತನ, (೧೧) ಪಾವನೂರು ಅರಸುಗಳ ಮನೆತನ, (೧೧) ಕುಲಗಾಣದ ಅರಸುಗಳ ಮನೆತನ, (೧೦) ತಲಕಾಡು ಅರಸುಗಳ ಮನೆತನ, (೧೩) ಬೆಳ್ಳೂರು ಅರಸುಗಳ ಮನೆತನ, (೧೪) ಹೊಸಕೋಟೆಯವರ ಮನೆತನ, (೧೫) ಮಳಲವಾಡಿಯವೆರ ಮನೆತನ, (೧೬) ಮದ್ದೂರವೆರ ಮನೆತನ, (೧೩) ಹೆಬ್ಬಲಗುಪ್ಪೆಯ ಅರಸುಗಳ ಮನೆತನ, (೧೪) ತಿಪ್ಪೂರರಸುಗಳ ಮನೆತನ.

ಹದಿಮೂರು ಮನೆತನದ ಅರಸುಗಳು ಈ ಹದಿಮೂರು ಮನೆತನದಲ್ಲಿಯೇ ಹೆಣ್ಣು ಕೊಟ್ಟು ತರುವುದೆಂಬದಾಗಿಯೂ, ಹದಿನಂಟು ಮನೆತನದ ಅರಸುಗಳು ಹದಿನಂಟು ಮನೆತನದವೆರಲ್ಲಿಯೇ ಹೆಣ್ಣನ್ನು ಕೊಡುವುದು ತರುವುದೆಂಬದಾಗಿಯೂ, ೧೩ ಮನೆತನದ ಅರಸುಗಳ ಹೆಣ್ಣುಗಳನ್ನು ೧೪ ಮನೆತನದವರಿಗೆ ಕೊಡಕೆಲಸವಿಲ್ಲ ಎಂತಲೂ, ೧೪ ಮನೆತನದ ಹೆಣ್ಣು ಮಕ್ಕಳನ್ನು ೧೩ ಮನೆತನದ ಅರಸುಗಳು ೨—೩ನೆಯ ಮದುವೆಗೆ ತರಬಹುದೆಂತಲೂ ನಿಬಂಧನೆಮಾಡಿದರು.

ಸಮುಖದ ಗುರಿಕಾರರನ್ನು ನೇಮಿಸಿದ್ದು.—ಅನಂತರದಲ್ಲಿ ಈ ಅರಸುಗಳನ್ನೆಲ್ಲಾ ಒಟ್ಟಾಗಿ ಕರೆಸಿ ದೊರಗಳವೆರು ಅವೆರನ್ನು ಕುರಿತು "ನಾವು ನಿಬಂಧನೆ ಮಾಡಿರುವ ಅರಸುಗಳ ಸಂಪ್ರದಾಯದಲ್ಲಿ ಮುಂದೆ ಹೆಚ್ಚು ಕಡಮೆ ನಡೆಯದಂತೆಯೂ, ವೈದಿಕ ಕರ್ಮಗಳನ್ನು ಬಿಡದಂತೆಯೂ, ನಿಬಂಧನೆಯನ್ನು ಮಾಡಿರುವುದರಲ್ಲಿ ಯಾರಾದರೂ ವರ್ಣಾಶ್ರಮ ಸಂಪ್ರದಾಯಕ್ಕೆ ವ್ಯತಿರಿಕ್ತವಾಗಿ ನಡೆದರೆ ಆಚಾರವಿಚಾರವನ್ನು ಮಾಡುವುದಕ್ಕೆ ನಮಗೆ ಬಹಳ ಸೀಮೆಯು ವಿಚಾರಣೆ ಇರುವುದರಿಂದಲೂ ಇನ್ನೂ ಬಹಳ ಸೀಮೆಗಳನ್ನು ಸಾಧಿಸುವುದಕ್ಕೆ ಸೀಮೆಯ ಮೇಲೆ ಸಂಚಾರ ಮಾಡುವುದು ಬಹಳ ಪ್ರಕೃತವಾಗಿರುವುದರಿಂದಲೂ, ನಮ್ಮ ಮೊವೆಂದಿರಾದ ಮೂಗೂರು ಮನೆತನದ ಸೋಮರಾಜಾನ್ಯನವೆರನ್ನು ಸಮುಖದ ಗುರಿಕಾರರನ್ನಾಗಿ ನೇಮಿಸಿದೇವೆ. ಯದುರಾಯರು ಆದಿಯಾಗಿ ನಮ್ಮ ಅರಮನೆಯ ಸಂಪ್ರದಾಯವೆನ್ನೂ ೧೩ ಮತ್ತು ೧೪

ಮನೆತನಗಳ ವಾಸಿವರ್ತನೆ, ಗೋತ್ರ ಸೂತ್ರಗಳನ್ನೂ ಚೆನ್ನಾಗಿ ತಿಳಿದಿರುವ ಅಪ್ಪಾಜಯ್ಯನಿಗೆ ಸಮುಖದ ಒಟ್ಟು ಕರಣಿಕತನವನ್ನು ನೇಮಕ ಮಾಡಿದೇವೆ. ನೀವುಗಳು ಇಲ್ಲಿಂದ ಮುಂದಕ್ಕೆ ಹೆಣ್ಣು ಕೊಡುವುದು ತರುವುದನ್ನೂ, ದತ್ತು ಕೊಡುವುದು ತೆಗೆದುಕೊಳ್ಳುವುದನ್ನೂ ಸಮ್ಮತಿಪಟ್ಟು ಇವರಿಗೆ ತಿಳಿಸಿದರೆ, ಇವರು ಬಂದು ನಮಗೆ ಶ್ರುತಪಡಿಸಿ ನಮ್ಮ ಅಪ್ಪಣೆಯಾದಂತೆ ನಿಮಗಳಿಗೆ ಉತ್ತರವನ್ನು ಬರೆದುಕೊಡುತ್ತಾರೆ. ನಿಮ್ಮ ನಿಮ್ಮ ಮನೆಯ ಶುಭಪ್ರಸ್ತುತಗಳಲ್ಲಿ ಹೆಣ್ಣಿನ ಮನೆಯವರೂ, ಗಂಡಿನ ಮನೆಯವರೂ, ನಮಗೆ ಒಪ್ಪಿಸತಕ್ಕ ಹೂವಿನಹಾರ, ಸುತ್ತುವೀಳ್ಯ, ಮತ್ತು ಎರಡು ಹೊನ್ನುಗಳು, ಇವುಗಳನ್ನು ಈ ಸೋಮೆರಾಜಯ್ಯನಿಗೆ ಕೊಡತಕ್ಕದ್ದು. ಮತ್ತು ಹೂವಿನಹಾರ, ವೀಳ್ಯ, ಒಂದು ಹೊನ್ನು, ಇವುಗಳನ್ನು ಸಮುಖದ ಒಟ್ಟು ಕರಣಿಕ ಅಪ್ಪಾಜಯ್ಯನಿಗೆ ಕೊಡತಕ್ಕದ್ದು. ಇವಲ್ಲದೆ ಅನುಕೂಲವಿದ್ದವರು ನಿಮ್ಮ ಮತ್ತು ಇವರ ಮಾನಾನುಗುಣವಾಗಿ ವಸ್ತ್ರಗಳನ್ನು ಕೊಡಬಹುದು" ಎಂಬುದಾಗಿ ನಿಬಂಧನೆ ಮಾಡಿದರು. ಈ ವಿವರಗಳನ್ನು ತಿಳಿದುಕೊಂಡ ಅರಸುಗಳು "ಸ್ವಾಮಿಯವರ ಪಾದದಿಂದ ಅಪ್ಪಣೆ ದಯಪಾಲಿಸಿದ ಮೇರೆಗೆ ನಡೆದುಕೊಳ್ಳುವೆವು" ಎಂದು ವಿನ್ನಹ ಮಾಡಿಕೊಂಡುದಲ್ಲದೆ, "ನಮಗಳಿಗೆ ನವರಾತ್ರಿಯುತ್ಸವದ ಕಾಲದಲ್ಲಿ ಪಾದದರ್ಶನವಾಗುವಂತೆ ನಮ್ಮ ನಮ್ಮ ಮನೆಗಳ ಶುಭಪ್ರಸ್ತುತಗಳಲ್ಲಿಯೂ, ನಾವು ಬಂದು ಪಾದದರ್ಶನ ಮಾಡಿಕೊಂಡು ಅಡ್ಡಬಿದ್ದ ಆಜ್ಞೆಯನ್ನು ತೆಗೆದುಕೊಂಡು ಹೋಗುವಂತೆ ಅಪ್ಪಣೆ ಆಗಬೇಕು" ಎಂದು ವಿನ್ನವಿಸಿಕೊಳ್ಳಲು, ದೊರೆಗಳವರು ಕಟಾಕ್ಷವಿಟ್ಟು ಸೋಮೆರಾಜಯ್ಯ ಅಪ್ಪಾಜಯ್ಯನವರನ್ನು ಕರೆದು, "ಈ ಅರಸುಗಳು ತಮ್ಮ ಮನೆಯಲ್ಲಿ ಪ್ರಸ್ತುತವೆಂದು ನಿಮಗೆ ತಿಳಿಸಿದರೆ, ನೀವು ಇವರನ್ನು ಕರಸುಕೊಂಡು ಬಂದು, ಭೇಟಿಮಾಡಿಸಿ, ಉತ್ತರವನ್ನು ಬರೆದುಕೊಡುವೆವಲ್ಲದೆ, ನೀವುಗಳು ನಿಂತುಕೊಂಡು ಪ್ರಸ್ತುತವನ್ನು ಮಾಡಿಸಿ, ನಾವು ನಿಬಂಧನೆ ಮಾಡಿರುವ ಮೆರ್ಯಾದೆಯನ್ನು ತೆಗೆದುಕೊಂಡು ಬರುವುದು" ಎಂದು ಕಟ್ಟಳೆ ಮಾಡಿದರು.

ತಿರುಮಲಯ್ಯಂಗಾರಿಯು ವಿಚಾರ.—ಶ್ರೀಮುಖ ಸಂವತ್ಸರದ ಆಷಾಢ ಶುದ್ಧ ೨೧ಯಲ್ಲಿ ಮಂತ್ರಿತನದಲ್ಲಿರುವ ಪರಮಾಪ್ತನಾದ ತಿರುಮಲಯ್ಯಂಗಾರಿಯು ದೊರೆಗಳವರನ್ನು ಕುರಿತು "ಸ್ವಾಮಿಯವರ ನಾಮತೀರ್ಥದ ಹೇಳಿಯಲ್ಲಿ ಪುರೋಹಿತರು ಮುಂತಾದ ಸ್ಮಾರ್ತವಿದ್ವಾಂಸರುಗಳೂ ಅರಮನೆಗೆ ನಾಮವನ್ನಿಟ್ಟುಕೊಂಡು ಬರಬೇಕೆಂಬುದಾಗಿಯೂ, ಇಲ್ಲಿ ಮನೆತನದ ಅರಸುಗಳು ನಾಳೆ ಪ್ರಥಮೈಕಾದಶೀ ದಿವಸ ಸ್ವಾಮಿಯವರ ಆಚಾರ್ಯರ ಕಡೆಯಿಂದಲೇ ಚಕ್ರಾಂಕನ, ಊರ್ಧ್ವಪುಂಡ್ರಧಾರಣ, ದಾಸನಾಮ, ಮೂಲಮಂತ್ರೋಪಾಸನೆ, ನಾರಾಯಣಪೂಜೆ ಎಂಬ ಪಂಚಸಂಸ್ಕಾರಗಳನ್ನು ಹೊಂದಿ, ಅನ್ಯದೇವತಾಪೂಜೆಯನ್ನು ಮಾಡದೆ, ವೈಷ್ಣವದೀಕ್ಷೆಯನ್ನಂಗೀಕರಿಸಿದವರೇ ಸ್ವಾಮಿಯವರ ಬಂಧುತ್ವಕ್ಕೆ ಯೋಗ್ಯರು, ಹಾಗಿಲ್ಲದವರು ಬಂಧುಗಳಾಗತಕ್ಕವರಲ್ಲ ಎಂಬುದಾಗಿಯೂ, ಸ್ವಾಮಿಯವರ ಸೇವೆಯನ್ನು ಮಾಡುವ ಊಳಿಗದವರಲ್ಲಿ ಕೆಲವರು ಚಕ್ರಾಂಕನವನ್ನು ಮಾಡಿಸಿಕೊಳ್ಳುವಂತೆಯೂ, ಅಪ್ಪಣೆ ಆಗಬೇಕು" ಎಂಬುದಾಗಿ ವಿಜ್ಞಾಪಿಸಿಕೊಳ್ಳಲು, ದೊರೆಗಳವರು ತಿರುಮಲಯ್ಯಂಗಾರಿಯ ದಾಕ್ಷಿಣ್ಯದಿಂದ ಸಮುಖದ ಗುರಿಕಾರ ಸೋಮರಾಜಯ್ಯ ಅಪ್ಪಾಜಯ್ಯನವರನ್ನು ಕರೆಸಿ, ಈ ವಿವರಗಳನ್ನು ಆ ಜನಗಳಿಗೆ ಹೇಳಿ ಬಿಡುವುದು ಎಂದು ಅಪ್ಪಣೆ ಕೊಟ್ಟರು. ಆ ಸೋಮರಾಜಯ್ಯನೂ, ಅಪ್ಪಾಜಯ್ಯನೂ, ಅರಸುಗಳು ಮುಂತಾದವರನ್ನು ಕರೆಸಿ, ದೊರೆಗಳವರು ಕಟ್ಟು ಮಾಡಿರುವ ವಿವರಗಳನ್ನು ಹೇಳಿ, ಚಕ್ರಾಂಕನವನ್ನು ಮಾಡಿಸಿಕೊಂಡು ವೈಷ್ಣವದೀಕ್ಷೆಯನ್ನಂಗೀಕರಿಸಿದವರು ದೊರೆಗಳವರ ಪಾಪಕ್ಕೆ ವಿನ್ನಪತ್ರಿಕೆಯನ್ನು ಬರೆದುಕೊಳ್ಳುವರಾಗಿ ಎಂದು ಹೇಳಲು, ಅದೇಪ್ರಕಾರ ಅರಸುಗಳು ವಿಜ್ಞಾಪನಪತ್ರಿಕೆಯನ್ನು ಬರೆದುಕೊಂಡ ವಿವರವೇನೆಂದರೆ.—

ಸ್ವಾಮಿಯವರ ದಿವ್ಯಶ್ರೀಪಾದಪದ್ಮಂಗಳಿಗೆ—

ಭಾವಸಂವತ್ಸರದ ಚೈತ್ರ ಶುದ್ಧ ೧೦ಯಲ್ಲಿ ಸ್ವಾಮಿಯವರ ಪಾದ ಬಂಧುಗಳಾದ ವಾಸಿಷ್ಠ ಗೋತ್ರದ ಮೊಗೂರುಮನೆತನದ ದೊಡ್ಡಯ್ಯ, ಈ ಬಸವರಾಜಯ್ಯ, ಈ ವೀರರಾಜಯ್ಯ, ಚನ್ನರಾಜಯ್ಯ, ನಂಜರಾಜಯ್ಯ,

ಬಾಳಯ್ಯ, ಬಾಳಯ್ಯ, ರಾಮರಾಜಯ್ಯ, ರಾಜಯ್ಯ, ಚಂದಯ್ಯ, ನಂಜ ರಾಜಯ್ಯ, ಲಿಂಗರಾಜಯ್ಯ, ಬಾಳಯ್ಯ, ಲಿಂಗರಾಜಯ್ಯ, ಸಹ ಸದ್ವಿನಯ ಭಯಭಕ್ತಿಯಿಂದ ಸಾಷ್ಟಾಂಗವೆರಗಿ ಮಾಡುವಂಥಿನ್ನಪ—ಸ್ವಾಮಿ, ನಾವೆಲ್ಲರೂ ಉತ್ತಮವಾದ ಕ್ಷತ್ರಿಯವಂಶದಲ್ಲಿ ಜನಿಸಿ, ಸ್ವಾಮಿಯವರ ಸಾದಪದ್ಮಂಗಳಿಗೆ ಬಂಧುಗಳಾಗಿ ಇದ್ದು, ಈ ಮಹಿಮೆಯನರಿಯದೆ, ಅಜ್ಞಾನಿಗಳಾಗಿ ನಮ್ಮ ಜಾತಿಧರ್ಮವೆನ್ನು ಬಿಟ್ಟು, ಶೂದ್ರರಂತೆ ವೈದಿಕ ಕರ್ಮ ಹೀನರಾಗಿ, ಶೈವಾಚಾರಪರರಾಗಿ, ವರ್ಣಾಶ್ರಮಾಚಾರ ಹೀನರಾಗಿ ಜಾತಿವಿಜಾತಿಗಳನ್ನರಿಯದೆ, ಹೆಣ್ಣು ಗಳನ್ನು ಕೊಟ್ಟುತರುತ್ತಾ ಇಹಪರ ಲೋಕ ಭ್ರಷ್ಟರಾಗಿ ಕೆಟ್ಟುಹೋಗುವೆಂಥವರನ್ನು, ಪರಮದಯಾಳುವೂ ಅನಾಥಬಂಧುವೂ ಆದ ಸ್ವಾಮಿಯವರು ಪರಾಂಬರಿಸಿ, ಅವ್ಯಾಜವಾಗಿ ನಮ್ಮೆಲ್ಲಿ ಕೃಪೆಯಿಟ್ಟು, ನಮ್ಮೆಲ್ಲರ ಕುಲದಲ್ಲಿ ಹಿಂದಕ್ಕೆ ಹುಟ್ಟಿಯಿದ್ದ ವರೂ, ಈಗ ಇರುವವರೂ, ಮುಂದೆ ಹುಟ್ಟುವವರೂ ಸಕಲರೂ ಪರಿ ಶುದ್ಧರಾಗುವಂತೆ ನಮಗೆ ಹಿತೋಪದೇಶವನ್ನು ಮಾಡಿ, ವರ್ಣಾಶ್ರಮೋ ಚಿತವಾದ ಸಂಧ್ಯಾವಂದನ ಚಕಾರ್ಂಕನಾದಿ ವೈದಿಕಕರ್ಮಗಳನ್ನು ಆಚರಿಸ ಬೇಕೆಂದು, ಕಟ್ಟುಮಾಡಿಸಿ ಜೀರ್ಣೋದ್ಧಾರ ಮಾಡಿದುದರಿಂದ ನಾವೆಲ್ಲರೂ ಧನ್ಯರಾದೆವು. ನಮ್ಮೆಲ್ಲರ ಕುಲವೂ ಪಾವನವಾಯಿತು. ಇಂದು ಮೊದ ಲಾಗಿ ನಾವೆಲ್ಲರೂ ಕೂಡಿ ಐಕಮತ್ಯದಿಂದ ಹಿಂದಣ ಅಜ್ಞಾನಕೃತ್ಯಗಳ ನ್ನೆಲ್ಲಾ ಬಿಟ್ಟು ನಮ್ಮೆಲ್ಲರ ವಂಶಗಳಲ್ಲಿಯೂ ಹುಟ್ಟಿದ ಹೆಣ್ಣೂ ಗಂಡೂ ಸಹ ಸಕಲರೂ ವಿಷ್ಣು ಭಕ್ತರಾಗಿ, ಸ್ವಾಮಿಯವರ ಆಚಾರ್ಯರ ಶಿಷ್ಯರಾಗಿ ಸಂಖಚಕ್ರಾಂಕನೆ, ಊರ್ಧ್ವಪುಂಡ್ರಧಾರಣ, ದಾಸನಾಮ, ಮೂಲಮಂ ತ್ರೋಪಾಸನೆ, ನಾರಾಯಣಪೂಜೆ ಎಂಬ ಪಂಚಸಂಸ್ಕಾರಗಳನ್ನು ಪಡೆದು, ಸಂಧ್ಯಾವಂದನೆ ಮುಂತಾದ ನಿತ್ಯಕರ್ಮಗಳನ್ನು ತಪ್ಪದೆ ನಡೆಸಿ ಕೊಂಡು, ವೈಷ್ಣವೈಕಾದಶಿ, ಅಮಾವಾಸ್ಯೆ, ತಂದೆ ತಾಯಿಗಳ ವೈದಿಕ ಮುಂತಾದುದನ್ನು ಭಕ್ತಿಗೂಡಿ ಆಚರಿಸುತ್ತಾ, ಹೆಣ್ಣು ಗಳನ್ನು ಕೊಡು ವಲ್ಲಿಯೂ, ಕೊಳ್ಳುವಲ್ಲಿಯೂ, ಪೂರ್ವದಂತೆ ಕಂಡಕಂಡ ಬಳಿಯಲ್ಲಿ ಕೊಡದೆ ಕೊಳ್ಳದೆ, ಸ್ವಾಮಿಯವರು ನಿಶ್ಚಿಮಾಡಿದ ಮೈಸೂರುನಗರ ಮುಂತಾದ ೧೫ ಮನೆತನವಲ್ಲಿಯೇ ಕೊಟ್ಟು ತೆಗೆದುಕೊಳ್ಳುತ್ತ ನಮಗೆ

ಸ್ವಾಮಿಯವರು ವಿುತಿವಿುೂಡಿದಂಥ ಸೇವೆಯನ್ನು ವಂಚನೆ ಇಲ್ಲದೆ ಭಯಭಕ್ತಿಯಿಂದ ವಿುಡುತ್ತಾ, ನಾವೆಲ್ಲರೂ ವೈಷ್ಣವರಾಗಿರುವೆವು. ನವ್ಮ ೧೩ ವಿುನೆತನದ ಹೆಣು ಗಂಡುಗಳೊಳಗಾಗಿ ಯಾರೊಬ್ಬರು ಈ ಸಂಕೇತಕ್ಕೆ ತಪ್ಪಿನಡೆದರೂ, ಅಂಥಾ ಪಾಪಿಗಳನ್ನು ಬಳಹಾಕಿಕೊಂಡರೂ, ಅವರಿಬ್ಬರನ್ನೂ ಕುಲಕ್ಕೆ ಕೂಡಹೆಲಸವಿಲ್ಲ. ಈ ಅರ್ಥಕ್ಕೆ ತಪ್ಪಿದವರು ಸ್ವಾಮಿಯವರ ಪಾದದೊಡನೆ ಬಂಧುತ್ವಕ್ಕೆ ಸಲ್ಲದಂಥ ಪತಿತರು, ಮತ್ತು ವಿಷ್ಣು ಪಾದೋದ್ಭವೆಯಾದ ಗಂಗಾನದಿಯ ತೀರದಲ್ಲಿ ವಿುತಾಪಿತೃಗಳನ್ನೂ ಗೋಬ್ರಾಹ್ಮಣರನ್ನೂ ಕೊಂದ ಪಾತಕಿಗಳು ಎಂದು ಬರೆಸಿ ಒಪ್ಪಿಸಿದ ಬಿನ್ನವತ್ತಳೆ.

ಅರಸುಗಳು ವಿದ್ವಾಂಸರು ವುುಂತಾವವರು ದೊರೆಗಳವರ ಸನ್ನಿಧಿಯಲ್ಲಿ ಪ್ರತಿದಿನದಲ್ಲಿಯೂ ನಡೆದುಕೊಳ್ಳುವ ಪದ್ಧತಿ.—ದೊರೆಗಳವರು ಅರವೆನೆಯಲ್ಲಿ ಚಾಕರಿಯಿಲ್ಲದೆ ಸಂಬಳವನ್ನು ತೆಗೆದುಕೊಳ್ಳುವ ಅರಸುವುಕ್ಕಳು, ಪಾಳಯಗಾರರು, ಬ್ರಾಹ್ಮಣರು, ವಿದ್ವಾಂಸರು, ವೈಣಿಕರು, ಸಂಗೀತಗಾರರು, ವೈದ್ಯರು, ವುಂತ್ರವಾದಿ ವೊದಲಾದ ಜನಗಳ ಲೆಕ್ಕಗಳನ್ನು ಬರೆವುಕೊಳ್ಳುವುದಕ್ಕೆ ಇಬ್ಬರು ಕರಣಿಕರನ್ನು ನೇವುಕವಾಡಿ, ಈ ವಿದ್ವಾಂಸರುಗಳು ವೊತ್ರ ತವ್ಮ ಸ್ನಾನ, ಸಂಧ್ಯಾವಂದನೆ, ರಾವಾಯಣ ಪಾರಾಯಣ, ನಿತ್ಯದಾನ, ದಂಪತಿ ಪೂಜೆ, ಗೋಪೂಜೆಗಳ ಕಾಲದಲ್ಲಿ ಬಂದು ತವಗೆ ಆಶೀರ್ವಾದ ವುಂತ್ರಾಕ್ಷತೆಯನ್ನು ಒಪ್ಪಿಸುವಂತೆಯೂ, ವಿಕ್ಕ ಜನಗಳು ಬಂದು ಕಾದುಕೊಂಡಿದ್ದು ದರ್ಶನ ವಾಡಿಕೊಂಡು ಹೋಗುವಂತೆಯೂ ನಿಬಂಧನೆ ವಾಡಿ, ಈ ಜನಗಳಲ್ಲಿ ಯಾರಾದರೂ ಗ್ರಾವಾಂತರಕ್ಕೆ ಹೋಗಿ ಬರಬೇಕಾವರೂ ಅವರುಗಳ ವೆನೆಯ ಪ್ರಸ್ತುತಗಳಾಗಬೇಕಾದರೂ ಅವರುಗಳು ಬಂದು ಸೋವೆರಾಜಯ್ಯನಿಗೂ ಅಪ್ಪಾಜಯ್ಯನಿಗೂ ತಿಳಿಸಿದರೆ ಅವರು ತವಗೆ ಶ್ರುತಪಡಿಸುವಂತೆ ಕಟ್ಟುವಾಡಿದರು.

ಹದಿವೂರು ವೆನೆತನದ ಅರಸುಗಳು ಆಪ್ಪಣೆಯ ವೇರೆಗೆ ಚಕ್ರಾಂಕನವೆನ್ನು ವಾಡಿಸಿಕೊಂಡು ನಾರಾಯಣ ಪೂಜೆಯೇ ವುುಖ್ಯವೆಂದು ನಡೆದುಕೊಂಡ ವೇಲೆ ಕೂಡಿಬಾರದೆ ಇದ್ದುದರಿಂದ ವತ್ತೆ ಇವರು ಅರ್ಜಿಯನ್ನು ಬಿನ್ನವ ವಾಡಿಕೊಂಡರು. ಅದರ ವಿವರವೇನೆಂದರೆ.—

ಸ್ವಾಮಿಯವರ ದಿವ್ಯಶ್ರೀಪಾದಪದ್ಮಂಗಳಿಗೆ.—ಧಾತು ಸಂವತ್ಸರದ ಜ್ಯೇಷ್ಠ ಬಹುಳ ೧೦ಯಲ್ಲಿ ಸ್ವಾಮಿಯವರ ಪಾದಬಂಧುಗಳಾದ ವಾಸಿಷ್ಠ ಗೋತ್ರದ ಮೊಗೂರು ಮನೆತನದ ಬಾಳಯ್ಯ, ಈ ಬಸವರಾಜಯ್ಯ, ಚನ್ನರಾಜಯ್ಯ, ನಂಜರಾಜಯ್ಯ, ಲಿಂಗರಾಜಯ್ಯ, ಚಂದಯ್ಯ, ನಂಜರಾಜಯ್ಯ, ರಾಮೆರಾಜಯ್ಯ, ವೀರರಾಜಯ್ಯ, ಬಾಳಯ್ಯ ಮುಂತಾದ ೧೩ ಮನೆತನದವರು ಸದ್ವಿನಯಭಯಭಕ್ತಿಯಿಂದ ಸಾಷ್ಟಾಂಗವೆರಗಿ ಮಾಡುವ ವಿನ್ನಹ—ಸ್ವಾಮಿ, ನಾವೆಲ್ಲರೂ ಉತ್ತಮವಾದ ಕ್ಷತ್ರಿಯ ವಂಶದಲ್ಲಿ ಜನಿಸಿ ಸ್ವಾಮಿಯವರ ಪಾದಪದ್ಮಂಗಳಿಗೆ ಬಂಧುಗಳಾಗಿ ಇದ್ದರೂ ಈ ಮಹಿಮೆಯನ್ನರಿಯದೆ ಅಜ್ಞಾನಿಗಳಾಗಿ, ಕ್ಷತ್ರಿಯ ಕರ್ಮ ಹೀನರಾಗಿ, ಹೆಣ್ಣನ್ನು ಕೊಡುವಲ್ಲಿಯೂ ಕೊಳ್ಳುವಲ್ಲಿಯೂ, ಪೂರ್ವದಂತೆ ಸ್ವಾಮಿಯವರ ಪಾದಕ್ಕೆ ವಿನ್ನಹ ಮಾಡಿಕೊಳ್ಳದೆ, ಅಜ್ಞಾನದಿಂದ ಹೆಣ್ಣನ್ನು ಕೊಟ್ಟು ತೆಗೆದುಕೊಂಡ ಈ ನಮ್ಮ ಜನರನ್ನು ವಿಂಗಡಿಸಿ, ಪರಮದಯಾಳುವೂ ಅನಾಥಬಂಧುವೂ ಆದ ಸ್ವಾಮಿಯವರು ಪರಾಂಬರಿಸಿ, ಅವ್ಯಾಜವಾಗಿ ನಮ್ಮಲ್ಲಿ ಕೃಪೆಯಿಟ್ಟು, ನಮ್ಮಿಲ್ಲರ ಕುಲದಲ್ಲಿಯೂ ಹಿಂದಕ್ಕೆ ಹುಟ್ಟಿ ಇದ್ದವರೂ, ಈಗ ಇರುವವರೂ ಮುಂದೆ ಹುಟ್ಟುವವರೂ, ಸಕಲರೂ ಪರಿಶುದ್ಧರಾಗುವಂತೆ ನಮಗೆ ಹಿತೋಪದೇಶವನ್ನು ಮಾಡಿ, ವರ್ಣಾಶ್ರಮೋಚಿತವಾದ ಸಂಧ್ಯಾವಂದನೆ ಮುಂತಾದ ವೈದಿಕ ಕರ್ಮಗಳನ್ನು ಆಚರಿಸಹೇಳಿ ಕಟ್ಟು ಮಾಡಿಸಿ ಜೀರ್ಣೋದ್ಧಾರ ಮಾಡಿದುದರಿಂದ ನಾವೆಲ್ಲರೂ ಧನ್ಯರಾದೆವು; ನಮ್ಮಿಲ್ಲರ ಕುಲವೂ ಪಾವನವಾಯಿತು. ಆದರೆ ಅಂದು ಮೊದಲು ನಮ್ಮನಮ್ಮ ಕುಲದೇವತೆಗಳನ್ನು ಬಿಟ್ಟು, ನಾರಾಯಣ ಪೂಜೆಯನ್ನೇ ಮುಖ್ಯವಾಗಿ ನಡೆಸಿದುದರಿಂದ ನಮಗಳಿಗೆ ಮನೆಯಲ್ಲಿ ಕೆಲವು ಕಷ್ಟವಾಗಲಾಗಿ, ಈಗ ಮತ್ತೆ ಸ್ವಾಮಿಯವರಿಗೆ ವಿನ್ನವ ಮಾಡಿಕೊಳ್ಳುವುದೇನೆಂದರೆ:—ಸ್ವಾಮಿಯವರು ಕಟ್ಟು ಮಾಡಿಸಿದಂತೆ ಕ್ಷತ್ರಿಯವರ್ಣಕ್ಕೆ ವಿಹಿತವಾದ ಅಮಾವಾಸ್ಯೆ ಮುಂತಾದ ಕಾಲಗಳಲ್ಲಿ ನಡೆಸುವ ವೈದಿಕ ಕರ್ಮಗಳನ್ನು ಮಾಡಿಕೊಂಡು, ನಾವೆಲ್ಲರೂ ಕೂಡಿ ಐಕಮತ್ಯದಿಂದ ಇಂದುಮೊದಲು ಸ್ವಾಮಿಯವರು ಕಟ್ಟು ಮಾಡಿಸಿದ ಮೇರೆಗೆ ನಮ್ಮನಮ್ಮ ವಂಶಗಳಲ್ಲಿ ಹುಟ್ಟಿದ

ಹೆಣೂ ಗಂಪೂ ಸಕಲರೂ ನಮ್ಮನಮ್ಮ ಕುಲದೇವತಾಭಕ್ತರಾಗಿ ಸ್ವಾಮಿಯವರು ಮಿತಿಮಾಡಿಸಿದ ಸೇವೆಯನ್ನು ವಂಚನೆಯಿಲ್ಲದೆ ಭಯಭಕ್ತಿಯಿಂದಮಾಡುತ್ತ, ನಮ್ಮ ಹದಿಮೂರು ಮನೆತನದ ಹೆಣ್ಣುಗಳನ್ನು ತರುವಲ್ಲಿಯೂ ಕೊಡುವಲ್ಲಿಯೂ ಸ್ವಾಮಿಯವರ ಅಪ್ಪಣೆಯಮೇರೆಗೆ ನಡೆದುಕೊಳ್ಳಲುಳ್ಳವರು. ಈ ಸಂಕೇತಕ್ಕೆ ತಪ್ಪಿ ನಡೆದುಕೊಂಡರೂ, ಅಂಥ ಪಾಪಿಗಳನ್ನು ಬಳಹಾಕಿಕೊಂಡರೂ, ಅವರಿಬ್ಬರನ್ನೂ ಕುಲಕ್ಕೆ ಕೂಟಕೆಲಸವಿಲ್ಲ. ಈ ಅರ್ಥಕ್ಕೆ ತಪ್ಪಿದವರು ಸ್ವಾಮಿಯವರ ಪಾದದೊಡನೆ ಬಂಧುತ್ವಕ್ಕೆ ಸಲ್ಲದಂಥ ಪತಿತರು ಮತ್ತು ವಿಷ್ಣುಪಾದೋದ್ಭವೆಯಾದ ಗಂಗಾನದಿಯ ತೀರದಲ್ಲಿ ಮಾತಾಪಿತೃಗಳನ್ನೂ ಗೋಬ್ರಾಹ್ಮಣರನ್ನೂ ಕೊಂದ ಪಾತಕಿಗಳು ಎಂದು ಬರೆಸಿ ಒಪ್ಪಿಸಿದ ಬಿನ್ನವತ್ತಳೆ :—

ದೊರೆಗಳವರು ಇವರ ಅರ್ಜಿಯನ್ನು ಪರಾಂಬರಿಸಿ ಸೋಮರಾಜಯ್ಯನನ್ನೂ ಅಪ್ಪಾಜಯ್ಯನನ್ನೂ ಕರೆಸಿ ೧೫ ಮನೆತನದ ಅರಸುಗಳಿಗೂ ೧೪ ಮನೆತನದ ಅರಸುಗಳಿಗೂ ಅವರವರ ಮನೆಯ ಪೂರ್ವ ಸಂಪ್ರದಾಯದ ಮೇರೆಗೆ ದೇವತಾಪೂಜೆ ಮುಂತಾದುದನ್ನು ನಡೆಸಿಕೊಂಡು ಬರುವಂತೆ ಹೇಳಿಬಿಡುವುದೆಂದು ಕಟ್ಟಮಾಡಿದರು. ಬಳಿಕ ಅವರಿಬ್ಬರೂ ಆ ಅರಸುಗಳನ್ನು ಕರೆಯಿಸಿ ನಿಮ್ಮ ನಿಮ್ಮಗಳ ಮನೆಯ ಪೂರ್ವ ಸಂಪ್ರದಾಯದ ಮೇರೆಗೆ ನಡೆದುಕೊಳ್ಳುವಂತೆ ಅಪ್ಪಣೆಯಾಗಿದೆ ಎಂಬುದಾಗಿ ಹೇಳಿದರು.

ನಾಯಕರಿಗೆ ಸಂಬಳದ ವಿಚಾರಣೆ ಮತ್ತು ಅವರ ವೆಚ್ಚದ ತಿದ್ದುಪಾಡು—ಶ್ರೀರಂಗಪಟ್ಟಣದಲ್ಲಿ ಸರ್ವಾಧಿಕಾರವನ್ನು ಮಾಡುವವರಿಗೂ, ಕರಣಿಕತನ ಮಾಡುವವರಲ್ಲದೆ ತಮ್ಮ ಸಮೀಪದಲ್ಲಿ ಆಪ್ತರಾಗಿರುವ ಜನಗಳಿಗೂ, ೧೪ ಚಾವಡಿ, ದೊಡ್ಡ ಉಗ್ರಾಣ, ಚಿಕ್ಕ ಉಗ್ರಾಣ, ಹುಲ್ಲುಮೆದೆ, ಜಾನ ಸಾಲೆ, ಅರಮನೆ, ಬೊಕ್ಕಸ ಮುಂತಾದ ಸ್ಥಳಗಳಲ್ಲಿರುವ ಗೊತ್ತುಗಾರರು, ಕರಣಿಕರು, ಗುಮಾಸ್ತೆಯರು, ಊಳಿಗದವರು, ದಂಡಿನಲ್ಲಿರುವ ಸವಾರರು, ಬಾರಿನವರು, ಓಲೆಕಾರರು, ಕಾಮೋಟ, ಕಲಾಸಿ, ಮುಂತಾದ ಎಲ್ಲಾ ಸೇವೆಕ ಜನಗಳಿಗೂ, ೪೪ ಗಡಿಗಳಲ್ಲಿರುವ ಸುಬೇದಾರ, ಕಿಲ್ಲೇ

ದಾರ, ಕರಣಿಕ, ಗುಮಾಸ್ತೆಯರು, ಶೇಕದಾರ, ಮೇಣೇಗಾರ, ಗೌಡ, ಪಸುಗೆಯ ಶ್ಯಾನಭೋಗ, ಶ್ಯಾನಭೋಗ ಊಳಿಗದವರು ಮೊದಲಾದ ಎಲ್ಲಾ ಚಾಕರಿ ಜನಗಳಿಗೂ, ತಾವು ನಿಬಂಧನೆ ಮಾಡಿರುವ ಸಂಬಳದಲ್ಲಿ ಅರೆವಾಸಿ ನಗದು ಕೊಡುವಂತೆಯೂ, ಇನ್ನು ಅರ್ಧಸಂಬಳಕ್ಕೆ ಅವರ ಮಾನಾನುಗುಣವಾಗಿ ಬತ್ತ ರಾಗಿ ಮುಂತಾದ ಧಾನ್ಯಗಳನ್ನು ಕೊಡುವಂತೆಯೂ, ಕಟ್ಟಳೆಯನ್ನು ಮಾಡಿ, ಈ ಜನರು ತಮ್ಮ ತಮ್ಮ ಆದಾಯಕ್ಕೆ ತಕ್ಕಂತೆ ಮನೆಯ ನಿತ್ಯಕಟ್ಟಳೆಯ ವೆಚ ವನ್ನೂ ಅವರವರ ಮಾನಾನುಗುಣವಾಗಿ ಮದುವೆ ಮುಂಜಿ ಮುಂತಾದ ಶುಭಪ್ರಸ್ತುತಗಳನ್ನೂ ಮಾಡಿಕೊಳ್ಳುವುದೆಂದು ನಿಬಂಧನೆಮಾಡಿ, ಈ ಜನಗಳಲ್ಲಿ ಯಾರಾದರೂ ಸಂಬಳವಿದ್ದವರು ಆದಾಯಕ್ಕಿಂತ ಹೆಚ್ಚು ವೆಚ ಮಾಡಿದರೆ "ಅದಕ್ಕೆ ಹಣವು ನಿನಗೆ ಎಲ್ಲಿಂದ ಬಂದುದು" ಎಂದು ಸೂಕ್ಷ್ಮಾತ್ಮಾಗಿ ಚೆನ್ನಾಗಿ ವಿಚಾರಣೆ ಮಾಡಿ, ಸಾಲವನ್ನು ಕೊಟ್ಟವರಿಗೂ ತೆಗೆದುಕೊಂಡವರಿಗೂ ಶಿಕ್ಷೆಮಾಡಿ, ಜನಗಳಿಗೆ ಲಂಚಲಾವಣಿಗೆ ಅಸ್ಪದವಿಲ್ಲದಂತೆಯೂ, ಅರಮನೆಯ ಹಣ ಕಾಸು ದವಸಧಾನ್ಯ ಮುಂತಾದ ವಿಷಯದಲ್ಲಿ ವಂಚನೆಸಂಚನೆ ಇಲ್ಲದಂತೆಯೂ ನಡೆದುಕೊಳ್ಳುವಂತೆ ಬಂದೋಬಸ್ತುಮಾಡಿ ಬುದ್ಧಿಹೇಳಿಸಿದರು.

ಚಿಕ್ಕರಮನೆಯನ್ನು ಕಟ್ಟಿಸಿದ್ದು.—ಶ್ರೀರಂಗಪಟ್ಟಣದಲ್ಲಿ ತಮ್ಮ ತಮ್ಮಂದಿರಾದ ಕಠೀರವ ಅರಸಿನವರು ಪತ್ನಿಯರೊಡನೆ ಸುಖವಾಗಿ ವಾಸಮಾಡಿಕೊಂಡಿರುವುದಕ್ಕೆ ಚಿಕ್ಕರಮನೆಯನ್ನು ಕಟ್ಟಿಸಿ, ಗುರಿಕಾರ, ಕಲವ್ವು ಊಳಿಗದವರು, ಅವ್ವೇರುಗಳು, ಶ್ಯಾನಭೋಗ, ಗೊಲ್ಲರು ಮುಂತಾದ ಜನಗಳನ್ನು ನೇಮಕ ಮಾಡಿದರು.

ಧರ್ಮಕಾರ್ಯ:—ದೊರೆಗಳವರು ತಮಗೆ ಪಟ್ಟವಾದ ಕೂಡಲೆ ಶಾಳಿವಾಹನ ಶಕ ೧೫೯೬ನೇ (A.D. 1673) ಪ್ರಮಾದೀಚ ಸಂವತ್ಸರದಲ್ಲಿ ಗುಂಪಲು ಎಂಬ ಗ್ರಾಮದ ಬಳಿ ಕಾವೇರಿನದಿಯ ತೀರದಲ್ಲಿ ದೇವಸ್ಥಾನವೆನ್ನು ಕಟ್ಟಿಸಿ, ಅವರಲ್ಲಿ ಅಪ್ರತಿಪರವಾಸುದೇವರನ್ನೂ ಕಮಲವಲ್ಲಿ ಎಂಬ ಅಮ್ಮನವರನ್ನೂ ಸರ್ವರೂ ತೀರ್ಥಪರಿಗ್ರಹ ಮಾಡಬೇಕೆಂದು ತಿವಸ ಸಮುದ್ರದಿಂದ ಉಭಯ ನಾಚಿಯಾರು ಸಹಿತವಾಗಿದ್ದ ಉತ್ಸವವಿಗ್ರಹವನ್ನು ತರಿಸಿ ಪ್ರತಿಷ್ಠೆ ಮಾಡಿಸಿ, ಈ ದೇವರಿಗೆ ನಿತ್ಯೋತ್ಸವ ರಥೋತ್ಸವಾದ್ಯ

ತ್ಸವೆಗಳು, ಪಡಿತರ, ದೀಪಾರಾಧನೆ, ರಾಮಾನುಜಕೂಟ ಮುಂತಾದು ನಡೆವ್ರದಕ್ಕೆ ೬ ಸಾವಿರ ವೆರಹಗಳ ತಸದೀಕನ್ನು ನಿಬಂಧನೆಮಾಡಿ, ಈ ತಸದೀಕಿಗೆ ಉಯ್ಯಂಬಳ್ಳಿ, ದೊಡ್ಡತುಪ್ಪೂರು, ಊಡಿಗಾಲ ಮುಂತಾದ ಗ್ರಾಮೆಗಳನ್ನೂ ಕೆಲವು ನಗದನ್ನೂ ಕೂಡುವೆಂತೆ ಕಟ್ಟಳೆಮಾಡಿ, ಈ ದೇವಸ್ಥಾನದ ಕಂಭದಲ್ಲಿ ಸಿಂಹಾಸನದಮೇಲೆ ವಾರಶಿಖಿ ಸಹಿತವಾಗಿರು ವಂತೆ ತಮ್ಮ ಭಕ್ತವಿಗ್ರಹವನ್ನು ಮಾಡಿಸಿ, ದೇವಸ್ಥಾನದ ಮುಂಭಾಗ ದಲ್ಲಿ ಕಾಶಿ ಕೆಲಸದ ಕಲ್ಲಿನಿಂದ ದೊಡ್ಡದಾಗಿ ಕಲ್ಯಾಣಿ ಎಂಬ ಸರೋವರ ವನ್ನು ಕಟ್ಟಿಸಿದರು. ಇವೇ ಪ್ರಮೋದೀಚ ಸಂವತ್ಸರದ ಫಾಲ್ಗುಣ ಶುದ್ಧ ೫ಯಲ್ಲಿ ತಮ್ಮ ತಂದೆಯವರಾದ ದೊಡ್ಡ ದೇವರಾಜಒಡೆಯರವರ ಅಬ್ದಿಕ ಪುಣ್ಯಕಾಲದಲ್ಲಿ, ಅವರಿಗೆ ಶಾಶ್ವತವಾದ ವೈಕುಂಠದಪ್ರಾಪ್ತಿ ಆಗ ಬೇಕೆಂದು, ಶ್ರೀರಂಗಪಟ್ಟಣದ ರಂಗನಾಥದೇವರ ಸನ್ನಿಧಿಯಲ್ಲಿ ತ್ರಿಮತಸ್ಥ ಬ್ರಾಹ್ಮಣರಿಗೂ ವೃತ್ತಿಯನ್ನು ಧಾರೆಯೆರೆದುಕೊಟ್ಟು, ಈ ಬ್ರಾಹ್ಮಣರು ಸುಖವಸತಿಯಾಗಿರುವುದಕ್ಕೆ ತಾವು ಗುಂಡಲಿನಲ್ಲಿ ಕಟ್ಟಿಸಿರುವ ಅಪ್ರತಿ ಪರವಾಸುದೇವರ ಗುಡಿಯ ಮುಂಭಾಗದಲ್ಲಿ ಚತುರಶ್ರವಾಗಿ ನಾಲ್ಕು ಬೀದಿಗಳನ್ನು ಮಾಡಿಸಿ, ಮನೆಗಳನ್ನು ಕಟ್ಟಿಸಿ ವೃತ್ತಿವಂತರಾದ ಮಹಾಜನಗಳಿಗೆ ಗ್ರಾಮೆಭೂಮಿ ಗೃಹೋಪಕರಣ ಪೂಜೋಪಕರಣ ಸಹಿತವಾಗಿ ಕೊಟ್ಟು, ಈ ಅಗ್ರಹಾರಕ್ಕೆ ದೇವನಗರ ಎಂಬ ಹೆಸರ ನ್ನಿಟ್ಟು, ಪ್ರಥಮಶತಕ ಎಂಬುದಾಗಿ ನಾಮವೆನ್ನುಂಟುಮಾಡಿದರು.

ಇದೇ ಪರಿಯಾಗಿ ಇವರ ದೊಡ್ಡಪ್ಪಜಿಯವರಾದ ದೊಡ್ಡ ದೇವೇ ಅರಸಿನವರ ಕುಟುಂಬ ಅಮೃತಮ್ಮನವರು ತಮ್ಮ ಪತಿಗೆ ಶಾಶ್ವತ ಪರ ಲೋಕ ಬರಬೇಕೆಂದು ಕೇಳಿಕೊಂಡುದರಿಂದ, ದೊರೆಗಳು ತಮ್ಮ ದೊಡ್ಡ ಪ್ಪಾಜಿಯವರ ಪ್ರತ್ಯಬ್ದಿಕ ಪುಣ್ಯಕಾಲದಲ್ಲಿ, ಆನಂದ ಸಂವತ್ಸರದ ಮಾರ್ಗಶಿರ ಬಹುಳ ೩ಲ್ಲಿ ಈ ಪರವಾಸುದೇವರ ಗುಡಿಯ ಉತ್ತರ ಪಾರ್ಶ್ವ ದಲ್ಲಿ ಚತುರಶ್ರವಾಗಿ ನಾಲ್ಕು ಬೀದಿಗಳನ್ನು ಮಾಡಿಸಿ ಮನೆಗಳನ್ನು ಕಟ್ಟಿಸಿ, ತ್ರಿಮತಸ್ಥ ಬ್ರಾಹ್ಮಣರಿಗೂ ವೃತ್ತಿಯೊಡನೆ ಧಾರೆಯೆರೆದು ಕೊಟ್ಟು, ಇದು ದ್ವಿತೀಯಶತಕ ಎಂಬುದಾಗಿ ನಾಮವೆನ್ನುಂಟುಮಾಡಿದರು.

ಅನಂತರ ಮತ್ತೆ ಕೆಲವು ದಿವಸದ ಮೇಲೆ ಸ್ವನಾಮಾಂಕಿತವಾಗಿ

ಅಗ್ರಹಾರವನ್ನು ಕಟ್ಟಿಸಿ ತ್ರಿಮತಸ್ಥ ಬ್ರಾಹ್ಮಣರುಗಳಿಗೆ ವೈತ್ತಿಯೊಡನೆ ಧಾರಾಪೂರ್ವಕವಾಗಿ ಕೊಟ್ಟು, ಇದಕ್ಕೆ ತೃತೀಯಶತಕ ಎಂಬುದಾಗಿ ಪೆಸರನ್ನಿಂಟುಮಾಡಿದರು.

ಈ ಮೂರು ಅಗ್ರಹಾರಗಳ ಬ್ರಾಹ್ಮಣರ ಗೋತ್ರ ಸೂತ್ರ ನಾಮ ಗಳನ್ನೂ, ಗ್ರಾಮಗಳ ಹೆಸರುಗಳನ್ನೂ, ತಾಮ್ರಶಾಸನದಲ್ಲಿ ಬರೆಸಿ ಕೊಟ್ಟರು. ಮತ್ತು ಈ ಅಗ್ರಹಾರಗಳ ಮುಂದುಗಡೆಯಲ್ಲಿ ಕೋಟ ಯನ್ನು ಕಟ್ಟಿಸಿ, ಸಂತೆ ಆಗುವಂತೆ ಕಟ್ಟಳೆಯನ್ನು ಮಾಡಿಸಿದರು. ಈ ಮೂರು ಅಗ್ರಹಾರಗಳ ತ್ರಿಮತಸ್ಥ ಬ್ರಾಹ್ಮಣರುಗಳಲ್ಲಿ ಶ್ರೀವೈ ಷ್ಣವರಿಗೆ—ಪರವಾಸುದೇವರ ಗುಡಿ, ಸ್ಮಾರ್ತರಿಗೆ—ಪರಶುರಾಮದೇವ ರಿಂದ ಪ್ರತಿಷ್ಠಿತವಾದ ರಾಮೇಶ್ವರ ದೇವಾಲಯ, ಮಾಧ್ವರಿಗೆ—ಆಂಜ ನೇಯ ದೇವಸ್ಥಾನ, ಎಂದು ನೇಮಕಮಾಡಿದರು.

ತಂಜಾವೂರಿನಲ್ಲಿ ಯೇಕೋಜಿಯ ಮಗ ಶಹಜಿ ಎಂಬವನು ಬಂಬಾನೊಂದು ದಿವಸ ತನ್ನ ಸಭೆಯಲ್ಲಿ "ಮೈಸೂರು ಸೀಮೆಯಲ್ಲಿ ಮೇಲು ಕೋಟೆ ಹೊರತು ಪ್ರಸಿದ್ಧವಾದ ವಿಷ್ಣುಕ್ಷೇತ್ರ ಇನ್ನಾವುದೂ ಇಲ್ಲ; ನಮ್ಮ ದೇಶದಲ್ಲಾದರೋ ಶ್ರೀರಂಗ, ಶ್ರೀಮುಷ್ಣ, ಕುಂಭಕೋಣ, ಮನ್ನಾರುಗುಡಿ ಮುಂತಾದ ಅನೇಕ ವಿಷ್ಣುಕ್ಷೇತ್ರಗಳಿರುವುದಲ್ಲದೆ, ಚಿದಂಬರ, ಮಧ್ಯಾರ್ಜುನ, ಮಧುರೆ, ರಾಮೇಶ್ವರ, ಮೊದಲಾದ ಶಿವಕ್ಷೇ ತ್ರಗಳೂ ಇರುವೆದರಿಂದ, ನಮ್ಮ ದೇಶಕ್ಕೆ ಸಮಾನವಾದದ್ದು ಯಾವೆದೂ ಇಲ್ಲ" ಎಂದು ದೂಷಿಸುತಲಿದಾನೆಂಬ ವರ್ತಮಾನವನ್ನು ಚಿಕ್ಕದೇವರಾಜ ಒಡೆಯುವರು ಕೇಳಿ, ಕುಪಿತರಾಗಿ, ಸಪ್ತಕಲ್ಪಗಳಲ್ಲಿ ಈಗ ಶ್ವೇತವರಾಹ ಕಲ್ಪವಾಗಿರುವೆದರಿಂದ, ಶ್ರೀಮುಷ್ಣದಲ್ಲಿ ಅವತರಿಸಿರುವ ಶ್ವೇತವರಾಹ ಸ್ವಾಮಿಯನ್ನು ಇಲ್ಲಿಗೆ ತರಿಸಬೇಕೆಂದು ಬುದ್ಧಿಮಂತರಾದ ಜನಗಳ ಕೈಲಿ ರಹಸ್ಯವಾಗಿ ದ್ರವ್ಯವನ್ನು ಕೊಟ್ಟು ಕಳುಹಿಸಿದರು. ಆ ಜನಗಳು ಅಲ್ಲಿಗೆ ಹೋಗಿ, ಅರ್ಚಕ ಮುಂತಾದವರುಗಳಿಗೆ ದ್ರವ್ಯಗಳನ್ನು ಕೊಟ್ಟು, ರಾತ್ರಿವೇಳೆಯಲ್ಲಿ ಅಲ್ಲಿಯ ಜನರು ಯಾರೂ ಅರಿಯದಂತೆ, ಶ್ವೇತವರಾಹ ಸ್ವಾಮಿಯನ್ನು ಬಿಜಯಮಾಡಿಸಿಕೊಂಡು ಶ್ರೀರಂಗಪಟ್ಟಣಕ್ಕೆ ತಂದು, ಅರಮನೆಯ ಬಲಭಾಗದಲ್ಲಿ ವಿಚಿತ್ರವಾದ ಗುಡಿಯನ್ನು ಕಟ್ಟಿಸಿ, ಶ್ವೇತ

ಮೋಹನ ಸ್ವಾಮಿಯವರನ್ನೂ, ನೂತನವಾಗಿ ಶಿಲೆಯಿಂದ ನಿರ್ಮಿಸಿದ ಅಂಬುಜವಲ್ಲಿತಾಯಾರೆಂಬ ವಿಗ್ರಹವನ್ನೂ, ಉಭಯನಾಚ್ಚಿಯಾರು ಸಹಿತವಾದ ಉತ್ಸವ ವಿಗ್ರಹವನ್ನೂ ಪ್ರತಿಷ್ಠೆ ಮಾಡಿಸಿದರು. ಮತ್ತು ಹರದನಹಳ್ಳಿಯಲ್ಲಿ ನೂತನವಾಗಿ ದೇವಸ್ಥಾನವನ್ನು ಕಟ್ಟಿಸಿ, ಗೋಪಾಲ ಕೃಷ್ಣ ಸ್ವಾಮಿಯವರನ್ನು ಪ್ರತಿಷ್ಠೆ ಮಾಡಿಸಿದರು. ಬರಕೋಡು ಎಂಬ ಗ್ರಾಮವಲ್ಲಿ ದೇವಸ್ಥಾನವನ್ನು ಕಟ್ಟಿಸಿ ವೆರದರಾಜಸ್ವಾಮಿಯವರನ್ನು ಪ್ರತಿಷ್ಠೆ ಮಾಡಿಸಿ, ಈ ಗ್ರಾಮದಲ್ಲಿ ಕಾಶಿಯ ಕೆಲಸದಿಂದ ಅತಿರಮಣೀಯವಾಗಿ ದೊಡ್ಡದಾದ ಬಂದು ಸರೋವರವನ್ನು ಕಲ್ಲಿನಿಂದ ಕಟ್ಟಿಸಿ, ಆ ಸರೋವರಕ್ಕೆ ಕಲ್ಯಾಣಿ ಎಂಬುದಾಗಿ ಹೆಸರನ್ನಿಟ್ಟರು. ಇವಲ್ಲದೆ ಅನೇಕ ಸ್ಥಳಗಳಲ್ಲಿ ಶಿವ, ವಿಷ್ಣು, ಗಣಪತಿ, ಆಂಜನೇಯ, ಮುಂತಾದ ಅನೇಕ ದೇವರುಗಳನ್ನು ಪ್ರತಿಷ್ಠೆ ಮಾಡಿಸಿ, ಆ ದೇವರುಗಳ ತಾರತಮ್ಯವಿದ್ದಂತೆ ಬಹಳ ತಸದೀಕುಗಳನ್ನು ಏರ್ಪಟುಮಾಡಿ, ರಥೋತ್ಸವಾದ್ಯುತ್ಸವಗಳು ನಡೆವಂತೆ ಕಟ್ಟಳೆ ಮಾಡಿದರು, ಮತ್ತು ತಟಾಕ, ಅರಾಮ, ಸರೋವರ, ಸಾಲ ಮರ ಮುಂತಾದ ಅನೇಕ ಧರ್ಮಕಾರ್ಯಗಳನ್ನು ಬಹಳವಾಗಿ ಮಾಡಿದರು. ಇದಲ್ಲದೆ ತಮ್ಮ ಕುಲದೇವತೆಯಾದ ಶ್ರೀಚಾಮುಂಡೇಶ್ವರಿ ಅಮ್ಮನವರು, ನಂಜನಗೂಡು ಶ್ರೀಕಂಠೇಶ್ವರಸ್ವಾಮಿ, ಮೇಲುಕೋಟೆ, ಶ್ರೀರಂಗಪಟ್ಟಣ, ಎಡತೊರೆ, ರಾಮನಾಥಪುರ, ಕರಿಯಘಟ್ಟ ಮುಂತಾದ ತಮ್ಮ ಸೀಮೆಯ ಪುಣ್ಯಕ್ಷೇತ್ರಗಳಲ್ಲಿರುವ ದೇವರುಗಳಿಗೆಲ್ಲಾ ಪೂರ್ವದ ಸೇವೆಗಿಂತಲೂ ಸ್ವನಾಮಾಂಕಿತವಾಗಿ ಅಧಿಕ ಸೇವೆಯನ್ನು ಮಾಡಿಸಿ, ಕಾಶಿ, ರಾಮೇಶ್ವರ, ಪ್ರಯಾಗ, ದ್ವಾರಕ, ಜಗನ್ನಾಥ, ತಿರುಪತಿ, ಕಂಚಿ, ಶ್ರೀರಂಗ, ಕುಂಭಕೋಣ, ಶಂಖಮುಖಿ, ದರ್ಭಶಯನ, ಸುಬ್ರಹ್ಮಣ್ಯ ಮುಂತಾದ ಪ್ರಸಿದ್ಧಕ್ಷೇತ್ರಗಳಲ್ಲಿ ತುಪ್ಪದ ನಂದಾದೀವಿಗೆ, ಸಹಸ್ರನಾಮಾರ್ಚನೆ, ಚಿನ್ನದ ತಳಿಗೆಯಲ್ಲಿ ಪೊಂಗಲು ನೈವೇದ್ಯ ಮೊದಲಾದುದು ಅಲ್ಲಲ್ಲಿಯ ಸಂಪ್ರದಾಯದ ಮೇರೆಗೆ ನಡೆವಂತೆಯೂ ಕಟ್ಟಳೆಮಾಡಿದರು. ಮತ್ತು ನಂಜನಗೂಡು ಶ್ರೀಕಂಠೇಶ್ವರಸ್ವಾಮಿಗೆ ಪ್ರತಿ ನಿತ್ಯದಲ್ಲಿಯೂ ಮುತ್ತಿನ ಸಹಸ್ರನಾಮಾರ್ಚನೆ ಮಾಡಿಸಿದುದಲ್ಲದೆ, ತಿರುಪತಿ ವೆಂಕಟರಮಣಸ್ವಾಮಿಯವರಿಗೆ ಚಿನ್ನದ ಛತ್ರ ಮುಂತಾದ ಸೇವೋಪಕರಣ, ಪೂಜೋ

ಪಕ್ಕರಣ, ವಸ್ತ್ರಾಭರಣ ಮುಂತಾದ ಪದಾರ್ಥಗಳನ್ನು ಒಪ್ಪಿಸಿದರು. ಮತ್ತು ಮೇಲುಕೋಟೆಯಲ್ಲಿ ಕಲ್ಯಾಣಿ ಮೊದಲಾದ ಅಷ್ಟತೀರ್ಥಗಳಲ್ಲಿ ಗಜೇಂದ್ರಮೋಕ್ಷಾದ್ಯುತ್ಸವಗಳಿಗೆ ಕೈಸಾಲೆಗಳನ್ನೂ ಮಂಟಪಗಳನ್ನೂ ಸ್ವನಾಮಾಂಕಿತವಾಗಿಯೂ ಸ್ವಪತ್ನೀನಾಮಾಂಕಿತವಾಗಿಯೂ ಅನೇಕವಾಗಿ ಮಾಡಿಸಿದರು. ೪೪ ಗಡಿಗಳಲ್ಲಿ ಆಗಮೋಕ್ತವಾಗಿ ಉತ್ಸವ ನಡೆಯುತಕ್ಕ ದೇವಸ್ಥಾನಗಳಲ್ಲದೆ ಬಿಡಿ ದೇವಸ್ಥಾನಗಳಲ್ಲಿರುವ ಮಾದೇಶ್ವರ, ಬಸವೇಶ್ವರ, ವೀರಭದ್ರ, ಭೈರವದೇವರು, ಶಕ್ತಿದೇವತೆಗಳು, ಮೈರಿ, ಜಿನದೇವರು ಮುಂತಾದ ಸಕಲ ದೇವರುಗಳಿಗೂ ಅಲ್ಲಲ್ಲಿಯ ತಾರತಮ್ಯೋ ವಿದ್ದಂತೆ ಪೂರ್ವದ ತಸದೀಕಿಗಿಂತ ಹೆಚ್ಚಾಗಿ ಕೆಲವು ನಗದು, ಭೂಮಿ, ಕೆಲವು ಜೋಡಿಗ್ರಾಮ ಇವುಗಳನ್ನು ಕೊಡಿಗೆ ಎಂಬ ಪೆಸರಿನಿಂದ ಕೊಟ್ಟರು. ಅನೇಕಜನ ಬ್ರಾಹ್ಮಣರಿಗೂ, ತ್ರಿಮತಸ್ಥ ಮತಪತಿಗಳಿಗೂ, ಜಂಗಮಮಠಕ್ಕೂ ಸಹ ವಸ್ತ್ರಾಭರಣ ಮರ್ಯಾದೆಗಳನ್ನು ಮಾಡಿ ಗ್ರಾಮ ಭೂಮಿಗಳನ್ನು ಕೊಟ್ಟರು. ಚಿಕ್ಕದೇವರಾಜಒಡೆಯರವರು ಹಂಗಳ ದಲ್ಲಿದ್ದಾಗ ಜಾತಕಭಾವವನ್ನು ನೋಡಿ ಇಂಥಾ ದಿವಸದ ಇಷ್ಟನೆಯ ಗಳಿಗೆಯಲ್ಲಿ ನಿಮಗೆ ಶ್ರೀರಂಗಪಟ್ಟಣದಲ್ಲಿ ರಾಷ್ಟ್ರಾಧಿಪತ್ಯವಾಗಿ ಬಹಳ ಯಶಸ್ಸನ್ನು ಕಡೆಯುವಿರಿ ಎಂದು ತೆರಕಣಾಂಬಿಯ ಲಿಂಗಾಭಟ್ಟನೆಂಬ ಬ್ರಾಹ್ಮಣನು ಹೇಳಿದ ಮಾತು ಅನುಭವಕ್ಕೆ ಬಂದುದರಿಂದ ಪಟ್ಟವಾದ ಕೂಡಲೆ ಆ ಬ್ರಾಹ್ಮಣನನ್ನು ಕರೆಸಿ, ಬಂದು ಗ್ರಾಮವನ್ನು ಸರ್ವಮಾನ್ಯವಾಗಿ ಧಾರೆಯೆರೆದು ಕೊಟ್ಟರು. ಅನಂತರ ಆ ಬ್ರಾಹ್ಮಣನು ತನ್ನ ಪೆಸರಿನಿಂದ ಅಗ್ರಹಾರವನ್ನು ನೂಡಿದನು. ಬಳಿಕ ದೊರೆಗಳವರು ಪೂರ್ವದಲ್ಲಿದ್ದ ಅಗ್ರಹಾರ, ಭಟ್ಟಮಾನ್ಯ ಮುಂತಾದ ಬ್ರಹ್ಮದಾಯಗಳನ್ನು ಪೂರ್ವದಂತೆ ನಿರುಪಾಧಿಕವಾಗಿ ನಡಿಸುತಲಿದ್ದುದಲ್ಲದೆ, ತಮ್ಮ ಸೀಮೆಯಲ್ಲಿ ಜೀವನವಿಲ್ಲದೆ ಕಷ್ಟಪಡುತಲಿರುವ ಬ್ರಾಹ್ಮಣರುಗಳಿಗೆಲ್ಲಾ ಭಟ್ಟಮಾನ್ಯಗಳನ್ನು ಕೊಟ್ಟು, ಮದುವೆ ಮುಂಜಿ ಮುಂತಾದ ಅನೇಕ ಧರ್ಮಕಾರ್ಯಗಳನ್ನು ಮಾಡಿ, ಜೋಗಿ, ಜಂಗಮ, ಫಕೀರ, ಕುರುಡರು, ಕುಂಟರು, ಪೆಳವರು, ಮೂಕರು ಮುಂತಾದ ಜನರಿಗೆಲ್ಲಾ ಜೀವನವನ್ನು ಕಲ್ಪಿಸಿ, ಮಕಾನುಗಳಿಗೂ ಕೆಲವು ನಗದನ್ನೂ ಭೂಮಿಯನ್ನೂ

ಕೊಟ್ಟು, ಯುದ್ಧದಲ್ಲಿ ತೀರಿಹೋದ ಜನಗಳ ಹೆಂಡಿರು ಮಕ್ಕಳಿಗೆ ರಕ್ಷ ಕೊಂಡಿಗೆ ಎಂಬದಾಗಿ ಭೂಮಿಯನ್ನು ಕೊಟ್ಟು, ತಮ್ಮ ದೊರೆತನದಲ್ಲಿ ಸಕಲ ಪ್ರಾಣಿಗಳೂ ಜೀವನ ಮಾಡಿಕೊಂಡು ಸರ್ವರೂ ತಮ್ಮ ತಮ್ಮ ವರ್ಣಾಶ್ರಮ ಧರ್ಮದಲ್ಲಿ ಇದ್ದುಕೊಂಡು ಸುಖವಾಗಿರುವಂತೆ ಆಳಿದರು.

ಸೀಮೆಯ ಮೇಲೆ ವ್ಯಾಪಾರಸ್ಥರು ತಂದು ಮಾರುವ ದವಸ ಮುಂತಾದ ಜಿನಸುಗಳಿಗೆ ಆಯಾ ಗಡಿಗಳ ಸುಂಕದ ಚಾವಡಿಯಲ್ಲಿ ಕಟ್ಟಳೆಯ ಮೇರೆಗೆ ತೀರ್ಪಾದ ಸುಂಕದ ಹಣಕಾಸುಗಳನ್ನು ಗೊಲ ಕಕ್ಕೆ ಸೇರಿಸುವಂತೆಯೂ, ವ್ಯಾಪಾರಸ್ಥರು ತಂದ ಜಿನಸುಗಳಿಗೆ ಮುನಾ ಸಬು ಇದ್ದ ಮೇರೆಗೆ ಹೇರು ಒಕ್ಕೆ ಪಾವು ಸೇರಿನಂತೆ ನಿಷ್ಕರ್ಷೆ ಮಾಡಿ, ಅದನ್ನು ಆಯಾ ಗಡಿಗಳಲ್ಲಿರುವ ದೇವರುಗಳಿಗೂ, ಕೆಲವು ಬ್ರಾಹ್ಮಣರು ಮುಂತಾದ ಜನಗಳಿಗೂ, ತಾರತಮ್ಯವನ್ನು ನೋಡಿ ರುಸುಂ ಎಂಬದಾಗಿ ಕೊಡುವಂತೆಯೂ ನೇಮಕಮಾಡಿದರು.

ದಿಳ್ಳಿಯ ಪಾದಷಾಹರಿಂದ ಅನೇಕ ಸನ್ಮಾನಗಳನ್ನು ಪಡೆದ ವೃತ್ತಾಂತ.— ಚಿಕ್ಕದೇವರಾಜಬಡೆಯರವರು ತಮ್ಮ ಭುಜಬಲದಿಂದ ಅನೇಕರಾದ ಪಾಳೆ ಯಗಾರರನ್ನು ಜಯಿಸಿ ದೇಶಗಳನ್ನು ಸ್ವಾಧೀನ ಮಾಡಿಕೊಂಡು, ತಮ್ಮ ಬುದ್ಧಿ ಕೌಶಲ್ಯದಿಂದ ಅನೇಕವಾದ ಆಯಕಟ್ಟುಗಳನ್ನು ಮಾಡಿ, ಎಂದೆಂ ದಿಗೂ ತುಂಟ ಪಾಳೆಯಗಾರರಿಗೆ ಅವಕಾಶವಾಗದಂತೆ ದುಷ್ಟನಿಗ್ರಹ ಶಿಷ್ಟ ಪರಿಪಾಲನೆಯೆನ್ನು ಚೆನ್ನಾಗಿ ಮಾಡಿ, ಪ್ರಜಾ ಸಂರಕ್ಷಣೆಯನ್ನು ಮಾಡು ವುದರಲ್ಲಿ ಇವರಿಗೆ ಸರಿಸಾಟಿ ಇಲ್ಲವೆಂದು ಹೊಗಳಿಸಿಕೊಳ್ಳುತ್ತ ಇರುವ ಸಮಯದಲ್ಲಿ, ಕೆಲವು ಜನ ತುಂಟ ಪಾಳೆಯಗಾರರು ಅಸೂಯೆಯಿಂದ ತಮ್ಮ ಮೇಲೆ ದುರಾಲೋಚನೆಯನ್ನು ಮಾಡುತಲಿದಾರೆ ಎಂಬ ವರ್ತ ಮಾನವನ್ನು ಕೇಳಿ, ದೊರೆಗಳವರು ಇನ್ನು ಮೇಲೆ ನಮಗೆ ಸಮಾನರಾದ ಸಂಸ್ಥಾನಾಧಿಪತಿಗಳಲ್ಲಿ ಸ್ನೇಹ ಮಾಡಬೇಕೆಂದು ತಮ್ಮ ಆಪ್ತಜನರೊಡನೆ ಆಲೋಚನೆಯನ್ನು ಮಾಡಿ, ಬುದ್ಧಿವಂತನಾಗಿರುವ ಕರಣಿಕ ಲಿಂಗಣ್ಣಯ್ಯ ನೆಂಬ ಬ್ರಾಹ್ಮಣನಿಗೆ ಸಂಸ್ಥಾನದ ವಕೀಲತನವನ್ನು ನೇಮಿಸಿ, ದಿಳ್ಳಿ ಪಾದಷಾಹರ ಮಾನಾನುಗುಣವಾಗಿ ವಸ್ತ್ರಾಭರಣಗಳನ್ನೂ ಅಲ್ಲಿಯ ಸಾಮೊಡಿಕರ ಮಾನಾನುಗುಣವಾಗಿ ವಸ್ತ್ರಗಳನ್ನೂ ಕೊಟ್ಟು, ತಮ್ಮ

ಕುಶಲಪತ್ರವೆನ್ನೂ ಬರೆಸಿ ದಿಳ್ಳಿಗೆ ಕಳುಹಿಸಿಕೊಂಡಲು, ಆ ಲಿಂಗಣ್ಣಯ್ಯನು ದಿಳ್ಳಿಯ ಸವಿೂಪಕ್ಕೆ ಹೋಗಿ, ಒಂದು ಗಾವುದದಲ್ಲಿ ಇಳಿದುಕೊಂಡು, ಅಲ್ಲಿಯ ವಜೀರ ಮುಂತಾದ ಜನಗಳಿಗೆ ದೊರೆಗಳವರ ಅಪ್ಪಣೆಯಂತೆ ವಸ್ತ್ರವನ್ನು ಕೊಟ್ಟು, ತಾನು ಬಂದಿರುವ ವರ್ತಮಾನವನ್ನು ಪಾದಷಾಹರಿಗೆ ತಿಳಿಸಬೇಕೆಂದು ಹೇಳಿ ಕಳುಹಿದನು. ಆ ವಜೀರಮುಂತಾದ ಸಾಮೊಾಜಿಕರು ಮೈಸೂರು ಸಂಸ್ಥಾನದ ದೊರೆಗಳಾದ ಚಿಕ್ಕ ದೇವರಾಜಒಡೆಯರವರ ಕಡೆ ವಕೀಲ ಕರಣಿಕ ಲಿಂಗಣ್ಣಯ್ಯನೆಂಬವನು ತಮ್ಮ ಸನ್ನಿಧಾನಕ್ಕೆ ಅವರ ಕುಶಲ ಪತ್ರಿಕೆಯನ್ನು ತೆಗೆದುಕೊಂಡು ಭೇಟಿಆಗಬೇಕೆಂಬುದಾಗಿ ಬಂದಿದಾನೆ ಎಂದು ಪಾದಷಾಹರಿಗೆ ಬಿನ್ನವಿಸಿದರು. ಪಾದಷಾಹರು "ನಮ್ಮ ಸಂಸ್ಥಾನಕ್ಕೆ ಹಿತಚಿಂತನೆಯನ್ನು ಮಾಡುತಲಿರುವ ಮೈಸೂರು ಸಂಸ್ಥಾನದ ದೊರೆಗಳವರ ಕಡೆಯ ವಕೀಲ ಲಿಂಗಣ್ಣಯ್ಯನನ್ನು ಕರೆತರಿಸಿ" ಎಂಬುದಾಗಿ ಅಪ್ಪಣೆಕೊಟ್ಟು, ತಮ್ಮ ದರಬಾರ ಕಾಲದಲ್ಲಿ ಭೇಟಿಯನ್ನು ಕೊಡಲು, ಈ ಕರಣಿಕ ಲಿಂಗಣ್ಣಯ್ಯನು ಪಾದಷಾಹರಿಗೆ ಅಲ್ಲಿಯ ಮರ್ಯಾದೆಯ ಮೇರೆಗೆ ನಜರು ಮುಜರೆಯನ್ನು ಮಾಡಿ, ದೊರೆಗಳವರು ಅಪ್ಪಣೆ ಕೊಟ್ಟು ಕಳುಹಿದ್ದ ನಿರಾಜಿಯ ಖಿಲ್ಲತ್ತು, ನವರತ್ನಾಭರಣಮುಂತಾದ ಪದಾರ್ಥಗಳನ್ನೂ ಕುಶಲ ಪತ್ರಿಕೆಯನ್ನೂ ಒಪ್ಪಿಸಿದನು. ಆ ಬಳಿಕ ಪಾದಷಾಹರು "ನಿಮ್ಮ ದೊರೆಗಳವರು ಕ್ಷೇಮವಾಗಿದಾರೆಯೇ? ಮತ್ತೇನು ಹೇಳಿದಾರೆ?" ಎಂದು ಅಪ್ಪಣೆಕೊಡಲು, "ನಮ್ಮ ದೊರೆಗಳವರು ಸರ್ವ ಕಾಲದಲ್ಲಿಯೂ ತಮ್ಮ ದವಲತ್ತಿನ ಕ್ಷೇಮ ಲಾಭ ವೃದ್ಧಿಯನ್ನೇ ಪ್ರಾರ್ಥಿಸುತಲಿದಾರೆ" ಎಂದು ಲಿಂಗಣ್ಣಯ್ಯನು ಬಿನ್ನವಿಸಿದನು. ಈ ಮಾತನ್ನು ಕೇಳಿ ಪಾದಷಾಹರು ಬಹಳ ಸಂತೋಷಪಟ್ಟು, ತಮ್ಮ ಸವಿಾಪದ ಒಂದು ಕಡೆಯಲ್ಲಿ ಲಿಂಗಣ್ಣಯ್ಯನನ್ನು ಕುಳ್ಳಿರಿಸಿಕೊಂಡು "ನಿಮ್ಮ ದೊರೆಗಳವರು ಅನೇಕ ಶತ್ರುಗಳನ್ನು ಜಯಿಸಿ, ಸೀಮೆಗಳನ್ನು ಕಟ್ಟಿ, ದೇಶಮರ್ಯಾದೆಗಳನ್ನು ಚೆನ್ನಾಗಿ ವ್ಯವಸ್ಥೆಮಾಡಿ, ದುಷ್ಟರನ್ನು ನಿಗ್ರಹಿಸಿ, ಶಿಷ್ಟರನನುಗ್ರಹಿಸಿ, ಧರ್ಮದಿಂದ ಪ್ರಜೆಗಳನ್ನು, ಪಾಲಿಸುತಲಿರುವಲ್ಲಿ, ಮೆರಾಟಿಯವರ ಕಡೆ ಜಯಾಜಿಷಾಟೆ ಲಿಂಬಾಜಿಷಾಟರಂಬ ಇಬ್ಬರು ಸರದಾರರು ೬೦ ಸಾವಿರ ಕುದುರೆಯ ಸೇನೆಯೊಡನೆ ನಮ್ಮ ದಿಳ್ಳೀಪ್ರಾಂತ್ಯಕ್ಕೆ ಎರಡು ಮೂರಾವೃತ್ತಿ

ಬಂದು ಯುದ್ಧಮಾಡಿ, ಈ ಸೀಮೆಗಳನ್ನು ಲೂಟಿಮಾಡುತ್ತಾ ಸಿಕ್ಕದೆ ತಪ್ಪಿಸಿಕೊಂಡು ಓಡಿಹೋಗಿ ನಿಮ್ಮ ಶ್ರೀರಂಗಪಟ್ಟಣವನ್ನು ಸಾಧಿಸ ಬೇಕೆಂದು ಬರಲು, ಆ ಸೇನೆಯನ್ನೂ ಆ ಇಬ್ಬರು ಸರದಾರರುಗಳನ್ನೂ ದೊಡ್ಡದು ಹಾಕಿದಿರಿ ಎಂಬ ವರ್ತಮಾನವನ್ನು ಕೇಳಿ ಬಹಳ ಸಂತೋಷ ವಾಗಿದೆ. ನಿಮ್ಮ ಶ್ರೀರಂಗಪಟ್ಟಣವೂ ನಮ್ಮದಾಗಿರುವುದಲ್ಲದೆ, ನಿಮ್ಮ ದೊರೆಗಳವರೂ ನಮಗೆ ಸಮ್ಮಿತ್ರರಾಗಿರುವರು. ನಿಮಗೆ ಏನಾದರೂ ಕಾರ್ಯವಿದ್ದಲ್ಲಿ ನಮ್ಮ ಬಳಿಗೆ ಹೇಳಿ ಕಳುಹಿಸಿದರೆ, ಅಕ್ಷಣದಲ್ಲಿಯೇ ಆ ಕಾರ್ಯಗಳನ್ನು ಮಾಡಿಕೊಡುವೆವು" ಎಂಬದಾಗಿ ಅಪ್ಪಣೆಕೊಟ್ಟು, 'ರಾಜಾ ಜಗದೇವ' ಎಂಬದಾಗಿ ಕಿತಾಬುಕೊಟ್ಟು, ದೊರೆಗಳವರ ಪೂರ್ವದ ಶಿಖಾಸರದಲ್ಲಿ ಇರಿಸುವದಕ್ಕೆ ಯೋಗ್ಯವಾದ 'ರಾಜಾಜಿಕ್ಕದೇವರಾಜ ಮೆಹಮೆದ್‌ಷಾಯಿ' ಎಂಬ ಮಾತನ್ನು ಹಿಜರಿ ಲಿಕ್ಕವನ್ನು ಸಹ ಪಾರ ಸಿಯ ಅಕ್ಷರದಲ್ಲಿ ಕೆತ್ತಿರುವ ಮೊಹರನ್ನೂ, "ನಿಮ್ಮ ಸಂಸ್ಥಾನದಲ್ಲಿ ಪೂರ್ವದಲ್ಲಿರುವದಕ್ಕಿಂತ ಅಧಿಕವಾಗಿ ಇನ್ನೊಂದು ನಮ್ಮದಾಗಿ ಇರಲಿ" ಎಂದು ಒಂದು ಕಂಪ್ರುಖಾಂಡೆಯನ್ನೂ, ಹನುಮದ್ಗರುಡಧ್ವಜ ಶಂಖ ಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಬೇರುಂಡ ಧರಣೀವರಾಹ ಮುಂತಾದ ಬಿರುದುಗಳನ್ನೂ, ಮತ್ತು ಅಧಿಕವಾಗಿ ತಮ್ಮ ಸಿವಿಯ ಪದ್ಧತಿಯ ಮೇರೆಗೆ ನಗಾರಿ ನೌಬತ್ತುಗಳನ್ನೂ, ಇವರು ಕಳುಹಿಂಕೊಟ್ಟದಕ್ಕಿಂತ ಇಮ್ಮಡಿಯಾಗಿ ನೀರಾಜಿಖಿಲ್ಲತ್ತು ನವರತ್ನಾಭರ ಣಗಳನ್ನೂ ಕೊಟ್ಟದಲ್ಲದೆ, ಸ್ನೇಹಸೂಚಕವಾದ ಕುಶಲಪತ್ರವನ್ನೂ ಬರೆಸಿಕೊಟ್ಟು "ನಿಮ್ಮ ದೊರೆಗಳವರಾದ ಚಿಕ್ಕದೇವರಾಜಬಹದ್ದೂರರವರು ಪಾಂಡವರಾಳುತ್ತಿದ್ದ ಸಿಂಹಾಸನದ ಮೇಲೆ ಆರೋಹಣಮಾಡಿರುವುದ ರಿಂದ ಬಬ್ಬರಿಗೂ ತಾಜೀಂ, ತವೆಜ್ಜೀಂ, ಪ್ರತಿಸಲಾಂ ಮಾಡಕೆಲಸವಿಲ್ಲ" ಎಂದು ಅಪ್ಪಣೆ ಕೊಟ್ಟು, ಕರಣಿಕ ಲಿಂಗಣ್ಣಯ್ಯನಿಗೂ ಇವನ ಮಾತಾ ಸುಗುಣವಾಗಿ ವಸ್ತ್ರ ಮುಂತಾದ ಮರ್ಯಾದೆಯನ್ನು ಮಾಡಿ, ದೊರೆ ಗಳವರ ಕ್ಷೇಮಲಾಭವರ್ತಮಾನವು ತಮಗೆ ಆಗಾಗ್ಗೆ ತಿಳಿಯುವದಕ್ಕೆ ತಮ್ಮ ಕಡೆಯ ಒಬ್ಬ ಪರಿಕಾರನನ್ನೂ, ಈ ಲಿಂಗಣ್ಣಯ್ಯನ ಸಂಗಡ ಕಳುಹಿಸಿಕೊಟ್ಟರು. ಬಳಿಕ ಲಿಂಗಣ್ಣಯ್ಯನು ಚಿಕ್ಕದೇವರಾಜಬಹದ್ದೂರ

ರವರಿಗೆ ದಿಳ್ಳೀ ಪಾದಷಾಹರು ಸನ್ಮಾನಗಳನ್ನು ಮಾಡಿದ ವಿವರವನ್ನು ತಿಳಿಸಿ ಪತ್ರಿಕೆಯನ್ನು ಬಿನ್ನಹಮಾಡಿಕೊಂಡು ದಿಳ್ಳಿಯಿಂದ ಹೊರಟು ಶ್ರೀರಂಗಪಟ್ಟಣದ ಸಮೀಪಕ್ಕೆ ಬಂದು, ಆ ವರ್ತಮಾನವನ್ನು ಸೂಚಿಸಿ ದೊರೆಗಳವರ ಸನ್ನಿಧಾನಕ್ಕೆ ಮತ್ತೆ ಪತ್ರಿಕೆಯನ್ನು ಬಿನ್ನಹಮಾಡಿ ಕೊಂಡನು. ದೊರೆಗಳವರು ಕರಣಿಕ ಲಿಂಗಣ್ಣಯ್ಯನ ಪತ್ರಿಕೆಯನ್ನು ಪರಾಂಬರಿಸಿ, ಪಟ್ಟಣಕ್ಕೆ ಶೃಂಗಾರವನ್ನು ಮಾಡಿಸಿ, ತಮ್ಮಲ್ಲಿರುವ ಅಧಿಕಾರಿಗಳು ಅರಸುಗಳು ಸಟ್ಟವರ್ತಕರು ಮುಂತಾದ ಎಲ್ಲಾ ಕೋಮಿನ ಜನಗಳು ಓಲಗ ತಾಳ ಮೇಳ ಸಹಿತವಾಗಿ ಬಂದು ಮರಿಜಾರಿ ಪರ್ಯಂತ ಹೋಗಿ ಎದುರುಗೊಂಡು ತೆಗೆಸಿಕೊಂಡು ಬರುವಂತೆ ಕಳುಹಿಸಿಕೊಟ್ಟು, ದಿಳ್ಳಿಯಿಂದ ಬಂದ ಮೊಹರನ್ನೂ ಕುಶಲಪತ್ರಿಕೆಯನ್ನೂ ಅಂಬಳಿದಲ್ಲಿ ಇರಿಸಿ, ಅಲ್ಲಿಂದ ಬಂದ ಬಿರುದುಗಳ ಸಹಿತವಾಗಿ ನಾಲ್ಕು ಬೀದಿಗಳ ಲ್ಲಿಯೂ, ಮೆರವಣಿಗೆಯನ್ನು ಮಾಡಿಸಿ, ರಂಗನಾಥಸ್ವಾಮಿಯ ಮುಂಟ ಪೋತ್ಸವಕಾಲದಲ್ಲಿ ದೇವರ ಮುಂದುಗಡೆಯಲ್ಲಿ ಕುಶಲಪತ್ರಿಕೆಯನ್ನು ಓದಿಸಿ, ಆ ಮೊಹರನ್ನೂ ಖಿಲ್ಲತ್ತನ್ನೂ ಸಮರ್ಪಿಸಿ, ಆ ಬಿರುದುಗಳನ್ನು ಹಿತಿಸಿ, ಅಲ್ಲಿಂದ ಬಂದ ನೌಬತ್ತುಗಳನ್ನು ಮಾಡಿಸಿದರು. ಹೀಗೆ ಚಿಕ್ಕ ದೇವರಾಜಒಡೆಯರವರು ಕಾ|| ಶಕ ೧೬೨೩ನೆ (A.D. 1700) ವಿಕ್ರಮ ಸಂವತ್ಸರದಲ್ಲಿ ರಾಜಾಜಗದೇವ್ ಎಂಬ ಕಿತಾಬನ್ನು ಸಂಪಾದಿಸಿ ದಿಳ್ಳಿ ಯಿಂದ ಬಂದ ನಗಾರಿ ನೌಬತ್ತುಗಳನ್ನು ಅತಿಸಂಭ್ರಮದಿಂದ ಮೊಳ ಸುತ್ತ ಆ ಬಿರುದುಗಳನ್ನು ಹಿತಿಸಿಕೊಂಡು, ಶಿಷ್ಟಾಪಹರನ್ನು ಧರಿಸಿ, ಓಲಗವನ್ನು ತೆಗೆದುಕೊಳ್ಳುತ್ತಲಿರುವ ಸಮಯದಲ್ಲಿ ತಮ್ಮ ಪುತ್ರರಾದ ಕಂಠೀರವ ಮಹಾರಾಜಒಡೆಯರವರು, ಸರ್ವಾಧಿಕಾರಿಗಳು, ಅರಸು ಗಳು, ಪಾಳಯಗಾರರು, ಅಧಿಕಾರಸ್ಥರು ಮೊದಲಾದ ಜನಗಳು ಅವ ರವರ ಮಾನಾನುಗುಣವಾಗಿ ನೆಹರು ಮೆಜರಗಳನ್ನು ಒಪ್ಪಿಸುತ್ತಿರಲು, ಭಟ್ಟರುಗಳು—ಶ್ರೀಮನ್ಮಹಾರಾಜ ರಾಜಾಧಿರಾಜ, ರಾಜಪರಮೇಶ್ವರ, ಪಾಶ್ಚಪ್ರತಾಪಾಪ್ರತಿಮ, ಜಗದೇಕವೀರ, ಭುವನೈಕಶೂರ, ರಾಗದ್ವೇಷ ರಹಿತ, ದುಷ್ಟನಿಗ್ರಾಹಕ, ಶಿಷ್ಟಪರಿಪಾಲಕ, ಬೃಹಸ್ಪತಿಸಮಾನ ನಿಪುಣ, ಮಹೇಂದ್ರಸಮವಿಕ್ರಮ, ಮಹೇಶ್ವರ ಸಮಾನ ಮಹಾಪ್ರತಾಪ,

ತಾಂತವೈಮಿಜಕ್ಷಣಧುರೀಣ, ರಾಜಸತಾಮಸಸಾತ್ವಿಕತ್ರೈಗುಣ್ಯೈಪರಿ
ಜ್ಞಾನಪೂರ್ಣಕಕ್ಷಣ, ಹಸ್ತಪಟಹ ಭೇರೀ ಮೃದಂಗ ಶಂಖ ಕಹಳಾ
ವೀಣಾ ವೇಣು ತಂತ್ರೀಗುಣಲಕ್ಷಣಪ್ರಜ್ಞಾನ, ವೀರನರಪತಿ, ಶೂರಾ
ಗ್ರಗಣ್ಯ, ಮಲೆತವೆರಗಂಡ, ಅರಿಹರಿಭೇರುಂಡ, ಕರ್ನಾಟಕದೇಶ
ಮಂಡನ, ಮೈಸೂರುಪುರಾದಿರಾಜವಂಶೋತ್ತಂಸ, ಅರ್ಥಿಜನಕಲ್ಪಶಾಖಿ,
ಪ್ರತ್ಯರ್ಥಿವ್ರಜಸಪಕ್ಷಪರ್ವತವಜ್ರಿ, ರಾಜಕುಲಾಬ್ಧಿಶಶಾಂಕ, ಧರಣೀ
ವರಾಹಾನಿವಿರುದಾಂಕ, ಅಭಯಪ್ರದಾನಾಧೀಶ್ವರ ಎಂಬ ಬಿರುದು
ಗಳಿಂದ ಮೊಗಳುತ್ತಿದ್ದರು. ಆಗ ದೊರೆಗಳವರು ತಮ್ಮಲ್ಲಿದ್ದ ಅರಸು
ಗಳು ಅಧಿಕಾರಸ್ಥರು ಮುಂತಾದ ಎಲ್ಲಾ ಪರಿಜನಗಳಿಗೂ ದಿಳ್ಳಿಗೆ
ಹೋಗಿಬಂದ ಕರಣಿಕ ಲಿಂಗಣ್ಣಯ್ಯ ಮುಂತಾದ ಜನಗಳಿಗೂ, ದಿಳ್ಳಿ
ಯಿಂದ ಬಂದ ದರಿಕಾರನಿಗೂ, ಅವರವರ ಮಾನಾನುಗುಣವಾಗಿ ವೆಸ್ತಾ
ಭರಣ ಮನ್ನಾದೆಗಳನ್ನು ಮಾಡಿ, ಕೆಲವೆರಿಗೆ ಗ್ರಾಮಭೂಮಿಗಳನ್ನು
ಕೊಟ್ಟರು. ಪೂರ್ವದಲ್ಲಿ ಎರಡುವೇಳ ನಡೆಯುತ್ತಿದ್ದ ದಾಳದಮೋ
ಭೇರಿ ಮುಂತಾದ ಒಲಗಗಳಿಗೆ ಈಗ ದಿಳ್ಳಿಯಿಂದ ಬಂದ ನೌಬತ್ತನ್ನು
ಪ್ರತಿನಿತ್ಯದಲ್ಲಿಯೂ ನಾಲ್ಕು ವೇಳೆ ನಡೆಸುವೆಂತೆ ಕಟ್ಟಳೆ ಮಾಡಿದರು.

೧೪ ಚಾವಡಿಗಳನ್ನು ಏರ್ಪಡಿಸಿದ್ದು.—ದೊರೆಗಳವರು ಬಂದಾನೊಂದು
ದಿನ ತಮ್ಮ ಆಪ್ತಜನರೊಡಗೂಡಿ "ದಿಳ್ಳೀ ಪಾದಷಾಹರು ಪ್ರತಿದಿನ
ದಲ್ಲಿಯೂ ದರಬಾರು ಮಾಡತಕ್ಕ ರೀತಿಯನೂ, ಅಲ್ಲಿಯ ಅಧಿಕಾರ
ಸ್ಥಾನವೂ, ಯಾವುದು" ಎಂದು ಲಿಂಗಣ್ಣಯ್ಯನನ್ನು ಕೇಳಲು, ಅವನು
ಪಾದಷಾಹರು ಪ್ರತಿದಿನದಲ್ಲಿಯೂ ಮಾಡುವ ದರಬಾರಿನ ರೀತಿಯನ್ನೂ
ಅಲ್ಲಿಯ ದೇಶಭಾಷೆಯಿಂದ ೧೪ ಕಚೇರಿ ಎಂದು ಇರುವ ಅಧಿಕಾರ
ಸ್ಥಾನಗಳನ್ನೂ ಬಿನ್ನವಿಸಿದನು. ಆ ಮಾತನ್ನು ಕೇಳಿ, ಸಾಮೋಜಿಕ
ರೊಡನೆ ಆಲೋಚನೆ ಮಾಡಿ, ತಮ್ಮಲ್ಲಿ ಅದೇ ಪೇರಿನ ೧೪ ಚಾವಡಿ
ಗಳನ್ನು ನಿಬಂಧನೆ ಮಾಡಿದರು.

(೧) ನಿರೂಪದ ಚಾವಡಿ.—ಇವರಲ್ಲಿ ರಾಯಸದವರು ಗೆಡಿಗಳ
ಮುಂತಾದ ಅಧಿಕಾರಸ್ಥಾನಗಳಿಂದ ಯಾರು ಯಾರು ಅರ್ಜಿ
ಗಳನ್ನು ಬಿನ್ನವಿಸಿಕೊಂಡರೂ, ಅವುಗಳನ್ನು ಸುಲಾವೆಣ

ಮಾಡಿ, ಅಪ್ಪಣೆಯಾವಂತೆ ನಿರೂಪವೆನ್ನು ಬರೆದು ಅವರ ನಕಲನ್ನು ಇಟ್ಟುಕೊಂಡು, ಆ ನಿರೂಪಕ್ಕೆ ದೊರೆಗಳವರ ದಸ್ಕತ್ತು ಮೊಹರು ಮಾಡಿಸಿ, ಆಯಾ ಜನಗಳಿಗೆ ಕಳುಹಿಸಿ ಕೊಡುವಂತೆ ನಿಬಂಧನೆಮಾಡಿದರು.

(೨) ಆಯಕಟ್ಟಿನ ಚಾವಡಿ—ಇದರಲ್ಲಿ ಮೈಸೂರು ೮೪ ಗಡಿಗಳ ಸೀಮೆಯ ಆದಾಯವ್ಯಯದ ಲೆಕ್ಕವೆನ್ನೂ ಸೈನ್ಯದ ಲೆಕ್ಕವನ್ನೂ ತೋಷೀಖಾನೆಯ ಲೆಕ್ಕವನ್ನೂ ಕರ್ತರ ಖಾಸಾ ಆದಾಯವ್ಯಯದ ಲೆಕ್ಕವನ್ನೂ ಬರೆದುಕೊಳ್ಳುವಂತೆ ಕಟ್ಟಳೆ ಮಾಡಿದರು.

ತಾವು ನಿಬಂಧನೆಯನ್ನು ಮಾಡಿರುವ ೮೪ ಗಡಿಗಳಲ್ಲಿ :—

(೩) ಕಾವೇರಿಗೆ ದಕ್ಷಿಣ ಪಾರ್ಶ್ವದಲ್ಲಿರುವ ಗಡಿಗಳಿಗೆ ಮೈಸೂರ ಹೋಬಳಿಯ ವಿಚಾರದ ಚಾವಡಿ ಎಂಬುದಾಗಿ ನಿಬಂಧನೆ ಮಾಡಿದರು.

(೪) ಕಾವೇರಿಗೆ ಉತ್ತರ ಪಾರ್ಶ್ವದಲ್ಲಿರುವ ಗಡಿಗಳಿಗೆ ಪಟ್ಟಣದ ಹೋಬಳಿಯ ವಿಚಾರದ ಚಾವಡಿ ಎಂಬುದಾಗಿ ನಿಬಂಧನೆ ಮಾಡಿದರು.

(೫) ಸೀಮೆಯ ಕುಂದಾಚಾರದ ಚಾವಡಿ—ಇಲ್ಲಿ ಗಡಿಗಳಲ್ಲಿರುವ ಕಿಲ್ಲೇದಾರ, ಶಿರಸ್ತೇದಾರ, ಹೋಬಳಿದಾರ, ಓಲೆಕಾರ ಮುಂತಾದ ಸಿಬ್ಬಂದಿಯ ಜನಗಳ ಲೆಕ್ಕವನ್ನೂ, ಆಯಾ ಕಿಲ್ಲೆಯಲ್ಲಿರುವ ಫಿರಂಗಿ ತುಪಾಕಿ ಮದ್ದು ಗುಂಡು ಮೊದಲಾದ ಜಕೀರಿ ಸಾಮಾನು ಮುಂತಾದವುಗಳ ಲೆಕ್ಕವನ್ನೂ ಬರೆವಂತೆ ನಿಬಂಧನೆ ಮಾಡಿದರು.

(೬) ಬಾಗಿಲ ಕುಂದಾಚಾರದ ಚಾವಡಿ—ಇಲ್ಲಿ ಸವಾರರು, ಬಾರಿನವರು, ಬಾರಗಿರಿಯವರು, ಅಪಷಾ, ಪುಜಾರಲ್ಲಿರುವವರು, ಜಾಳಯಗಾರರು ಮುಂತಾದವರ ಲೆಕ್ಕವನ್ನು ಬರೆವಂತೆ ಗೊತ್ತು ಮಾಡಿದರು.

(೬) ಸುಂಕದ ಚಾವಡಿ—ಇವರಲ್ಲಿ ಎಲ್ಲಾ ಸೀಮೆಯ ಮೂರ್ಗ ಗಳಲ್ಲಿ ಹೋಗಿ ಬರುವ ಜವಳಿ ರಸ್ತು ಮುಂತಾದ ಜಿನಸು ಗಳಿಗೂ, ಅಯಾ ಪೇಟೆಯ ಮನೆಗಳಲ್ಲಿ ಕರಗಪಡಿ ಆಗುವ ಪದಾರ್ಥಗಳಿಗೂ, ನಿಬಂಧನೆಯ ಮೇರೆಗೆ ಸುಂಕವನ್ನು ತೆಗೆದು ಕೊಂಡು ಒಟ್ಟು ಲೆಕ್ಕದ ವಿಚಾರಣೆಯನ್ನು ಮಾಡುವುದೆಂದು ನೇಮಿಸಿದರು.

(೭) ಪೊಮ್ಮಿನ ಚಾವಡಿ—ಇದರಲ್ಲಿ ಸೀಮೆಯಲ್ಲಿರುವ ತ್ಯಾಜ ಗಾರರು, ಪೌನ್ಯಗಾರರು, ಬ್ರಾಹ್ಮಣರು, ಅಧಿಕಾರಸ್ಥರು, ತುರು ಕರು ಮುಂತಾದ ಜನಗಳು ವ್ಯಾಪಾರವನ್ನು ತರುವೆಲ್ಲಿಯೂ, ಕೂಪುವೆಲ್ಲಿಯೂ, ಸರಕಾರದ ತೀರ್ಪು ಆಗದಿದ್ದ ಪದಾರ್ಥ ಗಳನ್ನು ತೆಗೆದುಕೊಳ್ಳುವೆಲ್ಲಿಯೂ, ಅರ್ಧ ಸುಂಕವನ್ನು ತೆಗೆದುಕೊಳ್ಳುವುದೆಂದು ನಿಬಂಧನೆ ಮಾಡಿದರು.

(೮) ತೊಡಾಯದ ಚಾವಡಿ—ಇದರಲ್ಲಿ ಪೊಮ್ಮಿನ ಐವಜೆನಲ್ಲಿ ಶ್ರೀರಂಗ ಪಟ್ಟಣವಲ್ಲಿ ಮಾತ್ರ ಅರ್ಧ ಐವಜು ತೆಗೆದುಕೊಳ್ಳುವಂತೆ ಕಟ್ಟು ಮಾಡಿದರು.

(೯) ಪಟ್ಟಣದ ಹೋಬಳಿ ಅಷ್ಟಗ್ರಾಮದ ಚಾವಡಿ—ಇಲ್ಲಿ ತಾವು ಪೂರ್ವದಲ್ಲಿ ಮಾಡಿಸಿರುವ ಚಿಕ್ಕದೇವರಾಜಸಾಗರವೆಂಬ ಕಾಲುವೆಗ ೮ ಹೋಬಳಿಗಳನ್ನು ಸೇರಿಸಿ ಪಟ್ಟಣದ ಹೋಬ ಳಿಯು ಅಷ್ಟಗ್ರಾಮದ ಗಡಿ ಎಂಬುದಾಗಿ ನಿಬಂಧನೆ ಮಾಡಿದರು.

(೧೦) ಮೈಸೂರ ಹೋಬಳಿ ಅಷ್ಟಗ್ರಾಮದ ಚಾವಡಿ—ಇಲ್ಲಿ ದೇವ ನಾಲೆ ಕಾಲುವೆಗೆ ೮ ಹೋಬಳಿಗಳನ್ನು ಸೇರಿಸಿ ಮೈಸೂರ ಹೋಬಳಿಯು ಅಷ್ಟಗ್ರಾಮದ ಗಡಿ ಎಂಬುದಾಗಿ ನಿಬಂಧನೆ ಮಾಡಿದರು.

ಈ ಎರಡು ಅಷ್ಟಗ್ರಾಮದ ಗಡಿಗಳಲ್ಲಿಯೂ, ಕಾವೇರಿ ಹೇಮಾ ವತಿ ಮುಂತಾದ ನದಿ ಕಟ್ಟೆ ಕಾಲುವೆಗಳ ಕಾವಲುಗಾರಿ ಮಾಡಿಸಿ, ಆ ನೀರಿನಿಂದ ಆದ ಪೈರುಗಳಲ್ಲಿ ಪಾರದ ಪಟ್ಟು

ವಳಿಯ ಬತ್ತ ಕಬ್ಬು ಮುಂತಾದುದರ ಲೆಕ್ಕವನ್ನು ಬರೆ ವಂತೆ ನೇಮಿಸಿದರು.

(೧೦) ಬೆಣ್ಣೆಯ ಚಾವಡಿ—ಇದರಲ್ಲಿ ಅರಮನೆಯ ದನಕರು ಎಮ್ಮೆ ಕುರಿ ಮುಂತಾದ ಜೀವರಾಸುಗಳ ವಿಚಾರಣೆ ಮಾಡಿಕೊಂಡು, ಅದರಲ್ಲಿ ಬಿದ ಹಾಲು, ಮೊಸರು, ಬೆಣ್ಣೆ ಮುಂತಾದವು ಗಳಲ್ಲಿ ಕೆಲವು ಅರಮನೆಗೆ ಪ್ರತಿದಿನವೂ ಬರುವಂತೆಯೂ, ಕೆಲವು ಕರಗಪಡಿಯಾಗುವಂತೆಯೂ ಕಟ್ಟಳೆ ಮಾಡಿಸಿದರು.

(೧೧) ಪಟ್ಟಣದ ಚಾವಡಿ—ಇದರಲ್ಲಿ ಶ್ರೀರಂಗಪಟ್ಟಣದ ಕೋಟೆ ಕೊತ್ತಲ ಜೀಬಿ ಇವುಗಳನ್ನು ಬಂದೋಬಸ್ತು ಮಾಡು ವುದಕ್ಕೂ, ಅರಮನೆಯ ಕಾಮಗಾರಿಗೂ, ಚಾವಡಿ, ಉಗ್ರಾಣ, ಸರಕಾರಕ್ಕೆ ಸೇರಿದ ಮನೆ, ಮೆದಿನಮನೆ ಇವು ಮುಂತಾದ ವುಗಳ ಕಾಮಗಾರಿಗೂ, ಕಾಮಾಟಿ, ಚಂಗೂಲಿ, ಓಜರು, ಕಲ್ಲುಕೆಲಸದವರು, ಗಾರೆಯವರು ಮೊದಲಾದ ಕೈವಾಡದ ಜನಗಳನ್ನು ನೇಮಿಸಿದ್ದಲ್ಲದೆ, ಕೋಟೆ ಪೇಟೆಗಳನ್ನು ಬಂದೋ ಬಸ್ತು ಮಾಡುವುದಕ್ಕೆ ಕೊತ್ತವಾಲ, ಶ್ಯಾನಭೋಗ, ತಳ ವಾರ, ಕಳ್ಳಭಂಟರು ಮುಂತಾದ ಜನಗಳು ಇರುವಂತೆ ನಿಬಂಧನೆ ಮಾಡಿದರು.

(೧೪) ಬೇಹಿನ ಚಾವಡಿ—ಇದರಲ್ಲಿ ೮೪ ಗಡಿಗಳಲ್ಲಿಯೂ ನಡೆದ ವರ್ತಮಾನಗಳಿಗೆ ತತ್‌ಕ್ಷಣವಲ್ಲಿಯೇ ಅಂಚೆಯ ಹರಿಕಾರನು ಬರೆದ ಅರ್ಜಿಯನ್ನು ಜಾಗ್ರತೆಯಾಗಿ ತಿಳಿಸುವಂತೆಯೂ, ಅರಮನೆಯಿಂದ ಗಡಿಗಳಿಗೆ ಬರೆಸಿದ ನಿರೂಪವನ್ನು ಕಳುಹಿಸು ವಂತೆಯೂ ಕಟ್ಟಳೆಯನ್ನು ಮಾಡಿದರು.

(೧೫) ಸಮುಖದ ಚಾವಡಿ—ಇಲ್ಲಿ ಅರಸುಮಕ್ಕಳು, ಕುಮಾರರು, ನಾತಬರ ಜನಗಳು, ಸಮುದಾಯ ಊಳಿಗದವರು, ಇಟ್ಟ ಊಳಿಗದವರು, ಪರಿಕಾರರು, ಗೊಲ್ಲರು, ಆನೆ, ಕುದುರೆ, ಒಂಟೆ, ಕೋಟಿಯೆತ್ತು, ಗುಡಾರ, ಕನಾತು ಮುಂತಾದ ಅರ ಮನೆಯ ಎಲ್ಲಾ ಊಳಿಗಗಳೂ ಪೂರ್ವ ನಿಬಂಧನೆಯು ಮೇ

ರೆಗೆ ನಡೆವ್ರುವಕ್ಕೆ, ಆಯಾ ಹೋಬಳಿಯ ಗುರಿಕಾರರು ಶ್ಯಾನ ಭೋಗರು ಬರೆಸುವ ಲೆಕ್ಕಗಳನ್ನು ಬರೆದುಕೊಂಡು, ಒಟ್ಟು ಸಮೂಹದ ಗುರಿಕಾರ ಸೋಮೆರಾಜಯ್ಯನಿಗೆ ಮತ್ತು ಸಮೂಹದ ಅಪ್ಪಾಜಯ್ಯನಿಗೆ ತಿಳಿಸುವಂತೆಯೂ, ತಮಗೂ ಶ್ರುತಪಡಿಸುವಂತೆಯೂ ನಿಬಂಧನೆ ಮಾಡಿದರು.

(೧೬) ಬೇವಸ್ಥಾನದ ಚಾವಡಿ—ಇದರಲ್ಲಿ ಸಕಲದೇವಾಲಯಗಳ ಆದಾಯ ವ್ಯಯಗಳನ್ನೂ, ಅಲ್ಲಿ ನಡೆಯತಕ್ಕ ಆಯಕಟ್ಟುಗಳನ್ನೂ, ನೋಡುವಂತೆ ನಿಬಂಧನೆ ಮಾಡಿದರು.

(೧೬) ಕಬ್ಬಿಣದ ಚಾವಡಿ—ಇಲ್ಲಿ ಸೀಮೆಯಲ್ಲಿ ಆಗುವ ಎಲ್ಲಾ ಕಬ್ಬಿಣವನ್ನೂ ಅರಮನೆಗೆ ತೆಗೆದುಕೊಂಡು ಕಬ್ಬಿಣದ ಪಾತ್ರೆಪದಾರ್ಥಗಳನ್ನು ಅರಮನೆಯಿಂದಲೇ ಮಾಡಿಸಿ, ಸುಂಕ ಕೂಡಿ ಬರುವುದೆಂದು ಸರಕಾರದಿಂದಲೇ ಮಾರುವಂತೆ ನಿಬಂಧನೆ ಮಾಡಿದರು.

(೧೮) ಹೊಗೆಸೊಪ್ಪಿನ ಚಾವಡಿ—ಇಲ್ಲಿ ಪಟ್ಟಣದ ಕಸಬೆಯಲ್ಲಿ ರೈತರು ಮಾರುವುದಕ್ಕೆ ತಂದ ಎಲ್ಲಾ ಹೊಗೆಸೊಪ್ಪನ್ನೂ ಅರಮನೆಗೆ ಚಾರಿಯಾಗಿ ತೆಗೆದುಕೊಂಡು ಅರಮನೆಯವರೇ ಮಾರಬೇಕೆಂದು ಗೊತ್ತು ಮಾಡಿದರು.

ಈ ಪ್ರಕಾರ ೧೮ ಚಾವಡಿಗಳನ್ನು ನಿಬಂಧನೆ ಮಾಡಿ, ಚಾವಡಿ ೧ಕ್ಕೆ ಗೊತ್ತುಗಾರ ೧, ದಫ್ತರದವರು ೩, ತಾರತಮ್ಯವಿದ್ದಂತೆ ಗುಮಾಸ್ತೆಯರು, ರಾಯಸದವರು, ದಫೇದಾರ, ಊಳಿಗದವರು, ಗೊಲ್ಲರು, ಕಾವಲುಗಾರ, ದೀವಟಿಗೆಯವನು ಮುಂತಾದ ಜನಗಳನ್ನು ನೇಮಕಮಾಡಿ, ಇನೆದುಗಳಿಗೆಲ್ಲಾ ಅಧಿಕಾರ ತಾರತಮ್ಯವಿದ್ದಂತೆ ಸಂಬಳವನ್ನು ನೇಮಿಸಿ, ಈ ಸಂಬಳಕ್ಕೆ ಅರ್ಧ ನಗದು ಅರ್ಧ ಬತ್ತ ಮುಂತಾದ ದವಸಗಳನ್ನು ಕೊಡುವುದೆಂದು ಕಟ್ಟುಮಾಡಿ, ಈ ಅಧಿಕಾರ ಮಾಡುವ ಜನರುಗಳೆಲ್ಲಾ ತಮ್ಮತಮ್ಮ ಕೆಲಸಗಳಲ್ಲಿ ಅರಮನೆಗೆ ಕೂಡಿಬರುವಂತೆ ಜಾಗರೂಕರಾಗಿರುಕೊಂಡು, ಪ್ರತಿದಿನದಲ್ಲಿಯೂ ದೊರೆಗಳವರ ದನ್ತಧಾವನ ಕಾಲದಲ್ಲಿ ತಮ್ಮತಮ್ಮ ಚಾವಡಿಯಲ್ಲಿ ನಡೆದ ಅಡಳಿತಗಳನ್ನು ವರದಿ ಅರಿಕೆಮಾಡು

ವುದೆಂದು ಕಟ್ಟಳೆಮಾಡಿದರು. ಇದಲ್ಲದೆ ಸೀನಿಯ ಆವಳಿತ ೦೪ ಚಾವಡಿ ಗಳಲ್ಲಿ ನಡೆದ ವರ್ತಮಾನ, ಪಹರೆ ಚೌಕಿ ಮೊದಲು ಮುಬ್ರಿ ಬಂದೋ ಬಸ್ತು ಮುಂತಾದ ವಿಶೇಷ ವರ್ತಮಾನಗಳನ್ನು ಈ ಚಾವಡಿಯ ಅಧಿಕಾರಿ ಗಳ ಮುಖದಿಂದ ತಿಳಿವುದಲ್ಲದೆ ತಮ್ಮ ಅಂತರಂಗದ ಜನಗಳಿಂದಲೂ ರಹಸ್ಯವಾಗಿ ಅರಮನೆಯ ವರ್ತಮಾನವನ್ನು ಸಹ ತಿಳಿದುಕೊಂಡು ಹೆಚ್ಚು ಕಡಮೆಯಿದ್ದಲ್ಲಿ ಅವರ ಬಂದೋಬಸ್ತನ್ನು ಮಾಡಿಸುತ್ತಿದ್ದರು.

ನವಕೋಟಿ ನಾರಾಯಣ ಎಂಬ ಬಿರುದನ್ನು ಧರಿಸಿದ್ದು.—ದೊರೆಗಳವರು ಪ್ರತಿದಿನದ ನಿತ್ಯದಾನ, ಗೋದಾನ, ದಂಪತಿಪೂಜೆ, ಗೋಪೂಜೆ, ಏಕಾದಶೀ ನಿಯಮ, ಕೃಷ್ಣ ಜಯಂತಿ ಮುಂತಾದ ಅನೇಕ ವ್ರತ ದಾನಧರ್ಮಗಳನ್ನು ಮಾಡಿ, ಸತ್ಕೀರ್ತಿಯನ್ನು ಪಡೆಯುತಲಿರುವ ಸಮಯದಲ್ಲಿ, ವ್ಯಾಘ್ರ ವೆರಾಹ ಭಲ್ಲೂಕ ಸರ್ಪ ಮುಂತಾದ ಅರಣ್ಯದ ದುಷ್ಟಮೃಗಗಳು ಕೂಡ ಚಿಕ್ಕ ದೇವರಾಜಒಡೆಯರವರ ಆಜ್ಞೆಯನ್ನು ಮೀರದೆ ನಡೆದುಕೊಳ್ಳುತ್ತಿದ್ದವು. ಈ ಪ್ರಕಾರವಾಗಿ ಅನೇಕ ನಿಬಂಧನೆಗಳನ್ನು ಮಾಡಿ, ದೇಶಕೋಶಗಳನ್ನು ಕಟ್ಟಿ, ಪಾಳೆಯಗಾರರುಗಳನ್ನು ನಿಗ್ರಹಿಸಿ, ಅವರುಗಳ ಶಿರಸ್ಸುಗಳನ್ನು ಮೆಟ್ಟಿ ಆಳುವಂತೆ, ಅವರ ಶಿರಸ್ಸುನಲ್ಲಿದ್ದ ನವರತ್ನಾಭರಣಗಳಿಂದ ಎರಡು ಮುಳ್ಳೊತ್ತುಗಳನ್ನು ಮಾಡಿಸಿ ಮೆಟ್ಟಿಕೊಂಡು, ಪೂರ್ವಕ್ಕಿಂತ ಅತಿಶಯ ವಾಗಿ ಬಿರುದುಗಳನ್ನು ಹಿಡಿಸಿಕೊಳ್ಳುತ್ತಿರಲು ನವರಾತ್ರಿ ಮುಂತಾದ ಉತ್ಸವಕಾಲಗಳಲ್ಲಿ ಅರಸುಗಳು, ಪಾಳೆಯಗಾರರು ಮೊದಲಾದ ಸಕಲ ಜನರೂ ಪೂರ್ವನಿಬಂಧನೆಯ ಮೀರೆಗೆ ನಡೆದುಕೊಳ್ಳುತ್ತಿದ್ದರು. ಆಗ ತನ್ನಲ್ಲಿದ್ದ ವಸ್ತ್ರಾಭರಣ ದ್ರವ್ಯಗಳನ್ನು ಲೆಕ್ಕಮಾಡಿಸಿ ನೋಡಲು, ನವಕೋಟಿ ದ್ರವ್ಯವಾಗಿದ್ದುದರಿಂದ ಹಿಂದೆ ಯಾರೂ ಪಡೆಯದಿರುವ ಕೀರ್ತಿ ಯನ್ನು ಸಂಪಾದಿಸಿ, ಉತ್ಸವಕಾಲದಲ್ಲಿ ನವಕೋಟಿನಾರಾಯಣ ಎಂಬ ಬಿರುದಾಗಿ ಹೊಗಳಿಸಿಕೊಳ್ಳುತ್ತ ಸುಖದಿಂದ ಪ್ರಜಾಪಾಲನೆ ಮಾಡುತ್ತಿದ್ದರು.

ಇವರ ಪುತ್ರರಾದ ಕಂಠೀರವಒಡೆಯರವರ ಸಂಸ್ಕಾರದ ವಿಚಾರ :—ಅನಂತರ ದೊರೆಗಳವರು ತಮ್ಮ ದೇಹಕ್ಕೆ ಬಹಳ ಆಯಾಸವಾಗಲು, ಆಪ್ತರಾದ ಮಂತ್ರಿ ಪ್ರಭೃತಿ ಜನಗಳನ್ನು ಕರೆಸಿ, ತಮ್ಮ ಪುತ್ರರಾದ ಕಂಠೀರವ ಒಡೆಯರವರಿಗೆ ಮೂಕಲಕ್ಷಣವಿಲ್ಲದಿದ್ದರೂ ಮಾತನಾಡದೇ ಇರುವುದರ

ವಿನೆರವನ್ನೂ, ಅವರ ಬುದ್ಧಿ ಪೌರುಷವನ್ನೂ, ಅವರು ಬಾಲ್ಯದಲ್ಲಿ ಮೊತ ನಾಡಿಸುವನ್ನೂ ಅಪ್ಪಣೆಕೊಟ್ಟರು. ಅದೇನೆಂದರೆ:—ಈ ಕುಂಭೀರವ ಬಡೆಯುವವರು ಬಾಲ್ಯದಲ್ಲಿ ೫ ವರ್ಷಗಳವರೆಗೂ ಅನೇಕವಾದ ಔಷಧ ಯಂತ್ರಮಂತ್ರತಂತ್ರ ದೀಪತಾಪ್ರಾರ್ಥನೆ ಮುಂತಾದವುಗಳನ್ನು ಮಾಡಿ ನಿದರೂ ಮೊತನಾಡದೆ ಇದು ದರಿಂದ, ಬಹು ಚಿಂತಾಕ್ರಾಂತರಾಗಿ ಯಾರು ಇವರಿಂದ ಮೊತನಾಡಿಸುವರೋ ಅವರಿಗೆ ಗ್ರಾಮ ಭೂಮಿಗಳನ್ನು ಕೊಟ್ಟು, ಬಹು ಮರ್ಯಾದೆಯನ್ನು ಮಾಡುವೆವು ಎಂದು ನಾವು ಸಭೆ ಯಲ್ಲಿ ಹೇಳಿದ ಮಾತುಗಳು ದೇಶದಲ್ಲಿ ಪ್ರಚಾರವಾದ ಬಳಿಕ, ಹೆಗ್ಗಡ ದೇವನಕೂಟದ ಗೋಪಾಲಭಟ್ಟನೆಂಬ ಬ್ರಾಹ್ಮಣನು ಬಹುದಿವಸ ಅನಶನ ಮುಂತಾದ ನೇಮಗಳಿಂದ ಸೂರ್ಯೋಪಾಸನೆಯನ್ನು ಮಾಡಲಾಗಿ, ಆ ಬ್ರಾಹ್ಮಣನಿಗೆ ಸೂರ್ಯನಾರಾಯಣನು ಪ್ರಸನ್ನನಾದನು. ಆಗ ಆ ಬ್ರಾಹ್ಮಣನು ಬೊರೆಗಳವರ ಪುತ್ರರಿಂದ ಮೊತನಾಡಿಸುವದಕ್ಕೆ ತನ್ನಿಂದ ಆದೀತ? ಎಂಬುದಾಗಿ ಪ್ರಾರ್ಥನೆಮಾಡಿ ಮಲಗಿಕೊಂಡಿರುವ ಸಮಯದಲ್ಲಿ, ಸೂರ್ಯನಾರಾಯಣ ದೇವರು "ಈ ಕಾರ್ಯವು ನಿನ್ನಿಂದ ಆಗುವುದು" ಎಂದು ಸ್ವಪ್ನದಲ್ಲಿ ಅಪ್ಪಣೆಕೊಟ್ಟರು. ಆ ಬ್ರಾಹ್ಮಣನು ಶ್ರೀರಂಗ ಪಟ್ಟಣಕ್ಕೆ ಬಂದು, ತಾನು ಮೊತನಾಡಿಸುತ್ತೇನೆ ಎಂದು ನಮಗೆ ಜನಗಳ ಮುಖದಿಂದ ಶ್ರುತಪಡಿಸಲು, ನಾವು ಆ ಬ್ರಾಹ್ಮಣನನ್ನು ಕರೆಸಿ, ಮೊತ ನಾಡಿಸಬಹುದೆಂದು ಹೇಳಿದೆವು. ಅನಂತರ ಆ ಬ್ರಾಹ್ಮಣನು ಮತ್ತೆ ಬಂದು ಮೂಡಲದವರೆಗೂ ಅನೇಕನ ವ್ರತದಿಂದ ಸೂರ್ಯಪ್ರಾರ್ಥನೆಮಾಡಿ, ಜಪ ತರ್ಪಣ ಮುಂತಾದವನ್ನು ಆಚರಿಸಲು, ಸೂರ್ಯನಾರಾಯಣ ದೇವರು ಪ್ರಸನ್ನರಾಗಿ ನಾಳೆಯ ದಿವಸ ಮೊತನಾಡಿಸೆಂದು ಸ್ವಪ್ನ ದಲ್ಲಿ ಅಪ್ಪಣೆಕೊಟ್ಟರು. ಆಗ ಆಬ್ರಾಹ್ಮಣನು ಬಂದು ಈ ದಿವಸ ಮೊತನಾಡಿಸುತ್ತೀನೆಂದು ತಿಳಿಸಿದನು. ಅನಂತರ ನಮ್ಮ ಅಂತಃಪುರದ ಸ್ತ್ರೀಯರುಗಳಿಂದಲೂ, ಕೆಲವೆರು ಆಪ್ತಜನಗಳಿಂದಲೂ ಒಡಗೂಡಿ, ನಮ್ಮ ಪುಟ್ಟಸ್ವಾಮಿಯವರನ್ನು ಕರೆಸಿ, ವಿಭೂತಿ ಫಲಮಂತ್ರಾಕ್ಷತೆ ಯನ್ನೂ ತೀರ್ಥಪ್ರಸಾದವನ್ನೂ ಕೊಡಿಸಿ, ಮೊತನಾಡಿಸೆಂದು ನಾವು ಹೇಳಲು, ಆ ಬ್ರಾಹ್ಮಣನು ಸೂರ್ಯಪ್ರಾರ್ಥನೆಯನ್ನು ಮಾಡಿ, ಪುಟ್ಟ

ಸ್ವಾಮಿಯವರನ್ನು ಕುರಿತು ಮಾತನಾಡಬೇಕೆಂದು ಹೇಳಿದ ಬಹನೆಯೇ, ಇವರು ತಮ್ಮ ಜನ್ಮಾಂತರ ವೃತ್ತಾಂತವನ್ನು ಹೇಳುವುದೇನೆಂದರೆ— 'ನಾನು ಪೂರ್ವಜನ್ಮದಲ್ಲಿ ಯೋಗಾಭ್ಯಾಸವನ್ನು ಮಾಡಿಕೊಂಡಿದ್ದ ಸಮಯದೊಳು, ಯೋಗಭ್ರಷ್ಟನಾದ್ದರಿಂದಲೂ ನನ್ನ ದುಷ್ಕರ್ಮಗಳಿಂದಲೂ ಕುಂಬಾರನ ಜನ್ಮವನ್ನು ತಾಳಿ, ಕಾವೀಕ್ಷೇತ್ರ ಮಣಿಕರ್ಣಿಕಾಘಟ್ಟದಲ್ಲಿ ಮಹಾಯೋಗಿಯಾದ ಕೃಷ್ಣಭಟ್ಟನೆಂಬ ಬ್ರಾಹ್ಮಣನ ಶುಶ್ರೂಷೆಯನ್ನು ಮಾಡಿಕೊಂಡು, ಭಗವದ್ಗೀತಾರ್ಥವನ್ನು ಕೇಳುತ್ತ, ಆ ಬ್ರಾಹ್ಮಣನಿಗೆ ನಿತ್ಯದಲ್ಲಿಯೂ ಹಾಲನ್ನು ನನ್ನ ಮನೆಯಿಂದ ತಂದುಕೊಡುತ್ತಿದ್ದೆನು. ಒಂದುದಿನ ಆ ಬ್ರಾಹ್ಮಣನು ಗೀತಾಪುಸ್ತಕವನ್ನು ತಾನು ಕುಳಿತಿದ್ದ ಸ್ಥಳದಲ್ಲಿ ಮರೆತು ಬಿಟ್ಟುಹೋಗಲು, ಆ ಪುಸ್ತಕವನ್ನು ನಾನು ತೆಗೆದುಕೊಂಡು ಕ್ರಯಕ್ಕೆ ಕೊಟ್ಟು, ಆ ಹಣದಿಂದಲೇ ಹಾಲನ್ನು ತಂದುಕೊಟ್ಟೆನು. ಆದುದರಿಂದ ನನಗೆ ಈ ಜನ್ಮದಲ್ಲಿ ಪುಸ್ತಕಾಪಹಾರದೋಷದಿಂದ ಮೂಕತ್ವವು ಬಂದಿದೆ. ನನ್ನ ಪೂರ್ವಜನ್ಮಸುಕೃತದಿಂದ ದೊರೆಗಳವರ ಉದರದಲ್ಲಿ ಜನಿಸಿದೆನು. ನನಗೆ ಶೂದ್ರಜನ್ಮ ಬಂದಿದ್ದಾಗ ಭಗವದ್ಗೀತಾರ್ಥವನ್ನು ಹೇಳಿದ ಆ ಬ್ರಾಹ್ಮಣನು ಮಹಾಯೋಗಿಯಾಗಿದ್ದರೂ ಶೂದ್ರನಿಗೆ ಜ್ಞಾನೋಪದೇಶವನ್ನು ಮಾಡಿದುದರಿಂದ ಯೋಗಭ್ರಷ್ಟನಾಗಿ, ಮುಂದೆ ೫೦ನೆಯ ವರ್ಷದಲ್ಲಿ ನನ್ನ ಹೊಟ್ಟೆಯಲ್ಲಿ ಜನಿಸುವನು ಜನಿಸಿದ ಆ ಮಗುವಿಗೆ ಕೃಷ್ಣರಾಜನೆಂದು ಹೆಸರನ್ನಿಡುವುದು. ಮತ್ತು ಮುಂದೆ ನಾವು ದೊರೆತನವನ್ನು ಮಾಡುವಾಗ, ನೀವುಗಳು ವಿಶೇಷ ವಿಷಯಗಳನ್ನು ಕೇಳುವಿರೋ ಅವುಗಳನ್ನೆಲ್ಲಾ ನಮ್ಮ ಮನಸ್ಸಿಗೆ ತಂದುಕೊಂಡು, ಯುಕ್ತಾಯುಕ್ತ ಪರ್ಯಾಲೋಚನೆಯನ್ನು ಮಾಡಿ, ಹಸ್ತ ಮುಖನೇತ್ರ ಸಂಜ್ಞೆಗಳಿಂದಲೇ ಉತ್ತರವನ್ನು ಹೇಳುವುದಲ್ಲದೆ, ನಮಗೆ ಅಕ್ಷರಜ್ಞಾನ ವಿರುವುದರಿಂದ ವಿಶೇಷವಾದ ಮಾತುಗಳನ್ನು ಹೇಳಬೇಕಾದರೆ ಬರೆದು ತೋರಿಸುವೆವು. ನಮಗೆ ಈಗ ಮಾತನಾಡುವ ಶಕ್ತಿಯು ಭಗವಂತನಾದ ಸೂರ್ಯನಾರಾಯಣನ ಅನುಗ್ರಹದಿಂದ ಉಂಟಾಯಿತು. ಈ ಜನ್ಮದಲ್ಲಿ ಇನ್ನು ಮೇಲೆ ನಾವು ಮಾತನಾಡುವುದಿಲ್ಲ' ಎಂದುಹೇಳಿ, ಮೊದಲಿನಂತೆ ಮೂಕತ್ವವನ್ನೇ ವಹಿಸಿದರು. ಅನಂತರ ತಮ್ಮ ಪುತ್ರರಿಂದ ಮಾತನಾಡಿ

ಸಿದ ಗೋಪಾಲಭಟ್ಟನೆಂಬ ಬ್ರಾಹ್ಮಣನನ್ನು ನಿನಗೆ ಏನು ಬೇಕೆಂದು ನಾವು ಕೇಳಿದ್ದಕ್ಕೆ ಅತನು ತನಗೆ ಹೆಗ್ಗಡದೇವನಕೋಟೆಯಲ್ಲಿ ಸ್ಥಳದ ಪೌರೋಹಿತ್ಯ ಮಾತ್ರವಿದೆ, ಆ ಸೀಮೆಯ ಪೌರೋಹಿತ್ಯವು ಆಗಬೇಕೆಂಬ ದಾಗಿ ಕೇಳಿಕೊಂಡನು. ಪೂರ್ವದಲ್ಲಿ ಜೈನರು ಮಾಡಿಸುತ್ತಿದ್ದ ಹೆಗ್ಗಡದೇವನಕೋಟೆ ಸೀಮೆಯ ಪೌರೋಹಿತ್ಯವನ್ನು ತೆಗೆದು, ಆ ಗಡಿಯ ಸುಬೇದಾರ ರೈತರು ಸೆಟ್ಟಿಸೆರ್ತಕರು ಮುಂತಾದ ಸಕಲ ಜನರಿಗೂ ಈ ಬ್ರಾಹ್ಮಣನ ಪುತ್ರಪೌತ್ರ ಪಾರಂಪರ್ಯವಾಗಿ ಹೆಗ್ಗಡದೇವನಕೋಟೆ ಸೀಮೆಯ ಪೌರೋಹಿತ್ಯವನ್ನು ನಡೆಸಿಕೊಂಡು ಬರುವಂತೆ ಒಟ್ಟು ನಿರೂಪವನ್ನು ಬರೆಸಿದುದಲ್ಲದೆ, ಇದೇಮೇರೆಗೆ ಅನುಭವಿಸಿಕೊಂಡು ಬರುವುದೆಂದು ಆ ಬ್ರಾಹ್ಮಣನಿಗೆ ತಾಮ್ರಶಾಸನವನ್ನು ಕೊಟ್ಟು, ವಸ್ತ್ರಾಭರಣ ಮುಂತಾದ ಮರ್ಯಾದೆಯನ್ನು ಮಾಡಿ ಕಳುಹಿಸಿರುವೆವು ನಮ್ಮ ಅಂತಃಪುರದ ಸ್ತ್ರೀ ಜನರಿಗೂ ನಿಮಗಳಿಗೂ ತಿಳಿವೇಯಿದೆ. ಆದುದರಿಂದ ಇವರು ಬಾಲ್ಯದ ೫ನೆಯ ವರ್ಷದಲ್ಲಿ ಹೇಳಿದ ಮೇರೆಗೆ ಇವರಿಗೆ ೫ನೆಯ ವರ್ಷದಲ್ಲಿ ಜನಿಸಿದ ನಮ್ಮ ಮೆರಿಪುಟ್ಟಸ್ವಾಮಿಯವರಿಗೆ ಶ್ರೀಚಾಮುಂಡೇಶ್ವರಿ ಅಮ್ಮನವರೇ ನಮ್ಮ ಕುಲದೇವತೆ ಆದರೂ, ಬಾಲ್ಯದಲ್ಲಿ ನಮ್ಮ ಪುತ್ರರು ಹೇಳಿದಮಾತು ಅನುಭವಕ್ಕೆ ಬಂದುದರಿಂದ, ಕೃಷ್ಣರಾಜನೆಂಬುದಾಗಿ ನಾಮಕರಣವನ್ನು ಮಾಡಿದೆವೆ. ನಮ್ಮ ತರುವಾಯ ಈ ಕಂಠೀರವೆಬಡೆಯರವರಿಗೆ ಪಟ್ಟಾಭಿಷೇಕವನ್ನು ಮಾಡಿಸಿ, ನೀವೆಲ್ಲರೂ ಇವರು ಮಾತನಾಡುವದಿಲ್ಲವೆಂಬದಾಗಿ ರಾಜಕಾರ್ಯದಲ್ಲಿ ಪೆಬಕ್ಕು ಕಡಮೆ ನಡೆಸದೆ, ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಜಿಕ್ಕಾಗಿ ಮಾಡಿಸುತ್ತಾ, ಪಾಳಯಗಾರರು ಮುಂತಾದ ತುಂಟಜನರುಗಳಿಗೆ ಅವಕಾಶವಾಗದಂತೆಯೂ, ಸ್ವಾಮಿದ್ರೋಹಿಗಳನಿಸಿಕೊಳ್ಳದಂತೆಯೂ, ಜಾಗರೂಕರಾಗಿ ನಮ್ಮ ನಿಬಂಧನೆಯನ್ನು ಮೀರಿ ನಡೆಯದೆ ಇವರ ಆಜ್ಞಾನುಸಾರವಾಗಿ ಇರುವುದು ಎಂದು ಅಪ್ಪಣೆಕೊಟ್ಟರು.

ನಿರ್ಯಾಣ.—ಅನಂತರ ಸ್ವಲ್ಪ ದಿವಸದ ಮೇಲೆ ಶಾ॥ ಶಕ ೧೬೨೬ನೆ (A.D. 1704) ತಾರಣ ಸಂವತ್ಸರದ ಕಾರ್ತಿಕ ಬಹುಳ ೫ಂ ಸೂರ್ಯಗ್ರಹಣ ಪುಣ್ಯಕಾಲ ಸೂರ್ಯೋದಯವಾದ ೧ ಗಳಿಗೆಯಲ್ಲಿ ಚಿಕ್ಕದೇವರಾಜಒಡೆಯರವರು ಶ್ರೀರಾಮಚಂದ್ರ ಸ್ವಾಮಿಯವರ ಪಾದಾರವಿಂದದಲ್ಲಿ

ಐಕ್ಯವನ್ನು ಹೊಂದಿದರು. ಅನಂತರ ಇವರ ಪುತ್ರರಾದ ಕಂಠೀರವ ಒಡೆಯರವರು ಶ್ರೀರಂಗಪಟ್ಟಣದೊಳು ಹೊಸದಾಗ ಶೃಂಗಾರತೋಟಿದಲ್ಲಿ, ತಮ್ಮ ಕರ್ತವ್ಯವಾಗಿ ದಹನ ಮೊಂತಾದ ಉತ್ತರ ಕ್ರಿಯೆಗಳನ್ನು ದೊರೆನಹಳ್ಳಿ ನರಸಯ್ಯನ ಕೈಯಿಂದ ಮಾಡಿಸಿ, ಅವನಿಗೆ ಇವರು ಪುರೋಹಿತಿಕೆಯನ್ನು ಒಪ್ಪಿಸಿಕೊಳ್ಳುತ್ತಿದ್ದ ಚಿನ್ನದ ಹರಿವಾಣ ಚಿನ್ನದ ಚಂಬು ಮೊಂತಾದ ಪದಾರ್ಥಗಳನ್ನೂ ಕೆಲವು ವಸ್ತ್ರಾಭರಣ ವ್ರನ್ಯಗಳನ್ನೂ ಕೊಟ್ಟು, ಇವರ ಅಸ್ಥಿಯನ್ನು ಕಾಶಿಗೆ ಕಳುಹಿಸಿದುದಲ್ಲದೆ, ಇವರ ದಹನವಾದ ಬಳಿಯಲ್ಲಿ ಗುಡಿಯನ್ನು ಕಟ್ಟಿಸಿ, ಕೃಷ್ಣಸ್ವಾಮಿ ವಿಗ್ರಹವನ್ನು ಪ್ರತಿಷ್ಠೆ ಮಾಡಿಸಿ, ತಸದೀಕನ್ನು ಂಟುಮಾಡಿದರು. ಇವರ ಪತ್ನಿಯವರುಗಳು ಸಹಗಮನ ಮಾಡಲಿಲ್ಲ.

	ವರ್ಷ	ತಿಂಗಳು	ದಿನ
ಈ ಚಿಕ್ಕದೇವರಾಜಒಡೆಯರವರ ಜೀವಿತಕಾಲ	೫೯	೧	೧೯
ಇವರ ಆಳಿಕೆ	೫೧	೪	೩

೯ನೆಯ ಅಧ್ಯಾಯ.

ಹದಿನೈದನೆಯ ಆಳಿಕೆ.

ಕಂಠೀರವನರಸರಾಜಒಡೆಯರವರು (A.D. 1704—A.D. 1714)

ಜನನ.—ಶಾ॥ ಶಕ ೧೫೯೫ನೇ (A.D. 1673) ಪರೀಧಾವಿ ಸಂವತ್ಸರದ ಪುಷ್ಯ ಬಹುಳ ೪ ಶುಕ್ರವಾರ ಮಖಾ ನಕ್ಷತ್ರ ೩ನೇ ಪಾದ ಸೂರ್ಯೋದಯವಾದ ೨೧ ಗಳಿಗೆಗೆ ಕಲ್ಲುವ ವೃಷಭ ಲಗ್ನದಲ್ಲಿ ಚಿಕ್ಕದೇವರಾಜ ಒಡೆಯರವರ ಹಿರಿಯ ಧರ್ಮಪತ್ನಿಯವರಾದ ಯಳಂದೂರು ದೇವಾಜಮ್ಮಣ್ಣಿಯವರ ಗರ್ಭ ಸುಧಾಂಬುಧಿಯಲ್ಲಿ ಜನಿಸಿದರು.

ಪಟ್ಟಾಭಿಷೇಕ.—ಶಾ॥ ಶಕ ೧೬೨೬ನೇ (A.D. 1704) ತಾರಣ ಸಂ॥ ನೂರ್ಗತಿರ ಕುಡ್ಡ ೧೫.

ಇವರಿಗೆ ತಂದೆಯವರೇ ಸಕಲ ವಿದ್ಯೆಗಳನ್ನು ಕಲಿಸಿ ಎರಡು ವಿವಾಹಗಳನ್ನು ಮಾಡಿಸಿದರು.

ಪತ್ನಿಯರು.—ಶಾ॥ ಶಕ ೧೬೧೩ನೇ (A.D. 1693) ಶ್ರೀಮುಖ ಸಂ॥ ವೈಶಾಖ ಶುದ್ಧ ೧೦ಯಲ್ಲಿ (೧) ಯಳಂದೂರು ಲಿಂಗರಾಜೇ ಅರಸಿನವರ ಕುಮಾರತಿ ಚಾಮುಮ್ಮಣ್ಣಿಯವರು, (೨) ಕಲ್ಲಹಳ್ಳಿ ಬಸವರಾಜೇ ಅರಸಿನವರ ಕುಮಾರತಿ ಚಿಲುವಾಂಬಮ್ಮಣ್ಣಿಯವರು.

ಸಂತಾನ.—(೧) ಯಳಂದೂರು ಚಾಮುಮ್ಮಣ್ಣಿಯವರಲ್ಲಿ ಒಬ್ಬ ಪುತ್ರರು ಜನಿಸಿ ಬಾಲ್ಯದಲ್ಲಿಯೇ ತೀರಿಹೋದರು. (೨) ಚಿಲುವಾಜಮ್ಮಣ್ಣಿಯವರಲ್ಲಿ ದೊಡ್ಡ ಕೃಷ್ಣರಾಜ ಒಡೆಯರವರು.

ಪ್ರಧಾನ ಲಿಂಗಣ್ಣಯ್ಯ.—ಚಿಕ್ಕದೇವರಾಜ ಒಡೆಯರವರ ಆಳಿಕೆಯಲ್ಲಿ ಒಟ್ಟು ಕರಣಿಕತನವನ್ನು ಮಾಡುತ್ತಿದ್ದ ಲಿಂಗಣ್ಣಯ್ಯನು ಕಾಲಿಗೆ ಹೊರಟುಹೋದನಂತರ ಅವನ ಮಗ ಲಿಂಗಣ್ಣಯ್ಯನಿಗೆ ಪ್ರಧಾನತನವನ್ನು ಕೊಟ್ಟರು.

ಸೇನಾಧಿಪತ್ಯವನ್ನು ಪಡೆದ ಜನಗಳು.—ಪೂರ್ವದಲ್ಲಿ ಸೇನಾಧಿಪತ್ಯವನ್ನು ಮಾಡುತ್ತಿದ್ದ ದೇವರಾಯದುರ್ಗದ ದಾಸರಾಜಯ್ಯನ ಅಧಿಕಾರವನ್ನು ತೆಗೆದು ಕಲ್ಲಹಳ್ಳಿ ಕಾಂತಯ್ಯನಿಗೆ ನೇಮಕ ಮಾಡಿದರು. ಈ ಕಾಂತಯ್ಯನು ಚಿಕ್ಕಬಳ್ಳಾಪುರದ ಜಗಳದಲ್ಲಿ ತೀರಿಹೋದುದರಿಂದ ಇವನ ಮಗ ನಂಜರಾಜಯ್ಯನಿಗೆ ನೇಮಕಮಾಡಿದರು. ಈ ನಂಜರಾಜಯ್ಯನ ಮಗ ಬಸವರಾಜಯ್ಯನು ಬುದ್ಧಿವಂತನಾದುದರಿಂದ ಅವನಿಗೆ ತಂದೆಯ ಅಧಿಕಾರವನ್ನೇ ನೇಮಕಮಾಡಿದರು. ಅನಂತರ ಈ ಬಸವರಾಜಯ್ಯನ ಅಧಿಕಾರವನ್ನು ತೆಗೆದು ನಂಜರಾಜಯ್ಯನೆಂಬವನಿಗೆ ಕೊಟ್ಟರು. ಬಳಿಕ ಈ ನಂಜರಾಜಯ್ಯನ ಅಧಿಕಾರವನ್ನು ತೆಗೆದು ಕಳಲಿ ದೊಡ್ಡಯ್ಯನ ಮಗ ವೀರರಾಜಯ್ಯನಿಗೆ ನೇಮಕ ಮಾಡಿದರು.

ಪಾಳೆಯಗಾರರನ್ನು ಜಯಿಸಿ ಖಂಡಣೆಯನ್ನು ಗೊತ್ತುಮಾಡಿದ ಸೀಮೆಗಳು.—

ಶಾ॥ ಶಕ ೧೬೩೨ನೇ (A.D. 1710) ವಿಕೃತಿ ಸಂವತ್ಸರದ ಪುಷ್ಯ ಶುದ್ಧ ೧೦ಯಲ್ಲಿ ಚಿಕ್ಕಬಳ್ಳಾಪುರಕ್ಕೆ ಮುತ್ತಿಗೆ ಹಾಕಿ ಅಲ್ಲಿನ ಪಾಳೆಯಗಾರ ಬ್ಯೋಕೇಗೌಡನನ್ನು ನಿಗ್ರಹಿಸಿ ಖಂಡಣೆಯ ಹಣವನ್ನು ನಿಗದಿ ಮಾಡಿಕೊಂಡರು.

ಈ ಮೊಘ ಮೊಸದಲ್ಲಿ ದೊಡ್ಡ ಬಳ್ಳಾಪುರದ ಪಾಳಯಗಾರನನ್ನು ಜೈಸಿ ಖಂಡಣೆಯನ್ನು ನಿಷ್ಕರ್ಷೆ ಮಾಡಿಕೊಂಡರು.

ಶಾ॥ ಶಕ ೧೬೩೩ನೇ (A.D. 1711) ಖರ ಸಂವತ್ಸರದ ಚೈತ್ರ ಮೊಸದಲ್ಲಿ ಸೀರ್ಯಕ್ಕೆ ಹೋಗಿ ಮುತ್ತಿಗೆ ಹಾಕಿ ವಿಜಾಪುರದ ಪಾದಷಾಹರ ಕಡೆಯ ತುರುಕರ ಸಂಗಡ ಯುದ್ಧಮಾಡಿ ಅವರುಗಳನ್ನು ಜಯಿಸಿ ಪೊಗದಿಯನ್ನು ನಿಷ್ಕರ್ಷಮಾಡಿಕೊಂಡರು.

ಈ ವೈಶಾಖ ಮೊಸದಲ್ಲಿ ಮಿಡಗೇಶಿ ಪಾಳಯಗಾರನನ್ನು ಹೊಡೆದು ಖಂಡಣೆಹಣವನ್ನು ನಿಗದಿ ಮಾಡಿಕೊಂಡರು.

ಈ ಪಾಳಯಗಾರರನ್ನೆಲ್ಲಾ ಯುದ್ಧದಲ್ಲಿ ಜಯಿಸಿ ಅವರಲ್ಲಿದ್ದ ಆನೆ ಕುದುರೆ ವಸ್ತ್ರ ಆಭರಣ ದ್ರವ್ಯ ಮುಂತಾದ ಅನೇಕ ಪದಾರ್ಥಗಳನ್ನು ಶ್ರೀರಂಗಪಟ್ಟಣಕ್ಕೆ ತೆಗೆದುಕೊಂಡು ಬಂದರು.

ರಾಜ್ಯಭಾರ.—ಈ ಕಂಠೀರವ ಮಹಾರಾಜ ಒಡೆಯರವರು ಪಾಜಿತನದಲ್ಲಿದ್ದವರಾದರೂ, ಹಸ್ತ ನೇತ್ರ ಮುಖ ಸಂಜ್ಞೆಯಿಂದಲೇ ರಾಜ್ಯತಂತ್ರವನ್ನು ಚೆನ್ನಾಗಿ ನಡೆಸಿಕೊಂಡು, ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಮಾಡಿ, ಪೂರ್ವದವರು ಮಾಡಿದ ಅಯಕಟ್ಟಿನ ಮೇರೆಗೆ ಸಕಲ ಕಾರ್ಯಗಳನ್ನೂ ನಡೆಸುತ್ತ ಶ್ರೀರಂಗಪಟ್ಟಣದಲ್ಲಿ ರತ್ನಸಿಂಹಾಸನಾರೂಢರಾಗಿ ನವರಾತ್ರಿ ಮುಂತಾದ ಉತ್ಸವಕಾಲಗಳಲ್ಲಿ ರಾಜಾಧಿರಾಜ ರಾಜ ಪರಮೇಶ್ವರಾದಿ ಬಿರುದುಗಳಿಂದ ಹೊಗಳಿಸಿಕೊಳ್ಳುತ್ತ ಸುಖದಿಂದ ಪೃಥ್ವೀ ಸಾಮ್ರಾಜ್ಯವೆಂ ಗೈಯುತ್ತಿದ್ದರು.

ಧರ್ಮಕಾರ್ಯಗಳು.—ಇವರು ತಮ್ಮ ಪೂರ್ವಿಕರು ಮಾಡಿದ ದೇವದಾಯ ಬ್ರಹ್ಮದಾಯ ಮಠಗಳು ಸತ್ರಗಳು ಇವುಗಳನ್ನು ಪೂರ್ವ ನಿಬಂಧನೆಯಂತೆ ನಡೆಸಿದುದಲ್ಲದೆ, ಜೋಗಿ ಜಂಗಮ ಫಕೀರ ಮುಂತಾದ ಜನಗಳಿಗೂ ಜೀವನವನ್ನು ಕಲ್ಪಿಸಿ, ಮೇಲುಕೋಟೆಯಲ್ಲಿ ಸ್ವನಾಮಾಂಕಿತವಾಗಿ ಬಿಂದು ಮಾಧವನ ಗುಡಿಯನ್ನು ಕಟ್ಟಿಸಿ, ತಮ್ಮ ಸೀಮೆಯಲ್ಲಿ ಬ್ರಾಹ್ಮಣರು ಮೊದಲಾದ ಜನಗಳಿಗೆ ಭಟ್ಟಮಾನ್ಯ ಮುಂತಾದ ಜೀವನಗಳನ್ನು ಮಾಡಿಕೊಟ್ಟು, ತಮ್ಮಲ್ಲಿ ಪ್ರಧಾನತನವನ್ನು ಮಾಡುತ

ಲಿರುವ ಲಿಂಗಣ್ಣಯ್ಯನ ತಂದೆ ಕರಣಿಕ ಲಿಂಗಣ್ಣಯ್ಯನು ಕರಿಕಲ್ಲು (ಪ್ರತಿನಾಮೇಧೇಯ ಕಂಠೀರವ ಸಮುದ್ರ) ಗ್ರಾಮದಲ್ಲಿ ಪ್ರತಿಷ್ಠೆಯನ್ನು ಮಾಡಿಸಿರುವ ಗಂಗಾವಿಶ್ವೇಶ್ವರ ಗೋಪಾಲಕೃಷ್ಣಸ್ವಾಮಿ ಮೊದಲಾದ ದೇವರ ಸೇವೆಗಳಿಗೂ ಕೆಲವು ಬ್ರಾಹ್ಮಣರ ಜೀವನಾರ್ಥವಾಗಿ ಅಗ್ರಹಾರವೆನ್ನು ಮಾಡುವುದಕ್ಕೂ ಸಹ ಧರ್ಮಪುರ ಮುಂತಾದ ಕೆಲವು ಗ್ರಾಮಗಳನ್ನು ಕರಿಕಲ್ಲು ಗ್ರಾಮದ ಬಳಿ ಇರುವ ಚಿಕ್ಕದೇವರಾಜಸಾಗರವೆಂಬ ಕಾಲುವೆಯ ಕೆಳಗಣ ಗದ್ದೆಗಳನ್ನೂ ಕೆಲವು ತೋಟಗಳನ್ನೂ ಕೊಟ್ಟು, ವರಾಹಮುದ್ರೆ ತಾಮ್ರಶಾಸನಗಳನ್ನು ಸಹ ಬರೆಸಿಕೊಟ್ಟು, ಸತ್ಕೀರ್ತಿಯನ್ನು ಪಡೆದು ಸುಖದಿಂದಿದ್ದರು.

ನಿರ್ಯಾಣ.—ಈ ಸಮಯದಲ್ಲಿ ದೇಹಕ್ಕೆ ಅಯಾಸವಾಗಿ ಶಾ॥ ಶಕ ೧೬೩೬ನೇ (A.D. 1714) ವಿಜಯ ಸಂ॥ ಫಾಲ್ಗುಣ ಶುದ್ಧ ೧೫ಯಲ್ಲಿ ಶ್ರೀರಂಗಪಟ್ಟಣದಲ್ಲಿ ಸ್ವರ್ಗ ಸೋಪಾನವೆನ್ನೇರಿದರು. ಸಹಗಮನವಿಲ್ಲ. ಇವರಿಗೆ ಉತ್ತರ ಕ್ರಿಯೆಗಳನ್ನು ಪುತ್ರಕರ್ತವ್ಯವಾಗಿ ಕೆಂಚನಗೂಡು ಮನೆತನದ ಹಾಲಾಳ ದಾಸರಾಜಯ್ಯನೆಂಬವನು ಮಾಡಿದನು. ಅನಂತರ ಇವರ ಅಸ್ಥಿಯನ್ನು ಕಾಶಿಗೆ ಕಳುಹಿಸಿದರು.

	ವರುಷ	ತಿಂಗಳು	ದಿನ.
ಈ ಕಂಠೀರವ ಮಹಾರಾಜ ಒಡೆಯರವರ ಜೀವಿತಕಾಲ	೪೧	೧	೨೩
ಆಳಿಕೆಯ ಕಾಲ	೯	೩	೦

ಹದಿನಾರನೆಯ ಆಳಿಕೆ.

ದೊಡ್ಡಕೃಷ್ಣರಾಜಒಡೆಯರವರು (A.D. 1714—A.D. 1732).

ಜನನ.—ಶಾ॥ ಶಕ ೧೬೨೪ನೇ (A.D. 1702) ಚಿತ್ರಭಾನು ಸಂವತ್ಸರದ ಜ್ಯೈತ್ರ ಶುದ್ಧ ೧ ಬುಧವಾರ ಅಶ್ವಿನೀ ನಕ್ಷತ್ರ ರಾತ್ರಿ ೧೩। ಗಳಿಗೆಗೆ ನಲ್ಲಿರುವ ಮಕರ ಲಗ್ನದಲ್ಲಿ ಕಂಠೀರವ ಮಹಾರಾಜ ಒಡೆಯರವರ ಧರ್ಮಪತ್ನಿ ಚೆಲುವಾಜಮ್ಮಣ್ಣಿಯವರ ಗರ್ಭಸುಧಾಂಬುಧಿಯಲ್ಲಿ ಜನಿಸಿದರು. ಇವರಿಗೆ ಪಿತೃಭ್ರಾಜಿಯವರಾದ ಚಿಕ್ಕ

ದೇವರಾಜ ಒಡೆಯರವರು ಕೃಷ್ಣರಾಜಒಡೆಯರವರೆಂಬುದಾಗಿ ನಾಮಕರಣವನ್ನು ಮಾಡಿಸಿದರು.

ಪಟ್ಟಾಭಿಷೇಕ.—ಶಾ॥ ಶಕ ೧೬೩೬ನೇ (A.D. 1714) ವಿಜಯ ಸಂ॥ ಫಾಲ್ಗುಣ ಬಹುಳ ೦೩ಯಲ್ಲಿ ಇವರ ಮಾತೃಶ್ರೀ ಜೆಲುವಾಜಮ್ಮಣ್ಣಿಯವರ ಅಪ್ಪಣೆಯ ಮೇರೆಗೆ ಸರ್ವಾಧಿಕಾರಿ ಮುಂತಾದ ಸಾಮಾಜಿಕರು ಇವಂಗೆ ಪಟ್ಟಾಭಿಷೇಕವನ್ನು ಮಾಡಿಸಿದರು.

ಪತ್ನಿಯರು.—(೧) ದುರ್ಮುಖಿ ಸಂವತ್ಸರದ ಚೈತ್ರ ಶುದ್ಧ ೫ಯಲ್ಲಿ ಕಳಲೆ ಚಿಕ್ಕೇ ಅರಸಿನವರ ಕುಮಾರತಿ ದೇವಾಜಮ್ಮಣ್ಣಿಯವರು. ವಿಳಂಬಿ ಸಂ॥ ಮಾರ್ಗಶಿರ ಶುದ್ಧ ೦೪ ಮಂಗಳವಾರದಲ್ಲಿ ಇವರಿಗೆ ಅಷ್ಟನಾಹಿಷಿಯರ ವಿವಾಹಗಳು ಚಿಕ್ಕರಮನೆಯಲ್ಲಿ ಬೆಳೆದವು. (೨) ಮತ್ತು (೩) ಕಳಲೆ ಜೆಲುವೇ ಅರಸಿನವರ ಕುಮಾರತಿಯರು ಇಬ್ಬರು.—ಜೆಲುವಾಜಮ್ಮಣ್ಣಿಯವರು ಮತ್ತು ಕಾಂತಮ್ಮಣ್ಣಿಯವರು. (೪) ಚಿಕ್ಕರಾಜಯ್ಯನವರ ಕುಮಾರತಿ ಜೆಲುವಾಜಮ್ಮಣ್ಣಿಯವರು. (೫) ಕಳಲೆ ಚಿಕ್ಕಕಾಂತಯ್ಯನವರ ಕುಮಾರತಿ ಜೆಲುವಾಜಮ್ಮಣ್ಣಿಯವರು. (೬) ನಿಲಸೋಗೆಯವರಲ್ಲಿ ದಳವಾಯಿ ವೀರರಾಜಯ್ಯನವರ ಕುಮಾರತಿ ದೇವೀರಮ್ಮಣ್ಣಿಯವರು. (೭) ಮೂಗೂರವರಲ್ಲಿ ಅಮಚವಾಡಿ ನಂಜರಾಜಯ್ಯನವರ ಕುಮಾರತಿ ಕಂಪಮ್ಮಣ್ಣಿಯವರು. (೮) ಕೊತ್ತಾಗುಲದ ಲಕ್ಷ್ಮೀಕಾಂತಯ್ಯನವರ ಕುಮಾರತಿ ಕಾಂತಮ್ಮಣ್ಣಿಯವರು. (೯) ಹುಲ್ಲಹಳ್ಳಿ ಚಿಕ್ಕರಾಜಯ್ಯನವರ ಕುಮಾರತಿ ಕೆಂಪನಂಜಮ್ಮಣ್ಣಿಯವರು.

ಸಂತಾನ.—(೧) ಹಿರಿಯ ಕುಟುಂಬ ದೇವಾಜಮ್ಮಣ್ಣಿಯವರಲ್ಲಿ ಒಬ್ಬ ಪುತ್ರರು ಹುಟ್ಟಿ ಬಾಲ್ಯದಲ್ಲಿ ೫ ತಿಂಗಳಲ್ಲಿಯೇ ತೀರಿಹೋದರು ಅನಂತರ ಈ ದೇವಾಜಮ್ಮಣ್ಣಿಯವರಿಗೆ ಸ್ವೀಕೃತ ಪುತ್ರರು.—(೧) ೧೪ ತಿಂಗಳ ಚಾಮರಾಜ ಒಡೆಯರವರು. (೨) ಇಮ್ಮಡಿ ಕೃಷ್ಣರಾಜ ಒಡೆಯರವರು.

ಇವರ ಆಳಿಕೆಯಲ್ಲಿ ಸೇನಾಧಿಪತ್ಯವನ್ನು ಮಾಡಿದವರು.—ಪೂರ್ವದಲ್ಲಿ ಕಂಠೀರವ ಮಹಾರಾಜಬಡೆಯರವರ ಆಳಿಕೆಯಲ್ಲಿ ನೇಮಕವಾಗಿದ್ದ ಕಳಲೆ ವೀರರಾಜಯ್ಯನು ೧೦ ವರ್ಷಗಳು ೬ ತಿಂಗಳು ೧೪ ದಿನ ದಳವಾಯಿತನವನ್ನು ಮಾಡಿದನಂತರ, ಇವನ ಮಗ ದೇವರಾಜಯ್ಯನಿಗೆ ಕೊಟ್ಟನು ಸಂ॥ ಜ್ಯೇಷ್ಠ ಬಹುಳ ೧ಯಲ್ಲಿ ನೇಮಕ ಮಾಡಿದರು.

ನಂಜರಾಜಯ್ಯನಿಗೆ ಸರ್ವಾಧಿಕಾರವನ್ನು ನೇಮಿಸಿದನು.

ಇವನ ಹೊರತಾಗಿ ನಡೆದ ಯುದ್ಧಗಳು. ಶಾ॥ ಶಕ ೧೬೫೩ನೆ (A.D. 1724) ಕ್ರೋಧಿಸಂವತ್ಸರದಲ್ಲಿ, ಅರ್ಕಾಟು ನವಾಬ ಸಾದುಲ್ಲಾ ಖಾನನ ಕಡೆ ದಿವಾ ವಿದ್ದೋಜಿಫೋರ್ಡೆ ಎಂಬವನು ಬಹಳ ಸೇನೆಯನ್ನು ತೆಗೆದುಕೊಂಡು ಬಂದು, ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿದನು. ರೊರಗಳವರು ಕೋಟೆಯ ಮೇಲಿನಿಂದ ಬಹಳವಾಗಿ ಗುಂಡುಗಳನ್ನು ಹೊಡೆದು ಯುದ್ಧಮಾಡುವ ಸಮಯದಲ್ಲಿ, ಇವರ ಪೆಟ್ಟುಗಳನ್ನು ತಾಳ ಲಾರದೆ ಓಡಿಹೋಗುತಲಿರುವ ಅವರ ದಂಡಿನ ಬೆನ್ನಟ್ಟಿಹೋಗಿ ಯುದ್ಧ ಮಾಡಿ, ಕೆಲವು ಜನಗಳಿಗೆ ಕಿವಿ ಮೂಗುಗಳನ್ನು ಕೊಯಿಸಿ, ಆ ದಂಡಿನ ಲ್ಲಿದ್ದ ಆನೆ ಕುದುರೆ ವಸ್ತ್ರಾಭರಣ ಮುಂತಾದ ಪದಾರ್ಥಗಳನ್ನು ತೆಗೆದುಕೊಂಡು ಬಂದರು. ಆನಂತರ ಪರಾಭವ ಸಂವತ್ಸರದಲ್ಲಿ ಮರಾಟೆ ಯವರಕಡೆ ಬಾಜಿರಾವ್ರು ಎಂಬ ಸರದಾರನು ಬಹಳ ಸೈನ್ಯದೊಡನೆ ಬಂದು, ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿ ಯುದ್ಧ ಮಾಡುವ ಸಮಯ ದಲ್ಲಿ, ಅವರ ದಂಡಿಗೆ ಶ್ರೀರಂಗಪಟ್ಟಣದ ಕೋಟೆಯ ಮೇಲಿನಿಂದ ಕೊಂಪಿ ಫಿರಂಗಿ ಗುಂಡು- ಜಂಜಾಲು ತುಪಾಕಿ ಮೆಕರಡಿಬ್ಬಿ ಜಬರಜಂಗಿ ಬಾಣ ಮುಂತಾದವುಗಳಿಂದ ಹೊಡೆಯುತ್ತಿರಲು, ಆ ಬಾಜಿರಾವ್ರು ತನ್ನ ದಂಡಿನಲ್ಲಿ ಬಹಳ ಜನಗಳು ಪತರಾಮದನ್ನು ನೋಡಿ, ಭಯದಿಂದ ಎದೆ ಗೆಟ್ಟು "ನಾವು ಕಶ್ಮಿಯಲ್ಲಿ ಯುದ್ಧಮಾಡುವೆವೆರು, ಇವೆರಾದರೋ ಮೆವ್ವ ಗುಂಡಿನಿಂದ ಯುದ್ಧಮಾಡಿ, ನಮ್ಮ ಬಹಳ ಸೇನೆಯನ್ನು ಸಂಹ ರಿಸಿದರು. ಇದು ಶ್ರೀರಂಗಪಟ್ಟಣವಲ್ಲ, ಫಿರಂಗಿಪಟ್ಟಣವೆಂದು ತೋರು ತ್ತದೆ" ಎಂಬುದಾಗಿ ತನ್ನ ಸೇನಾಜನರ ಸಂಗಡ ಹೇಳಿ, ಇವರ ಸಂಗಡ ಯುದ್ಧ ಮಾಡಲಾರೆವೆಂದು ಓಡಿಹೋಗುತ್ತಿದ್ದನು. ಆ ಮರಾಟೆಯವರ ಬೆನ್ನ ಹತ್ತಿ ಯುದ್ಧಮಾಡಿ, ಅವರಲ್ಲಿದ್ದ ಸಕಲ ಪದಾರ್ಥಗಳನ್ನೂ ತೆಗೆದು ಕೊಂಡು ಬಂದರು. ಪೂರ್ವದಲ್ಲಿ ಸಾಧಿಸಿದ್ದ ಮೊಗಡಿ, ಶಾಲ್ಯ, ರತ್ನಗಿರಿ, ಇವು ಮುಂತಾದ ಕಡೆಯ ಪಾಳೆಯಗಾರರುಗಳು ತುಂಟತನ ಮಾಡಿ ಕಟ್ಟಿಕೊಂಡಿದ್ದ ಗಡಿಗಳನ್ನು, ಅವರುಗಳನ್ನು ಹೊಡೆದು ಮತ್ತೆ ಸ್ವಾ ಧೀನ ಮಾಡಿಕೊಂಡುದಲ್ಲದೆ, ಇನ್ನೂ ಕೆಲವರು ತುಂಟರಾಗಿದ್ದ ಪಾಳೆಯ ಗಾರರುಗಳನ್ನೂ ಸಿಗ್ರಹಿಸಿ, ಸೀಮೆಗಳನ್ನು ಬಂದೋಬಸ್ತು ಮಾಡಿದರು.

ಧರ್ಮಕಾರ್ಯ.—ಇವರು ತಮ್ಮ ಪೂರ್ವಿಕರು ಮಾಡಿದ ದೇವದಾಯ ಬ್ರಹ್ಮದಾಯ ಸತ್ರ ಮುಂತಾದ ಧರ್ಮಕಾರ್ಯಗಳನ್ನು ನಿರುಪಾಧಿಕ ಸರ್ವ ಮಾನ್ಯವಾಗಿ ನಡೆಸಿಕೊಂಡು ಬರುತ್ತಿದ್ದರು. ಮತ್ತು ತಿರುಪತಿ ವೆಂಕಟ ರಮಣಸ್ವಾಮಿಯವರ ನಿತ್ಯಕಟ್ಟಳೆಯ ಸೇವೆಗಳೂ, ಬ್ರಹ್ಮೋತ್ಸವ ಮುಂತಾದ ವಿಶೇಷೋತ್ಸವಗಳೂ ಶಾಶ್ವತವಾಗಿ ನಡೆಯುವುದಕ್ಕೆ, ಪರ ಮತಿ ಎಂಬ ಗಡಿಗೆ ವಳಿತವಾದ ವೆಂಕಟಪುರ, ಆಯಂಪಾಳ್ಯಗ್ರಾಮ, ದೊಡ್ಡಮೆರದೂರು, ಚಿಕ್ಕಮೆರದೂರು ಮುಂತಾದ ೬ ಗ್ರಾಮಗಳಲ್ಲಿಯೂ ಹುಟ್ಟುವ ಕಂಠೀರಾಯಿ ಆರುನೂರು ವರಹಗಳನ್ನು ಶ್ರೀವೆಂಕಟರಮಣ ಸ್ವಾಮಿಯ ಕೈಂಕರ್ಯಕ್ಕೆ ಶಾ॥ ಶಕ ೧೬೫೨ನೇ (A.D. 1730) ಸಾಧಾರಣ ಸಂ॥ ಮಾರ್ಗಶಿರ ಬಹುಳ ೩೦ ಸೋಮವಾರ ಸೂರ್ಯೋಪರಾಗ ಪುಣ್ಯಕಾಲದಲ್ಲಿ ಹಿರಣ್ಯೋದಕಧಾರಾಪೂರ್ವಕವಾಗಿ ಕೊಟ್ಟು, ಈ ಗ್ರಾಮಗಳಿಗೆ ಶಂಖಚಕ್ರಾಂಕಿತ ಶಿಲಾಪ್ರತಿಷ್ಠೆಯನ್ನು ಮಾಡಿಸಿ, ಈ ದೇವತಾಸೇವೆ ಸಾರೋದ್ಧಾರವಾಗಿ ನಡೆವುದಕ್ಕೆ ತಾಮ್ರಶಾಸನವನ್ನು ಬರೆಸಿ, ವೆಂಕಟಾಚಲಪತಿಯ ಭಂಡಾರಕ್ಕೆ ಒಪ್ಪಿಸಿದರು. ಇವರ ಮಾತೃಶ್ರೀಯವರಾದ ಚೆಲುವಾಜಮ್ಮಣ್ಣಿಯವರು ಅಪ್ಪಣೆಕೊಟ್ಟಂತೆ, ಅವರ ತೌರುಮನೆಯ ಮನೆದೇವರಾದ ಕಳಲೆ ಲಕ್ಷ್ಮೀಕಾಂತಸ್ವಾಮಿಯವರ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಿ, ನೂತನವಾಗಿ ರಥವನ್ನೂ ಮಂಟಪವನ್ನೂ ಕಟ್ಟಿಸಿ, ದೇವರುಗಳಿಗೆ ಗ್ರಾಮ ಭೂಮಿಗಳನ್ನು ಕೊಟ್ಟುದಲ್ಲದೆ, ಸ್ವನಾಮಾಂಕಿತವಾಗಿ ಕಳಲೆಯಲ್ಲಿ ಕೃಷ್ಣರಾಜಪುರವೆಂಬ ಅಗ್ರಹಾರವನ್ನು ನಿರ್ಮಿಸಿ, ಗೃಹಸಂಖ್ಯೆಯು ೪೫ ವೃತ್ತಿಯೊಡನೆ ಗೃಹೋಪಕರಣ ಸಹಿತವಾಗಿ ತ್ರಿಮತಸ್ಥ ಬ್ರಾಹ್ಮಣರುಗಳಿಗೂ ಜಾರೆಯನ್ನೆರೆದು ಸೂರಹಳ್ಳಿ ಮುಂತಾದ ಗ್ರಾಮಗಳನ್ನು ಕೊಟ್ಟರು. ಮತ್ತು ಇವರ ಹಿರಿಯಕುಟುಂಬ ದೇವಾಜಮ್ಮಣ್ಣಿಯವರು ಚೆಲುವಾಜಮ್ಮಣ್ಣಿಯವರು ಇವರಿಬ್ಬರೂ ಅಗ್ರಹಾರವನ್ನು ಮಾಡಬೇಕೆಂದು ಬಿನ್ನವಿಸಿಕೊಂಡುದರಿಂದ, ತೂಣ್ಣೂರು ಸ್ಥಳದಲ್ಲಿ ಸ್ವನಾಮಾಂಕಿತವಾಗಿ ದೇವಸ್ಥಾನವನ್ನು ಕಟ್ಟಿಸಿ, ಗೋಪಾಲಕೃಷ್ಣಸ್ವಾಮಿಯವರ ಪ್ರತಿಷ್ಠೆಯನ್ನು ಮಾಡಿಸಿ, ತಮ್ಮ ಇಬ್ಬರು ಧರ್ಮಪತ್ನಿಯರ ಹೆಸರಿನಿಂದಲೂ

ಎರಡು ಅಗ್ರಹಾರಗಳನ್ನು ಮಾಡಿಸಿ, ಅಗ್ರಹಾರ ೧ಕ್ಕೆ ೨೪ ವೃತ್ತಿಯ ಮೇರೆಗೆ ೪೮ ವೃತ್ತಿಗಳೊಡನೆ ತ್ರಿಮತಸ್ಥ ಬ್ರಾಹ್ಮಣರುಗಳಿಗೆ ಗೃಹೋಪಕರಣ ಸಹಿತವಾಗಿ ಧಾರೆಯನ್ನೆರೆದುಕೊಟ್ಟು ದೇವಸ್ಥಾನಕ್ಕೆ ತಸದೀಕನ್ನು ಒಂಟುಮಾಡಿದರು. ಇದಲ್ಲದೆ ಇಲ್ಲಿಯ ಅನೇಕಪುಣ್ಯಸ್ಥಳಗಳಲ್ಲಿಯೂ ಕಣಿವೆಯ ಕೆಳಗಣ ಸ್ಥಳಗಳಲ್ಲಿಯೂ ಕೆಲವು ಅಗ್ರಹಾರಗಳನ್ನು ಮಾಡಿದುವಲ್ಲದೆ, ವಿಶೇಷಪುಣ್ಯಕಾಲಗಳಲ್ಲಿ ಗಜಾಶ್ವದಾನ, ಉಭಯತೋಮುಖೀದಾನ, ಅಂದೋಳಿಕಾದಾನ, ಕನ್ಯಾದಾನ, ಉಪನಯನದಾನ, ನಿತ್ಯದಾನ, ದಂಪತಿಪೂಜೆ ಇವುಗಳನ್ನು ಅನೇಕವಾಗಿ ಮಾಡಿದರು. ಮತ್ತು ಮೇಲುಕೋಟೆಯಲ್ಲಿ ಸ್ವನಾಮಾಂಕಿತವಾಗಿಯೂ ಮಾತೃಶ್ರೀ ಚೆಲುವಾಜಮ್ಮಣ್ಣಿಯವರ ನಾಮಾಂಕಿತವಾಗಿಯೂ ಕಲ್ಯಾಣಿಯ ಬಳಿಗುಲ್ಲಿ ಕೆಲವು ನಿಂಟಪಗಳನ್ನೂ ಅಳ್ವಾರಗುಡಿಯನ್ನೂ ಕಟ್ಟಿಸಿದರು.

ರಾಜ್ಯಭಾರ.—ಪೂರ್ವದಂತೆ ನವರಾತ್ರಿಯುತ್ಸವ ಕಾಲದಲ್ಲಿ ಹನುಮದ್ಧ್ವಜ ಗರುಡಧ್ವಜ ಕಂಪ ಚಕ್ರ ಮಕರಟಿಕ್ಕೆ ಸಿಂಹಲಲಾಟ ಶರಭ ಸಾಳ್ವ ಮುಂತಾದ ಬಿರುದುಗಳನ್ನು ಹಿಡಿಸಿಕೊಂಡು, ರಾಜಕುಲತಿಲಕ ರಾಜಮಾರ್ತಂಡ ರಾಜಾಧಿರಾಜ ಎಂಬ ಬಿರುದುಗಳಿಂದ ಹೊಗಳಿಸಿಕೊಳ್ಳುತ್ತಿದ್ದರು. ಇವರು ಸೀಮೆಯ ಆಡಳಿತವನ್ನು ವಿಶೇಷವಾಗಿ ತಾವು ಪರಾಂಬರಿಕೆಗೆ ತೆಗೆದುಕೊಳ್ಳದೆ, ಸರ್ವಾಧಿಕಾರಿ ನಂಜರಾಜಯ್ಯನವರಾಯಿದೇವರಾಜಯ್ಯ ಎಂಬುವರಿಬ್ಬರು ಬಂಧುಗಳಾಗಿಯೂ ಪರಮಾಪ್ತರಾಗಿಯೂ ಇದಾರೆಂದು ತಿಳಿದು, ಸಕಲಾಧಿಕಾರವನ್ನೂ ಅವರ ಸ್ವಾಧೀನಮಾಡಿ, ತಾವು ಸಂಗೀತ ಸಾಹಿತ್ಯ ನಾಟಕುರಂಗು ಮುಂತಾದುದರಲ್ಲಿಯೇ ಆಸಕ್ತರಾಗಿ ಇದ್ದುದರಿಂದ, ಪೂರ್ವನಿಬಂಧನೆಯು ತಪ್ಪಿ ಮೇರ್ಯಾದೆಗಳು ಹೆಚ್ಚು ಕಡಮೆ ಆದುವಲ್ಲದೆ ತುಂಟ ಜನಗಳಿಗೂ ಅವಕಾಶವಾಯಿತು. ದೊರೆಗಳವರು ಸರ್ವಜನಗಳನ್ನೂ ಸಂರಕ್ಷಿಸುವುದಲ್ಲದೆ, ಅರಣ್ಯದಲ್ಲಿರುವ ಹುಲಿ ಕರಡಿ ಸಿವಂಗಿ ಕಾಡೆಮ್ಮೆ ಹುಲ್ಲೆ ಕರು ಕಡವೆ ಸಾರಂಗ ಕಪಿ ಗಿಣಿ ಮೆಲೆಸೇನ ಕಾಳಿಂಗ ನವಿಲು ಪುಣಿಗಿನ ಬೆಕ್ಕು ಬಗೆಬಗೆಯ ಪಾರಿವಾಳ ಗೌಜಲಹಕ್ಕಿ ಲಾವೆಕನಹಕ್ಕಿ ಗಿಡಗ ಭೈರಿ ಮುಂತಾದ ಅನೇಕ ಮೃಗ ಪಕ್ಷಿಗಳನ್ನೂ ಚೆನ್ನಾಗಿ ಕಾಪಾಡುತ್ತಿದ್ದರು.

ಪರಕಾಲಸ್ವಾಮಿಗಳನ್ನು ಕರಸಿ ಸಮಾಶ್ರಯಣ ಮಾಡಿಕೊಂಡದ್ದು.—ದೊರೆಗಳವರು ತಿರುಪತಿಯಲ್ಲಿದ್ದ ಮುನಿತ್ರಯ ಸಂಪ್ರದಾಯ ಧುರಂಧರರಾದ ದೊಡ್ಡ ಪರಕಾಲಸ್ವಾಮಿಗಳವರನ್ನು ಕರೆಯಿಸಿ, ಸಮಾಶ್ರಯಣ ಮುಂತಾದ ಶ್ರೀವೈಷ್ಣವ ದೀಕ್ಷೆಯನ್ನಂಗೀಕರಿಸಿ, ಏಕಾದಶಿಯಲ್ಲಿ ಉಪವಾಸ ಮಾಡಿ ದ್ವಾದಶೀಪಾರಣೆಯನ್ನು ಸಾಧಿಸಿ, ಪರಮ ಭಾಗವತರಂತೆ ಇರುತ್ತಿದ್ದರು. ಮತ್ತು ಲಕ್ಷ್ಮೀಅಯ್ಯಂಗಾರಿ ಎಂಬವನಿಗೆ ಈ ಪರಕಾಲಮಠದ ಮುಖಾಮಿತನವನ್ನು ನೇಮಕ ಮಾಡಿದರು.

ಹದಿನೆಂಟು ಮನೆತನದ ಅರಸು ಮಕ್ಕಳಿಗೆ ನಿರೂಪವನ್ನು ಅಪ್ಪಣೆ ಮಾಡಿದ್ದು.—ಕೃಷ್ಣರಾಜಒಡೆಯರವರು.

ಶಾ॥ ಶಕ ೧೬೪೦ನೇ (A.D. 1717) ಹೇವಿಳಂಬಿ ಸಂವತ್ಸರದ ಶ್ರಾವಣ ಶುದ್ಧ ೧೦ಯಲ್ಲಿ, ಶ್ರೀಮತು, ಬಾಗಳಿಯವರು, ಮುಳ್ಳೂರವರು, ಕೋಟೆ ಸಿಂಗಪ್ಪ ಒಡೆಯರು, ಮುಲಗೂಡವರು, ಕಿರುಗುಂದವರು, ಸಿಂಧುವಳ್ಳಿಯವರು, ಮರಶೆಯವರು, ಹೆಬ್ಬಾಳವರು, ಕಿಕ್ಕೇರಿ ದೊಡ್ಡನ ಕೆಂಪನ ದೊಡ್ಡನ ಮಕ್ಕಳು, ಹಾದನೂರವರು, ಹತ್ತಿ ಮಲ್ಲರಾಜಯ್ಯನ ಚಂದಾ ತಲಕಾಡವರು, ಬಿಳಿಕೂರು ಗುರುವನ ಮಕ್ಕಳು, ಹೊಸಕೋಟೆಯವರು, ಮಳಲವಾಡಿಯವರು, ಮದ್ದೂರವರು, ಹೆಬ್ಬನಗುಪ್ಪೆಯವರು, ತಿಪ್ಪೂರು ಸೋಮೆರಾಜ ಇವು ಮುಂತಾದ ಹದಿನೆಂಟು ಮನೆತನಕ್ಕೆ ಸೇರಿರುವ ಅರಸುಮಕ್ಕಳಿಗೆ ಬರೆಸಿ ಕಳುಹಿಸಿದ ನಿರೂಪ ಅದಾಗಿ—ಗೊಂಗನೂರು ತಿಮ್ಮರಾಜನ ವಂಶದ ಶಾಲ್ಯದ ಚನ್ನರಾಜನ ಮನೆತನಕ್ಕೆ ಹದಿನೆಂಟು ಮನೆತನದ ಅರಸುಮಕ್ಕಳದ ನಿಮ್ಮಲ್ಲಿ ಹೆಣ್ಣನ್ನು ಕೊಟ್ಟು ತರುವ ಬಂಧುತ್ವವು ನಡೆವ ಹಾಗೆ ಕಟ್ಟಳೆಯನ್ನು ಮಾಡಿದೇವೆಯಾದ ಕಾರಣ, ನೀವೆಲ್ಲರೂ ಗೊಂಗನೂರು ತಿಮ್ಮರಾಜನ ವಂಶದ ಚನ್ನರಾಜನ ಮನೆತನಕ್ಕೆ ಹೆಣ್ಣನ್ನು ಕೊಟ್ಟು ತಂದುಕೊಂಡು ಬಂಧುತ್ವಮಾಡಿ ಅನ್ಯೋನ್ಯವಾಗಿ ನಡೆದುಕೊಳ್ಳುವುದು.

ನಿರ್ಣಯ.—ಈ ಪರಿಯಾಗಿ ನಿರೂಪವನ್ನು ಅಪ್ಪಣೆ ಕೊಡಿಸಿ, ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡುತಿದ್ದು, ತಮ್ಮ ದೇಹಕ್ಕೆ ಬಹಳ

ಆಯಾಸವಾಗಿರುವ ಕಾಲದಲ್ಲಿ, ತಮಗೆ ಸಂತಾನವಿಲ್ಲವೆಂದು ತಿಳಿದು, ತಮ್ಮ ಹಿರಿಯ ಕುಟುಂಬ ದೇವಾಜಮ್ಮಣಿಯವರು ಮುಂತಾದ ಪತ್ನಿಯರ ಸಂಗಡ ನಮ್ಮ ಜಾತಿಯಾದ ಅಂಕನಹಳ್ಳಿ ದೇವರಾಜೇಅರಸಿನವರ ಕುಮಾರರನ್ನು ಸ್ವೀಕಾರಮಾಡಿಕೊಂಡು ಅವರಿಗೆ ಪಟ್ಟವನ್ನು ಕಟ್ಟುವ ರಾಗಿ ಎಂದು ಅಪ್ಪಣೆಯನ್ನು ಕೊಟ್ಟು, ತಾವು ಭೂಲೋಕದಲ್ಲಿ ಮಾಡಿದ ದಾನಧರ್ಮಗಳ ಫಲಗಳನ್ನು ಪರಲೋಕದಲ್ಲಿ ಅನುಭವಿಸಬೇಕೆಂದು ಶಾ॥ ಶಕ ೧೬೫೪ನೇ (A.D. 1732) ವಿರೋಧಿಕೃತ್ಸಂವತ್ಸರದ ಫಾಲ್ಗುಣ ಬಹುಳ ೫ಯಲ್ಲಿ ಷಷ್ಠಿಯ ಹೊತ್ತಿನಲ್ಲಿ ಶ್ರೀಮನ್ನಾರಾಯಣನ ಪಾದಾರವಿಂದದಲ್ಲಿ ಐಕ್ಯರಾಗಿಹೋದರು. ಅನಂತರ ಈ ದೇವಾಜಮ್ಮಣ್ಣಿಯವರು ತಮ್ಮ ಕರವ್ಯವಾಗಿ ತಮ್ಮ ಜಾತಿಯಾದ ಅಂಕನಹಳ್ಳಿ ಚಾಮರಾಜಯ್ಯನವರ ಮಗ ತಿಮ್ಮರಾಜಯ್ಯನಿಂದ ಉತ್ತರ ಕ್ರಿಯೆಗಳನ್ನು ಮಾಡಿಸಿ, ಅವರು ತೀರಿಹೋದ ಪುಣ್ಯಾವಿವಸದಲ್ಲಿ ಶ್ರೀ ಚಾಮುಂಡೇಶ್ವರಿಯ ಬೆಟ್ಟದ ಮೇಲಿರುವ ಮಹಾಬಲೇಶ್ವರಸ್ವಾಮಿಯವರಿಗೆ ಪ್ರತಿವರುಷದಲ್ಲಿಯೂ ಫಾಲ್ಗುಣ ಬಹುಳ ೬ ದಿವಸದಲ್ಲಿ ರಥೋತ್ಸವವು ನಡೆವಂತೆ ಕಟ್ಟಳೆ ಮಾಡಿಸಿದರು. ಸಹಗಮನವಿಲ್ಲ.

	ವರ್ಷ	ತಿಂಗಳು	ದಿನ
ದೊಡ್ಡಕೃಷ್ಣರಾಜಒಡೆಯರವರ ಜೀವಿತಕಾಲ	೨೯	೧೧	೨೦
ಇನ್ನೆರ ಆಳಿಕೆ	೧೩	೧೧	೨೩

ಹದಿನೇಳನೆಯ ಆಳಿಕೆ.

ಚಾಮರಾಜಒಡೆಯರವರು (A.D. 1732—A.D. 1734)

ಜನನ.—ಶಾ॥ ಶಕ ೧೬೨೬ನೇ (A.D. 1704) ತಾರಣಸಂವತ್ಸರ.

ಪಟ್ಟಾಭಿಷೇಕ.—ಶಾ॥ ಶಕ ೧೬೫೫ನೇ (A.D. 1732) ಪರೀಧಾವಿ ಸಂವತ್ಸರದ ಜ್ಯೇಷ್ಠ ಶುದ್ಧ ಪಂಚಮಿ.

ಪತ್ನಿಯರು.—(೧) ಇವರಿಗೆ ಪಟ್ಟಕ್ಕೆ ಮುಂಚೆ ಒಬ್ಬರು ಪತ್ನಿಯರು ಇದ್ದರು. ಪಟ್ಟವಾದ ಮೇಲೆ ಪರೀಧಾವಿ ಸಂ॥ ಜ್ಯೇಷ್ಠ ಶುದ್ಧ ೫ ಯಲ್ಲಿ ವಿವಾಹವಾದವರು ಇಬ್ಬರು :—(೨) ಬೊಳಗಿರಿ ನಂಜರಾಜಯ್ಯನವರ ಕುಮಾರತಿ

ದೇವಾಜಮ್ಮಣ್ಣಿಯವರು. (೩) ಮೂಗೂರು ಮನೆತನದ ಅಳಗಂಚಿ ಬಾಳಯ್ಯನವರ ಕುಮಾರತಿ ದೇವಾಜಮ್ಮಣ್ಣಿಯವರು.

ಸಂತಾನ —ಇಲ್ಲ.

ಇವರಿಗೆ ಪಟ್ಟಾಭಿಷೇಕವಾದ ವಿಚಾರ.—ದೊಡ್ಡಕೃಷ್ಣರಾಜ ಒಡೆಯರವರ ಹಿರಿಯ ಕುಟುಂಬ ದೇವಾಜಮ್ಮಣ್ಣಿಯವರು ತಮ್ಮ ಪತಿಯ ಆಜ್ಞಾನುಸಾರವಾಗಿ, ದಳವಾಯಿ ದೇವರಾಜಯ್ಯ, ಸರ್ವಾಧಿಕಾರಿ ನಂಜರಾಜಯ್ಯ, ಕರಾಚಕೂರಿ ನಂಜರಾಜಯ್ಯ ಮುಂತಾದ ಅಧಿಕಾರಸ್ಥರನ್ನು ಕರೆಸಿ "ನಮ್ಮ ಜ್ಞಾತಿಯಾದ ಅಂಕನಹಳ್ಳಿ ದೇವರಾಜೇ ಅರಸಿನವರ ಪುತ್ರ ೧೮ ವರ್ಷ ವಯಸ್ಸುಳ್ಳ ಚಾಮರಾಜಯ್ಯನನ್ನು ಸಕುಟುಂಬವಾಗಿ ಕರೆಸಿ, ನಮಗೆ ಸ್ವೀಕಾರಮಾಡಿಸಿ, ಅವರಿಗೆ ಪಟ್ಟವಂ ಕಟ್ಟುವರಾಗಿ" ಎಂದು ಅಪ್ಪಣೆಯನ್ನು ಕೊಡಲು, ಈ ಅಧಿಕಾರಸ್ಥರು ರಾಜಮರ್ಯಾದೆಯಿಂದ ಆ ಚಾಮರಾಜಯ್ಯನವರನ್ನು ಕರೆಸಿ, ಅವರು ಪಶ್ಚಿಮವಾಹಿನಿಗೆ ಬಂದ ವರ್ತಮಾನವನ್ನು ತರಿಸಿಕೊಂಡು, ತಾವು ಅಲ್ಲಿಗೆ ಹೋಗಿ ಅವರನ್ನು ಕಂಡು "ನಿಮಗೆ ಪಟ್ಟವನ್ನು ಕಟ್ಟಿಸುತ್ತೇವೆ. ನೀವು ಮಹಾಮಾತ್ಯಶ್ರೀ ದೇವಾಜಮ್ಮಣ್ಣಿಯವರ ಆಜ್ಞಾನುಸಾರವಾಗಿ ಇರಬೇಕು. ಇಲ್ಲದಿದ್ದರೆ ನಿಮಗೆ ಪಟ್ಟವು ಸಲ್ಲಲಾರದು" ಎಂದು ಹೇಳಿ ಪ್ರಮಾಣವನ್ನು ಮಾಡಿಸಿಕೊಂಡು, ವಿರೋಧಿಕೃತ್ಸಂವತ್ಸರದ ಫಾಲ್ಗುಣ ಬಹುಳ ೩ ಮಂಗಳವಾರದಲ್ಲಿ ಶ್ರೀರಂಗಪಟ್ಟಣಕ್ಕೆ ಕರೆದುಕೊಂಡು ಬಂದು ಅಮ್ಮನವರ ಭೇಟಿಮಾಡಿಸಿದರು. ಬಳಿಕ ಅಮ್ಮನವರು ಮುಂದೆ ತಾವು ಸ್ವೀಕಾರ ಮಾಡಿಕೊಳ್ಳುವ ಈ ಚಾಮರಾಜಯ್ಯನವರನ್ನು ಕರೆದು "ನಿನಗೆ ಈ ಆಕೌಲಕ ಕಳದ ಮೇಲೆ ಶಾಸ್ತ್ರೀಯವಾಗಿ ಪಟ್ಟವನ್ನು ಕಟ್ಟುವೆವು. ಈ ದಿನ ಮೊದಲುಗೊಂಡು ನೀನು ದೇಶಕೋಶಗಳ ವಿಚಾರಣೆ ಮಾಡುತ್ತಲಿರುವೆನಾಗು" ಎಂದು ಅಪ್ಪಣೆಕೊಟ್ಟುದಲ್ಲದೆ, ಆ ಅಧಿಕಾರಿಗಳಿಗೂ ಇವರು ಹೇಳಿದಂತೆ ಸಕಲ ಕಾರ್ಯವನ್ನು ನಡೆಸುವರಾಗಿ ಎಂದು ಅಪ್ಪಣೆಯನ್ನು ಕೊಟ್ಟು ಶಾ॥ ಶಕ ೧೬೫೪ನೇ (A.D. 1732) ಪರೀಧಾವಿ ಸಂ॥ ಚೈತ್ರ ಶುದ್ಧ ೫ಯಲ್ಲಿ ಚಾಮರಾಜ ಅರಸಿನವರನ್ನು ಸ್ವೀಕಾರಮಾಡಿಕೊಂಡು, ಅರಮನೆಯ ದೊಡ್ಡ

ಹಜಾರದಲ್ಲಿ ಶಾಸ್ತ್ರೋಕ್ತವಾಗಿ ಪಟ್ಟಾಭಿಷೇಕವನ್ನು ಮಾಡಿಸಿ, ದಳವಾಯಿ ದೇವರಾಜಯ್ಯ, ಸರ್ವಾಧಿಕಾರಿ ನಂಜರಾಜಯ್ಯ, ಕರಾಚೂರಿ ನಂಜರಾಜಯ್ಯ ಮುಂತಾದ ಅಧಿಕಾರಸ್ಥರೆಲ್ಲರಿಗೂ ಚಾಮರಾಜ ಒಡೆಯರವರ ಆಜ್ಞಾನುಸಾರವಾಗಿ ನಡೆದುಕೊಳ್ಳತಕ್ಕದ್ದೆಂದು ಅಪ್ಪಣೆಯನ್ನು ಕೊಟ್ಟರು.

ದಳವಾಯಿ ದೇವರಾಜಯ್ಯ ಮೊದಲಾದವರು ಮಾಡಿದ ಸ್ವಾಮಿದ್ರೋಹ ಮುಂತಾದ್ದು.—ಈ ಚಾಮರಾಜ ಒಡೆಯರವರು ಮೂರು ಜನ ಪತ್ನಿಯರೊಡಗೂಡಿ ಸುಖವಾಗಿರುವ ಕಾಲದಲ್ಲಿ, ದಳವಾಯಿ ದೇವರಾಜಯ್ಯ, ಇವನ ತಮ್ಮ ಕರಾಚೂರಿ ನಂಜರಾಜಯ್ಯ, ಸರ್ವಾಧಿಕಾರಿ ನಂಜರಾಜಯ್ಯ ಈ ದುಷ್ಟರಾದ ಮೂರು ಜನರೂ ಸ್ವಾಮಿದ್ರೋಹ ವಲ್ಲಿಯೇ ಆಸಕ್ತರಾಗಿ, ರಾಜ್ಯದಲ್ಲಿ ಹುಟ್ಟಿದ ದ್ರವ್ಯದಲ್ಲಿ ಗಡಿ ಒಕ್ಕೆ ಪ್ರತಿವರ್ಷವಲ್ಲಿಯೂ ದಳವಾಯಿ ದೇವರಾಜಯ್ಯನಿಗೂ ಇವನ ತಮ್ಮನಿಗೂ ೭೦೦೦ ವರಹಗಳು, ಸರ್ವಾಧಿಕಾರಿ ನಂಜರಾಜಯ್ಯನಿಗೆ ೧೦೦೦ ವರಹಗಳು, ಈ ಮೇರೆಗೆ ಬರುವಂತೆ ನಿಬಂಧನೆಯನ್ನು ಮಾಡಿಕೊಂಡಿದ್ದುದಲ್ಲದೆ, ತಮ್ಮ ಕಡೆಯ ಆಪ್ತರಾದ ಊಳಿಗದವರು ಲಂಚವನ್ನು ತೆಗೆದುಕೊಂಡು ಹೇಳಿದವರಿಗೆ ಅಧಿಕಾರಗಳನ್ನು ಕೊಡಿಸುತ್ತಲಿದ್ದರು. ಮತ್ತು ಗಡಿಗಳಲ್ಲಿ ತೋಟ ಗದ್ದೆ ಬೆದ್ದಲು ಮುಂತಾದ ಉತ್ತಮ ಭೂಮಿಗಳನ್ನು ತಮ್ಮವಾಗಿ ಮಾಡಿಕೊಂಡು, ಅರಮನೆಯ ವಾರದಲ್ಲಿ ಹುಟ್ಟಿದ ದವಸಗಳನ್ನು ತಮ್ಮ ಪಣ್ಯವೆಂಬುದಾಗಿ ತರಿಸಿಕೊಳ್ಳುತ್ತ, ದೊರೆಗಳವರನ್ನು ಮೂಲವಿಗ್ರಹದಂತೆ ಇಟ್ಟು, ಶಬ್ದಮಾತ್ರದಿಂದಲೇ ದೊರೆಗಳೆಂದೆನ್ನಿಸಿ, ನಿರೂಪ ದಸ್ಕತ್ತುಗಳನ್ನು ಮಾತ್ರ ಮಾಡಿಸುತ್ತ ಏನೂ ಸ್ವಾತಂತ್ರ್ಯವಿಲ್ಲದ ಹಾಗೆ ಮಾಡಿ, ಎಲ್ಲಾ ಅಡಳಿತಗಳನ್ನೂ ತಾವೇ ವಿಂಗಳವರೆಗೂ ನಡೆಸುತ್ತಿದ್ದರು. ಸ್ವಾಮಿದ್ರೋಹಿಗಳಾದ ಈ ಮೂರು ಜನರ ಕೆಟ್ಟ ನಡತೆಗಳನ್ನು ಚೆನ್ನಾಗಿ ಪರಾಂಬರಿಸಿ, ರಾಜ್ಯತಂತ್ರದಲ್ಲಿ ಪ್ರಜ್ಞಾಶಾಲಿಗಳಾದ ಚಾಮರಾಜಒಡೆಯರವರು "ಇನ್ನು ಮೇಲೆ ನಾವು ಹೀಗೆ ಉದಾಸೀನರಾಗಿದ್ದರೆ ರಾಜ್ಯವು ನಮ್ಮ ಸ್ವಾಧೀನವಾಗಿರಲಾರದು. ಈ ಜನಗಳ ಅಧಿಕಾರವನ್ನು ತೆಗೆದು ನಮ್ಮ ಆಪ್ತಜನ

ಗಳಿಗೆ ಕೊಡಬೇಕು" ಎಂದು ಅಲೋಚನೆಯನ್ನು ಮಾಡುತಲಿರುವ ವರ್ತಮಾನವನ್ನು ದಳವಾಯಿ ದೇವರಾಜಯ್ಯನು ರಹಸ್ಯವಾಗಿ ತಿಳಿದು, ಅಂತಃಪುರಕ್ಕೆ ಹೋಗಿ, ಮಹಾಮಾತೃಶ್ರೀ ದೇವಾಜಮ್ಮಣ್ಣಿಯವರ ಸನ್ನಿಧಾನದಲ್ಲಿ "ನಿಮ್ಮ ಪುತ್ರರಾದ ಚಾಮರಾಜ ಒಡೆಯರವರು, ದೊಷ್ಟ ದೊರೆಗಳವರು ಸಾಕುತ್ತಿದ್ದ ಅನೇಕಮೃಗಪಕ್ಷಿಗಳನ್ನು ಅರಣ್ಯಕ್ಕೆ ಬಿಡಿಸಿ, ಅವುಗಳನ್ನು ಸಂರಕ್ಷಿಸುತ್ತಿದ್ದ ಜನಗಳ ವೃತ್ತಿ ಇನ್ನೂ ಕೆಲವು ಜನಗಳ ಜೀವನಗಳನ್ನು ತೆಗೆದುಹಾಕಿರುವುದಲ್ಲದೆ, ಮುಂದೆ ತಮ್ಮ ಅಂತಃಪುರಕ್ಕೆ ಕೊಡುತಲಿರುವ ಪದಾರ್ಥಗಳಲ್ಲಿ ಅರ್ಧ ಕೊಯುವ ಮೀರೆಗೆ ಚಿಕ್ಕ ಉಗ್ರಾಣದವರಿಗೆ ಕಟ್ಟುಮಾಡಿಸಬೇಕೆಂಬದಾಗಿಯೂ, ನಮ್ಮಗಳ ಅಧಿಕಾರಗಳನ್ನು ತೆಗೆದು ತಮ್ಮ ಕಡೆ ದುಷ್ಟ ಜನಗಳಿಗೆ ಕೊಡಬೇಕೆಂಬದಾಗಿಯೂ, ಆಲೋಚನೆಯನ್ನು ಮಾಡುತಲಿದಾರೆ. ಇವುಗಳೆಲ್ಲಾ ಚಿತ್ತಕ್ಕೆ ಸ್ವಲ್ಪ ದಿವಸದಲ್ಲಿಯೇ ವೇದ್ಯವಾಗುವುವು. ಅವರು ಬಂದು ಏನಾದರೂ ಅರಿಕೆ ಮಾಡಿದರೆ ಅದು ಯಥಾರ್ಥ ವೆಂದು ಚಿತ್ತಕ್ಕೆ ತೋರಕೆಲಸವಿಲ್ಲ. ತಮ್ಮ ಅಪ್ಪಣೆಯಾದರೆ ಇದಕ್ಕೆ ತಕ್ಕ ಉಪಾಯವನ್ನು ನಾವು ಹೊರಗೆ ಮಾಡುವೆವು" ಎಂದು ಚಾಮರಾಜಒಡೆಯರವರ ಮೇಲೆ ಅಸೂಯೆಬರುವಂತೆ ರಹಸ್ಯವಾಗಿ ಹೇಳಿದನು. ಅದಕ್ಕೆ ಮಹಾಮಾತೃಶ್ರೀ ದೇವಾಜಮ್ಮಣ್ಣಿಯವರು ಹೇಗೆ ವಿಹಿತವೋ ಹಾಗೆ ಮಾಡುವೆನಾಗೆಂದು ಅಪ್ಪಣೆಯನ್ನು ಕೊಡಲು, ಈ ವರ್ತಮಾನವನ್ನು ದೊರೆಗಳವರಾದ ಚಾಮರಾಜಒಡೆಯರವರು ತಿಳಿದು, ದಳವಾಯಿದೇವರಾಜಯ್ಯನ ಅಧಿಕಾರವನ್ನು ತೆಗೆದು ದೇವಯ್ಯನೆಂಬ ಬ್ರಾಹ್ಮಣನಿಗೆ ನೇಮಕಮಾಡಿ, ಸರ್ವಾಧಿಕಾರಿ ನಂಜರಾಜಯ್ಯನ ಬದಲು ವೀರಕೆಟ್ಟ ಎಂಬವನನ್ನು ನೇಮಕಮಾಡಿ, ಗೋಪೀನಾಥಯ್ಯನಿಗೆ ಪ್ರಧಾನತನವನ್ನು ನೇಮಿಸಿ, ಇವರುಗಳಿಗೆಲ್ಲಾ ಉಡುಗೊರೆಯನ್ನು ಕೊಟ್ಟು, ಕಂಠೀರವಯ್ಯ ಕಡೂರು ಚಿಕ್ಕಯ್ಯ ನಾರಣಪ್ಪ ಶಿವನಪ್ಪ ಈ ನಾಲ್ಕು ಜನಗಳನ್ನು ಮಂತ್ರಾಲೋಚನೆಗೆ ಇಟ್ಟುಕೊಂಡು, ತಾವು ಸ್ವತಂತ್ರರಾಗಿ ಸೀಮೆಯ ಮೇಲೆ ಅನ್ಯಾಯ ನಡೆಯುವಂತೆ ದುಷ್ಟ ನಿಗ್ರಹ ಶಿಷ್ಟಪರಿಪಾಲನೆಯನ್ನು ಮಾಡುತ, ಸೀಮೆಯ ಆದಾಯ

ವ್ಯಯಗಳನ್ನು ವಿಚಾರಿಸಿ ಬಂದೋಬಸ್ತುಮಾಡಿ, ಪೂರ್ವನಿಬಂಧನೆಯು ಮೇರೆಗೆ ದೇವತಾಯ ಬ್ರಹ್ಮದಾಯ ಮುಂತಾದ ದಾನ ಧರ್ಮಗಳನ್ನು ನಡೆಸುತ್ತ, ಈ ಚಾಮರಾಜಒಡೆಯರವರಿಗೆ ಸರಿಸಾಟಿ ಇಲ್ಲವೆಂದು ಹೊಗಳಿಸಿಕೊಳ್ಳುತ್ತ, ಧರ್ಮದಿಂದ ೧೮ ತಿಂಗಳು ರಾಜ್ಯಪರಿಪಾಲನೆಯನ್ನು ಮಾಡುತ್ತಿದ್ದರು. ಅಲ್ಲದೆ ತಮ್ಮ ಅರಮನೆಯ ಒಳಬಾಗಿಲ ಗುರಿಕಾರ ಕರಣಿಕ ಗೊಲ್ಲರು ಊಳಿಗದವರು ಅವ್ವೇರುಗಳು ಮುಂತಾದ ಜನಗಳು ಮಹಾಮಾತ್ಯಶ್ರೀಯವರು ಅರಿಯದಂತೆ ಚಿಕ್ಕ ಉಗ್ರಾಣದ ಪದಾರ್ಥಗಳನ್ನು ಹೆಚ್ಚಾಗಿ ತರಿಸಿಕೊಂಡು ಮನಸ್ಸು ಬಂದಂತೆ ವಿಚಕವನ್ನು ಮಾಡುತ್ತಿದ್ದ ಹೆಚ್ಚು ವಿಚಕವನ್ನು ತಪ್ಪಿಸಿ, ವಿಹಿತವಾಗಿ ನಡೆವಂತೆ ಕಟ್ಟಳೆಯನ್ನು ಮಾಡಿಸಿದರು. ಆದುದರಿಂದ ಈ ಜನಗಳು ಕೂಡ ದೊರೆಗಳವರಿಗೂ ಮಹಾಮಾತ್ಯಶ್ರೀಯವರಿಗೂ ವಿರೋಧಿಬರುವಂತೆ ಮಾಡಿದುದರಿಂದ, ಮಹಾಮಾತ್ಯಶ್ರೀಯವರು ಪೂರ್ವದಲ್ಲಿ ದಳವಾಯಿ ದೇವರಾಜಯ್ಯನು ಹೇಳಿದ್ದ ಮಾತುಗಳೇ ಈಗ ಯಥಾರ್ಥವೆಂದು ನಂಬಿ ಚೆನ್ನಾಗಿ ವಿಚಾರಣೆಯನ್ನು ಮಾಡದೆ ಇದ್ದರು. ಆ ಸಮಯದಲ್ಲಿ ಸ್ವಾಮಿದ್ರೋಹಿಗಳಾದ ದಳವಾಯಿ ದೇವರಾಜಯ್ಯ ಸರ್ವಾಧಿಕಾರಿ ನಂಜರಾಜಯ್ಯ ಕರಾಚಕೂರಿ ನಂಜರಾಜಯ್ಯ ಈ ಮೂರು ಜನಗಳು "ನಾವು ಮಾಡುತ್ತಿದ್ದ ಕಾರ್ಯವನ್ನು ಈ ಚಾಮರಾಜಒಡೆಯರವರು ಚೆನ್ನಾಗಿ ವಿಚಾರಣೆಯನ್ನು ಮಾಡಿ ತಿಳಿದು ಇದಾರೆ. ನಾವು ಇವರನ್ನು ತೀರಿಸದೆಯಿದ್ದರೆ ನಮ್ಮಗಳನ್ನೇ ಇವರು ತೀರಿಸುವರು" ಎಂದು ಭಯಪಟ್ಟು, ಪರ್ಯಾಲೋಚನೆಯನ್ನು ಮಾಡಿ, ಪೂರ್ವದಲ್ಲಿ ದೇವರಾಜಮಹಾಣಿಯವರು ಈ ದೇವರಾಜಯ್ಯನಿಗೆ "ನಮಗೆ ಅಪಯಶಸ್ಸು ಬಾರದಂತೆ ಧರ್ಮದ ಮೇಲೆ ದೃಷ್ಟಿಯಿಟ್ಟು ವಿಹಿತಕಾರ್ಯವನ್ನು ಮಾಡುವನಾಗು" ಎಂದು ಅಪ್ಪಣೆಯನ್ನು ಕೊಟ್ಟಿದ್ದ ವಿವರಗಳನ್ನು ಮನಸ್ಸಿಗೆ ತಾರದೆ, ಅನೇಕ ಜನ್ಮಗಳಲ್ಲಿ ಅನುಭವಿಸಿದರೂ ತೀರದಿರುವ ರೌರವಾದಿನರಕಗಳನ್ನುಂಟು ಮಾಡುವ ರಾಜಹತ್ಯೆ ಮೊದಲಾದ ಕ್ರೂರವಾದ ಮಹಾಪಾಪಗಳನ್ನು ಮಾಡಬೇಕೆಂಬ ಇಚ್ಛೆಯಿಂದ, ಈ ಚಾಮರಾಜಒಡೆಯರವರ ಸೇನಾ ಜನಗಳಲ್ಲಿ ತಮಗೆ ಅತ್ಯಂತ ಆಪ್ತರಾದ ದುರ್ಬುದ್ಧಿಯುಳ್ಳ ಶೂರರಾದ

ಸೇನಾನಾಯಕರ ಬಳಿಗೆ ರಾತ್ರಿವೇಳೆಯಲ್ಲಿ ಜನರು ಅರಿಯದಂತೆ ಕೋಟೆಯ ಹೊರಕ್ಕೆ ಹೋಗಿ, ಆ ದಂಡಿನಲ್ಲಿ ಮುಖ್ಯಸ್ಥನಾದ ಮೆದ್ದಗಿರಿ ಮೆಲ್ಲರಾಜಯ್ಯನ ಬಳಿಯಿದ್ದ ಗುಲಾಂ ಹೈದರಲ್ಲಿ ಎಂಬ ಜಮೇದಾರ ಮುಂತಾದ ಕೆಲವು ಜನಗಳಿಗೆ ತಾವು ಸ್ವಾಮಿದ್ರೋಹಮಾಡಿ ಸಂಪಾದಿಸಿದ ದ್ರವ್ಯಗಳಲ್ಲಿ ಕೆಲವನ್ನು ಕೊಟ್ಟು "ನೀವು ಮಹಾ ಶೂರರು, ನಿಮ್ಮ ಪರಾಕ್ರಮವು ನಿಮಗೆ ತಿಳಿದೇಯಿದೆ. ನೀವು ಪೂರ್ವದಿಂದ ನಮ್ಮ ತಾಬೇದಾರಿಯಲ್ಲಿಯೇ ಇದ್ದಿರಿ. ನಿಮಗೆ ನಾವು ಬಹಳ ಉಪಕಾರವನ್ನು ಮಾಡಿದೇವೆ ಇನ್ನೂ ನಿಮಗೆ ಉಪಕಾರಗಳನ್ನು ಮಾಡುವೆವು. ಈಗ ನಿಮಗೆ ಅರಮನೆಯಿಂದ ಬರತಕ್ಕ ಸಂಬಳಗಳನ್ನು ತೆಗೆದು ಕೊಂಡು, ದೊರೆಗಳವರ ಬಳಿಯಲ್ಲಿ ಇನ್ನು ಮೇಲೆ ಚಾಕರಿಮಾಡುವುದಿಲ್ಲವೆಂದು ನೀವು ಹೇಳಿ ಹೊರಟು ಬಂದರೆ, ನಿಮಗೆ ಪೂರ್ವದಂತೆ ಸಂಬಳಗಳನ್ನು ನಾವೇ ಕೊಡುವೆವು" ಎಂದು ಆಶೆಯನ್ನುಂಟುಮಾಡಿ ಹೇಳಿ ಬಂದರು. ಆಬಳಿಕ ೨೦ ಸಾವಿರ ಕುದುರೆ ೬ ಸಾವಿರ ಬಾರಿನವರು ಸಂಬಳವನ್ನು ತೆಗೆದುಕೊಂಡು ಚಾಕರಿಬಿಟ್ಟು ಕೋಟೆಯ ಹೊರಗೆ ಬಂದು ಹರಿದಾರಿ ದೂರದಲ್ಲಿ ಇಳಿದುಕೊಂಡರು. ಈ ವರ್ತಮಾನವನ್ನು ದಳವಾಯಿದೇವರಾಜಯ್ಯನು ತಿಳಿದು, ಜಗನ್ನಾಥದಾಸನೆಂಬ ಸಾಹುಕಾರನ ಮುಖಾಂತರ ೨೦ ಲಕ್ಷ ರೂಪಾಯಿಯನ್ನು ಆ ದಂಡಿನ ಜನಗಳಿಗೆ ಸಂಬಳವಾಗಿ ಕೊಟ್ಟು, "ನೀವುಗಳು ನಾವು ಯಾವಾಗ ಬರಹೇಳಿ ಕಳುಹಿಸುವೆವೋ ಆವೇಳಿಗೆ ಯುದ್ಧ ಸನ್ನದ್ಧರಾಗಿ ಬರಬೇಕು" ಎಂದು ಹೇಳಿ ಕಳುಹಿಸಿ, ಈ ಜನಗಳನ್ನು ಸ್ವಾಧೀನ ಮಾಡಿಕೊಂಡಿದ್ದನು. ಆ ಸಮಯದಲ್ಲಿ ದೊರೆಗಳಾದ ಚಾಮರಾಜಒಡೆಯರವರ ಕಡೆ ಸೇನಾಜನರು ಕಟ್ಟಳೆಯ ಮೇರೆಗೆ ಪ್ರತಿಶುಕ್ರವಾರದಲ್ಲಿಯೂ ಕೋಟೆಯ ಹೊರಗೆ ೨೦ ಹರಿದಾರಿ ಪರ್ಯಂತಕ್ಕೂ ಹೋಗಿ, ಅಲ್ಲಿರುವ ಮೈದಾನದಲ್ಲಿ ಕವಾಯಿತು ಮಾಡಿಕೊಂಡು ಬರುವ ಪದ್ಧತಿಯ ಪ್ರಕಾರ, ಬಂದು ಶುಕ್ರವಾರದಲ್ಲಿ ದಳವಾಯಿ ದೇವಯ್ಯನು ಸಕಲ ಸೈನ್ಯವನ್ನೂ ಕರೆಮಾಡಿಕೊಂಡು ಕವಾಯಿತಿಗೆ ಕೋಟೆಯ ಹೊರಗೆ ಹೋಗಿರುವ ಸಮಯವನ್ನು ನಿರೀಕ್ಷಿಸಿಕೊಂಡಿದ್ದು, ದಳವಾಯಿ ದೇವರಾಜಯ್ಯನು ತಾನು ಮೊದಲು ಸಿದ್ಧ

ಮಾಡಿದ್ದ ಜನರುಗಳನ್ನು ಯುದ್ಧ ಸನ್ನದ್ಧರಾಗಿ ಕರೆಸಿಕೊಂಡು, ಕೋಟೆಯ ಹೊರಗೆ ಕವಾಯಿತಿಗೆ ಹೋಗಿದ್ದ ಫೌಜಿನವರು ಬಳಕ್ಕೆ ಬಾರದಂತೆ ಕೋಟೆಯ ಬಾಗಿಲಲ್ಲಿ ತನ್ನ ಕಡೆಯ ಜನರನ್ನಿಟ್ಟು ಬಂದೋಬಸ್ತುಮಾಡಿ, ಅರಮನೆಯ ಬಾಗಿಲಿಗೆ ಬಂದು ಹಂಗಾಂ ಮಾಡುತ್ತಿದ್ದನು. ಆ ಸಮಯದಲ್ಲಿ ಚಾಮರಾಜಒಡೆಯರವರು ಈ ವರ್ತಮಾನವನ್ನು ತಿಳಿದು, ಅರಮನೆಯ ಬಾಗಿಲನ್ನು ಹಾಕಿಸಿ, ದೇವರಾಜಯ್ಯನ ಬಳಿಗೆ "ಪೂರ್ವದಲ್ಲಿ ನಿಮ್ಮಿಂದ ಕೆಲವು ಹೆಚ್ಚು ಕಡಮೆ ನಡೆದುದರಿಂದ ನಾವು ಈ ಮೇರೆ ಕಾರ್ಯವನ್ನು ನಡೆಸಬೇಕಾಯಿತು. ನಮಗೆ ಪಟ್ಟವಾದ ೮ ತಿಂಗಳ ವರೆಗೂ ನಿಮ್ಮ ಅನುಮತಿಯಿಂದಲೇ ರಾಜ್ಯಭಾರವನ್ನು ಮಾಡಿ, ಈಚೆಗೆ ೧೪ ತಿಂಗಳಿಂದ ಸ್ವತಂತ್ರರಾಗಿ ರಾಜ್ಯಾಧಿಕಾರವನ್ನು ಮಾಡುವುದರಿಂದ ನಮಗೂ ನಿಮಗೂ ಮನಸ್ತಾಪ ಉಂಟಾಯಿತು. ಇಲ್ಲಿಂದ ಮುಂದಕ್ಕೆ ನಿಮ್ಮ ಅನುಮತಿಯಿಂದ ಸಕಲ ಕಾರ್ಯಗಳನ್ನೂ ಮಾಡುವೆವು" ಎಂದು ಬಹುಪ್ರಕಾರ ಸಮಾಧಾನೋಕ್ತಿಯನ್ನು ಹೇಳಿ ಕಳುಹಿಸಿದರೂ ಮನಸ್ಸಿಗೆ ತಾರದೆ, ಸ್ವಾಮಿದ್ರೋಹದಲ್ಲಿಯೇ ಬುದ್ಧಿಯನ್ನಿಟ್ಟು ರಾಮಬಾಣವೆಂಬ ಆನೆಯಿಂದ ಅರಮನೆಯ ಆನೆ ಬಾಗಿಲನ್ನು ಮುರಿಸಿ, ತನ್ನ ಕಡೆಯ ಪಹರೆಯಿಟ್ಟು ಬಂದೋಬಸ್ತುಮಾಡಿ, ನಾಗೋಜಿರಾಯನೆಂಬ ಜಮಾದಾರನನ್ನು ಬಳಕ್ಕೆ ಕಳುಹಿಸಿ, ದೊರೆಗಳವರ ಹಸ್ತದಲ್ಲಿದ್ದ ಶಿಖಾವೊಹರನ್ನೂ ಪಟ್ಟದಕತ್ತಿಯನ್ನೂ ಸಿಂಹಾಸನದಮೇಲೆ ಇರಿಸಿ, ಶಾ॥ ಶಕ ೧೬೫೫ನೇ (A.D. 1734) ಆನಂದ ಸಂ॥ ಜ್ಯೇಷ್ಠ ಬಹುಳ ೫ಯಲ್ಲಿ ಸಕುಟುಂಬವಾಗಿ ಚಾಮರಾಜಒಡೆಯರವರನ್ನು ನಿರ್ಬಂಧದಿಂದ ಕಬ್ಬಾಳುದುರ್ಗಕ್ಕೆ ಕಳುಹಿಸಿದನು. ಆ ಸಮಯದಲ್ಲಿ ಧರ್ಮಾತ್ಮರಾದ ಚಾಮರಾಜಒಡೆಯರವರು "ನಾವು ನಮ್ಮ ಮಾತೃಶ್ರೀಯವರಿಗೆ ದ್ರೋಹವನ್ನು ಮಾಡದೆ, ಪೂರ್ವದಲ್ಲಿ ಮಾಡಿಕೊಟ್ಟ ಪ್ರಮಾಣವನ್ನು ತಪ್ಪದೆ ಧರ್ಮದಿಂದ ಇದ್ದರೂ, ನಮಗೆ ಈ ಅವಸ್ಥೆಯನ್ನುಂಟುಮಾಡಿದನಲ್ಲಾ!" ಎಂದು ದಳವಾಯಿ ದೇವರಾಜಯ್ಯನನ್ನು ಕುರಿತು ಶಾಪವನ್ನುಕೊಟ್ಟ ವಿವರವೇನೆಂದರೆ "ನಮ್ಮ ಪೂರ್ವಿಕರಾದ ರಾಜಒಡೆಯರವರು ತಮ್ಮ ಭಾವಂದಿರಾದ ಕಳಲೆ ತಿಮ್ಮರಾಜಯ್ಯನವರಿಗೆ ಕಳಲೆ ಮುಂತಾದ ಕೆಲವು ಗ್ರಾಮ

ಗಳನ್ನು ಪ್ರಭುವಳಿತವಾಗಿಕೊಟ್ಟು ಸಂರಕ್ಷಣೆ ಮಾಡುತಲಿರುವ ಸಮಯದಲ್ಲಿ, ಆ ತಿಮ್ಮರಾಜಯ್ಯನ ಅನಂತರ ಅವನ ಹಿರಿಯ ಪೆಂಡತಿಯ ಮಗನಾದ ಲಕ್ಷ್ಮೀಕಾಂತಯ್ಯನೆಂಬವನು, ಆ ಗ್ರಾಮ ಭೂಮಿಯನ್ನು ಅನುಭವಿಸಿಕೊಂಡು ತನ್ನ ಭಿನ್ನೋದರ ತಮ್ಮಂದಿರಾದ ನಂದಿನಾಥಯ್ಯ ಕಾಂತಯ್ಯ ಚಂದ್ರಶೇಖರಯ್ಯ ಮುಂತಾದ ಜನಗಳನ್ನೂ ಚೆನ್ನಾಗಿ ಸಂರಕ್ಷಿಸುತ್ತಿದ್ದನು. ಈ ಸಮಯದಲ್ಲಿ ಈ ಮೂರು ಜನಗಳು ಈ ಗ್ರಾಮವನ್ನು ತಾವೇ ಅನುಭವಿಸಬೇಕೆಂದು ತಮ್ಮ ಭಿನ್ನೋದರಾಗ್ರಜನಾದ ಲಕ್ಷ್ಮೀಕಾಂತಯ್ಯನನ್ನು ಅಸೂಯೆಯಿಂದ ಪೊಡೆದುಹಾಕಿಬಿಡಲು, ಆ ಲಕ್ಷ್ಮೀಕಾಂತಯ್ಯನ ಪೆಂಡತಿ ಮಹಾಪತಿವ್ರತೆಯಾದ ಲಿಂಗಾಜಮ್ಮನು ಸಹಗಮನ ಮಾಡುವ ಕಾಲದಲ್ಲಿ 'ಅನ್ಯಾಯದಿಂದ ನನ್ನ ಗಂಡನನ್ನು ಹೊಡೆದು ಹಾಕಿದ ನಮ್ಮ ಬಲತ್ಕೈಯ ಮಕ್ಕಳಾದ ಈ ಮೂರು ಜನದ ವಂಶ ಮಾತ್ರ ನಷ್ಟವಾಗಲಿ. ಮತ್ತೊಬ್ಬ ಬಲತ್ಕೈಯರಾದ ಧರ್ಮತ್ತರಾದ ಮೈಸೂರು ರಾಜಒಡೆಯರವರ ಅಕ್ಕಂದಿರಾದ ದೇವಾಜಮ್ಮಣಿಯವರ ವಂಶವು ಸಾರೋದ್ಧಾರವಾಗಿ ನಡೆಯಲಿ. ನನ್ನ ಬಾಳು ತಪ್ಪಿಸಿದ ಈ ಕಳಲೆ ವಂಶದ ಹೆಣ್ಣು ಮಕ್ಕಳು ಚೆನ್ನಾಗಿ ಬಾಳಕೆಲಸವಿಲ್ಲ' ಎಂದು ಹೇಳಿ, ಶಾಪವನ್ನು ಕೊಟ್ಟಂತೆ ಆ ವಂಶದ ಹೆಣ್ಣು ಮಕ್ಕಳು ಮೇಗೆ ಬಾಳುವುದಿಲ್ಲವೋ ಅದೇ ಪರಿಯಾಗಿ ನಮ್ಮ ಭಾಗಕ್ಕೆ ಶ್ರೀಚಾಮುಂಡೇಶ್ವರಿ ಅಮ್ಮನವರೇ ಸತ್ಯವಾಗಿದ್ದರೆ, ಈ ದೇವರಾಜಯ್ಯನ ವಂಶವೂ ಮುಂದಕ್ಕೆ ನಷ್ಟವಾಗಲಿ" ಎಂದು ಶಾಪರೂಪವಾದ ಅತಿ ಕಠಿನೋಕ್ತಿಯನ್ನು ಹೇಳಿ, ನಿರ್ಬಂಧದಲ್ಲಿಯೇ ಈಬ್ಬಾಳುಪುರ್ಗಕ್ಕೆ ಹೊರಟು ಹೋದರು. ಅನಂತರ ದೇವರಾಜಯ್ಯನು ಚಾಮರಾಜ ಒಡೆಯರವರ ಕಡೆ ಪ್ರಧಾನತನವೆನ್ನು ನೋಡುತ್ತಿದ್ದ ಗೋಪೀನಾಥಯ್ಯ ದಳವಾಯಿ ದೇವಯ್ಯ ಸರ್ವಾಧಿಕಾರಿ ವೀರಕಟ್ಟ ಮುಂತಾದ ೬ ಜನಗಳನ್ನು ಪಹರೆಯಲ್ಲಿ ಇರಿಸಿಬಿಟ್ಟನು.

ಈ ದೇವರಾಜಯ್ಯನು ಮಾಡಿದ ಸ್ವಾಮಿದ್ರೋಹವು ಯಾವ ರೀತಿಯಾಗಿ ಇರುವುದೆಂದರೆ—ಜನಗಳ ಮನಸ್ಸಿನಲ್ಲಿ ಸ್ಮರಿಸಿದರೂ ಅತ್ಯಂತ ಭಯಂಕರವಾಗಿರುವುದು. ಲೋಕದಲ್ಲಿ ಸೂರ್ಯಚಂದ್ರರುಗಳು

ಇರುವಷರ್ಯಂತವಾಗಿಯೂ ಅಪಕೀರ್ತಿಯನ್ನುಂಟುಮಾಡುತಲಿರುವುದು. ಮತ್ತು ಚಂಡಾಲರುಗಳಿಂದಲೂ ನುಡಿಯಲಶಕ್ಯವಾಗಿರುವುದು. ವಂಶ ನಾಶಕ್ಕೆ ಮುಖ್ಯ ಸಾಧನವಾಗಿರುವುದು. ಅತ್ಯಂತ ಘೋರವಾದ ಕಾರಣ ಸಹಿಸಲಶಕ್ಯವಾಗಿರುವುದು ಈ ಪರಿಯಾದ ಸ್ವಾಮಿದ್ರೋಹವನ್ನು ಮಾಡಿ, ಲೋಕದಲ್ಲಿ ಉಂಟಾದ ಅಪಖ್ಯಾತಿಯನ್ನು ಪರಿಹರಿಸಿಕೊಳ್ಳಬೇಕೆಂಬ ಇಚ್ಛೆಯಿಂದಲೂ, ಮತ್ತು ರಾಜ್ಯಾಧಿಕಾರಗಳಲ್ಲಿ ತಾವು ಸ್ಥಿರವಾದ ಸ್ವಾತಂತ್ರ್ಯವನ್ನುಂಟುಮಾಡಿಕೊಳ್ಳಬೇಕೆಂಬ ಆಶೆಯಿಂದಲೂ, ಏನೂ ಅರಿಯದಿರುವ ಮಹಾಮಾತೃಶ್ರೀ ದೇವಾಜಮ್ಮಣ್ಣಿಯವರಿಗೆ ಈ ದೇವರಾಜಯ್ಯನು "ನಿಮ್ಮ ಜ್ಞಾತಿಯಾದ ಚಿಕ್ಕನಹಳ್ಳಿ ಚಾಮೇ ಅರಸಿನವರ ೩ ವರುಷ ವಯಸ್ಸುಳ್ಳ ಪುತ್ರರನ್ನು ನೀವು ಸ್ವೀಕಾರಮಾಡಿಕೊಂಡು, ಅವರಿಗೆ ಪಟ್ಟವನ್ನು ಕಟ್ಟಿಸಬೇಕು"ಎಂದು ಅರಿಕೆಮಾಡಿ, ಅಮ್ಮನವರ ಅನುಮತಿಯಿಂದ ಅವರನ್ನು ರಾಜಮರ್ಯಾದೆಯೊಡನೆ ಶ್ರೀರಂಗಪಟ್ಟಣಕ್ಕೆ ಕರೆಸಿದನು.

	ತಿಂಗಳು	ದಿನ
ಈ ಚಾಮರಾಜಒಡೆಯರವರ ಆಳಿಕೆ	೨೬	೨೮
ದಳವಾಯಿ ದೇವರಾಜಯ್ಯ ಮುಂತಾದವರ ಸಮ್ಮತಿಯಿಂದ ಆಳಿದ್ದು	೮	೨೮
ಸ್ವತಂತ್ರರಾಗಿ ಆಳಿದ್ದು	೧೮	೦
	೨೬	೨೮

ಹದಿನೆಂಟನೆಯ ಆಳಿಕೆ.

ಇಮ್ಮಡಿ ಕೃಷ್ಣರಾಜಒಡೆಯರವರು (A.D. 1734—A.D. 1766).

ಜನನ.—ಶಾ॥ ಶಕ ೧೬೫೦ನೇ (A.D. 1728) ಕೀಲಕ ಸಂವತ್ಸರ.

ಶಾ॥ ಶಕ ೧೬೫೩ನೇ (A.D. 1731) ವಿರೋಧಿಕೃತ್ಸಂವತ್ಸರದ ಆಶ್ವಯುಜ ಬಹುಳ ೪ ಬುಧವಾರದಲ್ಲಿ, ಚಿಕ್ಕನಹಳ್ಳಿ ಚಾಮೇಅರಸಿನವರ ೩ ವರುಷದ

ಪುತ್ರರನ್ನು ದೊಡ್ಡ ಕೃಷ್ಣರಾಜಒಡೆಯರವರ ಹಿರಿಯ ಕುಟುಂಬ ದೇವಾಜಮ್ಮಣ್ಣಿಯವರು ಯಥಾಶಾಸ್ತ್ರವಾಗಿ ಸ್ವೀಕಾರ ಮಾಡಿಕೊಂಡು ಚಿಕ್ಕ ಕೃಷ್ಣರಾಜಒಡೆಯರವರೆಂಬದಾಗಿ ನಾಮಕರಣವನ್ನು ಮಾಡಿದರು ಆವರೇ ಇಮ್ಮಡಿ ಕೃಷ್ಣರಾಜಒಡೆಯರವರು.

ಪಟ್ಟಾಭಿಷೇಕ.—ಶಾ॥ ಶಕ ೧೬೫೬ನೇ (A.D. 1734) ಆನಂದ ಸಂವತ್ಸರದ ಜ್ಯೇಷ್ಠ ಶುಕ್ಲ ೧೦ ಸ್ಥಿರವಾರ ಹಗಲು ೧೦ ಗಳಿಗೆಯಲ್ಲಿ ಅರಮನೆಯ ನಾಮ ತೀರ್ಥದ ತೊಟ್ಟಿಯಲ್ಲಿ ಇವರಿಗೆ ಪಟ್ಟಾಭಿಷೇಕ ಮಾಡಿಸಿದರು.

ಪತ್ನಿಯರು.—ಶಾ॥ ಶಕ ೧೬೬೮ನೇ (A.D. 1746) ಅಕ್ಷಯಸಂವತ್ಸರದಲ್ಲಿ ವಿವಾಹವಾದವರು.—(೧) ಜ್ಯೇಷ್ಠ ಪತ್ನಿ ಕಳಲೆ ಕರಾಚೂರಿ ನಂಜರಾಜಯ್ಯನವರ ಕುಮಾರತಿ ಪುಟ್ಟನ್ಮಣ್ಣಿಯವರು ಇವರ ಪ್ರತಿನಾಮ ದೇವಾಜಮ್ಮಣ್ಣಿಯವರು. ಶಾ॥ ಶಕ ೧೬೮೨ನೇ (A.D. 1760) ಪ್ರಮಾಥಿಸಂವತ್ಸರದ ಮಾಘ ಮಾಸದಲ್ಲಿ ವಿವಾಹವಾದವರು. (೨) ಬೇಲೂರು ವೆಂಕಟರಾಜಯ್ಯನವರ ಕುಮಾರತಿ ದೇವಾಜಮ್ಮಣ್ಣಿಯವರು. (೩) ಕತ್ತಿ ಗೋಪಾಲರಾಜಯ್ಯನವರ ಕುಮಾರತಿ ಲಕ್ಷ್ಮಮ್ಮಣ್ಣಿಯವರು.

ಸಂತಾನ.—ಕಳಲೆ ದೇವಾಜಮ್ಮಣ್ಣಿಯವರಲ್ಲಿ ಪುತ್ರರು.—(೧) ಬೆಟ್ಟದ ಚಾಮರಾಜಒಡೆಯರವರು. (೨) ನಂಜರಾಜಒಡೆಯರವರು ಪುತ್ರಿಯರು—(೧) ದೇವಾಜಮ್ಮಣ್ಣಿಯವರು. (೨) ದೇವಾಜಮ್ಮಣ್ಣಿಯವರು. ಬೇಲೂರು ದೇವಾಜಮ್ಮಣ್ಣಿಯವರಲ್ಲಿ—ದೇವರಾಜಒಡೆಯರವರು ಜನಿಸಿ ಬಾಲ್ಯ ಬಲ್ಲಿದೇ ಮೃತರಾದರು. ಲಕ್ಷ್ಮಮ್ಮಣ್ಣಿಯವರಲ್ಲಿ.—(೧) ಚಾಮುವಮ್ಮಣ್ಣಿಯವರು. (೨) ಅರಿಕುತಾರದ ಆತ್ರೇಯಸಗೋತ್ರದ ದೇವರಾಜೇ ಅರಸಿನವರ ಕುಟುಂಬ ಹೊನ್ನಾಜಮ್ಮಣ್ಣಿಯವರ ಗರ್ಭದಲ್ಲಿ ಒಬ್ಬ ಪುತ್ರರು ಒಬ್ಬ ಪುತ್ರಿಯರು ಜನಿಸಿದರು. ಈ ಪುತ್ರರೇ ಮೈಸೂರು ಸಂಸ್ಥಾನದ ದೊರೆತನಕ್ಕೆ ಸ್ವೀಕೃತರಾದ ಖಾಸಾ ಚಾಮರಾಜಒಡೆಯರವರು. ಈ ಪುತ್ರಿ ಚಾಮುವಮ್ಮಣ್ಣಿಯವರು ಮೂಗೂರು ಮನೆತನದ ವಸಿಷ್ಠಗೋತ್ರದ ದೇವರಾಜೇಅರಸಿನವರಿಗೆ ವಿವಾಹವಾದರು.

ಈ ಇಮ್ಮಡಿ ಕೃಷ್ಣರಾಜಒಡೆಯರವರ ಆಳಿಯಂದಿರುಗಳು.—(೧) ದೇವಾಜಮ್ಮಣ್ಣಿಯವರಿಗೆ—ಬಿಳಿಗೂಲಿ ಮನೆತನದ ಶ್ರೀವತ್ಸಗೋತ್ರದ ನಾರಣರಾಜೇಅರಸಿನವರು. (೨) ದೇವಾಜಮ್ಮಣ್ಣಿಯವರಿಗೆ—ತಗಡೂರು ಮನೆತನದ ಹರಿತಸಗೋತ್ರದ ಸಿದ್ದರಾಜೇಅರಸಿನವರು. (೩)

ಲಕ್ಷ್ಮಮ್ಮಣ್ಣಿಯವರ ಕುಮಾರತಿ ಚಾಮಮ್ಮಣಿ ಯವರಿಗೆ ಕೊತ್ತಾಗಾಲದ ಮನೆತನದ ವಿಶ್ವಾಮಿತ್ರಗೋತ್ರದ ಲಿಂಗರಾಜೇ ಅರಸಿನವರು.

ಕತ್ತಿಗೋಪಾಲರಾಜೇ ಅರಸಿನವರ ಹೆಣ್ಣು ಮಕ್ಕಳು ೫ ಜನದಲ್ಲಿ ಇಮ್ಮಡಿ ಕೃಷ್ಣ ರಾಜಒಡೆಯರವರ ಕುಟುಂಬ ಲಕ್ಷ್ಮಮ್ಮಣ್ಣಿಯವರು ಹೊರತು ಉಳಿದ ನಾಲ್ವರು ಅಕ್ಕ ತಂಗಿಯರು ವಿವಾಹವಾಗಿರುವ ಅರಸುಗಳು:—(೧) ಕೊತ್ತಾಗಾಲದ ಕೃಷ್ಣೇಅರಸಿನವರ ಮಗ ಲಕ್ಷ್ಮೀಕಾಂತಯ್ಯನವರಿಗೆ ವೀರರಾಜಮ್ಮಣಿಯವರು. (೨) ಕಳಲೆ ಮನೆತನದ ಮೊದ್ದರು ಕೃಷ್ಣೇಅರಸಿನವರ ಮಗ ಕಾಂತಯ್ಯನವರಿಗೆ ಚಂದಾಜಮ್ಮನವರು. (೩) ಕಾವೇರಿಪುರದ ದೊಡ್ಡೇಅರಸಿನವರಿಗೆ ಕೃಷ್ಣಾಜಮ್ಮನವರು. (೪) ನಿಲಸೋಗೆ ಮನೆತನದ ಚಿಕ್ಕರಾಜಯ್ಯನವರಿಗೆ ಕೆಂಪ ಲಕ್ಷ್ಮಮ್ಮನವರು.

ಈ ಇಮ್ಮಡಿ ಕೃಷ್ಣ ರಾಜಒಡೆಯರವರು ಸಕಲ ವಿದ್ಯಾಪಾರಂಗತರಾಗಿ ಶೌರ್ಯ ಧೈಯ ಔದಾರ್ಯ ಚಾತುರ್ಯ ಸೌಂದರ್ಯ ಯೌವನ ಸದಾಚಾರ ಸಾಹಸ ಸಂಪನ್ನರಾಗಿ ಸಕಲ ರಾಜನೀತಿಯನ್ನು ತಿಳಿದು, ಸ್ವತಂತ್ರರಾಗಿ ಧರ್ಮದಿಂದ ರಾಜ್ಯ ಪರಿಪಾಲನೆಯನ್ನು ಮಾಡುತ್ತಿರುವ ಸಮಯದಲ್ಲಿ, ಅಧಿಕಾರಗಳನ್ನು ಮಾಡುತ್ತಿದ್ದ ಜನಗಳು:—(೧) ದಳವಾಯಿ ದೇವರಾಜಯ್ಯ, (೨) ಸರ್ವಾಧಿಕಾರಿ ನಂಜರಾಜಯ್ಯ, (೩) ಕರಾಚೂರಿ ನಂಜರಾಜಯ್ಯ, (೪) ಪ್ರಧಾನ ಕನ್ನಂಬಾಡಿ ವೆಂಕಟಪತಯ್ಯ, (೫) ಪ್ರಧಾನ ಬಾಗಿಲಕಂದಾಚಾರದ ಚಿಕ್ಕಪ್ಪಯ್ಯ, (೬) ನವಾಬ ಹೈದರಲ್ಲೀಖರ್ಖಾ ಬಹದ್ದರ, (೭) ದಿವಾನ ಖಂಡೇರಾಯ.

ದಳವಾಯಿ ದೇವರಾಜಯ್ಯ ಮುಂತಾದವರ ಸ್ವಾಮಿದ್ರೋಹ ಮತ್ತು ಸರ್ವಾಧಿಕಾರಿ ನಂಜರಾಜಯ್ಯನು ತನ್ನ ಅವಸಾನದಲ್ಲಿ ದೊರೆಗಳಿಗೆ ಮಾಡಿದ ವಿಜ್ಞಾಪನೆ — ದೊರೆಗಳವರ ಬಾಲ್ಯದಲ್ಲಿ ಅರಮನೆಯಲ್ಲಿ ಮಹಾಮಾತೃಶ್ರೀಯವರು ಹೊರಗೆ ನಡೆಯುವ ಸೀಮೆಯ ಕಾರಬಾರುಗಳನ್ನು ಏನೂ ತಿಳಿಯದೆ ಅಂತಃಪುರದಲ್ಲಿಯೇ ಇದ್ದುದರಿಂದ, ದಳವಾಯಿ ದೇವರಾಜಯ್ಯ ಇವನ ತಮ್ಮ ಕರಾಚೂರಿ ನಂಜರಾಜಯ್ಯನು ಸಹ ತಮ್ಮ ಕಡೆಯ ಊಳಿಗದವರು ಲಂಚವನ್ನು ತೆಗೆದುಕೊಂಡು ಅವರು ಹೇಳಿದವರಿಗೆ, ಸರ್ವಾಧಿ

ಕಾರಿ ನಂಜರಾಜಯ್ಯನನ್ನಲ್ಲಿ ತಿಳಿಸಿ, ಗಡಿಗಳಲ್ಲಿ ಅಮಲು ವಿರಸ್ತೆ ಕಿಲ್ಲೆ ಮುಂತಾದ ಅಧಿಕಾರಗಳನ್ನು ಕೊಡಿಸುತ್ತ, ಅರಮನೆಗೆ ಬರತಕ್ಕ ಹಣ ದಲ್ಲಿ ಗಡಿಗಕ್ಕೆ ತಮ್ಮ ಖಾನಗಿ ಖರ್ಚಿಗೆ ೦-೩ ಸಾವಿರ ವರಹಗಳ ವರೆಗೂ ತರಿಸಿಕೊಳ್ಳುವುದಲ್ಲದೆ, ಗಡಿಗಳಲ್ಲಿ ತಮ್ಮ ಸ್ವಂತ ಪಣ್ಯವೆಂಬದಾಗಿ ಹೆಸರಿಟ್ಟು, ಅರಮನೆಗೆ ಬರತಕ್ಕ ವಾರದ ದವಸಗಳಲ್ಲಿ ಕೆಲವನ್ನು ತಾವೇ ತರಿಸಿಕೊಳ್ಳುತ್ತ ಇದ್ದರು. ಇವರಕಡೆ ಊಳಿಗದವರೂ ಇದೇ ಪರಿ ಯಾಗಿ ಗಡಿಗಳತಾರತಮ್ಯ ವಿದ್ದಂತೆ ೧೦೦—೨೦೦ ವರಹಗಳನ್ನು ತರಿಸಿ ಕೊಳ್ಳುತ್ತಿದ್ದರಲ್ಲದೆ, ಪ್ರಧಾನವೆಂಕಟಪತಯ್ಯನು ಗಡಿ ೧ಕ್ಕೆ ೫೦೦ ರಿಂದ—೧೦೦೦ ವರಹದ ಪರ್ಯಂತ ತರಿಸಿಕೊಂಡು ಸ್ವಾಮಿದ್ರೋಹ ಮಾಡುತ್ತಿದ್ದನು. ಈ ಪ್ರಕಾರ ಇವರ ಆಳಿಕೆಯಲ್ಲಿ ಸರ್ವಾಧಿಕಾರಿ ನಂಜರಾಜಯ್ಯನು ೫—೬ ವರುಷಗಳ ವರೆಗೂ ದುಷ್ಟಜನರ ಸಂಗಡ ಸೇರಿಕೊಂಡು, ಎಲ್ಲಾ ಕಾರಬಾರನ್ನು ಮಾಡುತ್ತ ವೆಂಚನೆಯಿಂದ ಬಹಳ ಹಣವನ್ನು ಸಂಪಾದಿಸಿ, ತನಗೆ ಸಂತಾನವಿಲ್ಲದುದರಿಂದ, ತನ್ನ ಅವಸಾನ ಕಾಲದಲ್ಲಿ ಪರಲೋಕದ ಮೇಲೆ ದೃಷ್ಟಿಯಿಟ್ಟು, ತಾನು ಸಂಪಾದಿಸಿದ ದ್ರವ್ಯವು ವ್ಯರ್ಥವಾಗಬಾರದೆಂದು, ದೊರೆಗಳವರ ಎರಡು ಪಾದಗಳಿಗೂ ಎರಡು ಲಕ್ಷವರಹಗಳನ್ನು ನಜರುಮಾಡಿ, ತನ್ನದೇಹ ಸಾರ್ಥಕವಾಗುವುದಕ್ಕೂ ತನ್ನ ಹೆಂಡತಿ ಚಂದಾಯಮ್ಮಣ್ಣಿಯ ಜೀವ ನಕ್ಕೂ ೫೦ ಸಾವಿರ ವರಹವನ್ನು ಕೊಟ್ಟು, ದೊರೆಗಳವರ ಸನ್ನಿಧಿಯ ಲ್ಲಿಯೂ ಮಹಾಮಾತೃ ಶ್ರೀಯವರಸನ್ನಿಧಿಯಲ್ಲಿಯೂ ವಿಜ್ಞಾಪನೆಯನ್ನು ಮಾಡಿದ ವಿವರವೇನೆಂದರೆ :—

"ಮೆರಾಟೆಯವರು ಮೋಸಗಾರರಾದುದರಿಂದ ನಂಬಕೆಲಸವಿಲ್ಲ. ಕನ್ನಂಬಾಡಿ ವೆಂಕಟಪತಯ್ಯನಿಗೆ ಉಭಯವಿಚಾರದ ಚಾವಡಿಯಲ್ಲಿ ಕರಣಿಕತನವನ್ನು ಕೊಡುವುದೇ ಹೊರತು ಪ್ರಧಾನತನದಲ್ಲಿ ನಿಲ್ಲಿಸ ಕೆಲಸವಿಲ್ಲ. ಮೊಗಲರ ಸಂಗಡ ದ್ವೇಷಮಾಡಕೆಲಸವಿಲ್ಲ. ಮಂದ್ಯಗಿರಿ ಮಲ್ಲರಾಜಯ್ಯನು ದೊರೆಗಳವರ ಅಪ್ಪಣೆಯ ಮೇರೆಗೆ ಅರಮನೆಯಿಂದ ೧೦ ಸಾವಿರ ವರಹಕೊಟ್ಟು ಕ್ರಯಕ್ಕೆ ತೆಗೆದುಕೊಂಡು ಬೆಂಗಳೂರಲ್ಲಿ ಕತ್ತಿಗೋಪಾಲರಾಜಯ್ಯನವರ ತೈನಾತಿಗೆ ಕೊಟ್ಟಿರುವ ಮಹಮ್ಮದ್

ಶಾಬಾಸ್ಖಾಬಿ, ಇವನ ತಮ್ಮ ಹೈದರಲ್ಲೀಖಾನ್, ಇವರಲ್ಲಿ ಹೈದರಲ್ಲಿಖಾನ್ ಎಂಬವನನ್ನು ೫೦ ಕುದುರೆಗಳಿಗೂ ೧೦೦ ಜನ ಪೇದೆಗಳಿಗೂ ಗೊತ್ತು ಮಾಡಿ ಇಡುವುದಲ್ಲದೆ, ಹೆಚ್ಚು ಅಧಿಕಾರವನ್ನು ಕೊಡಕೆಲಸನಿಲ್ಲ. ಹೆಚ್ಚು ಅಧಿಕಾರಕೊಟ್ಟರೆ ಈಗ ಇವನು ಅನುಕೂಲನಾಗಿದ್ದರೂ ಇವನ ಮಗನ ದಿವಸಕ್ಕಾದರೂ ತೊಂದರೆ ಸಂಭವಿಸಬಹುದು" ಎಂದು ವಿಜ್ಞಾಪನೆ ಮಾಡಿ, ಶಾಕೆ ೧೬೬೦ನೇ (A.D. 1739) ಸಿದ್ಧಾರ್ಥಿ ಸಂವತ್ಸರದಲ್ಲಿ ಶ್ರೀರಂಗಪಟ್ಟಣದ ಕಾವೇರೀ ನದೀತೀರದಲ್ಲಿ ದೈವಾಧೀನನಾದನು. ಅನಂತರ ಈ ಸರ್ವಾಧಿಕಾರವನ್ನು ದಳವಾಯಿ ದೇವರಾಜಯ್ಯನು ತನ್ನ ತಮ್ಮ ನಾದ ಕರಾಚೂರಿ ನಂಜರಾಜಯ್ಯನಿಗೆ ಕೊಡಿಸಿದನು.

ಹೈದರಲ್ಲೀಖಾನ್ ಇವನ ಅಣ್ಣ ಮಹಮ್ಮದ್ ಶಾಬಾಸ್ಖಾಬಿ ಇವನ ಚಿಕ್ಕಪ್ಪ ಗುಲಾಮಲ್ಲಿಸಾಬಿ ಇವರನ್ನು ಅರಮನೆಗೆ ೧೦ ಸಾವಿರ ವರಹಗಳಿಗೆ ಕ್ರಯಕ್ಕೆ ತೆಗೆದು ಕೊಂಡ ವಿಷಯ —ಪೂರ್ವದಲ್ಲಿ ಈ ಹೈದರಲ್ಲೀಖಾನನ ಮೂಲಪುರುಷನಾದ ಅಷ್ಟರಾಫೆಷಾ ಎಂಬ ಬಬ್ಬ ಸರದಾರನು ಅರಬಿಸ್ಥಾನದಿಂದ ತನ್ನ ಹೆಂಗಸರು ಮಕ್ಕಳು ಸಹಿತವಾಗಿ ವಿಜಾಪುರಕ್ಕೆ ಬಂದು ಅಲ್ಲಿ ಪಾದಷಾಹರ ಬಳಿ ಚಾಕರಿಗೆ ನಿಂತನು. ಇವನ ವಂಶದಲ್ಲಿ ಹುಟ್ಟಿದ ಬಬ್ಬ ಸರದಾರನು ತನ್ನ ಹೆಂಡತಿ ೩ ಜನ ಗಂಡು ಮಕ್ಕಳು ಸಹಿತವಾಗಿ, ಅಲ್ಲಿ ಜೀವನಕ್ಕೆ ಸಾಲದೆ ತುಟಾಯಿಸಿ ಕೋಲಾರಕ್ಕೆ ಬಂದನು. ಬಳಿಕ ಆ ಸರದಾರನೂ ಅವನ ಹೆಂಡತಿಯೂ ಕೋಲಾರದಲ್ಲಿಯೇ ತೀರಿಹೋದುದರಿಂದ ಅವರ ಗೋರಿಯನ್ನು ಅಲ್ಲಿಯೇ ಮಾಡಿ, ಈ ಮೂರುಜನ ಗಂಡು ಮಕ್ಕಳೂ ಆ ಊರನ್ನು ಬಿಟ್ಟು ತಮ್ಮ ತಮ್ಮ ಹೆಂಡಿರು ಮಕ್ಕಳೊಡನೆ ಹೊರಟರು. ಇವರಲ್ಲಿ ಹಿರಿಯ ಮಗನಾದ ಮಹಮ್ಮದ್ ಫತ್ತುಲ್ಲಾ ಸಾಬಿಯು ನೀರ್ಮದ ನವಾಬರಲ್ಲಿ ಚಾಕರಿಗೆ ನಿಂತು, ೫೦೦ ಕುದುರೆಗಳನ್ನೂ ೬೫೦ ಜನ ಸಿಲೆಕಾರರನ್ನೂ ಭರ್ತಿಮಾಡಿ, ಆ ಜನಕ್ಕೆ ತಾನು ಗೊತ್ತುಗಾರನಾಗಿ, ನೀರ್ಮದ ಪೈಕಿ ಗುಮ್ಮನಹಳ್ಳಿ ಎಂಬ ಗ್ರಾಮವನ್ನು ಜಹಗೀರಾಗಿ ಸಂಪಾದಿಸಿ, ಫತ್ತೇನಾಯಕನೆಂಬ ಹೆಸರನ್ನು ಪಡೆದನು. ಈತನೇ ನವಾಬನ ತಂದೆ. ಇವನ ಹಿರಿಯತಮ್ಮ ಗುಲಾಂಹೈದರಲ್ಲೀ ಸಾಬನು ಶ್ರೀರಂಗಪಟ್ಟಣಕ್ಕೆ ವಳಿತವಾದ ಮೆದ್ದಗಿರಿ ಎಂಬ ಗಡಿಯಲ್ಲಿ

ಅಧಿಕಾರವನ್ನು ಮೊಡುತ್ತಲಿದ್ದ ಮೆಲ್ಲರಾಜಯ್ಯನ ಬಳಿಯಲ್ಲಿ ೨೦೦ ಪೇದೆ ೫೦ ಕುದುರೆಗಳಿಗೆ ಗೊತ್ತುಗಾರನಾಗಿ ನಿಂತನು. ಇವನಿಗೆ ಮಕ್ಕಳಿಲ್ಲ. ಇವನ ಕಿರಿಯತಮ್ಮ ಗುಲಾಮುಲ್ಲಿ ಸಾಬಿಯು ದೊಡ್ಡಬಳ್ಳಾಪುರದ ಪಾಳೆಯಗಾರನ ಬಳಿ ಕಿಲ್ಲೆಗೆ ಗೊತ್ತುಗಾರನಾಗಿದ್ದನು. ಇವನಿಗೂ ಮಕ್ಕಳಿಲ್ಲ. ಈ ಮೂರು ಜನದಲ್ಲಿ ಹಿರಿಯವನಾದ ಫತ್ತೇನಾಯಕನಿಗೆ ಇಬ್ಬರು ಗಂಡುಮಕ್ಕಳು, ಹಿರಿಯಮಗ ಶಾಬಾಸ್ಖಾಬಿ, ಕಿರಿಯಮಗ ಹೈದರಲ್ಲಿಖಾನ್, ಈತನೇ ನವಾಬನು. ಇವರುಗಳ ತಂದೆಯು ತೀರಿಹೋಗುವ ವರೆಗೆ ಅತನು ಮಾಡಿದ ಸಾಲ ಸೀರ್ಯದ ನವಾಬರ ಬಳಿಯಲ್ಲಿ ೩,೦೦೦ ವರಹಗಳು, ಅಲ್ಲಿಯ ವರ್ತಕರ ಬಳಿಯಲ್ಲಿ ೬,೦೦೦ ವರಹಗಳು, ಈ ಒಂಬತ್ತು ಸಾವಿರ ವರಹಗಳ ಸಾಲದ ತಗಾದೆಯು ಬಹಳವಾದುದರಿಂದ, ಇವರು ಈ ಹಣಕ್ಕಾಗಿ ತಮ್ಮ ಹೆಂಗಸರು ಮಕ್ಕಳನ್ನು ಒಲುಕೊಟ್ಟು, ದೊಡ್ಡಬಳ್ಳಾಪುರಕ್ಕೆ ಬಂದು, ತಮ್ಮ ಅಣ್ಣನೆಯ ಚಿಕ್ಕಪ್ಪನಾದ ಗುಲಾಮುಲ್ಲಿಸಾಬಿಗೆ ಈ ವೃತ್ತಾಂತವನ್ನು ಹೇಳಿದರು. ಈಗ ಗುಲಾಮುಲ್ಲಿಯು ತಾನು ದೊಡ್ಡಬಳ್ಳಾಪುರದ ಪಾಳೆಯಗಾರನ ಬಳಿಯಲ್ಲಿ ಬಂದು ಸಾವಿರ ವರಹಗಳನ್ನು ಸಾಲ ಮಾಡಿದೇನೆಂದು ಇವರ ಸಂಗಡ ಹೇಳಿ, ಈ ಸಾಲಗಳನ್ನು ತೀರಿಸುವುದಕ್ಕಾಗಿ ಇವರನ್ನು ಕರೆದುಕೊಂಡು ಮೆದ್ದಗಿರಿಗೆ ಬಂದು, ಅಲ್ಲಿ ತನ್ನ ಎರಡನೆಯ ಅಣ್ಣನಾದ ಗುಲಾಂ ಹೈದರಲ್ಲೀಸಾಬಿಗೆ ಈ ವಿವರಗಳನ್ನು ಹೇಳಿದನು. ಆಗ ಗುಲಾಂಹೈದರಲ್ಲೀ ಸಾಬನು ಮೆದ್ದಗಿರಿಯಲ್ಲಿ ಲಘಕಾರವನ್ನು ಮಾಡುತ್ತಿದ್ದ ಮೆಲ್ಲರಾಜಯ್ಯನ ಬಳಿಗ ಇವರನ್ನು ಕರೆದುಕೊಂಡು ಹೋಗಿ, ಇವರುಗಳ ಸಾಲದ ವೃತ್ತಾಂತಗಳನ್ನೆಲ್ಲ ಹೇಳಿ "ಈ ಸಾಲವನ್ನು ನೀವು ದೊರೆಗಳವರಿಗೆ ಅರಿಕೆಮಾಡಿ ತೀರಿಸಿಕೊಟ್ಟರೆ, ನಾವುಗಳು ದೊರೆಗಳವರ ಪಾದದಲ್ಲಿ ಜಾವಜಕಾರಿ ಅಪ್ಪಣೆ ಆದರೂ, ಸ್ವಾಮಿದ್ರೋಹವಿಲ್ಲದೆ ನಿರ್ವಂಚನೆಯಿಂದ ನಡೆದುಕೊಳ್ಳುವವು" ಎಂದು ಪ್ರಮಾಣ ಮಾಡಿದುದರಿಂದ, ಆ ಮೆಲ್ಲರಾಜಯ್ಯನು ಇವರು ಶೂರರೆಂಬುದಾಗಿಯೂ, ಮುಂದೆ ಯಾವ ಕೆಲಸವನ್ನು ಕೊಟ್ಟರೂ ನಿರ್ವಹಿಸುವರೆಂಬುದಾಗಿಯೂ ತಿಳಿದು ದೊರೆಗಳವರ ಸನ್ನಿಧಿಗೆ ಅಜ್ಞೆಯ ಮೂಲಕವಾಗಿ ವಿನ್ನಪ ಮಾಡಿ

ಕೊಂಡು, ದೊರೆಗಳವರ ಅಪ್ಪಣೆ ಬಂದಂತೆ ಅರಮನೆಯಿಂದ ೧೦ ಸಾವಿರ ವರಹಗಳನ್ನು ಕೊಟ್ಟು ಇವರನ್ನು ಕ್ರಯಕ್ಕೆ ತೆಗೆದುಕೊಂಡನು. ಅನಂತರ ಇವರು ತಮ್ಮ್ಮ ತಮ್ಮ್ಮ ಸಾಲಗಳನ್ನು ತೀರಿಸಿ ಓಲುಕೊಟ್ಟ ದ್ದವರನ್ನು ಬಿಡಿಸಿಕೊಂಡು ಬಂದು, ಮದ್ದಗಿರಿಯಲ್ಲಿ ಗುಲಾಂಹೈದರ ಲ್ಲಿಯ ಬಳಿಯಲ್ಲಿಯೇ ನಿಂತರು. ಬಳಿಕ ಈ ಗುಲಾಂಹೈದರಲ್ಲಿಯು ತೀರಿ ಹೋದಮೇಲೆ ಮೆಲ್ಲರಾಜಯ್ಯನು ಈ ಶಾಬಾಸ್ನಬಿಗೆ ಅದೇ ಚಾಕರಿ ಯನ್ನು ನೇಮಕಮಾಡಿ, ಇವನ ತಮ್ಮ್ಮ ಹೈದರಲ್ಲಿಖಾನನನ್ನು ಜೆಂಗಳೂ ರಲ್ಲಿ ಅಧಿಕಾರ ಮಾಡುತ್ತಿದ್ದ ಕತ್ತಿ ಗೋಪಾಲರಾಜಯ್ಯನವರ ಬಳಿಗೆ ದೊರೆಗಳವರ ಅಪ್ಪಣೆಯ ಮೇರೆಗೆ ತೈನಾತಿಗೆ ಕಳುಹಿಸಿ ಕೊಟ್ಟನು.

ಹೈದರಲ್ಲಿಯು ದೇವನಹಳ್ಳಿಯನ್ನು ಸಾಧಿಸಿದ್ದು.—ಕತ್ತಿ ಗೋಪಾಲರಾ ಜಯ್ಯನವರು ದೇವನಹಳ್ಳಿಗೆ ಮುತ್ತಿಗೆ ಹಾಕಿ, ಶ್ರೀರಂಗಪಟ್ಟಣದಿಂದ ಸರ್ವಾಧಿಕಾರಿ ಕರಾಚಕೂರಿ ನಂಜರಾಜಯ್ಯನನ್ನು ಕರೆಸಿಕೊಂಡು, ಒಂಬತ್ತು ತಿಂಗಳವರೆಗೂ ಲಡಾಯಿ ಮಾಡುವ ಕಾಲದಲ್ಲಿ, ಈ ಶಾಬಾ ಸ್ನಬಿಯು ಸೋತುದರಿಂದ, ಇವನ ತಮ್ಮ್ಮನಾದ ಮತ್ತು ಫತ್ತೆನಾಯಕನ ಮಗನಾದ ಮುಂದೆ ನವಾಬನೆನಿಸಿಕೊಳ್ಳುವ ಹೈದರನಾಯಕನು ಶೂರ ಜನಗಳ ಎದುರಿಗೆ ಪರೀಕ್ಷೆಕೊಟ್ಟು, ಸನ್ಮಾನಗಳನ್ನು ಪಡೆದು, ಶೂರ ನೆನಿಸಿಕೊಂಡು, ತನ್ನ ಅಣ್ಣನ ಕೆಲಸದಲ್ಲಿ ನಿಂತು, ಶಾ॥ ಶಕ ೧೬೬೯ನೇ (A.D. 1746) ಅಕ್ಷಯ ಸಂವತ್ಸರದಲ್ಲಿ ದೇವನಹಳ್ಳಿಯನ್ನು ಸಾಧಿಸಿ, ದಿನದಿನಕ್ಕೆ ಪ್ರವರ್ಧಮಾನನಾಗುತ್ತ ಬಂದನು.

ದಳವಾಯಿ ದೇವರಾಜಯ್ಯನ ಮೋಸ.—ಶ್ರೀರಂಗಪಟ್ಟಣದಲ್ಲಿ ದಳವಾಯಿ ದೇವರಾಜಯ್ಯನು ಪ್ರಧಾನವೆಂಕಟಪತಯ್ಯನ ಕೈಯಲ್ಲಿ ಮೂರು ಲಕ್ಷ ವರಹಗಳನ್ನು ದಂಡತೆಗೆದುಕೊಂಡು ತನ್ನ ಮನೆಗೆ ಹಾಕಿಕೊಂಡು, ಅವನ ಪ್ರಧಾನತನವನ್ನು ತೆಗೆದು, ಅದನ್ನು ಬಾಗಿಲ ಕಂದಾಚಾರದ ಚಾವಡಿ ಯಲ್ಲಿದ್ದ ೪೦ ವರ್ಷದವಯಸ್ಸುಳ್ಳ ಚಿನ್ನಪ್ಪಯ್ಯನಿಗೆ ಕೊಟ್ಟನು.

ಹೈದರನಾಯಕನು ೧೫ ಒಂಟೆಗಳ ಮೇಲೆ ಅಕ್ಬರ್ ಮೊಹರುಗಳನ್ನು ತಂದದ್ದು.—ಹೀಗಿರುವ ಸಮಯದಲ್ಲಿ ದಿಳ್ಳಿ ಬಾದಷಾಹರ ಕಡೆ ವಜೀರ

ನಾಗಿದ್ದ ನಾಸರಜಂಗನು ಆರ್ಕಾಡಿಗೆ ಮುತ್ತಿಗೆ ಹಾಕುವ ನಿಮಿತ್ತವಾಗಿ, ಲಕ್ಷ್ಮಾಂತರ ಸೈನ್ಯದೊಡನೆ ಹೊರಟು ಬರುವ ಸಮಯದಲ್ಲಿ, ಶ್ರೀರಂಗಪಟ್ಟಣದ ದೊರೆಗಳವರಿಗೆ "ನನಗೆ ಸಹಾಯವಾಗಿ ನಿಮ್ಮ ಕಡೆ ಸೇನೆ ಬರಬೇಕು" ಎಂದು ಹೇಳಿಕಳುಹಿಸಿಕೊಟ್ಟ ಮೇರೆಗೆ, ದೊರೆಗಳವರು ತಮ್ಮಲ್ಲಿಬುದ್ಧಿವಂತನಾಗಿಯೂ ಪರಾಕ್ರಮಶಾಲಿಯಾಗಿಯೂ ಇದ್ದ ಹೈದರ ನಾಯಕನನ್ನೂ ಬರಕ್ಕೆ ವೆಂಕಟರಾಯನನ್ನೂ ಕೆಲವು ಸೇನೆಯೊಡನೆ ಕಳುಹಿಸಿಕೊಟ್ಟರು. ನಾಸರಜಂಗನು ಆರ್ಕಾಡು ನವಾಬನನ್ನು ಓಡಿಸಿಬಿಟ್ಟು, ಆರ್ಕಾಡನ್ನು ಸ್ವಾಧೀನ ಮಾಡಿಕೊಂಡು, ದಿಲ್ಲಿಗೆ ಹೊರಟು ಹೋಗುವ ಮಾರ್ಗದಲ್ಲಿ, ಆರ್ಕಾಡು ಚಂದಾಸಾಹಬನು ಈಗ್ನೋರ್ಲು ನವಾಬರ ಬಳಿಗೆ ಹೇಳಿ ಕಳುಹಿಸಿದಂತೆ ಆ ನವಾಬನು ದಂಡನ್ನು ತೆಗೆದುಕೊಂಡು ಬಂದು, ರಾಚಕೋಟೆ ಎಂಬ ಸ್ಥಳದಲ್ಲಿ ಯುದ್ಧಮಾಡಿ, ನಾಸರಜಂಗನನ್ನು ಹೊಡೆದು ಹಾಕಿದನು. ಅನಂತರ ಬರಕ್ಕೆ ವೆಂಕಟರಾಯನ ಸಂಗಡ ಹೋಗಿದ್ದ ಹೈದರನಾಯಕನು ಆ ಜನಗಳನ್ನು ಹೊಡೆದು ಆ ದಂಡಿನಲ್ಲಿ ೧೫ ಬಂಟೆಗಳ ಮೇಲಿದ್ದ ಅಕ್ಕರಿ ಮೊದಲಾದ ಸರಕುಗಳ ಹೇರುಗಳನ್ನು ತೆಗೆದುಕೊಂಡು ಶ್ರೀರಂಗಪಟ್ಟಣಕ್ಕೆ ಬಂದನು. ಈ ವರ್ತಮಾನವನ್ನು ತಿಳಿದ ದಳವಾಯಿ ದೇವರಾಜಯ್ಯನು ಆ ಹಣವು ತನಗೆ ಬರಬೇಕೆಂದು ಕೇಳಿದ್ದಕ್ಕೆ ಹೈದರ ನಾಯಕನು ಅವನಿಗೆ ಕೊಡದೆ ದೊರೆಗಳವರಿಗೆ ನಜರು ಮಾಡಿದನು. ದೊರೆಗಳವರು ೧೫ ಬಂಟೆ ಸರಕುಗಳ ಹೇರುಗಳನ್ನು ಸರಕಾರಕ್ಕೆ ತೆಗೆದುಕೊಂಡು, ಸಿಂತ ೩ ಹೇರುಗಳನ್ನು ಹೈದರನಾಯಕನಿಗೆ ಇನಾಮಾಗಿ ಅಪ್ಪಣೆಕೊಟ್ಟರು.

ಚಂದಾಸಾಹೇಬನ ಗತಿ.—ಅನಂತರ ದೊರೆಗಳವರಿಗೆ ಸೇರಿದ್ದ ತಿರುಚನಾಪಳ್ಳಿಯನ್ನು ಆರ್ಕಾಡು ಚಂದಾಸಾಬಿಯು ಕಟ್ಟಿಕೊಂಡಿದ್ದನೆಂಬ ವರ್ತಮಾನವು ದೊರೆಗಳವರಿಗೆ ಶ್ರುತವಾದುದರಿಂದ, ತಿರುಚನಾಪಳ್ಳಿಯನ್ನು ಮತ್ತೆ ಸಾಧಿಸಿಕೊಂಡು ಬರುವುದಕ್ಕೆ ಕರಾಚಕೂರಿ ನಂಜರಾಜೇ ಅರಸಿನವರ ಸಂಗಡ ಜವಾಬ್ದಾರಿ ಹೈದರನಾಯಕನನ್ನು ಕಳುಹಿಸಿಕೊಟ್ಟರು. ಅವರು ತಿರುಚನಾಪಳ್ಳಿಗೆ ಹೋಗಿ ಮುತ್ತಿಗೆಯನ್ನು ಹಾಕಿ

ಯುವ ಮೊಹಮ್ಮದ್ದಲ್ಲೀಖಾನನು ಶ್ರೀರಂಗಪಟ್ಟಣದ ದೊರೆಗಳವರ ಕಟಾಕ್ಷಕ್ಕೆ ಪಾತ್ರನಾಗಬೇಕೆಂದು, ಚನ್ನಪಟ್ಟಣದ ಮೊಹಮ್ಮದ್ದಲ್ಲೀಖಾನನು ಫಿತೂರಿಯಿಂದ ಆಕಾಡು ಚಂದಾಸಾಹೇಬನನ್ನೂ ಅವನಕಡೆ ದಿವಾ ಶೇಷಗಿರಿರಾಯನನ್ನೂ ಸದ ತನ್ನ ಗುಪಾರಕ್ಕೆ ಕರೆಸಿ, ಇನ್ನೊಬ್ಬರ ತಲೆಯನ್ನು ಹೊವೆಸಿ, ಅವರಿಬ್ಬರ ಮುಖಾಂತರ ಶ್ರೀರಂಗಪಟ್ಟಣಕ್ಕೆ ಕಳುಹಿಸಿ ಕೊಟ್ಟನು. ಬಳಿಕ ದೊರೆಗಳವರು ಶ್ರೀರಂಗಪಟ್ಟಣದ ಕೋಟೆಯ ಬಾಗಿಲಿಗೆ ಈ ಎರಡು ತಲೆಗಳನ್ನೂ ಕಟ್ಟಿಸಿದರು.

ಹೈದರನಾಯಕನು ಕರಾಚೂರಿ ನಂಜರಾಜಯ್ಯನನ್ನು ಬಿಡಿಸಿದ್ದು.— ಅನಂತರ ಈ ಮೊಹಮ್ಮದ್ದಲ್ಲೀಖಾನನು ತಿರುಚನಾಪಳ್ಳಿಯನ್ನು ಸ್ವಾಧೀನ ಮಾಡಿಕೊಂಡು, ಕರಾಚೂರಿ ನಂಜರಾಜಯ್ಯನನ್ನು ಕೋಟೆಯೊಳಗೆ ಒರಬೇಕೆಂದು ಹೇಳಿ, ಮೋಸದಿಂದ ಕರೆದುಕೊಂಡು ಹೋಗುವ ಸಮಯದಲ್ಲಿ ಎಚ್ಚೆತ್ತುದಾರೆ ಹೈದರಲ್ಲೀಖಾನನು "ಇದು ತಕ್ಕ ವೇಳೆಅಲ್ಲ, ಕೋಟೆಯೊಳಗೆ ಹೋಗಬೇಡಿ" ಎಂದು ಹೇಳಿದರೂ ಅವನ ಮಾತನ್ನು ಮನಸ್ಸಿಗೆ ತಾರದೆ, ನಂಜರಾಜಯ್ಯನು ತಿರುಚನಾಪಳ್ಳಿಯ ಪುಲಿಮುಕದ ಬಾಗಿಲಿಂದ ಕೋಟೆಯ ಜೀಬಿಯೊಳಕ್ಕೆ ಸ್ವಲ್ಪ ಸೈನ್ಯದೊಡನೆ ಹೋದನು. ಆಗ ಈ ಮೊಹಮ್ಮದ್ದಲ್ಲೀಖಾನನು ಒಳಬಾಗಿಲು ಹೊರಬಾಗಿಲುಗಳೆರಡನ್ನೂ ಹಾಕಿಸಿ, ಜೀಬಿಯೊಳಗೆ ಈ ನಂಜರಾಜಯ್ಯನನ್ನು ನಿಲ್ಲಿಸಿಕೊಂಡು ಯುದ್ಧ ಮಾಡುತ್ತಿದ್ದನು. ಆ ಸಮಯದಲ್ಲಿ ಇವರ ಸಂಗಡ ಹೋಗಿದ್ದ ಹೈದರನಾಯಕನು ಬಹಳ ಯುದ್ಧ ಮಾಡಿ, ಆ ಜನಗಳನ್ನು ಹೊಡೆದು, ಈ ಕರಾಚೂರಿ ನಂಜರಾಜಯ್ಯನನ್ನು ಹೊರಕ್ಕೆ ಬಿಡಿಸಿಕೊಂಡು ಬಂದನು.

ಹೈದರಲ್ಲೀಖಾನನು ಮಹಮ್ಮದ್ದಲ್ಲೀಖಾನನನ್ನು ಗದ್ದಿ ದಂಡಿನವರನ್ನು ಸಮಾಧಾನ ಪಡಿಸಿದ್ದು.—ಅನಂತರ ಚನ್ನಪಟ್ಟಣದ ಮೊಹಮ್ಮದ್ದಲ್ಲೀಖಾನನು "ಶ್ರೀರಂಗಪಟ್ಟಣದ ದೊರೆಗಳವರ ಸೇನೆಯು ಬಹಳವಾಗಿ ಬಂದಿದೆ, ಅದರಲ್ಲಿ ಶೂರನಾದ ಹೈದರಲ್ಲೀಖಾನನೆಂಬವನು ಇದಾನೆಂದು ಕೇಳಿದೇನೆ, ಈಗ ಇವರನ್ನು ಹೊಡೆದು ಓಡಿಸಬೇಕಾದರೆ ಇಂಗ್ಲೀಷರ ದಂಡು ಹೊಂತು ಬೇರೆ ಇಲ್ಲ" ಎಂದು ತಿಳಿದು, ಇಂಗ್ಲೀಷರ ಸಹಾಯ ಮಾಡಿ

ಕೊಂಡು ಬಂದು, ೪—೧೦ ಆನೈತ್ತಿ ಬಹಳ ಲಡಾಯಿ ಮಾಡುವ ಸಮಯದಲ್ಲಿ, ದೊರೆಗಳವರ ಕಡೆಯಲ್ಲಿದ್ದ ಫೌಜು ಕಾಲದೆ ಇದ್ದುದರಿಂದ, ಈ ಹೈದರಲ್ಲೀಖಾನನು ನಾಸರಜಂಗಿನ ಲಡಾಯಿಹೊಕ್ಕದ್ದಮೆಯಲ್ಲಿ ದೊರೆಗಳವರು ತನಗೆ ಇನಾಮಾಗಿ ಅಪ್ಪಣೆ ದಯಪಾಲಿಸಿದ್ದ ದ್ರವ್ಯದಲ್ಲಿ ಬಹಳ ಸೇನೆಯನ್ನು ಕಟ್ಟಿ ಮೂರುವೆರುಷಗಳವರೆಗೂ ಯುದ್ಧಮಾಡಿ, ಆ ಮಹಮ್ಮದಲ್ಲೀಖಾನನನ್ನು ಹೊಡೆದು ಓಡಿಸಿಬಿಟ್ಟು, ಶಾ॥ ಶಕ ೧೬೭೯ನೇ (A.D.1755) ಯುವಸಂವತ್ಸರದಲ್ಲಿ ತಿರುಚನಾಪಳ್ಳಿಯನ್ನು ಸ್ವಾಧೀನಮಾಡಿಕೊಂಡು, ಶ್ರೀರಂಗಪಟ್ಟಣಕ್ಕೆ ಹೊರಟು ಬರುತ್ತಿದ್ದನು. ಮಾರ್ಗದಲ್ಲಿ ದೊರೆಗಳವರ ಕಡೆಯ ದಂಡಿನ ಜನಗಳು ತಮಗೆ ಸಂಬಳವನ್ನು ಇಲ್ಲಿಯೇ ಕೊಡಬೇಕೆಂದು ಕರಾಚೂರಿ ನಂಜರಾಜೇಅರಸಿನವರನ್ನು ತಡೆದುದರಿಂದ, ಅವರು ಈ ಜನಗಳನ್ನು ಸಮಜಾಯಿಷಿ ಮಾತುವುದಕ್ಕೆ ತಮಗೆ ಸಾಮರ್ಥ್ಯವಿಲ್ಲದೆ, ಹಿಂದು ಮುಂದು ತೋರದೆ, ಹೈದರಲ್ಲೀಖಾನನನ್ನು ಕರೆದು "ನೀನು ಬುದ್ಧಿವಂತನು ಈ ಜನಗಳನ್ನು ಸಮಜಾಯಿಷಿಮಾಡು" ಎಂದು ಹೇಳಲು, ಆಗ ಹೈದರಲ್ಲೀಖಾನನು ಕಣಿವೆಯ ಕೆಳಗೆ ಅಮಲು ಮಾಡುತ್ತಿದ್ದ ನಾಮಕಲ್ಲು ರಾಮರಣ್ಣಿ ಮುಂತಾದವರನ್ನು ಕರೆಸಿ, ಅರಸಿನವರಿಂದ ಕೆಲವರಿಗೆ ಸನ್ಮಾನಗಳನ್ನು ಮಾಡಿಸಿ, ಕೆಲವರನ್ನು ನಿಗ್ರಹಿಸಿ, ಆ ಸೀಮೆಯಿಂದ ಬರತಕ್ಕ ಪಣವು ನಿಲ್ಲುವುದಕ್ಕೆ ನಿಮಿತ್ತವೇನೆಂದು ವಿಚಾರಣೆಯನ್ನು ಮಾಡಿ, ಅವರ ಕಡೆಯಿಂದ ೩—೬ ಲಕ್ಷ ವರಹಗಳಪರ್ಯಂತ ವಸೂಲ್ಮಾಡಿ, ದಂಡಿನವರಿಗೆ ಬಟವಾಡೆಯನ್ನು ಮಾಡಿಸಿ, ಅರಸಿನವರನ್ನು ಕರೆದುಕೊಂಡು ಶ್ರೀರಂಗಪಟ್ಟಣಕ್ಕೆ ಹೊರಟು ಬಂದನು.

ಹೈದರಲ್ಲಿಗೆ ಬಹದ್ದರ್ ಎಂಬ ಕಿತಾಬು ಕೊಟ್ಟದ್ದು.—ಅನಂತರ ಈ ಹೈದರಲ್ಲೀಖಾನನು ತಿರುಚನಾಪಳ್ಳಿ ಪ್ರಾಂತ್ಯದಲ್ಲಿ ಮೂರುವೆರುಷಗಳ ಪರ್ಯಂತ ಲಡಾಯಿ ಆಗುವ ಸಮಯದಲ್ಲಿ, ಸರಕಾರವ ದಂಡುಗಳು ಸಾಲದಿರಲು ತನ್ನ ಹಣದಿಂದ ಕೆಲವು ಸೇನೆಯನ್ನು ಕಟ್ಟಿ ಬಹಳ ಯುದ್ಧಮಾಡಿ, ತಿರುಚನಾಪಳ್ಳಿಯನ್ನು ಸ್ವಾಧೀನಮಾಡಿಕೊಂಡ ವಿವರವನ್ನೂ, ಸಂಬಳಕ್ಕೆ ದಂಗೆ ಮಾಡಿದ ದಂಡಿನ ಜನಗಳಿಗೆ ಸಂಬಳಗಳನ್ನು ಕೊಟ್ಟು ಸಮಜಾಯಿಷಿ ಮಾಡಿದ ವಿವರವನ್ನೂ ಕರಾಚೂರಿ ಅರಸಿನವರು ದೊರೆ

ಗಳವರಿಗೆ ಅರಿಕೆ ಮಾಡಲಾಗಿ ದೊರೆಗಳವರು ಹೈದರಲ್ಲೀಖಾನನು ಮಾಡಿದ ಅಪಹನತ್ತು ಎಲ್ಲವನ್ನೂ ಚಿತ್ತಕ್ಕೆ ತಂದು, 'ಬಹದ್ದರ್' ಎಂಬದಾಗಿ ಕಿತಾಬುಕೊಟ್ಟು, ಬಹಳ ಸನ್ಮಾನಗಳನ್ನು ಮಾಡಿ, ಇವನು ಕೊಟ್ಟಿದ್ದ ದಂಡಿನ ಖರ್ಚಿನ ಹಣಕ್ಕಾಗಿ, ಕಣಿವೆಯ ಕೆಳಗೆ ಈರೋಡು, ಧಾರಾಪುರ, ಸತ್ಯಮಂಗಲ ಇವುಗಳಿಗೆ ಮೂರು ಲಕ್ಷ ಗೋಪಾಲಿ ವರಹಗಳನ್ನು ಕೊಡುವಂತೆ ತನಿಖೆಯ ನಿರೂಪವನ್ನು ಬರೆಸಿಕೊಟ್ಟುದಲ್ಲದೆ, ಇವನು ಕಟ್ಟಿದ್ದ ದಂಡಿನ ಖರ್ಚಿಗಾಗಿ ದಿಂಡುಗಲ್ಲುಸೀಮೆ ಮುಂತಾದ ಎರಡು ಲಕ್ಷ ಗೋಪಾಲಿ ವರಹಗಳ ಗಡಿಗಳನ್ನು ವಿಂಗಡಿಸಿ, ನಿರೂಪವನ್ನು ಬರೆಸಿ ಕೊಟ್ಟು, ಸರಕಾರದ ಕೆಲಸ ಬಿದ್ದ ವೇಳೆಗೆ ಬರುವಂತೆ ಕಟ್ಟಳೆ ಮಾಡಿಸಿ, ಶಾ॥ ಶಕ ೧೬೭೪ನೇ (A.D. 1755) ಯುವಸಂವತ್ಸರದ ಶ್ರಾವಣ ಮಾಸದಲ್ಲಿ ಬಹದ್ದರ ಹೈದರಲ್ಲೀಖಾನನನ್ನು ದಿಂಡುಗಲ್ಲಿಗೆ ಕಳುಹಿಸಿಕೊಟ್ಟರು.

ದೊರೆಗಳವರಿಗೂ ದಳವಾಯಿ ದೇವರಾಜಯ್ಯನಿಗೂ ಮನಸ್ತಾಪದಿಂದ ವಿಚಾರ.—ಆ ಬಳಿಕ ದೊರೆಗಳವರು "ದಳವಾಯಿ ದೇವರಾಜಯ್ಯನೂ ಇವನ ತಮ್ಮ ಕರಾಚೂರಿ ನಂಜರಾಜಯ್ಯನೂ ಇವರುಗಳ ಕಡೆ ಅಧಿಕಾರಸ್ಥರುಗಳೂ ಮಾಡುತ್ತಿದ್ದ ಸ್ವಾಮಿದ್ರೋಹ ವಂಚನೆ ಮುಂತಾದ ದುರ್ನಡತೆಗಳನ್ನು ಚೆನ್ನಾಗಿ ವಿಚಾರಣೆ ಮಾಡಿ, ನಮ್ಮ ಅಣ್ಣಂದಿರಾದ ಚಾಮರಾಜಒಡೆಯರವರು ಇವರ ಅಧಿಕಾರಗಳನ್ನು ತೆಗೆದು, ನಿರ್ವಂಚನೆಯಿಂದ ನಡೆದುಕೊಳ್ಳುವ ಬುದ್ಧಿವಂತರಾದ ಜನರಿಗೆ ಅಧಿಕಾರವನ್ನು ನೇಮಿಸಿ ಧರ್ಮದಿಂದ ರಾಜ್ಯಪರಿಪಾಲನೆಯನ್ನು ಮಾಡುತ್ತಲಿರುವ ಸಮಯದಲ್ಲಿ, ಏನೂ ಅರಿಯದೆ ಅಂತಃಪುರದಲ್ಲಿರುವ ನಮ್ಮ ಮಹಾಮಾತೃಶ್ರೀಯವರಿಗೂ ನಮ್ಮ ಅಣ್ಣನವರಿಗೂ ಮನಸ್ತಾಪವನ್ನುಂಟುಮಾಡಿ, ನಮ್ಮ ಅಣ್ಣಂದಿರಿಗೆ ಸಹಿಸಲಶಕ್ಯವಾಗಿಯೂ ಕೇಳಿದವರಿಗೂ ಕರ್ಣಕಠೋರವಾಗಿಯೂ ಇರುವ ಮಹಾಬಾರದ ಸ್ವಾಮಿದ್ರೋಹವನ್ನು ಮಾಡಿದುದಲ್ಲದೆ, ಈಗಲೂ ಪೂರ್ವದಂತೆ ಮಾಡಿಕೊಂಡು ಬಂದಿರುತ್ತಾರೆ. ನಮ್ಮ ತೋಷೇಖಾನೆಯಲ್ಲಿ ಹಣವಿಲ್ಲದಂತಾಯಿತು. ಇವರ ನಡತೆಗಳನ್ನು ನಾವು ಜನರ ಮುಖದಿಂದಲೂ ತಿಳಿಯುತಲಿದೇವೆ" ಎಂದು ಚೆನ್ನಾಗಿ ವಿಚಾರಣೆಮಾಡಿ ಪರಾಂಬರಿಸಿದುದರಿಂದ ಧಾತುಸಂವತ್ಸರದಲ್ಲಿ

ದೊರೆಗಳವರಿಗೂ ದಳವಾಯಿ ದೇವರಾಜಯ್ಯನಿಗೂ ಇವನ ತಮ್ಮನಿಗೂ ಸಹ ಮನಸ್ತಾಪ ಉಂಟಾಯಿತ್ತು.

ದಳವಾಯಿ ದೇವರಾಜಯ್ಯನಿಗೂ ಇವನ ತಮ್ಮ ನಂಜರಾಜಯ್ಯನಿಗೂ ವಿರೋಧಬಂದದ್ದು.—ದೊರೆಗಳವರು "ಸ್ವಜನಕ್ಕೆ ಅಧಿಕಾರವನ್ನು ಕೊಟ್ಟುವರಿಂದ ಹೀಗೆ ನಮಗೆ ತೊಂದರೆ ಸಂಭವಿಸಿದೆ. ಇವರುಗಳ ಅಧಿಕಾರವನ್ನು ತಗೆಯಬೇಕು" ಎಂಬದಾಗಿ ಪರ್ಯಾಲೋಚನೆಯನ್ನು ಮಾಡಿದ ವರ್ತಮಾನವು ಇವರಿಬ್ಬರಿಗೂ ತಿಳಿದುದರಿಂದ, ಈ ಕರಾಚಕೂರಿ ನಂಜರಾಜಯ್ಯನು "ದೊರೆಗಳವರ ಬಳಿ ಇರುವ ಆಪ್ತಜನರುಗಳನ್ನು ನಿಗ್ರಹಿಸದೆ ಇದ್ದರೆ, ನಮಗೆ ಎಂದಿಗೂ ಕ್ಷೇಮವಾಗಲಾರದು" ಎಂದು ತನ್ನ ಅಣ್ಣನಾದ ದೇವರಾಜಯ್ಯನ ಸಂಗಡ ಆಲೋಚನೆ ಮಾಡಿದನು. ಆಗ ದೇವರಾಜಯ್ಯನು "ಪೂರ್ವದಲ್ಲಿ ಚಾಮರಾಜಒಡೆಯರವರ ಆಳಿಕೆಯಲ್ಲಿಯೇ ನನಗೆ ಬಹಳ ಅಪಯಶಸ್ಸು ಬಂದಿದೆ. ಈಗ ಅಂಥಾ ಕೆಲಸವನ್ನು ನಾವು ಮಾಡಬಾರದು" ಎಂಬದಾಗಿ ಹೇಳಿದುದರಿಂದ ಈ ಅಣ್ಣ ತಮ್ಮಂದಿರಿಬ್ಬರಿಗೂ ವಿರೋಧ ಉಂಟಾಯಿತು.

ಕರಾಚಕೂರಿ ನಂಜರಾಜಯ್ಯನು ಅರಮನೆಯ ಬಾಗಿಲಿಗೆ ಗುಂಡು ಹೊಡೆಸಿದ್ದು.—ಅನಂತರ ಕರಾಚಕೂರಿ ನಂಜರಾಜಯ್ಯನು ತಾವುಗಳು ಮಾಡಿರುವ ಸ್ವಾಮಿದ್ರೋಹ ಮತ್ತು ನಂಚಕೆಗಳನ್ನು ಮನಸ್ಸಿಗೆ ತಾರದೆ, ಮುಂದೆ ತನಗೆ ಬರುವ ಅಪಯಶಸ್ಸನ್ನು ತಿಳಿದುಕೊಳ್ಳದೆ, ದೊರೆಗಳವರು ತನಗ ಅಳಿಯಂದಿರಾದುದರಿಂದ ತಾನೇ ಸಕಲ ಕಾರ್ಯವಲ್ಲಿಯೂ ಮುಖಂಡನಾಗಿರಬೇಕೆಂದು, ಪ್ರಭ್ವೆದ ಮೇಲಣ ಅಸೆಯಿಂದ, ಬಹದ್ದರ್ ಹೈದರಲ್ಲೀಖಾನನು ಶ್ರೀರಂಗಪಟ್ಟಣದಲ್ಲಿರದೆ ದಿಂಡುಗಲ್ಲು ಪ್ರಾಂತಕ್ಕೆ ಹೋಗಿರುವ ಕಾಲದಲ್ಲಿ, ಅರಮನೆಯ ಜನಗಳ ಮೇಲಣ ಅಸೂಯೆಯಿಂದ, ತನಗೆ ವಿರೋಧಿ ಜನಗಳು ದೊರೆಗಳವರ ಸಮೀಪದಲ್ಲಿ ಇರುವ ಕಾಲದಲ್ಲಿ ಆ ಜನಗಳನ್ನು ನಿಗ್ರಹಿಸಬೇಕೆಂದು, ಅರಮನೆಯ ಬಾಗಿಲಿಗೆ ನಾಲ್ಕು ಫಿರಂಗಿಗಳನ್ನು ಎತ್ತಿಕಟ್ಟಿ ಗುಂಪುಗಳನ್ನು ಹೊಡೆಸಿದನು. ಆಗ ದೊರೆಗಳವರು ತಮ್ಮ ಕಡೆಯ ಜನಗಳನ್ನು ಒಳಗ ಇಟ್ಟು, ತಾವು

ಈಚೆಗೆ ಬಂದು, ತನ್ನ್ನು ಪದಚ್ಯುತನೆಂದಿಂದ ಈ ನಂಜರಾಜಯ್ಯನ ಕಡೆಯ ಕೆಲವು ಜನಗಳನ್ನು ಹೊಡೆಮೋಡಿಸಿ, ಕೆಲವರಿಗೆ ಪ್ರಾಣಾಂತ ಶಿಕ್ಷೆಯನ್ನು ಮಾಡಿ, ಇನ್ನು ಕೆಲವರಿಗೆ ಕಿವಿ ಮೂಗುಗಳನ್ನು ಕೊಯಿಸಿ ಬಂದೋ ಬಸ್ತು ಮಾಡಿದರು.

ದೇವರಾಜಯ್ಯನ ಪಲಾಯನ ಮತ್ತು ಅವನ ಮೋಸ.—ಅನಂತರ ಈ ವರ್ತಮಾನವನ್ನು ಕೇಳಿ, ದೇವರಾಜಯ್ಯನು "ನಾವು ಇನ್ನು ಮೇಲೆ ಇಲ್ಲಿದ್ದರೆ ನಮಗೆ ಸಪರಿಣಾಮವಾಗಲಾರದು" ಎಂದು ತಿಳಿದು, ದೊರೆಗಳವರಿಂದ ಅಪ್ಪಣೆಯನ್ನು ತೆಗೆದುಕೊಳ್ಳುವುದಕ್ಕೆ ಮುಖವಿಲ್ಲದೆ, ೧,೦೦೦ ಕುದುರೆಗಳನ್ನೂ ೩,೦೦೦ ಬಾಹಿನವರನ್ನೂ ಪ್ರಧಾನತನದಲ್ಲಿದ್ದ ಅಸ್ತನಾವ ಚನ್ನಪ್ಪಯ್ಯನನ್ನೂ ಸಹ ಕರೆದುಕೊಂಡು, ಸತ್ಯಮಂಗಲಕ್ಕೆ ಹೊರಟುಹೋದನು. ಆಗ ದೊರೆಗಳವರು ಈ ವರ್ತಮಾನವನ್ನು ತಿಳಿದು, ಪೂರ್ವದಲ್ಲಿ ಪ್ರಧಾನತನವನ್ನು ಮಾಡುತ್ತಿದ್ದ ಕನ್ನಂಬಾಡಿ ವೆಂಕಟಪತಯ್ಯನನ್ನು ಕರೆಸಿ, ಆತನಿಗೆ ಪೂರ್ವದಂತೆ ಪ್ರಧಾನತನವನ್ನು ನೇಮಕಮಾಡಿದರು. ದಳವಾಯಿ ದೇವರಾಜಯ್ಯನು ಸತ್ಯಮಂಗಲಕ್ಕೆ ಹೋಗಿ, ಬಹದ್ದರ್ ಹೈದರಲ್ಲೀಖಾನನ ದಂಡಿನ ಖರ್ಚಿಗಾಗಿ ತನಿಖೆ ಬರೆಸಿ ಕೊಟ್ಟು ಕಣಿವೆಯ ಕೆಳಗಣ ಸೀಮೆ ಹೊರೋಡು, ಧಾರಾಪುರ, ಸತ್ಯಮಂಗಲ ಮುಂತಾದ ಗಡಿಗಳ ಹಣಗಳನ್ನು ಹೈದರಲ್ಲೀಖಾನನಿಗೆ ಕೊಡಕೆಲಸವಿಲ್ಲ ಎಂಬುದಾಗಿ ಹೇಳಿಕಳುಹಿಸಿ, ತನ್ನ ಖರ್ಚಿಗೆ ತರಿಸಿಕೊಳ್ಳುತ್ತಿರಲು, ಈ ವರ್ತಮಾನವನ್ನು ತಿಳಿದ ಬಹದ್ದರ್ ಹೈದರಲ್ಲೀಖಾನನು ಶ್ರೀರಂಗಪಟ್ಟಣಕ್ಕೆ ಬಂದು, ಈ ವಿವರಗಳನ್ನು ದೊರೆಗಳವರಿಗೆ ವಿನ್ನವಿಸಿ, ತನಗೆ ಮೊದಲು ಬರೆಸಿಕೊಟ್ಟ ತನಿಖೆ ಹಣವು ಸರಾಗವಾಗಿ ಬರುವಂತೆ ತಿರುಗಿ ನಿರೂಪವನ್ನು ಅಪ್ಪಣೆ ಮಾಡಿಸಿಕೊಂಡು, ದಿಂಡುಗಲ್ಲು ಪ್ರಾಂತಕ್ಕೆ ಹೊರಟು ಹೋದನು.

ಬಹದ್ದರ್ ಹೈದರಲ್ಲೀಖಾನನು ದೇವರಾಜಯ್ಯನನ್ನು ಶ್ರೀರಂಗಪಟ್ಟಣಕ್ಕೆ ಕರೆತಂದದ್ದು.—ಅನಂತರ ಶಾಲಿವಾಹನ ಶಕ ೧೬೮೦ನೇ (A.D. 1757) ಈಶ್ವರ ಸಂವತ್ಸರದಲ್ಲಿ ಶ್ರೀರಂಗಪಟ್ಟಣದಲ್ಲಿ ಜನಗಳ ಚಿತಾವಣೆಯಿಂದ ದಂಡಿನ ಜನಗಳಲ್ಲಿ ಕೆಲವರು ಸಂಬಳ ಕೊಡಬೇಕೆಂಬುದಾಗಿ ದಂಗೆ ಮಾಡಿದು

ದರಿಂದ, ಈ ತುಂಟಜನಗಳನ್ನು ಸಮಜಾಯಿಷಿ ಮಾಡಲು ಕಣಾವೆಯ ಕೆಳಗಿನ ದಿಂಪುಗಲ್ಲಿನಲ್ಲಿರುವ ಬಹದ್ದರ್ ಹೈದರಲ್ಲೀಖಾನನಿಗೆ ಹೊರಟುಬರು ವಂತೆ ನಿರೂಪವನ್ನು ಬರೆಸಿ ಕಳುಹಿಸಿ ಕೊಟ್ಟರು. ಆ ಬಳಿಕ ಬಹದ್ದರ ಹೈದರಲ್ಲೀಖಾನನು ಬುದ್ಧಿನಿರೂಪವನ್ನು ಶಿರಸಾವಹಿಸಿ ನೋಡಿಕೊಂಡು, ಫೌಜಿನೊಡನೆ ಶ್ರೀರಂಗಪಟ್ಟಣಕ್ಕೆ ಹೊರಟು ಬರುವಾಗ, ಸತ್ಯಮಂಗಲಕ್ಕೆ ಬಂದು, ದಳವಾಯಿ ದೇವರಾಜಯ್ಯನಿಗೆ ನೀವೂ ಶ್ರೀರಂಗಪಟ್ಟಣಕ್ಕೆ ಬರಬೇಕೆಂದು ಹೇಳಿಕಳುಹಿಸಿದನು. ಅದಕ್ಕೆ ದೇವರಾಜಯ್ಯನು ತಾನು ಬರುವುದಿಲ್ಲವೆಂಬದಾಗಿ ಹೇಳಿ ಕಳುಹಲು, ಬಹದ್ದರ್ ಹೈದರಲ್ಲೀಖಾನನು ಸತ್ಯಮಂಗಲದ ಕೋಟೆಗೆ ವೋರ್ಕಿಕಟ್ಟಿ ತೋಪುಗಳನ್ನು ಹೂಡಿಸಿ, ದಳವಾಯಿ ದೇವರಾಜಯ್ಯನ ಕಡೆಯ ದಂಡಿನ ಸರದಾರ ಜನಗಳಿಂದ ಅತನಿಗೆ ಹೇಳಿಸಿ, ದೇವರಾಜಯ್ಯನನ್ನು ಸಂಗಡ ಕರೆದುಕೊಂಡು ಶ್ರೀರಂಗಪಟ್ಟಣಕ್ಕೆ ಬಂದು ಸೇರಿದನು.

ಬಹದ್ದರ್ ಹೈದರಲ್ಲಿಯು ದೊರೆಗಳವರಿಗೂ ದೇವರಾಜಯ್ಯನಿಗೂ ನಂಜರಾಜಯ್ಯನಿಗೂ ಇದ್ದ ಮನಸ್ತಾಪವನ್ನು ವಿಚಾರಿಸಿದ್ದು.—ಅನಂತರ ಬಹದ್ದರ ಹೈದರಲ್ಲೀಖಾನನು ದೊರೆಗಳವರ ಸನ್ನಿಧಿಗೆ ಬಂದು ಅಷ್ಟಬಿದ್ದು, ಈ ವೃತ್ತಾಂತವನ್ನೆಲ್ಲಾ ಬಿನ್ನವಿಸಿ, ಈಗ ಪ್ರಕೃತಕ್ಕೆ ದಳವಾಯಿ ದೇವರಾಜಯ್ಯನ ಮೇಲೂ ಕರಾಚೂರಿ ನಂಜರಾಜಯ್ಯನಮೇಲೂ ಇರುವ ಮನಸ್ತಾಪವನ್ನು ಬಿಡಬೇಕೆಂದು ಬಹಳವಾಗಿ ಬಿನ್ನವಿಸಿಕೊಂಡು, ಅಪ್ಪಣೆ ಆದಂತೆ ಶುಕ್ರವಾರದ ಒಲಗವಾಗುವ ಸಮಯವನ್ನು ಈ ಇಬ್ಬರನ್ನೂ ಕರೆದುಕೊಂಡು ಬಂದು, ದೊರೆಗಳವರಿಗೆ ಅಷ್ಟಬೀಳಿಸಿ ಮನಸ್ತಾಪವನ್ನು ಪರಿಹರಿಸಿದನು.

ಹೈದರಲ್ಲಿಗೆ ದಳವಾಯಿತನ ಮಿತ್ರ ಖಂಡೇರಾಯನಿಗೆ ನಿವಾಸಗಿರಿ.—ಅನಂತರ ದೇವರಾಜಯ್ಯನು ಶ್ರೀರಂಗಪಟ್ಟಣವಲ್ಲಿ ಕೆಲವು ದಿವಸವಿದ್ದು ಸತ್ಯಮಂಗಲಕ್ಕೆ ಹೋಗುತ್ತ ಮಾರ್ಗವಲ್ಲಿ [illegible] (A.D. 1758) ಬಹುಧಾನ್ಯ ಸಂವತ್ಸರದ ಜ್ಯೇಷ್ಠ ಬಹುಳ [illegible] ಯಲ್ಲಿ ದೈವಾಧೀನನಾದನು. ಆ ಬಳಿಕ ಬಹದ್ದರ್ ಹೈದರಲ್ಲೀಖಾನನು ತಾನು ಕಣಾವೆಯ ಕೆಳಕ್ಕೆ ಹೋಗಬೇಕೆಂದು ಅಲಿವ ಮಹಾಸ್ವಾಮಿಯವರ

ಸನ್ನಿಧಾನಕ್ಕೂ ಕರಾಚೂರಿ ನಂಜರಾಜಯ್ಯನವರ ಬಳಿಗೂ ಸಹ ಬಂದು ಮಾತನಾಡಿಕೊಂಡು ಹೋಗುವ ಸಮಯದಲ್ಲಿ, ಕೆಲವು ಫೌಜಿನ ಸರದಾರರು ಸಂಬಂಧದ ಬಾಣಕ್ಕೆ ದಂಗೆ ಮಾಡಿದರು. ಆ ಸಮಯದಲ್ಲಿ ಬೊರಗಳವರು ಬಹದ್ದರ ಹೈದರಲ್ಲೀಖಾನನನ್ನು ಕರೆಸಿ "ಈಗ ನೀನು ನಯಭಯಗಳಿಂದ ಫೌಜಿನ ದಂಗೆಯನ್ನು ನಿವಾರಿಸು" ಎಂಬುದಾಗಿ ಅಪ್ಪಣೆಯನ್ನು ಕೊಟ್ಟರು. ಆಗ ಅವನು ಅಡ್ಡಬಿದ್ದು ಕೈಜೋಡಿಸಿ ಕೊಂಡು ನಿಂತು "ನನ್ನ ಅಪರಾಧವನ್ನು ಕ್ಷಮಿಸಬೇಕು. ಇದು ವಿಷಮ ಸಂಧಿವೇಳೆ. ಖಾವಂದರು ಚಿತ್ತಕ್ಕೆ ತಂದು ಇದಕ್ಕೆ ಉಪಾಯವನ್ನು ಅಪ್ಪಣೆಕೊಟ್ಟರೆ ಪಾದದ ಚಾಕರಿಯಲ್ಲಿ ಸಿದ್ಧನಾಗಿದ್ದೇನೆ. ಈ ಕಾಲದಲ್ಲಿ ನಮ್ಮವಂಥವರು ಈ ಕೆಲಸಕ್ಕೆ ಉದ್ಯುಕ್ತರಾಗಿ ನಿಂತರೆ, ಸರ್ವರಿಗೂ ದ್ವೇಷಿಗಳಾಗಿ, ಕ್ಷುದ್ರಜನಗಳಿಂದ ಪಾದದ ಚಾಕರನ ಮೇಲೂ ಚಿತ್ತಕ್ಕೆ ಬೇಸರ ಬರುವಂತೆ ಆಗಿ, ಕಾರ್ಯವೆಲ್ಲಾ ಕೆಟ್ಟುಹೋಗುವುದು" ಎಂದು ವಿನ್ನಸಿಸಿದನು. ಅನಂತರ ದೊರೆಗಳವರು ಅವನ ವಿಜ್ಞಾಪನೆಯನ್ನು ಚಿತ್ತದಲ್ಲಿ ಲಾಲಿಸಿ, ತಮ್ಮಕಡೆಯ ಜನಗಳು ಮಾಡಿರುವ ಕೆಲಸಗಳನ್ನೂ ಮತ್ತು ವಂಚನೆಗಳನ್ನೂ ಚೆನ್ನಾಗಿ ಪರಾಂಬರಿಸಿ, ತಮ್ಮಲ್ಲಿರುವ ಜನಗಳಿಂದ ಈ ಕಾರ್ಯವು ನಿರ್ವಾಹವಾಗಲಾರದೆಂದು ಚಿತ್ತಕ್ಕೆ ತಂದು, ಅಪ್ಪಣೆಕೊಡಿಸಿದ ಪರಿಯೇನೆಂದರೆ—"ನಿನ್ನ ಮೇಲೆ ನಮ್ಮ ಕಟಾಕ್ಷವು ಸಂಪೂರ್ಣವಾಗಿರಲಾಗಿ ಕ್ಷುದ್ರಜನಗಳಿಂದ ನಿನಗೆ ಏನೂ ಆಗಲಾರದು, ನೀನು ನಮಗೆ ಕ್ರೀತಪುತ್ರನಾಗಿ ನಮ್ಮ ಕಾರ್ಯದಲ್ಲಿ ನಿರ್ವಂಚನೆಯಿಂದ ನಡೆದುಕೊಂಡಿರುವುದು ನಮ್ಮ ಮನಸ್ಸಿಗೆ ಬಂದಿದೆ. ಈಗ ನಾವು ಮಾಡುವ ಕಾರ್ಯವನ್ನೇ ನೀನು ಮಾಡಬೇಕು" ಎಂದು ಅಪ್ಪಣೆ ಕೊಟ್ಟರು. ಆಗ ಬಹದ್ದರ ಹೈದರಲ್ಲೀಖಾನನು ಮತ್ತೆ ಅಡ್ಡಬಿದ್ದು "ಬುದ್ಧಿನಿರೂಪ ಅಪ್ಪಣೆಯಾದಂತೆ ಪಾದದ ಗುಲಾಮನಾಗಿ ನಡೆದುಕೊಳ್ಳುತ್ತೇನೆ" ಎಂದು ಅರಿಕೆ ಮಾಡಿಕೊಳ್ಳಲು, ಆಳಿದ ಮಹಾಸ್ವಾಮಿಯವರು ಬುದ್ಧಿನಿರೂಪವನ್ನು ಅಪ್ಪಣೆಕೊಡಿಸಿದ ವಿವರವೇನೆಂದರೆ:—"ನೀನು ನಮ್ಮ ಅರಮನೆಯ ಜನ ಹೊರತು ನಿಂತಜನರಲ್ಲಿ ಯಾರಿಗೆ ದಂಡನೆ ಖಂಡನೆ ಮಾಡಿದರೂ, ಆ ಮಾತಿಗೆ ನಾವು ಬರುವುದಿಲ್ಲ. ಇನ್ನು ಮೇಲೆ ನಮಗೆ

ಸರಕಾರದ ಕೆಲಸ ಮುಖ್ಯವೇ ಹೊರತು ಜನದ ದಾಕ್ಷಿಣ್ಯ ಕೆಲಸವಿಲ್ಲ. ಪೂರ್ವದಲ್ಲಿ ನಾವು ನಮ್ಮ ಜನಗಳು ಅರಮನೆಯ ಕೆಲಸದಲ್ಲಿ ನಿರ್ವಂಚನೆಯಿಂದ ನಡೆದುಕೊಂಡಾರೆಂಬದಾಗಿಯೂ, ಅವರು ಬದುಕಲಿ ಎಂಬದಾಗಿಯೂ, ದಾಕ್ಷಿಣ್ಯದಿಂದ ಸ್ವಜನಗಳಿಗೆ ಅಧಿಕಾರಗಳನ್ನು ಕೊಟ್ಟುದರಿಂದ ನಮ್ಮ ಜನಗಳೇ ರಾಜ್ಯವು ಈರೀತಿ ಹೀನಸ್ಥಿತಿಗೆ ಬರುವಂತೆ ಮಾಡಿದರು. ಈಗ ನೀನು ಸರಕಾರದ ಕೆಲಸವೇ ಮುಖ್ಯವೆಂದೆಣಿಸಿ ಅರಮನೆಗೆ ಕೂಡಿಬರುವಂತೆ ಮಾಡುವುದು. ಈ ವಿಷಯದಲ್ಲಿ ನೀನು ಏನಾದರೂ ಜನದ ದಾಕ್ಷಿಣ್ಯದಿಂದ ಸರ್ಕಾರದ ಕೆಲಸವನ್ನು ಕಡಿಸಿದರೆ ನಿನಗೂ ಈ ಕೆಲಸ ನಡೆಯಲಾರದು" ಎಂದು ಅಪ್ಪಣೆಕೊಟ್ಟು, ಅವನ ಕಡೆಯಿಂದಲೂ ಇದೇ ಮೇರೆಗೆ ಕರಾರು ಕಾಗದವನ್ನು ಬರೆಸಿಕೊಂಡು, ಶಾ॥ ಶಕ ೧೬೮೦ನೇ (A.D. 1758) ಬಹುಧಾನ್ಯಸಂವತ್ಸರದಲ್ಲಿ ದಳವಾಯಿತನಕ್ಕೆ ನೇಮಕಮಾಡಿ, ಬುದ್ಧಿನಿರೂಪವನ್ನೂ ಮೆಹತಾಬಿ ಖಿಲ್ಲತ್ತನ್ನೂ ವೀಳೆಯವನ್ನೂ ಅಪ್ಪಣೆಕೊಟ್ಟು ಕಳುಹಿಸಿದರು. ಅನಂತರ ಹೈದರಲ್ಲೀಖಾನನು ದಂಗೆ ಕೂತುಕೊಂಡಿದ್ದ ಫೌಜಿನವರನ್ನು ಸಮಾಧಾನ ಮಾಡಿ ಕಳುಹಿಸಿಬಿಟ್ಟನು. ಆ ಬಳಿಕ ಇದೇ ಬಹುಧಾನ್ಯಸಂವತ್ಸರದಲ್ಲಿ ಬಹದ್ದರ ಹೈದರಲ್ಲೀಖಾನನು ದೊರಗಳವರಿಗೆ ಅರಿಕೆಮಾಡಿ, ಸಂಸ್ಥಾನದ ದಿವಾನಗಿರಿಯನ್ನು ತನ್ನ ಕಡೆ ಖಂಡೇರಾಯನಿಗೆ ಮೊಕರೂರು ಮಾಡಿಸಿದನು.

ಬಹದ್ದರ್ ಹೈದರಲ್ಲೀಖಾನನು ಮಾಡಿದ ಸೈನ್ಯದ ಏರ್ಪಾಡು.—ಅನಂತರ ಬಹದ್ದರ ಹೈದರಲ್ಲೀಖಾನನು ಪ್ರತಿನಿತ್ಯವೂ ಕರ್ತರ ದೇವಡಿಗೆ ಬಂದು, ಎಲ್ಲಾ ಪಣಕಟ್ಟಿನ ಅಧಿಕಾರಿಗಳನ್ನೂ ಹಿಡಿತರಿಸಿ, ನಯದಿಂದಲೂ ಭಯದಿಂದಲೂ ಜನಗಳಿಂದ ನಜರಾಣೆ ತೆಗೆದುಕೊಂಡು, ಹೇರಳವಾಗಿ ಹಣವನ್ನು ಕೂಡಿಸಿ, ಫೌಜಿನವರಿಗೆ ಕೆಲವು ಹಣವನ್ನು ಬಟವಾಡೆ ಮಾಡಿಸಿ, ಆ ಸೈನ್ಯದ ಪೈಕಿ ೪ ಸಾವಿರ ಕುದುರೆಯನ್ನು ಬರತಫ್ರ್ಖಾ ಮಾಡಿ, ೩ ಸಾವಿರ ಕುದುರೆಗಳನ್ನು ಸರಕಾರದಲ್ಲಿ ಖಾಯಮ್ಮಾಗಿಟ್ಟು, ಈ ಬರತಫ್ರ್ಖಾದ ಜನರು ಹೊರಟುಹೋಗುವ ಮಾರ್ಗದಲ್ಲಿ ತನ್ನ ಕಡೆಯ ಜನಗಳನ್ನು ಗುರುತು ತಿಳಿಯದಂತೆ ಹೋಗಿ ಲೂಟಿ ಮಾಡಿಕೊಂಡು

ಬನ್ನಿ ಎಂಬದಾಗಿ ಕಳುಹಿಸಿಕೊಟ್ಟನು, ಲೂಟಿ ಮಾಡಿಸಿ ಪಣಕಾಸು ಗಳನ್ನು ತರಿಸಿಕೊಂಡು, ಬರತಪ್ಪಾದ ಕುದುರೆಯವರ ಹೈಕಿ ಕೆಲವು ಜನ ದೈನ್ಯವೃತ್ತಿಯಿಂದ ಹೇಳಿಕೊಳ್ಳಲು ಆ ಜನಗಳ ಲಾವಣಾ ತನ್ನ ಕಡೆ ಬರಸಿಕೊಂಡು, ಪಟ್ಟಣದ ಕೋಟೆಯ ಬಾಗಿಲ ಚೌಕಿ ಪಹರೆಗೆ ತನ್ನ ಕಡೆಯ ಆಪ್ತರಾದ ಬಾರಿನವರನ್ನು ಇಟ್ಟು ಬಂದೋಬಸ್ತು ಮಾಡಿ, ಕೋಟೆಯೊಳಗಿದ್ದ ಫೌಜನ್ನೆಲ್ಲಾ ತೆಗೆದು ಕಡತನಾಳು ಕೆನ್ನಾಳು ಬೋರಯಮೇಲೆ ಇರಿಸಿದನು.

ನಂಜರಾಜಯ್ಯನನ್ನು ಮೈಸೂರಿಗೆ ಕಳುಹಿಸಿದ್ದು.—ದೊರೆಗಳವರಿಗೆ ಮಾವಂದಿರಾದ ಕರಾಜಕೂರಿ ನಂಜರಾಜಯ್ಯನವರು, ತಮಗೆ ಸರ್ವಾಧಿ ಕಾರ ಹೋದನಂತರ, ಬಹದ್ದರ ಹೈದರಲ್ಲಿಖಾನನ ಮೂಲಕ ೩ ಸಾವಿರ ಬಾರನ್ನೂ ೧ ಸಾವಿರ ಕುದುರೆಗಳನ್ನೂ ತಮ್ಮಲ್ಲಿ ನೌಕರಿಗೆ ಇಟ್ಟು ಕೊಂಡು, ಸರಕಾರದ ಕಾರ್ಯಬಿದ್ದಪೇಳೆಯಲ್ಲಿ ಈ ಸೈನ್ಯವನ್ನು ತೆಗೆದು ಕೊಂಡು ಬರುತ್ತೇನೆಂಬುದಾಗಿಯೂ, ಮತ್ತು ತಮ್ಮ ಸ್ವಂತ ಖರ್ಚಿಗೆ ೩ ಲಕ್ಷ ವರಹಗಳ ಸೀಮೆಯನ್ನು ಜಹಗೀರಾಗಿ ಕೊಡಿಸಬೇಕೆಂಬ ವಾಗಿಯೂ, ದೊರೆಗಳವರ ಸನ್ನಿಧಾನಕ್ಕೆ ಅರಿಕೆಮಾಡಿಕೊಂಡರು. ಆಗ ದೊರೆಗಳವರು ಚಟ್ಟಾಹ್ವವಿಟ್ಟು, ಕಣಿವೆಯ ಕೆಳಗಣ ಸೀಮೆಯಲ್ಲಿ ಶ್ಯಾದಮಂಗಲ, ಪರಮತಿ ಮುಂತಾದ ೪ ಗಡಿಗಳನ್ನೂ, ಮೇಲುಸೀಮೆಯಲ್ಲಿ ಮೈಸೂರು, ಬೆಟ್ಟದಪುರ, ಕೊಣನೂರು ಮುಂತಾದ ೬ ಗಡಿಗಳನ್ನೂ, ೩ ಲಕ್ಷ ವರಹಗಳ ಸೀಮೆಗೆ ಸರಿಯಾಗಿ ಅಪ್ಪಣೆಯನ್ನು ಕೊಡಿಸಿ, ಈ ನಂಜರಾಜಯ್ಯನವರು ಮೈಸೂರಲ್ಲಿರುವಂತೆ ಚಟ್ಟುಮಾಡಿದರು.

ಮುರಾಟೆ ಗೋಪಾಲರಾಯನೊಡನೆ ಯುದ್ಧ.— ಅನಂತರ ಮರಾಟೆಯವರ ಕಡೆ ಮಿರ್ಜಿ ಗೋಪಾಲರಾಯನೆಂಬವನು ೪೦ ಸಾವಿರ ಕುದುರೆಯ ಸೈನ್ಯ ದೊಡನೆ ಬೆಂಗಳೂರಿಗೆ ಬಂದು ಮುತ್ತಿಗೆ ಹಾಕಿದನೆಂಬ ವರ್ತ ಮಾನವು ದೊರೆಗಳವರಿಗೆ ಶ್ರುತವಾಗಿ ಸರ್ವಾಧಿಕಾರಿ ಬಹದ್ದರ ಹೈದರ ನಾಯಕನಿಗೂ ಬರಸ್ಕಿ ಶ್ರೀನಿವಾಸರಾಯನಿಗೂ ಸಪ ಅಪ್ಪಣೆಯನ್ನು ಕೊಟ್ಟು ಕಳುಹಿಸಿದರು. ಅವರಿಬ್ಬರೂ ಬಹು ಸೇನೆಯನ್ನು ತೆಗೆದು

ಕೊಂಡು ಹೋಗಿ ಮಿಜರ್ ಗೋಪಾಲರಾಯನಕಡೆ ೭೦ ಸಾವಿರ ಕುದುರೆ ಫೌಜಿನ ಜನಗಳೂಡನೆ ೩ ತಿಂಗಳವರೆಗೂ ಚನ್ನಪಟ್ಟಣವ ಗಿಡಸಲ್ಲಿ ಯುದ್ಧಮಾಡಿ ಅನೇಕರನ್ನು ಸಂಹರಿಸಿ, ಉಳಿದ ಜನಗಳನ್ನು ಬಿಟ್ಟರೆ ಸಾಕೆಂದೆನಿಸಿದರು. ಅನಂತರ ಆ ಗೋಪಾಲರಾಯನು ತನ್ನ ದಂಡಿನ ಖರ್ಚಿಗೆ ೩೦ ಲಕ್ಷರೂಪಾಯಿ, ಪೂರ್ವದಲ್ಲಿ ಪುನಹೇ ನಾರಾಯಣರಾ ಯನು ಬಂದಿದ್ದಾಗ ಖಂಡಣೆ ಮಾಡಿಕೊಂಡಿದ್ದ ೩೬ ಲಕ್ಷ ರೂಪಾಯಿ ಒಟ್ಟು ೬೬ ಲಕ್ಷ ರೂಪಾಯಿಯನ್ನು ಕೂಟ್ಟರೆ ಹೊರಟುಹೋಗುತ್ತೇ ನೆಂದು ಬಹದ್ದರ ಹೈದರಲ್ಲೀಖಾನನ ಬಳಿಗೆ ಹೇಳಿ ಕಳುಹಿಸಿದ ವಿವರವನ್ನು ಹೈದರಲ್ಲೀಖಾನನು ಶ್ರೀರಂಗಪಟ್ಟಣಕ್ಕೆ ದೊರೆಗಳವರ ಸನ್ನಿಧಿಗೆ ಅರ್ಜಿಯ ಮೂಲಕ ವಿನ್ನಹ ಮಾಡಿಕೊಳ್ಳಲು, ದೊರೆಗಳವರು ನಮ್ಮ ಸರಕಾರಕ್ಕೆ ಹೇಗೆ ಕೂಡಿಬರಬೇಕೋ ಹಾಗೆ ಮಾಡುವೆನಾಗು ಎಂಬುದಾಗಿಯೂ, ಆ ಜನಗಳು ಈದೇಶಕ್ಕೆ ಎಂದಿಗೂ ಬಾರದಂತೆ ಭೀತಿಯನ್ನುಂಟು ಮಾಡುವೆ ನಾಗು ಎಂಬುದಾಗಿಯೂ, ಬುದ್ಧಿಸಿರೂಪವನ್ನು ಅಪ್ಪಣೆ ಕೊಡಿಸಿದರು. ಹೈದರಲ್ಲೀಖಾನನು ಮತ್ತೂ ಒಂದು ತಿಂಗಳ ಪರ್ಯಂತ ಅದೇ ಚನ್ನಪಟ್ಟ ಣದ ಗಿಡವಲ್ಲಿ ಆ ಜನಗಳನ್ನು ಸಿಕ್ಕಿಸಿಕೊಂಡು ಹಿಂದಕ್ಕೂ ಮುಂದಕ್ಕೂ ಕಿಡದೆ ಯುದ್ಧಮಾಡಿ, ಅವರನ್ನು ಬಹಳ ಕವ್ವಪಡಿಸಿ, ಉಳಿದ ಜನರು ಹೊರಟು ಹೋದರೆ ಸಾಕೆಂದೆನಿಸಿ, ಮೇಲೆ ಹೇಳಿದ ೬೬ ಲ ರೂಪಾಯಿ ಯಲ್ಲಿ ೩೦ ಲಕ್ಷರೂಪಾಯಿಯನ್ನು ಬಿಡಿಸಿ, ಪೂರ್ವದಲ್ಲಿ ಪುನಹೇ ನಾರಾ ಯಣರಾಯನ ಖಂಡಣೆಗಾಗಿ ೩೬ ಲಕ್ಷ ರೂಪಾಯಿಗೆ ಓಲು ಕೂಟ್ಟವ ನಾಗಮಂಗಲ ಚನ್ನರಾಯಪಟ್ಟಣ ತರಿಕೆರೆ ಚಿಕ್ಕನಾಯಕನಹಳ್ಳಿ ಮುಂತಾದ ೧೩ ಗತಿಗಳ ಬಂದೋಬಸ್ತಿಗೆ ಅವರು ಇಟ್ಟಿದ್ದ ೬ ಸಾವಿರ ಕುದುರೆಯ ಜನಗಳನ್ನು ಹೊಡೆದೋಡಿಸಿ, ಆ ಗತಿಗಳಲ್ಲಿ ಅವರ ಕಡೆಯ ಜನಗಳು ವಸೂಲ್ಮಾಡಿದ್ದ ಹಣವನ್ನು ತಾನೇ ತರಿಸಿಕೊಂಡು, ಶ್ರೀರಂಗ ಪಟ್ಟಣದಿಂದಲೂ ಕೆಲವು ಹಣವನ್ನು ತರಿಸಿ, ವರ್ತಕರಲ್ಲಿ ಕೆಲವು ಹಣ ವನ್ನು ಸಾಲಮಾಡಿ, ಅದೇ ೩೬ ಲಕ್ಷ ರೂಪಾಯಿಗೆ ಭರ್ತಿಮಾಡಿ ಮಿಜರ್ ಗೋಪಾಲರಾಯನಿಗೆ ಕೊಟ್ಟು, ಅವನನ್ನು ಅವನಕಡೆ ಉಳಿದ ಜನಗ ಳನ್ನೂ ಕಳುಹಿಸಿಕೊಟ್ಟು, ಆ ೧೩ ಗತಿಗಳನ್ನು ಸ್ವಾಧೀನ ಮಾಡಿ

ಕೊಂಡು, ದೊರೆಗಳವರ ಕಡೆ ಅಮಲುದಾರ ಶಿರಸ್ತೆದಾರ ಕಿಲ್ಲೆದಾರ ಮುಂತಾದ ಜನಗಳನ್ನು ಇಟ್ಟು, ಬಂದೋಬಸ್ತು ಮಾಡಿ, ಶ್ರೀರಂಗ ಪಟ್ಟಣಕ್ಕೆ ಬಂದು ಈ ಸಡೆದ ವೃತ್ತಾಂತವನ್ನೆಲ್ಲಾ ದೊರೆಗಳವರ ಸನ್ನಿಧಾನಕ್ಕೆ ಬಿನ್ನವಿಸಿದನು.

ಬಹದ್ದರ್ ಹೈದರಲ್ಲೀಖಾನನಿಗೆ ನವಾಬನೆಂಬ ಪೆಸರು ಬಂಸದ್ದು.—ಬಳಿಕ ಆಳಿದ ಮಹಾನ್ವಯುವೆರು ಬಹದ್ದರ ಹೈದರಲ್ಲೀಖಾನನು ಸರಕಾರದಿಂದ ಮರಾಟೆಯುವೆರಿಗೆ ಕೂಡತಕ್ಕ ೫೬ ಲಕ್ಷ ರೂಪಾಯಿಯನ್ನು ಸ್ವಲ್ಪ ದಲ್ಲಿಯೇ ತೀರಿಸಿ, ಅವೆರ ಫೌಜನ್ನು ಹೊಡೆದೋಡಿಸಿ, ಪೂರ್ವದಲ್ಲಿ ತಾವು ಓಲು ಕೊಟ್ಟಿದ್ದ ೧೩ ಗಡಿಗಳನ್ನು ಬಿಡಿಸಿಕೊಂಡು ಸರಕಾರಕ್ಕೆ ಕೂಡಿಬರುವಂತೆ ಮಾಡಿದ ಮೆಹನತ್ತನ್ನು ಚಿನ್ನಾಗಿ ವರಾಂಬರಿಸಿ ಬಹಳ ಸಂತೋಷಪಟ್ಟು ಶಾಲಿವಾಹನ ೧೮೮೦ನೇ (A.D. 1758) ಬಹುಧಾನ್ಯ ಸಂವತ್ಸರದಲ್ಲಿ, ಈ ಹೈದರಲ್ಲೀಖಾನನಿಗೆ "ನವಾಬ ಹೈದರಲ್ಲೀಖಾನ್ ಬಹದ್ದರ್" ಎಂಬುವಾಗಿ ಪೆಸರುಕೊಟ್ಟು, ಆನೆ ಕುದುರೆಗಳನ್ನೂ ಮಹತಾಬಿ ಖಿಲ್ಲತ್ತನ್ನೂ ನೌಬತ್ತನ್ನೂ ಸಹ ಕೊಟ್ಟುದಲ್ಲದೆ, ಕರಾಚಕೂರಿ ನಂಜರಾಜಯ್ಯ ಮುಂತಾದ ಅಧಿಕಾರಸ್ಥರೆಲ್ಲರೂ ಇವನಿಗೆ ಪೂರಾ ತಾಜೀಂ ಕೊಡುವುದೆಂಬವಾಗಿ ಅಪ್ಪಣೆ ಕೊಡಿಸಿ, ಹೂವಿನಹಾರ ವೀಳೆಯಗಳನ್ನು ಕೊಟ್ಟು ಮೆಂಚ್ಯಾದೆಯಿಂದ ಮನೆಗೆ ಕಳುಹಿಸಿ ಕೊಟ್ಟರು.

ಜವಾಜಿ ಪಾಳೆಯ ಮುಂತಾದ ೧೩ ಗಡಿಗಳನ್ನು ಸ್ವಾಧೀನಮಾಡಿಕೊಂಡದ್ದು.—ಅನಂತರ ಕೆಲವು ದಿವಸದ ಮೇಲೆ ನವಾಬ ಹೈದರಲ್ಲೀಖಾನ್ ಬಹದ್ದರನು "ಪೂರ್ವದಲ್ಲಿ ಮರಾಟೆಯುವೆರ ಯುದ್ಧದಲ್ಲಿ ಕೆಲವು ಹೆಚ್ಚು ಫೌಜನ್ನು ಕಟ್ಟಿ, ಮರಾಟೆಯವೆರಿಗೆ ಕೊಡಬೇಕಾದ ಹಣಕ್ಕೆ ಕೆಲವು ಹಣವನ್ನು ಸಾಲಮಾಡಿ ಅವೆರಿಗೆ ಸಲ್ಲಿಸಿ, ಕೊಚ್ಚಿ ಪಾಲಘಾಟ್ಚೆಕೇರಿ ಕಲ್ಲಿಕೋಟೆ ಮುಂತಾದ ಸ್ಥಳಕ್ಕೆ ತನ್ನ ಭಾವೆಮೈದ ಸೈದ್‌ವೊಕದುಂ ಸಾಬಿಯನ್ನು ಫೌಜು ಸಹಿತವಾಗಿ ಕಳುಹಿಸಿ ಕೊಟ್ಟು ಯುದ್ಧಮಾಡಿಸಿ, ಅವೆರುಗಳ ಕಡೆಯಿಂದ ವೆರ್ಷ ೧ ಕ್ಕೆ ೧೦ ಲಕ್ಷ ರೂಪಾಯಿ ಪ್ರಕಾರ ಬರುವಂತೆ ನಾನು ಏರ್ಪಡಿ ಮಾಡಿಕೊಂಡಿರಲು, ಈ ವರ್ತಮಾನವನ್ನು ಸತ್ಯಮಂಗಲ

ದಲ್ಲಿದ್ದ ಬಳವಾಯಿ ದೇವರಾಜಯ್ಯನು ತಿಳಿದು, ದೊರೆಗಳವರ ಅಪ್ಪಣೆ ಯಾಗಿದೆ ಎಂಬುದಾಗಿ ಖಿತೂರಿ ಕಾಗದವನ್ನು ಬರೆದು, ತನ್ನ ಕಡೆ ಜಮೊದಾರನಾದ ಪರಿಸಿಂಗನನ್ನು ಕಳುಹಿಸಿ ಕೊಟ್ಟು, ಆ ೧೦ ಲಕ್ಷ ರೂಪಾಯಿಯನ್ನು ತಾನೇ ತರಿಸಿಕೊಂಡನೆಂಬ ವರ್ತಮಾನವು ನನಗೆ ತಿಳಿದುದರಿಂದ ನನ್ನ ದಂಡಿನ ಖರ್ಚಿಗೆ ೨ ಲಕ್ಷ ರೂಪಾಯಿ ಕೊಡ ಬೇಕೆಂಬುದಾಗಿ ನಾನು ಆ ದೇವರಾಜಯ್ಯನನ್ನು ಕೇಳಿದ್ದಕ್ಕೆ, ಆಗ ಓಡೆಯ ಬಾಗಿಲ ರಂಗಣ್ಣನ ಮುಖಾಂತರ ನನಗೆ ಜಾಫೀನು ಪತ್ರವನ್ನು ಬರೆಸಿ ಕೊಟ್ಟಪ್ಪನೆ. ಆ ಹಣವು ಸಹ ನನಗೆ ಬರಬೇಕು. ನಾನು ಇನ್ನೂ ಕೆಲವು ಸೇನೆಯನ್ನು ಕಟ್ಟಿ ಸೀಮೆಗಳನ್ನು ಸಾಧಿಸಬೇಕು'' ಎಂಬುದಾಗಿ ದೊರೆ ಗಳವರ ಸನ್ನಿಧಾನಕ್ಕೆ ಅರ್ಜಿಯ ಮೂಲಕ ವಿನ್ನಹ ಮಾಡಿಕೊಂಡನು. ಈ ಹಣಕ್ಕೆ ತನಿಖೆ ಬರೆಸಿ ಕೊಡುತ್ತೇವೆಂಬುದಾಗಿ ಅಪ್ಪಣೆಯಾಯ್ತು. ಬಳಿಕ ನವಾಬನು '' ದಿವಾನ ಖಂಡೇರಾಯ ಪ್ರಧಾನವೆಂಕಟಪತಯ್ಯ ಮುಂತಾದವರು ತನಿಖ ಹಣವನ್ನು ಕೊಡುವುದಕ್ಕೆ ಸುಸ್ತಿ ಮಾಡುತ್ತಾರೆ. ಆದುದರಿಂದ ನನ್ನ ಕಡೆ ಅಮಲ್ದಾರ ಮುಂತಾದ ಜನಗಳನ್ನಿಟ್ಟು, ಸೀಮೆಯನ್ನು ಬಂದೋಬಸ್ತುಮಾಡಿ, ಅಪ್ಪಣೆಯಾದ ತನಿಖೆ ಗಡಿಗಳ ಹಣವನ್ನು ನಾನೇ ತರಿಸಿಕೊಳ್ಳುವನು'' ಎಂಬುದಾಗಿ ಮತ್ತೆ ಅರ್ಜಿಯನ್ನು ವಿನ್ನಹ ಮಾಡಿಕೊಂಡನು. ಇದಕ್ಕೆ ದೊರೆಗಳವರು '' ಕೆಲವು ಸೀಮೆಗೆ ನೀನೇ ಅಮಲ್ದಾರ ಶಿರಸ್ತೆದಾರರುಗಳನ್ನು ನೇಮಕಮಾಡಿ, ನೀನು ಮಾಡಿ ರುವ ಸಾಲವನ್ನು ತೀರಿಸಿಕೊಂಡು, ಇನ್ನೂ ಕೆಲವು ಸೇನೆಯನ್ನು ಕಟ್ಟಿ ಬಹಳ ಸೀಮೆಯನ್ನು ಸಾಧಿಸುವೆನಾಗು'' ಎಂದು ಬುದ್ಧಿ ನಿರೂಪ ವನ್ನು ಅಪ್ಪಣೆ ದಯಪಾಲಿಸಿದರು ಅನಂತರ ನವಾಬನು ಕೆಲವು ಸೇನೆಯನ್ನು ಕಟ್ಟಿ, ಕಣಿವೆಯ ಕೆಳಕ್ಕೆ ಹೋಗುತ್ತ ಮಧ್ಯ ಮಾರ್ಗ ದಲ್ಲಿ ಬಾರಾಮಹಲು ಸೀಮೆಯಲ್ಲಿ ಜವಾಜಿಪಾಳ್ಯ, ತಿರುಪತ್ತೂರು, ಕೃಷ್ಣ ಗಿರಿ ಮುಂತಾದ ೧೫ ಗಡಿಗಳನ್ನು ಸ್ವಾಧೀನ ಮಾಡಿಕೊಂಡು ಇರುತ್ತಿದ್ದನು.

ನಂಜರಾಜಯ್ಯನನ್ನು ಕೊಣನೂರಿಗೆ ಕಳುಹಿದ್ದು.—ಆಗ ಶ್ರೀರಂಗ ಪಟ್ಟಣದಲ್ಲಿ ದೊರೆಗಳವರ ಸನ್ನಿಧಿಯಲ್ಲಿ ದಿವಾನ ಖಂಡೇರಾಯ ಪ್ರಧಾನೆ

ವೆಂಕಟಪತಯ್ಯ ಲಾಲಾದಾಸು ಮುಂತಾದ ಜನಗಳು "ಈ ಲಕ್ಷಾಧಿಪತಿ ನಂಜರಾಜಯ್ಯನವರು ೩ ಸಾವಿರ ಬಾರನ್ನೂ ೧ ಸಾವಿರ ಕುದುರೆಯನ್ನೂ ನೌಕರಿಗೆ ಇಟ್ಟುಕೊಂಡು, ಸರಕಾರದ ಕೆಲಸ ಬಿದ್ದಾಗ ಬರುವೆನೆಂಬ ದಾಗಿ ಹೇಳಿ ೩ ಲಕ್ಷದ ಸೀಮೆಯನ್ನು ಜಹಗೀರಾಗಿ ಅನುಭವಿಸಿ ಕೊಂಡಿರುವರು. ಇವರು ವಿಜಿಗಾಪಟಾಲರಾಯ ಮುಂತಾದವರು ಬಂದು ಯುದ್ಧಮೊಡುವ ಕಾಲದಲ್ಲಿ ಸಹಾಯವಾಗಿ ಬರಲಿಲ್ಲ. ನವಾಬನು ಬಡಳ ಕಾರ್ಯವನ್ನು ಮೊಡಿದಂತೆ ಇವರು ಏನೂ ಕಾರ್ಯವನ್ನು ಮೊಡ ಲಿಲ್ಲ. ಇವರ ಜೀವನಾರ್ಥವಾಗಿ ಲಕ್ಷದ ಸೀಮೆಯನ್ನು ಕೊಟ್ಟು ನಿಂತ ೩ ಲಕ್ಷ ವರಹಗಳ ಸೀಮೆಯನ್ನು ಸರಕಾರಕ್ಕೆ ತೆಗೆದುಕೊಂಡು ಇವ ರನ್ನು ಮೈಸೂರಲ್ಲಿರಿಸದೆ ಕೊಣನೂರು ಪ್ರಾಂತ್ಯಕ್ಕೆ ಕಳುಹಿಸಿಕೊಡ ಬೇಕು" ಎಂಬುದಾಗಿ ವಿಜ್ಞಾಪನೆಯನ್ನು ಮೊಡಿದರು. ದೊರೆಗಳವರು ಇದನ್ನು ಚಿತ್ತಕ್ಕೆ ತಂದು ನಂಜರಾಜಯ್ಯನವರ ಬಳಿಗೆ "೩ ಲಕ್ಷದ ಸೀಮೆಯನ್ನು ಸರಕಾರಕ್ಕೆ ಬಿಟ್ಟು ನೀವು ಲಕ್ಷದ ಸೀಮೆಯನ್ನು ಅನುಭ ವಿಸಿಕೊಂಡು ಕೊಣನೂರಲ್ಲಿ ಇರುವೆರಾಗಿ" ಎಂದು ಅಪ್ಪಣೆ ಕೊಟ್ಟು ಕಳುಹಿಸಲು, ಈ ಕರಾಚಕೂರಿ ನಂಜರಾಜಯ್ಯನವರು "ನಾನು ಮೈಸೂ ರಲ್ಲಿಯೇ ಇರುತ್ತೇನೆ, ಕೊಣನೂರಿಗೆ ಹೋಗುವುದಿಲ್ಲ" ಎಂದು ಹೇಳಿ ಮೈಸೂರು ಕೋಟೆಯನ್ನು ಬಂದೋಬಸ್ತು ಮೊಡಿಕೊಂಡಿದ್ದರು. ಈ ವರ್ತಮಾನವನ್ನು ತಿಳಿದು, ದೊರೆಗಳವರು ಕಣಿವೆಯ ಕೆಳಗಿನಿಂದ ನವಾಬ ಹೈದರಲ್ಲಿಗೆ ಖಾ ಬಹದ್ದರನನ್ನು ಕರೆಸಿ, ಈ ನಂಜರಾಜಯ್ಯ ನವರನ್ನು ಮೈಸೂರಿಂದ ಹೊರಡಿಸಿ ಕೊಣನೂರಿಗೆ ಕಳುಹಿಸಿ ಬಿಡುವುದೆಂದು ಅಪ್ಪಣೆಕೊಟ್ಟರು. ಆ ನವಾಬನು ಮೈಸೂರು ಕೋಟೆಗೆ ಮುತ್ತಿಗೆ ಹಾಕಿ ೩ ತಿಂಗಳ ಪರ್ಯಂತ ಲಡಾಯಿ ಮೊಡಿ, ಅರಸನವರನ್ನು ಮೈಸೂರಿಂದ ಹೊರಡಿಸಿ, ದೊರೆಗಳವರಿಗೆ ಅರಿಕೆಮಾಡಿ ೧ ಲಕ್ಷದ ಸೀಮೆ ಯನ್ನು ಜಹಗೀರಾಗಿ ಕೊಡಿಸಿ, ಕೊಣನೂರಿಗೆ ಕಳುಹಿಸಿಬಿಟ್ಟನು.

ನವಾಬನಿಗೂ ಖಂಡೇರಾಯನಿಗೂ ಮನಸ್ತಾಪವುಂಟಾದ್ದು.—ಆನಂತರ ಈ ನವಾಬನು ಮೈಸೂರು ಲಡಾಯಿಯಲ್ಲಿ ತನ್ನ ಆನೆ ಕುದುರೆ ಫೌಜು ಮೆದ್ದು ಗುಂಪು ಬಡಳ ನಷ್ಟವಾಯಿತೆಂತಲೂ, ಈಗ ಇರುವ ಫೌಜು

ಕಡಮೆ, ಇದಕ್ಕೆ ಪ್ರತಿಯಾಗಿ ಈಗ ತನಗೆ ಕೊಟ್ಟರುವ ಭೂಮಿಯು ಸಾಲದೆಂತಲೂ, ಅರ್ಜಿಯನ್ನು ಬಿನ್ನವಿಸಿಕೊಂಡುದಲ್ಲದೆ, ಕೆಲವು ಜನದ ಮೂಲಕವಾಗಿಯೂ ಅರಿಕೆ ಮಾಡಿಸಿದನು. ಇವಕ್ಕೆ ದೊರೆಗಳವರು ಕಟಾಕ್ಷವಿಟ್ಟು ನಾನೊಕಲ್ಲು ಶ್ಯಾದಮಂಗಲ ಪರಮತಿ ಈಶ್ವರಗಡಿಗಳ ತನಿಖೆ ಬುದ್ಧಿನಿರೂಪವನ್ನು ನವಾಬನಿಗೆ ಅಪ್ಪಣೆಕೊಡಿಸುವ ಸಮಯದಲ್ಲಿ, ಇದನ್ನು ಕೊಡಕೂಡದೆಂಬುದಾಗಿ ಖಂಡೇರಾಯನು ಹೇಳಿದುದರಿಂದ, ಖಂಡೇರಾಯನಿಗೂ ನವಾಬನಿಗೂ ಮನಸ್ತಾಪ ಉಂಟಾಯಿತು.

ನವಾಬನಿಗೂ ಖಂಡೇರಾಯನಿಗೂ ಯುದ್ಧವಾದದ್ದು ಮತ್ತು ಪಿತೂರಿಗಳು.—

ಅನಂತರ ಪ್ರಧಾನ ವೆಂಕಟಪತಯ್ಯ ದಿವಾನ ಖಂಡೇರಾಯ ಕೊಳ್ಳೇಗಾಲದ ವೀರಣ್ಣ ಸೆಟ್ಟಿ ಮುಂತಾದ ಜನಗಳು "ಈ ನವಾಬನು ಬಹಳ ಪ್ರಬಲನಾದನು. ನಾವು ಸರಕಾರಕ್ಕೆ ಮಾಡಿರುವ ವಂಚನೆ ಮುಂತಾದ ಮತ್ಸರಗಳನ್ನು ಚೆನ್ನಾಗಿ ತಿಳಿದಿಹನೆ, ಇನ್ನೂ ಇವನು ಪ್ರಬಲಿಸಿದರೆ ನಮ್ಮನ್ನಗಳನ್ನು ನಿಗ್ರಹಿಸುವನು. ಆದುದರಿಂದ ಈಗಲೇ ನಾವು ಇವನನ್ನು ನಿಗ್ರಹಿಸಬೇಕು" ಎಂದು ದೊರೆಗಳವರ ಸನ್ನಿಧಿಗೆ ಬಂದು, "ಸ್ವಾಮಿಯವರು ಸ್ವಲ್ಪ ಚಾಕರಿಯಲ್ಲಿದ್ದ ಈ ಹೈದರಲ್ಲೀಖಾನನಿಗೆ ಬಹಳ ಸನ್ಮಾನಗಳನ್ನು ಮಾಡಿ ನವಾಬನೆಂಬುದಾಗಿ ಹೆಸರನ್ನು ಕೊಟ್ಟಿರಿ. ಇವನು ಮುಂಚೆ ಸ್ವಾಮಿಯವರ ದವಲತ್ತನ್ನೇ ಸ್ವಲ್ಪಸ್ವಲ್ಪವಾಗಿ ಅಪಹರಿಸುತಲಿಹನೆ. ಸ್ವಾಮಿಯವರ ಅಪ್ಪಣೆಯಾದರೆ ಈಗಲೇ ಇವನನ್ನು ನಿಗ್ರಹಿಸುತ್ತೇವೆ" ಎಂಬುದಾಗಿ ಬಿನ್ನವಿಸಿ, ಸ್ವಲ್ಪ ಫೌಜಿನಿಂದ ತನ್ನ ಹೆಂಗಸರು ಮಕ್ಕಳು ಸಹಿತವಾಗಿ ಶ್ರೀರಂಗಪಟ್ಟಣವ ಉಭಯ ಕಾವೇರೀ ಮಧ್ಯನಲ್ಲಿ ಇಳಿದಿರುವ ನವಾಬನ ದಂಡಿಗೆ ಖಂಡೇರಾಯನು ಕೆಲವು ಫೌಜು ತೆಗೆದುಕೊಂಡು ಹೋಗಿ ಯುದ್ಧಮಾಡಿ, ಅವನನ್ನು ಜಯಿಸಲಾರದೆ ಶ್ರೀರಂಗಪಟ್ಟಣಕ್ಕೆ ಹಿಂತಿರುಗಿ ಬಂದನು. ಅನಂತರ ಆ ನವಾಬನು ತನ್ನಲ್ಲಿ ಸ್ವಲ್ಪ ಫೌಜು ಇರುವುದರಿಂದ ಈಗ ಯುದ್ಧಮಾಡಬಾರದೆಂದು ತಿಳಿದು, ತನ್ನ ಹೆಂಗಸರು ಮಕ್ಕಳನ್ನು ಅಲ್ಲಿಯೇ ಬಿಟ್ಟು, ಪೂರ್ಣಪ್ರವಾಹ ಬಂದಿರುವ ಕಾವೇರಿಯನ್ನು ರಾತ್ರಿವೇಳೆಯಲ್ಲಿ ಪಾರಿಗೋಲು ಹತ್ತಿಸಿಕೊಂಡು ದಾಟಿ, ೭೦ ಕುದುರೆ ಸವಾರರು ಕೆಲವು ದ್ರವ್ಯ ಸಹಿತವಾಗಿ

ಬೆಂಗಳೂರಿಗೆ ಹೊರಟು ಹೋದನು. ಮೆರುದಿನ ಪ್ರಾತಃಕಾಲದಲ್ಲಿ ಖಂಡೇ ರಾಯನು ಅವನ ದಂಡನ್ನು ಲೂಟಿಮಾಡಿ, ಅವನ ಹೆಂಗಸರು ಮಕ್ಕಳನ್ನು ಬೈದುಮಾಡಿ ಇರಿಸಿದನು. ಈ ವರ್ತಮಾನವನ್ನು ದೊರೆಗಳವರು ಕೇಳಿ ಖಂಡೇರಾಯ ಮುಂತಾದವರಮೇಲೆ ಬಹಳ ಕೋಪಮಾಡಿ, ತಮ್ಮ ಕ್ರೀತ ಪುತ್ರನಾದ ನವಾಬನ ಮೇಲೆ ಬಹಳ ಕಟಾಕ್ಷವಿಟ್ಟು, ಅವನ ೮ ವರ್ಷದ ಮಗನಾದ ಟೀಪ್ಪೂಸುಲ್ತಾನನನ್ನೂ ಅವನ ಹೆಂಗಸರು ಮಕ್ಕಳು ಎಲ್ಲರನ್ನೂ ಕೋಟೆಯೊಳಕ್ಕೆ ಕರೆತರಿಸಿ, ದಳವಾಯಿ ದೇವರಾಜಯ್ಯನ ಮನೆಯನ್ನು ಬಿಡಿಸಿ, ಅವರುಗಳು ಲಲ್ಲಿ ಇರುವಂತೆ ಕಟ್ಟುಮಾಡಿಸಿ, ಮಾನದಿಂದ ಸಂರಕ್ಷಣೆ ಮಾಡಿಸುತಲಿದ್ದರು. ಖಂಡೇರಾಯನು ದೊರೆ ಗಳವರು ಅರಿಯುವಂತೆ, "ಗಡಿಗಳಿಗೆ ನವಾಬನು ಓಡಿಬಂದಿದಾನೆ. ಅವ ನನ್ನು ಯಾರು ಹಿಡಿದು ಕೊಡುತ್ತಾರೋ ಅವರಿಗೆ ಬಹಳ ಸನ್ಮಾನಗಳನ್ನು ಮಾಡಿಸುವೆವು" ಎಂದು ದೊರೆಗಳವರ ಆಜ್ಞೆ ಆಗಿದೆ ಎಂಬುದಾಗಿ ಪತ್ರೂರಿ ಕಾಗದವನ್ನು ಬರದಿರುವೆನು ಎಂಬ ವರ್ತಮಾನವು ಬೆಂಗಳೂ ರಲ್ಲಿದ್ದ ನವಾಬನಿಗೆ ತಿಳಿಯಲು, ನವಾಬನು ಏಕಾಕಿಯಾಗಿ ಕೊಣ ನೂರಿಗೆ ಬಂದು, ಕರಾಚೂರಿ ನಂಜರಾಜಯ್ಯನವರಿಗೆ ಈ ವರ್ತಮಾನ ವನ್ನು ತಿಳಿಸಿದನು. ಅನಂತರ ನಂಜರಾಜಯ್ಯನವರು ನವಾಬನನ್ನು ಮೈಮೇಲೆ ಹಾಕಿಕೊಂಡಿದಾರೆಂಬ ವರ್ತಮಾನವು ಖಂಡೇರಾಯನಿಗೆ ತಿಳಿದು ಈ ಅರಸಿನವರ ಲಕ್ಷಸೀಪಯನ್ನು ಲೂಟಿಮಾಡಬೇಕೆಂದು ಫೌಜುಸಹಿತವಾಗಿ ಕಟ್ಟಿಮಳಲವಾಡಿಗೆ ಬಂದನು. ಈ ಸಮಾಚಾರವು ನವಾಬನಿಗೆ ತಿಳಿದುದರಿಂದ ನವಾಬನು ಖಂಡೇರಾಯನನ್ನು ಯಾರು ಹಿಡಿದುಕೊಡುತ್ತಾರೋ ಅವರಿಗೆ ಬಹಳ ಇನಾಮುಗಳನ್ನು ಕೊಡಿಸುವೆವು ಎಂದು ಶ್ರೀರಂಗಪಟ್ಟಣದಲ್ಲಿರುವ ಮುಖ್ಯಾಧಿಕಾರಿಗಳಿಂದ ಬಂದಂತೆ ಪತ್ರೂರಿ ಕಾಗದವನ್ನು ಬರೆದು ಅದು ಖಂಡೇರಾಯನ ದಂಡಿನ ಜನರ ಕೈಗೆ ಸಿಕ್ಕುವಹಾಗೆ ಮಾಡಲಾಗಿ, ಆ ಕಾಗದವನ್ನು ನೋಡಿಕೊಂಡು ಖಂಡೇರಾಯನು ಭೀತನಾಗಿ ಹೊರಟುಹೋದನು.

ನವಾಬನಿಗೆ ಸರ್ವಾಧಿಕಾರ ನೇಮಕವಾದದ್ದು.—ಖಂಡೇರಾಯನು ಶ್ರೀ ರಂಗಪಟ್ಟಣಕ್ಕೆ ಬಂದನಂತರ, ನವಾಬನು ದೊರೆಗಳವರ ಸನ್ನಿಧಿಯಲ್ಲಿ

ಇರುವ ಆಪ್ತ ಮುಖ್ಯಾಧಿಕಾರಿಗಳಿಗೆ ಲಂಚವನ್ನು ಕೊಟ್ಟು ಸ್ವಾಧೀನ ಮಾಡಿಕೊಂಡು, ದಿವಾನ ಖಂಡೇರಾಯನು ದೊರೆಗಳವರ ಸೀಮೆಯ ಗಡಿ ಗಳಲ್ಲಿ ಗಡಿ ಒಕ್ಕ ೨–೩ ಸಾವಿರ ವರಹಗಳನ್ನು ತರಿಸಿಕೊಳ್ಳುತ್ತಲಿರುವು ದಕ್ಕೆ ದಾಖಲೆಯನ್ನು ತೋರಿಸಿ, "ಖಂಡೇರಾಯನು ನನ್ನ ಕಡೆಯವನೇ ಹೊರತು ಪೂರ್ವದಿಂದ ತಮ್ಮಲ್ಲಿ ಚಾಕರಿಮಾಡಿದವನಲ್ಲ. ಪೂರ್ವದಲ್ಲಿ ಸಂಸ್ಥಾನಕ್ಕೆ ಬಹಳ ಸೀಮೆಯನ್ನು ಸಾಧಿಸುವ ನಿಮಿತ್ತವಾಗಿ ನನ್ನ ದಂಡಿನ ಖರ್ಚಿಗೆ ಕೆಲವು ಸಾಲವೂ ಆಗಿದೆ. ಆ ಹಣವನ್ನು ಅಪ್ಪಣೆ ಕೊಡಿಸಿಕೊಡುವುದಲ್ಲದೆ, ಖಂಡೇರಾಯನನ್ನು ನನ್ನ ವಶಕ್ಕೆ ಹಿಡಿದು ಕೊಳುಹಿಸಿಕೊಡಬೇಕು. ಈ ವಿವರಗಳನ್ನು ಚಿತ್ತಕ್ಕೆ ತಾವದೆ ಉಪೇಕ್ಷೆ ಯನ್ನು ಮಾಡಿದರೆ, ನಾನು ನನ್ನ ಫೌಜನ್ನು ತೆಗೆದುಕೊಂಡು ಮತ್ತೆಲ್ಲಿ ಗಾದರೂ ಚಾಕರಿಗೆ ಹೊರಟುಹೋಗುತ್ತೇನೆ" ಎಂದು ದೊರೆಗಳವರ ಸನ್ನಿಧಿಗೆ ಅರ್ಜಿಯನ್ನು ವಿನ್ನಹ ಮಾಡಿಕೊಂಡನು. ಈ ವಿವರವನ್ನು ದೊರೆಗಳವರು ನೋಡಿ ತಮ್ಮ ಆಪ್ತಜನರ ಸಂಗಡ ಆಲೋಚನೆಯನ್ನು ಮಾಡುವಲ್ಲಿ, ಆ ಜನಗಳು "ಈಗಿನ ಪ್ರಕೃತಕ್ಕೆ ನವಾಬನು ಮರಾಟೆಯ ವರು ಮುಂತಾದ ತುಂಟಜನರ ಸಂಗಡ ಸೇರಿಕೊಂಡರೆ, ನಮ್ಮ ಸಂಸ್ಥಾ ನಕ್ಕೆ ಬಹಳ ತೊಂದರೆ ಉಂಟಾದೀತು" ಎಂದು ವಿನ್ನವಿಸಿದರು. ಈ ವಿವರಗಳನ್ನು ಚಿತ್ತಕ್ಕೆ ತಂದು, ಈ ನವಾಬನು ಸಂಸ್ಥಾನಕ್ಕೆ ಬಹಳ ಸೀಮೆಯನ್ನು ಸಾಧಿಸಿ ನಮಗೆ ಯಶಸ್ಸನ್ನುಂಟುಮಾಡುತಲಿದಾನೆಂದು ಅವನ ಮೇಲೆ ಕಟಾಕ್ಷವಿಟ್ಟು, ತಮ್ಮ ಸ್ವಂತ ಖರ್ಚಿಗೆ ಬೇಕಾದಷ್ಟು ಸೀಮೆಯನ್ನು ಇರಿಸಿಕೊಂಡು, ತಮ್ಮ ಮಾವನವರಾದ ಕರಾಚೂರಿ ನಂಜ ರಾಜಯ್ಯನವರಿಗೆ ಜೀವನಾರ್ಥವಾಗಿ ಕೆಲವು ಸೀಮೆಯನ್ನು ಕೊಟ್ಟು, ತಾವು ಮತ್ತು ತಮ್ಮ ಪೂರ್ವಿಕರು ಮಾಡಿರುವ ದಾನಧರ್ಮಗಳ ದೇವದಾಯ ಬ್ರಹ್ಮದಾಯದ ಸೀಮೆಗಳು ನಿರುಪಾಧಿಕವಾಗಿ ನಡೆಯು ವಂತೆ ನಿಬಂಧನಮಾಡಿ, ನಿಂತ ಸೀಮೆಯ ವಿಚಾರಣೆಯನ್ನು ನವಾಬನೇ ಮಾಡಿಕೊಂಡು ಆದಾಯ ವಚ್ಚಗಳ ಲೆಕ್ಕವನ್ನು ತಮಗೆ ಪ್ರತಿವರ್ಷಿಸುವು ದೆಂತಲೂ, ಇನ್ನೂ ಅನೇಕ ಸೀಮೆಗಳನ್ನು ಸಾಧಿಸುವುದೆಂತಲೂ, ಈ ವಿಷಯದಲ್ಲಿ ಪೆಚ್ಚು ಕಡಮೆ ನಡೆದಲ್ಲಿ ಈ ಕೆಲಸವು ಅವನಿಗೆ ನಿಲ್ಲಲಾರ

ದೆಂತಲೂ, ಶಾ॥ ಶಕ ೧೬೮೪ನೇ (A.D. 1761) ವಿಷು ಸಂವತ್ಸರದ ಜ್ಯೇಷ್ಠ ಬಹುಳ ೩ ಯಲ್ಲಿ ಬುದ್ಧಿನಿರೂಪವೆನ್ನು ಉಡುಗೊರೆ ವೀಳೆಯ ಗಳೂಡನೆ ಅಪ್ಪಣೆ ದಯಪಾಲಿಸಿ, ಖಂಡೇರಾಯನನ್ನು ಅವನ ಸ್ವಾಧೀನ ಮೂಡಿದರು. ಅನಂತರ ನವಾಬನು ಖಂಡೇರಾಯನನ್ನು ತನ್ನ ಸ್ವಾಧೀನ ಮೂಡಿಕೊಂಡು ಖೈದುಮೂಡಿ ಪಂಜರದಲ್ಲಿರಿಸಿ, ಸೀಮೆಯ ಮೇಲಿದ್ದ ಇವನ ಕಡೆಯ ಜನಗಳಿಗೆ ದಂಡನೆ ಖಂಡನೆಯನ್ನು ಮೂಡಿ ಬಹಳ ವ್ಯಸ್ಥೆಗಳನ್ನು ವಸೂಲ್ಮಾಡಿದನು.

ನವಾಬನು ಶ್ರೀರಂಗಪಟ್ಟಣದ ಕೋಟೆಯನ್ನು ಬಲಪಡಿಸಿ ಕಿಲ್ಲೆದಾರನನ್ನು ನೇಮಿಸಿದ್ದು.—ಅನಂತರ ಶ್ರೀರಂಗಪಟ್ಟಣದ ಕಿಲ್ಲೆದಾರಿಯನ್ನು ಮೊಹಿದುಂ ಸಾಬಿಗೆ ನೇಮಕಮೂಡಿ, ಶ್ರೀರಂಗಪಟ್ಟಣದ ಕೋಟೆಯನ್ನು ವಿಸ್ತಾರ ವಾಗಿ ಬಂದೋಬಸ್ತಾಗಿ ಕಟ್ಟಿಸಿ, ಕೆಲವು ದಿವಸ ಶ್ರೀರಂಗಪಟ್ಟಣ ವಲ್ಲಿದ್ದು, ಸೀಮೆಗಳನ್ನು ಸಾಧಿಸುವುದಕ್ಕೆ ದೊರೆಗಳವರ ಅಪ್ಪಣೆಯನ್ನು ತೆಗೆದುಕೊಂಡು ಹೊರಟುಹೋದನು.

ದೊರೆಗಳವರ ಅಪ್ಪಣೆಯ ಮೇರೆಗೆ ನವಾಬನು ಬಹಳ ಫೌಜುಗ ಳನ್ನು ಕಟ್ಟಿ ಅಯಾ ಪಾಳೆಯಗಾರರಿಂದ ಸಾಧಿಸಿದ ಸೀಮೆಗಳ ವಿವರ :—

ಬಾರಾಮಹಲು ತಾಲ್ಲೂಕ್ಕು ಗಡಿಗಳು.—(೧) ಜವಾದಿಪಾಳೆಯ, (೨) ಮೆತ್ತೂರು, (೩) ಜಗದೇವು, (೪) ತಿರುಪತ್ತೂರು, (೫) ಗಗನಗಡ, (೬) ಮಹಾರಾಜಗಡ, (೭) ಕೃಷ್ಣಗಿರಿ, (೮) ಕಲ್ಲಾವಿ, (೯) ಕರೋರ ಗಡ, (೧೦) ವಾನಂಬಾಡಿ, (೧೧) ಸಿಂಗರಪೇಟೆ, (೧೨) ಸುದರ್ಶನ ಗಡ, (೧೩) ಪವನಗಡ.

ಘಾಟ್ ಗಡಿಗಳು.—(೧) ದೇವನಹಳ್ಳಿ, (೨) ದೊಡ್ಡಬಳ್ಳಾಪುರ (೩) ಪೆನಗೊಂಡೆ, (೪) ಕಲ್ಲಿಕೋಟೆ, (೫) ಹಂಡೆದುರ್ಗ, (೬) ಕೋ ಲಾರ, (೭) ಹಂಚಪಟ್ಟದುರ್ಗ, (೮) ಸೀರ್ಯ, (೯) ಮೆಡಕಸೀರ್ಯ, (೧೦) ಕೊಡಗೊಂಡೆ, (೧೧) ಸಿರಹಟ್ಟಲಕ್ಷ್ಮೀಶ್ವರ, (೧೨) ಬಾಗ ಲೂರು, (೧೩) ರೇವೆಣಾಸೀರ್ಯ, (೧೪) ಗುಬ್ಬಿಹೊಸಹಳ್ಳಿ, (೧೫) ಯಲ್ಲಪ್ಪನಾಯಕನ ಪೊಸಕೋಟೆ, (೧೬) ಪಾಲಘಾಟಬಕೇರಿ, (೧೭) ಚವುಟರ ಬಂಗಲ, (೧೮) ಆನೆಕಲ್ಲು, (೧೯) ಪಾವೆಗೊಂಡೆ,

೨೦) ರಾಯಕೋಟೆ, (೨೧) ಅಮೆರಾಪುರ, (೨೨) ಮೆತ್ತೋಡು, (೨೩) ಬಸವಾಪಟ್ಟಣ, (೨೪) ಹರಿಪುರ, (೨೫) ಮುಳಬಾಗಿಲು, (೨೬) ಜಂಗಮಕೋಟೆ, (೨೭) ಕಂಗೊಂದಿ.

ನಗರದ ಸೀಮೆಯ ಗಡಿಗಳು.—(೧) ಹವೇಲಿಬಿದಲೂರು, (೨) ಕೋಲಿದುರ್ಗ, (೩) ಬೆಂಕಿಪುರ, (೪) ಮಹದೇವಪುರ, ಶಿಖಾರಿಪುರ, (೫) ಕುಂಶಿ, (೬) ತರಿಕೆರೆ, (೭) ಆರಗ, (೮) ಲಕ್ಕುವಳ್ಳಿ, (೯) ಅನವಟ್ಟ, (೧೦) ಇಕ್ಕೇರಿ ಸಾಗರ, (೧೧) ಶಿವಮೊಗ್ಗೆ, (೧೨) ಹೊಳಹೊನ್ನೂರು, (೧೩) ಆಯನೂರು, (೧೪) ಚಂದ್ರಗುತ್ತಿ, (೧೫) ಅನಂತಪುರ, (೧೬) ಕೊಪ್ಪ, (೧೭) ಎಡೆಹಳ್ಳಿ, (೧೮) ಸಂತೆಬಿದನೂರು, (೧೯) ಉಡಗಣಿ, (೨೦) ಅಜ್ಜಂಪುರ, (೨೧) ದಾನಿವಾಸ, (೨೨) ಚನ್ನಗಿರಿ, (೨೩) ಸೊರಬ ತವನಂದಿ, (೨೪) ಅಣಜಿ. (೨೫)ತುರುಕರಹೊನ್ನಾಳಿ, (೨೬) ಮೆಂಡಗದ್ದೆ, (೨೭) ಜಡೆಯ, (೨೮) ಮೋವಿನಹೊಳೆ, (೨೯) ಬಳ್ಳಾಳರಾಯನದುರ್ಗ, ಪಾಯನಘಾಟ ಸೀಮೆಗಳು:—(೩೦) ಬಾರಕೂರು, (೩೧) ಕಾರಕಳ, (೩೨) ಭಂಟವಾಳ, (೩೩) ಮಂಗಲೂರು, ಕೊಡೆಯಾಲ, (೩೪) ಸದಾಶಿವಗಡ, (೩೫)ಕೊಲ್ಲೂರು, (೩೬)ಉಡುಪಿ, (೩೭) ಗೋಕರ್ಣ, (೩೮) ಬೆತಲ, (೩೯) ಸುಬ್ರಹ್ಮಣ್ಯ, (೪೦) ಶೃಂಗೇರಿ, (೪೧) ಕುಂದಾಪುರ, ಕುಶಾಲಪುರ, (೪೨) ಹೊನ್ನಾವರ, (೪೩) ಮೂಡಬಿದರೆ, (೪೪) ಬಸವರಾಜದುರ್ಗ, (೪೫) ದರಿಯಾಬಹದರಗಡ, (೪೬) ಕೋಟೇಶ್ವರ, (೪೭) ಶಂಕರನಾರಾಯಣ, (೪೮) ಕೂಡ್ಲಿ.

ಸೋದೆಸೀಮೆಯ ಗಡಿಗಳು.—(೧) ಐನೆಕಸಬೆ, (೨) ಕರೂರು, (೩) ಭರತಪಳ್ಳಿ, (೪) ನಂದಿಕಟ್ಟೆ, (೫) ಜಿನ್ನಾಪುರ, (೬) ಯಿಸಳೂರು, (೭) ಬದನೆಗೋಡು, (೮) ಸಿರಸಿ, (೯) ನಾಗನೂರು, (೧೦) ಶಾಂತಪುರ, (೧೧) ತೋಟವಸೀಮೆ, (೧೨) ಉಳಿವೆ, (೧೩) ಹೆರೂರು, (೧೪) ಬಾಳೂರು, (೧೫) ಮಳಗಿ, (೧೬) ಮೆಂಜಗುಣಿ, (೧೭) ಮೊಣಶಿ, (೧೮) ಸಿವಳ್ಳಿ, (೧೯) ಎಲ್ಲಾಪುರ, (೨೦) ಬನವಸಿ, (೨೧) ಪುತ್ತಿಗೆಂಡ, (೨೨) ಮುಗಗೊಂಡೆ, (೨೩) ಸಾಂಬ್ರಾಣಿ, (೨೪) ಕುಳನಾಪು.

ಮಿರ್ಜಾ ಅಂಕೋಲಾ ಸೀಮೆಗಳ ಗಡಿಗಳು.—(೧) ಕಸಬೆ, (೨) ಕುದುರೆ, (೩) ಕವಿಯಾಡ, (೪) ಬಾಡ, (೫) ಶಿವೇಶ್ವರ.

ಒಟ್ಟು ಗಡಿಗಳು ೧೧೩.

ಪೂರ್ವದ ದೊರೆಗಳು ಪಾಳೆಯಗಾರರಿಂದ ಸಾಧಿಸಿದ ಗಡಿಗಳ ಪೈಕಿ ಕೆಲವನ್ನು ಅದೇ ಪಾಳೆಯಗಾರರು ತುಂಟತನದಿಂದ ಮತ್ತೆ ತಮ್ಮ ವಶಮಾಡಿ ಕೊಂಡಿದ್ದರು. ಆ ಪಾಳೆಯಗಾರರುಗಳನ್ನು ಜಯಿಸಿ ಮತ್ತೆ ಸಾಧಿಸಿದ ಗಡಿಗಳು.—

ರಣಧೀರ ಕಂಠೀರವ ನರಸರಾಜಒಡೆಯರವರ ಆಳಿಕೆಯಲ್ಲಿ ಸಾಧಿಸಿದ್ದು :—ಹೆಬ್ಬೂರು—ರತ್ನಗಿರಿ.

ಚಿಕ್ಕದೇವರಾಜಒಡೆಯರವರ ಆಳಿಕೆಯಲ್ಲಿ ಸಾಧಿಸಿದ್ದು :—(೧) ಹೊಸಕೋಟೆ, (೨) ದೇವರಾಯನದುರ್ಗ, (೩) ಚನ್ನರಾಯದುರ್ಗ, (೪) ತುಮಕೂರು, (೫) ಮದ್ದಗಿರಿ.

ಕಂಠೀರವ ಮಹಾರಾಜಒಡೆಯರವರ ಆಳಿಕೆಯಲ್ಲಿ ಸಾಧಿಸಿದ್ದು.—(೧) ಚಿಕ್ಕಬಳ್ಳಾಪುರ, (೨) ಸೀರ್ಯ, (೩) ದೊಡ್ಡಬಳ್ಳಾಪುರ, (೪) ಮಿಡಗೇಶಿ.

ದೊಡ್ಡ ಕೃಷ್ಣರಾಜಒಡೆಯರವರ ಆಳಿಕೆಯಲ್ಲಿ ಸಾಧಿಸಿದ್ದು :—ರತ್ನಗಿರಿ.

ನವಾಬನಿಗೆ ಸರ್ವಾಧಿಕಾರವನ್ನು ಕೊಡುವುದಕ್ಕೆ ಮುಂಚಿತವಾಗಿಯೂ ಸರ್ವಾಧಿಕಾರವನ್ನು ಕೊಟ್ಟನಂತರವೂ ಅವನು ಗಡಿಗಳನ್ನು ಸಾಧಿಸುವ ಕಾಲದಲ್ಲಿ ನಡೆದ ವಿವರಗಳು.—ಈ ನವಾಬನು ಚಿತ್ರದುರ್ಗಕ್ಕೆ ಹೋಗಿ ಮುತ್ತಿಗೆಯನ್ನು ಹಾಕಿ ಈ ದುರ್ಗದ ಮೆದಗೆರಿನಾಯಕನಿಂದ ವರ್ಷ ೧ಕ್ಕೆ ೮ ಲಕ್ಷ ದುಗ್ಗಾವರಹಗಳ ಖಂಡಣೆಯನ್ನು ನಿಗದಿ ಮಾಡಿಕೊಂಡನು. ಅನಂತರ ಈ ಮೆದಗೆರಿನಾಯಕನಿಗೂ ಬಿದಲೂರು ಪಾಳೆಯಗಾರನಿಗೂ ದ್ವೇಷವಿದ್ದುದರಿಂದ, ಬಿದಲೂರನ್ನು ನವಾಬನಿಗೆ ಸಾಧಿಸಿಕೊಡಬೇಕೆಂದು ಆಲೋಚನೆಮಾಡಿ, ಈ ಮೆದಗೆರಿನಾಯಕನು ಬಿದಲೂರು ಪಾಳೆಯಗಾರನ ದತ್ತುಮಗ ಚನ್ನಬಸವಯ್ಯನಿಗೂ ಅವನ ಸಾಕುತಾಯಿಯಾದ ವೀರಮ್ಮಣಿಗೂ ಇದ್ದ ಪರಸ್ಪರ ಕಲಹದ

ಮೆರ್ಮೆವನ್ನು ತಿಳಿದಿರುವೆನಾದುದರಿಂದ, ಈ ಬಿದಲೂರನ್ನು ಸಾಧಿಸಿ ಕೊಡುತ್ತೇನೆಂದು ನವಾಬನಿಗೆ ಹೇಳಿ ಕರೆದುಕೊಂಡು ಹೋಗುತ್ತಿದ್ದನು. ಆ ಸಮಯದಲ್ಲಿ ಬಿದಲೂರಿನ ವೀರಮ್ಮರಾಣಿಯು ನವಾಬನು ಬರುತ್ತಾನೆಂಬ ವರ್ತಮಾನವನ್ನು ತಿಳಿದು, ತನ್ನ ದತ್ತುಮಗನ ಮೇಲಣ ಅಸೂಯೆಯಿಂದ ತನ್ನ ಗಂಡನು ಸಂಪಾದಿಸಿದ ವ್ಯವ್ಯವಸ್ತ್ರಾಭರಣ ಮುಂತಾದ ಪದಾರ್ಥಗಳಲ್ಲಿ ತನಗೆ ಬೇಕಾದಷ್ಟು ತೆಗೆದುಕೊಂಡು, ನಿಂತ ಪದಾರ್ಥವನ್ನು ಬಂದು ಕೊಟ್ಟಡಿಯಲ್ಲಿ ತುಂಬಿ, ಈ ಕೊಟ್ಟಡಿಗೆ ಬೆಂಕಿಯನ್ನು ಹಾಕಿಬಿಟ್ಟು, ಅಲ್ಲಿ ದಿವಾನಗಿರಿ ಮಾಡುತ್ತಿದ್ದ ನಂಜಯ್ಯನಿಗೂ ತನಗೂ ಬಹಳ ಸ್ನೇಹವಿದ್ದುದರಿಂದ ಅವನನ್ನು ಕಟ್ಟಕೊಂಡು, ಬಳ್ಳಾಳರಾಯನ ದುರ್ಗಕ್ಕೆ ಹೊರಟಳು. ಆ ವರ್ತಮಾನವನ್ನು ನವಾಬನು ತಿಳಿದು ಜಾಗ್ರತೆಯಾಗಿ ಆ ಬೆಂಕಿಯನ್ನು ಅರಿಸಿ, ಆ ಬಿದಲೂರನ್ನೂ ಅದಕ್ಕೆ ವಳಿತವಾದ ಸೀಮೆಯನ್ನೂ ಸ್ವಾಧೀನಮಾಡಿಕೊಂಡು ಅವಳು ಹೋಗದಂತೆ ತಡೆದು, ಅವಳ ದತ್ತುಮಗ ಚನ್ನಬಸವಯ್ಯನನ್ನು ಹಿಡಿದು, ಅವರಿಬ್ಬರನ್ನೂ ಮದ್ದಗಿರಿಯಲ್ಲಿಯೇ ಖೈದುಮಾಡಿ ಇರಿಸಿದನು.

ಬಿದಲೂರಿಗೆ ನಗರವೆಂಬ ಹೆಸರನ್ನು ಕೊಟ್ಟದ್ದು ಮತ್ತು ಬಹದ್ದರಿ ವರಹಗಳನ್ನು ಏರ್ಪಡಿಸಿದ್ದು.—ಅನಂತರ ಈ ಬಿದಲೂರಲ್ಲಿರುವ ಇಕ್ಕೇರಿವರಹಕ್ಕೂ ದುರ್ಗದ ಸೀಮೆಯ ದುರ್ಗೀವರಹಕ್ಕೂ ಬದಲಾಗಿ ಸ್ವಾಮಿಯ ಹೆಸರಿನಿಂದ ಚಿನ್ನದ ನಾಣ್ಯವು ಅದೇಮೇರೆಗೆ ಆಗಬೇಕೆಂಬದಾಗಿಯೂ, ಈ ಬಿದಲೂರಿಗೆ ಮತ್ತೊಂದು ಹೆಸರನ್ನು ಇತಬೇಕೆಂಬದಾಗಿಯೂ ದೊರೆಗಳವರ ಸನ್ನಿಧಾನಕ್ಕೆ ಅರ್ಜಿಯನ್ನು ಚಿನ್ನಹಮಾಡಿಕೊಂಡು, ದೊರೆಗಳವರ ಬುದ್ಧಿನಿರೂಪ ಅಪ್ಪಣೆ ಬಂದಮೇರೆಗೆ ಬಿದಲೂರಿಗೆ ನಗರ ಎಂಬದಾಗಿ ಹೆಸರನ್ನಿಟ್ಟು, ನೂತನವಾಗಿ ಬಹದ್ದರಿ ವರಹವೆಂಬ ಚಿನ್ನದ ನಾಣ್ಯವನ್ನು ಏರ್ಪಡಿಸಿ ಟಂಕಸಾಲೆಯನ್ನುಂಟುಮಾಡಿ, ಸೀಮೆಯ ಮೇಲೆ ಈ ಬಹದ್ದರಿ ವರಹದ ಚಲಾವಣೆಯಾಗುವಂತೆ, ಶಾ॥ ಶಕ ೧೬೮೫ನೇ (A.D. 1763) ಚಿತ್ರಭಾನು ಸಂವತ್ಸರದ ಫಾಲ್ಗುಣ ಮಾಸದಲ್ಲಿ ನಿಬಂಧನೆಮಾಡಿ, ಈ ನಗರದ ಸೀಮೆಯ ಬಂದೋಬಸ್ತು ಆಗುವುವಕ್ಕೆ ಮದ್ದಗಿರಿ ವೆಂಕಪ್ಪಯ್ಯನಿಗೆ ದಿವಾನಗಿರಿಯನ್ನು ಕೊಟ್ಟದ್ದಲ್ಲದೆ,

ಶ್ರೀರಂಗಪಟ್ಟಣದ ದಿವಾನಗಿರಿಯನ್ನು ದಿಂಡುಗಲ್ಲು ವೆಂಕಟಪತಯ್ಯನಿಗೆ ದೊರೆಗಳವರ ಅಪ್ಪಣೆಯು ಮೇರೆಗೆ ನೇಮಕ ಮಾಡಿದನು.

ಅನಂತರ ನವಾಬನು ಕೊಡಿಯಾಲದಲ್ಲಿ ಜವಜುಗಳನ್ನು ಮಾಡಿಸಿ ಬೇಕಾದ ಪದಾರ್ಥಗಳನ್ನು ನೀರಮೇಲೆ ಶ್ರೀರಂಗಪಟ್ಟಣಕ್ಕೆ ತರಿಸುತ್ತಾ ಬಂದನು.

ಸೋದೆ ಸಂಸ್ಥಾನವನ್ನು ಸಾಧಿಸಿ ಶ್ರವಣೂರು ನವಾಬನಿಂದ ಖಂಡಣೆಯನ್ನು ತೆಗೆದುಕೊಂಡನ್ದು.—ಬಳಿಕ ಮೇಲೆ ಹೇಳಿದ ಸೋದೆ ಮುಂತಾದ ಸಂಸ್ಥಾನಗಳನ್ನೂ ಪಾಳೆಯಗಾರರ ಗಡಿಗಳನ್ನೂ ಸಾಧಿಸುವುದಕ್ಕಾಗಿ ನವಾಬನು ತಮ್ಮಲ್ಲಿ ಕೂತವಾಗಿರುವ ಫೈಜುಲ್ಲಾಖಾನ ಮುಂತಾದ ಸರದಾರರ ಸಂಗಡ ದೊರೆಗಳವರ ಅಪ್ಪಣೆಯು ಮೇರೆಗೆ ಕೆಲವು ಫೌಜುಗಳನ್ನು ಕೊಟ್ಟು ಕಳುಹಿಸಿದನು. ಈ ವರ್ತಮಾನವನ್ನು ಅಲ್ಲಲ್ಲಿ ಪಾಳೆಯಗಾರರು ತಿಳಿದು ಕೆಲವರು ಇವರ ಸಂಗಡ ಯುದ್ಧಮಾಡುವುದಕ್ಕೆ ಸಾಮರ್ಥ್ಯವಿಲ್ಲದೆ ಚಿಂತಿಸುತ್ತಿರುವಾಗ, ಸೋದೆ ಸಂಸ್ಥಾನದ ಅರಸು ತನ್ನ ಹೆಂಗಸರು ಮಕ್ಕಳನ್ನೂ ಕೆಲವು ವಸ್ತ್ರಾಭರಣ ಮುಂತಾದ ಪದಾರ್ಥಗಳನ್ನೂ ಸಾಗಿಸಿಕೊಂಡು ಪರಾರಿಯಾದುದರಿಂದ, ಆ ಸಂಸ್ಥಾನಕ್ಕೆ ಸೇರಿದ ಬಿಳಿ ಗಡಿಗಳನ್ನು ಸ್ವಾಧೀನಮಾಡಿಕೊಂಡು, ಮತ್ತು ಪಂಚಮಹಲಿಗೆ ಸೇರಿದ ಅಂಕೋಲೆ ಮುಂತಾದ ಕೆಳಗಡಿಗಳನ್ನು ಕಟ್ಟಿಕೊಂಡು, ಫೈಜುಲ್ಲಾಖಾನನು ರಾಣಿಬಿದನೂರನ್ನು ಸಾಧಿಸುವುದಕ್ಕೆ ಹೊರಟಿದನು. ಆಗ ಮಾರ್ಗದಲ್ಲಿ ಶ್ರವಣೂರು ನವಾಬ ಅಬ್ದುಲ್ಲಾ ಹಕೀಮೆಖಾನನು ತನ್ನ ಫೌಜನ್ನು ತೆಗೆದುಕೊಂಡು ಬಂದು ಈ ದಂಡನ್ನು ತಡೆದನು. ಇದನ್ನು ತಿಳಿದು ಫೈಜುಲ್ಲಾಖಾನನಿಗೆ ಕುಮೆಕಿಯಾಗಿ ದಂಡನ್ನು ತೆಗೆದುಕೊಂಡು ನವಾಬನೇ ಬಂದನು. ಈ ವರ್ತಮಾನವನ್ನು ಅಬ್ದುಲ್ಲಾ ಹಕೀಮೆಖಾನನು ತಿಳಿದು, ಫೈಜುಲ್ಲಾಖಾನನ ಮುಖಾಂತರ ಶ್ರವಣೂರು ನಾಣ್ಯ ೩ ಲಕ್ಷ ವರಹಗಳ ಖಂಡಣೆಯನ್ನು ಕೊಡುತ್ತೇನೆಂಬುದಾಗಿ ಒಪ್ಪಿಕೊಂಡು ಹಣವನ್ನು ಕೊಟ್ಟದ್ದಲ್ಲದೆ, ಜವಾಹಿರಿ ಕತಾರಿಯನ್ನೂ ನವಾಬನಿಗೆ ಕೊಟ್ಟು ಕಳುಹಿಸಿದನು.

ಮರಾಟೆ ಸೀಮೆಯ ಗಡಿಗಳನ್ನು ಸಾಧಿಸಿ ಪಟ್ಟದ ಕಳಿಗಿನ ಪಾಳೆಗಾರರನ್ನು ನಿಗ್ರಹಿಸಿದ್ದು.—ನವಾಬನು ತಾನು ಸಾಧಿಸಿದ ಗಡಿಗಳ ವಿವರಗಳನ್ನು ತಿಳಿಸಿ ಅರ್ಜಿಬರೆದು, ಶ್ರವಣಾಪುರ ನವಾಬನು ಕಳುಹಿಸಿದ ಜವಾಹಿರಿ ಕಠಾರಿಯನ್ನೂ ಆ ಅರ್ಜಿಯ ಸಂಗಡ ಶ್ರೀರಂಗಪಟ್ಟಣಕ್ಕೆ ದೊರೆಗಳವರ ಸನ್ನಿಧಿಗೆ ಕಳುಹಿಸಿಕೊಟ್ಟು, ಮೆರಾಟೆಯವರ ಸೀಮೆಯನ್ನು ಲೂಟಿಮಾಡಿ ಕೆಲವು ಸೀಮೆಗಳನ್ನು ಸಾಧಿಸಿಕೊಂಡು ಬರುವಂತೆ ಮಿರ್ ಫೈಜುಲ್ಲಾಖಾನನೊಡನೆ ಹೇಳಿ ಕಳುಹಿಸಿಕೊಟ್ಟು, ತಾನು ನಗರಕ್ಕೆ ಬಂದನು. ಫೈಜುಲ್ಲಾಖಾನನು ಮೆರಾಟೆಯವರ ಸೀಮೆಯಲ್ಲಿ ಯುದ್ಧ ಮಾಡಿ ಶಾ॥ ಶಕ ೧೬೮೫ನೇ (A.D. 1764) ತಾರಣ ಸಂವತ್ಸರದಲ್ಲಿ ಕೃಷ್ಣಾನದಿಯ ಪರ್ಯಂತಕ್ಕೂ ಕೆಲವು ಗಡಿಗಳನ್ನು ಸಾಧಿಸಿಕೊಂಡು ಬಂದನು. ಶಾ॥ ಶಕ ೧೬೮೬ನೇ (A.D. 1765) ಪಾರ್ಥಿವ ಸಂವತ್ಸರದಲ್ಲಿ ನವಾಬನು ಫೌಜುಸಹಿತ ಪಟ್ಟದಕಳ್ಳಕ್ಕೆ ಹೋಗಿ ಅಲ್ಲಿಯ ಪಾಳೆಯಗಾರರು ಮೆತ್ತಿ ತುಂಟತನಮಾಡುತಿದ್ದುದರಿಂದ ಅವರನ್ನು ನಿಗ್ರಹಿಸಿ ಸೀಮೆಗಳನ್ನು ಬಂದೋಬಸ್ತು ಮಾಡಿದನು.

ಕಲ್ಲಿಕೋಟೆಯನ್ನು ವಶಮಾಡಿಕೊಂಡದ್ದು:—ಅನಂತರ ನಾಯಮೊರು ಸೀಮೆಯ ಜನಗಳು ತುಂಟತನ ಮಾಡುತಲಿರುವ ವರ್ತಮಾನವನ್ನು ನವಾಬನು ಕೇಳಿ, ಫೌಜು ಸಹಿತವಾಗಿ ಕಲ್ಲಿಕೋಟೆಗೆ ಹೋಗಿ ಮುತ್ತಿಗೆ ಹಾಕಲು, ಅಲ್ಲಿಯ ನಾಯಮೊರವರು ಶ್ರೀರಂಗಪಟ್ಟಣದ ಬಾರಿನ ಶಿಪಾಯಿಗಳ ಕೆಂಪು ಕುಡುತೆಗಳನ್ನೂ ಕರಿಯ ಪಾಗುಗಳನ್ನೂ ನೋಡಿ ಭಯಪಟ್ಟು ಓಡಿಹೋದರು. ಆ ಕಲ್ಲೀಕೋಟೆಯ ಪಾಳೆಯಗಾರನಾದ ಮೊನವಿಕ್ರಮನು ನವಾಬನ ಬಳಿಗೆ ಬಂದು ಕಾಣಿಸಿಕೊಳ್ಳಲಾಗಿ, ನವಾಬನು ಅವನಿಗೆ ಸನ್ಮಾನಗಳನ್ನುಮಾಡಿ, ೪ ಲಕ್ಷ ಶಾಹಾರಿ ಕಾಸುಗಳನ್ನು ಕೊಟ್ಟರೆ ನಿನ್ನ ಕಲ್ಲಿಕೋಟೆಯನ್ನು ನಿನಗೆ ಕೊಪುತ್ತೇನೆಂದು ಹೇಳಿ ಒಡಂಬಡಿಸಿ, ತನ್ನ ದಂಡಿನ ನೆಮ್ಮಾವದ ಬಂದು ದೇವಸ್ಥಾನದಲ್ಲಿ ಇಳಿಸಿದ್ದನು. ಆ ಮೊನವಿಕ್ರಮನು ಆ ದೇವಸ್ಥಾನದಲ್ಲಿ ಎರಡು ಮೂರು ದಿವಸವಿದ್ದು, ನವಾಬನು ಹಣಕ್ಕೆ ಹೇಳಿ ಕಳುಹಿಸಲಾಗಿ ಆ ಹಣವನ್ನು ಕೊಡುವುದಕ್ಕೆ ಗತಿಯಿಲ್ಲದೆ, ತಾನು ಇಳಿದಿದ್ದ ದೇವಸ್ಥಾನದ ಬಾಗಿಲಿಗೆ

ಬೆಂಕಿ ಹಾಕಿಸಿ, ಬಳಿಕ ಸತ್ತು ಹೋದನು. ಈ ವೆರ್ತಮಾನವನ್ನು ನವಾಬನು ತಿಳಿದು, ಕಲ್ಲಿಕೋಟೆಯು ಸೀಮೆಯನ್ನು ಬಂದೋಬಸ್ತು ಮಾಡಿ, ಅಲ್ಲಿ ಪೂರ್ವದಲ್ಲಿದ್ದ ಮಣ್ಣು ಕೋಟೆಗೆ ಬದಲು ಕಲ್ಲು ಕೋಟೆಯನ್ನು ಕಟ್ಟಿಸಿ, ಅಲ್ಲಿಯ ಅಧಿಕಾರಕ್ಕೆ ತೆರಕಣಾಂಬಿ ಶಂಕರ ಗೌಡನ ಮಗನಾದ ಕೊಯಮುತ್ತೂರ ಅಧಿಕಾರದಲ್ಲಿದ್ದ ಪುಟ್ಟಮಾದಣ್ಣನನ್ನು ದೊರೆಗಳವರ ಅಪ್ಪಣೆಯ ಮೇರೆಗೆ ನೇಮಕಮಾಡಿದನು.

ಇಮ್ಮಡಿ ಕೃಷ್ಣರಾಜಒಡೆಯರವರ ನಿರ್ಯಾಣ.—ಅನಂತರ ನವಾಬನು ಕಲ್ಲಿಕೋಟೆಯಲ್ಲಿರುವ ಸಮಯದಲ್ಲಿಯೇ ಶಾ॥ ಶಕ ೧೬೮೯ನೇ (A.D. 1766) ವ್ಯಯ ಸಂವತ್ಸರದ ನಿಜಜ್ಯೇತ್ರ ಬಹುಳ ಪಾಡ್ಯಮಿ ಶುಕ್ರವಾರದಲ್ಲಿ ಶ್ರೀರಂಗಪಟ್ಟಣದಲ್ಲಿ ದೊರೆಗಳಾದ ಇಮ್ಮಡಿ ಕೃಷ್ಣರಾಜಒಡೆಯರವರು ವೈಕುಂತವನ್ನು ಅಪೇಕ್ಷಿಸಿ ತೆರಳಿದರು. ಈ ವೆರ್ತಮಾನವು ಶ್ರೀರಂಗಪಟ್ಟಣದಿಂದ ಬರಲು, ನವಾಬನು ಬಹಳ ಚಿಂತಾಕ್ರಾಂತನಾಗಿ ಶ್ರೀರಂಗಪಟ್ಟಣದ ಕಿಲ್ಲೆದಾರಿಮೊಹದುಂಸಾಬಿಗೆ "ನೀನು ಅರಮನೆಗೆ ಹೋಗಿ ಮಹಾಮಾತ್ಯಶ್ರೀಯವರ ಸನ್ನಿಧಾನಕ್ಕೆ ಸಮಾಧಾನೋಕ್ತಿಯನ್ನು ಅರಿಕೆ ಮಾಡಿಸಿ, ಇಮ್ಮಡಿ ಕೃಷ್ಣರಾಜಒಡೆಯರವರಿಗೆ ಅರಮನೆಯ ಶಾಸ್ತ್ರ ಸಂಪ್ರದಾಯದ ಮೇರೆಗೆ ಪರಲೋಕ ಸಾಧನವನ್ನು ಮಾಡಿಸಿ, ಮಹಾಮಾತ್ಯಶ್ರೀ ಚಿಕಲುವಾಜಮ್ಮಣ್ಣಿಯವರ ಅಪ್ಪಣೆಯ ಮೇರೆಗೆ ಚಿಕ್ಕ ದೊರೆಗಳವರಿಗೆ ಪಟ್ಟಾಭಿಷೇಕವನ್ನು ಮಾಡಿಸುವೆನಾಗು" ಎಂದು ಬರೆದು ಕಳುಹಿಸಿದನು. ಆ ಮೊಹದುಂಸಾಬಿಯು ಅರಮನೆಗೆ ಬಂದು ಅದೇಮೇರೆಗೆ ಮಹಾಮಾತ್ಯಶ್ರೀಯವರ ಸನ್ನಿಧಾನಕ್ಕೆ ಅರಿಕೆ ಮಾಡಿಸಿ, ಮುಂದೆ ಸನ್ನಿಧಾನದಲ್ಲಿ ಯಾವ ವಿಷಯವಾಗಿ ಏನು ಅಪ್ಪಣೆಯಾದರೂ ಅಪ್ಪಣೆಯ ಮೇರೆಗೆ ನಡೆದುಕೊಳ್ಳುತ್ತೇನೆಂದು ವಿನ್ನವಿಸಿದನು. ಅನಂತರ ಇವರ ಸಪತ್ನೀ ಮಾತೃ ಚಿಕಲುವಾಜಮ್ಮಣ್ಣಿಯವರು ಈ ಇಮ್ಮಡಿ ಕೃಷ್ಣರಾಜಒಡೆಯರವರಿಗೆ ಪರಲೋಕ ಸಾಧನ ವ್ಯಾಪಾರವನ್ನು ಗುಡಮೋಚನಹಳ್ಳಿ ಚಾಮಯ್ಯನ ಮಗ ಬೆಟ್ಟಯ್ಯನ ಕಯ್ಯಲ್ಲಿ ಮಾಡಿಸಿದರು. ಸಹಗಮನವಿಲ್ಲ.

	ವರ್ಷ	ತಿಂಗಳು	ದಿನ.
ಇಮ್ಮಡಿ ಕೃಷ್ಣರಾಜಬಡೆಯರವರ ಜೀವಿತ ಕಾಲ	೪೪	೫	೦೪
ಇವರ ಆಳಿಕೆ	೪೧	೯	೦೧

೧೦ನೆಯ ಅಧ್ಯಾಯ.

ಹತ್ತೊಂಬತ್ತನೆಯ ಆಳಿಕೆ.

ನಂಜರಾಜ ಬಡೆಯರವರು (A.D. 1766—A.D. 1770)

ಜನನ —ಶಾಲಿ ಶಕ ೧೬೮೫ನೇ (A.D. 1762) ಚಿತ್ರಭಾನುಸಂವತ್ಸರದ ವೈಶಾಖ ಶುದ್ಧ ಪಂಚಮಿ.

ಪಟ್ಟಾಭಿಷೇಕ —ಶಾಲಿ ಶಕ ೧೬೮೯ನೇ (A.D. 1766) ವ್ಯಯಸಂವತ್ಸರದ ನಿಜ ಜ್ಯೈತ್ರಬಹುಳ ೦೩ ಯಲ್ಲಿ ಇವರ ಸಪತ್ನಿ ಹೆತ್ತವ್ಯಯ್ಯನವರಾದ ಚೆಲುವಾಜಮ್ಮಣ್ಣಿಯವರು, ಒಟ್ಟು ಸರ್ವಾಧಿಕಾರವನ್ನು ಮಾಡುವ ನವಾಬನು ಕಲ್ಲಿಕೋಟೆಗೆ ಹೋಗಿರುವ ಸಮಯದಲ್ಲಿ ಪಟ್ಟಣವ ಕಿಲ್ಲೆದಾರಿಮಾಡುತಲಿದ್ದ ಮೊಖದುಂಸಾಬಿಗೆ ಅಪ್ಪಣೆಯನ್ನು ಕೊಟ್ಟು ಪಟ್ಟಾಭಿಷೇಕಮಹೋತ್ಸವವನ್ನು ಮಾಡಿಸಿದರು.

ಇವರಿಗೆ ಪತ್ನೀ ಪುತ್ರಸಂತಾನಗಳು ಇಲ್ಲ.—

ಇವರ ಆಳಿಕೆಯಲ್ಲಿ ಅಧಿಕಾರಮಾಡಿದವರು :—

(೧) ಒಟ್ಟು ಸರ್ವಾಧಿಕಾರಿ ನವಾಬ ಹೈದರಲ್ಲೀಖಾನ ಬಹದ್ದರ್,

ದಿವಾನಗಿರಿ ಮಾಡಿದವರು ಮತ್ತು ಉಭಯವಿಚಾರದ ಚಾವಡಿಯ ಅಧಿಕಾರಿಗಳು.

(೨) ದಿಂಡುಗಲ್ಲು ವೆಂಕಟಪ್ಪ, (೩) ಇವನಮಗ ಚಿಕ್ಕಣ್ಣಯ್ಯ, (೪) ಫೈಜುಲ್ಲಾಖಾನನ ತಮ್ಮ ಹಾನಿಜುಲ್ಲಾಖಾನನು, (೫) ಮದ್ದಗಿರಿ ವೆಂಕಪ್ಪಯ್ಯ, (೬) ಉಭಯವಿಚಾರದ ಚಾವಡಿ ತಿಮ್ಮಪ್ಪಯ್ಯ, (೭) ಇವನ ಬದಲು ಒಟ್ಟು ವಿಚಾರದ ಚಾವಡಿಗೆ ಮೇಲೆ ಹೇಳಿದ ಮದ್ದಗಿರಿ ವೆಂಕಪ್ಪಯ್ಯ. ಅನಂತರ ಈ ಮದ್ದಗಿರಿ ವೆಂಕಪ್ಪಯ್ಯನಿಗೆ ಪ್ರಧಾನತನವನ್ನು ನೇಮಕ ಮಾಡಿದರು. ಇವರು ಹೊರತಾಗಿ ಇನ್ನೂ ಕೆಲವರು ಅಧಿಕಾರಗಳನ್ನು ಪಡೆದರು,

ಇವರ ಆಳಿಕೆಯಲ್ಲಿ ನಡೆದ ವೃತ್ತಾಂತಗಳು.—ಕರಾಚೂರಿ ನಂಜರಾಜಯ್ಯನವರು ಕೊಯಿನೂರನ್ನು ಬಿಟ್ಟು, ಮತ್ತೆ ಮೈಸೂರಿಗೆ ಬಂದು, ಚನ್ನಪಟ್ಟಣದ ನಿಜಾಮಲ್ಲೀಖಾನನಿಗೂ ಮೆರಾಟೆಯವರಿಗೂ "ಈ ನವಾಬನನ್ನು ಹೊಡೆದುಹಾಕಿ ದೊರೆಗಳವರ ಸನ್ನಿಧಿಯಲ್ಲಿ ಪೂರ್ವದಂತೆ ನಮ್ಮ ಚಾಕರಿಯನ್ನು ನಮಗೆ ಕೊಡಿಸಬೇಕು" ಎಂದು ಪಿತೂರಿ ಕಾಗದ ಬರೆದ ವರ್ತಮಾನವೆನ್ನು ನವಾಬನು ಕೇಳಿ, ಮೈಸೂರಿಗೆ ಬಂದು ಈ ನಂಜರಾಜಯ್ಯನವರನ್ನು ಕಂಡು ಅತಿವಿನಯದಿಂದ "ನಿಮ್ಮ ಮೆಕ್ಕಳಾದ ವೀರರಾಜಯ್ಯನವರಿಗೆ ಮದುವೆಯನ್ನು ಮಾಡಿಸಿ ನಿಮಗೆ ಪೂರ್ವದಂತೆ ೩ ಲಕ್ಷ ಸೀಮೆಯನ್ನು ಕೊಡಿಸುವೆನು, ಮತ್ತು ಶ್ರೀರಂಗಪಟ್ಟಣದ ಕೋಟೆಯು ಮೈಸೂರ ಬಾಗಿಲು ಮೊಡಲಬಾಗಿಲು ಸಹ ನಿಮ್ಮ ಸ್ವಾಧೀನವೆಮಾಡಿ ಕೊಡಿಸುವೆನು" ಎಂದು ಹೇಳಿ ಈ ವಿಚಾರಕ್ಕೆಲ್ಲಾ ಮಂಜನೆಯ ಕರಾರುನಾಮೇಕಾಗದಗಳನ್ನು ಬರೆಸಿಕೊಟ್ಟುದಲ್ಲದೆ, ಫೈಜುಲ್ಲಾಖಾನನ ಮುಖಾಂತರ ಇವರಿಗೆ ಭಾಷೆಯನ್ನು ಕೊಡಿಸಿ, ಈ ನಂಜರಾಜಯ್ಯನವರನ್ನು ಪತ್ನೀ ಪುತ್ರರೊಡನೆ ಕರೆತಂದು ಶ್ರೀರಂಗಪಟ್ಟಣದ ಪೇಟೆ ಮನೆಯಲ್ಲಿ ಇರಿಸಿ, ಸುತ್ತಲೂ ಚೌಕಿ ಪಹರೆಯಿಟ್ಟು ಬಂದೋಬಸ್ತು ಮಾಡಿ, ಇವರಿಗೆ ಕೊಟ್ಟದ್ದ ಕೊಯಿನೂರು ಮುಂತಾದ ಲಕ್ಷಸೀಮೆಯನ್ನು ಜಫ್ತಿಮಾಡಿ ಇವರ ಜೀವನಕ್ಕೆ ಮಾತ್ರ ಕಳಲಿ ಸೀಮೆಯನ್ನು ಶಾಲಿವಾಹನ ಶಕ ೧೬೮೯ನೇ (A.D. 1767) ಸರ್ವಜಿತು ಸಂವತ್ಸರದಲ್ಲಿ ಜಹಗೀರಾಗಿ ಕೊಡಿಸಿದನು. ಅನಂತರ ಪಿತೂರಿ ಕಾಗದದ ವರ್ತಮಾನವನ್ನು ಹೇಳಿದ ನಂಜರಾಜಯ್ಯನವರ ಕಡೆಯ ಪೋಬಳಯ್ಯಗಾಳ್ಳೆಯ ಎಂಬವರಿಗೆ ತೋಷಿಖಾನೆ ಮುಂತಾದ ಸ್ಥಳಗಳಲ್ಲಿ ದಫ್ತರಗಳನ್ನು ಕೊಟ್ಟು, ಈ ಪಿತೂರಿ ವಿಷಯಕ್ಕೆ ಸಹಾಯವಾಗಿದ್ದ ಮಲ್ಲು ಅಣ್ಣ ಮುಂತಾದ ಊಳಿಗದವರಿಗೆಲ್ಲಾ ಬೈಮುವಾಡಿ ಅವರಿಂದ ದಂಡಗಳನ್ನು ತೆಗೆದುಕೊಂಡನು.

ಬಳಿಕ ಈ ನವಾಬನು ಕಣಿವೆಯ ಕೆಳಗೆ ಚನ್ನಪಟ್ಟಣದ ಮೇಹಮ್ಮದಲ್ಲೀಖಾನ್, ಇಂಗ್ಲೀಷ್ ಸರದಾರರುಗಳು, ಮೆರಾಟೆಯವರು, ಇನ್ನು ಕೆಲವು ನವಾಬರುಗಳು, ಕೆಲವುಜನ ಪಾಳೆಯಗಾರರು ಇವರ ಸಂಗಡ

ರ್—೧೦ ಆವೃತ್ತಿ ಬಹಳ ಯುದ್ಧಗಳನ್ನು ಮಾಡಿ ಸೀಮೆಗಳನ್ನು ಸಾಧಿಸಿದನು. ಅಲ್ಲದೆ ನವಾಬನು ಕೃಷ್ಣಾನದೀ ಪರ್ಯಂತಕ್ಕೂ ಹೋಗಿ, ಪುನಹೆಯ ಪೇಷ್ವೆ ಮಾಧವರಾಯನ ಸಂಗಡ ಯುದ್ಧಮಾಡಿ, ಅವನ ಸೀಮೆಯನ್ನು ಲೂಟಿಮಾಡಿ, ಕೆಲವು ವೆಸ್ತಾ ಭರಣಾದ್ರವ್ಯಗಳನ್ನು ಸಂಪಾದಿಸಿ, ಬಳ್ಳಾರಿಯನ್ನು ಮುತ್ತಿಗೆ ಹಾಕಿ ಕಟ್ಟಕೊಂಡು ಹಿಂತಿರುಗಿ ಬರುತ್ತಿದ್ದನು. ಆ ಸಮಯದಲ್ಲಿ ಆ ಪೇಷ್ವೆ ಮಾಧವರಾಯನ ಫೌಜು ಕೃಷ್ಣಾನದಿಯನ್ನು ದಾಟಿ ಬಿನ್ನಟ್ಟಿಬರುತಲಿರುವ ವರ್ತಮಾನವನ್ನು ಕೇಳಿ, ಶ್ರೀರಂಗಪಟ್ಟಣವನ್ನು ಸೇರಬೇಕೆಂದು ಬರುತ್ತ ಮಧ್ಯಮಾರ್ಗದಲ್ಲಿ ತುಂಗಭದ್ರಾನದಿಯು ಪೂರ್ಣವಾಗಿ ಪ್ರವಹಿಸುತ್ತಿರಲು ಆ ನದಿಯನ್ನು ದಾಟುವುದಕ್ಕೆ ಸಾಮರ್ಥ್ಯವಿಲ್ಲದೆ ಹಿಂದು ಮುಂದು ತೋರದೆ ಬಹಳ ಭೀತನಾಗಿ ಮೈಸೂರು ಸಂಸ್ಥಾನಕ್ಕೆ ಮುಖ್ಯಾಭಿಮಾನಿಯಾದ ಶ್ರೀಚಾಮುಂಡೇಶ್ವರಿ ಅಮ್ಮನವರಿಗೂ ಮಹಾತ್ಮರಾದ ದೊರೆಗಳವರು ನಂಜರಾಜಬಹದ್ದೆಯರವರಿಗೂ ಬಹಳ ಕಾಣಿಕೆ ಕಪ್ಪಗಳನ್ನು ಕಟ್ಟಿಕೊಂಡು, ತುಂಗಭದ್ರಾನದಿಗೆ ಪೂಜೆಮಾಡಿಸಿ ಪ್ರಾರ್ಥನೆಮಾಡಿಕೊಂಡು, ಇಮೊಂಬಕಷ್ ಎಂಬ ಆನೆಯ ಮೇಲೆ ಹಳದಿಯ ಬನಾತಿನ ಕರಿಯ ಬಬ್ಬರಿ ಅಂಬಾರಿಯಲ್ಲಿ ಕುಳಿತುಕೊಂಡು ಆ ನದಿಯಲ್ಲಿ ತಾನೇ ಮುಂಚಿತವಾಗಿ ಆನೆಯನ್ನು ಇಳಿಸುತಲೇ ನದಿಯುನೀರು ಸ್ವಲ್ಪವಾಯ್ತು. ಫೌಜೆಲ್ಲಾ ಆನೆಯು ಹಿಂದುಗಡೆಯಲ್ಲಿಯೇ ಹೊರಟಿತು. ಹೀಗೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕೃಪಾಕಟಾಕ್ಷದಿಂದಲೂ, ಈ ನವಾಬನಿಂದ ಮುಂದೆ ಬಹಳ ಕಾರ್ಯ ನಡೆಯಬೇಕಾದುದರಿಂದಲೂ, ನದಿಯು ಮಾರ್ಗವನ್ನು ಕೊಟ್ಟ ನವಾಬನು ಕುಳಿತುಕೊಂಡಿದ್ದ ಆನೆಯೂ ಇವನ ದಂಡೂ ಎಲ್ಲರೂ ಆಚೆಯ ದಡಕ್ಕೆ ಸೇರುವವರೆಗೂ ಹಾಗೆಯೇ ಇದ್ದು, ಅವರು ಆ ದಡಕ್ಕೆ ಬಂದ ಬಳಿಕ ಪೂರ್ವದಂತೆ ಪೂರ್ಣ ಪ್ರವಾಹದಿಂದ, ಜನರುಗಳು ದಾಟುವುದಕ್ಕೆ ಅಶಕ್ಯವಾಗುವಂತೆ ಆಯಿತು. ಹಿಂದೆ ಬೆನ್ನಟ್ಟಿಬಂದ ಪೇಷ್ವೆ ಮಾಧವರಾಯನ ದಂಡಿನ ಜನಗಳು ಈ ಮಹಿಮೆಯನ್ನು ನೋಡಿ ಶಾ॥ ಶಕ ೧೬೯೧ನೇ A.D. 1769) ಪರೀಧಾವಿ ಸಂವತ್ಸರದಲ್ಲಿ ಹಿಂತಿರುಗಿ ಹೊರಟುಹೋದರು.

ಸಾಧಿಸಿದ ಗಡಿಗಳು ೧೫ರಲ್ಲಿ ರಣಧೀರ ಕಂಠೀರವನರಸರಾಜಒಡೆಯರವರ ಆಳಿಕೆಗೆ ಸೇರಿದ್ದ ಡೆಂಕಣಿಕೋಟೆ ಬಂದು ಹೊರತು ಉಳಿದ ಗಡಿಗಳು ೧೩ಕ್ಕೆ ವಿವರ.---(೧) ಕರೂರು, (೨) ಕಾಂಗ್ಯ, (೩) ಕೊಳ್ಳೆಗಾಲ, (೪) ಸೂಪೆ ಸಂಸ್ಥಾನ, (೫) ದಾದಿನಾಯಕನಪಾಳ್ಯ, ಎಂಟು ಗುರ್ರಂಕೊಂಡೆಯ ಸೀಮೆ, (೬) ಪಾವೇಲಿ, (೭) ಗುಂಡೂರುರಾಜಕೋಟೆ, (೮) ಮೆಲಿ ಮೊದಲಾ, (೯) ಕೊಟ್ಟಾಲಪೆಡಪಲ್ಲಿ, (೧೦) ಪಿಲೇರಗೋಟೆಕಾಲವೆ, (೧೧) ಕೊಮೊರಕಾಲವೆ, (೧೨) ಮೆದನಪಲ್ಲಿ, (೧೩) ಪೆದ್ದಪಾಳ್ಯಂ ಈ ಗಡಿಗಳನ್ನು ಸಾಧಿಸುವೆ ಕಾಲದಲ್ಲಿ ಈ ಪಾಳಯಗಾರರುಗಳಿಗೆ ಕುಮೆಕಿಯಾಗಿ ಬಂದ ಮೆರಾಟೆಯವರು ಮುಂತಾದವರುಗಳನ್ನು ಹೊಡೆದು, ಬಹಳ ವಸ್ತ್ರಾಭರಣ ದ್ರವ್ಯ ಆನೆ ಕುದುರೆ ಮೊದಲಾದ ಪದಾರ್ಥಗಳನ್ನು ಸ್ವಾಧೀನಮಾಡಿಕೊಂಡು ಬಂದು ಆ ವಿವರಗಳನ್ನು ದೊರೆಗಳವರ ಸನ್ನಿಧಾನಕ್ಕೆ ಬಿನ್ನವಿಸಿ, ದೊರೆಗಳವರಿಂದ ಬಹಳ ಸನ್ಮಾನಗಳನ್ನು ಪಡೆದು ಇರುತ್ತಿದ್ದನು.

ಈಪರಿಯಾಗಿ ನಂಜರಾಜ ಒಡೆಯರವರು ಧರ್ಮದಿಂದ ರಾಜ್ಯಪರಿ ಪಾಲನೆಯನ್ನು ಮಾಡಿಕೊಂಡಿದ್ದು ಶಾ|| ಶಕ ೧೬೯೩ನೆ (A.D.1770) ವಿಕೃತಿಸಂವತ್ಸರದ ಶಾರ್ವಣಬುದ್ಧ ೧೦ ಬುಧವಾರರಾತ್ರಿ ೨೦ ಗಳಿಗೆಯಲ್ಲಿ ಲಕ್ಷ್ಮೀವಿಲಾಸದ ತೊಟ್ಟಿಯಲ್ಲಿ ಸ್ವರ್ಗಸ್ಥರಾದರು. ಇವರಿಗೆ ಉತ್ತರ ಕ್ರಿಯೆಗಳನ್ನು ಗುಡಮೊಚನಹಳ್ಳಿ ಚಾಮಯ್ಯನವರ ಮಗ ಬೆಟ್ಟದಯ್ಯನು ಮಾಡಿದನು.

	ವರ್ಷ	ತಿಂಗಳು	ದಿನ
ಈ ನಂಜರಾಜ ಒಡೆಯರವರ ಜೀವಿತಕಾಲ	೮	೩	೨೫
ಇವರ ಆಳಿಕೆ	೪	೩	೧೨

ಇಪ್ಪತ್ತನೆಯ ಲಳಿಕೆ.

ಬೆಟ್ಟದ ಚಾಮರಾಜಒಡೆಯರವರು :—(A.D. 1770—A.D. 1776)

ಜನನ :—ಶಾ॥ ಶಕ ೧೬೮೦ನೇ (A.D. 1759) ಸ್ವಭಾನು ಸಂವತ್ಸರದ ಭಾದ್ರಪದ ಶುದ್ಧ ಪಂಚಮಿ.

ಪಟ್ಟಾಭಿಷೇಕ :— ಶಾ॥ ಶಕ ೧೬೯೩ನೇ ವಿಕೃತಿನಾಮಸಂವತ್ಸರದ ಶ್ರಾವಣ ಬಹುಳ ೧೦ ಯಲ್ಲಿ ಒಟ್ಟು ಸರ್ವಾಧಿಕಾರವನ್ನು ಮಾಡುತ್ತಿದ್ದ ನವಾಬ ಹೈದರಲ್ಲೀ ಖಾನ ಬಹದ್ದರನು ಮಹಾ ಮಾತೃಶ್ರೀ ಲಕ್ಷ್ಮಮ್ಮಣಿಯವರ ಅಪ್ಪಣೆಯ ಮೇರೆಗೆ ಇವರಿಗೆ ಪಟ್ಟಾಭಿಷೇಕವನ್ನು ನಾಡಿಸಿದನು.

ಇವರಿಗೆ ಪತ್ನೀ ಪುತ್ರರುಗಳು ಇಲ್ಲ.

ಇವರ ಆಳಿಕೆಯಲ್ಲಿ ಅಧಿಕಾರ ಮಾಡಿದವರು :—

ಒಟ್ಟು ಸರ್ವಾಧಿಕಾರವನ್ನು ಮೊತಿದ ನವಾಬ ಹೈದರಲ್ಲೀಖಾನ ಬಹದ್ದರ.

ಪ್ರಧಾನ ವೆಂಕಪ್ಪಯ್ಯ.

ಇವರು ಮೊದಲಾಗಿ ಇನ್ನು ಕೆಲವರು ಅಧಿಕಾರಗಳನ್ನು ಮಾಡಿದರು.

ತ್ರಿಯಂಬಕ ಮಾಮನೊಡನೆ ಯುದ್ಧ :—ಶಾ॥ ಶಕ ೧೬೯೩ನೇ (A.D. 1770) ವಿಕೃತಿ ಸಂವತ್ಸರದ ಜ್ಯೇಷ್ಠ ಮಾಸದಲ್ಲಿ ಪುನಹೆಯಿಂದ ತ್ರಿಯಂಬಕ ಮಾಮನು ೪೦ ಸಾವಿರ ಕುದುರೆ ಫೌಜು ಸಹಿತವಾಗಿ ಶ್ರೀರಂಗಪಟ್ಟಣವನ್ನೂ ಆರ್ಕಾಡು ಸೀಮೆಯನ್ನೂ ಸಾಧಿಸಬೇಕೆಂಬದಾಗಿ ಹೊರಟು, ಮೈಸೂರು ದೊರೆಗಳವರ ಸೀಮೆಯನ್ನು ಲೂಟಿ ಮಾಡುತ್ತ, ಈ ಸೀಮೆಗೆ ಸೇರಿದ ಗುರ್ರುಂಗೊಂಡೆಗೆ ಹೋಗಿ, ಮೋರ್ಚೆಹಾಕಿ, ಮೂರುತಿಂಗಳವರೆಗೂ ಯುದ್ಧಮಾಡಿ, ಅದು ಸ್ವಾಧೀನವಾಗದೆ ಇದ್ದುದರಿಂದ ಮೆಳಗಾಲ ಕಳೆದ ಬಳಿಕ ಅಲ್ಲಿಂದ ಹೊರಟು ಮಾಘ ಫಾಲ್ಗುಣ ಮಾಸದಲ್ಲಿ ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕುವುದಕ್ಕೆ ಹೊರಟನು. ಈ ವರ್ತಮಾನವನ್ನು ನವಾಬನು ಮೊಗಡಿಯಲ್ಲಿದ್ದಾಗ ಕೇಳಿ, ಏಕಾಕಿಯಾಗಿ ಬಾರು ಅಹಷ್ಟಾಂ ಕುದುರೆ ಮುಂತಾವ ಫೌಜುಗಳನ್ನು ವಿಂಗಡಿಸಿ ಕೊಳ್ಳದೆ ಹೊರಟು, ತನ್ನ ದಂಡಿನ ಸಂಗಡ ತೆಗೆದುಕೊಂಡುಹೋದ ಮೆದ್ದು ಗುಂಡು ಹಣ ಕಾಸು ದವಸಧಾನ್ಯ ಮುಂತಾ

ಮುನನ್ನು ಬಂದೋಬಸ್ತು ಮಾಡುವುದಕ್ಕೋಸ್ಕರ ಕೆಲವು ಬಾರಿನ ಜನ ಗಳನ್ನೇಕೋಟೆಯಂತೆ ನಿಲ್ಲಿಸಿ ಬಂದೋಬಸ್ತು ಮಾಡಿ ಮೇಲುಕೋಟೆಗೆ ಸಮೀಪವಾದ ಚಿನೆಕುರಳಿಯ ಬಳಿಯಲ್ಲಿ ಬಹಳಯುದ್ಧ ಮಾಡುತ್ತಿದ್ದನು. ಆ ಸಮಯದಲ್ಲಿ ತ್ರಿಯಂಬಕಮಾಮನಕಿವಿಗೆ ಬಂದು ತುಪಾಕಿಯ ಗುಂಡು ತಗಲಿನುದರಿಂದ ಅವನು ಬಹಳ ಕೋಪಗೊಂಡು ಬಂದು ನವಾಬನ ದಂಡಿನಮೇಲೆ ಬಿದ್ದು ಯುದ್ಧಮಾಡುವಲ್ಲಿ, ನವಾಬನ ಬಾರಿನ ಕೋಟೆಯ ಮಧ್ಯದಲ್ಲಿದ್ದ ಮದ್ದಿನ ಪೆಟ್ಟಿಗೆಗೆ ಬಾಣತಗುಲಿ ಹತ್ತಿಕೊಂಡುದ ರಿಂದ, ನವಾಬನ ದಂಡಿನ ಜನಗಳು ಬಹಳಮಂದಿ ಮೃತರಾಗಿ, ನಿಂತ ಜನಗಳು ನವಾಬನು ಸುಲತಾನನು ಬರಕ್ಕಶ್ರೀನಿವಾಸರಾಯ ಮುಂತಾ ದವರು ಸಹ ಶ್ರೀರಂಗಪಟ್ಟಣಕ್ಕೆ ಬಂದು ಸೇರಿದರು.

ಅನಂತರ ತ್ರಿಯಂಬಕಮಾಮನು ಇವರ ಬೆನ್ನಟ್ಟಿಬಂದು, ಕರಿಯ ಘಟ್ಟದ ಬಳಿಯಲ್ಲಿ ನಿಂತು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿ ಎರಡು ತಿಂಗಳ ಪರ್ಯಂತ ಇರುವ ಸಮಯದಲ್ಲಿ, ನವಾಬನು ಬಹಳ ದಂಡುಗಳನ್ನು ಜಮಾಯಿಸಿಕೊಂಡು ಶುಕ್ರವಾರ ಪೇಟೆಯ ಬಳಿಗೆ ಹೋಗಿ ಬಹಳ ಯುದ್ಧಮಾಡಿ ತ್ರಿಯಂಬಕಮಾಮನ ದಂಡನ್ನು ಕಣಿವೆಯ ಕೆಳಕ್ಕೆ ಓಡಿಸಿಬಿಟ್ಟನು. ಬಳಿಕ ತ್ರಿಯಂಬಕಮಾಮನ ದಂಡಿನ ಜನ ಗಳು ಕಣಿವೆಯ ಕೆಳಗೆ ಮೈಸೂರು ಸಂಸ್ಥಾನದ ಸೀವೆಯ ಗಡಿಗಳನ್ನು ಲೂಟಿ ಮಾಡುತಲಿದ್ದರು. ಈ ವೃತ್ತಮಾನವನ್ನು ನವಾಬನು ಕೇಳಿ ಕೆಲವು ಫೌಜನ್ನು ಕಳುಹಿಸಿ ಬಂದೋಬಸ್ತು ಮಾಡುತ್ತಿರುವ ಸಮಯ ದಲ್ಲಿ, ಅವರ ದಂಡಿಗೆ ದೇಶದಿಂದ ಅಕ್ಕ ತುಪ್ಪ ಗೋಧಿಹಿಟ್ಟು ಸಕ್ಕರೆ ಹುರಳಿ ಕಡಲೆ ಜವೆಳಿ ಕೆಲವು ದ್ರವ್ಯ ಮುಂತಾದ ಪದಾರ್ಥ ಗಳನ್ನು ಈ ಸಾವಿರ ಕುದುರೆ ಮೊದಲಾದ ಫೌಜಿನ ಜನಗಳು ತೆಗಿಸಿ ಕೊಂಡು ಬರುತ್ತಿದಾರೆಂಬ ವೃತ್ತಮಾನವನ್ನು ನವಾಬನು ತಿಳಿದು ಆ ಪದಾರ್ಥಗಳನ್ನು ಲೂಟಿಸಿಕೊಂಡು ಬರುವುದಕ್ಕೆ ತನ್ನಮಗ ಟೀಪೂ ಸುಲ್ತಾನನ ಸಂಗಡ ನಾಲ್ಕಾರು ಸಾವಿರ ಕುದುರೆ ಮುಂತಾದ ಫೌಜುಗ ಳನ್ನೂ ಬರಕ್ಕೆ ಶ್ರೀನಿವಾಸರಾಯನನ್ನೂ ಕಳುಹಿಸಿಕೊಟ್ಟನು. ಅನಂತರ ಟೀಪೂಸುಲ್ತಾನನು ನಗರದ ಬಳಿಗೆ ಹೋಗಿ, ಆ ರಸ್ತೆ ಪದಾರ್ಥಗಳನ್ನು

ತಡೆದು, ಅವರುಗಳ ಸಂಗಡ ಬಹಳ ಯುದ್ಧಮಾಡಿ ಓಡಿಸಿಬಿಟ್ಟು, ಅವರಲ್ಲಿದ್ದ ಸಮಸ್ತ ಪವಾಥ-ಗಳನ್ನೂ ತೆಗೆದುಕೊಂಡು, ಅಲ್ಲಿಯೇ ಅವುಗಳನ್ನು ಕಡ್ತಾಯ ಹಾಕಿ, ಹಣವನ್ನು ತೆಗೆದುಕೊಂಡು ಶ್ರೀರಂಗಪಟ್ಟಣಕ್ಕೆ ಬಂದು ವೆಂಚನೆಯಿಂದ ಈ ವಿವರಗಳನ್ನು ತನ್ನ ತಂದೆಯಾದ ನವಾಬನಿಗೆ ತಿಳಿಸದೆ ಇದ್ದನು. ಈ ವೃತ್ತಾಂತವು ನವಾಬನಿಗೆ ತಿಳಿಯಲು, ತನ್ನ ಮಗನಾದರೂ ಸರಕಾರಕ್ಕೆ ವೆಂಚನೆಯನ್ನು ಮಾಡಿದುದರಿಂದ ಕೋಪಗೊಂಡು ಈ ಸುಲ್ತಾನನ ಕಯ್ಯಲ್ಲಿ ೬ ಲಕ್ಷ ಬಹದ್ದರಿ ವರಹಗಳನ್ನು ದಂಡ ತೆಗೆದುಕೊಂಡನು.

ರಂಗನಾಥ ಸ್ವಾಮಿಯ ರಥಕ್ಕೆ ಬೆಂಕಿಬಿದ್ದದ್ದು—ಶಾ॥ ಶಕ ೧೬೯೩ನೇ (A.D. 1770) ವಿಕೃತಿ ಸಂವತ್ಸರದಲ್ಲಿ ಶ್ರೀರಂಗಪಟ್ಟಣದ ರಂಗನಾಥ ದೇವರು ರಥದ ಮೇಲಿರುವ ಕಾಲದಲ್ಲಿ ರಥವು ಸುಟ್ಟು ಕಸ್ತೂರಿ ರಂಗನೆಂಬ ಉತ್ಸವವಿಗ್ರಹವು ಕರಗಿಹೋಗಲು, ಆಗ ದೊರೆಗಳವರು ಪೂರ್ವದಿಂದಲೂ ಹುಚ್ಚ ರಂಗ ಎಂದು ಹೆಸರಾಗಿದ್ದ ಬೇರೆ ವಿಗ್ರಹವನ್ನು ಉತ್ಸವಕ್ಕೆ ನೇಮಕ ಮಾಡಿದರು.

ಮೈಸೂರುದೊರೆಗಳವರಿಗೂ ಕೊಡಗಿನವರಿಗೂ ದ್ವೇಷ ಬಂದದ್ದು—ಅನಂತರ ತ್ರಿಯಂಬಕ ಮಾಮನು ವಿಕೃತಿ ಸಂವತ್ಸರದ ಜ್ಯೇಷ್ಠ ಮಾಸ ಮೊದಲು ನಂದನ ಸಂ॥ರದ ಜ್ಯೇಷ್ಠ ಮಾಸದವರೆಗೂ ಸೀಮೆಗಳನ್ನು ಬಹಳ ಲೂಟಿಮಾಡಿದುದರಿಂದಲೂ, ದೊರೆಗಳವರ ಸೀಮೆಯಲ್ಲಿದ್ದ ರಸ್ತುಗಳೆಲ್ಲವೂ ಲೂಟಿ ಆದುದರಿಂದಲೂ, ಮಳೆಗಾಲ ಜಿನ್ನಾಗಿ ನಡೆಸದೆ ಇದ್ದುದರಿಂದಲೂ, ಕ್ಷಾಮ ಪ್ರಾಪ್ತವಾಯಿತು. ಆಗ ನವಾಬನು ಕೊಡಗು, ಐಗೂರು ಮೊದಲಾದ ಪಾಳೆಯಗಾರರ ಬಳಿಗೆ ಅಕ್ಕಿ ತುಪ್ಪ ಮುಂತಾದ ರಸ್ತುಗಳನ್ನು ಕುಮಕಿಮಾಡಿಕೊಡಬೇಕೆಂದು ಪ್ರಧಾನ ವೆಂಕಪ್ಪಯ್ಯನನ್ನು ಕಳುಹಿಸಿ ಕೊಟ್ಟದ್ದಕ್ಕೆ ಐಗೂರು ಪಾಳೆಯಗಾರನು ರಸ್ತನ್ನು ಕುಮಕಿ ಮಾಡಿ ಕಳುಹಿಸಿಕೊಟ್ಟನು. ಕೊಡಗಿನ ಪಾಳೆಯಗಾರನು ಕಳುಹಿಸಿಕೊಡದೆ ಇದ್ದುದರಿಂದ, ಕೊಡಗಿನವರಿಗೂ ಮೈಸೂರಿನವರಿಗೂ ದ್ವೇಷ ಪುಟಿಯಿತು.

ತ್ರಿಯಂಬಕಮೂಮನು ಪುನಹೆಗೆ ಹೋದದ್ದು :—ಅನಂತರ ಶಾ॥ ಶಕ ೧೬೯೩ನೇ(A.D. 1771) ಖರಸಂವತ್ಸರದ ವೈಶಾಖ ಮಾಸದಲ್ಲಿ ತ್ರಿಯಂಬಕಮೂನನ ಕಡೆಯ ಮಹಿಮಾಜಿ ಸಿಂಧ್ಯನು ಕೆಲವು ಫೌಜುಗಳನ್ನು ತೆಗೆದುಕೊಂಡು, ತುಮಕೂರಿಗೆ ಬಳಿತವಾದ ಚೇಳೂರಿಗೆ ಮುತ್ತಿಗೆ ಹಾಕಿದನು. ಅಲ್ಲಿ ಅಧಿಕಾರ ಮಾಡುತ್ತಿದ್ದ ವೆಂಕಟಪ್ಪನು ದೇವರಾಯದುರ್ಗದಲ್ಲಿದ್ದ ಚಿಮ್ಮಣ್ಣಾಜಿ ಪಂತನಿಗೆ ಹೇಳಿ ಕಳುಹಿಸಿದನು. ಆ ಚಿಮ್ಮಣ್ಣಾಜಿ ಪಂತನು ಕೆಲವು ಫೌಜನ್ನು ತೆಗೆದುಕೊಂಡು ಬಂದು, ಅಲ್ಲಿ ೧೧ ದಿವಸದವರೆಗೆ ಬಹಳ ಯುದ್ಧಮಾಡಿ, ಆ ಮಹಿಮಾಜಿ ಸಿಂಧ್ಯನು ಕೆಂಪುಬಣ್ಣದ ಕಾವಿ ಝೂಂಡೆಯನ್ನು ಹಾಕಿಸಿಕೊಂಡಿರುವದನ್ನು ನೋಡಿ, ನಮ್ಮ ದೊರೆಗಳವರ ಬಿರುದನ್ನು ನೀನು ಹಾಕಿಸಿಕೊಳ್ಳುವುದಕ್ಕೆ ನಿಮಿತ್ತವೇನೆಂದು ಹೇಳಿ ಕಿತ್ತುಕೊಂಡು, ಅವನನ್ನು ಕೈಸೆರೆ ಹಿಡಿದು, ದೊರೆಗಳವರ ಸನ್ನಿಧಾನಕ್ಕೆ ಕಳುಹಿಸಿಕೊಟ್ಟು ದೇವರಾಯ ದುರ್ಗಕ್ಕೆ ಹೊರಟು ಹೋದನು. ಈ ವರ್ತಮಾನವನ್ನು ಕಣಿವೆಯ ಕೆಳಗಿನತ್ರಿಯಂಬಕಮೂಮನು ಕೇಳಿ, ಏಕಾಕಿಯಾಗಿ ಕೆಲವು ಫೌಜನ್ನು ತೆಗೆದುಕೊಂಡು ದೇವರಾಯದುರ್ಗಕ್ಕೆ ಬಂದು, ಯುದ್ಧಮಾಡಿ, ದುರ್ಗವನ್ನು ಜಯಿಸಿಕೊಂಡು, ಅಲ್ಲಿದ್ದ ರಂಗಪ್ಪ ನಾಯಕ ಚಿಮ್ಮಣ್ಣಾಜಿಪಂತ ವೈಗೈರೆ ಜನಗಳನ್ನು ಹಿಡಿದು ನಂದಿಗಡಕ್ಕೆ ಕಳುಹಿಸಿದನು. ಅನಂತರಶಾ॥ ಶಕ. ೧೬೯೪ನೇ (A.D. 1772) ನಂದನ ಸಂ॥ ರ ಆಷಾಢಮಾಸದಲ್ಲಿ ಶ್ರೀಮಂತ ಮಾಧವರಾಯನು ಪುನಹೆಯಲ್ಲಿ ತೀರಿಹೋದ ವರ್ತಮಾನವು ಕಣಿವೆಯ ಕೆಳಗಿದ್ದ ತ್ರಿಯಂಬಕಮೂಮನ ಬಳಿಗೆ ಬಂದುದರಿಂದ ಅವನು ಕಣಿವೆಯ ಕೆಳಗಿನಿಂದ ಫೌಜು ಸಹಿತ ಪೇಲುಸೀಮೆಯನೊರ್ಗವಾಗಿ ಬಂದು, ಪುನಹೆಗೆ ಅತಿ ಜಾಗ್ರತೆಯಿಂದ ಹೊರಟುಹೋದನು.

ನಾಯಿಮೂರರ ಹಂಗಾಮು —ಶಾ॥ ಶಕ ೧೬೯೬ನೇ (A.D. 1773) ವಿಜಯ ಸಂ॥ದಲ್ಲಿ ಕಲ್ಲಿಕೋಟೆಯ ನಾಯಿಮೂರರು ಬಹಳ ಹಂಗಾಮು ಮಾಡುತಲಿರುವ ಸಮಾಚಾರವನ್ನು ನವಾಬರು ಶ್ರೀರಂಗಪಟ್ಟಣದಲ್ಲಿ ರುವಾಗ ಕೇಳಿ, ಆ ಜನಗಳನ್ನು ಬಂದೋಬಸ್ತು ಮಾಡುವುದಕ್ಕೆ

ಪರಿಕಾರ ರಂಗಪ್ಪನಾಯಕ, ರಾಮೆಗಿರಿ ರಾಮರಾಜಯ್ಯ ಇವರನ್ನು ಕಳುಹಿಸಿ ಕೊಟ್ಟರು. ನಾಮಿಮೋರರು ಇವರಿಬ್ಬರನ್ನೂ ಹೊಡೆದು ಹಾಕಲು, ಆ ವರ್ತಮಾನವನ್ನು ನವಾಬರು ಕೇಳಿ, ಬರಕ್ಕಿ ಶ್ರೀನಿವಾಸರಾಯನ ಸಂಗಡ ಕೆಲವು ಫೌಜನ್ನು ಕಳುಹಿಸಿಕೊಟ್ಟು ಅಲ್ಲಿಯೇ ಇರುವಂತೆ ನೇಮಕ ಮಾಡಿಸಿದರು.

ಕೊಡಗಿನ ಪಾಳೆಯಗಾರನಿಗೆ ಶ್ರೀರಂಗಪಟ್ಟಣಕ್ಕೆ ಕೆಲವು ರಸ್ತನ್ನು ಕುಮಕಿ ಮಾಡಿಕೊಡಬೇಕೆಂಬದಾಗಿ ಪೂರ್ವದಲ್ಲಿ ಹೇಳಿ ಕಳುಹಿಸಿದ್ದಕ್ಕೆ ಅವನು ಉಪೇಕ್ಷೆಮಾಡಿದುದರಿಂದ, ನವಾಬರು ಕೊಡಗಿಗೆ ಹೋಗಿ ಮುತ್ತಿಗೆ ಹಾಕಿ ಮಡಿಕೇರಿ, ಬಾಳನಾಡು ಮುಂತಾದ ಅವನ ಸೀಮೆಗಳನ್ನು ಶಾಲಿ ಶಕ ೧೬೯೬ನೇ (A.D. 1773) ಜಯ ಸಂವತ್ಸರದಲ್ಲಿ ಕಟ್ಟಿಕೊಂಡು ಆ ಸೀಮೆಯನ್ನು ಬಂದೋಬಸ್ತು ಮಾಡಿದರು.

ಮದ್ದಿನ ಮನೆಗೂ ಉಗ್ರಾಣಕ್ಕೂ ಬೆಂಕಿಬಿದ್ದಿದ್ದು.—ಜಯ ಸಂವತ್ಸರದ ವೈಶಾಖಮಾಸದಲ್ಲಿ ಶ್ರೀರಂಗಪಟ್ಟಣದಲ್ಲಿ ಬೆಂಕಿಬಿದ್ದು ಮದ್ದಿನ ಮನೆಯೂ ಕೊಡ್ಡ ಉಗ್ರಾಣವೂ ಹತ್ತಿಕೊಂಡು ಸಕಲ ಪದಾರ್ಥವೂ ಹೋಗಿ, ಬಹಳ ಮನೆಗಳೂ ಜನಗಳೂ ಲಯವಾಗಿ ರಂಗಸ್ವಾಮಿಯ ಗುಡಿಯ ಮುಚ್ಚಳದ ಲ್ಲು ಮುಂತಾದುದು ಬಿದ್ದುಹೋಯಿತೆಂಬ ವರ್ತಮಾನವನ್ನು ಕೊಡಗಿನಲ್ಲಿದ್ದಾಗ ನವಾಬರು ಕೇಳಿ ಬಹಳ ವ್ಯಸನಪಟ್ಟು "ನಾವು ಶ್ರೀರಂಗಪಟ್ಟಣಕ್ಕೆ ತಿಂಗಳೊಳಗಾಗಿ ಬರುತ್ತೇವೆ. ಅಷ್ಟರಲ್ಲಿ ರಂಗಸ್ವಾಮಿ ದೇವಸ್ಥಾನವು ಯಥಾಪ್ರಕಾರ ಇರುವಂತೆ ಕಾಮಗಾರಿಯನ್ನು ಮಾಡಿಸಿರಬೇಕು" ಎಂದು ಬರೆಸಿ ಕಳುಹಿಸಿದರು. ಅದರಂತೆ ಪಟ್ಟಣದ ಅಧಿಕಾರಿಯು ಬಂದು ತಿಂಗಳೊಳಗಾಗಿ ದೇವಸ್ಥಾನವನ್ನು ಪೂರ್ವದ ಹಾಗೆ ಕಟ್ಟಿಸಿದನು. ಅನಂತರ ನವಾಬರು ಕೊಡಗು ಮುಂತಾದ ಸೀಮೆಗಳನ್ನು ಬಂದೋಬಸ್ತು ಮಾಡಿ ಜಯ ಸಂವತ್ಸರದ ಜ್ಯೇಷ್ಠ ಮಾಸದಲ್ಲಿ ಶ್ರೀರಂಗಪಟ್ಟಣಕ್ಕೆ ಬಂದು ಸೇರಿದರು.

ಪುನಹೆಯಲ್ಲಿ ಶ್ರೀಮಂತ ಮಾಧವರಾಯನು ತೀರಿಹೋದನಂತರ ಅವನ ತಮ್ಮ ನಾರಾಯಣರಾಯನು ದವಲತ್ತು ನೂಡುತಲಿವಾಲ್ಲಿ, ಅವನ ಚಿಕ್ಕಪ್ಪ ರಘೋಬನು ನಾರಾಯಣರಾಯನನ್ನು ಹೊಡೆಮ

ಹಾಕಿಸಿ ತಾನೇ ದವಲತ್ತು ಮಾಡುತಲಿರುವ ಸಮಯದಲ್ಲಿ, ಆ ರಘೋಬನು ಶ್ರೀರಂಗಪಟ್ಟಣವನ್ನು ಸಾಧಿಸುವುದಕ್ಕೆ ಕೆಲವು ಫೌಜನ್ನು ಕಳುಹಿಸಿ ಕೊಡುತ್ತಾನೆಂಬ ವರ್ತಮಾನವನ್ನು ನವಾಬರು ತಿಳಿದು ಪ್ರಧಾನ ವೆಂಕಪ್ಪಯ್ಯ ಅಪ್ಪಾಜಿರಾಮ ಮುಂತಾದವರನ್ನು ಸಲ್ಲಾಕ್ಕೆ ಕಳುಹಿಸಿ ಕೊಟ್ಟರು. ಇವರುಗಳು ಹೋಗಿ ರಘೋಬನ ಭೇಟಿಮಾಡಿಕೊಂಡು ನವಾಬರು ಬರೆದ ಪತ್ರವನ್ನು ಕೊಡಲು, ರಘೋಬನು ಅದನ್ನು ನೋಡಿಕೊಂಡು ಕೃಷ್ಣಾ ನದೀ ಪರ್ಯಂತ ಇರತಕ್ಕ ಕೆಲವು ಸೀಮೆಯು ಮೈಸೂರು ಸಂಸ್ಥಾನದ ದೊರೆಗಳವರದೇಸರಿ ಎಂಬುದಾಗಿಯೂ, ತನಗೆ ಕಾರ್ಯಬಿದ್ದಲ್ಲಿ ನವಾಬರು ಫೌಜು ಸಹಿತವಾಗಿ ಕುಮಕಿ ಬರಬೇಕೆಂಬ ದಾಗಿಯೂ ಕಾಗದವನ್ನು ಬರೆದುಕೊಟ್ಟು, ಇಲ್ಲಿಂದ ಹೋಗಿದ್ದ ವೆಂಕಪ್ಪಯ್ಯ ಅಪ್ಪಾಜಿರಾಮ ಮುಂತಾದ ಜನಗಳಿಗೆ ಬಹಳ ಸನ್ಮಾನ ಗಳನ್ನು ಮಾಡಿ ಕಳುಹಿಸಿಕೊಟ್ಟನು. ಬಳಿಕ ಪೂರ್ವದಲ್ಲಿ ದವಲತ್ತು ಮಾಡುತ್ತಿದ್ದ ನಾರಾಯಣರಾಯನ ಹೆಂಡತಿಯು ಗಂಡು ಶಿಶುವನ್ನು ಹೆತ್ತುದರಿಂದ, ಅಲ್ಲಿಯ ಸರದಾರರುಗಳೆಲ್ಲಾ ಒಟ್ಟುಗೂಡಿ, ಆ ಶಿಶುವಿಗೆ ಶ್ರೀಮಂತನ ಅಧಿಕಾರವನ್ನು ನೇಮಕಮಾಡಿ, ಸವಾಯಿ ಮಾಧವರಾಯ ಎಂಬುದಾಗಿ ಹೆಸರಸ್ಥಿಟ್ಟು, ಆ ಮಗುವಿನ ತೊಟ್ಟಿಲಿಗೆ ಮೊಹರನ್ನು ಕಟ್ಟಿ ಮುಂದೆ ಈತನು ದೊಡ್ಡವನಾಗುವವರೆಗೂ ಅಧಿಕಾರಕ್ಕೆ ನಾನಾಫಣೀಸ ನನ್ನು ನೇಮಿಸಿ, ಎಲ್ಲರೂ ಇವನ ರಜಾ ತಲಬಿನಲ್ಲಿ ಇರುವಂತೆ ನಿಬಂಧನ ಮಾಡಿದರು. ಆದುದರಿಂದ ರಘೋಬನು ಬೊಂಬಾಯಿಗೆ ಹೊರಟು ಹೋದನು.

ಪ್ರಧಾನ ವೆಂಕಪ್ಪಯ್ಯನು ರಘೋಬನ ಕಾಗದವನ್ನು ತೆಗೆದು ಕೊಂಡು, ಸೀರ್ಯದಲ್ಲಿದ್ದ ಅವನ ಕಡೆಯ ಭಾವೊಜೀ ಸಿಂಧ್ಯನಿಗೆ ಕೊಡ ಲಾಗಿ, ಅವನು ಆ ಕಾಗದವನ್ನು ಮಂಜೂರು ಮಾಡಲಿಲ್ಲ, ಆ ವರ್ತಮಾ ನವನ್ನು ನವಾಬರು ತಿಳಿದು, ತಮ್ಮ ಮಗ ಟೀಪ್ರೂಸುಲ್ತಾನ ಮುಂತಾ ದವರ ಸಂಗಡ ಕೆಲವು ಫೌಜುಗಳನ್ನು ಸೀರ್ಯಪ್ರಾಂತ್ಯಕ್ಕೆ ಕಳುಹಿಸಿ ಕೊಟ್ಟರು. ಸುಲ್ತಾನನು ಅಲ್ಲಿಗೆ ಹೋಗಿ ೭–೪ ತಿಂಗಳ ಪರ್ಯಂತ ಇವನ ಸಂಗಡ ಯುದ್ಧಮಾಡಿ, ಸೀರ್ಯ ಮೆದ್ದಗಿರಿಗಳನ್ನು ತೆಗೆದುಕೊಂಡು

ಭೂಮೋಜೀಸಿಂಧ್ಯನನ್ನು ಕೈಸೆರೆಹಿಡಿದು ಶ್ರೀರಂಗಪಟ್ಟಣಕ್ಕೆ ಕಳುಹಿಸಿ ಕೊಟ್ಟನು. ಅನಂತರ ನವಾಬರು ಲಕ್ಷ್ಮಣಪಂತ, ಚಿಮ್ಮಣಾಜಿಪಂತ ಇವರನ್ನು ಪುನಹೆಯ ನಾನಾಫಣೆಸನ ಬಳಿಗೆ ಕಳುಹಿಸಿಕೊಟ್ಟು, ಅವರ ಕವಲಿನ ಮೇರೆಗೆ ಪೂರ್ವದಂತ ಕೃಷ್ಣಾ ನದೀ ಪರ್ಯಂತಕ್ಕೂ ಸಾಧಿಸಿ ಕೆಲವು ಸೀಮೆಯನ್ನು ಸ್ವಾಧೀನಮಾಡಿಕೊಂಡು, ಶ್ರೀರಂಗಪಟ್ಟಣದಲ್ಲಿ ಪಪರೆಯಲ್ಲಿದ್ದ ಮಹಿಮೋಜೀಸಿಂಧ್ಯನ ಮಗ ಭೂಮೋಜೀಸಿಂಧ್ಯನನ್ನು ಬಿಟ್ಟು ಪೂರ್ವದಲ್ಲಿ ನಂದಿಗಡಕ್ಕೆ ಕಳುಹಿಸಿಕೊಟ್ಟದ್ದ ರಂಗಪ್ಪನಾಯಕ ಮೊದಲಾದ ಜನಗಳನ್ನು ಕರೆಸಿಕೊಂಡರು.

ಬಳ್ಳಾರಿ ಗುತ್ತಿ ಮುಂತಾದ ಗಡಿಗಳನ್ನು ಸಾಧಿಸಿದ್ದು.—ಶಾಲಿವಾಹನ ಶಕ ೧೬೯೭ನೇ (A.D. 1775) ಮನ್ಮಥ ಸಂವತ್ಸರದಲ್ಲಿ ನವಾಬರು ಬಳ್ಳಾರಿಯನ್ನು ತೆಗೆದು ಕೊಳ್ಳಬೇಕೆಂದು ಛಡೆಫೌಜಿನಿಂದ ರತ್ನಗಿರಿ ಮಾರ್ಗವಾಗಿ ಹೊರಟು ಹೋಗುವಲ್ಲಿ, ಆದವಾನಿ ದಿವಾನ ರಾಜಾಬಹದ್ದರನು ಇವನನ್ನು ಅಡ್ಡ ಕಟ್ಟಲಾಗಿ ಅವನನ್ನು ಹೊಡೆದು ಅವನ ಫೌಜನ್ನು ಲೂಟಾಯಿಸಿ, ಅವನಿಂದ ಖಂಡಣೆಯನ್ನು ನಿಗದಿಮಾಡಿಕೊಂಡು, ಅವನಲ್ಲಿ ಚಾಕರಿ ಯಿದ್ದ ಪರಾಷೀಸ ಮೊಸಾಲಾಲಿ ಎಂಬ ಇಬ್ಬರು ಸರದಾರರು ಸಹಿತ ವಾಗಿ ೬೦೦ ಜನರನ್ನು ತಮ್ಮಲ್ಲಿ ಚಾಕರಿಗೆ ಇಟ್ಟುಕೊಂಡು, ಬಳ್ಳಾರಿಗೆ ಹೋಗಿ ಯುದ್ಧಮಾಡಿದರು. ಆಗ ಬಳ್ಳಾರಿಯ ಪಾಳಯಗಾರನು ಹೆಂಗ ಸರು ಮಕ್ಕಳು ಸಹಿತವಾಗಿ ಗಿತದಲ್ಲಿ ಬಿದ್ದು ಓಡಿ ಹೋದುದರಿಂದ ನವಾಬರು ಬಳ್ಳಾರಿಯಲ್ಲಿ ಠಾಣೆಯಾಕಿಕೊಂಡು ಬಳ್ಳಾರಿಗೆ ಸೇರಿದ ಗಡಿ ಯನ್ನು ಸ್ವಾಧೀನಮಾಡಿಕೊಂಡರು. ಅನಂತರ ಮನ್ಮಥ ಸಂವತ್ಸರದ ಪುಷ್ಯಮಾಸದಲ್ಲಿ ಗುತ್ತಿಗೆ ಠಾಣ್ಯವನ್ನು ಹಾಕಿ, ನಾಲ್ಕು ದಿಕ್ಕಿನಲ್ಲಿಯೂ ಬಂದೋಬಸ್ತು ಮಾಡುತಲಿರುವ ಸಮಯದಲ್ಲಿ, ಮುರಾರಿರಾಯನು ಸಲ್ಲಾಪ ಮಾತನಾಡುವುದಕ್ಕಾಗಿ ಒಬ್ಬ ಮುಸಲ್ಮಾನನನ್ನು ಕಳುಹಿಸಿ ಕೊಡಲು, ನವಾಬರು ಅಲ್ಲಯ ಮರ್ಮವನ್ನು ಜನಗಳ ಮುಖದಿಂದ ಕೇಳ್ದಾಗಿ ತಿಳಿದು, ಮುರಾರಿರಾಯನ ಸಂಗಡ ಬಹಳ ಯುದ್ಧ ಮಾಡಿ, ಅವನನ್ನು ಕೈಸೆರೆ ಹಿಡಿದು ಶ್ರೀರಂಗಪಟ್ಟಣಕ್ಕೆ ಕಳುಹಿಸಿಕೊಟ್ಟು, ಅವನಲ್ಲಿದ್ದ ಆನೆ ಕುದುರೆ ದ್ರವ್ಯ ವಸ್ತ್ರಾಭರಣ ಮುಂತಾದ ಪದಾರ್ಥ

ಗಳನ್ನು ವಶಮಾಡಿಕೊಂಡು, ಗುತ್ತಿಯಲ್ಲಿದ್ದ ಸಾಹುಕಾರರು ಪೂರ್ಣಗಿರಿ, ಬಲಗಿರಿ, ತುಳಜಾಗಿರಿ, ಹರಿಪಾಗಿರಿ ಮುಂತಾದ ಗೋಸಾವಿಗಳಿಂದ ೨ ಲಕ್ಷ ವರಹಗಳನ್ನೂ, ಇನ್ನೂ ಕೆಲವು ಜನಗಳ ಕಡೆಯಿಂದ ಮುಗುವೆಳೆಯನ್ನೂ ತೆಗೆದುಕೊಂಡು, ಬಳ್ಳಾರಿಯಲ್ಲಿದ್ದ ಸೂಳೆಯರ ನ್ನೆಲ್ಲಾ ಪಟ್ಟಣಕ್ಕೆ ಕಳುಹಿಸಿಕೊಟ್ಟು, ಬಳ್ಳಾರಿ ಸೀಮೆಗೂ ಗುತ್ತಿ ಸೀಮೆಗೂ ಅಧಿಕಾರಕ್ಕಾಗಿ ಬಾಳಾಜಿರಾಯ ಮುಂತಾದ ಬುದ್ಧಿವಂತ ರಾದ ಜನಗಳನ್ನು ನೇಮಕಮಾಡಿ, ಶಾ॥ ಶಕ ೧೮೯೯ನೇ (A. D. 1776) ದುರ್ಮುಖಿ ಸಂವತ್ಸರದ ವೈಶಾಖ ಜ್ಯೇಷ್ಠ ಮಾಸಗಳಲ್ಲಿ ಶ್ರೀರಂಗಪಟ್ಟಣಕ್ಕೆ ಬರುತ್ತ ಮಾರ್ಗದಲ್ಲಿ ಶ್ರವಣೂರು, ಡಂಬಳ ಮುಂತಾದ ಪಾಳೆಯಗಾರ ರುಗಳಿಂದ ಖಂಡಣೆಯನ್ನು ನಿಗದಿ ಮಾಡಿಕೊಂಡು, ಚಿತ್ರಕಲ್ಲು ಪೆದಗೆರಿನಾಯಕನ ಸಂಗಡ ಕೆಲವು ಫೌಜನ್ನು ಕಳುಹಿಸಿಕೊಟ್ಟು, ಪೂರ್ವದಲ್ಲಿ ಸಾಧಿಸಿದ ಮೆಡಕಸೀರ್ಯ ಪೆನಗೊಂಡೆ ಮುಂತಾದ ಕಡೆಯ ತುಂಟಾಟಮಾಡುವ ಪಾಳೆಯಗಾರರುಗಳನ್ನು ನಿಗ್ರಹಿಸಿ ಬಂದೋಬಸ್ತು ಮಾಡಿಕೊಂಡು ಬರುವೆಂತೆ ನೇಮಿಸಿ ಅದೇ ಸಂವತ್ಸರದ ಆಷಾಢಮಾಸ ದಲ್ಲಿ ಶ್ರೀರಂಗಪಟ್ಟಣಕ್ಕೆ ಬಂದು ಸೇರಿದರು.

ದೊರೆಗಳವರ ಅಪ್ಪಣೆಯು ಮೇರೆಗೆ ನವಾಬರು ಮೇಲೆ ಹೇಳಿದ ಪಾಳೆಯಗಾರರುಗಳನ್ನು ಜಯಿಸಿ ಸಾಧಿಸಿದಗಡಿಗಳ ವಿವರ:—

ಗುತ್ತಿ ಮುರಾರಿರಾಯನ ಸೀಮೆಯ ಗಡಿಗಳು.—(೧) ಹವೇಲಿ, (೨) ಯಾಡಕಿ, (೩) ಶಿಂಗನಮೆಲಾ, (೪) ತಾಡಮೆರಿ, (೫) ಮೆದ್ದಿಕೆರೆ, (೬) ಪೆರವಲ್ಲಿ, (೭) ಹಂಪೆ, (೮) ಪೊವಟೂರು ರಾಮೇಶ್ವರ, (೯) ನಿಟ್ಟೂರು ಭೋಗಸಂದ್ರ, (೧೦) ಚನ್ನಂಪಲ್ಲಿ, (೧೧) ಉಯ್ಯಾಲವಾಡಸಂಗಾ ಪಟ್ಟಣ, (೧೨) ಪಂಡೆ ಅನಂತಪುರ, (೧೩) ಹಿರಿಹಾಳು, (೧೪) ಯಲ್ಲಾ ನೂರು, (೧೫) ವಜ್ರಕರೂರು, (೧೬) ಕೊತ್ತ ಚರುಬುಕ್ಕ ಪಟ್ಟಣ, (೧೭) ವೇಮುಲಪಾಡು, (೧೮) ಮುನಿಮಡಗು, (೧೯) ಯರದಿಮ್ಮನಾಯನಚರು, (೨೦) ಜನಗಾನಪಲ್ಲಿ, (೨೧) ಪಾಮಿಡಿ, (೨೨) ಪ್ಯಾಪಲಿ, (೨೩) ಕೊನಕೊಂಡ್ಲಾ, (೨೪) ಸೊಂಡೂರು, (೨೫) ತಾಡಪತ್ರಿ, (೨೬) ನಡಮಿಾದೊಡ್ಡಿ, (೨೭) ಕಲ್ಯಾಣದುರ್ಗ.

ಬಳ್ಳಾರಿ ಸೀಮೆಯ ಗಡಿಗಳು :—(೧) ಹವೇಲಿ, (೨) ಕಾವಳಗಿ, (೩) ಕಡತನಿ, (೪) ಗಡಿಹೊತ್ತೂರು, (೫) ದಮ್ಮೂರು, (೬) ಕುರುಗೋಡು, (೭) ಪುರವೆಕೊಂಡೆ, (೮) ಗಾದಿಗನೂರು, (೯) ಯಿಚಸನಕಲ್ಲು, (೧೦) ತೆಕ್ಕಲ್ಲುಕೋಟೆ.

ಮರಾಟಿಯವರಿಂದ ಸಾಧಿಸಿದ ಗಡಿಗಳು :—(೧) ಧಾರವಾಡ, (೨) ಬಾದಲಿ, (೩) ಲಾಲಗಡಿ, (೪) ಹೊಸಹುಬ್ಬಳ್ಳಿ, (೫) ಗಜೇಂದ್ರಗಡ, (೬) ಕುಸುವೆಗಲ್ಲು, (೭) ಬಹದರಬಂಡೆ, (೮) ಬಂಕಾಪುರ, (೯) ತಡಸ, (೧೦) ಕೊಪ್ಪಳ, (೧೧) ನವಲುಗುಂದ, (೧೨) ಹಳಹುಬ್ಬಳ್ಳಿ, (೧೩) ಗದಗು, (೧೪) ಕಲ್ಲುಘಟಿಕಿ.

ಕೊಡಗಿನವರಿಂದ ಸಾಧಿಸಿದ ಗಡಿಗಳು :—(೧) ಕೊಡಗು, (೨) ಮೆಡಿಕೇರಿ, (೩) ಬಾಳನಾಡು, ಮೊದಲಾದವುಗಳು.

ನ್ಯಾಯ :—ಈ ಪರಿಯಾಗಿ ಬೆಟ್ಟದ ಚಾಮರಾಜಒಡೆಯರವರು ಧರ್ಮದಿಂದ ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಮಾಡಿಸುತ್ತ, ರಾಷ್ಟ್ರ ಸಂರಕ್ಷಣೆಯನ್ನು ಮಾಡಿಕೊಂಡಿದ್ದು, ಶಾಲಿವಾಹನ ಶಕ ೧೬೯೯ನೇ (A.D. 1776) ದುರ್ಮುಖಿ ಸಂವತ್ಸರದ ನಿಜಭಾದ್ರಪದ ಶುದ್ಧ ತದಿಗೆ ಸೋಮವಾರ ರಾತ್ರಿ ೧೧ ಗಳಿಗೆಯಲ್ಲಿ ಕಾಲಧರ್ಮವನ್ನು ಹೊಂದಿದರು. ಇವರಿಗೆ ಉತ್ತರ ಕ್ರಿಯೆಗಳನ್ನು ಗುಡಮೋಚನಹಳ್ಳಿ ಚಾಮಯ್ಯನವರ ಮಗ ಬೆಟ್ಟದ ಯ್ಯನವರು ಮಾಡಿದರು.

	ವರ್ಷ	ತಿಂಗಳು	ದಿನ
ಈ ಬೆಟ್ಟದ ಚಾಮರಾಜಒಡೆಯರವರ ಜೀವಿತ ಕಾಲ	೧೩	೦	೨೮
ಇವರ ಆಳಿಕೆ	೬	೧	೮

೧೧ನೆಯ ಅಧ್ಯಾಯ.

ಇಪ್ಪತ್ತೊಂದನೆಯ ಆಳಿಕೆ.

ವಿರಾಸಾ ಚಾಮರಾಜಒಡೆಯರವರು (A.D. 1776—A.D. 1796).

ಜನನ.—ಶಾ॥ ಶಕ ೧೬೯೬ನೇ (A.D. 1774) ವಿಜಯ ಸಂವತ್ಸರದ ಫಾಲ್ಗುಣ ಬಹುಳ ೩ ಸೋಮವಾರ ಹಸ್ತ ನಕ್ಷತ್ರ ೫ನೇ ಪಾದ ರಾತ್ರಿ ೧೫ ಗಳಿಗೆಗೆ ಸಲ್ಲುವ ವೃಶ್ಚಿಕ ಲಗ್ನದಲ್ಲಿ.

ಪಟ್ಟಾಭಿಷೇಕ.—ಶಾ॥ ಶಕ ೧೬೯೮ನೇ (A.D. 1776) ದುರ್ಮುಖಿ ಸಂವತ್ಸರದ ನಿಜ ಭಾದ್ರಪದ ಶುದ್ಧ ೦೫.

ಪತ್ನಿಯರು.—ಶಾ॥ ಶಕ ೧೭೦೭ನೇ (A.D. 1785) ಕ್ರೋಧಿ ಸಂವತ್ಸರದ ಪೌಷ ಬಹುಳ ೫ ಸ್ಥಿರವಾರ ಹಗಲು ೬ ಗಳಿಗೆಗೆ ಸಲ್ಲುವ ಮೀನಲಗ್ನದಲ್ಲಿ ವಿವಾಹವಾದವರು :—(೧) ಸವುಖಿದ ನಂಜರಾಜಯ್ಯನವರ ಕುಮಾರತಿ ಕಂಪನಂಜಮ್ಮಣಿಯವರು, (೨) ಅಮಚವಾಡಿ ನಂಜರಾಜಯ್ಯನವರ ಕುಮಾರತಿ ಕಂಪದೇವಾಜಮ್ಮಣಿಯವರು. ಈ ಕೆಂಪದೇವಾಜಮ್ಮಣಿಯವರು ಒಬ್ಬ ಪುತ್ರರನ್ನು ಪಡೆದು ಆ ಪುತ್ರರು ಸಹಿತವಾಗಿ ಸ್ವರ್ಗವನ್ನು ಹೊಂದಿದ ಬಳಿಕ ದೊರೆಗಳವರು ಚಿಂತಾಕ್ರಾಂತರಾಗಿರುವ ಸಮಯದಲ್ಲಿ, ತಮ್ಮಲ್ಲಿ ಸರ್ವಾಧಿಕಾರವನ್ನು ನಡಾಯಿಸುತ್ತಿದ್ದ ಟೀಪೂ ಸುಲ್ತಾನ ಮುಂತಾದ ಅಧಿಕಾರಿ ಜನಗಳು ಪ್ರಕೃತೋಚಿತವಾದ ಸಮಾಧಾನೋಕ್ತಿಯನ್ನು ವಿಜ್ಞಾಪನೆಮಾಡಿ ಪಂಚಕಲ್ಯಾಣವನ್ನು ಮಾಡಿಕೊಂಡು ಸಂತೋಷವಾಗಿರಬೇಕೆಂಬುದಾಗಿ ಬಿನ್ನವಿಸಿದರು. ಆ ವಿವರವನ್ನು ಚಿತ್ತಕ್ಕೆ ತಂದು ಶಾ॥ ಶಕ ೧೭೧೪ನೇ (A.D. 1792) ಪರಿಧಾವಿ ಸಂವತ್ಸರದ ಜ್ಯೇಷ್ಠ ಬಹುಳ ೪ ಭೃಗು ವಾರ ಹಗಲು ೮ ಗಳಿಗೆಗೆ ಸಲ್ಲುವ ಕರ್ಕಾಟಕ ಲಗ್ನದಲ್ಲಿ ವಿವಾಹಮಾಡಿ ಕೊಂಡ ಪತ್ನಿಯರು :—(೧) ಚಕೆವುರದ ಚೆನ್ನರಾಜಯ್ಯನವರ ಕುಮಾರತಿ ಚಿಕ್ಕುವಾಜಮ್ಮಣಿಯವರು, (೨) ಬೀಚನಹಳ್ಳಿ ಮಲ್ಲಿರಾಜಯ್ಯನವರ ಪುತ್ರಿ ದೇವೀರಮ್ಮಣಿಯವರು, (೩) ಹುಲ್ಲಹಳ್ಳಿ ವೀರರಾಜಯ್ಯನವರ ಮಕ್ಕಳು

ನಂಜಮ್ಮಣ್ಣಿಯವರು, (೬) ತೊಂಡವಾಡಿ ಕಾಂತರಾಜಯ್ಯನವರ ಕುಮಾರತಿ ಲಕ್ಷ್ಮಮ್ಮಣ್ಣಿಯವರು, (೭) ಮೂಗೂರು ನಂಜರಾಜಯ್ಯನವರ ಕುಮಾರತಿ ದೇವಾಜಮ್ಮಣ್ಣಿಯವರು.

ಸಂತಾನ.—ಇವರ ಪುತ್ರರು ನಾಲ್ವರಲ್ಲಿ (೧) ಕೆಂಪದೇವಾಜಮ್ಮಣ್ಣಿಯವರ ಪುತ್ರರು ತತ್ಕಾಲದಲ್ಲಿಯೇ ತೀರಿಹೋದರು, (೨) ಚೆಲುವಾಜಮ್ಮಣ್ಣಿಯವರ ಪುತ್ರರು ಮೂರು ದಿವಸವಿದ್ದರು, (೩) ಕೂನ್ನಾಜಮ್ಮಣ್ಣಿಯವರ ಪುತ್ರರು ತತ್ಕಾಲದಲ್ಲಿಯೇ ತೀರಿಹೋದರು, (೪)ವಸುದೇವನ ಅಂಶದಲ್ಲಿ ಹುಟ್ಟಿದ ಈ ಚಾಮರಾಜಒಡೆಯರವರಿಗೆ ದೇವಕೀದೇವಿಯ ಅಂಶದಿಂದ ಧರ್ಮಪತ್ನಿಯಾದ ಕೆಂಪನಂಜಮ್ಮಣ್ಣಿಯವರ ಗರ್ಭಸುಧಾಂಬುಧಿಯಲ್ಲಿ ಶ್ರೀಕೃಷ್ಣನ ಅಂಶದಿಂದ ಆಳಿದ ಮಹಾಸ್ವಾಮಿಯವರಾದ ನಂಜರಾಜಾಭಿಧ ಮುಮ್ಮಣಿ ಕೃಷ್ಣರಾಜ ಒಡೆಯರವರು ಜನಿಸಿದರು.

ಇವರ ಪಟ್ಟಾಭಿಷೇಕಕ್ಕೆ ಮೊದಲು ನಡೆದ ವೃತ್ತಾಂತ.—ಇಮ್ಮಡಿ ಕೃಷ್ಣರಾಜಒಡೆಯರವರ ಕುಟುಂಬ ಲಕ್ಷ್ಮಮ್ಮಣ್ಣಿಯವರು, ತಮ್ಮ ಸವತ್ತಿಪುತ್ರರಾದ ನಂಜರಾಜಒಡೆಯರವರೂ ಚಿಟ್ಟಿಚಾಮರಾಜಒಡೆಯರವರೂ ಸಹ ಪಟ್ಟವನ್ನಾಳಿ ತೀರಿಹೋದನಂತರ, ತಮಗೆ ಸಂತಾನವಿಲ್ಲದೆ, ದೊರೆತನಕ್ಕೂ ಯಾರೂ ಇಲ್ಲದಿದ್ದುದರಿಂದ ತಮ್ಮ ತಂಗಿಯ ಗಂಡನಾದ ಕಳಲೆ ಮನೆತನದ ಭಾರದ್ವಾಜ ಗೋತ್ರದ ಮನೂರು ಕಾಂತರಾಜಯ್ಯನ ಪುತ್ರ ನರಸರಾಜಯ್ಯನನ್ನಾಗಲಿ, ತಮ್ಮ ಸವತಿಯ ಮಗಳ ಮಗ ತಗಡೂರು ಮನೆತನದ ಹರಿತಸಗೋತ್ರದಲ್ಲಿ ಪುಟ್ಟಿದ ಸಿದ್ದರಾಜಯ್ಯನನ್ನಾಗಲಿ ಸ್ವೀಕಾರ ಮಾಡಿಕೊಂಡು ಪಟ್ಟವನ್ನು ಕಟ್ಟಬೇಕೆಂದು ಆಲೋಚನೆ ಮಾಡಿರುವುದಾಗಿ ತಮ್ಮ ಯಜಮಾನರಿಂದ ಒಟ್ಟು ಸರ್ವಾಧಿಕಾರವನ್ನು ಪಡೆದು ಎಲ್ಲಾ ಆಪ್ತತಗಳನ್ನೂ ನೋಡಿಕೊಂಡಿರುವ ನವಾಬಹೈದರಲ್ಲೀಖಾನ ಬಹದ್ದರನ ಬಳಿಗೆ ಪಲ್ಲಕ್ಕಿಳಿಸಿದರು. ಆಗ ನವಾಬರು ಅಮ್ಮನವರ ಮನೋಭಿಪ್ರಾಯವನ್ನು ತಿಳಿದು, ಶೀಘ್ರವಾಗಿ ಅರಮನೆಗೆ ಬಂದು, ಸಂಪ್ರದಾಯಾನುಸಾರವಾಗಿ ಅಮ್ಮನವರ ಪಾದಕ್ಕೆ ಅಡ್ಡಬಿದ್ದು ಬಿನ್ನಪಿಸಿದುದೇನೆಂದರೆ; "ಸರ್ವೋತ್ತಮವಾದ ತಮ್ಮ ವಂಶವು ಯೋಗ್ಯರಾದ ಪುತ್ರರಿಂದ ಪ್ರಕಾಶವನ್ನು ಪಡೆಯುಬೇಕೇ ಹೊರತು ಬೇರೆಯಿಲ್ಲ. ತಮ್ಮ ವಂಶವರು ಆಸೇತು ಹಿಮಾ

ಚಲಪರ್ಯಂತ ಪ್ರಸಿದ್ಧರಾಗಿದ್ದುಂ ಮಹಾಪರಾಕ್ರಮಶಾಲಿಗಳಾಗಿಯೂ ಮಹಾದಾತ್ಮಗಳಾಗಿಯೂ ಧರ್ಮದಲ್ಲಿಯೇ ಆಸಕ್ತರಾಗಿಯೂ ಇದ್ದುದಲ್ಲದೆ, ಸೌಂದರ್ಯಾದಿಗುಣಗಳಿಂದಲೂ ಯುಕ್ತರಾಗಿ ಇದ್ದರಾದಕಾರಣ ತಾವು ಅವೇ ಸದ್ಗುಣವುಳ್ಳ ಪುತ್ರರನ್ನು ಪರೀಕ್ಷಿಸಿ ಸ್ವೀಕಾರಮಾಡಿಕೊಂಡು ಪಟ್ಟವನ್ನು ಕಟ್ಟಬೇಕು. ಈಗ ತಾವು ಸ್ವೀಕಾರಮಾಡಿಕೊಳ್ಳಬೇಕೆಂದು ನಿಶ್ಚಯಮಾಡಿಕೊಂಡಿರುವ ಪುತ್ರರುಗಳಲ್ಲಿ ಒಬ್ಬರು ವಕ್ರವಾದ ಕುಂಟಿಕಾಲುಳ್ಳವರಾಗಿಯೂ ಇರುವರು. ಮತ್ತೊಬ್ಬರು ಮಂಕಾದ ಬುದ್ಧಿಯುಳ್ಳವರಾಗಿಯೂ ಶ್ವೇತಕುಷ್ಠರೋಗವುಳ್ಳವರಾಗಿಯೂ ಇರುವರು. ಆದಕಾರಣ ಇವರಿಬ್ಬರನ್ನು ಬಿಟ್ಟು, ಇವರಿಗಿಂತ ಸೌಂದರ್ಯಾದ್ಯನೇಕ ಗುಣಗಳುಳ್ಳ ಬಾಲಕರುಗಳನ್ನು ಕರೆಸಿ, ಅವರುಗಳ ಪರೀಕ್ಷೆಯನ್ನು ಮಾಡುವ ಕಾಲದಲ್ಲಿ, ಈ ಸಂಸ್ಥಾನಕ್ಕೆ ಮುಖ್ಯಾಭಿಮಾನಿಯಾದ ಶ್ರೀಚಾಮುಂಡೇಶ್ವರಿ ಅಮ್ಮನವರು ಪೂರ್ವಪುಣ್ಯಪ್ರಭಾವದಿಂದ ಯಾರಲ್ಲಿ ಕಟಾಕ್ಷವನ್ನಿಡುವರೋ ಅವರೇ ರಾಜಪದವಿಗೆ ಯೋಗ್ಯರಾಗಿರುವರು. ಅವರ ಬುದ್ಧಿಯನ್ನು ಪರೀಕ್ಷೆಮಾಡಿ ಅವರನ್ನು ಸ್ವೀಕಾರ ಮಾಡಿಕೊಂಡು ಪಟ್ಟವನ್ನು ಕಟ್ಟಬೇಕು." ಎಂದು ವಿನ್ನವಿಸಿ ಅಪ್ಪಣೆಯನ್ನು ತೆಗೆದುಕೊಂಡು ಬಂದು, ಶ್ರೀರಂಗಪಟ್ಟಣದಲ್ಲಿಯೂ ಗ್ರಾಮಾಂತರಗಳಲ್ಲಿಯೂ ದೊರೆಗಳವರಿಗೆ ಬಂಧುಗಳಾಗಿರುವ ಅರಸುಗಳ ಚಿಕ್ಕ ಚಿಕ್ಕ ಮಕ್ಕಳನ್ನು ಕರೆತರಿಸಿ, ತನ್ನ ಮನೆಯಲ್ಲಿ ಸಭೆಯನ್ನು ಮಾಡಿಸಿ, ತನ್ನ ಸಾಮೋಜಿಕರುಗಳ ಎದುರಿಗೆ ಆ ಬಾಲಕರುಗಳನ್ನು ಕರೆಸಿ, ಆ ಸಭಾಸ್ಥಾನದಲ್ಲಿ ಬಂದು ಕಡೆಯಲ್ಲಿ ಅವರುಗಳಿಗೆ ಉಪಯೋಗವಾದ ಖರ್ಜೂರ ದ್ರಾಕ್ಷಿ ಸಕ್ಕರೆ ನಾನಾವಿಧಫಲ ಮುಂತಾದ ಭಕ್ಷ್ಯಪದಾರ್ಥಗಳನ್ನೂ, ಮತ್ತೊಂದು ಕಡೆಯಲ್ಲಿ ವಿಚಿತ್ರವಾದ ನಾನಾವಿಧದ ವಸ್ತ್ರ ಆಭರಣ ನಾಣ್ಯಗಳನ್ನೂ, ಇನ್ನೊಂದು ಕಡೆಯಲ್ಲಿ ಆಟದ ಪದಾರ್ಥಗಳನ್ನೂ ಬೇರೊಂದು ಕಡೆಯಲ್ಲಿ ಬಂದು ಕನ್ನಡಿಯನ್ನೂ ಕತ್ತಾರಿಯನ್ನೂ ಸಹ ಇರಿಸಿ, ಆ ಬಾಲಕರುಗಳನ್ನು ಕುರಿತು "ಭಯಪಡದೆ ಧೈರ್ಯದಿಂದ ಇವುಗಳಲ್ಲಿ ನಿಮಗೆ ಬೇಕಾದ ಪದಾರ್ಥಗಳನ್ನು ತೆಗೆದುಕೊಳ್ಳಿರಿ" ಎಂಬದಾಗಿ ಹೇಳಲು ಆ ಬಾಲಕರು ಅವರವರ ಪೂರ್ವಪುಣ್ಯ

ಕ್ಕನುಸಾರವಾಗಿ ತಮತಮಗೆ ಬೇಕಾದ ಪದಾರ್ಥಗಳನ್ನು ತೆಗೆದು ಕೊಳ್ಳುತ್ತಿದ್ದರು. ಆ ಸಮಯದಲ್ಲಿ ಅರಿಕುತಾರದ ದೇವರಾಜೇಅರಸು ನವರ ಕುಟುಂಬ ಹೊನ್ನಾಜಮ್ಮಣಿಯವರ ಗರ್ಭಸುಧಾಂಬುಧಿಯಲ್ಲಿ ಹುಟ್ಟಿದಸೌಂದರ್ಯಶಾಲಿಗಳಾದ ಮನೋಹರವಾದ ಮುಗುಳುನಗೆಯುಳ್ಳ ಚಾಮರಾಜರೆಂಬ ೩ ವರುಷದ ಬಾಲಕರು, ಆ ಸಭಾಜನರುಗಳೆಲ್ಲರೂ ಸಂತೋಷದಿಂದ ನೋಡುತಲಿರಲು, ಅಲ್ಲಿ ಇರಿಸಿದ್ದ ಕತಾರಿಯನ್ನೂ ಕನ್ನಡಿಯನ್ನೂ ಸಹ ತೆಗೆದುಕೊಂಡರು. ಆಗ ನವಾಬರು ಇವರನ್ನು ನೋಡಿ ಬಹಳ ಸಂತೋಷಪಟ್ಟು, ಇವರೇ ನಮಗೆ ದೊರೆಯಾಗುವರೆಂದು ಅಲ್ಲಿದ್ದ ಜನರ ಸಂಗಡ ಹೇಳಿ, ಎಲ್ಲರಿಗೂ ನಿಂತುಕೊಳ್ಳುವಂತೆ ತಾಕೀತಿಮಾಡಿ, ಮಹಾರಾಜಪದವಿಗೆ ಯೋಗ್ಯವಾದ ಹಾಸಿಗೆಯನ್ನು ತರಿಸಿ, ಇವರನ್ನು ಅಲ್ಲಿ ಮುಹೂರ್ತ ಮಾಡಿಸಿ, ಸಾಮಾಜಿಕರುಗಳಿಂದ ಅವರವರ ಮರ್ಯಾದಾನುಗುಣವಾಗಿ ಮುಜರೆಗಳನ್ನು ಮಾಡಿಸಿ, ತಾವೂ ಮಾಡಿ, ಹೂವಿನಹಾರ ವೀಳಯ ವಸ್ತ್ರ ಆಭರಣಗಳನ್ನು ಒಪ್ಪಿಸಿ, ಈ ವಿವರಗಳನ್ನೆಲ್ಲಾ ಮಹಾಮಾತೃಶ್ರೀ ಲಕ್ಷ್ಮಮ್ಮಣಿಯವರಿಗೆ ಬಿನ್ನವಿಸುವಂತೆ ಹೇಳಿ, ರಾಜಮರ್ಯಾದೆಯಿಂದ ಅರಮನೆಗೆ ಕಳುಹಿಸಿಕೊಡಲು, ಇದನ್ನು ಕೇಳಿದ ಲಕ್ಷ್ಮಮ್ಮಣಿಯವರು ತಮ್ಮ ಮನಸ್ಸಿನಲ್ಲಿ ಇದ್ದಂತೆ ನಡೆಯಲಿಲ್ಲವೆಂಬ ಅಸಹನೆಯಿಂದಲೂ ತಮ್ಮ ಯತ್ನವೇನೂ ನಡೆಯದೆ ಇದ್ದುದರಿಂದಲೂ, ಇವರಿಗೆ ಪಟ್ಟವಾಗುವುದು ತಮಗೆ ಸಮ್ಮತವಲ್ಲದಿದ್ದರೂ ಸಮ್ಮತಿಪಟ್ಟವರಂತೆ ನಟನೆಮಾಡಿ, ಹೂಗೆಯೇ ಆಗಲಿ ಎಂದು ಅಪ್ಪಣೆಯನ್ನು ಕೊಟ್ಟು ಕಳುಹಿಸಿದರು. ಬಳಿಕ ನವಾಬರು ಶಾ॥ ಶಕ ೧೮೯೬ನೇ (A.D. 1774) ವಿಜಯ ಸಂವತ್ಸರದ ಫಾಲ್ಗುಣ ಬಹುಳ ೦ ಸೋಮವಾರ ಪಸ್ತನಕ್ಷತ್ರ ೩ನೇ ಪಾದ ರಾತ್ರಿ ೧೪ ಗಳಿಗೆಯ ವೃಶ್ಚಿಕಲಗ್ನದಲ್ಲಿ ಜನಿಸಿದ ಈ ಪುತ್ರರನ್ನು ಶಾ॥ ಶಕ ೧೮೯೯ನೇ (A. D. 1776)ದುರ್ಮುಖಿ ಸಂವತ್ಸರದ ನಿಜ ಭಾದ್ರಪದ ಶುದ್ಧ ೧೩ಯಲ್ಲಿ ಈ ಲಕ್ಷ್ಮಮ್ಮಣಿಯವರಿಗೆ ಬಲಾತ್ಕಾರದಿಂದ ಸ್ವೀಕಾರಮಾಡಿಸಿ, ಯಥಾಶಾಸ್ತ್ರವಾಗಿ ಪಟ್ಟಾಭಿಷೇಕಮಹೋತ್ಸವವನ್ನೂ ಮಾಡಿಸಿದರು.

ಅನಂತರ ಈ ಚಾಮರಾಜಒಡೆಯರವರು ಶುಕ್ಲಪಕ್ಷದ ಬಿದಿಗೆಯ ಚಂದ್ರನಂತೆ ದಿನದಿನಕ್ಕೆ ಪ್ರವೃದ್ಧಿ ಹೊಂದಿ, ಸಕಲ ವಿದ್ಯಾಪಾರಂಗತರಾಗಿ ಸ್ವಬುದ್ಧಿಯಿಂದ ಸಕಲ ಕಾರ್ಯಗಳನ್ನು ನೋಡುವ ಪರ್ಯಂತವೂ ಈ ಲಕ್ಷ್ಮಮ್ಮಣ್ಣಿಯವರ ಸವತಿಯಾದ ಮುದ್ದು ಮೆಲ್ಲಾಜಮ್ಮಯ್ಯನವರು ಹೊರೆಗಳವರ ಸಂರಕ್ಷಣೆ ಮಾಡಿಕೊಂಡು ಅರಮನೆಯ ಆಡಳಿತಗಳನ್ನು ನೋಡಿಕೊಂಡಿರುವಂತೆ ಏರ್ಪಾಡನ್ನು ಮಾಡಿಸಿ, ಇವರ ಮಾತೃಶ್ರೀ ಲಕ್ಷ್ಮಮ್ಮಣ್ಣಿಯವರ ದುರ್ಬುದ್ಧಿಯನ್ನು ತೀರಿದ, ದೊರೆಗಳವರಿಗೆ ಏನಾದರೂ ಅಪಾಯವನ್ನು ಮಾಡಿಯಾರೆಂದು ಭೀತಿಯಿಂದ ಸರ್ವಾಧಿಕಾರಿಯಾದ ನವಾಬ ಹೈದರಲ್ಲೀಖಾನ ಬಹದ್ದರರು ಈ ಲಕ್ಷ್ಮಮ್ಮಣ್ಣಿಯವರನ್ನು ನಾಟಿಕಶಾಲೆ ಬೊಕ್ಕಸದ ತೊಟ್ಟಿಯಲ್ಲಿರಿಸಿ, ತಾವು ಪೂರ್ವದಂತೆ ದೊಂಗಾಯವರ ಆಜ್ಞಾನುಸಾರವಾಗಿ ಸರ್ವಾಧಿಕಾರ ಮುಂತಾದ ಕಾರ್ಯಗಳಲ್ಲಿ ಸರ್ವ ಸ್ವತಂತ್ರರಾಗಿದ್ದರು.

ಇವರ ಆಳಿಕೆಯಲ್ಲಿ ಅಧಿಕಾರ ಮಾಡಿದ ಜನಗಳು :—(೧) ಸರ್ವಾಧಿಕಾರಿ ನವಾಬ ಹೈದರಲ್ಲೀಖಾನ ಬಹದ್ದರ, (೨) ಇವರ ಮಗ ಟೀಪೂಸುಲ್ತಾನ್, (೩) ಪೂರ್ಣಯ್ಯನವರು, (೪) ಜಗಜ್ಜೀವನ ರಾಯರಮಗ ತೋಪಿ ಖಾನೆ ಕೃಷ್ಣರಾಯ, (೫) ಬಜಿಕೀರರಾಯರು, (೬) ಬಾದಾಮಿ ಬಿಪ್ಪಣ್ಣಪ್ಪನವರು, (೭) ಮಿರಸಾಬ್, (೮) ಮಹಲಾತಕಚೇರಿ ಕೇಶವರಾಯರು, (೯) ಅಂಬಕಕಾಮಯ್ಯ, (೧೦) ಪ್ರಧಾನವೆಂಕಪ್ಪಯ್ಯ, (೧೧) ಅಬೂಮೆಹಮೆದಮಿರ್ದೆ, ಇವರುಗಳು ಮುಂತಾದ ಅನೇಕಜನಗಳು ೧೪ ಕಛೇರಿಯಲ್ಲಿಯೂ ಸೀಮೆಯಲ್ಲಿಯೂ ಸಹ ಅಧಿಕಾರವನ್ನು ಮಾಡಿದರು.

ಇವರ ಆಳಿಕೆಯಲ್ಲಿ ಯುದ್ಧಮಾಡಿ ಸೀಮೆಗಳನ್ನು ಸಾಧಿಸಿದ ವಿವರ :—

ಚಿತ್ರದುರ್ಗವನ್ನು ಸಾಧಿಸಿದ್ದು :—ಪೂರ್ವದಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರವರ ಆಳಿಕೆಯಲ್ಲಿ ನವಾಬರು ಚಿತ್ರದುರ್ಗಕ್ಕೆ ಮುತ್ತಿಗೆಹಾಕಿ ಅಲ್ಲಿಯ ಪಾಳೆಯಗಾರ ಮೊದಗೆರಿ ನಾಯಕನಿಂದ ೪೮ ಲಕ್ಷ ದುರ್ಗಿವರಹಗಳ ಕಂಡಣೆಯನ್ನು ನಿಗದಿಮಾಡಿಕೊಂಡು, ಅವನ ೧೩ ಗಡಿಗಳನ್ನೂ ಅವನ ಕೈವಶಮಾಡಿದರು. ಆ ಮೊದಗೆರಿನಾಯಕನು ನವಾಬರು ಕೆಲವು ಸೀಮೆಯನ್ನು ಸಾಧಿಸುವಕಾಲದಲ್ಲಿ ಸಹಾಯನಾಗಿದ್ದು, ಅನಂತರ ನವಾ

ಬರ ಮೇಲೆ ಅಸಮಾಧಾನಪಟ್ಟು ತಾನು ಕೊಡತಕ್ಕ ೪ ಲಕ್ಷ ವರಹಗಳನ್ನು ಬಿಡಿಸಿಕೊಂಡು ತಾನೇಸ್ವತಂತ್ರನಾಗಿರಬೇಕೆಂದು, ಮರಾಟೆಯವರಲ್ಲಿಗೂ ಮೊಗಲರಲ್ಲಿಗೂ ಕೆಲವು ಸೈನ್ಯವನ್ನು ಕಳುಹಿಸಿಕೊಡಬೇಕೆಂಬುದಾಗಿ ಪಿತೂರಿ ಕಾಗದ ಬರೆದನು. ಈ ವರ್ತಮಾನವು ಶ್ರೀರಂಗಪಟ್ಟಣದಲ್ಲಿರುವಾಗ ನವಾಬರಿಗೆ ತಿಳಿಯಲು, ಖಾ॥ ಶಕ ೧೮೯೯ನೇ (A.D. 1777) ದುರ್ಮುಖಿ ಸಂವತ್ಸರದ ಫಾಲ್ಗುಣ ಮಾಸದಲ್ಲಿ ನವಾಬರು ಚಿತ್ರದುರ್ಗಕ್ಕೆ ಮುತ್ತಿಗೆಹಾಕಿ ಸಾಧಿಸುವುದಕ್ಕಾಗಿ ತಮ್ಮ ಮಗನಾದ ಟೀಪೂಸುಲ್ತಾನನ ಸಂಗಡ ಕೆಲವು ಫೌಜನ್ನು ಕಳುಹಿಸಿ ಕೊಟ್ಟರು. ಈ ಟೀಪೂಸುಲ್ತಾನನು ಚಿತ್ರದುರ್ಗಕ್ಕೆ ಮುತ್ತಿಗೆ ಹಾಕಿ ಒಂದು ವರ್ಷ ಪರ್ಯಂತ ಲಡಾಯಿ ಮಾಡಿಯೂ ಸ್ವಾಧೀನಮಾಡಿಕೊಳ್ಳದೆ ಇದು ದರಿಂದಲೂ, ದಂಡಿನ ಖರ್ಚು ಬಹಳವಾದುದರಿಂದಲೂ, ನವಾಬರು ತಮ್ಮ ಮಗನ ಮೇಲೆ ಬಹಳ ಕೋಪಮಾಡಿ, ಇವನಿಗೆ ಜಹಗೀರಾಗಿ ಕೊಟ್ಟಿದ್ದ ಮಳವಳ್ಳಿಯನ್ನು ಜಪ್ತಿ ಮಾಡಿ, ಪಹರೆಯೊಡನೆ ಶ್ರೀರಂಗಪಟ್ಟಣಕ್ಕೆ ಕಳುಹಿಸಿಕೊಟ್ಟರು. ಆ ಸಮಯದಲ್ಲಿ ಅನ್ನದಾನಸೆಟ್ಟಿ, ಶಂಕರಸೆಟ್ಟಿ, ನರಸಸೆಟ್ಟಿ ಈ ಮೂರು ಜನ ಸಾಹುಕಾರರು ಸುಲ್ತಾನನ ಡೇರೆಗೆ ಹೋಗಿದ್ದರೆಂಬ ವರ್ತಮಾನವನ್ನು ನವಾಬರು ಕೇಳಿ ಜನ ೧ಕ್ಕೆ ೬೪ ಸಾವಿರ ವರಹದ ಮೇರೆ ಅವರಿಂದ ಗುನ್ನೇಗಾರಿ ತೆಗೆದುಕೊಂಡು ಶ್ರೀರಂಗಪಟ್ಟಣಕ್ಕೆ ಕಳುಹಿಸಿ ಕೊಟ್ಟರು. ನವಾಬರು ಸಿರಾಪಟ್ಟಣದಲ್ಲಿರುವ ವೇಳೆಯಲ್ಲಿ, ಪಟ್ಟಣಕ್ಕೆ ಸುಲ್ತಾನನನ್ನು ಕಳುಹಿಸಿಕೊಟ್ಟನಂತರ, ಮೆದಗೆರಿನಾಯಕನು ಚನ್ನಗಿರಿ, ಬಸವಾಪಟ್ಟಣ, ಸಂತೆಬಿದನೂರು ಮುಂತಾದ ಸೀಮೆಗಳನ್ನು ಲೂಟಿ ಮಾಡಿದ ವರ್ತಮಾನವನ್ನು ತಿಳಿದು, ತಾವೇ ಕೆಲವು ಫೌಜನ್ನು ತೆಗೆದುಕೊಂಡು ಹೋಗಿ, ದುರ್ಗಕ್ಕೆ ಮತ್ತೆ ಮುತ್ತಿಗೆಹಾಕಿ, ಅವನ ಸ್ವಜನರುಗಳಿಂದಅಲ್ಲಿನ ಮೆತ್ತಗಳನ್ನು ತಿಳಿದು, ಬಹಳ ಯುದ್ಧ ಮಾಡಿ, ಈದುರ್ಗಕ್ಕೆ ಸೇರಿದ ೧೩ ಗಡಿಗಳನ್ನು ಅವನಲ್ಲಿದ್ದ ಆನೆ ಕುದುರೆ ವಸ್ತ್ರಾಭರಣ ದ್ರವ್ಯ ಮುಂತಾದ ಪದಾರ್ಥಗಳನ್ನು ಸಹ ಖಾ॥ ಶಕ ೧೮೦೦ನೇ (A.D.1779) ವಿಳಂಬಿ ಸಂವತ್ಸರದ ಫಾಲ್ಗುಣ ಮಾಸದಲ್ಲಿ ಸ್ವಾಧೀನಮಾಡಿಕೊಂಡು, ಮೆದಗೆರಿನಾಯಕನನ್ನೂ ಅವನ

ತಮ್ಮನ್ನು ಪರಶುರಾಮನಾಯಕನನ್ನೂ ಹೆಂಗಸರು ಮಕ್ಕಳನ್ನೂ ಬಿಕ್ಕಟ್ಟಿನ ಪವರೆಯೊಡನೆ ಶ್ರೀರಂಗಪಟ್ಟಣಕ್ಕೆ ಕಳುಹಿಸಿಕೊಟ್ಟರು.

ಪೂರ್ಣಯ್ಯನವರಿಗೂ ಕೃಷ್ಣರಾಯರಿಗೂ ಕೆಲಸವನ್ನು ನೇಮಕವಾಗಿದ್ದು :— ಪೂರ್ವದಲ್ಲಿ ಸರ್ವಜಿತು ಸರ್ವಧಾರಿ ಸಂವತ್ಸರ ಮೊದಲಾಗಿ ತೋಷೀಖಾನೆ ಕನ್ನಡ ದಫ್ತರದ ಕೆಲಸವನ್ನು ನೋಡಿಕೊಂಡಿದ್ದ ವೆಂಕಟರಮಣಯ್ಯನೆಂಬಾತನ ಗುಮಾಸ್ತೆಗಿರಿಯಲ್ಲಿದ್ದ ಪೂರ್ಣಯ್ಯನವರು ಬುದ್ಧಿವಂತರಾಗಿದ್ದರಿಂದ ತೋಷೀಖಾನೆ ಬಕ್ಷಿ ಅಸದಲ್ಲೀಖಾನನು ನವಾಬರಿಗೆ ದೇಶ, ಆ ವೆಂಕಟರಮಣಯ್ಯನು ತೀರಿಹೋದ ಮೇಲೆ, ಅದೇ ಕನ್ನಡ ದಫ್ತರದ ಕೆಲಸವನ್ನು ಪೂರ್ಣಯ್ಯನವರಿಗೆ ನೇಮಕ ಮಾಡಿಸಿದನು. ಪೂರ್ಣಯ್ಯನವರು ಮುಲಕಿ ಫೌಜು ಈ ಎರಡು ಕಾರ್ಖಾನೆಯ ಕೆಲಸಗಳನ್ನೆಲ್ಲಾ ಮೊಖ್ತೇಸರರಾಗಿ ನೋಡಿಕೊಳ್ಳುತ್ತಿದ್ದರು. ಜಗಜ್ಜೀವಣ್ಣರಾಯರ ಮಗ ಗಿರಿಧರರಾಯನ ತಮ್ಮನಾದ ತೋಷೀಖಾನೆ ಹಿಂದವಿದಫ್ತರದ ಕೆಲಸವನ್ನು ನೋಡಿಕೊಳ್ಳುತ್ತಿದ್ದ ಕೃಷ್ಣರಾಯನು ನವಾಬರ ಬಳಿಯಲ್ಲಿ ಬಹಳ ಚಾಲಾಕಾಗಿದ್ದರಿಂದ ಹಿಂದವಿ ದಫ್ತರದ ಕೆಲಸವು ಅವನಿಗೆ ನೇಮಕವಾಯ್ತು. ಇವರಿಬ್ಬರಿಗೂ ಚಿತ್ರದುರ್ಗದಬಳಿ ಇದ್ದಾಗ ೧೦೦ ವರಹಗಳ ಮೇರೆಗೆ ಸಂಬಳವನ್ನು ನೇಮಕಮಾಡಿಸಿ, ಚಿನ್ನದ ತೋಡಿನ ದುಶಾಲು ಸಹ ಇನಾಮಾಗಿಕೊಡಿಸಿದರು. ಬಳಿಕ ಸಕಲ ಕಾರ್ಯಕ್ಕೂ ಇವರೇ ಒಡಾಡುತ್ತಾ ಇದ್ದರು.

ಕಡಪೆಯನ್ನು ಸಾಧಿಸಿದ್ದು :—ಶಾ॥ ಶಕ ೧೭೦೦ನೇ (A.D.1779) ವಿಕಾರಿ ಸಂವತ್ಸರದಲ್ಲಿ ನವಾಬರು ಕಡಪೆಯನ್ನು ಸಾಧಿಸಬೇಕೆಂದು ಸೈನ್ಯ ಸಮೇತರಾಗಿ ಹೊರಟು ಕಡಪೆಗೆ ಮುತ್ತಿಗೆ ಹಾಕಿದರು. ಅಲ್ಲಿಯ ನವಾಬನಾದ ಅಬ್ದುಲ್ಲಹಕೀಂಖಾನನು ೬೦ ಜನ ಪಠಾಣರನ್ನು ಈತನ ತಲೆಯನ್ನು ತೆಗೆದುಕೊಂಡು ಬನ್ನಿ ಎಂಬುದಾಗಿ, ರಾತ್ರಿ ವೇಳೆಯಲ್ಲಿ ಕಳುಹಿಸಿಕೊಟ್ಟನು. ಆ ಜನಗಳು ಕತ್ತಿಯನ್ನು ಬಿಚ್ಚಿಕೊಂಡು ನವಾಬರು ಮಲಗಿದ್ದ ಡೇರೆಗೆ ಸುತ್ತಲೂ ಇದ್ದ ಕನಾತನ್ನು ಕೊಯಿದು ಅಲ್ಲಿದ್ದ ಪಹರೆಯವರನ್ನು ಹೊಡೆದು, ಡೇರೆಯ ಬಳಿಗೆ ಬರುವಷ್ಟರೊಳಗೆ ಸವಿಾಪದಲ್ಲಿದ್ದ ಪಹರೆಯವನು ಕಂಡು ನವಾಬರನ್ನು

ಎಚ್ಚರಿಸಿ, ಈ ವಿಷಾಲೆಯನ್ನು ಹೇಳಲಾಗಿ, ನವಾಬರು ತಾವು ಮೆಲಗಿದ್ದ ಮಂಚದ ಸುಪ್ಪತ್ತಿಗೆಯ ಮೇಲೆ ತಲೆದಿಂಬಿಗೆ ಶಾಲನ್ನೂ ಸಕಲಾತಿಯನ್ನೂ ತಾವು ಮೆಲಗಿದ್ದಂತೆಯೇ ಹೊದಿಸಿ, ಆ ರಾವಟಿಗೆಯನ್ನು ಕೊಯಿದು, ಮತ್ತೊಂದು ಗುಡಾರಕ್ಕೆ ಹೋಗಿ, ಅಲ್ಲಿದ್ದ ಪಹರೆ ಮುಂತಾದ ಜನಗಳನ್ನು ಎಬ್ಬಿಸಿ, ಬಳಕ್ಕೆ ಕಳುಹಿಸಿ ಕೊಡುವಷ್ಟರೊಳಗಾಗಿ, ಆ ೬೦ ಜನ ಪಠಾಣರು ನವಾಬರು ಮಲಗಿದ್ದ ಮಂಚದ ಬಳಿಗೆ ಬಂದು, ಈ ಹಾಸಿಗೆಯಲ್ಲಿ ಈ ಹೊದಿಕೆಯ ತಲೆದಿಂಬನ್ನೇ ನವಾಬರೆಂಬುದಾಗಿ ತಿಳಿದು, ಜೂರು ಜೂರಾಗಿ ಕಡಿಯುತಲಿದ್ದರು. ಆ ಸಮಯದಲ್ಲಿ ನವಾಬರ ಕಡೆಯ ಬಾರಿನವರು, ಬಾಲೆಯವರು, ರಾಚೇವಾರರು ಸಹ ಬಳಕ್ಕೆ ಬಂದು, ಆ ೬೦ ಜನವನ್ನು ಹಿಡಿದು ಮುಷ್ಕಿ ಕಟ್ಟಿ ಪಹರೆಯಲ್ಲಿರಿಸಿದರು. ಮರುದಿನ ಪ್ರಾತಃಕಾಲದಲ್ಲಿ ನವಾಬರು ಆ ಜನಗಳ ಕೈಕಾಲು ಕೊಯಿಸಿ, ಮರಳಲ್ಲಿ ಹೂಳಿಸಿ, ಬಳಿಕ ಕಡಪೆಗೆ ತಾಣೆಹಾಕಿ, ಕಡಪೆ ಸೀಮೆಯ ೨೧ ಗಡಿಗಳನ್ನು ಸ್ವಾಧೀನಮಾಡಿಕೊಂಡು, ಅಲ್ಲಿನ ಆನೆ ಕುದುರೆ ವಸ್ತ್ರಾಭರಣ ದ್ರವ್ಯಮುಂತಾದ ಪದಾರ್ಥಗಳನ್ನು ತೆಗೆದುಕೊಂಡು, ಆ ಕಡಪೆಯ ನವಾಬನನ್ನು ಪೆಂಗಸರು ಮಕ್ಕಳು ಸಹಿತವಾಗಿ ಪಹರೆಹಾಕಿ ಶ್ರೀರಂಗಪಟ್ಟಣಕ್ಕೆ ಕಳುಹಿಸಿ ಕೊಟ್ಟರು.

ಕೆಲವು ಅಧಿಕಾರಿಗಳನ್ನು ನೇಮಕಮಾಡಿದ್ದು :—ಕಡಪ ಸೀಮೆಯನ್ನು ಸಾಧಿಸಿದನಂತರ ದಂಡಿನ ಕೊತ್ವಾಲಗಿರಿಯಲ್ಲಿದ್ದ ಮಿರಮೆಹಂಮೆದ್ ಸಾದಕ್ ಎಂಬವನಿಗೆ ಅಬೂಮೆಹಂಮೆದಮಿರ್ದಿಯ ಶಿಫಾರ್ಸಿನಿಂದ ಮಹಲಾತ್ ಕಚಕೇರಿಯ ದಿವಾನಗಿರಿಯು ನೇಮಕವಾಯಿತು. ಹರಿಕಾರ ಶಾಮಯ್ಯನಿಗೆ ನಾಯಕ ನರಸಪ್ಪನಾಯಕನು ತೀರಿ ಹೋದ ಮೇಲೆ ೩೦೦ ಜನ ಹರಿಕಾರರ ಒಟ್ಟು ನಾಯಕತನ ನೇಮಕವಾಯ್ತು. ಅಂಚೆ ತಿಮ್ಮಪ್ಪಯ್ಯನ ಕಡೆಯಿಂದ ೩ ಲಕ್ಷ ವರಹವನ್ನು ನಂಡ ತೆಗೆದುಕೊಂಡು, ಇವನಬದಲಿ ಶಾಮಯ್ಯನು ಬಹಳ ಚಾಲಾಕಾಗಿದ್ದುದರಿಂದ, ಒಟ್ಟು ಅಂಚೆ ಅಧಿಕಾರವನ್ನು ಶಾಮಯ್ಯನಿಗೆ ನೇಮಕ ಮಾಡಿದರು. ಈತನು ನವಾಬರಿಗೆ ಆಪ್ತನಾಗಿದ್ದನು.

ಕರಾಚಿಯ ನಂಜರಾಜಯ್ಯನು ಮೃತನಾದನಂತರ ಇವನ ಮಗ ವೀರರಾಜಯ್ಯನನ್ನು ನವಾಬರು ಸೆರೆಮನೆಯಿಂದ ಕರೆಸಿ, ಬಹಳ ಸನ್ಮಾನಗಳನ್ನು ಮಾಡಿ, ಪೂರ್ವದಂತೆ ಅಧಿಕಾರವನ್ನು ಕೊಡಬೇಕೆಂದು ಮಾತನಾಡುವ ಸಮಯದಲ್ಲಿ, ಈ ವೀರರಾಜಯ್ಯನು ನವಾಬರ ಸಂಗಡ ವಿನಯೋಕ್ತಿಯನ್ನಾಡದೆ, ಒರಟು ಮಾತುಗಳನ್ನಾಡಿದುದರಿಂದ ಪೂರ್ವದಂತೆ ವೈದುನಾಡಿ, ಅವನ ತಂದೆ ನಂಜರಾಜಯ್ಯನಿಗೆ ಉಂಬಳಿಯಾಗಿ ಕೊಟ್ಟಿದ್ದ ಕಳಲೆ ಸೀಮೆಯನ್ನು ಜಪ್ತುಮಾಡಿ ಜೀವನದ ಖರ್ಚು ಪಚ್ಚಕ್ಕೆ ತಕ್ಕಮಟ್ಟಿಗೆ ಕೊಡುತ್ತಿದ್ದರು. ಸೀರ್ಯದ ಅಧಿಕಾರ ಮಾಡುತ್ತಿದ್ದ ಪ್ರಧಾನ ವೆಂಕಪ್ಪಯ್ಯನ ಅಳಿಯ ರಘುಪತಯ್ಯನು ನವಾಬರು ಬರುವಾಗ ಇಸ್ತಕಪಾಲು ಬಾರದೇ ಇದ್ದುದರಿಂದಲೂ, ವೆಂಕಪ್ಪಯ್ಯನ ಮೇಲೆ ಪೂರ್ವದಿಂದಲೂ ಅಸಹನೆ ಇದ್ದುದರಿಂದಲೂ, ಈ ರಘುಪತಯ್ಯನಿಗೆ ಸೀರ್ಯದ ಅಧಿಕಾರವನ್ನು ತೆಗೆದು, ವೆಂಕಪ್ಪಯ್ಯನ ಕಯ್ಯಲ್ಲಿ ೬೦ ಸಾವಿರ ವರಹವನ್ನು ದಂಡ ತೆಗೆದುಕೊಂಡು ಇವನಿಗೆ ಇದ್ದ ದರ ಮಾಹೆ ಸಾವಿರ ರೂಪಾಯಿಯನ್ನು ಮಿನಾಹಿ ಮಾಡಿಸಿ, ಅವರ ಕಡೆಯ ಜನಗಳ ಅಧಿಕಾರವನ್ನು ತೆಗೆದು, ಪ್ರಧಾನರೆಂಬ ಹೆಸರನ್ನು ತಪ್ಪಿಸಿ, ಆ ಅಧಿಕಾರವನ್ನು ಮೋಖಮ್ಮದ್ ಮಾಡಿಸಿದರು.

ಪೂರ್ಣಯ್ಯನವರ ಮೇಲೆ ಅಂಬಕೆ ಶಾಮಯ್ಯನು ಇಲ್ಲದ ಸುಳ್ಳು ಹಟ್ಟಿಯನ್ನುಂಟುಮಾಡಿ ೧,೧೧,೦೦೦ ವರಹಗಳ ದಂಡವನ್ನು ಕಟ್ಟಿಸಿ, ಗಿಡಂಗಿಯಲ್ಲಿ ಕೂಡಿರುವ ಸನ್ನಿಯದಲ್ಲಿ, ಬಜೆೀರಾಯನು ಇವರ ಮಾನದ ಮೇಲೆ ದೃಷ್ಟಿಯಿಟ್ಟು, ಬರಕ್ಕೆ ಶ್ರೀನಿವಾಸರಾಯನಿಗೆ ಹೇಳಿ, ಅವನಿಂದ ನವಾಬರಿಗೆ ತಿಳಿಸಿ, ಈ ಬಗೆಯ ಹಣಕ್ಕೆ ಅನ್ನದಾನ ಸೆಟ್ಟಿ ನರಸಸೆಟ್ಟಿಗಳ ಹವಾಲತೆಕೊಟ್ಟನಂತರ ಪೂರ್ವದಂತೆ ತೋಷೀಖಾನೆ ದಫ್ತರದ ಕೆಲಸವನ್ನು ಖಾಯಂ ಮಾಡಿಸಿದರು.

ಇಮ್ಮಡಿ ಕೃಷ್ಣರಾಜಒಡೆಯರವರ ಆಳಿಕೆಯಲ್ಲಿ ಸ್ವಾಮಿದ್ರೋಹಿಯಾಗಿ ರೌರವಾದಿ ನರಕಾನುಭವಕ್ಕೆ ಪಾತ್ರನಾದ ವಳವಾಯಿ ದೇವರಾಜಯ್ಯನ ಅಧಿಕಾರವನ್ನು ತೆಗೆದು ಹಾಕಿ, ೧೦ ಸಾವಿರ ವರಹಗಳಿಗೆ

ಕ್ರಯಕ್ಕೆ ತೆಗೆದುಕೊಂಡು, ಅವನಿಗೆ ಬದಲು ಒಟ್ಟು ಸರ್ವಾಧಿಕಾರ ದಲ್ಲಿ ನೇಮಿಸಲ್ಪಟ್ಟ ಈ ನವಾಬರು ದೊರೆಗಳವರ ಆಜ್ಞಾನುಸಾರವಾಗಿ ಸ್ವಾಮಿಭಕ್ತಿಯಿಂದ ಸಂಸ್ಥಾನಕ್ಕೆ ಯಶಸ್ಸುಬರುವೆಂತೆ ಅನೇಕ ಸಂಸ್ಥಾನ ದವರುಗಳನ್ನೂ ಪಾಳಯಗಾರರುಗಳನ್ನೂ ಹೊಡೆದು, ಸೀಮೆಗಳನ್ನು ಸಾಧಿಸಿ, ಇಮ್ಮಡಿ ಕೃಷ್ಣ ರಾಜ ಒಡೆಯರವರು ತೀರಿಹೋದನಂತರ ಅವರ ಪುತ್ರರುಗಳಾದ ನಂಜರಾಜಒಡೆಯರವರು, ಚಿಕ್ಕದ ಚಾಮರಾಜ ಒಡೆಯರವರು, ಖಾಸಾಚಾಮರಾಜ ಒಡೆಯರವರು ಇವರುಗಳಿಗೆ ಬಾಲ್ಯ ವಾದುದರಿಂದ ಇವರ ಆಳಿಕೆಯಲ್ಲಿ ಅರಮನೆ ಮುಂತಾದ ಸ್ಥಳಗಳಲ್ಲಿ ಪೂರ್ವದ ಆಯುಕಟ್ಟಿನ ಮೇರೆಗೆ ನವರಾತ್ರಿ ಮುಂತಾದ ಉತ್ಸವ ಗಳನ್ನು ಅರಮನೆಯಲ್ಲಿ ನಡೆಯುತಕ್ಕ ಆಯುಕಟ್ಟುಗಳನ್ನು ಸಹ ಸ್ವಲ್ಪವೂ ಹೆಚ್ಚು ಕಡಮೆ ಇಲ್ಲದಂತೆ ಸ್ವಾಮಿಭಕ್ತಿಯಲ್ಲಿ ಜಾಗರೂಕ ರಾಗಿ ನಡೆಸಿಕೊಂಡು ಬರುತ್ತಿದ್ದರು. ಮತ್ತು ಪೂರ್ವಸಿಬಂಧನೆಯ ಮೇರೆಗೆ ದೇವದಾಯ ಬ್ರಹ್ಮದಾಯಗಳನ್ನೂ ಜಂಗಮ, ಜೋಗಿ, ಫಕೀರ ಮುಂತಾದ ಜನರುಗಳ ಸರ್ವಮಾನ್ಯ, ಭಟ್ಟಮಾನ್ಯ, ಗ್ರಾಮ, ಭೂಮಿ, ಉಂಬಳಿ, ಜಹಗೀರುಗಳನ್ನೂ ಸಹ ನಡೆಸಿಕೊಂಡು ಬರುವುದಲ್ಲದೆ, ದೊರೆಗಳವರ ಬಂಧುಗಳಾದ ಅರಸುಗಳು, ಕೊಮ್ಮಾರರು, ಇವುರುಗಳ ಮನೆಯ ಪ್ಯಾಕ್ ಮುತ್ತೈದೆಯರು, ಅರಮನೆಯ ಕರಣಿಕ ಮುಂತಾದ ಅಧಿಕಾರಸ್ಥರುಗಳು, ಸೀಮೆಯ ಅಧಿಕಾರವನ್ನು ಮಾಡುತ್ತಿದ್ದ ಪ್ರಧಾನ ವೆಂಕಟಪತಯ್ಯ ಮೊದಲಾದವರು, ಸಾಹುಕಾರರುಗಳು, ಮುಸಲ್ ಮಾನರು, ಅರಮನೆಯ ಗುರಿಕಾರರು, ಊಳಿಗದವರು, ಪರಿಚಾರಕರು, ಸಂಗೀತಗಾರರು, ವೈಣಿಕರು, ವೈದ್ಯರು, ಹೊಗಳುಭಟ್ಟರು, ಅವ್ವೆಯರ ಬಂಧುಜನರು ಮುಂತಾದ ಅನೇಕಜನರುಗಳಿಗೆ ಈ ಆಳಿಕೆಯಲ್ಲಿ ಸಾಧಿಸಿದ ಗಡಿಗಳಲ್ಲಿ ಅಲ್ಲಲ್ಲಿ ಸಿಬಂಧನೆಯ ಮೇರೆಗೆ ಉಂಬಳಿ ಗ್ರಾಮ ಭೂಮಿಗಳನ್ನೂ ಮತ್ತು ಯುದ್ಧದಲ್ಲಿ ತೀರಿಹೋದವರ ಹೆಂಗಸರು ಮಕ್ಕಳಿಗೆ ರಕ್ತಕೊಡಿಗೆಗಳನ್ನೂ ಅವರವರ ವಿಧವೆರಿತು ಅನೇಕವಾಗಿ ಕೊಡುವೆಂತೆ ವಿಕಾರಿ ಸಾರ್ವರಿ ಸಂವತ್ಸರಗಳಲ್ಲಿ ಸಿಬಂಧನೆಮಾಡಿ ನಡೆಸುತ್ತಿದ್ದರು.

ಚಿಕ್ಕದೇವರಾಜಬಿಡಿಯರವರು ಮಾಡಿದ್ದ ನಿಬಂಧನೆಯ ಮೇರೆಗೆ ಇದುವರೆಗೂ ನಡೆಮುಕೊಂಡು ಬಂದಂತೆ ಅರಸುಗಳಲ್ಲಿಯೂ ಕೊಮಾರರು ಗಳಲ್ಲಿಯೂ ಮದುವೆ ಮುಂಜಿ ಪುತ್ರಸ್ವೀಕಾರ ಮುಂತಾದ ಶುಭ ಪ್ರಸ್ತುತಗಳಾಗಬೇಕಾಗಿರುವ ವಿವರವನ್ನು ಆ ಜನರುಗಳು ಬಂದು ತಿಳಿಸಲಾಗಿ, ನವಾಬರು ಆ ಜನರುಗಳನ್ನು ಕರೆಸಿ, ನಿಮ್ಮ್ಮನಿಮ್ಮ್ಮ ಪೂರ್ವ ಪದ್ಧತಿಯ ಮೇರೆಗೆ ದೊರೆಗಳವರ ಸನ್ನಿಧಾನಕ್ಕೆ ಹೋಗಿ, ಬಿನ್ನವಿಸಿ ಕೊಂಡು, ಅಲ್ಲಿ ಅಪ್ಪಣೆಯಾದಂತೆ ಬರೆಸಿಕೊಂಡು ಪ್ರಸ್ತುತವನ್ನು ಮಾಡಿ ಕೊಳ್ಳುವುದು. ಇದಕ್ಕೇನಾದರೂ ಸ್ವಲ್ಪ ಹೆಚ್ಚು ಕಡಮೆ ನಡೆದಲ್ಲಿ ನಿಮ್ಮ್ಮಗಳಿಗೆ ಉಂಬಳಿ ಸಂಬಳ ಮುಂತಾದ ಜೀವನಗಳು ನಡೆಯುವಾರವೆಂದು ಹೇಳುತ್ತಿದ್ದರು.

ಶ್ರೀರಂಗಪಟ್ಟಣದ ಮೊದಲಾದ ಸ್ಥಳಗಳ ಕೋಟೆಗಳನ್ನು ಬಲಪಡಿಸಿ ಶ್ರೀರಂಗ ಪಟ್ಟಣವನ್ನು ಅಭಿವೃದ್ಧಿಪಡಿಸಿದ್ದು :—ನವಾಬರು ತಮ್ಮ್ಮ ಅಧಿಕಾರದಲ್ಲಿ ಶ್ರೀರಂಗಪಟ್ಟಣದ ಕೋಟೆಯನ್ನು ವಿಸ್ತಾರವಾಗಿ ಕಟ್ಟಿಸಿದುದಲ್ಲದೆ ಮೈಸೂರು ಕೋಟೆಗೆ ಸುತ್ತಲೂ ರೇವಣಿಯನ್ನೂ, ಮದ್ದೂರು ಚನ್ನ ಪಟ್ಟಣ ಮುಂತಾದ ಗಡಿಗಳಿಗೂ ಕೆಲವು ದುರ್ಗಗಳಿಗೂ ಕೋಟೆ ಕೊತ್ತಲಗಳನ್ನೂ ಕಟ್ಟಿಸಿದರು. ಶ್ರೀರಂಗಪಟ್ಟಣದ ಉಭಯಕಾವೇರಿ ಗಳ ನಡುವೆ ಷಹರಗಂಜಾಂ ಎಂಬವಾಗಿ ದೊಡ್ಡಪೇಟೆಯನ್ನುಂಟು ಮಾಡಿ, ಎರಡು ಹೊಳೆಗಳು ಕೂಡಿರುವ ಸ್ಥಲಕ್ಕೆ ಸಮೀಪದಲ್ಲಿ ಲಾಲ್‌ಬಾಗ್ ಎಂಬ ತೋಟವನ್ನೂ, ಕೋಟೆಯ ಮೂಡಲ ಬಾಗಿಲ ಎದುರಿಗೆ ನದಿಯ ದಕ್ಷಿಣಪಾರ್ಶ್ವದಲ್ಲಿ ದರಿಯಾದೌಲತ್ತೆಂಬ ತೋಟವನ್ನೂ ಉಂಟುಮಾಡಿ, ಈ ಎರಡು ತೋಟಗಳಿಗೂ ದಿಲ್ಲಿ, ಲಾಹೂರ್, ಕಾಬೂಲ್, ಕಂದಾರ ಮೊದಲಾದ ಸೀಮೆಗಳಿಂದ ವಿಚಿತ್ರ ಫಲ ಪುಷ್ಪಗಳ ಬಳ್ಳಿ ಮುಂತಾದ ಸೊಸಿಗಳನ್ನೂ ಬೀಜಗಳನ್ನೂ ತರಿಸಿ, ಆಯಾದೇಶದ ಕಾರೆಗಾರರು ಗಳನ್ನು ಕರೆಸಿ, ಈ ಎರಡು ತೋಟಗಳಲ್ಲಿಯೂ, ಸೊಸಿ, ಬಳ್ಳಿ, ಬೀಜಗಳನ್ನು ಹಾಕಿಸಿ, ಹಾಲು, ಮೊಸರು, ಮಜ್ಜಿಗೆ, ಎಳನೀರು, ಮುಂತಾದುದರಿಂದಲೇ ಪೋಷಿಸಿ, ಈ ತೋಟಗಳಲ್ಲಿ ಸೊನೇರಿ ರುಚೇರಿ ಕೆಲಸಗಳಿಂದ ವಿಚಿತ್ರವಾದ ದಿವ್ಯಮಾನೆಯನ್ನು ಕಟ್ಟಿಸಿ, ಇದೇ

ಮೇರೆಗೆ ಬೆಂಗಳೂರಲ್ಲಿ ಲಾಲ್‌ಬಾಗ್‌ತೋಟವನ್ನೂ ದಿವಾಣಖಾನೆಯನ್ನೂ ಕಟ್ಟಿಸಿದರು.

ಒಟ್ಟುಸೈನ್ಯದ ಗಣನೆ:—ಖಾಸಾ ಚಾಮರಾಜ ಒಡೆಯರವರ ಆಳಿಕೆಯಲ್ಲಿ ಸರ್ವಾಧಿಕಾರಿ ನವಾಬರು ಆಕ್ರಾಡನ್ನು ಸಾಧಿಸಲು, ಸಕಲ ಸನ್ನಾಹದಿಂದ ಪಾ॥ ಶಕ. ೧೭೦೩ನೇ (A.D. 1780) ಶಾರ್ವರಿ ಸಂವತ್ಸರದ ಜ್ಯೇಷ್ಠ ಮಾಸವಲ್ಲಿ ಮೋಹೀಮ್ ಹೊರಡುವ ವೇಳೆಯಲ್ಲಿ ಶ್ರೀರಂಗಪಟ್ಟಣದಲ್ಲಿ ಗಣನೆ ಮಾಡಿದ ಒಟ್ಟು ಫೌಜಿನ ಜನಗಳು ೨,೨೬,೦೦೦ಕ್ಕೆ ವಿನರ —

೪೯,೫೦೦ ಕುದುರೆಯ ಸವಾರರು:—

೧೩,೦೦೦ ಬಾರಗಿರ ತಬೇಲೆಯವರು,
೧೪,೦೦೦ ಸವಾರಕಚೇರಿಯವರು,
೬,೦೦೦ ಕಡಪೆಯ ಮಿಾರಲ್ಲಿರಜಾಖಾನನ ಕಡೆಯವರು,
೨,೦೦೦ ಶ್ರವಣೂರುಹಕೀಮಖಾನನ ಮೆಕ್ಕಳ ಸವಾರರು,
೫೦೦ ಅಲೇಮೊನಿ ಸವಾರರು

———
೪೯,೫೦೦
———

೬೪,೦೦೦ ಬಾರಿನವರು:—

೬೦,೦೦೦ ಬಾರುಕಚೇರಿಯವರು
೪,೦೦೦ ಕಡಪೆಯ ಮೀರಲ್ಲಿ ರಜಾಖಾನನ ಕಡೆಯವರು

———
೬೪,೦೦೦
———

೧,೦೪,೦೦೦ ಓಲೆಕಾರರು:—

೮೦,೦೦೦ ಸೀವೆಯೆ ಈಂದಾಚಾರ
೨೦,೦೦೦ ಅಹಷಾಂ
೪,೦೦೦ ಕಡಪೆಯ ಮಿಾರಲ್ಲಿ ರಜಾಖಾನನ ಕಡೆಯವರು

———
೧,೦೪,೦೦೦
———

೨,೦೦೦ ಮೊಸಾಲಾಲೀಕಡೆಯ ಪರಾಷೀರರು.
೫೦೦ ಇಂಗ್ಲಿಷ್ ಜಾತಿ ಗೋರಾ
೨,೦೦೦ ಬೆಳ್ಳಿಭಾಲೆಯವರು
೨,೦೦೦ ಬಾಣದಾರರು
೪,೦೦೦ ಕಲಾಸಿ ಗೋಲಂದಾಜ ಚಟ್ಟೈದಾರ್ ಮೊದಲಾದವರು.
೧,೦೦೦ ಪಬ್ಸಿ
೧,೦೦೦ ಅರಬಸ್ಥಾನದವರು
೬,೦೦೦ ದಂಡಿನಕಾಮ್ಮಾಟಿಗಳು

೨,೦೬,೦೦೦

ಮತ್ತು —

೩೦೦ ತೋಪು ಇದಕ್ಕೆ ಬೇಕಾದಷ್ಟು ಗನ್ನರ್ ಮೆಕರಡಿಬ್ಬಿ ಬಾರೂದು ಗೋಲಿಸಹ,
೧೨,೦೦೦ ಮೋದಿಖಾನೆ ವೆರನಿಯ ಎತ್ತು,
೧,೦೦೦ ಪೀಲಖಾನೆ ಆನೆ,
೬,೦೦೦ ಷುತರಖಾನೆ ಒಂಟೆ,
೧,೦೦೦ ಬ್ರಾಹ್ಮಣ ನಾಯಕ ಹರಿಕಾರ, ಸಹ
೧,೦೦೦ ಜಾಸೋದರ ವೆಗ್ಗೈರೆ,

ಇದಲ್ಲದೆ, ಚಿಕೀಪದಾನ, ಮೆಹಲದಾರ, ನಖೀಬ, ಖಿದಮೆತಗಾರ, ಪರಾಷರು, ಗೊಲ್ಲ, ಬೋಯಿ, ಮೆಷಾಲ್ಚಿ, ಜೀನಗಾರ, ವೈದ್ಯ, ಸಂಗೀತಗಾರ ಮುಂತಾದವರು ಅಲಾಹಿದ ಷಾಗಿರ್ದಿಪೇಷಾಕಚಕೇರಿದಾಖಲ್, ಅಹಲೆ ಕಾರ್‌ಪೇಷಾ ಅಲಾಹಿದ.

ಈ ಪೈಕಿ ೬೦,೦೦೦ ಫೌಜನ್ನು ಸೀವೆಯ ಮೇಲೆ ಬಂದೋಬಸ್ತಿಗಾಗಿ ಇಟ್ಟು, ನಿಂತ ೧,೬೬,೦೦೦ ಫೌಜನ್ನು ಒಟ್ಟುಮಾಡಿ, ಆರ್ಕಾಡಿಗೆ ಹೋಗುವಲ್ಲಿ ತಮ್ಮ ಸಂಗಡ ಕೆಲವು ಫೌಜನ್ನೂ ವೆರದಿಯ ಎತ್ತು, ಪೀಲಖಾನೆ, ಷುತರಖಾನೆ, ನಾಯಕ, ಹರಿಕಾರ, ಜಾಸೋದರ ಮೊದಲಾದ ಜನಗಳನ್ನೂ ತೆಗೆದುಕೊಂಡು ಹೋದುದಲ್ಲದೆ, ಉಳಿದ ಫೌಜಿನ ಸಂಗಡ ಸದರಿ ಫಿರಕೆ ಜನಗಳನ್ನು ಸಹ ಕಳುಹಿಸಿ,

ಕೆಲವು ಸಂಸ್ಥಾನಿಕರ ಮತ್ತು ಪಾಳಯಗಾರರ ಸೀಮೆಗಳನ್ನು ಸಾಧಿಸು ವಂತೆಯೂ, ಶಾ॥ ಶಕ ೧೭೦೩ನೆ (A.D. 1780) ಶಾರ್ವರಿ ಸಂವತ್ಸರದ ಶ್ರಾವಣ ಬಹುಳ ಕಡೆಯ ಶುಕ್ರವಾರ ಏಕಮುಹೂರ್ತದಲ್ಲಿ ಜವಾಬೀರ ಬಂದರ, ತಂಜಾವೂರು, ಕುಂಭಕೋಣ, ಚಿದಂಬರ, ರಾಯವೇಲೂರು ಆದಿಯಾಗಿ ರಾಮೇಶ್ವರ ಪರ್ಯಂತಕ್ಕೂ ಲೂಟಿಮಾಡಿಕೊಂಡು ಬರು ವಂತೆಯೂ, ಹೇಳಿ ಕಳುಹಿಸಿಕೊಟ್ಟು, ತಾವು ಮಹಮ್ಮದಲ್ಲೀಖಾನನ ಸಂಗಡ ಬಹಳ ಯುದ್ಧಮಾಡಿ ಆರ್ಕಾಡಿಗೆ ಸೇರಿದ್ದ ೫೫ ಗಡಿಗಳನ್ನು ಸ್ವಾಧೀನಮಾಡಿಕೊಂಡರು.

ಇವರ ಅಳಿಕೆಯಲ್ಲಿ ಮೇಲೆ ಬರೆದಿರುವ ಪಾಳಯಗಾರರನ್ನೂ ಸಂಸ್ಥಾನಿಕರನ್ನೂ ಜಯಿಸಿ ಸಾಧಿಸಿದ ಗಡಿಗಳು ೭೦—

ಚಿತ್ರದುರ್ಗದ ಪಾಳಯಗಾರ ಮೆದಗಿರಿನಾಯಕನಿಂದ :—(೧) ಕಸಬಾ, (೨) ಹೊಸದುರ್ಗ, (೩) ಹಿರಿಯೂರು, (೪) ಬಿಳಿಚೋಡು, (೫) ಐಮಂಗಲ, (೬) ರಾಮಗಿರಿ, (೭) ಮಾಯಿಕೊಂಡೆ, (೮) ನಾಯಕನ ಹಟ್ಟಿ, (೯) ಪೊಣಕಾಲ್ಮುರಿ, (೧೦) ದಾವಣಗೆರೆ, (೧೧) ದೊಡ್ಡೇರಿ, (೧೨) ಸಣ್ಣಕ್ಕಿಬಾಗೂರು, (೧೩) ತಳಕು.

ಕಡಪೆ ಅಬ್ದುಲ್ಲ ಹಕೀಮುಖಾನನಿಂದ :—(೧) ಕಡಪೆ, (೨) ಖಂಬಿಂ, (೩) ಗಂಜಿಕೋಟೆ, (೪) ಶಿಂತಕುಂಟು, (೫) ಚೆನ್ನೂರು, (೬) ಕೊತ್ತಕೋಟೆ, (೭) ಕೊಯಿಲಕುಂಟ್ಲ, (೮) ಶಿದ್ದವಟಾ, (೯) ಕಮಲಾಪುರ, (೧೦) ದೊನ್ನೆಪಾಡ, (೧೧) ಜಮ್ಮಲಮಡುಗು, (೧೨) ಮೊಲ್ಲಾಲಾ, (೧೩) ಪೈಡಿಕಾಲವೆ, (೧೪) ಕೂಟಕೂಳ, (೧೫) ದೂಪಾಡ, (೧೬) ದುವೂರು, (೧೭) ಯಿಡಮೆತಲ, (೧೮) ಪೆಂಪಲ್ಲಿನೆಂದಿಮಂಡಲಾ, (೧೯) ಬದ್ದವೇಲ, (೨೦) ಮರೆಳಾ, (೨೧) ಪರಮೆಶಾಮಿಳ.

ಆರ್ಕಾಡು ಸೀಮೆಯ ಮಹಮ್ಮದಲ್ಲೀಖಾನನಿಂದ ಸಾಧಿಸಿ ಶಾ॥ ಶಕ ೧೭೦೩ನೇ (A.D.1780) ಶಾರ್ವರಿ ಸಂವತ್ಸರದ ಮಾರ್ಗಶಿರ ಶುದ್ಧ ೦ ಮಂಗಳವಾರದಲ್ಲಿ ತಾಣ್ಯ ಹಾಕಿದ ಗಡಿಗಳು :—(೧) ಕಸಬೆಲರ್ಕಾಡು, (೨) ತಿಮಿರಿ, (೩) ತಿರುಣಾ ಮಲೆ, (೪) ಬೋಬಿಗಡ, (೫) ಗುಡಿಯಾತ್ತ, (೬) ಪೆರಮಕಲ್ಲು,

ಸೆಸರತಗಡ, (೩) ಮೆಹೀಮಂಪಲ, (೪) ಆರಣಿ, (೯) ಚಂಗಮೊವ್ವ, (೧೦) ಕಾವೇರಿಪಾಕ, (೧೧) ಕೈಲಾಸಗಡ, (೧೨) ಚೆಕೀತಪಟ್ಟು, (೧೩) ತಿಂದಿವನ, (೧೪) ಚಂಬರಗಡ, (೧೫) ಸಾತಗಡ, (೧೬) ಚಂಗಲ ಪಟ್ಟುಸೀಮೆ, (೧೭) ತಿರಕಣಿ, (೧೮) ಪೇಳೂರು, (೧೯) ಕುಂಭ ಕೋಣ, (೨೦) ತೆರಿಮೂರು, (೨೧) ತಿರಪಾಸೂರು, (೨೨) ಕಲವೆ, ೨೩ ಮೆನ್ನಾರಗುಡಿ, (೨೪) ಪುಲಜೇರಿ, (೨೫) ಘಟಿಕಾಚಲ, ೨೬) ಚಂಬಕಿ, (೨೭) ತಿರಪತ್ತೂರು, (೨೮) ಕರ್ನಾಟಗಡ, (೨೯) ಮಧ್ಯಾರ್ಜುನ (೩೦) ಕಂಚಿ, (೩೧) ಚಂದ್ರಗಿರಿ, (೩೨) ತಿರಕಾಟ ಪತ್ತೂರು, (೩೩) ಚಿತ್ತೂರು, (೩೪) ಚಿದಂಬರ, (೩೫) ತಿರುಪತಿ. ೧ ಪಳ್ಳಿಹಾಳಸಾಂಬ್ರಾಣಿ.

ರಾಜಬಡೆಯರವರು ಆದಿಯಾಗಿ ಖಾಸಾಚಾಮರಾಜಬಡೆಯರವರ ಆಳಿಕೆಯಲ್ಲಿ ಸರ್ವಾಧಿಕಾರಿ ನವಾಬರ ಅಧಿಕಾರದ ಆಖೈರುವರೆಗೆ ಸಾಧಿಸಿರ ಮೇಲೆ ಬರೆದಿರುವ ಗಡಿಗಳಲ್ಲಿ ಚಿಕ್ಕದಾಗಿದ್ದ ತಾಲೂಕನ್ನು ದೊಡ್ಡ ಗಡಿಗಳಿಗೆ ಸೇರಿಸಿ ಒಟ್ಟು ಮಾಡಿದ ಮೇಲೆ ಮೈಸೂರು ಸಂಸ್ಥಾನಕ್ಕೆ ಇದ್ದ ಗಡಿಗಳು— ೩೬೩.

ಇದಲ್ಲದೆ ಕೆಲವು ಸಂಸ್ಥಾನಿಕರಿಂದಲೂ, ಪಾಳಯಗಾರರುಗಳಿಂದಲೂ ಸಹ ಪೆಷ್ಕಸ್ಸು ಬರುತ್ತಿದ್ದ ೨೦ ಲಕ್ಷ ವರಹಾಕ್ಕೆ ೫೧ ಸೀಮೆಗಳ ವಿವರ.— (೧) ಬಿಳಿಗಿ, (೨) ಹನುಮಂತಗುಂಡ, (೩) ಬೌಕು, (೪) ಜರಿಮೆಲೆ, (೫) ಹಬ್ಬಿಶರಸೀಮೆ, (೬) ಡಂಬಳ, (೭) ಹೆಬಹಳಿದೊಡ್ಡವಾಡ, (೮) ಕೊಂಜಿ, (೯) ಗದ್ದವಾಲ, (೧೦) ಸುಣ್ಣಕಲ್ಲು, (೧೧) ಪುಂಗನೂರು, (೧೨) ಚಿಟವೇಲುಮೆಲ್ಲವಾರು, (೧೩) ಬಲ್ಲಾಣಿಗೂರು, (೧೪) ನಿಡುಗಲ್ಲು, (೧೫) ಪೆರಸಾಮೆಲತಿಮ್ಮನಾಯಂಕನಪೇಟೆ, (೧೬) ಕನ್ನೋಲು, (೧೭) ಕಿತ್ತೂರು, (೧೮) ಕನಿಯಾನೂರು, (೧೯) ಸವಣೂರು, (೨೦) ಆದವಾನಿ, (೨೧) ಚಿಲಕನೇಪ್ಪು, (೨೨) ಹಾವನೂರು, (೨೩) ಕನಕಗಿರಿ, (೨೪) ಆನೆಗೊಂದಿ, (೨೫) ಹುಲಿಕಲ್ಲು, (೨೬) ಹರಪನಹಳ್ಳಿ, (೨೭) ಗುಮ್ಮನಾಯಕನಹಳ್ಳಿ, (೨೮) ಗೊದಿಕೊಂಡೆ, (೨೯) ಕೋಟೆ ಕೊಂಡೆಪಳುವಾಳ್ಳು, (೩೦) ಮೊಗರಾಲು, (೩೧) ರಾಮೆರವೆಂಕಟಗಿರಿ,

(೩೦) ನರಗುಂದ, (೩೨) ಗೂಳಪ್ಪನಾಯಕನಪಾಳಯ, (೩೪) ಪಳನಿ, (೩೫) ಘಂಟಿಮೆನಾಯಕನಪಾಳಯ, (೩೬)ವಿರೂಪಾಕ್ಷ (೩೭) ಕನ್ನಮ್ಮೆಗೌಡಿ, (೩೮) ಚರಕಲ್ಲು, (೩೯) ರಾಯದುರ್ಗ, (೪೦) ತಲಕೀರಿ, (೪೧) ಸರಜಾಪುರ, (೪೨) ಪಂದಿಕೊನೆ, (೪೩) ನಾರಣೀವನೆ, (೪೪) ಕಾಳಹಸ್ತಿ, (೪೫) ಮೇಕಲನಾಯಕನಪಾಳಯ, (೪೬) ಅಮ್ಮನಾಯಕನಪಾಳಯ, (೪೭) ಅಪ್ಪನಾಯಕನಪಾಳಯ, (೪೮) ಗೊಪೀನಾಯಕನಪಾಳಯ, (೪೯) ಮೆಡೂರು, (೫೦) ಅಪ್ಪಾಜಿಗೌಡನಪಾಳಯ, (೫೧) ಪುಳ್ಯಪುರಂಗಿ.

ಒಟ್ಟು ಸೀಮೆಯ ಹುಟ್ಟುವಳಿ :—ಮೈಸೂರು ಸಂಸ್ಥಾನದ ದೊರೆಗಳವರು ಶ್ರೀರಂಗಪಟ್ಟಣದಲ್ಲಿ ರತ್ನಸಿಂಹಾಸನಾರೂಢರಾಗಿ ಸುಖದಿಂದ ಪೃಥ್ವೀಸಾಮ್ರಾಜ್ಯವೆಂಗೈಯುತಲಿರುವಲ್ಲಿ, ನವಾಬರ ಅಧಿಕಾರದ ಕೊನೆವರೆಗೆ ರಾಮೇಶ್ವರದ ಬಾಗಿಲಿಂದ ಸುತ್ತಲೂ ಕಲ್ಲಿಕೋಟೆ ಸಮುದ್ರ ಕೊಡೆಯಾಲ, ಕೃಷ್ಣಾನದಿ, ಗದ್ದವಾಲ, ನಲ್ಲೂರು, ಸರ್ವಾಪಲ್ಲಿ, ಮೈಲಾಪುರಿ, ಚನ್ನಪಟ್ಟಣದ ಸಮೀಪದವರೆಗೆ, ಮತ್ತು ಉತ್ತರದಲ್ಲಿ ಪುನಹೆಯ ಪರ್ಯಂತ ಈ ಮಧ್ಯರಾಷ್ಟ್ರದಲ್ಲಿ ಮೇಲೆ ಬರೆದಿರುವ ೫೬೩ ಗಡಿಗಳ ಒಟ್ಟು ಜೀರೀಜು ಎರಡು ಕೋಟಿಯು ಹತ್ತುಲಕ್ಷವರಹ. ಅಲ್ಲದೆ ಮೇಲೆ ಬರೆದಿರುವ ಸಂಸ್ಥಾನಿಕರು ಪಾಳಯಗಾರರು ಸಹ ೫೦ ಜನಗಳಿಂದ ಇಪ್ಪತ್ತುಲಕ್ಷವರಹ ಉಭಯವು ಸೇರಿ ಎರಡುಕೋಟಿ ಮೂವತ್ತುಲಕ್ಷ ವರಹಗಳು.

ನವಾಬರ ಮರಣ :—ಕಲ್ಲಿಕೋಟೆಯ ಪ್ರಾಂತ್ಯ ನಾಯಿಮೋರರ ಹಂಗಾಂ ಬಹಳವಾಗಿದೆ ಎಂಬ ವರ್ತಮಾನವನ್ನು ಕೇಳಿ, ನವಾಬರು ಆಕಾರ್ಣಿನಲ್ಲಿಯೇ ತಾವು ಇನ್ನು ಕೊಂಡು, ಆ ಕಲ್ಲಿಕೋಟೆ ಸೀಮೆಯನ್ನು ಬಂಬೋಬಸ್ತು ಮಾಡುವುದಕ್ಕಾಗಿ ಸಾ॥ ಶಕ ೧೭೦೪ನೆ (A.D. 1782) ಶುಭಕೃತ್ಸಂವತ್ಸರದ ಭಾದ್ರಪದ ಮಾಸದಲ್ಲಿ ತಮ್ಮ ಮಗ ಟೀಪೂ ಸುಲ್ತಾನನ ಸಂಗಡ ಕೆಲವು ಫೌಜನ್ನು ಕೊಟ್ಟು ಕಳುಹಿಸಿದರು. ಅನಂತರ ನವಾಬರಿಗೆ ಈ ಸಂ॥ ರದ ಕಾರ್ತಿಕಮಾಸದಲ್ಲಿ ಬೆನ್ನುಫಣಿ ಎಂಬ

ವ್ಯವಹಾರ್ಯವು ಸಂಭವಿಸಿ ಬಹಳ ಉಪದ್ರವವಾಗಿರುವ ಸಮಯದಲ್ಲಿ, ನವಾಬರು ಇನ್ನು ಮೇಲೆ ತನ್ನ್ಮಿ ದೇವ ನಿಲ್ಲುವುದಿಲ್ಲವೆಂದು ತಿಳಿದು, ತಮಗೆ ಆಪ್ತರಾದ ಅಬೂಮಹಮ್ಮದ್ ಮಿರ್ದಿ, ತೋಷೀಖಾನೆ ಕೃಷ್ಣರಾಯ, ಪೂರ್ಣಯ್ಯನವರು, ಅಂಜಿಕಾಮಯ್ಯ, ಮೀರಮಹಮ್ಮದ್‌ಸಾದಕ್ ಈ ೫ ಜನಗಳನ್ನು ಕರೆದು ಹೇಳಿದುದೇನೆಂದರೆ :—" ದೊರೆಗಳವರಾದ ಇಮ್ಮಡಿ ಕೃಷ್ಣರಾಜಒಡೆಯರವರು ಸ್ವಲ್ಪ ಚಾಕರಿಯಲ್ಲಿದ್ದ ನನಗೆ ಸರ್ವಾಧಿಕಾರವನ್ನು ಕೊಟ್ಟುದರಿಂದ, ನಾನು ನಮ್ಮಕ್ ಹರಾಮೆನೆನಿಸಿ ಕೊಳ್ಳದೆ, ಇದುವರೆಗೂ ಸ್ವಾಮಿಭಕ್ತಿಯಿಂದಲೇ ಚಾಕರಿಮಾಡಿಕೊಂಡು ಇರುತ್ತಿದ್ದೆನು. ಮುಂದೆ ನನ್ನಮಗ ಟೀಪೂಸುಲ್ತಾನನೂ ಇದೇ ಮೇರೆಗೆ ನಡೆದುಕೊಂಡರೆ ಈ ಅಧಿಕಾರವು ಅವನಿಗೆ ಇರುವುದು. ಮನುಷ್ಯಜನಗಳ ಮಾತುಗಳಿಂದಲೂ ಅವನ ಕೆಟ್ಟ ನಡತೆಯಿಂದಲೂ ಏನಾದರೂ ಹೆಚ್ಚು ಕಡಮೆಯಾಗಿ ನಡೆದರೆ, ಈ ಅಧಿಕಾರವು ತಪ್ಪಿ ಮುಂದೆ ಅವನು ಕೆಟ್ಟು ಹೋಗುವನು. ನೀವುಗಳು ಕಲ್ಲಿಕೋಟೆಗೆ ಹೋಗಿರುವ ನನ್ನ ಮಗನಾವ ಟೀಪೂಸುಲ್ತಾನನನ್ನು ಶೀಘ್ರವಾಗಿ ಕರೆಸಿ, ಈ ವಿವರವನ್ನು ಭಯಪಡದೆ ಅವನಿಗೆ ಹೇಳಿ, ಈ ಅಧಿಕಾರದಲ್ಲಿ ಅವನನ್ನು ಕುಳ್ಳಿರಿಸಿ ಜೀವನವನ್ನು ಮಾಡಿಕೊಂಡು ಹೋಗುವೆರಾಗಿ " ಎಂದು ರಹಸ್ಯದಲ್ಲಿ ಹೇಳಿ, ಈ ವಿಷಯಗಳನ್ನೆಲ್ಲಾ ವಿವರಿಸಿ ದೊರೆಗಳವರಿಗೆ ಅರ್ಜಿಯನ್ನು ಬರೆದರು. ಅನಂತರ ಬಹಳ ನಿಸ್ಸೂಕವಾಗಲು ನವಾಬರು ಶಾಲಿವಾಹನ ಶಕ ೧೭೦೪ನೇ (A.D. 1782) ಶುಭಕೃತು ಸಂವತ್ಸರದ ಮಾರ್ಗಶಿರ ಶುದ್ಧ ೩ ಶನಿವಾರ ಮಧ್ಯಾಹ್ನ ಆರ್ಕಾಡು ದಂಡಿನಲ್ಲಿ ತೀರಿಹೋದರು. ಬಳಿಕ ಮೇಲೆ ಬರೆದಿರುವ ೫ ಜನರು ಅತಿಜಾಗರೂಕರಾಗಿ ಈ ವರ್ತಮಾನವನ್ನು ಹೊರಗೆ ಹಬ್ಬಿಸದೆ, ರಹಸ್ಯವಾಗಿ ತಮ್ಮ ಹೆಸರಿನಿಂದ ಟೀಪೂಸುಲ್ತಾನನ ಬಳಿಗೆ ಜಾಗ್ರತೆಯಾಗಿ ಬರುವಂತೆ ಅರ್ಜಿಯನ್ನು ಬರೆದು ಸಾರಣೀಸವಾರನ ಸಂಗಡ ಕಳುಹಿಸಿಕೊಟ್ಟು, ನವಾಬರ ಶರೀರವನ್ನು ತೊಳೆಸಿ ಸಂದೂಕದಲ್ಲಿ ಇರಿಸಿ, ಹೊರಕ್ಕೆ ಕುರ್ಮಾನನೆ ಬಾರದಂತೆ ಗಂಧದಪುಡಿ ಪಚ್ಚ ಕರ್ಪೂರ ಪುಣಗು ಮುಂತಾದ ಪರಿಮಳ ದ್ರವ್ಯವೆನ್ನು ತುಂಬಿ, ಮೊಹರು ಮಾಡಿ, ಈ ವರ್ತಮಾನವು ದಂಡಿ

ನಲ್ಲಿ ಪ್ರಕಟವಾಗದಂತೆ, ಮೊದಲು ಕೋಲಾರದ ಒಳಿ ನವಾಬರ ತಂದೆ ತಾಯಿ ಅಣ್ಣ ಮುಂತಾದವರ ಗುಮ್ಮಸ್ ಆಗಿದ್ದ ಬಳಿಯಲ್ಲಿಯೇ ನವಾಬರು ತಮಗೆ ಗುಮ್ಮಸ್ ಮಾಡಿಕೊಂಡಿದ್ದ ಆಸ್ಥಳಕ್ಕೆ ತೆಗೆದುಕೊಂಡು ಹೋಗಿ, ಆಬಳಿಯಲ್ಲಿ ಇಟ್ಟುಕೊಂಡಿದ್ದು ಮುಂದೆ ಅಪ್ಪಣೆಬಂದಂತೆ ನಡೆದು ಕೊಳ್ಳುವರಾಗಿ ಎಂದು ಹೇಳಿ ೫೦೦ ಕುದುರೆ ಸವಾರರು, ೧,೦೦೦ ಬಾರಿನವರು ಇವರೊಡನೆ ಬಂದೋಬಸ್ತಾಗಿ ಪೆಟ್ಟಿಗೆಯನ್ನು ಕಳುಹಿಸಿ ಕೊಟ್ಟರು. ಅನಂತರ ಪ್ರತಿನಿತ್ಯದಲ್ಲಿಯೂ ಆ ಐದು ಜನರೂ ನವಾಬರ ಡೇರೆಗೆ ಬಂದು, ಐಕಮತ್ಯದಿಂದ ಅವರು ಇದ್ದಂತೆಯೇ ಸಕಲ ಕಾರ್ಯ ವನ್ನೂ ಜಾಗರೂಕರಾಗಿ ನಡೆಯಿಸುತಲಿರುವ ಸಮಯದಲ್ಲಿ, ಬಾರಗಿರ ಕಚೇರಿ ಬಕ್ಷಿ ಮಹಮ್ಮದ್ ಅಮೀನನು ಚನ್ನಪಟ್ಟಣಕ್ಕೆ ಪಿತೂರಿ ಕಾಗದ ವನ್ನು ಬರೆದುದಲ್ಲದೆ, ನವಾಬರಿಗೆ ಕುಮಕಿಯಾಗಿ ಬಂದಿದ್ದ ಪರಾಷೀಸ ಸರದಾರರ ಸಂಗಡ "ನನಗೆ ಈ ದವೆಲತ್ತನ್ನು ಕೊಡಿಸಿದರೆ ನಿಮಗೆ ನಮ್ಮ ಈ ಸೀಮೆಯಲ್ಲಿ ರೂಪಾಯಿಗೆ ಆರಾಣೆಯ ಪ್ರಕಾರ ಕೊಡುತ್ತೇನೆ" ಎಂದು ಹೇಳಿದ ವರ್ತಮಾನವು ಅಬೂಮಹಮ್ಮದ್ ಮುಂತಾದ ೫ ಜನಕ್ಕೂ ತಿಳಿಯಲಾಗಿ ಅವನನ್ನು ಹಿಡಿತರಿಸಿ ಬೇಡಿ ಚಡಾಯಿಸಿ ಸಾವೆಂದಿ ದುರ್ಗಕ್ಕೆ ರವಾನೆ ಮಾಡಿದರು.

ಟಿಪ್ಪೂಸುಲ್ತಾನನಿಗೆ ಅಧಿಕಾರ ಬಂದದ್ದು :—ಟೀಪ್ಪೂಸುಲ್ತಾನನು ಕಲ್ಲೀ ಕೋಟೆಯ ಪ್ರಾಂತದಿಂದ ಶೀಘ್ರವಾಗಿ ಬಂದನಂತರ ಅಬೂಮಹಮ್ಮದ್ ಮುಂತಾದ ೫ ಜನರೂ ನವಾಬರು ತೀರಿಹೋದ ವರ್ತಮಾನವನ್ನು ರಹಸ್ಯವಾಗಿ ಹೇಳಿ, ವ್ಯಸನವನ್ನು ಸಮಾಧಾನಪಡಿಸಿ, ತಾವು ನಡೆಸಿದ ಕಾರ್ಯಗಳನ್ನೂ ನವಾಬರು ಹೇಳಿದ್ದ ಮಾತುಗಳನ್ನೂ ತಿಳಿಸಿ, ಆಕಾರ್ಯದ ದಂಡಿನಲ್ಲಿ ಇರುತಲಿರುವ ಸಮಯವಲ್ಲಿ, ದೊರೆಗಳವರ ಸನ್ನಿಧಿಯಿಂದ ಬಂದ ನಿರೂಪವನ್ನು ನೋಡಿ ಟೀಪ್ಪೂಸುಲ್ತಾನನು ತನ್ನ ಅಧಿಕಾರ ವನ್ನು ಸ್ಥಿರಪಡಿಸಿಕೊಂಡು, ಅಲ್ಲಿಯ ಕಾರ್ಯಗಳನ್ನು ಬಂದೋಬಸ್ತು ಮಾಡಿ, ಸೇನಾಸಮೇತನಾಗಿ ಶ್ರೀರಂಗಪಟ್ಟಣಕ್ಕೆ ಬಂದು, ದೊರೆ ಗಳವರ ಭೇಟಿಯನ್ನು ಮಾಡಿಕೊಂಡು ಸನ್ನಾನವೆನ್ನು ಪಡೆದು, ಕೋಲಾರಕ್ಕೆ ಕಳುಹಿಸಿದ್ದ ತನ್ನ ತಂದೆಯ ಶರೀರವನ್ನು ಶ್ರೀರಂಗಪಟ್ಟಣಕ್ಕೆ

ತರಿಸಿ, ಎರಡು ಹೊಳಗೆಗಳು ಕೂಡಿರುವ ಸ್ಥಳದ ಲಾಲಬಾಗ್ ತೋಟದಲ್ಲಿ ತಮ್ಮ ಜಾತಿ ಸಂಪ್ರದಾಯದ ಮೇರೆಗೆ ಗೋರಿಯನ್ನು ಮಾಡಿಸಿ, ಆ ಸ್ಥಳದಲ್ಲಿ ಪ್ರತಿನಿತ್ಯದಲ್ಲಿಯೂ ಫಕೀರರುಗಳಿಗೆ ಅನ್ನೋದಕಾದಿಗಳನ್ನು ಕೊಡುವಂತೆಯೂ ೪ ಮೇಳಯುಲ್ಲಿ ನೌಬತ್ತು ನಡೆಯಂತೆಯೂ ನಿಬಂಧನೆ ಮಾಡಿ, ತನ್ನ ತಂದೆಯಂತೆ ಸೀಮೆಯ ವಿಚಾರಣೆಯನ್ನು ಮಾಡುತ್ತಿದ್ದನು. ಆ ಸಮಯದಲ್ಲಿ ದೊರೆಗಳವರ ಮಾತೃಶ್ರೀಯವರಾದ ಲಕ್ಷ್ಮಮ್ಮಣಿಯವರು ಅಪ್ಪಣೆಕೊಟ್ಟು ಕಳುಹಿಸಿದಂತೆ ದೊರೆಗಳವರಿಗೆ ಎರಡು ವಿವಾಹಗಳನ್ನು ಮಾಡಿಸಿ, ಕೆಲವುದಿವಸ ವಿಹಿತವಾಗಿ ಸಕಲಕಾರ್ಯಗಳನ್ನೂ ಜಾಗರೂಕನಾಗಿ ನಡೆಸುತ್ತಿದ್ದನು. ಹೀಗಿರುವಲ್ಲಿ ಎರಡನೆಯ ಪತ್ನಿಯವರಾದ ಕೆಂಪದೇವಾಜಮ್ಮಣಿಯವರು ಒಬ್ಬ ಪುತ್ರರನ್ನು ಪಡೆದು ಆ ಪುತ್ರರೊಡನೆ ತೀರಿಹೋಗಲು, ದೊರೆಗಳವರು ಬಹಳ ವ್ಯೆಸನ ಪಡುತ್ತಲಿರುವ ಕಾಲದಲ್ಲಿ, ಜನರುಗಳು ಬಿನ್ನವಿಸಿಕೊಂಡಂತೆ ಮೇಲೆ ಬರೆದಿರುವ ಪಂಚಕಲ್ಯಾಣವೆನ್ನು ಮಾಡಿಕೊಂಡು ಪತ್ನಿಯರುಗಳೊಡನೆ ಭೋಗಭಾಗ್ಯವೆನ್ನು ಅನುಭವಿಸುತ್ತ ಸುಖದಿಂದ ಇರುತ್ತಿದ್ದರು.

ಟೀಪೂಸುಲ್ತಾನನ ಕೆಟ್ಟನಡತೆ :—ಆಗ ಸರ್ವಾಧಿಕಾರವನ್ನು ಮಾಡುತ್ತಿದ್ದ ಟೀಪೂಸುಲ್ತಾನನು ಕೆಲವು ದಿವಸ ತನ್ನ ತಂದೆ ನಡೆದುಕೊಂಡ ಮೇರೆಗೆ ನವರಾತ್ರಿ ಮುಂತಾದ ಉತ್ಸವಗಳಲ್ಲಿ ದೊರೆಗಳವರ ಸನ್ನಿಧಿಯಲ್ಲಿ ಸ್ವಾಮಿಭೃತ್ಯನ್ಯಾಯದಿಂದ ನಡೆದುಕೊಳ್ಳುತ್ತಿದ್ದನು. ಕೆಲವು ದಿವಸದ ಮೇಲೆ ತನ್ನ ತಂದೆ ಹೇಳಿದ್ದ ಕೀರ್ತಿಯನ್ನುಂಟುಮಾಡತಕ್ಕ ಮಾತುಗಳನ್ನೆಲ್ಲಾ ಮರೆತು, ತಾನು ಮುಂದೆ ಕೆಟ್ಟುಹೋಗತಕ್ಕ ಬಗೆಯನ್ನು ತಿಳಿದುಕೊಳ್ಳದೆ, ಯುಕ್ತಾಯುಕ್ತ ವಿಚಾರವನ್ನು ಮಾಡದೆ, ಬಲೈಶ್ವರ್ಯಗಳಿಂದ ಮತ್ತನಾಗಿ, ದುರ್ಜನರ ದುರಾಲೋಚನೆಗೆ ಒಳಗಾಗಿ, ಸಜ್ಜನರನ್ನು ಬಾಧೆಪಡಿಸಿ, ವರ್ಣಾಶ್ರಮಧರ್ಮಗಳನ್ನು ಕೆಡಿಸುತ್ತ, ಉತ್ತಮರಾದ ಸಕಲಜಾತಿ ಜನರುಗಳನ್ನೂ ತನ್ನ ಜಾತಿಗೆ ಸೇರಿಸಿಕೊಳ್ಳಬೇಕೆಂದು ಕೆಲವು ಜನಗಳನ್ನು ಚೀಲಿಯವರನ್ನಾಗಿ ಮಾಡಿಕೊಂಡು, ನೇವದಾಯ ಬ್ರಾಹ್ಮಣಾಯ ಸೀಮೆಗಳಲ್ಲಿರುವ ದೇವರುಗಳ ವಸ್ತ್ರಾಭರಣಗಳನ್ನು ತೆಗೆದುಕೊಂಡು, ದೇವರುಗಳ ಅಂಗಭಂಗ

ಗಳನ್ನು ಮಾಡಿ, ಗುಡಿ ಗೋಪುರ ತಟಾಕಾರಾಮೆ ಕಟ್ಟಿ ಕಾಲುವೆ ಸೇತುವೆ ಸೋಪಾನ ಮುಂತಾದ ಅನೇಕ ಧರ್ಮಕಾರ್ಯಗಳನ್ನು ನಾಶ ಮಾಡಿದನು. ದುಷ್ಟರಾದ ತನ್ನ ಜಾತಿಯ ಜನರಿಗೇ ಪ್ರಾಬಲ್ಯವನ್ನು ಕೊಟ್ಟು, ಅರಸುಗಳು ಮುಂತಾದ ಉತ್ತಮ ವರ್ಣಾಶ್ರಮ ಜನರು ಗಳ ಗ್ರಾಮಭೂಮಿ ಸಂಬಳ ಮೊದಲಾದ ಜೀವನಗಳನ್ನು ತಪ್ಪಿಸಿ, ದೇಶಭ್ರಷ್ಟರನ್ನಾಗಿ ಮಾಡಿದನು. ತನ್ನಲ್ಲಿ ಅಧಿಕಾರ ಮಾಡುತಲಿರುವ ಜನರುಗಳ ಅಪರಾಧಾನುಗುಣವಾಗಿ ಶಿಕ್ಷೆಯನ್ನು ಮಾಡಿಸದೆ, ಅಧಿಕವಾಗಿ ಅವರುಗಳಿಗೆ ಅಂಗಭಂಗಗಳನ್ನೂ ಪ್ರಾಣಾಂತಶಿಕ್ಷೆಗಳನ್ನೂ ಮಾಡಿಸು ತ್ತಿದ್ದನು. ಹೀಗೆ ದುಷ್ಟಜನಗಳನ್ನು ಪ್ರಾಬಲ್ಯಕ್ಕೆ ತಂದು, ಸಜ್ಜನರಿಗೆ ಅನೇಕ ಬಾಧೆಗಳನ್ನುಂಟುಮಾಡಿ, ದೊರೆಗಳವರ ಸಿಂಹಾಸನದಂತೆ ಅನೇಕ ನವರತ್ನಗಳಿಂದ ವ್ಯಾಘ್ರಪೀಠವನ್ನು ಮಾಡಿಸಿ, ಅದರಮೇಲೆ ಕುಳಿತುಕೊಂಡು ತಾನೇ ಬಾದಷಾಹನೆನಿಸಿಕೊಳಬೇಕೆಂಬ ಕುತೂಹಲ ದಿಂದ ಇರುತ್ತಿದ್ದನು.

ಶಿವಪ್ಪಚಾಮರಾಜಒಡೆಯರವರು ಕೋಟಿಪಂಚಾಕ್ಷರೀ ಪುನಶ್ಚರಣೆಮಾಡಿದ್ದು. ಮಹಾತ್ಮರಾದ ದೊರೆಗಳವರು ಇವನ ದುಶ್ಚರಿತ್ರೆಯನ್ನೂ ಜನರುಗಳ ಕ್ಷೋಭೆಯನ್ನೂ ನೋಡಿ, ಬಹಳ ಚಿಂತಾಕ್ರಾಂತರಾಗಿ ಇವನ ನಾಶವನ್ನು ಮಾಡುವುದಕ್ಕೆ ಕಾರಣನಾದ ಶ್ರೀಕೃಷ್ಣನಂತೆ ಇರುವ ಪುತ್ರ ನನ್ನು ಪಡೆಯಬೇಕೆಂದು ಶ್ರೀಕಂಠೇಶ್ವರಸ್ವಾಮಿಯವರನ್ನು ಕುರಿತು ಕೋಟಿಪಂಚಾಕ್ಷರೀಜಪ ತರ್ಪಣ ಹೋಮ ಮುಂತಾದ ಕಾರ್ಯಗಳನ್ನು ಮಾಡಿದರು. ಅನಂತರ ಪರಮೇಶ್ವರನು ಸಂತುಷ್ಟನಾಗಿ, ಒಬ್ಬ ವಿವೆಯೋಗಿಯ ರೂಪವನ್ನು ತಾಳಿ, ದೊರೆಗಳವರ ಸನ್ನಿಧಿಗೆ ಬಂದು, ಪ್ರಾಕೃತಜನರಂತೆ ಫಲಮಂತ್ರಾಕ್ಷತೆಗಳನ್ನು ಕೊಟ್ಟು, "ನೀವು ಮಾಡಿದ ಕೋಟಿಪಂಚಾಕ್ಷರೀಜಪದಿಂದ ಶ್ರೀಕಂಠೇಶ್ವರನು ಪ್ರಸನ್ನ ನಾದನು. ನಿಮ್ಮ ಕುಲದೇವತೆಯಾದ ಚಾಮುಂಡೇಶ್ವರಿಯನ್ನು ಕುರಿತು ನವಾಕ್ಷರೀಮಂತ್ರ ಪುನಶ್ಚರಣೆಯನ್ನು ಮಾಡಿದರೆ, ಆ ರಾಜರಾಜೇಶ್ವರಿಯು ಪ್ರಸನ್ನಳಾಗಿ ಅಧರ್ಮಗಳನ್ನು ನಾಶಮಾಡಿ, ಧರ್ಮಾಭಿವೃದ್ಧಿಯನ್ನು ಮಾಡುವ ಪುತ್ರನನ್ನು ಕೊಡುವಳು" ಎಂದು ಹೇಳಿ ದೊರೆಗಳವರಿಗೆ

ನವಾಕ್ಷರೀ ಮಂತ್ರೋಪದೇಶವನ್ನು ಮಾಡಿದನು. ಅನಂತರ ದಂಪತಿಗಳು ೧೦ ದಿವಸ ಬಲುನೇಮದಿಂದ ಇದ್ದು, ಹೋಮಶೇಷಪಾಯಸವನ್ನೇ ಬಿಟ್ಟಿಸಿಕೊಂಡು, ಜಪಹೋಮಗಳನ್ನು ಸಾಂಗವಾಗಿ ಬೆಳಸಿದ ಬಳಿಕ ಪೂರ್ಣಾಹುತಿಕಾಲದಲ್ಲಿ ಅಗ್ನಿಜ್ವಾಲಾ ಮಧ್ಯದಲ್ಲಿ ಶಿಶುಸಹಿತವಾದ ಸುವರ್ಣಾದ ತೊಟ್ಟಿಲನ್ನು ಕಂಡು ಅಲ್ಲಿದ್ದ ಜನರುಗಳು ಅತ್ಯಂತ ಆಶ್ಚರ್ಯಪಡುತ್ತಿರಲು, ಶಿವಯೋಗಿಯು ಆ ದಂಪತಿಗಳನ್ನು ಕುರಿತು "ನಿಮ್ಮಿಬ್ಬರ ಪುಣ್ಯವೆಂಬ ಕಲ್ಪವೃಕ್ಷವು ಅಮೂಲಾಗ್ರವಾಗಿ ಫಲಿಸಿತಾದ ಕಾರಣ, ಶ್ರೀಚಾಮುಂಡೇಶ್ವರೀಶ್ರೀಕಂಠೇಶ್ವರರ ಅನುಗ್ರಹಬಲದಿಂದ, ಪೂರ್ವದಲ್ಲಿ ಶ್ರೀಕೃಷ್ಣನು ವಸುದೇವ ದೇವಕೀದೇವಿಯರ ಗರ್ಭದಲ್ಲಿ ಪುಟ್ಟಿದಂತೆ ನಿಮ್ಮ ಗರ್ಭದಲ್ಲಿ ಮಹಾವಿಷ್ಣುವಿನ ಅಂಶದಿಂದ ಒಬ್ಬ ಪುತ್ರನು ಜನಿಸುವನು. ಮಹಾತ್ಮನಾದ ಆ ಪುತ್ರನೇ ನಿಮ್ಮ ಶತ್ರುವನ್ನು ಶೀಘ್ರದಲ್ಲಿ ಸಂಹರಿಸಿ, ಶಿಥಿಲವಾದ ಧರ್ಮಗಳನ್ನೆಲ್ಲಾ ಸ್ಥಿರಪಡಿಸುವನು" ಎಂದು ಹೇಳಿ, ಹೋಮಶೇಷವಾದ ಪರಮಾನ್ನವನ್ನು ಪ್ರಾಶನಮಾಡಿಸಿ, ಫಲಮಂತ್ರಾಕ್ಷತೆಗಳನ್ನು ಕೊಟ್ಟು, ಆಶೀರ್ವಾದಮಾಡಿ, ಆಕ್ಷಣದಲ್ಲಿಯೇ ತೆರಳಿದನು. ಬಳಿಕ ಆತನಿಗೆ ಪೂಜೆಯನ್ನು ಮಾಡಬೇಕೆಂಬುದಾಗಿ ಎಲ್ಲಾ ಕಡೆಯಲ್ಲಿಯೂ ಹುಡುಕಿಸಿ ಎಲ್ಲಿಯೂ ಸಿಕ್ಕದೆ ಇರಲು, ಆ ದಂಪತಿಗಳಿರ್ವರೂ ಈತನೇ ಪ್ರತ್ಯಕ್ಷನಾದ ಶ್ರೀಕಂಠೇಶ್ವರನೆಂದು ನಿಶ್ಚಯಿಸಿ, ಆತನ ಕಟಾಕ್ಷಕ್ಕೆ ಪಾತ್ರರಾದ ತಾವು ಕೃತಾರ್ಥರಾದೆವೆಂದು ತಿಳಿದು, ಅತ್ಯಂತನಿಯಮದಿಂದ ಅಲ್ಪಾಹಾರ ಮುಂತಾದ ವ್ರತಗಳನ್ನು ಆಚರಿಸುತ್ತ ಸಂತೋಷದಿಂದ ಇದ್ದರು.

ಆಳಿದ ಮಹಾಸ್ವಾಮಿಯವರಾದ ನಂಜರಾಜವರ್ಯಾಭಿಧ ಮುಮ್ಮಡಿ ಕೃಷ್ಣರಾಜ ಒಡೆಯರವರ ಜನನ:—ಹೀಗಿರುವಲ್ಲಿ ಕೆಂಪನಂಜಮ್ಮಣಿ ಯವರು ಶುಭಮುಹೂರ್ತದಲ್ಲಿ ಗರ್ಭವನ್ನು ಧರಿಸಲು, ಶುಭಕರವಾದ ಆ ಗರ್ಭವು ಕ್ರಮದಿಂದ ಅಭಿವೃದ್ಧಿಯನ್ನು ಪಡೆಯುತಿರುವ ಸಮಯದಲ್ಲಿ, ದೊರೆಗಳವರು ಆ ವೃತ್ತಾಂತವನ್ನು ಕೇಳಿ ಸಂತೋಷಪಟ್ಟು, ಆಯಾಕಾಲಕ್ಕೆ ಯೋಗ್ಯವಾದ ಉತ್ಸವಗಳನ್ನು ಮಾಡಿಸುವಂತೆ ಆಜ್ಞಾಪಿಸಿದರು. ಬಳಿಕ ದೊರೆಗಳವರ ಪತ್ನಿಯರೆಲ್ಲರೂ ಬಹಳ ಸಂತೋಷ

ಪಟ್ಟು, ೫ನೆಯ ತಿಂಗಳಲ್ಲಿ ಮೊಗ್ಗುಗಳನ್ನು ಮುಡಿಸಿ, ೫ನೆಯ ತಿಂಗಳಲ್ಲಿ ನವರತ್ನಖಚಿತವಾದ ಬಳೆಗಳನ್ನು ತೊಡಿಸಿ, ೭ನೆಯ ತಿಂಗಳಲ್ಲಿ ಅಷ್ಟಮಿಯ ಪ್ರಸ್ತುತವೆನ್ನು ಮಾಡಿಸಿ, ಸುವಾಸಿನಿಯರುಗಳಿಂದೊಡಗೂಡಿ ಬಯಕೆಯ ಊಟವೆನ್ನು ಮಾಡಿಸಿದ ಬಳಿಕ ದೊರೆಗಳವರು ೯ನೆಯ ತಿಂಗಳಲ್ಲಿ ಪುಂಸವನ ಸೀಮಂತಗಳನ್ನು ಮಾಡಲು, ಈ ಪರಿಯಾಗಿ ೯ ತಿಂಗಳು ಬೆಳೆದು ೧೦ನೆಯ ತಿಂಗಳು ಪ್ರಾಪ್ತವಾಗಲು, ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನಶಕ ವರ್ಷಂಗಳು ೧೭೧೫ನೇ (A.D. 1794) ಆನಂದನಾಮಸಂವತ್ಸರದ ದಕ್ಷಿಣಾಯನ ಗ್ರೀಷ್ಮಋತುವಾದ ಆಷಾಢಮಾಸದ ಶ್ರವಣಾನಕ್ಷತ್ರ ಪ್ರೀತಿಯೋಗ ತೈತುಲಾಕರಣಗಳಿಂದ ಬೆಡಗೂಡಿರುವ ಬಹುಳ ೭ ಚಂದ್ರವಾರ ಹಗಲು ೧೦॥ ಗಳಿಗೆಗೆ ಸಲ್ಲುವ ಕನ್ಯಾಲಗ್ನವಲ್ಲಿ, ಲಗ್ನಕ್ಕೆ ಧನಸ್ಥಾನದಲ್ಲಿ ಅಂಗಾರಕನು, ಭ್ರಾತೃಸ್ಥಾನದಲ್ಲಿ ಗುಳಿಕನು, ಸುಖಸ್ಥಾನದಲ್ಲಿ ಬೃಹಸ್ಪತಿಯು, ಪುತ್ರಸ್ಥಾನದಲ್ಲಿ ಕೇತು ಚಂದ್ರರು, ನವಮಸ್ಥಾನದಲ್ಲಿ ಶನಿಯು, ಲಾಭಸ್ಥಾನವಲ್ಲಿ ಬುಧರಾಹುಗಳಿಂದೊಡಗೂಡಿರುವ ಸೂರ್ಯನು, ದ್ವಾದಶಸ್ಥಾನದಲ್ಲಿ ಶುಕ್ರನು ಇರಲಾಗಿ, ಚಂದ್ರವರಾಮೆಳ್ಯದಲ್ಲಿ ಸಾತ್ವಿಕಮುಹೂರ್ತದಲ್ಲಿ, ತೇಜೋರಾಶಿಯಾದ ಚಕ್ರವರ್ತಿಲಕ್ಷಣಗಳಿಂದೊಡಗೂಡಿರುವ ಶ್ರೀಕೃಷ್ಣಾಂಶೋತ್ಪನ್ನರಾದ ಪುತ್ರರು, ಪೂರ್ವದಲ್ಲಿ ದಶರಥಮಹಾರಾಯನ ಪತ್ನಿಯಾದ ಕೌಸಲ್ಯಾದೇವಿಯ ಗರ್ಭದಲ್ಲಿ ಶ್ರೀರಾಮಚಂದ್ರನು ಅವತರಿಸಿದಂತೆ, ಶ್ರೀಚಾಮರಾಜಬಿಡೆಯರವರ ಧರ್ಮಪತ್ನಿಯವರಾದ ಕಂಪನಂಜಮ್ಮಣ್ಣಿಯವರ ಗರ್ಭಸುಧಾಂಬುಧಿಯಲ್ಲಿ ಜನಿಸಿದರು. ಆಗ ದೊರೆಗಳವರು ಅತ್ಯಂತಸಂತೋಷಪಟ್ಟು ತಮಗೆ ಪುತ್ರೋತ್ಪವವಾಯಿತೆಂಬ ವರ್ತಮಾನವನ್ನು ಟೀಪೂಸುಲ್ತಾನನಿಗ ಹೇಳಿ ಕಳುಹಿಸಲು, ಅವನು ಈ ವೃತ್ತಾಂತವನ್ನು ಕೇಳಿ ಕಿಂತಾಕ್ರ್ರಾಂತನಾದರೂ, ಸಂತೋಷವನ್ನು ನಟಿಸುತ್ತ, ಸಂಪ್ರದಾಯಪ್ರಕಾರ ಖಿವಂಗಿಗಳನ್ನು ಹಾರಿಸುವಂತೆಯೂ ಬಂಡಿಗಳಮೇಲೆ ಸಕ್ಕರೆಯನ್ನು ತುಂಬಿ ಬೀದಿಬೀದಿಯಲ್ಲಿ ಹಂಚುವಂತೆಯೂ ಆಜ್ಞಾಪಿಸಿದನು. ದೊರೆಗಳವರು ಸ್ನಾನವನ್ನು ಮಾಡಿ ಅಲಂಕಾರಯುಕ್ತರಾಗಿ, ಜೋಯಿಸರು ತಂದು ಒಪ್ಪಿಸಿದ ಜನ್ಮಪತ್ರಿಕ

ಯನ್ನು ಪೂಜಿಸಿ, ಪರ್ಜನ್ಯದಾನ ಬೀಜದಾನ ಗೋದಾನ ವೆಸ್ತ್ರದಾನ ಗಳನ್ನು ಮಾಡಿ, ಫಲತಾಂಬೂಲದಕ್ಷಿಣೆಗಳನ್ನು ಕೊಡಿಸಿ, ಅಧಿಕಾರಸ್ಥರು ಒಪ್ಪಿಸಿದ ಕೈಗಾಣಿಕೆಯನ್ನು ಕೈಕೊಂಡು, ಶಿಶುವಿಗೆ ಮೆಧುಪ್ರಾಶನ ವನ್ನು ಮಾಡಿಸಿ, ಜನ್ಮಪತ್ರಿಕೆಗೆ ಬೀದಿಗಳಲ್ಲಿ ಮೆರೆವಣಿಗೆ ಮಾಡಿಸಿ, ೭ನೆಯ ದಿವಸದಲ್ಲಿ ಕಾಲಂದಿಗೆಯ ಪಾಸ್ತ್ರವನ್ನು ನೆರವೇರಿಸಿ, ೧೦ನೆಯ ದಿವಸದಲ್ಲಿ ಶ್ರೀಕಂಠೇಶ್ವರನ ಅನುಗ್ರಹದಿಂದ ಹುಟ್ಟಿದ ಈ ಶಿಶುವಿಗೆ ಜಾತಕರ್ಮ ಪೂರ್ವಕವಾಗಿ ನಂಜರಾಜಬಿಡೆಯರವರೆಂಬದಾಗಿ ನಾಮಕರಣವನ್ನು ಮಾಡಿದರು. ಬಳಿಕ ಆ ದಿನದ ರಾತ್ರಿಯಲ್ಲಿ ಕೆಂಪನಂಜಮ್ಮಣಿ ಯವರು ಸುವಾಸಿನಿಯರುಗಳಿಂದೊಡಗೂಡಿ ಕರ್ಣವೇಧೆಯನ್ನು ಮಾಡಿಸಿ, ಮೆಗುವೆನ್ನು ರತ್ನಮಯವಾದ ತೊಟ್ಟಿಲಲ್ಲಿ ಮಲಗಿಸಿ, ಕುಲದೇವತೆಯಾದ ಶ್ರೀಚಾಮುಂಡೇಶ್ವರಿ ಅಮ್ಮನವರ ತಾಳಿ ಮುಂತಾದ ದೇವತಾ ತಾಳಿ ಗಳನ್ನು ಸಂರಕ್ಷಣಾರ್ಥವಾಗಿ ಶಿಶುವಿಗೆ ಧಾರಣಮಾಡಿಸಿ, ಈಪರಿಯಾಗಿ ಲೋಕಸಂರಕ್ಷಣೆಗೆ ಕಾರಣರಾದ ಪುತ್ರರನ್ನು ಪ್ರಸವಿಸಿ ಕೃತಾರ್ಥರಾಗಿ ಈ ಆನಂದ ಸಂವತ್ಸರದ ಶ್ರಾವಣಶುದ್ಧ ೧೦ಲ್ಲಿ ಪಾರ್ವತೀದೇವಿಯಲ್ಲಿ ಐಕ್ಯವನ್ನು ಪಡೆದರು. ಅನಂತರ ದೊರೆಗಳವರಾದ ಚಾಮರಾಜ ಒಡೆಯರವರು ತಮ್ಮ ಸ್ವೀಕರ್ತೃಮಾತೃಶ್ರೀ ಲಕ್ಷಮ್ಮಣಿಯವರಿಗೆ ಅರಮನೆಯ ಯಾಜಮಾನ್ಯ ಮುಂತಾದುದನ್ನು ನೋಡಿಕೊಳ್ಳಬೇಕೆಂದು ವಿನ್ನವಿಸಿ ನೇಮಕಮಾಡಿದರು. ಕೆಂಪನಂಜಮ್ಮಣ್ಣಿಯವರ ಸವತಿ ಯರಾದ ಹೊನ್ನಾಜಮ್ಮಯ್ಯನವರ ಉದರದಲ್ಲಿ ಇದೇ ಆಷಾಢ ಮಾಸದಲ್ಲಿ ಹುಟ್ಟಿದ ಗಂಡುಶಿಶುವು ತತ್ಕಾಲದಲ್ಲಿಯೇ ತೀರಿಹೋಯಿತು. ಅದೇ ಪರಿಯಾಗಿ ಚಿಕ್ಕುವಾಜಮ್ಮಣ್ಣಿಯವರ ಗರ್ಭದಲ್ಲಿ ಜನಿಸಿದ ಪುತ್ರರು ೩ ದಿವಸವಿದ್ದು ತೀರಿಹೋದರು.

ಅನಂತರ ಈ ಚಿಕ್ಕುವಾಜಮ್ಮಣ್ಣಿಯವರು ತಮಗೆ ಒದಗಿದ ವೈಸನವನ್ನು ಬಿಟ್ಟು, ಲೋಕಸಂರಕ್ಷಣಾರ್ಥವಾಗಿ ವಸುದೇವ ದೇವಕೀ ದೇವಿಯರ ಉದರದಲ್ಲಿ ಅವತರಿಸಿದ ಶ್ರೀಕೃಷ್ಣನ ಅಂಶವಿಂದ ಕೆಂಪ ನಂಜಮ್ಮಣ್ಣಿ ಯವರ ಗರ್ಭಸುಧಾಂಬುಧಿಯಲ್ಲಿ ಜನಿಸಿ, ಪ್ರವರ್ಧಮಾನ ರಾಗುತಲಿರುವ ಈ ಬಾಲಕರನ್ನು ಅತ್ಯಂತ ಪ್ರೇಮದಿಂದ ಸಾಕುತ್ತಿದ್ದರು.

ಆ ಸಮಯದಲ್ಲಿ ದೊರೆಗಳವರು ಆಯಾಕಾಲದಲ್ಲಿ ಈ ಶಿಶುವಿಗೆ ಸೂರ್ಯ ಚಂದ್ರ ಗೋದರ್ಶನವನ್ನು ಅನ್ನಪ್ರಾಶನವನ್ನು ಸಹ ಮಾಡಿಸಿ, ವರ್ಷ ವರ್ಧನ್ತೀ ಮಹೋತ್ಸವಕಾಲದಲ್ಲಿ ಮಂಗಳಸ್ನಾನವನ್ನು ಮಾಡಿಸಿ, ನವ ಚಿರಂಜೀವಿಪ್ರತಿಮೋದಾನ ಮುಂತಾದ ಶುಭಕಾರ್ಯಗಳನ್ನು ನೆರವೇರಿಸಿ, ನೂತನವಸ್ತ್ರಾಭರಣ ಗಂಧಪುಷ್ಪಮೊದಲಾದ ಮಂಗಳದ್ರವ್ಯಗಳ ಧಾರಣೆಯನ್ನು ತಾಂಬೂಲ ಚರ್ವಣವನ್ನು ರತ್ನದರ್ಪಣದರ್ಶನವನ್ನು ಸಹ ಮಾಡಿಸಿ, ಅಧಿಕಾರಸ್ಥರುಗಳಿಂದ ಕೈಗಾಣಿಕೆಗಳನ್ನು ಒಪ್ಪಿಸಿ, ದೇವರ ದರ್ಶನವನ್ನು ಮಾಡಿಸಿ, ಶ್ರೀರಂಗಪಟ್ಟಣದ ರಾಜಬೀದಿಯಲ್ಲಿ ಮಹೋತ್ಸವವನ್ನು ಬೆಳಸಿದರು. ಆ ಬಳಿಕ ಈ ಬಾಲಕರು ಶ್ರೀಕೃಷ್ಣನಂತೆ ಬಾಲಲೀಲೆಗಳನ್ನಾಡುತ್ತ ಶುಕ್ಲಪಕ್ಷದ ಬಿದಿಗೆಯ ಚಂದ್ರನಂತೆ ಕಲಾಭಿವೃದ್ಧಿಯನ್ನು ಹೊಂದುತ್ತ, ಜನರುಗಳನ್ನೆಲ್ಲಾ ಸಂತೋಷಪಡಿಸುತಲಿರುವ ಸಮಯದಲ್ಲಿ, ಟೀಪೂಸುಲ್ತಾನನು ಇದನ್ನು ಕೇಳಿ ದೊರೆಗಳವರಲ್ಲಿ ಅತ್ಯಂತದ್ವೇಷವನ್ನು ಬೆಳಸಿದನು.

ಖಾಸಾ ಚಾಮರಾಜ ಒಡೆಯರವರ ನಿರ್ಯಾಣ:—ದೊರೆಗಳವರು ಅವನ ಗೂಢಾಭಿಪ್ರಾಯವನ್ನು ತಿಳಿದು ತಮಗೆ ಬದಗಿರತಕ್ಕ ಕಷ್ಟಗಳನ್ನು ನೋಡಿ ಈ ಸಮಯದಲ್ಲಿ ಈ ಸುಲ್ತಾನನನ್ನು ನಿಗ್ರಹಿಸುವುದಕ್ಕೆ ಮರ್ಮಜ್ಞರಾದ ಹೂಣದೇಶಾಧಿಪತಿಗಳಾದ ಸರದಾರರುಗಳು ಸಮರ್ಥರಾಗಿರುವರಾದುದರಿಂದ, ಅವರಿಂದಲೇ ಇವನಿಗೆ ನಿಗ್ರಹವಮಾಡಿಸಬೇಕೆಂದು ತಮ್ಮ ಮಾತೃಶ್ರೀಯವರ ಸಂಗಡ ಆಲೋಚಿಸಿ, ಅವರ ಸಮ್ಮತಕ್ಕೆ ತಮ್ಮ ಪೂರ್ವಿಕರಾದ ದೊರೆಗಳವರ ವಂಶಪಾರಂಪರ್ಯವನ್ನು ತಾಳಿಸಿ "ನಮ್ಮ ಚಾಕರನಾದ ಈ ಟೀಪೂಸುಲ್ತಾನನೆಂಬವನು ಬಹಳ ಮುಷ್ಟತನವನ್ನು ಮಾಡುತ್ತಿರುವುದರಿಂದ ಇವನ ವಿಷಯದಲ್ಲಿ ಇಲ್ಲಿರತಕ್ಕ ಜನಗಳಿಗೆಲ್ಲಾ ಬಹಳ ದ್ವೇಷವಿರುವುದು. ಆದಕಾರಣ ನೀವು ಇವನನ್ನು ನಿಗ್ರಹಿಸಿ, ಈ ರಾಜ್ಯವನ್ನು ಪೂರ್ವದಂತೆ ನಮ್ಮ ವಶಮಾಡಿ ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಿಕೊಳ್ಳಬೇಕು, ಮತ್ತು ನೀವು ಜಯವನ್ನು ಹೊಂದುವುದಕ್ಕೆ ಈ ಸಮಯವೇ ಅನುಕೂಲವಾಗಿರುವುದರಿಂದ ಕೀಘ್ರದಲ್ಲಿ ಬರುವರಾಗಬೇಕು" ಎಂದು ಪತ್ರವನ್ನು ಬರದು ಪುಟ್ಟಿ

ಮೊದಯ್ಯ ತಿರುಮಲಾಚಾರರೆಂಬ ಇವ್ವರು ಆಪ್ತರ ವೆಶಕ್ಕೆ ಕೊಟ್ಟು, ತಕ್ಕ ಸೊತುಗಳನ್ನು ಹೇಳಿ, ಹೂಣದೇಶಾಧಿಪತಿಗಳ ಸಮೀಪಕ್ಕೆ ಕಳುಹಿಸಿದರು. ಅನಂತರ ಅವರಿಬ್ಬರೂ ಹೂಣದೇಶಕ್ಕೆ ಹೋಗಿ ಚನ್ನಪಟ್ಟಣದಲ್ಲಿರುವ ಜರ್ನಾಸಲಿವನ್ ಸಾಹೇಬನೆಂಬ ಸರದಾರನನ್ನು ಕಂಡು ತಾವು ಬಂದಿರುವ ಕಾರ್ಯವನ್ನು ಹೇಳಿ, ಆ ಸರದಾರನಿಂದ ಮುಖ್ಯಾಧಿಕಾರಸ್ಥರಿಗೆ ತಿಳಿಯಪಡಿಸಿ ದೊರೆಗಳವರ ಪತ್ರವನ್ನು ಸಹ ಕೊಡಿಸಿ, ನಾವು ಅವೇಪ್ರಕಾರ ಮಾಡುತ್ತೇವೆ ಎಂದು ಸರದಾರರು ಹೇಳಿದ ವಚನವನ್ನು ಕೇಳಿ ಅಲ್ಲಿಯೇ ಇರುತ್ತಿದ್ದರು. (ಅಷ್ಟರಲ್ಲಿಯೇ ಶ್ರೀರಂಗಪಟ್ಟಣದಲ್ಲಿ ದೊರೆಗಳವರಾದ ಚಾಮರಾಜಒಡೆಯರವರು ಅಮರಾವತೀ ಪಟ್ಟಣದಲ್ಲಿ ದೇವೇಂದ್ರನಿಂದ ಬಹುಮಾನವನ್ನು ಪಡೆಯಬೇಕೆಂದು ಶಾ॥ ೧೭೧೯ನೆ (A.D. 1796) ನಳ ಸಂ॥ ರದ ಚೈತ್ರಶುದ್ಧ ೧೦ ಯಲ್ಲಿ ಸ್ವರ್ಗಸೋಪಾನವನ್ನೇರಿದರು. ಪೂರ್ವದಲ್ಲಿ ಇವರ ಕುಟುಂಬ ಕೆಂಪನಂಜಮ್ಮಣಿಯವರೆಗೆ ಪುತ್ರಕರ್ತವ್ಯವಾಗಿ ಪರಲೋಕಕೃತ್ಯವನ್ನು ಮಾಡಿದ ಕಾರಗಳ್ಳಿ ಮರಿರಾಜಯ್ಯನ ಮಗ ದೇವರಾಜಯ್ಯನು ಅದೇ ಮೇರೆಗೆ ಇವರಿಗೂ ಉತ್ತರಕ್ರಿಯೆಗಳನ್ನು ಮಾಡಿದನು. ಅನಂತರ ಶ್ರೀರಂಗಪಟ್ಟಣದಲ್ಲಿ ಸುಲ್ತಾನನು ಚಾಮರಾಜ ಒಡೆಯರವರು ತೀರಿಹೋದುದರಿಂದ ಸಂತೋಷಯುಕ್ತನಾಗಿರುತ್ತ, ಇನ್ನು ಮೇಲೆ ನಿಷ್ಕಂಟಕವಾಗಿ ಸಕಲರಾಷ್ಟ್ರಾಧಿಪತ್ಯವು ತನ್ನ ಕೈವಶವಾಯಿತೆಂದು, ಪೂರ್ವಕ್ಕಿಂತ ಅಧಿಕವಾಗಿ ಸಜ್ಜನರುಗಳ ಬಾಧೆಯನ್ನೂ ದುರ್ಜನರುಗಳ ಪ್ರಾಬಲ್ಯವನ್ನೂ ಮಾಡಿ, ದೇವ ಬ್ರಾಹ್ಮಣರ ಕಂಟಕನಾಗಿ ಈ ಚಾಮರಾಜ ಒಡೆಯರವರ ಪುತ್ರರಿಗೆ ಪಟ್ಟಾಭಿಷೇಕವನ್ನು ಮಾಡಿಸದೆ, ಸ್ವಾಮಿದ್ರೋಹದಲ್ಲಿಯೇ ಆಸಕ್ತನಾಗಿದ್ದನು.

ಟೀಪುಸುಲ್ತಾನನಿಗೂ ಇಂಗ್ಲೀಷಿನವರಿಗೂ ನಡೆದ ಯುದ್ಧ ಮತ್ತು ಟೀಪು ಸುಲ್ತಾನನ ಸಂಹಾರ :—ಪೂರ್ವದಲ್ಲಿ ಶಾ॥ ಶಕ ೧೭೧೩ನೇ (A.D. 1792) ಪರೀಧಾವಿ ಸಂವತ್ಸರದಲ್ಲಿ ಹೂಣದೇಶಾಧಿಪತಿಗಳ ಸೇನಾನಾಯಕರಾದ ಕಾರನ್ ವಾಲೀಸು ಮೆಡೋಸರೆಂಬ ಇಬ್ಬರು ಸರದಾರರು ಸೇನಾಸಮೇತರಾಗಿ ಶ್ರೀರಂಗಪಟ್ಟಣವನ್ನು ಸಾಧಿಸಬೇಕೆಂದು ಬಂದಿದ್ದ ಸಮಯದಲ್ಲಿ,

ಈ ಟೀಪೂಸುಲ್ತಾನನು ಅವರ ಸಂಗಡ ಯುದ್ಧಮಾಡಿ ಅವರುಗಳನ್ನು ಜಯಿಸುವುದಕ್ಕೆ ಸಾಮರ್ಥ್ಯವಿಲ್ಲದೆ ಅವರೊಡನೆ ಸಂಧಿಯನ್ನು ಮಾಡಿ ಕೊಂಡು ಅವರುಗಳಿಗೆ ಕೊಡತಕ್ಕ ದ್ರವ್ಯಕ್ಕೆ ಬದಲು ಕೆಲವು ಸೀಮೆ ಯನ್ನೂ ದ್ರವ್ಯವನ್ನೂ ಸಹ ಕೊಟ್ಟು ಪರ್ಷ್ಯ ಕರಾರು ಮಾಡಿಕೊಂಡು ನಿಂತಹಣವನ್ನು ಕೊಡುವವರೆಗೂ ತನ್ನ ಇಬ್ಬರು ಮಕ್ಕಳನ್ನು ವ್ಯೋಲು ಕೊಟ್ಟು ಪರೀಧಾವಿ ಸಂವತ್ಸರದಲ್ಲಿ ಕಳುಹಿಸಿಕೊಟ್ಟಿದ್ದನು. ಅನಂತರ ಟೀಪೂಸುಲ್ತಾನನು ವ್ಯೋಲುಕೊಟ್ಟಿದ್ದ ತನ್ನ ಮಕ್ಕಳನ್ನು ಬಿಡಿಸಿಕೊಂಡು ಬರುವುದಕ್ಕೆ ಇದೇ ಸಮಯವೆಂದು ಅರಮನೆಯಲ್ಲಿದ್ದ ಮಹಾಮಾತ್ಯಶ್ರೀ ಯವರುಗಳು ಮುಂತಾದ ಸರ್ವಜನಗಳನ್ನೂ ಶೋಧಿಸಿಕೊಂಡು, ಮತ್ತೊಂದು ಅರಮನೆಯಲ್ಲಿರಿಸಿ, ಅರಮನೆಯಲ್ಲಿದ್ದ ವಸ್ತ್ರಾಭರಣ ದ್ರವ್ಯ ಪಾತ್ರೆಗಳನ್ನು ತೆಗೆದುಕೊಂಡವಲ್ಲದೆ ಸೀಮೆಯ ಮೇಲಣ ದೇವರ ಒಡವೆಗಳನ್ನೂ ಧನಿಕರಾಗಿದ್ದ ಪ್ರಜೆಗಳ ಧನವನ್ನೂ ಮತ್ತು ಅಧಿಕಾ ರಸ್ಥರು ಮುಂತಾದವರುಗಳ ಕಡೆಯಿಂದ ನಜರಾಣೆ ಎಂಬದಾಗಿ ನಿಬಂಧನೆಮಾಡಿ ದ್ರವ್ಯವನ್ನೂ ತೆಗೆದುಕೊಂಡು, ಹೂಣದೇಶಾಧಿಪತಿ ಗಳಿಗೆ ಕೊಟ್ಟುಕಳುಹಿಸಿ, ತನ್ನ ಮಕ್ಕಳನ್ನು ಕಾಳಯುಕ್ತಿ ಸಂವತ್ಸರ ದಲ್ಲಿ ಕರೆಸಿಕೊಂಡು ಮತ್ತೆ ಅವರಸಂಗಡಲೇ ಯುದ್ಧಮಾಡಬೇಕೆಂಬ ಆಲೋಚನೆಯನ್ನು ಮಾಡುತ್ತಿದ್ದನು. ಈ ವರ್ತಮಾನವನ್ನು ತಿಳಿದು ಇಂಗ್ಲಿಷ್‌ಬಹದ್ದರವರು "ಈ ದುಷ್ಟನಾದ ಟೀಪೂಸುಲ್ತಾನನು ಪೂರ್ವ ದಲ್ಲಿ ನಮ್ಮ ಸಂಗಡ ಯುದ್ಧಮಾಡುವುದಕ್ಕೆ ಸಾಮರ್ಥ್ಯವಿಲ್ಲದೆ ಸಂಧಿ ಯನ್ನು ಮಾಡಿಕೊಂಡು, ದ್ರವ್ಯವನ್ನು ಕೊಡುವುದಕ್ಕೂ ಇಲ್ಲದೆ, ಲಜ್ಜೆ ಯನ್ನೂ ಬಿಟ್ಟು ತನ್ನ ಪುತ್ರರುಗಳನ್ನು ವ್ಯೋಲುಕೊಟ್ಟು, ದುರ್ಮಾರ್ಗ ದಿಂದ ದ್ರವ್ಯವನ್ನು ಸಂಪಾದಿಸಿ ನಮಗೆ ಕೊಟ್ಟು, ಅವರುಗಳನ್ನು ಬಿಡಿಸಿ ಕೊಂಡನು. ಇವನ ಕೆಟ್ಟ ನಡತೆಗಳನ್ನು ತಿಳಿದ ದೊರೆಗಳವರು ಇವನನ್ನು ನಿಗ್ರಹಿಸಬೇಕೆಂಬ ಅಭಿಪ್ರಾಯದಿಂದ ಪತ್ರವನ್ನು ಬರೆಸಿ ಕಳುಹಿಸಿರುತ್ತಾರೆ. ಆದುದರಿಂದ ಇನ್ನು ಮೇಲೆ ಇವನು ನಿಗ್ರಹಿಸು ವುದಕ್ಕೆ ಯೋಗ್ಯನೇ ಹೊರತು ಉಪೇಕ್ಷೆ ಮಾಡುವುದಕ್ಕೆ ಯೋಗ್ಯನಲ್ಲ" ಎಂದು ಪರ್ಯಾಲೋಚನೆ ಮಾಡಿ, ಸೇನಾಸಮೇತರಾಗಿ ಯುದ್ಧಸನ್ನದ್ಧ

ರಾಗ ಜನರಲ್ ಹಾರಿಸ್, ವೆಲೆಸ್ಲಿ ಸಾಹೇಬರು ಮುಂತಾದ ಸರದಾರರು ಗಳನ್ನು ಕಳುಹಿಸಿದರು. ಇವರು ತಮ್ಮ ದಣಿಗಳ ಆಜ್ಞಾನುಸಾರವಾಗಿ ಹೈದರಾಬಾದ್ ನಿಜಾಮುದ್ದೌಲನ ಕಡೆಯ ಸೇನೆಯಿಂದೊಡಗೂಡಿದ ಮಿರ್ ಅಲಂ ಎಂಬ ಸರದಾರನನ್ನು ಸಹಕರಿಸಿಕೊಂಡು ಶ್ರೀರಂಗಪಟ್ಟಣದ ಕಡೆಗೆ ಬರುತ್ತಿದ್ದರು. ಈ ವರ್ತಮಾನವನ್ನು ತಿಳಿದು ಟೀಪೂಸುಲ್ತಾನನು ಪೂರ್ವದಲ್ಲಿದ್ದ ಮೈಸೂರುಕೋಟೆ ಪೇಟೆಗಳಲ್ಲಿ ತೃಣೇಶ್ವರ ಲಕ್ಷ್ಮೀರಮಣ ಮುಂತಾದ ದೇವರುಗಳ ಗುಡಿಗೋಪುರಗಳನ್ನೂ ಅರಮನೆ ಮೊದಲಾಗಿ ಸಮಸ್ತ ಜನರುಗಳ ಮನೆಗಳನ್ನೂ ಕೆಡಹಿ, ದೇವರುಗಳನ್ನು ಕಿತ್ತುಹಾಕಿ, ಮೈಸೂರು ಕೋಟೆಗೆ ಪೂರ್ವಪಾರ್ಶ್ವದಲ್ಲಿರುವ ಕಾಮಾಬಸವನ ತಿಟ್ಟಿನ ಮೇಲೆ ಚಿಕ್ಕದಾಗಿ ಬಂದು ಕೋಟೆಯನ್ನು ಕಟ್ಟಿಸಿ, ಅದಕ್ಕೆ ನಜರಾಬಾದು ಎಂಬದಾಗಿ ಹೆಸರನ್ನಿಟ್ಟು, ಆ ಕೋಟೆಯೊಳಗೆ ಚಿಕ್ಕದಾಗಿ ಅರಮನೆಯನ್ನೂ ಇನ್ನು ಕೆಲವು ಮನೆಗಳನ್ನೂ ಕಟ್ಟಿಸಿ, ಮೈಸೂರು ಕೋಟೆ ಪೇಟೆಯಲ್ಲಿದ್ದ ಬ್ರಾಹ್ಮಣರು ಸೆಟ್ಟಿವರ್ತಕರು ಮುಂತಾದ ಹಮೋಂ ಕೋಮಿನ ಜನರುಗಳ ಮನೆಗಳನ್ನು ಕೆಡಹಿ, ಮೈಸೂರಿಗೆ ಉತ್ತರ ಪಾರ್ಶ್ವಕ್ಕೆ ಬಂದು ಪರಿದಾರಿಯಲ್ಲಿ ಸುಬೇದಾರ ವೀರಣ್ಣನ ತೋಟದ ಬಳಿ ನೀರುಹರಿಯುವ ಪಳ್ಳದ ಸಮೀಪದಲ್ಲಿ ಈಜನರುಗಳಿಗೆ ಅನೇಕವಾದ ಮನೆಗಳನ್ನು ಕಟ್ಟಿಸಿ, ನವಾಷಹರ್ ಎಂಬದಾಗಿ ಹೆಸರನ್ನಿಟ್ಟು ಶತ್ರುಗಳು ಬರುವ ಮಾರ್ಗಗಳಲ್ಲಿ ಪೇಟೆಗಳು ಗ್ರಾಮಗಳು ಇದ್ದರೆ ಅವರುಗಳು ನಿಲ್ಲುವುದಕ್ಕೆ ಅವಕಾಶವಾಗುವುದೆಂಬದಾಗಿ ತಿಳಿದು ಬೆಂಕೆಯನ್ನು ಹಾಕಿಸಿ, ಮೈಸೂರು ಕೆರೆ ಮುಂತಾದ ಜಲಾಶ್ರಯಗಳನ್ನು ಒಡೆಸಿ ದುಷ್ಟತನವನ್ನು ಮಾಡುತ್ತಿದ್ದನು. ಆ ಸಮಯದಲ್ಲಿ ಮೇಲೆ ಬರೆದಿರುವ ಸರದಾರರುಗಳು ಬಂದು ಶ್ರೀರಂಗಪಟ್ಟಣಕ್ಕೆ ಮುತ್ತಿಗೆ ಹಾಕಿ, ಒಂದೂವರೆ ತಿಂಗಳು ಬಿಡದೆ ಯುದ್ಧ ಮಾಡಿ ಶಾ॥ ಶಕ ೧೭೨೦ನೇ ಸಿದ್ಧಾರ್ಥಿ ಸಂವತ್ಸರದ ಚೈತ್ರಬಹುಳ ೩೦ ಸ್ಥಿರವಾರಕ್ಕೆ ಸರಿಯಾದ ಸನ ೧೭೯೯ನೇ ಇಸವಿ ಮೇ ತಾರೀಖು ೪ನೇ ಮಧ್ಯಾಹ್ನದಲ್ಲಿ ಟೀಪೂಸುಲ್ತಾನನನ್ನು ಸಂಹರಿಸಿ ಶ್ರೀರಂಗಪಟ್ಟಣವನ್ನು ಕಟ್ಟಕೊಂಡರು.

ಇಂಗ್ಲಿಷಿನವರು ಜನಗಳನ್ನು ಸವಾಧೀನಪಡಿಸಿದ್ದು:—ಅನಂತರ ಇಂಗ್ಲಿಷ್

ಬಹದ್ದರವೆರಾದ ಸರದಾರರುಗಳು ತೋಷಿಖಾನೆ ಸುಲ್ತಾನನ ಮನೆ ಮುಂತಾದ ಎಲ್ಲಾ ಕಡೆಯಲ್ಲಿಯೂ ತಮ್ಮ ಕಡೆ ಪಹರೆ ಯಿಟ್ಟು ಬಂದೋ ಬಸ್ತು ಮಾಡಿ, ಸುಲ್ತಾನನು ಎಲ್ಲಿದಾನೆಯೋ ಎಂದು ವಿಚಾರಣೆಯನ್ನು ಮಾಡುವಲ್ಲಿ ಶ್ರೀರಂಗಪಟ್ಟಣದ ಕೋಟೆ ಮೂಡಲು ಬಾಗಿಲ ಬಳ ಪಾರ್ಶ್ವದ ಹೊಸಕಂದಕದ ಸವಿಾಪದಲ್ಲಿ ಗುಂಡು ತಗಲಿ ಮೃತನಾಗಿದಾ ನೆಂಬ ವರ್ತಮಾನವನ್ನು ಕೇಳಿ, ಅವನ ಬಂಧುಜನರುಗಳನ್ನು ಕರೆಸಿ, ಆತನು ಮೃತನಾಗಿ ಬಿದ್ದಿರುವ ಸ್ಥಳಕ್ಕೆ ಹೋಗಿ ಸುಲ್ತಾನನು ಅಹು ದೋ? ಅಲ್ಲವೋ? ನೋಡಿಕೊಂಡು ಬನ್ನಿರಿ ಎಂಬದಾಗಿ ಹೇಳಿ ಕಳು ಹಿಸಲು, ಆ ಜನಗಳು ನೋಡಿ ಬಂದು ಈತನೇ ಸುಲ್ತಾನನು ಎಂದು ಹೇಳಿದರು. ಅನಂತರ ಅವನ ಹೆಂಗಸರು ಮಕ್ಕಳು ಸಂಬಂಧಿಗಳು ಮುಂತಾದ ಜನರುಗಳಿಗೆ "ನೀವು ವ್ಯಸನಪಡಬೇಡಿ, ನಿಮ್ಮಗಳ ಸಂ ರಕ್ಷಣೆಮಾಡುವೆವು" ಎಂದು ಸಮಾಧಾನೋಕ್ತಿಯನ್ನು ಹೇಳಿ ಕಳುಹಿಸಿ, ಕೆಲವು ದ್ರವ್ಯವನ್ನು ಕೊಟ್ಟು ಅವರ ಜಾತಿ ಸಂಪ್ರದಾಯದ ಮೇರೆಗೆ ಲಾಲಬಾಗ ತೋಟದಲ್ಲಿ ತಂದೆ ತಾಯಿಗಳ ಗೋರಿಯ ಸವಿಾಪದಲ್ಲಿಯೇ ಈತನ ಗೋರಿಯನ್ನು ನೂಡಿಸಿದರು. ಅನಂತರ ಸರದಾರರು ಸೇನಾ ಜನರು ಮುಂತಾದ ತಮ್ಮಕಡೆಯ ಜನಗಳಿಗೆ ಬಂದೂಮೆರೆದಿವಸ ಪರ್ಯಂತ ಈ ಕೋಟೆಯಲ್ಲಿರುವ ಮನೆಗಳ ಲೂಟಿಯನ್ನು ಮಾಡಿ ಅದರಲ್ಲಿ ಸಿಕ್ಕಿದ ಪದಾರ್ಥಗಳನ್ನೆಲ್ಲಾ ನೀವೆ ತೆಗೆದುಕೊಳ್ಳಿರಿ ಎಂಬದಾಗಿ ಆಜ್ಞೆ ಕೊಟ್ಟರು. ಅನಂತರ ಮರುದಿನದ ಪ್ರಾತಃಕಾಲದಲ್ಲಿ ಮೃತರಾಗಿದ್ದ ಅನೇಕ ಜನರು ಗಳನ್ನು ಕೋಟೆಯೊಳಗಿದ್ದ ಅಗಳು ಮುಂತಾದ ಸ್ಥಳಗಳಿಗೆ ಎಳೆಸಿ ಹಾಕಿ ಬಿಟ್ಟರು. ಆ ದಿನವೇ ಅಖಂಡ ವೈಷ್ಟಿಯಾಗಿ ಕಾವೇರೀಪ್ರವಾಹವು ಸಂಪೂರ್ಣವಾಗಿ ಬಂದು ಶ್ರೀರಂಗಪಟ್ಟಣದಲ್ಲಿ ಯುದ್ಧದಿಂದುಂಟಾದ ರಕ್ತ ಪ್ರವಾಹವನ್ನು ತೊಳೆದಂತೆ ಆಯಿತು. ಮಾಱನೆದಿನ ಪ್ರಾತಃಕಾಲದಲ್ಲಿ ಸರದಾರರುಗಳು ಶ್ರೀರಂಗಪಟ್ಟಣ ಸಂಸ್ಥಾನದ ಮೆರ್ಮನನ್ನು ತಿಳಿದ ಪೂರ್ಣಯ್ಯ ಬಾದಾಮಿ ಬಿಷ್ಟೋಪಂತ ಮಿರಕಪರ್ದಿಖಾನನು ಇವರು ಗಳನ್ನು ಕರೆಸಿ, ಅವರಿಗೆ ಸಯ ಭಯದಿಂದ ಸಮಾಧಾನೋಕ್ತಿಯನ್ನು ಕೇಳಿ, ಸುಲ್ತಾನನ ಮಕ್ಕಳಿಗೆ ಆಪ್ತನಾದ ಪೂರ್ಣಯ್ಯನೊಬ್ಬನನ್ನೇ

ಏಕಾಂತದಲ್ಲಿ ಕರೆಸಿ "ಕರೀಘಟ್ಟದ ಬಳಿಯಲ್ಲಿ ಸೇನಾಸಮೇತನಾಗಿರುವ ಸುಲ್ತಾನನ ಮೆಗ ಛತ್ತಿ ಹೈದರ್ ಮುಂತಾದವರನ್ನು ಕರೆದುಕೊಂಡು ಬಂದರೆ ಅವರ ಸಂರಕ್ಷಣೆ ಮಾಡುತ್ತೇವೆ. ಆ ಸೇನಾಜನರುಗಳಿಗೂ ಜೀವನವನ್ನು ಮಾಡಿಕೊಡುವೆವು" ಎಂದು ಹೇಳಿ ಕಳುಹಿಸಿ, ಸುಲ್ತಾನನ ಮೆಗನನ್ನು ಅಲ್ಲಿಂದ ಕರೆಸಿ ದರಿಯಾದೌಲತ್ತು ತೋಟಕ್ಕೆ ಕಳುಹಿಸಿ ಕೊಟ್ಟು ಬೈದು ಮಾಡಿ, ಆ ಸೇನಾಜನರುಗಳಿಗೆ ಪೂರ್ವದಂತೆ ಜೀವನವನ್ನು ಕಲ್ಪಿಸಿ ತಮ್ಮ ಅಧೀನದಲ್ಲಿ ಇಟ್ಟುಕೊಂಡರು.

ಇಂಗ್ಲಿಷ್ ಸರದಾರರು ದೊರೆಗಳವರ ಭೇಟಿನಮಾಡಿಕೊಂಡದ್ದು:—ಅನಂತರ ಜನರಲ್ ಹಾರಿಸ್, ವೆಲ್ಸ್ಲಿ ಸಾಹೇಬರು ಮುಂತಾದ ಸರದಾರರುಗಳು ಪೂರ್ವದಲ್ಲಿ ತಮಗೆ ಪತ್ರವನ್ನು ಬರೆದಿದ್ದ ದೊರೆಗಳವರಾದ ಚಾಮರಾಜಒಡೆಯರವರು ತೀರಿಹೋದ ವರ್ತಮಾನವನ್ನು ಕೇಳಿ ಬಹಳ ವ್ಯಸನಪಟ್ಟು, ಈ ಸಂಸ್ಥಾನಕ್ಕೆ ಪರಂಪರಾಪ್ರಾಪ್ತವಾಗಿ ಬಂದ ಈ ಚಾಮರಾಜಒಡೆಯರವರ ಪುತ್ರರು, ಮಹಾತೇಜಶ್ಶಾಲಿಗಳಾಗಿ ಮಹಾರಾಜಲಕ್ಷಣದಿಂದೊಡಗೂಡಿ, ಐದುವರ್ಷವಯಸ್ಸುಳ್ಳವರಾಗಿ, ಪ್ರವರ್ಧಮಾನರಾಗುತ್ತಿದ್ದಾರೆಂದು ತಿಳಿದು, ಅತ್ಯಂತ ಕುತೂಹಲದಿಂದ ಅವರ ಭೇಟಿ ಮಾತಿಕೊಳ್ಳಬೇಕೆಂದು, ಪೂರ್ಣಯ್ಯನ ಮುಖದಿಂದ ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿ ಯವರ ಸನ್ನಿಧಿಗೆ, ನಾವು ದೊರೆಗಳವರ ಭೇಟಿಗೆ ಬರುತ್ತೇವೆಂದು ಹೇಳಿ ಕಳುಹಿಸಿ, ಮರುದಿನ ಪ್ರಾತಃಕಾಲದಲ್ಲಿ ಮಹಾರಾಜಯೋಗ್ಯವಾದ ಪೀಠದಲ್ಲಿ ಮುಹೂರ್ತಮಾಡಿರುವ ದೊರೆಗಳವರ ದರ್ಶನಕ್ಕೆ ಬರುವ ವೇಳೆಯಲ್ಲಿ, ತಮ್ಮ ಕಿಂಗ್ ಪಾದಷಾಹರ ಭೇಟಿಗೆ ಬರುವಂತೆ ಮರ್ಯಾದೆಯೊಡನೆ ಬಂದು, ಮರ್ಯಾದೆಯನ್ನು ಮಾಡಿ ಕುಳಿತುಕೊಂಡು, ದೊರೆಗಳವರ ವಂಶಪಾರಂಪರ್ಯವನ್ನು ವಿಚಾರಿಸಿ, ತಮ್ಮ ಸನ್ನಿಧಾನದಲ್ಲಿದ್ದ ಪತ್ರದಲ್ಲಿ ಸರಿನೋಡಿಕೊಂಡು, ಮಹಾಮಾತೃಶ್ರೀಯವರಾದ ಲಕ್ಷ್ಮಮ್ಮಣ್ಣಿ ಯವರ ಸನ್ನಿಧಿಗೆ, ಹಿಂದವಿಮಾತು ತುರುಕಮಾತು ಕನ್ನಡ ಮಾತುಗಳನ್ನು ತಿಳಿದ ಸ್ತ್ರೀಯದ್ವಾರದಿಂದ "ನೀವು ನಿಮ್ಮ ವಂಶಪಾರಂಪರ್ಯದಿಂದ ಸಿಂಹಾಸನಾರೂಢರಾಗಿ ದೊರೆತನವನ್ನು ಮಾಡಿದವರು. ನಾವು ನಿಮ್ಮ ವೃತ್ತಾಂತವನ್ನೆಲ್ಲಾ ವಿಸ್ತಾರವಾಗಿ ವಿಚಾರಿಸಿ

ದ್ದೀವೆ. ಇಷ್ಟು ದಿವಸವೂ ಅನುಸರಿಸಿ ಬಂದ ಯೋಚನೆಯನ್ನು ಬಿಟ್ಟು ಇನ್ನು ಸಂತೋಷದಿಂದ ಇರುವರಾಗಬೇಕು. ನಿನ್ನ ಭಾಗ್ಯದಿಂದ ನಿಮ್ಮ ಮನೋರಥವು ಸಫಲವಾಗುವುದು. ಧೈರ್ಯದಿಂದ ಇರುವರಾಗಬೇಕು" ಎಂದು ಹೇಳಿಕಳುಹಿಸಿ, ಅವರಮರ್ಯಾದಾನುಸಾರವಾಗಿ ಸಂರಕ್ಷಣೆಯನ್ನು ಮಾಡುವಂತೆ ಆಜ್ಞಾಪಿಸಿ, ತಾವು ರಾಜಾಸ್ಥಾನಕ್ಕೆ ಯೋಗ್ಯವಾದ ಸನ್ಮಾನ ಗಳನ್ನು ಮಾಡಿಸಿಕೊಂಡು, ಇಳಿದಿದ್ದ ಸ್ಥಳಕ್ಕೆ ಬಂದು, ತಮ್ಮ ದಣಿಯ ಸನ್ನಿಧಿಗೆ ಇಲ್ಲಿನ ವೃತ್ತಾಂತವೆನ್ನೆಲ್ಲಾ ವಿಸ್ತಾರವಾಗಿ ಕಾಣಿಸಿ ಪತ್ರವನ್ನು ಬರೆದು ಕಳುಹಿಸಿ, ದುಷ್ಟರಿಗೆ ಅವಕಾಶವಾಗದಂತೆ ಜನಗಳಿಗೆ ಸಮಾಧಾನ ವೆನ್ನು ಹೇಳಿ, ಜಾಗರೂಕರಾಗಿ ಶ್ರೀರಂಗಪಟ್ಟಣವನ್ನು ಸಂರಕ್ಷಿಸಿಕೊಂಡು ಇರುತ್ತಿದ್ದರು. ಆಸಮಯದಲ್ಲಿ ವಿಲಾಯತೀ ಪಾವಷಾಹರ ಬಳಿಯಿಂದ ತಮ್ಮ ಅಭಿಪ್ರಾಯಾನುಸಾರವಾಗಿ ಬಂದ ಆಜ್ಞಾಪತ್ರಿಕೆಯನ್ನು ನೋಡಿ, ಬಹಳ ಸಂತೋಷಪಟ್ಟು, ಟೀಪೂಸುಲ್ತಾನನ ಹೆಂಗಸರು ಮಕ್ಕಳನ್ನು ತಮ್ಮಕಡೆ ಸಪಾರೆ ಚೌಕಿಯಿಂದ ರಾಯವೇಲೂರಿಗೆ ಕಳುಹಿಸಿ, ಟೀಪೂಸುಲ್ತಾನನ ಮನೆಯಲ್ಲಿದ್ದ ಸರ್ವಸ್ವವನ್ನೂ ತೋಷೀಖಾನೆ ಯಲ್ಲಿದ್ದ ಹಣವನ್ನೂ ತೆಗೆದು ಕೊಂಡು ಅವನು ಮಾಡಿಸಿದ್ದ ರತ್ನಮಯ ವಾದ ವ್ಯಾಘ್ರಸಿಂಹಾಸನವನ್ನು ಮುರಿದು ಆ ದ್ರವ್ಯದ ಸಂಗಡ ತಮ್ಮ ದೇಶಕ್ಕೆ ಕಳುಹಿಸಿದರು. ಬಳಿಕ ಜನರಲ್ ಹಾರಿಸ್ ವಲೆಸ್ಲಿ ಸಾಹೇಬರು ಮುಂತಾದ ಸರದಾರರುಗಳು ಪೂರ್ಣಯ್ಯನನ್ನು ಕರೆಸಿ "ನಿಮ್ಮ ದೊರೆಗಳವರಿಗೆ ಪರಂಪರಾಪ್ರಾಪ್ತವಾಗಿ ಬಂದ ಮೈಸೂರಲ್ಲಿ ಪಟ್ಟಾಭಿಷೇಕವನ್ನು ಮಾಡಿಸಬೇಕಾಗುವುದು. ಮೈಸೂರಿಗೆ ಹೋಗಿ ಅಲ್ಲಿ ದೊರೆಗಳವರ ಸಂಪ್ರದಾಯಾನುಸಾರವಾಗಿ ಪಟ್ಟಾಭಿಷೇಕ ಮಹೋತ್ಸವಕ್ಕೆ ಬೇಕಾದ ಸಾಮಗ್ರಿಗಳನ್ನು ಸಿದ್ಧಮಾಡಿಸುವನಾಗು" ಎಂದು ಅಪ್ಪಣೆಯನ್ನು ಕೊಟ್ಟರು. ಆ ಮೇರೆಗೆ ಪೂರ್ಣಯ್ಯನು ಮಹಾಮಾತೃ ಶ್ರೀಲಕ್ಷ್ಮಮ್ಮಣ್ಣಿ ಯವರ ಸನ್ನಿಧಾನಕ್ಕೆ ಬಂದು, ಈ ವಿವರಗಳನ್ನು ವಿನ್ನವಿಸಿ, ರಾಜ ಬಡೆಯರವರು ಆದಿಯಾಗಿ ಆಳುತ್ತಿದ್ದ ಸಿಂಹಾಸನವನ್ನೂ ದೊರೆಗಳವ ರನ್ನೂ ಇವರ ಮಾತೃಶ್ರೀಯವರು ಮುಂತಾದ ಅರಮನೆಯ ಜನರು ಗಳನ್ನೂ ಬಂಧು ಜನರನ್ನೂ ಸಕಲ ಸೇವಾಜನರುಗಳನ್ನೂ ಮೈಸೂರಿಗೆ

ಕರೆದುಕೊಂಡು ಬಂದು, ಕೋಟೆಗೆ ಸಮೀಪದಲ್ಲಿ ಕಟ್ಟಿಸಿದ್ದ ನಜರಬಾದು ಎಂಬ ಕೋಟೆಯು ಅರಮನೆಯಲ್ಲಿ ದೊರೆಗಳವರನ್ನು ಇಳಿಸಿದನು. ಆಗ ಆ ಸರದಾರರುಗಳೂ ಬಂದು ಗುಡಾರಗಳನ್ನು ಹಾಕಿಸಿಕೊಂಡು ಮೈಸೂರಲ್ಲಿ ಇರುತ್ತಿದ್ದರು.

ಈ ಸಾಸಾ ಚಾಮರಾಜಒಡೆಯರವರ ಆಳಿಕೆ.—ಈ ದುರ್ಮತಿಸಂವತ್ಸರದ ನಿಜಭಾದ್ರಪದ ಶುದ್ಧ ೧೫ ಮೊದಲುಗೊಂಡು ನಳಸಂವತ್ಸರದ ಚೈತ್ರ ಬಹುಳ ೧೦ ವರೆಗೆ.

	ವರ್ಷ	ತಿಂಗಳು	ದಿನ
	೧೯	೬	೨೫
ಇವರ ಜೀವಿತಕಾಲ	೭೦	೧	೨೩

ಅನಂತರ ಇವರ ಸರ್ವಾಧಿಕಾರಿ ಟೀಪೂಸುಲ್ತಾನನು ತಾನೇ ಸರ್ವ ಸ್ವತಂತ್ರನಾಗಿ ಅಧಿಕಾರ ಮಾಡಿದ್ದು:—ನಳಸಂವತ್ಸರದ ಚೈತ್ರಶುದ್ಧ ೧೦ ರಿಂದ ಸಿದ್ಧಾರ್ಥಿ ಸಂವತ್ಸರದ ಚೈತ್ರ ಬಹುಳ ೩೦ ಶನಿವಾರ ಮಧ್ಯಾಹ್ನದವರೆಗೆ.

ವರ್ಷ	ತಿಂಗಳು	ದಿನ
೩	೦	೨೦

ಅನಂತರ ವಿಲಾಯಿತಿ ಪಾದಷಾಹರಕಡೆ ಜನರಲ್ ಹಾರಿಸ್ ವೆಲೆಸ್ಲಿ ಸಾಹೇಬ್ ಮುಂತಾದ ಸರದಾರರುಗಳು ಮೇಲೆ ಬರೆದಿರುವ ದಿವಸದಲ್ಲಿ ಸುಲ್ತಾನನನ್ನು ಸಂಹರಿಸಿ ಈ ಸಿದ್ಧಾರ್ಥಿ ಸಂವತ್ಸರದ ಜ್ಯೇಷ್ಠ ಬಹುಳ ೧೨ ಶನಿವಾರಕ್ಕೆ ಸರಿಯಾದ ಸರ್ ೧೯೯೯ನೇ ಇಸವಿ ಜುಲೈ ತಾರೀಖು ೩೧ ರ ವರೆಗೆ ಮೈಸೂರು ಸೀಮೆಯನ್ನು ಬಂದೋಬಸ್ತು ಮಾಡುವುದಕ್ಕಾಗಿ ತಮ್ಮ ವಿಚಾರಣೆಯಲ್ಲಿ ಇಟ್ಟುಕೊಂಡಿದ್ದದ್ದು:—

ವರ್ಷ	ತಿಂಗಳು	ದಿನ
೦	೧	೨೮

೧೨ನೆಯ ಅಧ್ಯಾಯ.

ಇಪ್ಪತ್ತೊರಡನೆಯ ಆಳಿಕೆ.

ನಂಜರಾಜಾಭಿಧ ಮುಮ್ಮಡಿ ಕೃಷ್ಣರಾಜ ಒಡೆಯರವರು (A.D. 1799—1868)

ಜನನ :—ಶಾ॥ ಶಕ ೧೭೧೩ನೇ (A.D. 1794) ಆನಂದನಾಮಸಂವತ್ಸರದ ಆಷಾಢ ಬಹುಳ ೨ ಸೋಮವಾರ ಶ್ರವಣ ನಕ್ಷತ್ರ ದಿವಿ ೧೪॥ ಗಳಿಗೆಗೆ ಸಲ್ಲುವ ಕನ್ಯಾಲಗ್ನದಲ್ಲಿ.

ಪಟ್ಟಾಭಿಷೇಕ :—ಶಾ॥ ಶಕ ೧೭೨೨ನೇ ಸಿದ್ಧಾರ್ಥಿ ಸಂವತ್ಸರದ ಜ್ಯೇಷ್ಠ ಬಹುಳ ೧೩ (A.D. 1799ನೇ) ಜೂ॥ ತಾರೀಖು ೫ ಭಾನುವಾರ ರೋಹಿಣೀ ನಕ್ಷತ್ರ ದಿವಿ ೧೪॥ ಗಳಿಗೆಗೆ ಸಲ್ಲುವ ಕನ್ಯಾಲಗ್ನದಲ್ಲಿ ಮೈಸೂರು ಲಕ್ಷ್ಮೀರಮಣ ಸ್ವಾಮಿಯ ದೇವಸ್ಥಾನದಲ್ಲಿ.

ಪತ್ನಿಯರು :—(೧) ಶಾ॥ ಶಕ ೧೭೨೪ನೇ ದುರ್ಮತಿ ಸಂವತ್ಸರದ ವೈಶಾಖ ಶುದ್ಧ ೩ ಗುರುವಾರದಲ್ಲಿ ಬೆಟ್ಟದ ಕೋಟೆಗೋಪಾಲರಾಜೇ ಅರಸಿನವರ ಹಿರಿಯಮಕ್ಕಳು ದೇವಾಜಮ್ಮಣ್ಣಿಯವರು. (೨) ಶಾ॥ ಶಕ ೧೭೨೯ನೇ ಅಕ್ಷಯ ಸಂವತ್ಸರದ ವೈಶಾಖ ಶುದ್ಧ ೫ ಬುಧವಾರ ದಿವಿ ೪ ಗಳಿಗೆಯಲ್ಲಿ ಬಾಗಳೀ ದೇವೇಅರಸಿನವರ ಮಕ್ಕಳು ಲಕ್ಷ್ಮೀವಿಲಾಸ ಸನ್ನಿಧಾನದ ದೇವಾಜಮ್ಮಣ್ಣಿಯವರು, ಆನಂತರ ಸೊರೆಗಳವರು ತಮ್ಮ ಇಚ್ಛಾನುಸಾರವಾಗಿ ಮಾಡಿಕೊಂಡ ವಿವಾಹಗಳು. (೩) ಶಾ॥ ಶಕ ೧೭೩೭ನೇ ಭಾವ ಸಂವತ್ಸರದ ವೈಶಾಖ ಶುದ್ಧ ೩ ಯಲ್ಲಿ ಬೆಟ್ಟದ ಕೋಟೆ ಗೋಪಾಲರಾಜೇ ಅರಸಿನವರ ಕಿರಿಯಮಕ್ಕಳು ರಮಾವಿಲಾಸ ಸನ್ನಿಧಾನದ ಚೆಲುವಾಜಮ್ಮಣ್ಣಿಯವರು, (ಅರ್ಕವಿವಾಹ ಪುರಸ್ಸರವಾಗಿ). (೪) ಶಾ॥ ಶಕ ೧೭೪೪ನೇ ವಿಷುಸಂವತ್ಸರದ ಮಾಘ ಶುದ್ಧ ೬ ಸೋಮವಾರ ರಾತ್ರಿ ೧೦ ಗಳಿಗೆಯಲ್ಲಿ ತುರುವೇಕೆರೆ ವೀರರಾಜೇ ಅರಸಿನವರ ಮಕ್ಕಳು ಸೀತಾವಿಲಾಸ ಸನ್ನಿಧಾನದ ದೇವಾಜಮ್ಮಣ್ಣಿಯವರು, (ಕಬಳೀ ವಿವಾಹಪುರಸ್ಸರವಾಗಿ). (೫) ಶಾ॥ ಶಕ ೧೭೪೬ನೇ ಸ್ವಭಾನು ಸಂವತ್ಸರದ ಫಾಲ್ಗುಣ ಬಹುಳ ೪ ಶುಕ್ರವಾರ ರಾತ್ರಿ ಹುಲ್ಲಹಳ್ಳೀ ನಂಜರಾಜೇ ಅರಸಿನವರ ಮಕ್ಕಳು ಹೊಸಸನ್ನಿಧಾನದ ಲಕ್ಷ್ಮಮ್ಮಣ್ಣಿಯವರು, (ಅರಿಸಿನ ವಿವಾಹ).

ಸಂತಾನ:— (೧) ೩ನೇ ಪತ್ನಿಯರಾದ ರಮಾವಿಲಾಸ ಸನ್ನಿಧಾನದ ಚೆಲುವಾಜ ಮ್ಮಣ್ಣಿ ಯವರ ಉದರದಲ್ಲಿ ಶಾ॥ ಶಕ ೧೭೪೦ನೇ ಬಹುಧಾನ್ಯ ಸಂವತ್ಸರದ ಮಾರ್ಗಶಿರ ಶುದ್ಧ ೫ ಸೋಮವಾರ ರಾತ್ರಿ ॥ ಗಳಿಗೆಯಲ್ಲಿ ಜನಿಸಿದ ಕೆಂಪು ಚಾಮಮ್ಮಣ್ಣಿಯವರು ಸ್ವಲ್ಪದಿನವಿದ್ದು ಪ್ರಮಾಥಿ ಸಂವತ್ಸರದ ಚೈತ್ರ ಶುದ್ಧ ೧೫ಕ್ಕವಾರ ಸಾಯಂಕಾಲಕ್ಕೆ ೨ ಗಳಿಗೆ ಇರುವಾಗಲೇ ತೀರಿಹೋದರು.

(೨) ಸ್ವೀಕೃತ ಪುತ್ರರು ಶ್ರೀಮನ್ಮಹಾರಾಜ ಚಾಮರಾಜೇಂದ್ರ ಒಡೆಯರವರು.

ಇವರ ಪಟ್ಟಾಭಿಷೇಕದ ಕಾಲದಲ್ಲಿ ನಡೆದ ವೃತ್ತಾಂತ:— ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿ ಯವರು ವೈಧವ್ಯರಾಗಿರುವ ಸುವಾಸಿನಿಯರುಗಳನ್ನು ಕರೆಸಿ ದೊರೆಗಳವರಿಗೆ ಮಂಗಳಸ್ನಾನ ಮುಂತಾದ ಶುಭಕಾರ್ಯಗಳನ್ನು ಮಾಡಿಸಿ,ಅರಮನೆಯ ಸಂಪ್ರದಾಯಕ್ಕನುಸಾರವಾಗಿ ಶ್ರೀಚಾಮುಂಡೇಶ್ವರಿ ಜ್ವಾಲಾಮುಖಿ ಶ್ರೀಕಂಠೇಶ್ವರ ವೆಂಕಟರಮಣಸ್ವಾಮಿ ಈ ದೇವರು ಗಳಿಗೆ ಕಾಣಿಕೆ ಕಪ್ಪಗಳನ್ನು ಕಟ್ಟಿಸಿ, ಸುವಾಸಿನಿಯರ ಪ್ರಾರ್ಥನೆ ಗಳನ್ನು ಮಾಡಿಸಿ, ಆಭರಣಗಳಿಂದ ಅಲಂಕರಿಸಿ, ಚೀಟಿಕಾಸ್ತ್ರೀ ಯರುಗಳಿಂದ ಅಂತಃಪುರವಲ್ಲಿ ನಡೆಯತಕ್ಕ ರಾಜೋಪಚಾರ ಸೇವೆ ಗಳನ್ನು ಮಾಡಿಸಿದರು. ಆ ಸಮಯದಲ್ಲಿ ಪೂರ್ಣಯ್ಯನು ಸರದಾರರ ಅಪ್ಪಣೆಯ ಮೇರೆಗೆ ಲಕ್ಷ್ಮೀರಮಣಸ್ವಾಮಿ ದೇವಸ್ಥಾನದಲ್ಲಿ ಚಪ್ಪರ ಮೇಲುಕಟ್ಟುಗಳೊಡನೆ ಅಭಿಷೇಕ ಮಂಟಪವನ್ನು ಕಟ್ಟಿಸಿ, ಅಲಂಕಾರ ಮಾಡಿಸಿ, ಸಿಂಹಾಸನವನ್ನು ತರಿಸಿ, ಪಟ್ಟಾಭಿಷೇಕ ಸಾಮಗ್ರಿಗಳನ್ನು ಸಿದ್ಧಮಾಡಿಸಿ, ಸರ್ವಜನರೂ ಬಂದು ಕಾದುಕೊಂಡಿರುವಂತೆ ತಾಕೀತು ಮಾಡಿಸಿ, ನಜರಬಾದು ಕೋಟೆಗೆ ಬಂದು ಸರ್ವಾಲಂಕಾರ ಭೂಷಿತ ರಾಗಿರುವ ದೊರೆಗಳವರಿಗೆ ಹಸ್ತೋದಕವನ್ನು ಬಿಟ್ಟಿಸಿ ಪಲ್ಲಕ್ಕಿಯಲ್ಲಿ ಮುಹೂರ್ತಮಾಡಿಸಿ, ಪಟ್ಟಖಡ್ಗ ಮತ್ತು ಶಿಖಾಸರವನ್ನೂ ಸಹ ಇರಿಸಿ, ಪಟ್ಟಕ್ಕೆ ಯೋಗ್ಯವಾದ ಅನೆ ಕುದುರೆಗಳಿಗೆ ಅಲಂಕಾರಮಾಡಿಸಿ, ಶ್ವೇತ ಚ್ಛತ್ರ ಉಭಯಚಾಮರ ಸೂರಪಾನೆ ಅಷ್ಟಮಂಗಳದ್ರವ್ಯ ಅನೆ ಕುದುರೆ ಧ್ವಜ ಶಂಖಚಕ್ರಾಂಕುಶ ಹನುಮದ್ಗರುಡ ಕಂಠೀರವ ಮೊದ ಲಾದ ಸಮಸ್ತ ಬಿರುದುಗಳಿಂದಲೂ, ವೀಣಾವೇಣುಮೃದಂಗ ಮುಂತಾದ ನಿಶೇಷ ವಾದ್ಯಗಳಿಂದಲೂ, ನರ್ತನಮಾಡುತ್ತಿರುವ ವಾರಾಂಗನೆ

ಯರುಗಳಿಂದಲೂ, ಗದ್ಯ ಪದ್ಯಗಳಿಂದ ಬಿರುದಾವಳಿಯನ್ನು ಪಠಿಸುತ ಲಿರುವ ಹೊಗಳುಭಟ್ಟರಿಂದಲೂ, ಮಹಾರಾಜಮರ್ಯಾದೆಯನ್ನು ಮಾಡಿ ಸುತ್ತ ಲಕ್ಷ್ಮೀರಮಣಸ್ವಾಮಿ ದೇವಸ್ಥಾನಕ್ಕೆ ಕರೆದುಕೊಂಡು ಬರುತ ಲಿರುವೆಲ್ಲಿ ಉಭಯಪಾರ್ಶ್ವಗಳಲ್ಲಿಯೂ ಇಂಗ್ಲಿಷ್ ಬಹದ್ದರವರ ಕಡೆಯ ಸೇನಾಜನರುಗಳೂ ದೊರೆಗಳವರ ಕಡೆಯ ಸೇನಾಜನರುಗಳೂ ಸಾಲು ಸಾಲಾಗಿ ನಿಂತುಕೊಂಡು ಗಾಟುಪರ್ಜೆಟ್ ಸಲಾಮುಗಳನ್ನು ಮಾಡುತ ಲಿರಲು, ಕಟ್ಟಗೆಯವರು ಚಿಕೋಪವಾರರು ಇವರುಗಳಿಂದ ಪರಾಕು ಪರಾಕೆಂದು ಹೊಗಳಿಸಿಕೊಳ್ಳುತ್ತ, ಆ ಜನರುಗಳನ್ನವಲೋಕಿಸಿ ದೇವ ಸ್ಥಾನದ ಸವಿಾಪಕ್ಕೆ ಬಂದನಂತರ ಪೂರ್ಣಯ್ಯನು ಪಸ್ತಲಾಫವನ್ನು ಒಪ್ಪಿಸಿ, ಪಟ್ಟಾಭಿಷೇಕ ಮಂಟಪದ ಭದ್ರಾಸನದಲ್ಲಿ ಮುಹೂರ್ತ ಮಾಡಿಸಿದನು.

ಅನಂತರ ಯಥಾಶಾಸ್ತ್ರವಾಗಿ ಕಂಕಣಧಾರಣೆ ಸಭಾನುಜ್ಞೆ ಪುಣ್ಯಾಹ ನವಗ್ರಹ ದೇವತಾರಾಧನೆ ಅಭಿಷೇಕಾರ್ಥವಾಗಿ ಕಲ್ಪೋಕ್ತ ದೇವತಾಕಲಶಪೂಜೆ ಹವನಹೋಮ ಮುಂತಾದ ಶುಭಕಾರ್ಯಗಳನ್ನು ನೆರವೇರಿಸಿ, ಮುಹೂರ್ತ ಬಂದ ಬಳಿಕ ಜನರಲ್ ಹಾರಿಸ್ಸಾಹೇಬರು ವೆಲೆಸ್ಲಿ ಸಾಹೇಬರು ಕ್ಯೋಸ್ ಬಹದ್ದರವರು ರೀಡ್‌ಸಾಹೇಬರು ಮೆಕೆಂಡ್ರಿಡ್ ಸಾಹೇಬರು ಮುಂತಾದ ಸರದಾರರುಗಳು ತಮ್ಮ ತಮ್ಮ ಮರ್ಯಾದೆಯ ಮೇರೆಗೆ ಟೋಪಿಯನ್ನು ತೆಗೆದು ಕರಗಳಲ್ಲಿ ಹಿಡಿದು ಕೊಂಡು, ಸಿಂಹಾಸನದ ಬಳಿಗೆ ಬಂದು ದೊರೆಗಳವರ ಕಯ್ಯನ್ನು ಪಿಡಿದು ಸಲಾಮುಗಳನ್ನು ಮಾಡಲಾಗಿ ಹೈದರಾಬಾದು ನಿಜಾಮುದ್ದೌಲನ ಕಡೆ ಬಂದಿದ್ದ ಮಿಾರಾಲಂ ಸಹ ಮರ್ಯಾದೆಯ ಮೇರೆಗೆ ಸಲಾಮುಗಳನ್ನು ಮಾಡಿದ ಬಳಿಕ ಸಂತೋಷದಿಂದ ಜನರಲ್ ಹಾರಿಸ್ಸಾಹೇಬರು ಹೈದರಾ ಬಾದು ಮಿಾರಾಲಂ ಇವರಿಬ್ಬರೂ ತೇಜಸ್ಕಾಲಿಗಳಾದ ದೊರೆಗಳವರ ಬಲದ ಎಡದ ಭುಜಗಳನ್ನು ಕ್ರಮವಾಗಿ ಪಿಡಿದುಕೊಂಡು ಸುಮುಹೂರ್ತದಲ್ಲಿ ಸಿಂಹಾಸನದ ಮೇಲೆ ಮುಹೂರ್ತ ಮಾಡಿಸಿ, ಚಾಮರಾಜ ಒಡೆಯರವರ ಪುತ್ರರಾದ ಶ್ರೀನಂಜರಾಜಒಡೆಯರವರಿಗೆ ಯಥಾಶಾಸ್ತ್ರವಾಗಿ ಪಟ್ಟಾಭಿ ಷೇಕವನ್ನು ಮಾಡಿಸಿದರು. ಆ ವೇಳೆಯಲ್ಲಿ ಅನೇಕವಾಗಿ ಫಿರಂಗಿಗಳನ್ನು

ಹಾರಿಸುತ್ತಿರಲು, ಸರ್ವರೂ ಲಾಜಪುಷ್ಪಗಳನ್ನು ಸಮರ್ಪಿಸಿದರು. ಅನಂತರ ಪುರೋಹಿತರು ಜೋಯಿಸರು ಋತ್ವಿಕ್ಕುಗಳು ಮುಂತಾದ ಬ್ರಾಹ್ಮಣರುಗಳು ಉತ್ತಮ ಲಕ್ಷಣಗಳಿಂದೊಡಗೂಡಿ ಪಟ್ಟಕ್ಕೆ ಯೋಗ್ಯವಾದ ಅನೆ ಕುದುರೆಗಳಿಗೆ ಇದೇ ಲಗ್ನದಲ್ಲಿ ದೊರೆಗಳವರ ಆಜ್ಞಾನುಸಾರವಾಗಿ ಪಟ್ಟಾಭಿಷೇಕಮಾಡಿ, ಹಣೆಯ ಮೇಲೆ ಚಿನ್ನದ ಪಟ್ಟೆಯನ್ನು ಕಟ್ಟಿ, ಅನೆಗೆ ಹಂಸರಾಜನೆಂಬುದಾಗಿಯೂ ಕುದುರೆಗೆ ಜಯರಾಮನೆಂಬುದಾಗಿಯೂ ಹೆಸರನ್ನಿಂಟು ಮಾಡಿದರು. ಆಕಾಲದೊಳು ಜನರಲ್ ಹಾರಿಸ್ಸ್ಮಹೇಬರು ದೊರೆಗಳವರಿಗೆ ರತ್ನಾಭಿಷೇಕವನ್ನು ಮಾಡಿ, ವಿಲಾಯತಿ ಕಿಂಗಿಪಾದ ಸ್ಥಾಪರವರು ಕಳುಹಿಸಿಕೊಟ್ಟಿದ್ದ ಪತ್ರಿಕೆಯನ್ನು ಬಿಪ್ಪಿಸಿ, ವಂಶಕ್ರಮವಾಗಿ ಬಂದಿರುವ ಶಿಖಾಸನವನ್ನೂ ಪಟ್ಟದ ಕತ್ತಿಯನ್ನೂ ಸಹ ದೊರೆಗಳವರಿಗೆ ಬಿಪ್ಪಿಸಿ, ಶ್ರೀಕೃಷ್ಣರಾಜಒಡೆಯರವರೆಂಬುದಾಗಿ ಪಟ್ಟಾಭಿಷೇಕನಾಮಧೇಯವನ್ನಿಂಟುಮಾಡಿ, ದೊರೆಗಳವರಿಗೆ ಯೋಗ್ಯವಾದ ವಸ್ತ್ರಾಭರಣ ಅನೆ ಕುದುರೆ ರಥ ಮುಂತಾದ ವಸ್ತುಗಳನ್ನು ಕೈಕಾಣಿಕೆಯಾಗಿ ಬಿಪ್ಪಿಸಿ ಸಲಾಮುಗಳನ್ನು ಮಾಡಿ, ಮಹಾಸ್ವಾಮಿ ನಮ್ಮ ದಣಿಗಳ ಆಜ್ಞಾನುಸಾರವಾಗಿ ಈ ವಸ್ತುಗಳನ್ನು ಬಿಪ್ಪಿಸಿರುವೆವೆಂದು ತಿಳಿಸಿದರು. ಅನಂತರ ವೆಲಿಸ್ಲಿ ಸಾಹೇಬರು ಮುಂತಾದ ಸರದಾರರುಗಳು ಹೈದರಾಬಾದು ಮಿಾರ್‌ಆಲಂ ಪೂರ್ಣಯ್ಯ ಮುಂತಾದ ಎಲ್ಲಾ ಅಧಿಕಾರಸ್ಥರುಗಳು ದೊರೆಗಳವರ ಬಂಧು ಜನಗಳು ಸೆಟ್ಟಿವರ್ತಕರುಗಳು ಪಟ್ಟಣದ ಮಹಾಜನರುಗಳು ಸಹ ಕೈಕಾಣಿಕೆ ಮುಂತಾದುದನ್ನು ಬಿಪ್ಪಿಸಿ ಮುಜರೆಗಳನ್ನು ಮಾಡಿದರು. ಆ ಕಾಲದಲ್ಲಿ ಬುದ್ಧಿಶಾಲಿಯಾದ ಜನರಲ್ ಹಾರಿಸ್ಸ್ಮಹೇಬರು ದೊರೆಗಳವರಿಗೆ ಹಿತವನ್ನು ಮಾಡಬೇಕೆಂದಾಲೋಚಿಸಿ, ರಾಜ್ಯತಂತ್ರದಲ್ಲಿ ಜಾಗರೂಕನಾಗಿ ಸಕಲ ಕಾರ್ಯದಲ್ಲಿಯೂ ಅನುಭವಶಾಲಿಯಾಗಿ ಹಿಂದೆ ನಡೆದ ವಿಚಾರಗಳನ್ನೂ ಮುಂದೆ ನಡೆಯುತಕ್ಕ ವಿಚಾರಗಳನ್ನೂ ತಿಳಿದಿರುವ ಪ್ರಾಜ್ಞನಾದ ಪೂರ್ಣಯ್ಯನನ್ನು ಸಭಾಮಧ್ಯದಲ್ಲಿ ಕರೆದು ಹೇಳಿದುದೇನೆಂದರೆ "ನಾವು ಈಗ ದೊರೆಗಳವರ ಸನ್ನಿಧಿಯಲ್ಲಿ ನಿನಗೆ ಮುಖ್ಯವಾದ ಮಂತ್ರಿಪದವಿಯನ್ನು ಕೊಡಿಸುತಲಿದೇವೆ. ನೀನು ಇಂದುಮೊದಲುಗೊಂಡು ಸಮಸ್ತಕಾರ್ಯಗಳಲ್ಲಿಯೂ ಜಾಗ

ರೂಕನಾಗಿದ್ದು ದೊರೆಗಳವರಿಗೆ ಹಿತವೆನ್ನೇ ಆಚರಿಸುತ್ತ ಈ ಸಂಸ್ಥಾನದ ಪೂರ್ವಮರ್ಯಾದೆಯನ್ನು ಮೀರದೆ ದೊರೆಗಳವರಿಗೆ ಬಾಲ್ಯವೆಯಸ್ಸು ಬೆಳೆದು ಸರ್ವಸ್ವತಂತ್ರರಾಗಿ ರಾಜ್ಯ ಕೋಶ ಮುಂತಾದುವರ ವಿಚಾರಣೆಯನ್ನು ಮಾಡತಕ್ಕ ವಯಸ್ಸು ಬರುವವರೆಗೂ ನೀನೇ ಚೆನ್ನಾಗಿ ಸಕಲ ಕಾರ್ಯಗಳ ವಿಚಾರಣೆಯನ್ನು ಮಾಡಿಕೊಂಡಿದ್ದು, ಆ ಬಳಿಕ ದೊರೆಗಳವರ ಚಿತ್ತಾನುಸಾರವಾಗಿ ಇರುವೆನಾಗು. ನೀನು ಈರೀತಿ ಬಿಟ್ಟು ಮತ್ತೊಂದು ರೀತಿಯಾಗಿ ಇರುವೆನಾದರೆ ಸ್ವಾಮಿದ್ರೋಹಮಾಡಿದ ಜನಗಳಿಗೆ ಮಾಡತಕ್ಕ ಶಿಕ್ಷೆಗೆ ಒಳಗಾಗುವೆ. ನಿನ್ನ ಮನಸ್ಸಿನಲ್ಲಿ ಸುಲ್ತಾನನ ಮಗನಿಗೆ ರಾಜ್ಯವನ್ನು ಕೊಡಿಸಬೇಕೆಂದಿದ್ದ ಅಭಿಪ್ರಾಯವನ್ನು ತಿಳಿದಿದ್ದರೂ ಆ ಅಪರಾಧವನ್ನು ಕ್ಷಮಿಸಿ ಇಲ್ಲಿ ಮಂತ್ರಿಪದವಿಯನ್ನು ಕೊಡಿಸಿದೇವೆ'' ಎಂದು ಹೇಳಿ, ನಮ್ರತೆಯಿಂದಿರುವ ಪೂರ್ಣಯ್ಯನಿಗೆ ದೊರೆಗಳವರಿಂದ ಮುಖ್ಯ ಮಂತ್ರಿಪದವಿಯನ್ನು ಕೊಡಿಸಿದರು. ಮತ್ತು ಇಂಗ್ಲಿಷ್ ಬಹದ್ದರ ಸರದಾರರುಗಳಿಗೂ ದೊರೆಗಳವರಿಗೂ ಪರಸ್ಪರವಾಗಿ ನಡೆಯತಕ್ಕ ವಿಚಾರಗಳ ಅಭಿಪ್ರಾಯಗಳನ್ನೆಲ್ಲ ಯಥಾರ್ಥವಾಗಿ ತಿಳಿಸುವಂತೆ ಬಚ್ಚೆ ರಾಯನಿಗೆ ವಕಾಲತ್ತನ್ನು ತೋಷೀಖಾನೆಯ ಅಧಿಕಾರವನ್ನು ಸಹ ಕೊಡಿಸಿ, ಅತ್ಯಂತ ಬಲಶಾಲಿಯಾದ ಬಾದಾಮಿಬಿಷ್ಟೀ ಪಂತನಿಗೆ ಸವಾರಕಚೇರಿಯ ಬಕ್ಷಿಗಿರಿಯನ್ನು, ಅಣ್ಣಾಜಿರಾಯನಿಗೆ ಈ ಕಚೇರಿಯ ಶಿರಸ್ತೆಯ ಕೆಲಸವನ್ನು, ಖಾನ್‌ಜಹಾರ್‌ಖಾನನಿಗೆ ಬಾರ ಕಚೇರಿಯ ಬಕ್ಷಿಗಿರಿಯನ್ನು, ಬಾಬುರಾಯ ಕೇಶವರಾಯ ಮೊದಲ್ಗೊ ಶ್ರೀನಿವಾಸರಾಯ ರಘುನಾಥರಾಯ ಇವರುಗಳಿಗೆ ದಿವಾನ್‌ಕಚೇರಿಯ ಶಿರಸ್ತೆ ಕೆಲಸಗಳನ್ನು, ವ್ಯಾಸರಾಯನಿಗೆ ಕಮಿಟಿಕಚೇರಿಯ ಅಧಿಕಾರವನ್ನು, ತಿಪ್ಪಯ್ಯನಿಗೆ ಕಿಲ್ಲೆಕಚೇರಿಯ ಅಧಿಕಾರವನ್ನು ಸಹ ನೇಮಿಸಿ, ಈ ಪರಿಯಾಗಿ ಆಯಾಅಧಿಕಾರಕ್ಕೆ ಯೋಗ್ಯರಾದ ಜನರುಗಳಿಗೆ ಕ್ರಮವಾಗಿ ಆಯಾ ಅಧಿಕಾರವನ್ನು ಕೊಡಿಸಿದ ಬಳಿಕ ತಮ್ಮ ದಣಿಗಳ ಆಜ್ಞಾನುಸಾರವಾಗಿ ಕ್ಲೋಸ್‌ಬಹದ್ದರನೆಂಬ ಸರದಾರನಿಗೆ ದೊರೆಗಳವರ ಯೋಗಕ್ಷೇಮಗಳನ್ನು ವಿಚಾರಿಸಿ ತಮ್ಮ ದಣಿಗೆ ತಿಳಿಸತಕ್ಕ ರೆಸಿಡೆಂಟೆಂಬ ಅಧಿಕಾರವನ್ನು ನೇಮಿಸಿ, ಇಲ್ಲಿಯೇ ಇಟ್ಟು,

ಈ ದೇಶಕ್ಕೂ ದೊರೆಗಳವರಿಗೂ ಸಂದರ್ಶನಾರ್ಥವಾಗಿ ವೆಲೆಸ್ಲಿ ಸಾಹೇಬನೆಂಬ ಸರದಾರನನ್ನು ಕೆಲವು ಫೌಜನ್ನು ಸಹ ಶ್ರೀರಂಗಪಟ್ಟಣದಲ್ಲಿ ಇರುವಂತೆ ನೇಮಕ ಮಾಡಿದರು. ಅನಂತರ ದೊರೆಗಳವರು ಜನರಲ್ ಸಾರಿಸ್ಸಾಹೇಬರು ಮುಂತಾದ ಸರದಾರರುಗಳಿಗೆ ಅವರವರ ಮಾನಾನು ಗುಣವಾಗಿ ವೆಸ್ತ್ರಾಭರಣ ಹೂವಿನ ಹಾರ ವೀಳ್ಯಗಳನ್ನು ಕೊಡಿಸಿ ಮರ್ಯಾದೆ ಮಾಡಿದರು.

ಬಳಿಕ ಅಧಿಕಾರಸ್ಥರು ಬಂಧುಗಳು ಮೊದಲಾದ ಜನರುಗಳಿಗೂ ಸೆಟ್ಟಿವರ್ತಕರು ಮುಂತಾದ ಪಣಕಟ್ಟಿನ ಜನರುಗಳಿಗೂ ಹೂವಿನ ಹಾರ ವೀಳ್ಯಗಳನ್ನು ಕೊಡಿಸಿ, ಅವರು ತಂದ ಕೈ ಕಾಣಿಕೆಗಳನ್ನು ಒಪ್ಪಿಸಿ ಕೊಂಡು, ಅವರುಗಳಿಂದ ನಜರು ಮುಜರೆಗಳನ್ನು ತೆಗೆದುಕೊಂಡರು. ಈ ಪರಿಯಾಗಿ ಪಟ್ಟಾಭಿಷೇಕಮಹೋತ್ಸವವು ಬೆಳೆದ ಬಳಿಕ ಪೂರ್ಣಯ್ಯನು ಹಸ್ತಲಾಘವವನ್ನು ಪಿಡಿದು ಪಲ್ಲಕ್ಕಿಯಲ್ಲಿ ದೊರೆಗಳವರನ್ನು ಮುಹೂರ್ತಮಾಡಿಸಿ ಚಿತ್ತೈಸುತಲಿರುವ ಸಮಯದಲ್ಲಿ ಇಂಗ್ಲಿಷ್ ಸರದಾರಬಹದ್ದರವರುಗಳೆಲ್ಲಾ ತಮ್ಮ್ಮತಮ್ಮ ಮರ್ಯಾದಾನುಗುಣವಾಗಿ ಪಲ್ಲಕ್ಕಿಯ ಮುಂದುಗಡೆಯಲ್ಲಿ ಉಭಯ ಪಾರ್ಶ್ವದಲ್ಲಿಯೂ ತಮ್ಮ್ಮ ಸೇನೆಗಳಿಂದ ಗಾಬ್ ಪರ್ಜಿಟ್ ಸಲಾಮುಗಳು ಮುಂತಾದ ಮರ್ಯಾದೆಗಳನ್ನು ಮಾಡಿಸುತ ಪೂರ್ವದಂತೆ ಅನೇಕವೈಭವದಿಂದ ನಜರಬಾದಿನ ಅರಮನೆಗೆ ಕರದುಕೊಂಡು ಹೋಗಿ ಬಿಟ್ಟು ತಮ್ಮ್ಮ ಗುಡಾರಗಳಿಗೆ ಹೊರಟುಹೋದರು.

ಆಗ ಪೂರ್ಣಯ್ಯನು ಹಸ್ತಲಾಘವವನ್ನು ಹಿಡಿದಿರಲು ನಜರಬಾದಿನ ಅರಮನೆಯ ಬಾಗಿಲಲ್ಲಿ ಮುತ್ತೈದೆಯರು ಆರತಿಗಳನ್ನು ಮಾಡಿದನಂತರ ದೊರೆಗಳವರು ಅಂತಃಪುರಕ್ಕೆ ಚಿತ್ತೈಸುತಲಿರುವ ಸಮಯದಲ್ಲಿ, ಮಹಾ ಮಾತೃಶ್ರೀ ಲಕ್ಷ್ಮಮ್ಮಣಿ ಯವರ ಆಜ್ಞಾನುಸಾರವಾಗಿ ಅರಮನೆಯ ಸಂಪ್ರದಾಯದ ಮೇರೆಗೆ ಚೇಟಿಕಾಸ್ತ್ರೀಯರುಗಳು ಚಿನ್ನದ ಪರಿವಾಣದಲ್ಲಿ ರನ್ನದ ಕಲಶಗಳಿಂದ ಪಾದಗಳನ್ನು ತೊಳೆದು, ಬಾಗಿಲಲ್ಲಿ ದೃಷ್ಟಿ ಪರಿಹಾರಾರ್ಥವಾಗಿ ಆರತಿಗಳನ್ನು ಮಾಡಿದನಂತರ, ಮಹಾರಾಜ ಮರ್ಯಾದೆಗಳನ್ನು ತಿಳಿದಿರುವ ಚೇಟಿಕಾಸ್ತ್ರೀಯರುಗಳು ಉಭಯಪಾರ್ಶ್ವದಲ್ಲಿಯೂ ಹಸ್ತಲಾಘವವನ್ನು ಹಿಡಿದು, ಉಮಾಪಕ್ಷಿಯ ಗರಿಗಳಿಂದ

ಮೊಡಲ್ಪಟ್ಟ ಮೋಚರ್ಲಾಲುಗಳಿಂದಲೂ ಶ್ವೇತಚ್ಛತ್ರ ಉಭಯ ಚಾಮರ ವೀಳ್ಯ ಕಾಳಂಜಿ ಏಟಪಾವಡೆ ಕನ್ನಡಿ ಬೀಸಣಿಗೆ ಮುಂತಾದವುಗಳಿಂದಲೂ, ಮಹಾರಾಜೋಪಚಾರಗಳನ್ನು ಮಾಡಿ ನವರತ್ನದ ಪೀಠದಲ್ಲಿ ಮುಹೂರ್ತ ಮಾಡಿಸಿ, ನವರತ್ನದ ಆರತಿಗಳನ್ನೆತ್ತಿದರು. ಬಳಿಕ ಮಹಾ ಮಾತೃಶ್ರೀಯವರು ಮುಂತಾದ ಬಂಧುಜನಸ್ತ್ರೀಯರುಗಳು ತಮ್ಮ ತಮ್ಮ ಮರ್ಯಾದಾನುಗುಣವಾಗಿ ಅಡ್ಡಬೀಳತಕ್ಕವರು ಅಡ್ಡ ಬಿದ್ದು ಆಶೀರ್ವಾದ ಮಾಡತಕ್ಕವರು ಆಶೀರ್ವಾದವನ್ನು ಮಾಡಿದನಂತರ ದೊರೆಗಳವರು ಬಂಧುಜನ ಸಮೇತರಾಗಿ ಆರೋಗಣೆಯನ್ನು ಒಪ್ಪಿಸಿಕೊಂಡರು. ಆ ದಿನದರಾತ್ರಿಮೊದಲು ೫ ದಿವಸ ಆರತಿಯುಷ್ಣತೆ ಮುಂತಾದ ಉತ್ಸವವು ಅತಿಸಂಭ್ರಮದಿಂದ ಬೆಳೆಯಿತು.

ದೇಶಕೋಶಗಳ ವ್ಯವಸ್ಥೆ.—ಮರುದಿನ ಪ್ರಾತಃ ಕಾಲದಲ್ಲಿ ಪೂರ್ಣಯ್ಯನವರು ಜನರಲ್‌ಹಾರಿಸ್ಸ್ಮಹೇಬರು ಮುಂತಾದ ಮುಖ್ಯ ಸರದಾರರ ಬಳಿಗೆ ಹೋಗಿ, ಅವರುಗಳನ್ನು ಕರೆದುಕೊಂಡು ಬಂದು ತೆರೆಮರೆಯಲ್ಲಿರುವ ಮಹಾಮಾತೃಶ್ರೀ ಲಕ್ಷ್ಮಮ್ಮಣಿಯವರಿಗೂ ಮಹಾರಾಜಯೋಗ್ಯವಾದ ಪೀಠದಲ್ಲಿ ಮುಹೂರ್ತಮಾಡಿರುವ ದೊರೆಗಳವರಿಗೂ ಭೇಟಿಮಾಡಿಸುವ ಕಾಲದಲ್ಲಿ, ಆ ಸರದಾರರುಗಳು ತಮ್ಮೆತಮ್ಮ ಮರ್ಯಾದೆಯ ಮೇರೆಗೆ ಬಂದು ಸಲಾಮುಗಳನ್ನು ಮಾಡಿ ಕುಳಿತುಕೊಂಡು ದೇಶಕೋಶ ವ್ಯವಸ್ಥೆಗಳನ್ನು ಚೆನ್ನಾಗಿ ನಿಬಂಧನೆಮಾಡಿ, ಇಲ್ಲಿರಿಸಿರುವ ತಮ್ಮ ಫೌಜಿನ ಖರ್ಚು ಮುಂತಾದ ಖರ್ಚುಗಳಿಗೆ ಈ ಸೀಮೆಯಿಂದ ಕೆಲವು ದ್ರವ್ಯವನ್ನು ಕೊಡಬೇಕೆಂಬದಾಗಿ ನಿಗದಿಮಾಡಿದುದಲ್ಲದೆ ನಮಗೆ ಕಾರ್ಯ ಬಿದ್ದಾಗ ನಿಮ್ಮ ಫೌಜನ್ನು ಸಹಾಯವಾಗಿ ಕಳುಹಿಸಿಕೊಡಬೇಕೆಂಬದಾಗಿಯೂ ಮತ್ತು ನಿಮ್ಮಲ್ಲಿ ನಡೆಯುತಕ್ಕ ನವರಾತ್ರಿ ಮುಂತಾದ ಉತ್ಸವಗಳಿಗೆ ನೀವು ಅಪ್ಪಣೆಯನ್ನು ಕೊಟ್ಟು ಕಳುಹಿಸಿದರೆ ನಮ್ಮ ಕಡೆಯ ಸರದಾರರುಗಳು ಬಂದು ಆ ಮಹೋತ್ಸವಗಳನ್ನು ನೋಡಿ ಅಪ್ಪಣೆಯನ್ನು ತೆಗೆದುಕೊಂಡು ಹೊರಟುಹೋಗುವರೆಂಬದಾಗಿಯೂ ಹೇಳಿದರು. ಅನಂತರ ಲಕ್ಷ್ಮಮ್ಮಣ್ಣಿಯವರು ನಮ್ಮ ಚಾಕರನಾಗಿದ್ದು ನಮ್ಮ ದೇಶ ಕೋಶಗಳನ್ನು ತಾನೇ ಆಕ್ರಮಿಸಿ ಲೋಕಕಂಟಕನಾಗಿದ್ದ

ಸುಲ್ತಾನನನ್ನು ಸೆಂಪರಿಸಿ, ಸ್ವಾಧೀನಮಾಡಿಕೊಂಡವೆಂಬವರೂ ನೀವು ಸತ್ಯಸಂಧರೂ ಸರ್ವಕಾಲದಲ್ಲಿಯೂ ನೀರಮೇಲೆ ಸಂಚಕಾರಮಾಡುವವರೂ ಆಗಿರುವೆಕಾರಣ ನಮ್ಮ ದೇಶವನ್ನು ಜೀರ್ಣೋದ್ಧಾರಮಾಡಿ ಪೂರ್ವದಂತೆ ನಮ್ಮ ಅಧೀನಮಾಡಿರಿವಿ. ಇಂಥಾ ನಿಮಗೂ ನಮಗೂ ಸ್ನೇಹವು ಕಪಟವಿಲ್ಲದೆ ಸೂರ್ಯಚಂದ್ರರಿರುವ ಪರ್ಯಂತ ಶಾಶ್ವತವಾಗಿ ಇರಬೇಕೆಂದು ಹೇಳಿ ಹೂವಿನಹಾರ ವೀಳ್ಯಯುಗಳನ್ನು ಕೊಡಿಸಿ ಮರ್ಯಾದೆ ಮಾಡಿ ಕಳುಹಿಸಿದರು.

ಅರಮನೆಯಲ್ಲಿ ನಡೆಯತಕ್ಕ ಆಯುಷ್ಟಿನ ನಿಬಂಧನೆ.—ಅನಂತರ ಮರು ದಿನದ ಪ್ರಾತಃಕಾಲದಲ್ಲಿ ಪೂರ್ಣಯ್ಯನವರು ದೊರೆಗಳವರ ಪತ್ತಮ್ಮಯ್ಯನವರ ಆಜ್ಞೆಯಿಂದ ಅರಮನೆಯಲ್ಲಿ ಪೂರ್ವಪ್ರಕಾರವಾಗಿ ಪದ್ಧತಿಗಳನ್ನೆಲ್ಲಾ ಆಯಕಟ್ಟುಮಾಡಿ, ದೊರೆಗಳವರ ಸೇವೆಯನ್ನು ಮಾಡುವುದಕ್ಕೆ ಹಳಬರಾಗಿ ಆಪ್ತರಾದ ಸಜ್ಜನರುಗಳನ್ನಿಟ್ಟು ಆಯಾ ಕೆಲಸದ ಅಧಿಕಾರಸ್ಥರುಗಳನ್ನೆಲ್ಲಾ ತಮ್ಮ ತಮ್ಮ ಕೆಲಸದಲ್ಲಿ ಜಾಗರೂಕರಾಗಿರುವಂತೆ ನೇಮಿಸಿ, ದೊರೆಗಳವರ ಬಂಧುಜನಗಳಿಗೂ ಆಶ್ರಿತರಾದ ಬ್ರಾಹ್ಮಣರು ಮುಂತಾದ ಜನರುಗಳಿಗೂ ಅನೇಕವಾಗಿ ಜೀವನೋಪಾಯವನ್ನು ಕಲ್ಪಿಸಿದುದಲ್ಲದೆ, ಪ್ರತಿನಿತ್ಯದಲ್ಲಿಯೂ ೫ ಜಪ, ೫ ನಿತ್ಯದಾನಗಳು ನಡೆವಂತೆ ೧೦ ಜನ ಬ್ರಾಹ್ಮಣರಿಗೆ ನೇಮಿಸಿ, ಜನರಲ್ ಹಾರಿಸ್ಸಾಹೇಬರು ಹೇಳಿದ್ದಮೇರೆಗೆ ಮೈಸೂರು ಪಟ್ಟಣಕ್ಕೆ ಸುತ್ತಲೂ ದೃಢವಾಗಿ ಮನೋಹರವಾದ ಕೋಟೆಕೊತ್ತಲ ಪೇಟೆ ಮುಂತಾದವುಗಳನ್ನು ಜಾಗ್ರತೆಯಿಂದ ಕಟ್ಟಿಸಿ, ಆ ಕೋಟೆಯ ಮಧ್ಯಭಾಗದಲ್ಲಿ ಅನೇಕವಾದ ಉಪ್ಪರಿಗೆಗಳಿಂದಲೂ ಸುತ್ತಲೂ ಅಧಿಕಾರಕ್ಕೆ ಯೋಗ್ಯವಾದ ಪಜಾರಗಳಿಂದಲೂ ಮನೋಹರವಾದ ಉದ್ಯಾನಗಳಿಂದಲೂ ವಿಚಿತ್ರವಾದ ಅರಮನೆಯನ್ನು ನಿರ್ಮಿಸಿ, ಅರಮನೆಯ ಉಭಯ ಪಾರ್ಶ್ವಗಳಲ್ಲಿಯೂ ೧೪ ಕಛೇರಿಗಳನ್ನು ಕ್ರಮೇಕ್ರಮವಾಗಿ ಕಟ್ಟಿಸಿ, ಮುಂಭಾಗದಲ್ಲಿ ನೌಬತ್ತು ಖಾನೆಯನ್ನು ನಿರ್ಮಿಸಿ ಈ ಸ್ಥಳದಲ್ಲಿ ಜಾಗರೂಕರಾದ ಪಹರೆಯವರನ್ನು ನೇಮಿಸಿದರು.

ದೊರೆಗಳವರ ವಿದ್ಯಾಭ್ಯಾಸ.—ಆ ಬಳಿಕ ಮೆಹಾಮೊತ್ತಶ್ರೀಯವರು ದೊರೆಗಳವರಿಗೆ ವಿದ್ಯಾಭ್ಯಾಸ ಮಾಡಿಸಬೇಕೆಂದು ಆಲೋಚಿಸಿ, ಸಕಲ ಕಾರ್ಯಗಳಿಗೂ ಉಪಯುಕ್ತವಾದ ರಾಜನೀತಿ ಮುಂತಾದ ಶಾಸ್ತ್ರಗಳನ್ನೂ ಕರ್ಣಾಟಕ ಮೆಹಾರಾಷ್ಟ್ರ ಫಾರ್ಸಿ ಮುಂತಾದ ಭಾಷೆಗಳನ್ನೂ ಸಂಗೀತಸಾಹಿತ್ಯ ಗಣಿತವಿದ್ಯೆ ಧನುರ್ವಿದ್ಯೆಗಳು ಮತ್ತು ಶರೀರಕ್ಕೆ ಪುಷ್ಟಿಯನ್ನುಂಟುಮಾಡುವ ಗರಡಿಯ ಸಾಧಕ ಅಶ್ವವಿದ್ಯೆ ಮೊದಲಾದ ಉತ್ತಮ ವಿದ್ಯೆಗಳನ್ನೆಲ್ಲಾ ಅಭ್ಯಾಸಮಾಡಿಸುವರೆಂದು ವಂಶಕ್ರಮದಿಂದ ಆಪ್ತರಾಗಿ ಬಂದಿರುವ ಆಯಾವಿದ್ಯೆಯಲ್ಲಿ ಕುಶಲರಾದ ಜನರುಗಳನ್ನು ನೇಮಿಸಿ ಪ್ರಾರಂಭಮಾಡಿಸಿದರು.

ನವರಾತ್ರಿಯ ಉತ್ಸವ.—ಅಷ್ಟರಲ್ಲಿಯೇ ನವರಾತ್ರೋತ್ಸವವು ಪ್ರಾಪ್ತವಾಗಲು, ಈ ಸಿದ್ಧಾರ್ಥಿ ಸಂವತ್ಸರದ ಆಶ್ವಯುಜ ಶುದ್ಧ ೧ ಸೋಮವಾರದಲ್ಲಿ ದೊರೆಗಳವರು ಮಂಗಳ ಸ್ನಾನವನ್ನು ಮಾಡಿ ದೀಕ್ಷಾವಸ್ತ್ರವನ್ನು ಧರಿಸಿಕೊಂಡು ಅರಮನೆಯ ಚಾಮುಂಡೇಶ್ವರೀ ಸನ್ನಿಧಿಯಲ್ಲಿ ಕಂಕಣ ಧಾರಣೆಯಾದನಂತರ ಸರ್ವಾಲಂಕಾರ ಭೂಷಿತರಾಗಿ ಸಮಸ್ತ ರಾಜೋಪಚಾರಗಳಿಂದ ಪಲ್ಲಕ್ಕಿಯಲ್ಲಿ ಮುಹೂರ್ತಮಾಡಿ ಸೈನಿಕರು ಮುಂತಾದ ಸಕಲ ಜನರುಗಳಿಂದೊಡಗೂಡಿ, ನಜರಬಾದಿನ ಅರಮನೆಯಿಂದ ರಾಜ್ಯಲಕ್ಷ್ಮಿಗೆ ಆವಾಸಸ್ಥಾನವಾದ ಮೈಸೂರರಮನೆಯ ಸೆಜ್ಜೆಗೆ ಚಿತ್ತೈಸಿ, ಕಾಳಿಕಾಪುರಾಣೋಕ್ತ ಪ್ರಕಾರವಾಗಿ ರತ್ನಸಿಂಹಾಸನಕ್ಕೆ ಪೂಜೆಯನ್ನು ಮಾಡಿ ನಮಸ್ಕರಿಸಿ, ಶಿಖಾಸರದ ಮೊಹರನ್ನು ಪಟ್ಟದ ಕತ್ತಿಯನ್ನು ಸಹಬಪ್ಪಿಸಿಕೊಂಡು, ಸುಮುಹೂರ್ತದಲ್ಲಿ ಸಿಂಹಾಸನಾರೋಹಣ ಮಾಡಿದರು. ಆಗ ೨೧ ಕುಶಾಲು ಫಿರಂಗಿಗಳು ಹಾರಿಸಲ್ಪಟ್ಟವು. ಸರ್ವಜನರೂ ಚಿನ್ನ ಬಳ್ಳಿಹೂವು ಲಾಜಪುಷ್ಪಾಕ್ಷತೆಗಳನ್ನು ಸಮರ್ಪಿಸಿದರು. ಬ್ರಾಹ್ಮಣರು ದೊರೆಗಳವರಿಗೆ ಯಥಾಶಾಸ್ತ್ರವಾಗಿ ಅಭಿಷೇಕಮಾರ್ಜನೆ ಮಾಡಿ ಆಶೀರ್ವಾದಫಲಮಂತ್ರಾಕ್ಷತೆಗಳನ್ನು ಒಪ್ಪಿಸಿದರು. ಬಳಿಕ ಪೂರ್ಣಯ್ಯ ಮುಂತಾದ ಅಧಿಕಾರಸ್ಥರು ಅರಸುಗಳು ಮೊದಲಾದ ಸರ್ವಜನರುಗಳು ತಮ್ಮ ತಮ್ಮ ಮರ್ಯಾದಾನುಸಾರವಾಗಿ ನಜರು ಮುಜರೆಗಳನ್ನು ಮಾಡಿ, ಕೈ ಕಟ್ಟಿಕೊಂಡು

ಚಿನ್ನಬೆಳ್ಳಿಯ ಸೋಟೆ ಆಸೆಗಳನ್ನು ಪಿಡಿದಿರುವೆ ಕಟ್ಟಗೆಯವೆರೂ ಚಿಕೋಪದಾರರೂ ತೋರಿಸಿದ ಸ್ಥಲಗಳಲ್ಲಿ ಕುಳಿತುಕೊಂಡರು. ಆ ಸಮೆಯದಲ್ಲಿ ಉಭಯಪಾರ್ಶ್ವದಲ್ಲಿಯೂ ಶಂಖ ಚಕ್ರಾಂಕುಶ ಧನುಮೆದ್ದ ರುಡಧ್ವಜ ಮೊದಲಾದ ಬಿರುದುಗಳನ್ನು ಪಿಡಿದಿರುವೆ ಜನರುಗಳಿಂದಲೂ ವಂಶಪಾರಂಪರ್ಯವಾಗಿ ಬಂದು ಗದ್ಯಪದ್ಯಗಳಿಂದ ಹೊಗಳುತಲಿರುವೆ ಭಟ್ಟರುಗಳಿಂದಲೂ ವೀಣಾವೇಣು ಮೃದಂಗ ಮೊದಲಾದ ಗಾನ ವಿದ್ಯೆ ಯಲ್ಲಿ ಕುಶಲರಾಗಿ ನರ್ತನ ಮಾಡುತಲಿರುವೆ ವೇಶ್ಯಾ ಸ್ತ್ರೀಯರು ಗಳಿಂದಲೂ ಭೂಮ್ಯಂತರಿಕ್ಷ ದಿಕ್ಕುಗಳನ್ನು ವ್ಯಾಪಿಸುವಂತೆ ಧ್ವನಿ ಮಾಡುವೆ ಕೊಂಬು ಕಹಳೆ ತಮಟೆ ನಗಾರಿ ನೌಬತ್ತು ಮುಂತಾದ ಅನೇಕ ವಾದ್ಯ ವಿಶೇಷಗಳಿಂದಲೂ ಸಾಲುಸಾಲಾಗಿ ನಾಲ್ಕು ದಿಕ್ಕುಗಳಲ್ಲಿಯೂ ಆನೆ ಕುದುರೆ ಒಂಟೆ ಬಾರು ಸವಾರರು ತುರುಪು ಬೆಳ್ಳಿಯ ಗಗ್ಗರಿ ಛಾಲೆ ಸಾಂಗಗರೀಟಿಗಳನ್ನು ಪಿಡಿದಿರುವೆ ಓಲೆಕಾರರುಗಳಿಂದಲೂ, ಬಾಣದಾರ ರಾಚೆವಾರರು ಮುಂತಾದ ಸೇನಾಜನರುಗಳಿಂದಲೂ, ಅತ್ಯಂತ ಶೋಭಾಯ ಮಾನವಾಗಿರುವೆ ಕೆಮ್ಮಣ್ಣು ಮಟ್ಟಿಯಲ್ಲಿ ಅಲಂಕಾರಮಾಡಿರುವೆ ಪಟ್ಟ ದಾನೆ ಕುದುರೆಗಳು ಬಂದು ದೊರೆಗಳವೆರಿಗೆ ಅಡ್ಡಬಿದ್ದು ಅತಿವೈಭವದಿಂದ ಕೆರೆಗೆ ಹೋಗಿ ಬೆಟ್ಟದ ಕೋಟೆ ಮನೆತನದ ತಿಮ್ಮಪ್ಪರಾಜೇಅರಸು ದೊರೆಗಳವರ ಆಜ್ಞಾನುಸಾರವಾಗಿ ಕನ್ನಾಕನ್ನಡಿಗೂ ಆನೆ ಕುದುರೆಗ ಳಿಗೂ ಪೂಜೆಮಾಡಿದನಂತರ ಕೆರೆಯಿಂದ ಪೂರ್ವದಂತೆ ಮೆರ್ಯಾದೆಯೊಡ ಗೂಡಿ ಅರಮನೆಗೆ ಬರುತಲಿರುವೆ ಸಮೆಯದಲ್ಲಿ ಸೆಜ್ಜೆಯ ಮೇಲೆ ಸರ್ವರಿಗೂ ಹೂವಿನ ಹಾರ ವೀಳೆಯಗಳನ್ನು ಕೊಟ್ಟು ಮುಜರೆಮಾಡಿದ ಮೇಲೆ ಎಲ್ಲರನ್ನೂ ಕಳುಹಿಸಿದನಂತರ ದೊರೆಗಳವೆರು ಚೇಟಿಕಾಸ್ತ್ರೀ ಯರುಗಳಿಂದ ರಾಚಕೋಪಚಾರವನ್ನು ಮಾಡಿಸಿಕೊಳ್ಳುತ್ತಲಿರಲು ಮಹಾ ಮಾತೃಶ್ರೀ ಲಕ್ಷಮ್ಮಣ್ಣಿಯವೆರು ಮುಂತಾದ ಮಾತೃಶ್ರೀಯವರುಗಳು ತಮ್ಮ ತಮ್ಮ ಮೆರ್ಯಾದೆಯ ಪ್ರಕಾರ ಸಿಂಹಾಸನಕ್ಕೆ ನಮಸ್ಕಾರಮಾಡಿ, ದೊರೆಗಳವರಿಗೆ ಹರಸಿದನಂತರ ಅರಸುಗಳು ಮುಂತಾದವರುಗಳ ಮನೆ ಹೆಂಗಸರುಗಳು ಅಡ್ಡಬಿದ್ದು ಹೊರಟು ಹೋದ ಬಳಿಕ ದೊರೆಗಳವೆರು ಸಿಂಹಾಸನದಿಂದ ಇಳಿದು, ಪೂರ್ವಮೆರ್ಯಾದೆಯ ಮೇರೆಗೆ ಸಜ್ಜರಬಾದಿನ

ಅರಮನೆಗೆ ಚಿತ್ತೈಸಿ, ಅಲ್ಲಿ ಅಂತಃಪುರದಲ್ಲಿ ನಡೆಯತಕ್ಕ ಆರತಿ ಮುಂತಾದ ಚೇಟಿಕಾಸ್ತ್ರೀಯರುಗಳ ಸೇವೆಗಳನ್ನಂಗೀಕರಿಸಿ ಆರೋಗಣೆಯನ್ನು ಒಪ್ಪಿಸಿಕೊಂಡು ಸುಖದಿಂದಿದ್ದರು.

ಅನಂತರ ಮೂರನೆಯ ಜಾವದಲ್ಲಿ ಅಧಿಕವೈಭವದೊಡನೆ ನಜರಬಾದಿನ ಅರಮನೆಯಿಂದ ದೊರೆಗಳವರ ಸವಾರಿ ಮೈಸೂರರಮನೆಯ ಸಿಜ್ಜೆಗೆ ಚಿತ್ತೈಸಿ, ಸಿಂಹಾಸನಾರೋಹಣಾನಂತರ ಅರಸುಗಳು ಮುಂತಾದವರು ತಮ್ಮ ತಮ್ಮ ಮರ್ಯಾದೆಯ ಮೇರೆಗೆ ಕತ್ತಿಯನ್ನು ಪಿಡಿದುಕೊಂಡು ತಲೆವಾಗಿ ಮುಜರೆಗಳನ್ನು ಮಾಡಿ, ಸಿಜ್ಜೆಯ ಮೇಲಕ್ಕೆ ಬಂದು ಕೈಕಟ್ಟಿಕೊಂಡು ಕುಳ್ಳಿರಲು, ಪೂರ್ಣಯ್ಯ ಮೊದಲಾದವರು ಮುಜರೆಯನ್ನು ಮಾಡಿದ ಬಳಿಕ ಪ್ರಾತಃಕಾಲದಂತೆ ಅತಿಶೋಭಾಯಮಾನವಾಗಿರುವ ಕೆಮ್ಮಣ್ಣು ಮೆಟ್ಟಿಯ ಬಂದು ಕಡೆಯಲ್ಲಿ ಜಟ್ಟಿಗಳನ್ನು ಕ್ರಮದಿಂದ ಜೊತೆಜೊತೆಯಾಗಿ ಕಾಳಗಕ್ಕೆ ಬಿಟ್ಟು, ಅವರುಗಳ ಸೋಲು ಗೆಲವುಗಳನ್ನು ಪರಾಂಬರಿಸಿ ಉಡುಗೆರೆ ಅಂಪಕಪ್ರೋಪಣವನ್ನು ಕೊಡುತಿರಲು, ಕೆಮ್ಮಣ್ಣು ಮೆಟ್ಟಿಯ ಮತ್ತೊಂದೆಡೆಯಲ್ಲಿ ಕೋಣ ಟಗರುಗಳ ಕಾಳಗವನ್ನೂ, ಗಾರಡಿಗರು ಪೈಲವಾನರು ದೊಂಬರು ಇವರ ಆಟಗಳನ್ನೂ ಇಂದ್ರಜಾಲ ಮಹೇಂದ್ರಜಾಲ ಕುಸ್ತಿ ಮುಂತಾದವುಗಳನ್ನೂ ಮಾಡಿಸುತಲಿರುವ ಸಮಯದಲ್ಲಿ, ರೆಸಿಡೆಂಟು ಕ್ಲೋಸ್ ಬಹದ್ದರರು ಮುಂತಾಗಿ ಬಂದ ಸರದಾರರುಗಳಿಗೆ ಸನ್ಮಾನವನ್ನು ಮಾಡಿದರು. ಅನಂತರ ಪ್ರಾತಃಕಾಲದಂತೆ ಪಟ್ಟದಾನೆ ಕುದುರೆಗಳು ಕೆರೆಗೆ ಹೋಗಿ ಅಲ್ಲಿ ಪೂಜೆಯಾದ ಬಳಿಕ ದೀವಟಿಗೆ ಸಲಾಂ ಮುಜರೆಗಳನ್ನು ಮಾಡಿಸಿಕೊಂಡು ಅರಮನೆಗೆ ಬರುವಷ್ಟರಲ್ಲಿಯೇ ದೊರೆಗಳವರಿಗೆ ಕೆಮ್ಮಣ್ಣು ಮೆಟ್ಟಿಯಲ್ಲಿ ದೀವಟಿಗೆ ಸಲಾಂ ಮಾಡಿದನಂತರ ಮೂರನೆಯ ಜಾವದಂತೆ ಸರ್ವಜನರೂ ತಮ್ಮ ತಮ್ಮ ಪದ್ಧತಿಯ ಮೇರೆಗೆ ಕೆಲವರು ಕತ್ತಿಗಳನ್ನು ಪಿಡಿದು ಮಾಡುವ ಮುಜರೆ ಸಲಾಮುಗಳನ್ನೂ, ಆಶ್ಚರ್ಯಕರವಾದ ಮಹತಾಪ್ರ ಬಾಣಬಿರುಸುಗಳನ್ನೂ, ಅವಲೋಕಿಸುತ್ತ ಓಲಗವನ್ನು ತೆಗೆದುಕೊಳ್ಳುತ್ತಲಿರುವ ಸಮಯದಲ್ಲಿ, ಪಟ್ಟದಾನೆ ಕುದುರೆಗಳು ಬಂದು ಅಡ್ಡಬೀದಿಯ ಅರಮನೆಯೊಳಗೆ ಆರತಿಯನ್ನೆತ್ತಿವ ಮೇಲೆ ಸ್ವಸ್ಥಾನವನ್ನು ಸೇರಲು, ಓಲಗಕ್ಕೆ

ಬಂದಿದ್ದ ಸರದಾರರು ಮುಂತಾದ ಸಕಲ ಜನರುಗಳಿಗೂ ಹೂವಿನ ಹಾರ ವೀಳ್ಯಗಳನ್ನು ಅಪ್ಪಣೆ ಕೊಡಿಸಿ, ಮುಜರೆಯನ್ನು ತೆಗೆದು ಕೊಂಡು, ೫ ಕುಶಾಲು ಪಿತಂಗಿಯನ್ನು ಹಾರಿಸುತಲಿರುವ ಸಮಯದಲ್ಲಿ ದೊರೆಗಳವರು ಸಿಂಹಾಸನದಿಂದಿಳಿದನಂತರ ಸರ್ವಜನರುಗಳೂ ಅಡಿ ದಾವರೆಗಳಿಗೆ ಪ್ರಣಾಮ ಮಾಡುತಲಿರುವುದನ್ನು ಹಸನ್ಮುಖರಾಗಿ ಅವ ಲೋಕಿಸುತ, ಮೂರನೆಯ ಜಾವದಂತೆ ಅತಿಶಯವಾದ ವೈಭವದಿಂದ ನಜರಬಾದು ಕೋಟೆಯ ಅರಮನೆಗೆ ಚಿತ್ತೈಸಿ ಅಲ್ಲಿ ಚಕ್ಕಟಿಕಾಸ್ತ್ರೀ ಯರುಗಳ ಸೇವೆಗಳನ್ನಂಗೀಕರಿಸಿ, ದೃಷ್ಟಿದೋಷಪರಿಹಾರಾರ್ಥವಾಗಿ ಮಾಡಿದ ಆರತಿಗಳನ್ನು ಪರಾಂಬರಿಸಿದನಂತರ ನವರತ್ನದ ಆರತಿಯನ್ನು ಅವಲೋಕಿಸಿ ಆರೋಗಣೆಯನ್ನು ಒಪ್ಪಿಸಿಕೊಂಡು ಸುಖದಿಂದಿದ್ದರು.

ಈ ಪರಿಯಾಗಿ ನವರಾತ್ರಿಯು ಒಲಗವು ಬೆಳೆಯುತಿರುವ ಸಮಯು ದಲ್ಲಿ, ಮೂಲಾನಕ್ಷತ್ರದಲ್ಲಿ ಸರಸ್ವತೀ ಪೂಜೆಯುಂಮಾಡಿ, ಮಹಾನವಮಿಯಾ ದಿವಸ ನವಮಿಯ ಹೊತ್ತಿನಲ್ಲಿಯೇ ಪಟ್ಟದ ಕತ್ತಿಗೆ ಅರಮನೆಯಲ್ಲಿ ಪೂಜೆಯಾನಮೇಲೆ, ಪಟ್ಟದ ಆನೆ ಕುದುರೆ ಸಹಿತವಾಗಿ ನಾಲ್ಕು ಬೀದಿ ಯಲ್ಲಿಯೂ ಮೆರವಣಿಗೆ ಆಗಿ ಕೆರೆಯ ಮೆಂಟಪಕ್ಕೆ ಬಿಜಯಮಾಡಿಸಿ ಕೊಂಡು ಬಂದು ಪಟ್ಟದ ಕತ್ತಿಯನ್ನು ಮಡಿಹಾಸಿಗೆಯ ಮೇಲೆ ಇರಿಸಿ, ಎಣ್ಣೆ ಶಾಸ್ತ್ರವನ್ನು ಮಾಡಿಸಿ ಪ್ರೋಕ್ಷಣೆಯನ್ನು ಮಾಡಿ, ಅಪ್ಪಣೆಯಾದ ವೆರು ಕಲ್ಪೋಕ್ತ ಪೂಜೆಯನ್ನು ನೆರವೇರಿಸಿ, ಮೂರು ಕನ್ನಾಕನ್ನಡಿ ಗಳಿಗೂ ಪಟ್ಟದ ಆನೆ ಕುದುರೆಗಳಿಗೂ ಕಟ್ಟಳೆಯ ಮೇರೆಗೆ ಪೂಜೆಮಾಡಿದ ನಂತರ ಮುಜರೆಯನ್ನು ಮಾಡಿದ ಜನರುಗಳಿಗೆ ಹೂವಿನಹಾರ ವೀಳ್ಯ ಗಳನ್ನು ಕೊಟ್ಟು, ಕೆರೆಗೆ ಬಂದಿದ್ದ ಆನೆ ಕುದುರೆಗಳಿಗೂ ಪುರೋಹಿತರು ಪೂಜೆಯನ್ನು ಮಾಡಿ, ಅವನುನೆಯಿಂದ ಬಂದಂತೆ ಅವೇ ಪಲ್ಲಕ್ಕಿಯಲ್ಲಿ ಪಟ್ಟದ ಕತ್ತಿಯನ್ನು ಇರಿಸಿ, ಪಟ್ಟದ ಆನೆ ಕುದುರೆಗಳು ಪಾಡ್ಯದ ದಿವಸ ನಡೆಮೆಡಿಯ ಮೇಲೆ ಬಂದಂತೆ ಈ ದಿವಸ ಆಯುಧವು ನಡೆಮೆಡಿಯ ಮೇಲೆ ಬರುತ್ತ ಕೋಟೆಬಾಗಿಲ ಒಳಕ್ಕೆ ಬರುವಾಗ ಇದರ ಸಂಗಡಲೇ ಅಮೆಲದೇವತೆ ಅಮ್ಮನವರನ್ನು ಆ ಪೂಜಾರಿಯ ಮನೆಯಿಂದ ಬಿಜಯ ಮಾಡಿಸಿಕೊಂಡು, ಅರಮನೆಗೆ ಬಂದನಂತರ ಆಯುಧ ಕುದುರೆ ಆನೆ

ಗಳಿಗೆ ವೇಶ್ಯಾಸ್ತ್ರೀಯರುಗಳಿಂದ ಕದಲಾರತಿ ನವೆರತ್ನದ ಆರತಿ ಗಳನ್ನು ಎತ್ತಿಸಿ, ಪಟ್ಟದಕತ್ತಿಯನ್ನು ಪೂಜಾಸ್ಥಾನಕ್ಕೆ ದೊರೆಗಳವೆರೇ ತಂದಿರಿಸಿ, ಅಮೃತದೇವತೆ ಅಮ್ಮನವರನ್ನು ಕದಳೀಸ್ತಂಭದ ಮಂಟಪ ದಲ್ಲಿರಿಸಿದನಂತರ ದೊರೆಗಳವರು ಆಯುಧವನ್ನೂ ಪಟ್ಟದ ಕುದುರೆ ಆನೆ ಮುಂತಾದ ವಾಹನಗಳನ್ನೂ ಕಲ್ಪೋಕ್ತವಿಧಿಯಿಂದ ಪೂಜಿಸಿದರು. ಈ ದಿನ ಕಟ್ಟಳೆಯು ಮೇರೆಗೆ ಮೂರನೆಯ ಜಾವದ ಓಲಗವು ಬೆಳವ ಸಮಯದಲ್ಲಿ ಪಟ್ಟದ ಆನೆಕುದುರೆಗಳು ಕೆರೆಗೆ ಹೋಗತಕ್ಕ ಸಂಪ್ರದಾಯ ವಿಲ್ಲವಾಮದರಿಂದ, ಸಾಯಂಕಾಲದ ಪೂಜೆ ಅರಮನೆಯಲ್ಲಿಯೇ ನಡೆದು ಸಾಯಂಕಾಲದ ಓಲಗವು ಬೆಳೆದನಂತರ ದೊರೆಗಳವರು ಆಯುಧ ವನ್ನು ಪೂಜಿಸಿ, ಕಂಕಣವಿಸರ್ಜನೆಯನ್ನು ಮಾಡಿ, ಅಮೃತದೇವತೆ ಅಮ್ಮನವರಿಗೆ ಬಲು ನೇಮದಿಂದ ಅನೇಕ ಶಾಕಪಾಕ ಭಕ್ಷ್ಯ ಭೋಜ್ಯ ಗಳ ನಿವೇದನವನ್ನು ಮಾಡಿಸಿದನಂತರ, ದೊರೆಗಳವರು ಮಾತೃಶ್ರೀ ಯವರು ಮುಂತಾದ ಸರ್ವರೂ ಕಾಣಿಕೆಗಳನ್ನಿತ್ತು ಪ್ರಸಾದವನ್ನು ಸ್ವೀಕರಿಸಿ, ಅರಮನೆಯಲ್ಲಿಯೂ, ಕಚೇರಿ ಮುಂತಾದ ಸ್ಥಳಗಳಲ್ಲಿಯೂ ದಫ್ತರಗಳನ್ನು ಪೂಜಿಸಿ, ಭದ್ರಾಸನದ ಮೇಲೆ ಶಿಖಾಸರದ ಮೊಹರಿನ ಡಬ್ಬಿಯನ್ನು ಇರಿಸಿ, ಪೂಜೆಯಾದನಂತರ ಈ ಶಿಖಾಸರಕ್ಕೆ ಸರ್ವರೂ ಮುಜರೆಯನ್ನು ಮಾಡಿದರು. ಮತ್ತು ಇದೇ ನವಮಿಯ ಹೊತ್ತಿನಲ್ಲಿ ಬೆಟ್ಟದ ಶ್ರೀಚಾಮುಂಡೇಶ್ವರಿ ಅಮ್ಮನವರ ಸನ್ನಿಧಿಯಲ್ಲಿ ಮಾಡಿದ ಚಂಡೀಜಪ ಪಾರಾಯಣಗಳಿಗೆ ಹೋಮ ಪೂರ್ಣಾಹುತಿ ಬೆಳವಂತೆ ಕಟ್ಟಳೆಯನ್ನು ಮಾಡಿಸಿದರು. ವಿಜಯ ದಶಮಿದಿವಸ ಪ್ರಾತಃಕಾಲ ದಶಮಿಯಹೊತ್ತಿನಲ್ಲಿ ಪೂರ್ವದಿನ ಪೂಜಿಸಿದ್ದ ಆಯುಧಕ್ಕೆ ಉತ್ತರ ಪೂಜೆಯನ್ನುಮಾಡಿ, ಆಯುಧದ ಎದುರಿಗೆ ಜಟ್ಟಿಯಕಾಳಗವನ್ನು ಮಾಡಿಸಿ, ಆಯುಧಕ್ಕೆ ಬಲ್ಯರ್ಥವಾಗಿ ಕೂಷ್ಮಾಂಡ ಛೇದನವನ್ನು ಮಾಡಿ, ಪಟ್ಟದ ಕತ್ತಿಯನ್ನು ಪಲ್ಲಕ್ಕಿಯಲ್ಲಿ ಖಾಸ ಹಸ್ತದಿಂದಲೆ ಇರಿಸಿ, ಪಟ್ಟದಾನೆ ಕುದುರೆಗಳೊಡನೆ ಮೈಸೂರು ಕೋಟೆಗೆ ಉತ್ತರ ಪಾರ್ಶ್ವದಲ್ಲಿರುವ ಬನ್ನೀಮರದ ಮಂಟಪಕ್ಕೆ ಕಳುಹಿಸುವ ಸಮಯದಲ್ಲಿ ಅರಸುಗಳು ಮುಂತಾದವರು ಸಂಪ್ರದಾಯದ ಮೇರೆಗೆ ಸಂಗಡ ಹೋಗಿಬಂದರು.

ಬಳಿಕ ಪೂರ್ವದಿವಸ ಪೂಜೆಸಿದ್ದ ಅಮೆಲದೇವತೆ ಅಮ್ಮನವರನ್ನು ಪೂಜೆ ಮೊಡುವ ತಮ್ಮಡಿಯ ಮನೆಗೆ ಬಿಜಯಮೊಡಿಸಿದರು. ಅನಂತರ ದೊರೆಗಳವರು ಮೂರನೆಯ ಜಾವೆದಲ್ಲಿ ಸರ್ವಾಲಂಕಾರದಿಂದೊಡಗೂಡಿ ಅನೇಕ ಸೇನಾಪರಿವೃತರಾಗಿ ಬನ್ನಿಮರದ ಮುಂಟಪದ ಸಮಿಾಪಕ್ಕೆ ಚಿತ್ತೈಸಿ, ಅಲ್ಲಿ ಕಿರಬ ಮುಂತಾದ ಅರಣ್ಯಾದ ದುಷ್ಟಮೃಗಗಳನ್ನು ತರಿಸಿ ಬಿಡಿಸಿ ಸಂಹರಿಸಿ, ಸೇನಾಜನರುಗಳಿಂದ ಸುರಟುಗಳನ್ನು ಮೊಡಿಸಿ, ಅಲ್ಲಿ ಬಂದಿದ್ದ ಜನರುಗಳು ಮುಜರೆಯನ್ನು ಮೊಡಿದ ಬಳಿಕ, ಹೂವಿನ ಹಾರ ವೀಳಯಗಳನ್ನು ಕೊಡಿಸಿ, ಬನ್ನಿಮಹಾಕಾಳಿ ಅಮ್ಮನವರ ಪ್ರಸಾದವನ್ನು ಸ್ವೀಕರಿಸಿ, ಅನೇಕವೈಭವದಿಂದ ಅರಮನೆಗೆ ಚಿತ್ತೈಸಿ ಪಟ್ಟದಕತ್ತಿಕುದುರೆ ಆನೆಗಳಿಗೆ ವೇಶ್ಯಾಸ್ತ್ರೀಯರುಗಳಿಂದ ಕದಲಾರತಿ ನವೆರತ್ನದ ಆರತಿಗಳನ್ನು ಎತ್ತಿಸಿ, ಆಯುಧವನ್ನು ಅರಮನೆಯ ಚಾಮುಂಡೇಶ್ವರೀಸನ್ನಿಧಿಗೆ ಬೆಳಸಿದನಂತರ, ದೊರೆಗಳವರು ಭದ್ರಾಸನ ದಲ್ಲಿ ಮುಹೂರ್ತಮೊಡಿ ಸಮಸ್ತ ಜನರುಗಳಿಂದಲೂ ನಜರು ಮುಜರೆ ಗಳನ್ನು ಅಂಗೀಕರಿಸಿ ಓಲಗವನ್ನು ತೆಗೆದುಕೊಳ್ಳುತ್ತಲಿರುವ ಸಮಯ ದಲ್ಲಿ, ಬಂದ ಸರದಾರರು ಮುಂತಾದ ಸರ್ವಜನರುಗಳಿಗೂ ಅವರವರ ಮರ್ಯಾದಾನುಸಾರವಾಗಿ ವಸ್ತ್ರಾಭರಣ ಹೂವಿನ ಹಾರವೀಳಯಗಳನ್ನು ಕೊಡಿಸಿ, ಬನ್ನಿಮಹಾಕಾಳಿ ಅಮ್ಮನವರ ಆಶೀರ್ವಾದ ಪಟ್ಟಿಯನ್ನು ಓದಿದ ವಂಶಾವಳಿಸುಬ್ಬಯ್ಯನಿಗೆ ಹೂವಿನಹಾರ ವೀಳಯ ಉಡುಗೆರೆಗಳನ್ನು ಕೊಟ್ಟು, ಆಪಟ್ಟಿಯನ್ನು ಪಟ್ಟದಕತ್ತಿಯ ಒರೆಯೊಳಗೆ ಇರಿಸಿ ಮೊಹರು ಮಾಡಿಸುವಂತೆಯೂ ಈ ದಿನದ ರಾತ್ರಿ ತೋಷೀಖಾನೆ ಮುಂತಾದ ಸ್ಥಳದಲ್ಲಿ ಜಾಳಿಗೆಪೂಜೆಯನ್ನು ಮಾಡುವಂತೆಯೂ ಕಟ್ಟಳೆ ಮೊಡಿಸಿದರು. ಈ ಪರಿಯಾಗಿ ನವರಾತ್ರಿಯ ಉತ್ಸವವು ಬೆಳೆಯಲು ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಲದೇಶಾವತಂಸ ಕರ್ಣಾಟಕಜನಪದಸಂಪದಧಿಷ್ಠಾನಭೂತ ಶ್ರೀಮನ್ಮೈಸೂರು ಮಹಾ ಸಂಸ್ಥಾನಮಧ್ಯದೇದೀಪ್ಯಮಾನಾಖಿಲಕಲಾನಿಧಿಕುಲಕ್ರಮಾಗತರಾಜಕ್ಷಿತಿ ಪಾಲ ಪ್ರಮುಖ ನಿಖಿಲರಾಜಾಧಿರಾಜ ಮಹಾರಾಜ ಚಕ್ರವರ್ತಿ ಮಂಡಲಾ ನುಭೂತರಿವ್ಯೆತ್ನ ಸಿಂಹಾಸನಾರೂಢ, ಶ್ರೀಮದ್ರಾಜಾಧಿರಾಜ, ರಾಜ

ಪರಮೇಶ್ವರ, ಪ್ರೌಢಪ್ರತಾಪಪ್ರತಿಮವೀರ, ನರಪತಿ, ಬಿರುದೆಂ
ತೆಂಬರಗಂಡ, ಲೋಕೈಕವೀರ, ಯದುಕುಲಪಯಃಪಾರಾವಾರಕಲಾನಿಧಿ,
ಶಂಖಚಕ್ರಾಂಕುಶಕುಠಾರಮಕರಮೆತ್ತ್ಯಶರಭಸಾಳ್ವ ಗಂಡಭೇರುಂಡ
ಧರಣೀವೆರಾಹ ಪನುಮೆದ್ದರುಡ ಕಂಠೀರವಾದ್ಯನೇಕ ಬಿರುದಾಂಕಿತ,
ಶ್ರೀ ಚಾಮರಾಜಮಹೀಪಾಲಧರ್ಮಪತ್ನೀ ಕೆಂಪನಂಜಮಾಂಬಾಗರ್ಭ
ಸುಧಾಂಬುಧಿರಾಕಾಸುಧಾಕರಾಯಮಾಣ, ಶ್ರೀಚಾಮುಂಡಿಕಾ ವರಪ್ರಸಾ
ದೋದ್ಭವ, ಶ್ರೀಮನ್ಮೈಸೂರು ಪುರವರಾಧೀಶರಾದ ಅಳಿವ ಮಹಾಸ್ವಾಮಿ
ಮುಮ್ಮಡಿಕೃಷ್ಣರಾಜಒಡೆಯರವರು ಶುಕ್ಲಸಪ್ಷದ ಚಂದ್ರನಂತೆ ದಿನ
ದಿನಕ್ಕೆ ಅಭಿವೃದ್ಧಿಹೊಂದುತ ವಿಶ್ವವಿದ್ಯಾವಿಚಕ್ಷಣ ವಿದ್ವಜ್ಜನಧುರೀಣ
ರಾಗಿ ಮೈಸೂರು ನಗರದಲ್ಲಿ ರತ್ನಸಿಂಹಾಸನಾರೂಢರಾಗಿ ಸುಖದಿಂದಲೂ
ಧರ್ಮದಿಂದಲೂ ಪೃಥ್ವೀಸಾಮ್ರಾಜ್ಯವೆಂಗೈಯುತ್ತಿದ್ದರು.

ANNALS

OF

THE MYSORE ROYAL FAMILY

Published by Order of His Highness the Maharaja
SRI KRISHNARAJA WODIYAR, IV, G.C.S.I., G.B.E.

PART II

ಮೈಸೂರು ಸಂಸ್ಥಾನದ ಪ್ರಭುಗಳು

ಶ್ರೀಮನ್ಮಹಾರಾಜರವರ ವಂಶಾವಳಿ

ಶ್ರೀಮನ್ಮಹಾರಾಜರು

ನಾಲ್ವಡಿ ಕೃಷ್ಣರಾಜ ಒಡೆಯರ್, ಜಿ.ಸಿ.ಎಸ್.ಐ., ಜಿ.ಬಿ.ಇ.

ಯವರ ಆಜ್ಞಾನುಸಾರವಾಗಿ ಪ್ರಚಾರಪಡಿಸಿದೆ

ಶಾಲಿವಾಹನ ಶಕ ೧೮೪೫ ದುಂಮುಖಿ ಸಂವತ್ಸರ

ಭಾಗ II

MYSORE
PRINTED AT THE GOVERNMENT BRANCH PRESS
1922

PREFACE

THIS volume, the second of the Annals of the Mysore Royal Family, narrates in brief in Kannada important events in the life of His Highness the late Maharaja Sri Krishnaraja Wodiyar Bahadur III, G.C.S.I., who graced the Historical Throne of Mysore for 69 long years from 1799 A.D.—a most eventful period in the History of India. It concludes with an account of the Installation of His Highness' adopted son, His Highness the Maharaja Sri Chamarajendra Wodiyar Bahadur, G.C.S.I., during his minority in 1868 A.D. Considerable difficulty has been experienced in procuring the necessary material. The old records in the Palace and in the Government, to which at His Highness's gracious pleasure and the kindness of the present Dewan and his predecessors, I have been allowed access, have been found to be fragmentary and not continuous or complete. They have, however, been utilized besides such information as could be obtained from other available sources, examined as carefully as possible.

B. RAMAKRISHNA RAO,
Retired Palace Controller,
Mysore.

MYSORE,
September 1922.

ಉಪೋದ್ಘಾತ.

ಶ್ರೀಮನ್ಮಹಾರಾಜರವರ ವಂಶಾವಳಿಯು ಈ ಎರಡನೆಯ ಸಂಪುಟ
ಸ್ 1799ನೆ ಯಿಸವಿ ಸಿದ್ಧಾರ್ಥಿ ಸಂವತ್ಸರ ಮೊದಲುಗೊಂಡು
ಪ್ರಕಾರ ದೀರ್ಘಕಾಲ ಎಂದರೆ 69 ವರ್ಷಗಳು ಈ ಮೈಸೂರು
ಸ್ಥದ ಚರಿತ್ರಪ್ರಸಿದ್ಧವಾದ ರತ್ನ ಸಿಂಹಾಸನವನ್ನು ಅಲಂಕರಿಸಿದ
ನಂದರವರು ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಬಹದೂರ್,
ಎಸ್. ಐ., ಯವರ ಜೀವಿತ ಕಾಲದ ಮುಖ್ಯಾಂಶಗಳನ್ನು ಸಂಗ್ರ
ಸುತ್ತೆ. ಇದು ಆ ಪ್ರಭುಗಳವರ ಸ್ವೀಕೃತ ಪುತ್ರರು ಶ್ರೀ ಚಾಮ
ರೇಂದ್ರ ಒಡೆಯರ್, ಜಿ. ಸಿ. ಎಸ್. ಐ., ಯವರಿಗೆ ಅವರ ಬಾಲ್ಯ
ವಿಭವ ಸಂವತ್ಸರದ ಆಶ್ವಯುಜ ಶುದ್ಧ ಸಪ್ತಮಿಯಾ ಬುಧವಾರಕ್ಕೆ
ರೂದ ಸ್ 1868ನೆ ಯಿಸವಿ ಸೆಪ್ಟೆಂಬರು 23ನೆ ತಾರೀಖಿನ
ಬೆಳೆದ ರಾಜ್ಯ ಪಟ್ಟಾಭಿಷೇಕ ಮಹೋ[illegible]ತ್ತಾಂತವನ್ನ
ಪರಿಸಮಾಪ್ತಿ ಪಡೆದಿರುವ[illegible]ತ್ಸವ
[illegible]ನ್ನು
ನೆ ಬಯಸುವಲ್ಲಿದೆ. ಈ ಉದ್ಯಮಕ್ಕೆ ಬೇಕಾದ
ಸಾಮಗ್ರಿ[illegible] ದುರ್ಲಭವಾಗಿರುವುದು. ಇವೆಂದರೆ
[illegible]ವ ಕರುಣಾನುಗ್ರಹದಿಂದಲೂ, ಸಮಯ ಹೃದಯ
[illegible]ನರೂ ಮತ್ತು ಇವರ ಹಿಂದೆ ಇದ್ದ ದಿವಾನರುಗಳೂ
ಚನೆಯನ್ನು ಉಂಟುಮಾಡಿಯುದರಿಂದಲೂ ಆರಮನೆಯಲ್ಲಿಯೂ
ಟೆನೆಲ್ಲಿಯೂ ದೊರೆತ ಕಾಗದಪತ್ರಗಳನ್ನು ನೋಡುವಲ್ಲಿ
ಾಗಿರುವುವೆಲ್ಲವು ಸಮಗ್ರವಾಗಿರುವುದಿಲ್ಲ. ಆದರೂ ಅವು
ದುಬರುವ ಸಮಯಾವಕಾಶದೊಂದಿಗೆ ಇತರತ್ರ ಲಭ್ಯವಾದ
ನ್ನು ಸಾಧ್ಯವಾದಷ್ಟು ಮಟ್ಟಿಗೆ ಪರಿಶೀಲಿಸಿ ಈ ಗ್ರಂಥಕ್ಕೆ
ಸಿದೆ.

ದು
922)

ಬಿ. ರಾಮಕೃಷ್ಣರಾವ್.
ಆರಮನೆಯ ರಿಟೈರ್ಡ್ ಕಂಪ್ಟ್ರೋಲರ್.

ವಿಷಯಾನುಕ್ರಮಣಿಕೆ.

ಒನೆಯ ಅಧ್ಯಾಯ

ಸಂಖ್ಯೆ	ವಿಷಯಗಳು			ಪುಟ
1	ಪೂರ್ವವೃತ್ತಾಂತ ಸಂಗ್ರಹ	....	....	1
2	ಪೊರೆಗಳವರ ಪಟ್ಟಾಭಿಷೇಕ	....	....	2
3	ಮೈಸೂರು ರಾಷ್ಟ್ರದ ಮೇರೆಗಳು	....	....	3
12	ಮಹಾನವಮಿಶ್ರೀ ಲಕ್ಷ್ಮಮ್ಮಣ್ಣಿಯವರು		....	3

ಎರಡನೆಯ ಅಧ್ಯಾಯ

1	ರಾಜ್ಯವು ಆಳಿತಕ್ಕೆ ಬರ್ಪ ನಿಯಮಗಳು		....	11
2	ಸರದಾರಜನರುಗೆ ಪೆರ್ಷ ವಿಚಾರ....		....	12
3	ಪಾಳೆಯಗಾರರ ವಿಚಾರ	....	....	13
5	ಸೈನ್ಯದ ವಿಚಾರ : ಕುದುರೆಯ ಫೌಜು	...	....	15
7	ಬಾರಿಲಾಖೆ	....	....	18
8	ಕಂದಾಯ	....	....	19
9	...ಲ ನಡೆಸಿದ ಮುಮ್ಮದಲ್ಲಿ ಮೈಸೂರು ಅರಸಕ್ಕ ; ಪಿಷೆಶ್ವೀದಂತರು		....	20
10	...ಲ್ಲ ಉಂಟಿದ ಕಲಹದ ಶಾಂತಿಗೆ ಮೈಸೂರಿಂದ ಸಹಾಯ	....	....	23
11	ಇಂಗ್ಲಿಷ್ ಸೇನೆಯ ನಿವಾಸನ	....	....	23
12	ಪೋಲೀಸು	....	....	24
13	ನ್ಯಾಯವಿಚಾರ : ಸಿವಿಲ್‌ಬಾಬು	....	....	25
15	ಕ್ರಿಮಿನಲ್‌ಬಾಬು	....	....	29
16	ಮುಲ್ಕಿಆಳಿತ : ಜಮಿನಾಸು ಮೊದಲಾದ ಜಮಾಬಾಬು		....	30
	ಖರ್ಚಿನಬಾಬು	....	....	32

ಸ್ಥಾನ	ವಿಷಯಗಳು	ಪುಟ
18	ಮರಣೋತ್ತರ ಕಾಮಗಾರಿಗಳು	33
19-20	ಬಾರ್ಡ್ ವರ್ಲ್ಡ್‌ವಿಡೆಯ ಸಾಹೇಬರು ಮೈಸೂರಿಗೆ ಬಂದುದು	34
21	ದಿವಾನ್ ಪೂರ್ಣಯ್ಯನವರಿಗೆ ಜಹಗೀರು ಕೊಟ್ಟದ್ದು	36
22	ಪಾವಂದವರು ಬಿಟ್ಟ ರಾಜ್ಯಭಾರವನ್ನು ಸ್ವೀಕರಿಸಿದ್ದು	37

ಹನೆಯ ಅಧ್ಯಾಯ

1-2	ದೊರೆಗಳವರ ರಾಜ್ಯಾಭಾರಕ್ರಮ	38
3	ಅರಸುಗಳು ಮುಂತಾದವರಿಗೆ ಸಾಮಿಪ ವಿಘಾಡು	42
4	ದೊರೆಗಳಿಸದೆ ಜಂಗಳೂರಿಗೆ ಸವಾರಿ ಚಿತ್ತೈಸಿದ್ದು	43
5	ಲಂಗಳೂರು ಲಷ್ಕರ್	44
6-7	ದೊರೆಗಳವರ ದೇಕಾಂಬಾತ	44
8-10	ನ್ಯಾಯಮೂರ್ತಿ : ಸಿವಿಲಿಬಾಬು	44
11	ಕ್ರಿಮಿನಲ್‌ಬಾಬು	46
12	ಪೋಲೀಸು	47
13	ಬಿಲಿಬೆರಿ ಬಿಲಾಲೆ : ಸಹಾರದ	47
14	ಬಾಗಿರಿ	48
15-17	ಮಹಾರಾಷ್ಟ್ರರನ್ನುಳಿದ ಇಂಗ್ಲಿಷ್ ಸರ್ಕಾರದವರು ನಡೆಸಿದ ಯುದ್ಧದಲ್ಲಿ ಮೈಸೂರಿನಿಂದ ಆದ ಬತ್ವಾಸೆ	48
19	ಬಾರು	51
20-21	ವಿದ್ಯಾಪ್ರಚಾರ	51
22	ಸಿಂಹಾಸನ	54
23	ಪಾಳೆಯಗಾರರಿಗೆ ಇಜಾಫೆ	56
24	ಮುಜರಾಯಿ	56
25	ಮುಲ್ಕಿ ಮುಂತಾದ ಬಾಬಿನಲ್ಲಿ ಬೇವಂದವರವರಿಂದ ಆಪೇಕ್ಷೆಯಾದ ಹುಕುಮನಾವೆ	57
26	ಷರ್ತಿಪದ್ಧತಿ	78
27	ದೊರೆಗಳವರಿಂದ ಸಾದರಾದ ಫಿರ್ಯಾದಿ ವಿಚಾರಣೆಯ ನಿರೂಪ	78
28	ಜಮಾಬಾಬು	80

ಪ್ಯಾರ	ವಿಷಯಗಳು	ಪುಟ
29	ಖರ್ಚುಬಾಬು	81
30-31	ಮರವ್ಮತ್ತುಕಾಮಗಾರಿ ಮತ್ತು ಇತರ ಖರ್ಚು	81
32	ಶಿವನಸಮುದ್ರದಬಳಿ ಜಹಗೀರು ಕೊಟ್ಟದ್ದು	84
33	ಸರ್ಥಾಮಸಿರ್ಮರ್ಫೋ ಸಾಹೇಬರ ಆಗಮನ	84
34	ಸೀಮೆಯ ಪ್ರಜಾಸಂಖ್ಯೆ ಗ್ರಾಮಸಂಖ್ಯೆ ಮುಂತಾದ್ದು	84
35-39	ಮೈಸೂರು ರಾಜಧಾನಿ	85
40-43	ದೊರೆಗಳವರು ರಾಜ್ಯದ ಆಡಳಿತವನ್ನು ಕೆಲವುಕಾಲದವರೆಗೆ ಬ್ರಿಟಿಷಿನವರಿಗೆ ವಹಿಸಿದ್ದು	93
	ತರಿಕೆರೆ ಪಾಳ್ಯಪಟ್ಟನ ಪೂರ್ವವೃತ್ತಾಂತ	95
44	ದೊರೆಗಳವರ ವರಪೂನ	98
45	ಬ್ರಿಟಿಷ್ ರೆಸಿಡೆಂಟರು	99
46	ದೊರಗಳ ಆಳಿಕೆಯಲ್ಲಿ ದಿವಾನ್‌ಗಿರಿ ಮಾಡಿದವರುಗಳು	100

೪ನೆಯ ಅಧ್ಯಾಯ

1	ಇಬ್ಬರು ಕಮಿಷನರುಗಳು	100
2	ಒಬ್ಬರೇ ಕಮಿಷನರಿರುವಂತೆ ನೇಮಕವಾದದ್ದು	102
3	ಮೈಸೂರಿಗೆ ಗವರ್ನರ್ ಜನರಲ್ ಲಾರ್ಡ್ ವಿಲಿಯಂ ಬೆಂಟಿಂಕ್ ರವರ ಆಗಮನ	102
4	ಜನರಲ್ ಕಬ್ಬ್ರ್ಸಾಹೇಬರವರ ಆಡಳಿತದ ಮುಖ್ಯಾಂಶಗಳು	104
5	ಮುಲ್ಕಿ ಬಾಬು	105
7	ಮರವ್ಮತ್ತಿ ಬಾಬು	107
8	ಜುಡಿಷಿಯಲ್ ಕಮಿಷರ್ಕೋರ್ಟು	107
9	ವಿದ್ಯಾಭ್ಯಾಸದ ಏರ್ಪಾಡು	108
10	ವೈದ್ಯಶಾಲೆಗಳು	109
11	ಅಚ್ಚುಕಾರ್ಖಾನೆ	110
12	ಮುಜರಾಯಿ ಮುಂತಾದ ಇತರ ವಿಷಯಗಳು	110
13	ಮುನಿಸಿಪಲ್ ಬಾಬು	112
14	ಸರ್ವೆ ಮತ್ತು ಇನಾಂ ಇಲಾಖೆಗಳು	113
15	ಇತರ ಮುಖ್ಯಾಂಶಗಳು	113

ಪಟ್ಟಿ	ವಿಷಯಗಳು			ಪುಟ
16	ಮೂರ್ಗಳವರ ಪುತ್ರ್ಪ್ರೀಕಾರ	....	....	118
17	ಪುತ್ರಸ್ವೀಕಾರಾವಧಿನಂದನ	....	....	121

ಎನೆಯ ಅಧ್ಯಾಯ

1	ಧರ್ಮಕಾರ್ಯಗಳು	....	....	123
2	ಶ್ರೀಚಾಮುಂಡೇಶ್ವರೀ ಸೇವೆ	....	....	124
3	ನಂಜನಗೂಡು ಶ್ರೀಕಂಠೇಶ್ವರಸ್ವಾಮಿ ಸೇವೆ		....	126
4	ಚಾಮರಾಜನಗರ	....	....	133
5	ತಿರುಮುಕೂರ್ಲು ಪ್ರೀತ್ರ	....	...	140
6	ನಾಗಯಶ್ಯಾಮಿ ಸೇವೆ	....	....	140
7	ತೃಣೇಶ್ವರಸ್ವಾಮಿ ಸೇವೆ	....	....	141
8	ಲಕ್ಷ್ಮೀರಮಣಸ್ವಾಮಿ ಸೇವೆ	....	....	142
9	ಪುಸನ್ನಕೃಷ್ಣಸ್ವಾಮಿ ಸೇವೆ	....	...	143
10	ಶ್ರೀರಂಗಪಟ್ಟಣದಲ್ಲಿ ದೇವರ ಸೇವೆ	....	....	145
11	ಮೇಲುಕೋಟೆಯಲ್ಲಿ ದೇವರ ಸೇವೆ	....	.. .	146
12	ತಿರುಪತಿಯಲ್ಲಿ ದೇವರ ಸೇವೆ	....	....	148
13	ತಿರುಗಂಗಯಿಲ್ಲಿ ದೇವರ ಸೇವೆ	....	....	149
14	ಇತರ ಸ್ಥಳಗಳಲ್ಲಿ ದೇವರ ಸೇವೆ	....	....	149
15	ಸುಬ್ರಮಣ್ಯಕ್ಕೆ ಕಾವಡಿ	....	....	150
16	ಅಗ್ರಹಾರಗಳ ದಾನ	....	....	152
	ಕೃಷ್ಣರಾಜೇಂದ್ರ ಪುರಾಗ್ರಹಾರ	....	....	153
	ನಂಜಪಟ್ಟಣಾಂಬಾಗ್ರಹಾರ	....	....	154
	ಚೇಷೀರಾಂಬಾಗ್ರಹಾರ	....	....	154
	ದೇವಾಜಾಂಬಾಗ್ರಹಾರ	....	....	155
	ಲಕ್ಷ್ಮಿಪುರಾಂಬಾಗ್ರಹಾರ	....	...	155
	ಕಾಪನಂಜವನಾಂಬಾ ಕೆಂಪದೇವಾಂಬಾ ಚೆಲುವಾಂಬಾಗ್ರಹಾರಗಳು	....	....	156
	ದೇವಾಂಬಾ ಚೆಲುವಾಂಬಾ ಲಿಂಗಾಂಬಾಗ್ರಹಾರಗಳು		....	156
	ಗೌರಾಂಬಾಗ್ರಹಾರ	...	....	158

ಪ್ಯಾರ	ವಿಷಯಗಳು	ಪುಟ
17	ಜತ್ರಗಳು	159
18	ಮಠಗಳಿಗೆ ಸೇವೆ : ಶ್ರೀಹರಕಾಲುಮಠ	161
	ಶ್ರೀ ಶೃಂಗೇರಿಮಠ	163
	ಅಹೋಬಿಲಮಠ	165
	ತೋತಾದ್ರಿಮಠ	166
	ವ್ಯಾಸರಾಯಮಠ	166
	ಉತ್ತರಾದಿಮಠ	167
	ಇತರ ಮಠಗಳು	167
19	ದಾನಗಳು, ವೃತೋದ್ಯಾಪನೆ, ಶಾಂತಿಗಳು	168
20	ಕೃತಯುಗಗಳನ್ನು ಮೂಡಿಸಿದ್ದು	170
21	ಇತರ ಲೋಕೋಪಕಾರಕಾರ್ಯಗಳು	170
	ಗೃಹಗಳನ್ನು ನಿರ್ಮಿಸಿರುವುದು	171
22	ಲೋಕರಂಜಕವಾದ ಇತರ ವಿಷಯಗಳು	172
23	ಇಂಗ್ಲಿಷ್ ವಿದ್ಯೆಗೆ ಉಂಟುಮಾಡಿದ ಉತ್ತೇಜನ	173
24	ದೊರೆಗಳವರ ವಿಶ್ರಾಂತಿ	176
25	ಅರಮನೆಯಲ್ಲಿ ನಡೆದ ಆ ಕಾಲದ ಹೊಸ ವಿಷಯಾಮ	177
26	ಮುಮ್ಮಡಿ ಶ್ರೀ ಕೃಷ್ಣರಾಜ ಮಹಾಪ್ರಭು ಗುಣಕಥನ ಸಂಗ್ರಹ	178
27	ಶ್ರೀ ಚಾಮರಾಜ ಒಡೆಯರವರ ಪಟ್ಟಾಭಿಷೇಕ	181

ಭಾವಚಿತ್ರಗಳ ಪಟ್ಟಿ.

1 ಶ್ರೀಮನ್ಮಹಾರಾಜರು ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರವರ ಸಂತಾನಾಂಬುಜ xv

2 ಶ್ರೀಮನ್ಮಹಾರಾಜರು ಶ್ರೀಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ. ಯವರು xv

3 ಶ್ರೀಮನ್ಮಹಾರಾಜರು ನಾಲ್ವಡಿ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ.ಸಿ.ಎಸ್.ಐ., ಜಿ.ಬಿ.ಇ., ಯವರು ... xv

4 ಯುವರಾಜರು ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್, ಜಿ.ಸಿ.ಐ.ಇ., ಯವರು xv

5 ಪಟ್ಟಾಭಿಷೇಕಕಾಲದ ಬಾಲ್ಯವಯಸ್ಸಿನ ಶ್ರೀಮನ್ಮಹಾರಾಜ ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರವರು 1

6 ಗವರ್ನರ್ ಜನರಲ್ ಲಾರ್ಡ್ ವೆಲೆಸ್ಲಿಯವರು 2

7 ಕರ್ನಲ್ ಆರ್ಥರ್ ವೆಲೆಸ್ಲಿಯವರು 3

8 ದಿವಾನ್ ಪೂರ್ಣಯ್ಯನವರು 11

9 ಮಹಾರಾಜರು ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್ ರವರು ಸಿಂಹಾಸನಸ್ಥರಾಗಿರುವ ದರ್ಬಾರ್. ಸ್ರ 1825ನೇ ಇಸವಿ 50

10 ಶ್ರೀಮನ್ಮಹಾರಾಜರವರು ಮತ್ತು ಕರ್ನಲ್ ಸ್ಟೋಕ್ಸ್‌ರವರು 99

11 ಸರ್ ಮಾರ್ಕ್ ಕಬ್ಬನ್‌ಸಾಹೇಬರು 111

12 ಡಾಕ್ಟರ್ ಕ್ಯಾಂಬಲ್‌ರವರು 117

13 ಶ್ರೀಮನ್ಮಹಾರಾಜರು ಮುಮ್ಮಡಿ ಶ್ರೀಕೃಷ್ಣರಾಜ ಒಡೆಯರವರ ಪುತ್ರಸ್ವೀಕಾರ 120

14 ಶ್ರೀಮನ್ಮಹಾರಾಜರವರ ಇಂಗ್ಲಿಷ್ ಸ್ಕೂಲ್ ಸ್ಥಾಪನ ಮಹೋತ್ಸವ 175

15 ಶ್ರೀಮನ್ಮಹಾರಾಜರು ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ರವರ ಪಟ್ಟಾಭಿಷೇಕ ಮಹೋತ್ಸವ 183